

ನಾ ರಾಜಸ್ಥಾನದಲ್ಲಿ

ಡಾ. ಕೃಷ್ಣಾನಂದ ಕಾಮತ್



ನಾ ರಾಜಸ್ಥಾನದಲ್ಲಿ

(ಪ್ರದೇಶ ಪರಿಚಯ)

ಡಾ. ಕೃಷ್ಣಾನಂದ ಕಾಮತ್

ಪ್ರಕಾಶಕರು :

ಪ್ರಿಯದರ್ಶಿನಿ ಪ್ರಕಾಶನ

ನಂ ೧೩೮, ೭ನೇ 'ಸಿ' ಮುಖ್ಯ ರಸ್ತೆ

ಹಂಪಿನಗರ, ಬೆಂಗಳೂರು- ೫೬೦ ೧೦೪

ನಾ ರಾಜಸ್ಥಾನದಲ್ಲಿ

(ಪ್ರದೇಶ ಪರಿಚಯ)

ಲೇಖಕರು:

ಡಾ. ಕೃಷ್ಣಾನಂದ ಕಾಮತ್

ಪ್ರಕಾಶಕರು :

ಪ್ರಿಯದರ್ಶಿನಿ ಪ್ರಕಾಶನ

ನಂ ೧೩೮, ೭ನೇ 'ಸಿ' ಮುಖ್ಯ ರಸ್ತೆ

ಹಂಪಿನಗರ, ಬೆಂಗಳೂರು- ೫೬೦ ೧೦೪

ಮೊದಲ ಮುದ್ರಣ : ಆಗಸ್ಟ್ ೧೯೭೪

ಎರಡನೆ ಮುದ್ರಣ : ೨೦೧೨

ಪುಟ : xii + ೨೫೦ = ೨೬೨

ಬೆಲೆ : ರೂ. ೧೫೦/-

ಕಾಗದ : 70 GSM NS Maplitho Paper

ರಕ್ಷಾಪತ್ರ ವಿನ್ಯಾಸ : **ಮೋನಪ್ಪ**

ಛಾಯಾಕ್ಷರ ಜೋಡಣೆ :

ವರ್ಷಿಣಿ ಗ್ರಾಫಿಕ್ಸ್

ಬೆಂಗಳೂರು-40, ಫೋ : 9242431040

ಮುದ್ರಕರು

ಸ್ನೇಹಾ ಪ್ರಿಂಟರ್ಸ್

ನಂ. 114, 4ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ

ಅತ್ತಿಗುಪ್ಪೆ, ವಿಜಯನಗರ 2ನೇ ಹಂತ

ಬೆಂಗಳೂರು - ೧೦೪. ಫೋ : 23392814

ಎರಡು ಮಾತು

ರಾಜಸ್ಥಾನದಲ್ಲಿ ಮೂರು ವರ್ಷಗಳ ವಾಸ್ತವ್ಯ, ಅನೇಕ ಕಾರಣಗಳಿಗಾಗಿ ಚಿರಸ್ಮರಣೀಯವಾಗಿದೆ. ಮರುಭೂಮಿ, ದೇಶದಲ್ಲಿಯೇ ಹಿಂದುಳಿದ ರಾಜ್ಯಗಳಲ್ಲಿ ಇದು ಒಂದು ಎಂದು ತಿಳಿದುಕೊಂಡು ಹೋದವ ಕಂಡದ್ದು ಬೇರೆಯೇ. ನೀರಿಲ್ಲದ ಮರುಭೂಮಿಯಲ್ಲಿಯೂ ಬೆನ್ನು ಮುರಿದು ದುಡಿದರೆ ದೇಶದ ರಾಜಧಾನಿಗೆ ಸಾಲುವಷ್ಟು ಕಾಯಿಪಲ್ಯ, ಬಂಗಾಲಿಗಳಿಗೆ ಬೇಕಾಗುವಷ್ಟು ಮೀನು ಪ್ರತಿದಿನವೂ ರೇಲಿನಲ್ಲಿ ಕಳಿಸಬಹುದು, ಎಂದು ಅಲ್ಲಿ ಹೋದ ಮೇಲೆಯೇ ಗೊತ್ತಾಯಿತು. ಅಲ್ಲಿಯ ಬಹು ಸಂಖ್ಯಾತರು ನಿರಕ್ಷರಿಗಳಾದರೂ ಮನೋವೈಶಾಲ್ಯತೆಯುಳ್ಳವರು, ತಾವು ಸುಶಿಕ್ಷಿತರು, ಸುಸಂಸ್ಕೃತರು ಎಂದು ನಂಬಿದ ಇತರ ಪ್ರದೇಶದ ಜನರಿಗಿಂತ ಆದರಾತಿಥ್ಯ-ವಿಶ್ವಾಸ-ಸಹೃದಯತೆಗಳಲ್ಲಿ ಮುಂದುವರೆದವರು! ಎಂಬುದನ್ನು ಕಂಡುಕೊಂಡಾಗ ವಿಸ್ಮಯವಾಯಿತು. ನೌಕರಿಗಳಲ್ಲಿ ನಂಬಿಗೆಯಿಡದೇ ವ್ಯಾಪಾರದಲ್ಲಿ ಮನಸ್ಸು ಹಾಕಿದ ರಾಜಸ್ಥಾನಿಗಳು ದೇಶದ ತುಂಬ ಹರಡಿ ಹೋದಾಗ, ನೆರೆರಾಜ್ಯಗಳ ಸುಶಿಕ್ಷಿತರು ಗುಂಪು ಗುಂಪಾಗಿ ಬಂದು ಈ ನೆಲದಲ್ಲಿ ಬೇರು ಬಿಡುತ್ತಿದ್ದುದನ್ನು ಕಾಣುವಂತಾಯಿತು.

ಮೈಮುರಿದು ದುಡಿದರೆ ಯಾವ ಕ್ಷೇತ್ರದಲ್ಲೂ ಪಾಶ್ಚಾತ್ಯರನ್ನು ಸರಿಗಟ್ಟಬಹುದೆಂದು ಆತ್ಮವಿಶ್ವಾಸ ಇಟ್ಟುಕೊಂಡವನಿಗೆ ನಿಜವಾದ ಭಾರತದ ದರ್ಶನವಾದದ್ದು ರಾಜಸ್ಥಾನದಲ್ಲಿಯೇ. ಶಿಕ್ಷಕನಾಗಿ ಆದರ್ಶವೊಂದನ್ನು ಸಾಧಿಸಬೇಕೆಂದು 'ಹವಾ ಮಹಲಿ'ನಷ್ಟು ಎತ್ತರವಾಗಿ ಕಟ್ಟಿದ ಕನಸು ಕುಸಿದದ್ದು ಅಲ್ಲಿಯೇ. ಆದ್ದರಿಂದ ಇಂದು ರಾಜರಿಲ್ಲದ ರಾಜಸ್ಥಾನದ ಪರಿಚಯದ ಜೊತೆಗೆ ನನ್ನ ಕನಸು, ಯತ್ನ, ನಿರಾಶೆ, ಪರಾಭವಗಳನ್ನು ಮೂಡಿಸಲು ಯತ್ನಿಸಿದ್ದೇನೆ. ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಗ್ರಂಥಗಳು ಉಪಲಬ್ಧವಿರುವುದರಿಂದ ಅಲ್ಲಿ ಅವಕ್ಕೆ ಪ್ರಾಶಸ್ತ್ಯ ಕೊಟ್ಟಿಲ್ಲ.

ನಮ್ಮ ರಾಜ್ಯದಲ್ಲಿ ಹೆಸರಾಂತ ಕಾಲೇಜೊಂದರಲ್ಲಿ, ಅನಂತರ ಅಂತರ್‌ರಾಷ್ಟ್ರೀಯ ಖ್ಯಾತಿಯ ಸಂಶೋಧನಾಲಯವೊಂದರಲ್ಲಿ ಕೆಲಸ ಮಾಡುವಾಗ ಅಲ್ಲಿಯ ಶಿಕ್ಷಕರ ಸಂಶೋಧನಾ ಕ್ಷೇತ್ರಗಳ ರಾಜಕೀಯಗಳು ಅಸಹ್ಯವಾಗಿದ್ದರೂ ಅವರೆಲ್ಲ

ನಮ್ಮವರಾದ್ದರಿಂದ ಅಲ್ಲಿಯ ಆಗು-ಹೋಗುಗಳ ಬಗ್ಗೆ ಬರೆಯಲಾಗಲಿಲ್ಲ. ದೂರದ ಕೃಷಿ ಕಾಲೇಜು-ವಿಶ್ವವಿದ್ಯಾಲಯಗಳಲ್ಲೂ ಕೆಲಸ ಮಾಡುವ ಅವಕಾಶ ಒದಗಿದ್ದರಿಂದ ಅಲ್ಲಿಯ ರಾಜಕೀಯವನ್ನು ವಿವರಿಸಲು ಪ್ರಯತ್ನಿಸಿದ್ದೇನೆ, ಇವು ರಾಜಸ್ಥಾನದವಷ್ಟೇ ಅಲ್ಲ. ನಮ್ಮ ವೈಶಿಷ್ಟ್ಯಗಳೂ ಹೌದು. ಇಂದಿನ ವಿದ್ಯಾರ್ಥಿಗಳ ಅಶಾಂತತೆಗೆ ಶಿಕ್ಷಕರು ಮತ್ತು ಶಿಕ್ಷಣ ಪದ್ಧತಿಯ ಕೊಡುಗೆಯೆಷ್ಟು? ಎಂದೂ ಅಳೆಯಲೆತ್ನಿಸಿದ್ದೇನೆ. ಇಲ್ಲಿ ಬರುವ ವ್ಯಕ್ತಿಗಳಿಗಿಂತ ಅವರ ಕಾರ್ಯ-ವಿಧಾನಗಳು ಮುಖ್ಯವಾದ್ದರಿಂದ ಅವರ ಹೆಸರುಗಳನ್ನೆಲ್ಲ ಬದಲಿಸುವ ಸ್ವಾತಂತ್ರ್ಯ ಬಳಸಿಕೊಂಡಿದ್ದೇನೆ.

ಈ ಪ್ರದೇಶ-ಪರಿಚಯವನ್ನು ಬರೆಯುವಂತೆ ಪ್ರೋತ್ಸಾಹಿಸಿ, ಕಾಗದದ ಕೊರತೆಯ ದಿನಗಳಲ್ಲೂ ಅಂದವಾಗಿ ಮುದ್ರಿಸಿ ಪ್ರಕಟಿಸಿದ್ದಕ್ಕಾಗಿ ಅಕ್ಷರ ಪ್ರಕಾಶನದವರಿಗೆ ಕೃತಜ್ಞನಾಗಿರುವೆ.

೧೫-೪-೧೯೭೩ — ಕೃಷ್ಣಾನಂದ ಕಾಮತ್

ರಥಬೀದಿ, ಹೊನ್ನಾವರ

(ಉತ್ತರ ಕನ್ನಡ)

ಮುರುಮುದ್ರಣದ ಕುರಿತು

'ನಾ ರಾಜಸ್ಥಾನದಲ್ಲಿ' ಮೊದಲಬಾರಿಗೆ ಸಾಗರದ ಅಕ್ಷರ ಪ್ರಕಾಶನದಿಂದ ೧೯೭೪ರಲ್ಲಿ ಬೆಳಕು ಕಂಡಿತು. ಪ್ರಕಾಶಕರಾಗಲಿ, ಪತ್ರಿಕೆಯವರಾಗಲಿ ಪತ್ರ ಬರೆದಾಗಲೇ ಅಥವಾ ಸ್ವತಃ ಬಂದು ವಿನಂತಿಸಿಕೊಂಡಾಗಲೇ ಕಾಮತರು ಬರವಣಿಗೆಯನ್ನು ಎತ್ತಿಕೊಳ್ಳುತ್ತಿದ್ದರು. ವ್ಯಕ್ತಿಯಾಗಿ, ಲೇಖಕರಾಗಿ ಕೃಷ್ಣಾನಂದರ ಸುಪ್ತ ಪ್ರತಿಭೆಯನ್ನು ಗುರುತಿಸಿದ ವಿರಳರಲ್ಲಿ ಹಿರಿಯ ಚಿಂತಕ, ಲೇಖಕ, ಮ್ಯಾಗ್‌ಸೇಸೇ ಪ್ರಶಸ್ತಿ ವಿಜೇತರಾಗಿದ್ದ (ದಿ) ಕೆ.ವಿ. ಸುಬ್ಬಣ್ಣ ಒಬ್ಬರಾಗಿದ್ದರು. ಒಮ್ಮೆ ಬೆಂಗಳೂರಿನ ನಮ್ಮ ಮನೆಗೇ ಬಂದು ತಮ್ಮ ಅಕ್ಷರ ಪ್ರಕಾಶಕ್ಕೊಂದು ಪ್ರವಾಸಕಥನ ಬರೆದುಕೊಡುವಂತೆ ಕೇಳಿಕೊಂಡರು. ಅವರ ಆತ್ಮೀಯ ಆಮಂತ್ರಣದ ಫಲವೇ 'ನಾ, ರಾಜಸ್ಥಾನದಲ್ಲಿ' ಆಗಿದೆ.

ಪರಿಸರ ರಕ್ಷಣೆಯ ಹೆಸರಿನಲ್ಲಿ ಹುಯಿಲೆದ್ದ ಇಂದಿನ ದಿನಮಾನಕ್ಕೆ ನಾಲ್ಕು ದಶಕಗಳ ಮೊದಲೇ ಕೃಷ್ಣಾನಂದ ಕಾಮತರು, ಅರಣ್ಯ ರಕ್ಷಣೆ ಮತ್ತು ಪರಿಸರದ ವಿಜ್ಞಾನದ ವಿಶ್ವಖ್ಯಾತ ಮಹಾವಿದ್ಯಾಲಯ ಹೊಂದಿದ ನ್ಯೂಯಾರ್ಕ ವಿಶ್ವವಿದ್ಯಾಲಯದ ಸಿರೆಕ್ಯೂಸ್‌ನಲ್ಲಿ ಅರಣ್ಯ ರಕ್ಷಣೆಯ ಮುಖ್ಯ ಕ್ರಮವಾದ ಕೀಟ-ನಿಯಂತ್ರಣ ಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದು ಭಾರತಕ್ಕೆ ಮರಳಿದ್ದರು (೧೯೬೫). ಆ ದಿನಗಳಲ್ಲಿ ವಿದೇಶಗಳಲ್ಲಿ ಉನ್ನತ ಪದವಿ ಪಡೆದವರಿಗೆ, ಮರಳಿ ಬಂದೊಡನೆ, ನಿರುದ್ಯೋಗ ಸಮಸ್ಯೆ ಕಾಡಬಾರದೆಂದು, ಕೇಂದ್ರ ಸರಕಾರವು 'Scientists' Pool' ಎಂಬ ತಾತ್ಕಾಲಿಕ ನೌಕರಿಯ ವ್ಯವಸ್ಥೆ ಮಾಡಿತ್ತು. ಅವರವರ ಪರಿಣತಿಗೆ ಹೊಂದುವಂತಹ ವೃತ್ತಿಯನ್ನು ಕೊಡಮಾಡುವುದು ಅದರ ಉದ್ದೇಶವಾಗಿದ್ದರೂ ಅರಣ್ಯವೇ ಇಲ್ಲದ ಮರುಭೂಮಿಯಾದ ರಾಜಸ್ಥಾನದ ಕೃಷಿ ಕಾಲೇಜೊಂದರಲ್ಲಿ ಕಾಮತರ ಸೇವೆಯನ್ನು ನಿಗದಿ ಪಡಿಸಲಾಯಿತು. ಉದಯಪುರ ವಿಶ್ವವಿದ್ಯಾಲಯವು ಜೊಬನೇರ ಎಂಬ ಜಯಪುರ ಬಳಿಯ ಕುಗ್ರಾಮದಲ್ಲಿ ನಡೆಸುತ್ತಿದ್ದ ಸಂಸ್ಥೆಗೆ ಕಾಮತರು ಬರಬೇಕಾಯಿತು. ಮೂರು ವರ್ಷಗಳ ರಾಜಸ್ಥಾನ ವಾಸದ ಅನುಭವಗಳು 'ನಾ ರಾಜಸ್ಥಾನದಲ್ಲಿ' ಮೂಡಿಬಂದಿವೆ.

ಅದಾಗಲೇ ವೈಜ್ಞಾನಿಕ ಉಚ್ಚಶಿಕ್ಷಣವೆಂಬುದು, ಈ ನಾಡಿನ ನೆಲಕ್ಕೆ ಸರಿಹೋಗದ ವಿದೇಶಿಯ ಪದ್ಧತಿಯಲ್ಲಿ ಭಾರತದಲ್ಲಿ ಬೇರೂರಲಾರಂಭಿಸಿತ್ತು. ಪರಿಶ್ರಮ ಮೂಲದ ಪ್ರಾಯೋಗಿಕತೆಯನ್ನು ಕ್ರಮವಾಗಿ ತಮ್ಮ ನಾಡಿನ ನೆಲಜಲಗಳಿಗೆ ಹೊಂದಿಸಿದಂತಹ ಕೃಷಿವಿಜ್ಞಾನ ಪದ್ಧತಿ, ವಿದೇಶಗಳಲ್ಲಿ ಬಳಕೆಯಲ್ಲಿ ಇದ್ದರೆ, ಅನಾಮತ್ತಾಗಿ, ಅಲ್ಲಿಯ ಪ್ರಕಾರಗಳನ್ನು ಇಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಎತ್ತಿಕೊಂಡು ಕಲಿಸಲಾರಂಭಿಸಿದ್ದರು. ಇತ್ತ ಕುದುರೆಯೂ ಅಲ್ಲದ ಅತ್ತ ಕತ್ತೆಯೂ ಅಲ್ಲದ ಹೇಸರಗತ್ತೆಯ ಶಿಕ್ಷಣಕ್ರಮ ಬಳಕೆಯಲ್ಲಿ ಬರಲಾರಂಭಿಸಿತ್ತು. ಇತರ ದೇಶಗಳಿಗೆ ಮಾದರಿಯಾಗಬಹುದಾಗಿದ್ದ ಮುಂದರಿದ ಅಮೇರಿಕನ್ ಉಚ್ಚ ಕೃಷಿ (ಮಾನವ ನಿರ್ಮಿತ ಅರಣ್ಯಗಳು ಸೇರಿದಂತೆ) ಶಿಕ್ಷಣದ ಹಿನ್ನೆಲೆಯನ್ನು ಕಾಮತರು ಪಡೆದದ್ದರಿಂದ, ಆ ಹಿನ್ನೆಲೆಯಲ್ಲಿ ತಮ್ಮ ರಾಜಸ್ಥಾನದ ಅನುಭವಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಇಲ್ಲಿ ಜೊಬನೇರದ ಕೃಷಿಕಾಲೇಜು ಒಂದು ಪ್ರತಿಮೆಯಷ್ಟೆ! ಇಡೀ ಭಾರತವನ್ನೇ ಅದು ಪ್ರತಿನಿಧಿಸುತ್ತದೆ, ಎಂದರೆ ತಪ್ಪಾಗಲಾರದು. ಈ ನಾಲ್ಕು ದಶಕಗಳಲ್ಲಿ ಭಾರತದಲ್ಲಿ ಅರಣ್ಯ ದೇಶದಲ್ಲಿ ೩೭ ಇದ್ದರೆ, ಕರ್ನಾಟಕದಲ್ಲೆ ಎರಡು ಇವೆ. ಕಾಲೇಜುಗಳು ಸಾಕಷ್ಟು ಬೆಳೆದಿವೆ. ಆದರೆ ಅವುಗಳಿಂದ ಹೊರಬೀಳುತ್ತಿರುವ ಲಕ್ಷಲಕ್ಷ ಪದವೀಧರರಿಗೆ ಅವು ಸ್ವಂತ ನೌಕರಿ ಒದಗಿಸುವ ನಿಮಿತ್ತವಾಗಿವೆ ಅಷ್ಟೆ. ದೇಶದ ಕೃಷಿ ಅಥವಾ ಅರಣ್ಯಸಂಪತ್ತನ್ನು ಹೆಚ್ಚಿಸುವಲ್ಲಿ ಅವರ ಪಾತ್ರ ಹೆಚ್ಚಿದೆಯೇ? ಪ್ರಮುಖವಾಗಿದೆಯೇ? ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಕೃಷಿಪ್ರಧಾನವಾದ ಭಾರತದಲ್ಲಿ ವಾಣಿಜ್ಯೋದ್ಯಮಗಳಿಗಿಂತ ಕೃಷಿ ಮತ್ತು ಅದರ ಸಂಶೋಧನೆಗಳಿಗೆ ಪ್ರಾಮುಖ್ಯತೆ ಕೊಡುತ್ತಿರುವದಾಗಿ ಸರಕಾರವು ಸಾರುತ್ತಿದ್ದರೂ, ವಸ್ತುಸ್ಥಿತಿ ತೀರ ಭಿನ್ನವಾಗಿರುವದನ್ನು ಅನುಭವಿಗಳು ಬಲ್ಲರು. ಫಲವತ್ತಾದ ಪ್ರದೇಶವನ್ನು ಭಾರೀ ಉದ್ದಿಮೆಗಳಿಗಾಗಿ ಕೃಷಿಕರಿಂದ ಕಸಿದುಕೊಂಡೋ, ಭ್ರಮೆಹುಟ್ಟಿಸಿ, ಪಡೆದುಕೊಂಡೋ, ಉದ್ಯಮಿಗಳಿಗೆ ನೀಡಿ ಅನುತಾಪ-ಆಕ್ರೋಶಗಳಿಗೆ ಅವಕಾಶ- ವಾಗುತ್ತಿರುವುದನ್ನು ದಿನೇ ದಿನೇ ಕಾಣುತ್ತಿದ್ದೇವೆ. ಇತ್ತೀಚೆಗೆ ಕರ್ನಾಟಕದ ಅರಣ್ಯಶಾಸ್ತ್ರ ಪದವಿಧರರು ಇಲಾಖೆಯ ನೌಕರಿಗಳಿಗೆ ತಮಗೇ ಪ್ರಾಶಸ್ತ್ಯ ನೀಡಬೇಕೆಂದು ಅನಶನ ನಡೆಸಿದ್ದರು.

ಈ ದೃಷ್ಟಿಯಲ್ಲಿ ಹಿಂದಿನಂತೆಯೇ ಹೆಚ್ಚು ಕಡಿಮೆ ಅದೇ ರೀತಿಯಲ್ಲಿ ಇಂದಿಗೂ ನಡೆದು ಬಂದ ಕೃಷಿ-ವಿಜ್ಞಾನ ತರಬೇತಿಯ ಮೇಲೆ ಬೆಳಕು ಚೆಲ್ಲುವ ನಾ ಪುಸ್ತಕ ರಾಜಸ್ಥಾನದಲ್ಲಿ ಸಾಮಯಿಕವಾಗಿದೆ. ಪರಿಸರ ವಿನಾಶ, ಆಹಾರದ ಕೊರತೆಗಳು ಇನ್ನಷ್ಟು ತೀವ್ರವಾಗಬಹುದಾದ ದಿನಗಳಲ್ಲಿ, ಅವುಗಳ ಬೆಳವಣಿಗೆಯ ಕಾರಣಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

ಕೃಷ್ಣಾನಂದ ಕಾಮತರ ಅನೇಕ ಕೃತಿಗಳು ಪ್ರವಾಸಪ್ರಧಾನವಾಗಿವೆ. ಆದರೆ ಇತರರ ಪ್ರವಾಸ ಕಥನಗಳಂತೆ ಪ್ರೇಕ್ಷಣೀಯ ಸ್ಥಳಗಳ ವರ್ಣನೆ ಇಲ್ಲಿ ಇಲ್ಲ. ಅವರ ಇತರ ಕೃತಿಗಳಂತೆಯೇ "ನಾ ರಾಜಸ್ಥಾನದಲ್ಲಿ" ಪ್ರದೇಶದ ಪರಿಚಯ, ಸಾಮಾಜಿಕ ನೋಟಗಳು, ಮುಖ್ಯವಾಗಿ ಅಲ್ಲಿಯ ಪರಿಸರ, ವಿಶಿಷ್ಟ ಜೀವಿಲೋಕಗಳನ್ನು, ರಮ್ಯವಾದ ಇಣುಕು ನೋಟಗಳಲ್ಲಿ ಕೂಡಮಾಡಿದ್ದನ್ನು ನೋಡಬಹುದು. ಲೇಖಕರ ಸಾಮಾಜಿಕ ಕಳಕಳಿ, ಈ ಕೃತಿಯ ಇನ್ನೊಂದು ಎದ್ದು ತೋರುವ ಅಂಶವಾಗಿದೆ.

ಹೆಚ್ಚಿನ ಆಸಕ್ತಿಯಿಂದ 'ನಾ ರಾಜಸ್ಥಾನದಲ್ಲಿ'ಯ ಮರುಮುದ್ರಣ ಕೈಗೊಂಡ ಪ್ರಿಯದರ್ಶಿನಿ ಪ್ರಕಾಶನದ ಶ್ರೀ ಮಹೇಶ್ ಅವರಿಗೆ ಕೃತಜ್ಞತೆಗಳು.

– ಡಾ. ಜ್ಯೋತ್ಸ್ನಾ ಕೃಷ್ಣಾನಂದ ಕಾಮತ್

ಕಾಮತ ಕುಟೀರ
ಹೊನ್ನಾವರ (ಉತ್ತರ ಕನ್ನಡ)

ಪರಿವಿಡಿ

೧. ದೂರದ ಪ್ರಯಾಣ

ನಾಲ್ಕು ದಿನಗಳ ದೂರದಪ್ರವಾಸವಾದ್ದರಿಂದ ಒಂದು ವಾರದಿಂದಲೇ ಅದರ ಬಗ್ಗೆ ಯೋಚಿಸಬೇಕಾಯಿತು. ಹೆಂಗೆಳೆಯರು, ಹುಡುಗರು, ಹೊರೆ ಸಾಮಾನುಗಳು, ಮೂರರ ಯೋಚನೆಯೂ ನನಗಿರಲಿಲ್ಲ. ಸ್ವತಃ ಹೊರಬಹುದಾದಷ್ಟು ಸಾಮಾನುಗಳನ್ನು ಕಟ್ಟಿದೆ, ಅದರಲ್ಲಿ ಟೈಪರಾಯಿಟರ ಸೇರ್ಪಡೆಯಾದ್ದರಿಂದ ಬಟ್ಟೆ ಬರೆಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಸೇರಿಸಬೇಕಾಯಿತು. ಹೊನ್ನಾವರದಿಂದ ನಸುಕಿನ ಐದು ಗಂಟೆಗೆ ಹುಬ್ಬಳ್ಳಿ ಮೋಟಾರು ಹತ್ತಿದೆ. ಮೊದಲು ಕ್ಲೀನರನಾಗಿ ಈಗ ಡ್ರಾಯವರನಾದವ ತನ್ನ ಸಾಹಸಗಳ ಬಗ್ಗೆ ಹೇಳುತ್ತಿರುವಾಗ ಹಳದೀಪುರ ಬಂದಿತು. ಮದುವೆಗೆ ಹೊರಟ ದೊಡ್ಡ ಗುಂಪೊಂದು ಬಸ್ಸು ಏರಿತು. ಎಲ್ಲ ಮಕ್ಕಳ ಲೆಕ್ಕ ಹತ್ತದ ತಂದೆಯೊಬ್ಬ "ಲಕ್ಷ್ಮಿ ಕಾಣುತ್ತಿಲ್ಲ. ಈಶ್ವರ ಎಲ್ಲಿ?" ಎಂದು ಕೂಗುತ್ತ ತಡ ಮಾಡುತ್ತಿದ್ದುದರಿಂದ ಡ್ರಾಯ ವರನು "ಈಶ್ವರನು ಪಾರ್ವತಿಯನ್ನು ಹುಡುಕಿಕೊಂಡು ಹೋಗಿರಬೇಕು" ಎಂದ. ಸರಿ, ಪಂಗಡದವರು ವಾಗ್ಯುದ್ಧಕ್ಕೆ ಇಳಿದರು. ಬಸ್ಸು ಅರ್ಧಗಂಟೆ ತಡವಾಗಿಯೇ ಕುಮಟಾ ಸೇರಿತು. ಅಲ್ಲಿನ ಎರಡೆರಡು ಬಸ್‌ಸ್ಟ್ಯಾಂಡುಗಳ ಮೇಲೆ ಅರ್ಧರ್ಧ ಗಂಟೆ ಕಳೆಯಿತು. ಸ್ಟ್ಯಾಂಡಿನ ಮೇಲೆ ಹುಡುಗನೊಬ್ಬ ಸೋಡಾ ಶರಬತ್ ಬೇಕೇ ಎಂದು ವಿಚಾರಿಸಿದ. ಈ ಮುಂಜಾವಿನಲ್ಲಿ ತಂಪಾದ ಪಾನೀಯ ಕುಡಿಯುತ್ತಾರೆಯೇ ಎಂದು ಕೇಳಿದಾಗ ನಕ್ಕು ಚಹಾ - ಕಾಫಿ ತರಲೇ ಎಂದು ವಿಚಾರಿಸಿ ಭಟ್ಟರ ಹೋಟೇಲಿನಿಂದ ಚಹಾ ತಂದುಕೊಟ್ಟು ಹತ್ತುಪೈಸೆ ಗಿಟ್ಟಿಸಿಯೇ ಬಿಟ್ಟ. ಅಲ್ಲದೇ "ನನ್ನ ತಮ್ಮ ಸಿರ್ಸಿ ಬಸ್ ಸ್ಟ್ಯಾಂಡಿನಲ್ಲಿ ಮುಸುಂಬಿ ಮಾರುತ್ತಾನೆ. ಅವನಿಗೆ ಕೂಡಲೇ ನೂರು ಲಿಂಬೇಹಣ್ಣು ಕಳಿಸಲು ಹೇಳಿದ್ದೇನೆ ಎಂದು ಹೇಳಿ" ಎಂದು ತಂತಿಯ ರೊಕ್ಕವನ್ನು ಉಳಿಸಿಕೊಂಡ. ಯಾವುದೊ ಪುಸ್ತಕದ ವ್ಯಾಪಾರಿ, ಹುಬ್ಬಳ್ಳಿಗೆ ಕಳಿಸುವ ಚೀಟಿಯನ್ನು ಡ್ರಾಯವರನಿಗಿತ್ತ. ಮುದಿಯನೊಬ್ಬ ಮಗಳಿಗೆ ಮುಟ್ಟಿಸೆಂದು ಹುರಿದ ಮೀನಿನ ಪೊಟ್ಟಣವನ್ನೂ ನಾಲ್ಕಾಣೆಯನ್ನೂ ಡ್ರಾಯವರನ ಕೈಯಲ್ಲಿ ಹಾಕಿದ. ಕೊನೆಗೊಮ್ಮೆ ಮೋಟಾರು ಹೊರಟು ಸ್ವಲ್ಪ ಓಡುವುದರೊಳಗೆ ದೀವಗಿ ತಾರಿ ಬಂದಿತು. ಪ್ರಯಾಣಿಕರೆಲ್ಲ ಇಳಿದು, ಬಸ್ಸು 'ಜಂಗಲ್' ಹತ್ತುವದರಲ್ಲಿದ್ದಾಗ ನಾವಿಕನು ಕುಹೂss ಹಾಕಿ "ಡ್ರಾಯವರ ಸಾಬ್ರೆ, ಭಾರೀ ಇಳಿತ. ನೀರೇ ಇಲ್ಲ. ಮಿರ್ಜಾನ ಮೇಲಿಂದ ಹೋಗಿ" ಎಂದುಬಿಟ್ಟ.

ತಿರುಗಿ ಮೋಟಾರು ಏರಿ ಮಿರ್ಜಾನ ಮಾರ್ಗವಾಗಿ ಹೊರಟೆವು. ದಾರಿಯಲ್ಲಿ ಅರ್ಧಕ್ಕೆ ನಿಂತ ಕೆನರಾ ಕಾಲೇಜಿನ ಕಟ್ಟಡ ತನ್ನ ಅಸಹಾಯ ಸ್ಥಿತಿಯನ್ನು ನಿವೇದಿಸಿಕೊಳ್ಳುತ್ತಿದ್ದಂತೆ ಭಾಸವಾಯಿತು. ಹೆಗಡೆಯ ಇಕ್ಕಟ್ಟಾದ ರಸ್ತೆಯಲ್ಲಿ ವಾಹನ ಓಡುವಾಗ ಹಳ್ಳಿಗರು ಅತ್ತಿತ್ತ ಓಡಿದರು. ಪ್ರಯಾಣಿಕರು ಇಳಿದಾಗ, ಎಳೆನೀರು ಮಾರುವವರು, ಬಾಳೆಹಣ್ಣಿನವರು ಕೈ ತುಂಬ ಸಂಪಾದಿಸಿದರು. ಘಟ್ಟದ ಮೇಲಿನ ಪ್ರಯಾಣಿಕನೊಬ್ಬ ಆಗತಾನೇ ಖರೀದಿಸಿದ ಮೀನನ್ನು ಸೀಟಿನ ಕೆಳಗೆ ತಂದಿಟ್ಟ.

ಮೋಟಾರು ಮತ್ತೆ ಜಂಗಲ್ (ಎರಡು ನಾವೆಗಳ ಮೇಲೆ ಹಲಗೆ ಜೋಡಿಸಿದ್ದು) ಏರಿತು. ಗುತ್ತಿಗೆದಾರ ಪ್ರತಿಯೊಬ್ಬ ಪ್ರಯಾಣಿಕನಿಂದ ಮೂರು ಪೈಸೆ ವಸೂಲ ಮಾಡಿ ಸೀಟಿ ಬಾರಿಸಿದಾಗಲೇ ಜಂಗಲಿನ ಹಗ್ಗ ಬಿಚ್ಚಿ ನದಿಯಲ್ಲಿ ತೇಲಿಸಿದರು. ತಲೆಗೊಂದು ಮಾಸಿದ ರುಮಾಲು, ಸೊಂಟಕ್ಕೊಂದು ಅಡ್ಡಕಚ್ಚೆ ಉಟ್ಟ ನಾಲ್ಕು ನಾವಿಕರು "ಓ ಬೇ ಲೇಸೋ, ಓ ಮಾಲಿ ಲೇಸೋ"ss ಹಾಡುತ್ತ ಬಿದುರಿನ ಉದ್ದ ಜಲ್ಲು ಹಾಕಿದಾಗ ಜಂಗಲ್ ಮೇಲೆ ನಿಂತ ನಾವೆಲ್ಲ ನಿಧಾನವಾಗಿ ಮುಂದುವರಿಯುತ್ತಿದ್ದೆವು. ಪೂರ್ವ ದಿಕ್ಕಿನಲ್ಲಿ ಸೂರ್ಯನು ಸಹ್ಯಾದ್ರಿ ಶ್ರೇಣಿಗಳನ್ನು ಏರಿ ಮೇಲಕ್ಕೆ ಬರುತ್ತಿದ್ದ. ಎರಡೂ ದಂಡೆಗಳಲ್ಲಿ ಹುಲುಸಾಗಿ ಬೆಳೆದು ನಿಂತ ತೆಂಗುಗಳು ನದಿಯಲ್ಲಿ ತಮ್ಮ ನೆಳಲು ನೋಡಿಕೊಂಡು ನಾಚುತ್ತ ನಿಂತಿದ್ದವು. ಸಣ್ಣ ನಾವೆಗಳಲ್ಲಿ ಮೀನುಗಾರರು ಕುಳಿತು ಮೀನು ಹಿಡಿಯುತ್ತಿದ್ದರು. ಒಂದು ನಾವೆಯಿಂದ ಮಂಗಳೂರು ಹಂಚು ಇಳಿಸಿದರೆ ಇನ್ನೊಂದರಿಂದ ತೆಂಗಿನಕಾಯಿ ಇಳಿಸುತ್ತಿದ್ದರು. ತೆಂಗಿನ ಕಾಯಿ ಸಿಪ್ಪೆಗಳಿಂದ ಕತ್ತ ಮಾಡುವ ಸಲುವಾಗಿ ಒಂದೆಡೆ ಅವನ್ನು ಹೂಳಿಟ್ಟಿದ್ದರಿಂದ ದುರ್ಗಂಧವಾಗಿತ್ತು. ಆಚೆಯ ದಡ ಬೇಗ ಬಂದಂತೆ ಅನಿಸಿತು. ಜಂಗಲಿನಿಂದ ಇಳಿಯುತ್ತಿದ್ದಂತೆ "ಚಾ ಕುಡುಕೆ ಏನಾರು ಕಾಸುಕೊಡ್ರಿ" ಎಂದು ನಾವಿಕರು ತಲಾ ಐದೈದು ಪೈಸೆ ವಸೂಲು ಮಾಡಿಯೇ ಬಿಟ್ಟರು.

ಹುಬ್ಬಳ್ಳಿ ಗಾಡಿ ಮಿರ್ಜಾನಕ್ಕೆ ಬಂದದ್ದರಿಂದ ಹಳ್ಳಿಗರು ಸೋಜಿಗದಿಂದ ನೋಡಿದರು. ದೀವಗಿ ತಾರಿಯಲ್ಲಿ ನೀರು ಇರಲಿಕ್ಕಿಲ್ಲವೆಂದುಕೊಂಡರು. ಎಡದಿಕ್ಕಿನಲ್ಲಿ ಎತ್ತರವಾಗಿ ಪಾಳುಬಿದ್ದ ಮಿರ್ಜಾನ ಕೋಟೆ ಇತಿಹಾಸವನ್ನು ನೆನಪಿಗೆ ತಂದುಕೊಟ್ಟಿತು. ಸ್ವಲ್ಪ ದೂರ ಹೋದನಂತರ ಬಸ್ಸು ಒಳದಾರಿಯಿಂದ ಸಿರ್ಸಿಯ ಹೆದ್ದಾರಿಯನ್ನು ಸೇರಿಕೊಂಡಿತು. ಸೃಹ್ಯಾದ್ರಿಯ ಗಿರಿಕಂದರಗಳು ಕಣ್ಣಿಗೆ ಹಬ್ಬವನ್ನುಂಟುಮಾಡಿದರೂ ಘಟ್ಟದ ಏರು ಏರಲಾರದೇ ಬಸ್ಸು ಒದ್ದಾಡುತ್ತ ಹೊರಟಿತ್ತು. ವಿಪುಲ ಮಳೆ, ಆದ್ರ ಹವೆಗಳಿಂದ ಗಿಡಮರಗಳು ಸೊಕ್ಕಿನಿಂದ ಬೆಳೆದಿದ್ದವು. ಎಲ್ಲಿ ಕಣ್ಣು ಹಾಯಿಸಿದರೂ ಮೈಲುಗಟ್ಟಲೆ ಚಾಚಿದ ದಟ್ಟ ಕಾಡು. ಈ ಮರಗಳಲ್ಲಿ ಉಪಯೋಗದ್ದು ಒಂದು

ಇದ್ದರೆ ಉಪಯೋಗವಿಲ್ಲದವು ಹತ್ತು ಇದ್ದವು. ನಿಸರ್ಗಮಾತೆ ನಮ್ಮ ಜಿಲ್ಲೆ, ರಾಜ್ಯ, ದೇಶಗಳಿಗೆ ಇಷ್ಟೆಲ್ಲ ಬನಸಿರಿಯನ್ನು ಮುಕ್ತಹಸ್ತದಿಂದ ಕೊಟ್ಟಿದ್ದಾಳೆ. ಆದರೆ ನಾವು ಇದನ್ನು ಬೆಳೆಸುವುದರ ಸಲುವಾಗಿ, ಉಳಿಸುವುದರ ಸಲುವಾಗಿ ಏನು ಮಾಡಿದ್ದೇವೆ? ಅರಣ್ಯಗಳನ್ನು, ಧನಿಕ ಕಂಟ್ರಾಕ್ಟರುಗಳಿಗೆ ಕೊಟ್ಟು ಸರಕಾರ ಬೊಕ್ಕಸ ತುಂಬಿಕೊಳ್ಳುವು-ದರಲ್ಲಿದ್ದರೆ, ಅರಣ್ಯದ ಅಧಿಕಾರಿಗಳು ಈ ಧನಿಕರಿಂದ ತಾವೆಷ್ಟು ಸೆಳೆದುಕೊಳ್ಳಬಹುದೆಂಬ ಹವಣಿಕೆಯಲ್ಲಿದ್ದಾರೆ. ದೇಶದ ಸಂಪತ್ತು ತೀವ್ರ ನಾಶವಾಗಹತ್ತಿದೆ. ಜಿಲ್ಲೆಯಲ್ಲಿ ಈಗಿದ್ದ ವಸತಿಗಿಂತ ಮೂರು ಪಟ್ಟು ಜನರಿಗೆ ಅನ್ನ, ಆಚ್ಛಾದನ, ಉದ್ಯೋಗ ಒದಗಿಸುವಷ್ಟು ಅವಕಾಶ ಇಲ್ಲಿಯ ಅರಣ್ಯ ಪ್ರದೇಶದಲ್ಲಿದೆ. ಇಷ್ಟೆಲ್ಲ ಅರಣ್ಯ ಸಂಪತ್ತು ಇದ್ದೂ ಅಮೇರಿಕೆಯ ಹೆಸರು ವಾಸಿಯಾದ ಅರಣ್ಯಶಾಸ್ತ್ರದ ಕಾಲೇಜಿನಲ್ಲಿ ಉಚ್ಚ ತರಬೇತಿ ಮತ್ತು ಡಿಗ್ರಿಗಳನ್ನು ಪಡೆದ ಒಬ್ಬನನ್ನು ಸಾಕುವ, ಅವನ ತರಬೇತಿಯ ಲಾಭ ಪಡೆಯುವ ಅವಕಾಶ ನಮ್ಮ ಜಿಲ್ಲೆಗೆ ಇಲ್ಲದೇ ಹೋಯಿತೆ? ನಮ್ಮ ಜನ ಹಾಗೂ ಸರಕಾರ ಎಂದಿಗೆ ಕಣ್ಣು ತೆರೆದಾರು? ಎಂದು ಬಿಸಿಯುಸಿರು ಬಿಡುವಂತಾಯಿತು. ಈ ಅರಣ್ಯಶಾಸ್ತ್ರ ತರಬೇತಿಯನ್ನು ರಾಜಸ್ಥಾನದ ಮರುಭೂಮಿಯಲ್ಲಿ ಮರೆಯುವಂತಾಗಲು ಭಾರತ ಸರಕಾರ ಉದಯಪುರಕ್ಕೆ ನನ್ನನ್ನು ಕಳಿಸಿತ್ತು!

ರಾಗಿಹೊಸಾಳಿಯ ಚಹದ ಅಂಗಡಿಯೆದುರು ಮೋಟಾರು ನಿಂತಿತು. ನಾವು ಪ್ರಯಾಣ ಮಾಡಿದ್ದು ಇಪ್ಪತ್ತೇ ಮೈಲುಗಳಾದರೂ ಇನ್ನೂರು ಮೈಲು ಓಡಿ ಬಂದವರಷ್ಟು ದಣಿವಾಗಿತ್ತು. ಎಲ್ಲರೂ ಇಳಿದು ಅಕ್ಕಿಯ ದೋಸೆ, ಅವಲಕ್ಕಿಗಳನ್ನು ಜಗಿದು, ಚಹಾ, ಕಷಾಯಗಳನ್ನು ಕುಡಿದು, ನಮ್ಮ ಜಾಗಾಕ್ಕೆ ಮರಳಿದೆವು. ನೀರಿನ ಒರತೆಯಿದ್ದಲ್ಲಿ, ಪರ್ವತಗಳ ಆಶ್ರಯದಲ್ಲಿ, ಅಲ್ಲಲ್ಲಿ ಹೆಗ್ಡೆಯವರ ಅಡಿಕೆ ತೋಟಗಳು ಕಂಡುಬರುತ್ತಿದ್ದವು. ಜಾನಮನೆಯ ಹತ್ತಿರ ಯಾವುದೋ ಜಾತ್ರೆಯಿರಬೇಕು. ಹಳ್ಳಿಗರು ಬಣ್ಣ ಬಣ್ಣದ ಬಟ್ಟೆ ಧರಿಸಿ, ಹೆಂಗಸರು ತಲೆತುಂಬ ಹೂಮುಡಿದು ಜಾತ್ರೆಗೆ ಹೊರಟಿದ್ದರು. ಅಡಿಕೆ, ಬಾಳೆಕಾಯಿ, ಅಕ್ಕಿಗಳನ್ನು ತುಂಬಿಕೊಂಡು, ಚಕ್ಕಡಿ, ಲಾರಿಗಳು ಸಿರ್ಸಿಯ ಸಂತೆಗೆ ಹೊರಟಿದ್ದವು. ಸಿರ್ಸಿ ನಿಲ್ದಾಣದಲ್ಲಿ "ಕಿಸೆ ಕಳ್ಳರಿದ್ದಾರೆ, ಎಚ್ಚರಿಕೆ" ಎಂಬ ಬೋರ್ಡಿನೆದುರಿಗೇ ಅಡಿಕೆ ಮಾರಿ ಬಂದ ನೂರಾರು ರೂಪಾಯಿ ಕಳೆದುಕೊಂಡ ಒಬ್ಬ ಹೆಗ್ಡೆರು ಬೊಬ್ಬೆಯಿಡಲಾರಂಭಿಸಿದರು! ಸಿರ್ಸಿಯ ನಂತರ ಗುಡ್ಡಗಳ ಸಾಲು ಅಷ್ಟಾಗಿ ಇಲ್ಲದ್ದರಿಂದ ಬಸ್ಸಿನ ವೇಗ ತುಸು ಹೆಚ್ಚಿತು. ಮುಂಡಗೋಡದಲ್ಲಿ ಚಹಾಕ್ಕೆ ಮತ್ತೆ ಬಸ್ಸು ನಿಂತಿತು. ಇಲ್ಲಿ ಕಾರವಾರಿ ಸಂಕ್ರರು ಮತ್ತು ಘಟ್ಟದ ಬಸಲಿಂಗರ ಸಮ್ಮಿಶ್ರ ಜನವಸತಿ ನೋಡಬಹುದು. ಹಾಲು ಮಾರುವ ಮರಾಠಿಗರ ಚಿತ್ರವಿಚಿತ್ರ ಉಡಿಗೆ, ಚಿತ್ರಕಾರನಿಗೆ ಆಹ್ವಾನವಾಗಿತ್ತು. ಗಂಡಸರು ಕಚ್ಚೆಯುಟ್ಟು ನಾಲ್ಕಾರು ಜೇಬುಗಳ

ಜಾಕೀಟು ಧರಿಸಿ ಕಿವಿಗೆ ಬಂಗಾರದ ಉಂಗುರುಗಳನ್ನೂ, ಕೈಗೆ ಬಳೆಗಳನ್ನೂ ಧರಿಸಿ ತಲೆಗೆ ಬಣ್ಣದ ರುಮಾಲು ಧರಿಸಿದರೆ, ಹೆಂಗಳೆಯರು ಹೆಚ್ಚಾಗಿ ಎಣ್ಣೆ ಹಾಕಿದ ತಲೆಕೂದಲ ಮುಡಿಕಟ್ಟಿ, ಕೆಂಬಣ್ಣದ ಹೂ ಮುಡಿದು, ಕಿವಿ, ಕುತ್ತಿಗೆ, ಕೈಗಳಿಗೆ ತುಂಬ ಆಭರಣ ತೊಟ್ಟು, ಕಿರಿದಾದ ಕುಪ್ಪಸ ಧರಿಸಿ, ತೊಡೆ ಕಾಣುವಂತೆ ಬಣ್ಣದ ಸೀರೆಯನ್ನು ಕಚ್ಚೆಹಾಕಿ ಉಟ್ಟುಕೊಂಡಿದ್ದರು. ಹಣ್ಣು ಮಾರಲು ಬಂದ ಲಂಬಾಣಿಯಳು ಕಾಜು, ನಾಣ್ಯಗಳನ್ನು ಜೋಡಿಸಿದ ವರ್ಣಮಯ ಬಟ್ಟೆಗಳಿಂದ ಕಣ್ಣಿಗೆ ಹಬ್ಬವನ್ನು ಉಂಟುಮಾಡಿದಳು. ಕೆಮರಾ ಕೈಯಲ್ಲಿ ಇಲ್ಲದ್ದಕ್ಕೆ ಕಸಿವಿಸಿಗೊಳ್ಳುತ್ತಿರುವಾಗಲೇ ಬಸ್ಸು ಬಿಟ್ಟಿತು.

ಉತ್ತರ ಕನ್ನಡ ಜಿಲ್ಲೆಯ ಗಡಿಯನ್ನು ದಾಟುತ್ತಿದ್ದಂತೆ ಮರಗಳ ಗಾತ್ರ ಸಣ್ಣದಾಗುತ್ತ ಹೋಗಿ ಕೊನೆಗೆ ಗಿಡಗಂಟಿಗಳೇ ಕಾಣಲಾರಂಭಿಸಿದವು. ತಡಸ ಬಂದುಹೋಯಿತು. ಇನ್ನೂ ಹತ್ತು ಹನ್ನೆರಡು ಮೈಲು ಸಾಗಿ ಬಸ್ಸು ಪೂನಾ - ಬೆಂಗಳೂರು ಹೆದ್ದಾರಿಯನ್ನು ಸೇರಿಕೊಂಡಾಗ ಡ್ರಾಯವರನಿಗೆ ಹುರುಪು ಬಂದು ವೇಗವನ್ನು ಹೆಚ್ಚಿಸಿದ. ಬಯಲು ಸೀಮೆಯ ಹಳ್ಳಿಗರು ಯಾವ ಮೋಟಾರು ಎಲ್ಲಿಗೆ ಹೋಗುತ್ತದೆಂದು ತಿಳಿದುಕೊಳ್ಳುವ ಗೋಜಿಗೆ ಹೋಗದೇ ರಸ್ತೆಯಲ್ಲಿ ಓಡುವ ಎಲ್ಲ ಬಸ್ಸುಗಳಿಗೂ ಕೈತೋರಿಸುತ್ತ ನಿಂತಿದ್ದರು. ಕರಿಮಣ್ಣಿನ ಹೊಲಗಳಲ್ಲಿ ಬಸಲಿಂಗನು ಮೈಮುರಿದು ದುಡಿಯುವಾಗ ಅವನ ಹೆಂಡತಿ ಭಕ್ರಿ - ಬ್ಯಾಳಿ - ಹಿಂಡಿಗಳ ಬುತ್ತಿ ಹೊತ್ತು ಹೊಲದತ್ತ ನಡೆದಿದ್ದಳು. ಚಕ್ಕಡಿಗಳಲ್ಲಿ ಎಷ್ಟೊ ಕುಟುಂಬಗಳು ಹುಬ್ಬಳ್ಳಿಯತ್ತ ಸಾಗಿದ್ದವು. ಹಿಂದಿನ ರಾತ್ರಿ ಸರದಾರ ಜಿಯ ಲಾರಿಗೆ ಡಿಕ್ಕಿಹೊಡೆದು ಚೂರಾಗಿ ಬಿದ್ದ ಕಾರನ್ನು ನೋಡಲು ಪ್ರಯಾಣಿಕರೆಲ್ಲ ಗೋಣು ಉದ್ದ ಮಾಡಿದರು. ಸರದಾರಜಿಗಳು ರಾತ್ರಿಯೆಲ್ಲ ಕಣ್ಣು ಮುಚ್ಚಿಯೇ ವಾಹನಗಳನ್ನು ನಡೆಸುತ್ತಾರೆಂದು ನಮ್ಮ ಡ್ರಾಯವರ ತೀರ್ಪು ಕೊಟ್ಟ.

ಹಳೆಹುಬ್ಬಳ್ಳಿಯ ತಿಪ್ಪೆ, ಕೊಳಚೆಗಳನ್ನು ದಾಟಿ ಮೋಟಾರು ನಗರದತ್ತ ಓಡಿತು. ಊಟದ ಶಾಸ್ತ್ರ ಮುಗಿಸಿ ರೇಲ್ವೆ ನಿಲ್ದಾಣಕ್ಕೆ ಧಾವಿಸಿದರೆ ಅಲ್ಲಿ ವಿಪರೀತ ಗದ್ದಲ. ಟಿಕೇಟನ್ನು ಪಡೆಯಲಿಕ್ಕೇ ಒಂದು ತಾಸು ಕಳೆದರೆ ಟ್ರೇನಿನಲ್ಲಿ ಸ್ಥಳವೇ ದೊರೆಯಲಿಲ್ಲ. ಕಿಡಕಿಯ ಹತ್ತಿರ ಸಾಮಾನು ಇಟ್ಟು ಅಲ್ಲಿಯೇ ನಿಂತು ಪ್ರಯಾಣ ಬೆಳೆಸಿದೆ. ಪರಿಚಯದ ರೇಲು ರಸ್ತೆ, ಹೊಲ, ಹೊಂಡ, ಕೆರೆಗಳನ್ನು ನೋಡುವುದರಲ್ಲಿ ನೆಮ್ಮದಿಯೆನಿಸಿತು. ವಿದ್ಯಾರ್ಥಿಯಾಗಿದ್ದಾಗ ಮನದಣಿಯುವಷ್ಟು ಪೇರಲಹಣ್ಣುಗಳನ್ನು ತಿಂದ ನವಿಲೂರನ್ನು ಬೀಳ್ಕೊಂಡೆ. ಜೀವನದ ಮಹತ್ವದ ಆರು ವರ್ಷಗಳನ್ನು ಕಳೆದು ಕರ್ನಾಟಕ ಕಾಲೇಜಿನ ದರ್ಶನವಾದಾಗ ಕಸಿವಿಸಿಯಾಯಿತು. ದೂರದಿಂದಲೇ ಅದು ಹರಸಿದಂತೆ ಭಾಸವಾಯಿತು. ಧಾರವಾಡ ದಾಟುತ್ತಿದ್ದಂತೆ ಕರ್ನಾಟಕ ವಿಶ್ವವಿದ್ಯಾಲಯದ

ಕಟ್ಟಡಗಳು "ನಮ್ಮ ವಿಶ್ವವಿದ್ಯಾಲಯ ಸೇರುವ ಯೋಗ್ಯತೆ ನಿನಗಿಲ್ಲ, ರಾಜಸ್ಥಾನವೇ ಗತಿ" ಎಂದು ಕುಹಕದಿಂದ ನಕ್ಕಂತೆ ತೋರಿತು. ಧಾರವಾಡದ ಹಳೆಯ ಸಂಬಂಧಗಳನ್ನು ಕಳೆದುಕೊಳ್ಳುವುದರಲ್ಲಿದ್ದಾಗ ಹೊಸ ಸಂಬಂಧ ಬೆಳೆಯುವ ಲಕ್ಷಣ ಕಂಡಿತ್ತು! (ಅಲ್ಲಿಯ ಕನ್ಯೆಯನ್ನು ಜೀವನದ ಸಂಗಾತಿಯನ್ನಾಗಿ ಮಾಡಿಕೊಳ್ಳಲು ಒಪ್ಪಿಕೊಂಡೆ!). ವಿದ್ಯಾರ್ಥಿಯಾಗಿದ್ದಾಗ ಕೀಟ ಸಂಗ್ರಹಕ್ಕೆ ಹೋಗುತ್ತಿದ್ದ ಮುಗದ, ನಾಗರಗಾಳಿಗಳೂ ಹಿಂದೆ ಸರಿದವು. ಲೋಂಡಾದಲ್ಲಿ ಲೋಟಾ ಕಾಫಿ ಸುರಿದುಕೊಂಡೆ. ಬೆಳಗಾಂವ ಬಂದಾಗ ಸಂಜೆಯಾಗುತ್ತಲಿತ್ತು. ಟಿಳಕವಾಡಿ ದಾಟುತ್ತಿದ್ದಂತೆ ಇಲ್ಲಿಂದಲೇ ಮಹಾರಾಷ್ಟ್ರ ಪ್ರಾರಂಭವಾಯಿತೇ ಎಂಬ ಕಲ್ಪನೆ ಬರುವಂತೆ ಜನರು ಒಂದಕ್ಷರ ಕನ್ನಡ ಕಲಿಯದಂತೆ ಎಚ್ಚರವಹಿಸಿದ್ದರು. ಅದೆಷ್ಟೋ ಜನ ಪೂನಾ, ಕೊಲ್ಹಾಪುರ, ಮಿರಜಗಳಿಂದ ಪೆನ್‌ಶನ್ ಪಡೆದು, ಅಗ್ಗದ ಜೀವನ ಸಾಧ್ಯವಿದ್ದ ಬೆಳಗಾಂವಿಯಲ್ಲಿ ನೆಲಸಿ ಈಗ ಇಡೀ ನಗರವೇ ಮಹಾರಾಷ್ಟ್ರಕ್ಕೆ ಸೇರಬೇಕೆನ್ನುವುದು ಕೃತಘ್ನತೆಯಲ್ಲವೇ? ಎನಿಸಿತು.

ಮಿರಜಿಯಲ್ಲಿ ರಾತ್ರೆಯೂಟವಾಯಿತು. ತೂಕಡಿಸುತ್ತಿರುವಾಗಲೇ ಬೆಳಗಾಗಿ ಪೂನಾ ಬಂದಿತು. ಸ್ಟೇಶನ್ನಿನ ಮೇಲೆ ಮಾರುವ ಇಡ್ಲಿ, ವಡಾ, ಕಾಫಿಗಳಿಗೆ ಕರ್ನಾಟಕದ ರುಚಿಯಿಲ್ಲವೆಂದು ತಿಳಿದಿದ್ದರೂ ಅದನ್ನೇ ಸೇವಿಸಿ ಮುಂಬೈ ಟ್ರೇನಿಗೆ ಧಾವಿಸಿದೆ. ದಕ್ಷಿಣ ರೇಲ್ವೆಯ ಪ್ರವಾಸಿಕರನ್ನು ಸುಲಿದು ತಿನ್ನುವ ಇಲ್ಲಿಯ ಹಮಾಲರು ನನ್ನ ಹತ್ತಿರ ಬಂದಾಗ ನಿರಾಶೆಯನ್ನೇ ಎದುರಿಸಬೇಕಾಯಿತು. ಮುಂದಿನ ಪ್ರಯಾಣ ವಿದ್ಯುತ್ ರೇಲಿನಿಂದ ಇದ್ದುದರಿಂದ ಸ್ಥಳಕ್ಕಾಗಿ ತೊಂದರೆಪಟ್ಟುಕೊಳ್ಳಲಿಲ್ಲ. ಪ್ರತಿದಿನ ಮುಂಬೈಗೆ ಹೋಗುವವರು ಆಗಲೇ ಸ್ಥಳವನ್ನು ವ್ಯಾಪಿಸಿದ್ದರು. ಉಳಿದವರು ನಿಂತೇ ಹೋಗಬೇಕಾಯಿತು. ರೇಲು ಒಂದೊಂದೇ ಸ್ಟೇಶನ್ ಹಿಂದೆ ಹಾಕಿ ವೇಗದಿಂದ ಸಾಗಿತ್ತು. ಮಗನಲಾಲ ಚಿಕ್ಕಿ, ದಿವಾಡಕರ ಚೂಡ, ಬಿಸಿ ಬಟಾಟ ವಡೆಗಳ ವ್ಯಾಪಾರ ಎಡಬಿಡದೇ ಸಾಗಿತ್ತು. ಓಡುವ ಟ್ರೇನಿನಲ್ಲಿ ಲೋನಾವಳಾ ಬಂದಿತು. ರೇಲು ಇನ್ನೊಂದು ಎಂಜಿನು ಹಚ್ಚಿಕೊಂಡು ಖಂಡಾಳಾ ಘಾಟ ಇಳಿಯಲು ಸಿದ್ಧವಾಯಿತು. ಎತ್ತರವಾದ ಗುಡ್ಡಗಳು, ಆಳವಾದ ಕಂದರಗಳು; ಮಾನವ ನಿರ್ಮಿತ ಗುಹೆಯೊಳಗಿಂದ ಟ್ರೇನು ಓಡುವಾಗ ಆಟಿಗೆಯ ಟ್ರೇನಿನಂತೆ ಭಾಸವಾಗುತ್ತಿತ್ತು. ಅಲ್ಲಿ, ಇಲ್ಲಿ ನೀರಿನ ಅನುಕೂಲವಿದ್ದಲ್ಲಿ ಮರಗಳು ಬೆಳೆದು ಕಪಿಸೈನ್ಯಗಳಿಗೆ ಆಶ್ರಯವಾಗಿದ್ದವು. ಕೆಲವು ಕಡೆಯಲ್ಲಿ ಬೃಹದಾಕಾರದ ಶಿಲೆಯ ತುದಿಗೆ ಒಂದೆರಡು ಗಿಡಗಳೆದ್ದಿದ್ದವು. ಮುಂಬೈ ಮಹಾನಗರಕ್ಕೆ ವಿದ್ಯುತ್ ಉತ್ಪಾದನೆಗಾಗಿ ಲೋನಾವಳಾದ ಸಂಗ್ರಹದಿಂದ ನೀರು ಒಯ್ಯುತ್ತಿದ್ದ ಬೃಹತ್ತರ ಪಾಯಿಪ್‌ಗಳು ರೇಲು ಹಳಿಗಳ ಕೆಳಗಿನಿಂದ ನುಸುಳಿಕೊಂಡು ಕಪೋಲಿಯತ್ತ ಸಾಗಿದ್ದವು. ಟ್ರೇನಿನಿಂದ ಕಪೋಲಿ ಊರು ಪಾತಾಳನಗರಿಯಂತೆ ತೋರುತ್ತಿತ್ತು.

ಕಲ್ಯಾಣ ದಾಟಿದೊಡನೆ ಮುಂಬೈ ಹತ್ತಿರ ಬಂದ ಭಾಸವಾಯಿತು. ದಾದರದಲ್ಲಿ ಆತ್ಮೀಯನೊಬ್ಬ ನನಗಾಗಿ ಕಾದಿದ್ದ. ಅವನಲ್ಲಿ ಸ್ನಾನ, ಊಟ ಮುಗಿಸಿ ಗಾಢವಾದ ನಿದ್ರೆ ತೆಗೆದು ಮುಂದಿನ ಪ್ರಯಾಣಕ್ಕಾಗಿ ಸಿದ್ಧನಾದೆ. ಬಾಂಬೆ ಸೆಂಟ್ರಲಿನಲ್ಲಿ ಅಹ್ಮದಾಬಾದಕ್ಕೆ ಹೋಗುವ ಟ್ರೇನಿನಲ್ಲಿ ಗುಜರಾಥಿಗಳು ಕಿಕ್ಕಿರಿದು ತುಂಬಿದ್ದರು. ಮಧ್ಯಾಹ್ನ ಮಲಗಿದ್ದರಿಂದ ನಿದ್ದೆಯ ಯೋಚನೆಯಿರಲಿಲ್ಲ. ಕಿಡಕಿಯ ಹತ್ತಿರ ಸಾಮಾನು ಇಟ್ಟು ಅದರ ಮೇಲೆಯೇ ಕುಳಿತೆ, ದಾದರದಲ್ಲಿ ಇನ್ನಷ್ಟು ಪ್ರಯಾಣಿಕರು ತುಂಬಿದರು. ಲೋಕಲ್ ಟ್ರೇನುಗಳು ನಮ್ಮ ಟ್ರೇನನ್ನು ಹಿಂದೆ ಹಾಕಿದಾಗ ಅದರಲ್ಲಿಯ ಪ್ರಯಾಣಿಕರಿಗೆ ಎಲ್ಲಿಲ್ಲದ ಆನಂದ. ಮುಂದಿನ ಸ್ಟೇಶನ್ನಿನಲ್ಲಿ ಅದು ನಿಂತಾಗ ನಮ್ಮ ಟ್ರೇನು ಮುಂದಕ್ಕೆ ಓಡುತ್ತಿತ್ತು. ಗೋರೇಗಾಂವದ ಎಮ್ಮೆಗಳನ್ನೂ ಸಾಂತಾಕ್ರುಝದ ವಿಮಾನಗಳನ್ನು ಹಿಂದೆ ಹಾಕಿ ರೇಲು ಉತ್ತರಕ್ಕೆ ಓಡಿತು. ಸುರತ ಬಂದಾಗ ತುಂಬ ರಾತ್ರಿಯಾಗಿದ್ದರೂ ಮಿಠಾಯಿ, ಚಹ ಮಾರುವವರು ನೆಂಟರಿಗಾಗಿ ಕಾಯುವಂತೆ ನಮಗಾಗಿ ಕಾದಿದ್ದರು. ಜನ ಬರ್ಫಿ, ಪೇಡಾ, ಫೇಣಿಗಳನ್ನು ಕೊಂಡು ತಿಂದರು. ಕೆಲವರು ಮನೆಗೆ ಒಯ್ಯುವದಕ್ಕಾಗಿ ಕಟ್ಟಿಸಿಕೊಂಡರು.

ರಾತ್ರಿಯೆಲ್ಲ ಎಚ್ಚರವಾಗಿದ್ದರೂ ಕೂತಲ್ಲಿಯೇ ತೂಕಡಿಸಿದೆ. ಬೆಳಕು ಹರಿಯುವಾಗಲೇ ಅಹ್ಮದಾಬಾದ ಬಂದುದರಿಂದ ಸಾಮಾನು ಸಹಿತ ಇಳಿದೆ. ಮುಂದಿನ ಟ್ರೇನಿಗೆ ಬಹಳ ಕಾಲಾವಕಾಶವಿತ್ತು. ಹೀಗಾಗಿ ಮುಖಮಾರ್ಜನ ಮುಗಿಸಿ ಸ್ಟೇಶನ್ನಿನ ಕೆಟ್ಟ ಚಹಾ ಕುಡಿಯುವುದಕ್ಕಿಂತ ಪಟ್ಟಣದಲ್ಲಿಯೇ ಕುಡಿದರಾಯಿತು, ಎಂದು ನಿಲ್ದಾಣದಿಂದ ಹೊರಗೆ ಬಂದು ಪಟ್ಟಣದತ್ತ ಸಾಗಿದೆ.

೨. ಉದಯಪುರಕ್ಕೆ

ಅಹ್ಮದಾಬಾದಿನ ಜವಳಿ ಶೇಠಜಿಯವರು ಮುಂಜಾವಿನ ನಿದ್ರೆಯಲ್ಲಿದ್ದರೂ ಅವರ ಆಳುಮಕ್ಕಳು ಅದಾಗಲೇ ಕಾರ್ಯೋನ್ಮುಖರಾಗಿದ್ದರು. ಅಂಗಡಿ ಒಬ್ಬ ಗುಡಿಸಿದರೆ ವಖಾರಿ ಇನ್ನೊಬ್ಬ ತೊಳೆಯುತ್ತಲಿದ್ದ, ಬಟ್ಟೆಯ 'ಗಂಟ್ರೆ'ಗಳನ್ನು ಹೊತ್ತು ತಂದ ಕೈ ಗಾಡಿಗಳು ಅವನ್ನು ಇಳಿಸುವುದರಲ್ಲಿದ್ದವು. ಹೆಣ್ಣುಮಕ್ಕಳು ನಡೆಸಿ ತಂದ ಕೈಗಾಡಿಗಳಲ್ಲಿ ಟಾಕಿ (ಥಾನು)ಗಳೇ ಇದ್ದವು. ಸಾಲಾಗಿ ಸಣ್ಣ ಸಣ್ಣ ಜವಳಿ ಅಂಗಡಿಗಳು. ಟಾಕಿಗಳನ್ನು ಧಡಿ ಹೊಡೆದು ಇಟ್ಟದ್ದರಿಂದ ಅವು ಠೋಕ ವ್ಯಾಪಾರಿಗಳವು ಎಂದು ತಿಳಿಯುವಂತಿತ್ತು. ಇವರ ಎಲ್ಲ ಮ್ಹಾಲು ಇರುವದು ಗೋದಾಮುಗಳಲ್ಲಿ. ಕಿರುಕೋಳ ವ್ಯಾಪಾರಿ ಇವು ತನಗೆ ಬೇಕು ಎಂದರೆ ಗೋದಾಮಿನಿಂದಲೇ ಅವನ್ನು ಗಂಟು ಕಟ್ಟಲು 'ಸಾಂಚ್ಮೆ'ಗೆ ಕಳಿಸುವರು. ಗಿರಾಕಿ ಕೇಳಿದ ಬಟ್ಟೆಯ ಬದಲಾಗಿ ಮಾರಾಟವಾಗದೇ ಉಳಿದ ಟಾಕಿಗಳನ್ನೂ ಒಮ್ಮೊಮ್ಮೆ ಕಳಿಸುವುದು ಉಂಟು. ಅಂಥ ಸಂದರ್ಭಗಳಲ್ಲಿ ಪತ್ರಗಳ ಚಕಮಕಿಯಾಗಿ ರಾಜಿ ಆಗುವುದುಂಟು. ಅಹ್ಮದಾಬಾದ್, 'ಕಾಲಿಕ್ಲಾಥ್'ದ ತವರೂರು. ಅಂದು ಇನ್ನೊಂದು ಶಾಖೆ ತೆರೆಯಲಿದ್ದರು. ಅಲ್ಲಲ್ಲಿ ತಮ್ಮ ಮಿಲ್ಲಿನ ಸೀರೆಗಳನ್ನು ತೂಗುಹಾಕಿ, ಗೊಂಬೆಗಳಿಗೆ ಉಡಿಸಿ ಪೂಜಾಸಾಮಗ್ರಿಗಳನ್ನು ಅಣಿಗೊಳಿಸುತ್ತಿದ್ದರು, ಒಂದೆಡೆಗೆ ಮಂಗಲವಾದ್ಯ ಮೊಳಗುತ್ತಿದ್ದವು.

ಹತ್ತಾರು ಚಹದಂಡಿಗಳನ್ನು ದಾಟಿ ಬಂದ ನಂತರ ಒಂದು ಅಂಗಡಿಯಲ್ಲಿ ವಿಪರೀತ ಗಿರಾಕಿಗಳು ಇದ್ದದ್ದು ನೋಡಿ ಇದು ಇಲ್ಲಿಯ ಖ್ಯಾತಿವೆತ್ತ ಹೋಟಲು ಇರಬೇಕೆಂದು ಗ್ರಹಿಸಿ ಒಳಗೆ ಹೊಕ್ಕೆ. ಅಲ್ಲಿ ಸೇವು, ಗಂಟಿಯಾ, ಚಕ್ಕುಲಿ, ಪಕೌಡ, ಎಲ್ಲವನ್ನೂ ಬಿಸಿ ಬಿಸಿಯಾಗಿ ಒದಗಿಸುತ್ತಿದ್ದರು. ಎಲ್ಲ ಕಡ್ಲೆಹಿಟ್ಟಿನವು. ಕರಿದೇ ಮಾಡಿದಂಥವು. ಅಲ್ಲಿ ದೋಸಾ - ಇಡ್ಲಿ ಹುಡುಕುವ ಗೋಜಿಗೆ ಹೋಗದೇ ಅವರ ತಿಂಡಿ - ಚಹಗಳನ್ನು ಸವಿದು ಹೊರಬಿದ್ದೆ. ಮುಂದಿನ ಪ್ರಯಾಣಕ್ಕಾಗಿ ಇನ್ನೂ ಅರ್ಧ ದಿನ ಹೋಗಬೇಕಾಗಿತ್ತು. ಹೀಗಾಗಿ ಕೈಬೀಸಿ ನಡೆಯುವಂತಾಗಲು ಸಾಮಾನುಗಳನ್ನು ಕ್ಲೋಕ್ ರೂಮಿನಲ್ಲಿ ಮೊದಲೇ ಇರಿಸಿದ್ದು ಒಳ್ಳೆಯದಾಯಿತು, ಮತ್ತೆ ಊರು ಸುತ್ತಲಾರಂಭಿಸಿದೆ. ಧನಿಕರ ರಾಜಧಾನಿಯಾಗಿದ್ದರೂ ಬೀದಿಗಳು ಅಗಲವಾಗಲಿ

ಶುಭ್ರವಾಗಲಿ ಇರಲಿಲ್ಲ. ಕಟ್ಟಡಗಳನ್ನು ಆಧುನಿಕ ರೀತಿಯಲ್ಲಿ ಕಟ್ಟಿದ್ದರೂ ಅವು ಆಕರ್ಷಕವಾಗಿರಲಿಲ್ಲ. ಮುಂದಕ್ಕೆ ಒಂದು ಚೌಕದಲ್ಲಿ ಮಹಾತ್ಮಾಗಾಂಧಿಯವರ ಪುತ್ಥಳಿಯನ್ನು ಸಲಾಕಿಗಳಲ್ಲಿ ಬಂಧಿಸಿ ಇಟ್ಟಿದ್ದರು. ಶೇಠಜಿಯವರು ಒಬ್ಬೊಬ್ಬರಾಗಿ ಥಳಥಳಿಸುವ ಕಾರುಗಳಲ್ಲಿ ಬರಲಾರಂಭಿಸಿದರು. ಶುಭ್ರವಾದ ಧೋತಿ ಉಟ್ಟು, ಗಂಜಿ ಹಾಕಿದ, ಬಂಗಾರದ ಬಟನ್‌ಗಳ ಕುರ್ತಾ ಧರಿಸಿ, ಕಾಲಿಗೆ ಮಿನುಗುವ ಅರೆಬೂಟು, ತಲೆಗೆ ನಾಲ್ಕು ಬೆರಳು ಅಗಲದ ಗಾಂಧಿ ಟೋಪಿ. ಚಾವಿಗೊಂಚಲು ಹಿಡಿದು ಕಾರಿನಿಂದ ಕೆಳಗೆ ಇಳಿದರು. ಪಕ್ಕದ ಅಂಗಡಿಕಾರರಿಗೆ ನಮಿಸಿ ಹಿಂದಿನ ದಿನದ ಪೇಟೆ ಧಾರಣೆಯ ವಿಚಾರವಿನಿಮಯದಲ್ಲಿ ತೊಡಗಿದರು.

ಗುಜರಾಥಿ ಮಕ್ಕಳೂ ತಂದೆಯಂತೆಯೇ ಅಚ್ಚುಕಟ್ಟಾಗಿ ಅಂದವಾಗಿ ಕಾಣುತ್ತಾರೆ. ಆದರೆ ವಿವಾಹಿತ ಸ್ತ್ರೀಯರ ಬಗ್ಗೆ ಈ ಮಾತು ಹೇಳುವುದು ಕಷ್ಟ. ಕೊಬ್ಬುಳ್ಳ ಹಾಲು, ಹೈನು, ಬೆಣ್ಣೆ, ತುಪ್ಪ ಅತಿಯಾಗಿ ಸೇವಿಸುವುದರಿಂದ ತುಂಬ ಸ್ಥೂಲಕಾಯರಾಗುತ್ತಾರೆ. ಸಾಲದ್ದಕ್ಕೆ ಮನೆತುಂಬ ಸೇವಕರು, ಹೊರಗೆ ಓಡಾಡಲು ಪತಿದೇವರ ಕಾರು ಇರುವದರಿಂದ ಕೊಬ್ಬು ಜೀರ್ಣಿಸಲು ಅವಕಾಶವೇ ಇರುವುದಿಲ್ಲ. ಉಗಿಬಂಡಿಯ ಎಂಜಿನ್ನಿನಂತೆ ಉಗಿಯನ್ನು ಬಿಡುತ್ತ, ಕೀಲಿಕೈಗಳ ಗೊಂಚಲು ತಿರುವುತ್ತ, ಆಳುಗಳಿಗೆ ಮಾರ್ಗದರ್ಶನ ನೀಡುವುದೇ ಅವರ ಜೀವನದ ಗುರಿಯಾಗಿ ಬಿಡುತ್ತದೆ. ಎಷ್ಟೋ ಗೃಹಿಣಿಯರಿಗೆ ಪತಿಗೃಹದಲ್ಲಿ ಪ್ರೀತಿ, ವಿಶ್ವಾಸಗಳು ದೊರೆಯದೇ ಅವರು ಆತ್ಮಹತ್ಯೆ ಮಾಡಿಕೊಳ್ಳುವುದು ಹೆಚ್ಚುತ್ತಿದೆ.

ಅಹ್ಮದಾಬಾದಿನ ನಗರ ಸಂಚಾರಿ ಮೋಟಾರುಗಳ ಮೇಲೆಲ್ಲ ಗುಜರಾಥಿಯಲ್ಲಿ ಬರೆದದ್ದರಿಂದ ಅವು ಎಲ್ಲಿಗೆ ಹೋಗುತ್ತವೆಯೆಂದು ತಿಳಿಯದ್ದರಿಂದ ಕಂಡಕ್ಟರನಿಗೆ ಹಿಂದಿಯಲ್ಲಿ ಕೇಳಿದೆ. ಅವನು ನನಗೆ ಎಲ್ಲಿ ಹೋಗಬೇಕಾಗಿದೆಯೆಂದು ಗುಜರಾಥಿಯಲ್ಲೆ ಮರು ಪ್ರಶ್ನೆ ಹಾಕಿದ. ಎಲ್ಲಿಗೆ ಹೋಗಬೇಕೆಂದು ನನಗೇ ತಿಳಿಯದ್ದರಿಂದ ತಿರುಗಿ ಬಸ್ಸಿನ ಗೋಜಿಗೆ ಹೋಗದೇ ಕಾಲು ಸೋತುಬರುವ ತನಕ ತಿರುಗಾಡಿದೆ. ಊಟಕ್ಕಾಗಿ ಹೋಟೇಲೊಂದನ್ನು ಹೊಕ್ಕೆ. ಉಳಿದವರೆಲ್ಲ ರುಚಿಯಿಂದ ಊಟ ಮಾಡಿದರೂ, ಬೇಳೆ, ಪಲ್ಯಗಳಿಗೆಲ್ಲ ಬೆಲ್ಲ ಹಾಕಿದ್ದರಿಂದ ಅದರ ರೂಢಿಯಿಲ್ಲದ ನಾಲಿಗೆಗೆ ಅವು ರುಚಿಸಲಿಲ್ಲ. ಕೆನೆಮೊಸರಿನಲ್ಲಿ ಸಕ್ಕರೆ ಹಾಕಲು ಬಂದವನನ್ನು ತಡೆದು, ಅನ್ನ ಮೊಸರು ಕಲಸಿ ರುಚಿಯಾಗಿ ಊಟ ಮಾಡಿ ಹೊರಗೆಬಿದ್ದೆ. ಟ್ರೇನಿನಲ್ಲಿ ವಿಪರೀತ ಗದ್ದಲವಿದ್ದರೂ ಹತ್ತಿರದ ಊರುಗಳಿಗೆ ಹೋಗುವವರೇ ಬಹಳ ಜನ. ಹೀಗಾಗಿ ನನಗೆ ಒಳ್ಳೆಯ ಸ್ಥಳವೇ ಸಿಕ್ಕಿತು. ಜೋಧಪುರಕ್ಕೆ ಹೊರಟ ಮಾರವಾಡಿಯೊಬ್ಬ ನನ್ನ ಡಬ್ಬಿಯಲ್ಲೇ ಹತ್ತಿದ. ಜೊತೆಯಲ್ಲಿ ಲೆಕ್ಕವಿಲ್ಲದಷ್ಟು ಸಾಮಾನು, ಸಂಗಡ ತಂದಿದ್ದ. ಬೀಗ ಹಾಕಿದ

ಬ್ರಿಟಾನಿಯಾ ಡಬ್ಬಿ ತುಂಬ ಊಟ - ತಿಂಡಿಗಳನ್ನು ತಂದಿದ್ದ. ಸಾಮಾನು ಹೊತ್ತು ತಂದ ಹಮಾಲನಿಗೂ ಮಾರವಾಡಿಗೂ ಜಗಳವಾಗಿ ಹಮಾಲನೇ ಸೋಲುವಂತೆ ಆಯಿತು. ಉಳಿದವರೆಲ್ಲರ ಸಾಮಾನುಗಳನ್ನು ಸರಿಸಿ ತನ್ನವನ್ನು ಜೋಡಿಸಿಟ್ಟ. ಮುಂಬಯಿಯಲ್ಲಿ ಮಿಠಾಯಿ ಅಂಗಡಿ ಇದೆಯಂತೆ ಅವನದು. ಯಾವುದೋ ಮದುವೆಗೆ ಹೊರಟಿದ್ದ. ಸಂಜೆಯಾದೊಡನೆ ಕೈಕಾಲುಗಳನ್ನು ತೊಳೆದುಕೊಂಡು, ಡಬ್ಬಿಯೆಲ್ಲ ನೀರುಮಾಡಿ, ದೇವರ ಚಿತ್ರವೊಂದನ್ನು ಹೊರಗೆ ತೆಗೆದು, ಏನೇನೊ ಪಠಿಸಿ, ಭಜನೆಯನ್ನೂ ಮಾಡಿದ. ನಂತರ ಬುತ್ತಿಡಬ್ಬಿ ತೆಗೆದು, ಎರಡು ದಿನ ಹಿಂದೆ ತಯಾರಿಸಿದ ಪೂರಿ, ಬಟಾಟೆ ಪಲ್ಯ, ಝುಣಕ, ಉಪ್ಪಿನಕಾಯಿ, ಮಿಠಾಯಿಗಳ ಊಟಮುಗಿಸಿ ನೀರು ಕುಡಿದು ವೀಳ್ಯ ಜಗಿಯುತ್ತ ತಾನು ನಿಷ್ಠಾವಂತ ಹಿಂದೂ, ಮಾಂಸದ ಸೋಂಕು ತಾಗದ ಅಡಿಗೆಯೇ ತನಗೆ ಬೇಕು, ರೈಲ್ವೆಯಲ್ಲಿ ಇದು ಸಾಧ್ಯವಿಲ್ಲ ಆದ್ದರಿಂದ ಎಲ್ಲಿ ಹೋದರೂ ಮನೆಯಡಿಗೆಯನ್ನೇ ಒಯ್ಯುವುದಾಗಿ ಹೇಳಿದ. ಬೆಳಗಿನಜಾವದಲ್ಲಿ, ಗಾಡಿ ಯಾವುದೋ ಸ್ಟೇಶನ ಮೇಲೆ ನಿಂತಾಗ, ಅಲ್ಲಿಯೇ ನಳದ ಕೆಳಗೆ ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲೇ ಮಂತ್ರಗಳನ್ನು ಪಠಿಸುತ್ತ ದೇವರ ಪೂಜೆ ಪ್ರಾರಂಭಿಸಿದ. ನಿದ್ದೆಗೆ ಆತಂಕ ತಂದದ್ದಕ್ಕಾಗಿ ಸಹಪ್ರಯಾಣಿಕರು ಅವನನ್ನು ಬೈದು ತಿರುಗಿ ಕಣ್ಣು ಮುಚ್ಚಿಕೊಂಡರು.

ಅಬು ರೋಡ ಸ್ಟೇಶನ ಬಂದಾಗ ನಾವು ಗುಜರಾಥ ಬಿಟ್ಟು ರಾಜಸ್ಥಾನದಲ್ಲಿ ಕಾಲಿಡುತ್ತಿದ್ದೇವೆಂದು ತಿಳಿಯಿತು. ಇಲ್ಲಿಂದ ಸುಮಾರು ೩೦ ಕಿಲೋಮೀಟರ ಮೋಟಾರಿನಿಂದ ಪ್ರವಾಸ ಮಾಡಿದರೆ ಅಬು ಬೆಟ್ಟದಲ್ಲಿಯ ಸುಪ್ರಸಿದ್ಧ ದಿಲವಾರಾ ದೇವಾಲಯಗಳಿಗೆ ಹೋಗಿಬರಬಹುದು. ಗಾಂಧೀಜಿಯ ಹುಟ್ಟು ನಾಡಾದ ಗುಜರಾಥದಲ್ಲಿ ಪಾನ ಪ್ರತಿಬಂಧ ಇದ್ದುದರಿಂದ ಅಬುವಿಗೆ ಆಗ ಹೆಚ್ಚಿನ ಪ್ರಾಮುಖ್ಯತೆ ಬಂದಿತ್ತು. ಗುಜರಾಥಿಗಳು ಅಬುವಿಗೆ ಬಂದು, ಮನಸ್ವೀ ಪಾನಗೋಷ್ಠಿ ನಡೆಸಿ ಹಿಂತಿರುಗುತ್ತಿದ್ದರಂತೆ. ಅಬೂವಿನಲ್ಲಿ ಗುಜರಾಥಿಗಳ ಪ್ರಭಾವವೇ ಹೆಚ್ಚಾದ್ದರಿಂದ ಒಂದಿಲ್ಲ ಒಂದು ದಿನ ಅದು ಗುಜರಾಥಕ್ಕೆ ಸೇರಬಹುದೆಂಬ ಅಳುಕಿನಿಂದ ಗಡಿಪ್ರದೇಶದಲ್ಲಿ ಪಾನನಿರೋಧ ಜಾರಿಗೆ ತರಬೇಕೆಂದು ರಾಜಸ್ಥಾನ ಸರಕಾರ ಯೋಚಿಸುತ್ತದೆ! ಎಂದು ಬಲ್ಲವನೊಬ್ಬ ಹೇಳಿದ.

ಕಣ್ಣು ತೆರೆಯುತ್ತಿದ್ದಂತೆ ಕೆಂಬಣ್ಣದ ಸೂರ್ಯ ನಗುಮುಖದಿಂದ ಸುಪ್ರಭಾತ ಹಾಡುತ್ತ ಮೇಲಕ್ಕೇರಹತ್ತಿದ್ದ. ದೂರದಿಂದಲೇ ಎದ್ದು ಕಾಣಿಸುವ ರಬ್ಬಾದ ಬಟ್ಟೆ ಧರಿಸಿದ ರಾಜಸ್ಥಾನಿ ಕೃಷಿಕ ದಂಪತಿಗಳು ಅದಾಗಲೇ ತಮ್ಮ ಹೊಲಕ್ಕೆ ಆಳವಾದ ಬಾವಿಯಿಂದ ನೀರು ಸೇದಿ ಹನಿಸುವುದರಲ್ಲಿ ತೊಡಗಿದ್ದರು. ಚರ್ಮದ ಚೀಲವನ್ನು

ಹಗ್ಗದಿಂದ ಜೋಡೆತ್ತಿಗೆ ಕಟ್ಟಿ ಮೇಲೆಳೆಯುವಾಗ ಪತಿ, ಪೂರ್ವಜರ ಶೌರ್ಯ ವರ್ಣಿಸುವ ಲಾವಣಿಗಳನ್ನು ಹಾಡಿದರೆ ಪತ್ನಿ, ಚೀಲವನ್ನು ಮೇಲಕ್ಕೆತ್ತಿ ಬರಿದು ಮಾಡುತ್ತಿದ್ದಳು. ಬೆವರು ಹನಿಸಿ ಬೆಳೆಸಿದ ಗೋಧಿ ಹೊಂಬೆಳಕಿನಲ್ಲಿ ರಕ್ತದಲ್ಲಿ ಬೆಳೆದಂತೆ ಕಂಡವು. ದೂರದಲ್ಲಿ ಕಾಣಿಸುತ್ತಿದ್ದ ಕೋಟೆ, ಕೊತ್ತಳಗಳು ಈ ಭೂಮಿಯ ಚರಿತ್ರೆಯನ್ನು ನೆನಪಿಗೆ ತರುವಂತಿದ್ದವು. ಈ ನೆಲದಲ್ಲಿ ಮೊಗಲ ಸೇನೆ ಮತ್ತು ರಾಣಾನ ಸೇನೆಗೆ ನಿಕರದ ಕದನವಾಗಿ ರಕ್ತದ ಹೊಳೆ ಹರಿದದ್ದರಿಂದ ಇಲ್ಲಿಯ ನೆಲದಲ್ಲಿ ಬಂಗಾರ ಬೆಳೆಯುತ್ತಿರಬೇಕು. ಮುಸಲ್ಮಾನ ದಂಡುಗಳಿಗೆ ಹನಿ ನೀರು ಸಿಗದಂತೆ ಮಾಡಿ ಇಲ್ಲಿಯ ಜನ ಓಡಿಸಿರಬೇಕು. ಈ ಎತ್ತರದ ಅರವಲಿ ಬೆಟ್ಟಗಳು ರಜಪೂತರಿಗೆ ನೈಸರ್ಗಿಕ ಸಂರಕ್ಷಣೆ ಕೊಟ್ಟಿರಬೇಕು. ಈ ಮರು ಭೂಮಿಯೇ ಈ ಜನರಿಗೆ ಕೊನೆಯ ತನಕವೂ ಹೋರಾಡುವ ಧೈರ್ಯ, ಸ್ಥೈರ್ಯ ಕೊಟ್ಟಿರಬೇಕು. ಈ ಸೂರ್ಯದೇವ ಎಷ್ಟೊಂದು ರಜಪೂತ ರಮಣಿಯರ ಜೋಹಾರ ಕಂಡಿರಬೇಕು! ಅಲ್ಲಾ ಉದ್ದೀನನಂತಹ ಬಲಾಢ್ಯ ಅರಸನಿಗೆ ಹುಚ್ಚು ಹಿಡಿಸಿದ ಪದ್ಮಿನಿಯರಂತಹ ಸುಂದರಿಯರ ನಾಡಿದು. ಪರಾಕ್ರಮಿ ಅಕಬರನಿಗೆ ತಲೆಬಾಗದೇ ಮೆರೆದ ಪ್ರತಾಪನಂತಹ ಸ್ವಾಭಿಮಾನಿಗಳನ್ನು ಸಾಕಿ ಸಲಹಿದ ನೆಲವಿದು. ಇಂದಿಗೂ ರಜಪೂತರ ಪ್ರತಾಪವನ್ನು ನೆನೆದು ಮೊಗಲ ಅರಸರು ಗೋರಿಗಳಲ್ಲೆ ನಡುಗುತ್ತಿರಬೇಕು!

ವೈರಿ ಅಕಬರನು ತಮ್ಮ ಶೌರ್ಯಕ್ಕೆ ತಲೆದೂಗುವಂತೆ ಮಾಡಿ ತಮ್ಮ ವಿಗ್ರಹಗಳನ್ನು ಕಟೆಸಿ ನಿಲ್ಲುವಂತೆ ಮಾಡಿದ ಚಿತೋಡದ ಸೇನಾಧಿಪತಿಗಳಾದ ಜೈಮಲ್ ಮತ್ತು ಪಟ್ಟಾರು ಈ ವೀರನೆಲಕ್ಕಾಗಿ ಕಾದು ಮಡಿದರು. ಭಾವನಾಪರವಶನಾಗಿ ಇತಿಹಾಸವನ್ನು ಮೆಲಕು ಹಾಕುತ್ತಿದ್ದಾಗ ಯಾವುದೋ ಚಿಕ್ಕ ಸ್ಟೇಶನ್ ಬಂದಿತು. ಸಹಪ್ರಯಾಣಿಕ "ಈ ಊರಿನ ಜಿಲೇಬಿ ತಿಂದು ನೋಡಿ, ತುಂಬ ಪ್ರಸಿದ್ಧ ಇವೆ" ಎಂದ. ಎಂಟಾಣೆಗೆ ಬಹಳಷ್ಟು ಬಂದ ಜಿಲೇಬಿಗಳು ಆಗತಾನೇ ಪಾಕದಲ್ಲಿ ಹಾಕಿದ್ದು ಇನ್ನೂ ಬಿಸಿಯಾಗಿದ್ದವು. ಬಾಯಲ್ಲಿ ಇಟ್ಟಾಗ ಕರಗಿ ಉದರ ಸೇರುವಷ್ಟು ಮಧುರವಾಗಿದ್ದವು. ಇನ್ನೂ ತಿನ್ನಬೇಕು ಎನ್ನುವಷ್ಟರಲ್ಲಿ ಟ್ರೇನು ಚಲಿಸಿತ್ತು. ಮುಂದಿನ ಸ್ಟೇಶನ್ನಿನಲ್ಲಿ 'ಕಚೋರಿ' ಮತ್ತು 'ಸಮೋಸಾ' ಗಳನ್ನು ತಿಂದು ಮಣ್ಣಿನ ಕಪ್ಪಿನಲ್ಲಿ ಚಹ ಕುಡಿದೆ. ಆ ಮಣ್ಣಿನ ಕಪ್ಪು ಕೂಡ ಕಲಾತ್ಮಕವಾಗಿ ನಿರ್ಮಿಸಿದ್ದರಿಂದ ಕೂಡಲೇ ಒಗೆಯಲು ಮನಸ್ಸು ಬರಲಿಲ್ಲ. ರಾಜಸ್ಥಾನದಲ್ಲಿ ಹಳ್ಳಿಗೊಂದು ಸ್ಟೇಶನ್ನು, ಮೂರು ನಾಲ್ಕು ಸ್ಟೇಶನ್ನು ದಾಟಿದ ಕೂಡಲೇ ಒಂದು ಜಂಕ್ಷನ್ ನೋಡಿ ಆಶ್ಚರ್ಯವೆನಿಸಿತು. ನಾನು ಹೋಗಬೇಕಾಗಿದ್ದ ಉದಯಪುರ ದಕ್ಷಿಣ ರಾಜಸ್ಥಾನದಲ್ಲಿದ್ದರೂ, ಅಲ್ಲಿ ನೇರ ರೇಲ್ವೆ ಸಂಪರ್ಕವಿರಲಿಲ್ಲವಾದ್ದರಿಂದ ಉತ್ತರಕ್ಕಿರುವ ಮಾರವಾಡ ಜಂಕ್ಷನ್ನಿಗೆ ಹೋಗಿ, ಬೇರೆ ಟ್ರೇನು ಹಿಡಿದು ದಕ್ಷಿಣಕ್ಕೆ ಬರಬೇಕಾಯಿತು. ಟ್ರೇನನ್ನು ಬದಲಿಸಿ ನೌಕರಿಗೆ

ಅವಶ್ಯವಿದ್ದ, ದಿಲ್ಲಿಯ ಸಿ. ಎಸ್. ಆಯ್. ಆರ್. (Counsil of Scientific and Industrial Research) ದವರು ಕಳಿಸಿದ ಕಾಗದಪತ್ರಗಳೆಲ್ಲ ಹೊರಗೆ ತೆಗೆದು ಎಲ್ಲ ಸರಿಯಾಗಿದೆಯೇ ಎಂದು ಇನ್ನೊಮ್ಮೆ ನೋಡಿಕೊಂಡೆ. ಉದಯಪುರ ವಿಶ್ವವಿದ್ಯಾಲಯದ ಕೃಷಿ ಕಾಲೇಜಿನಲ್ಲಿ ಹಾಜರಾಗಲು ನನಗೆ ತಿಳಿಸಿದ್ದರು. ಈ ಕುರಿತು ಕಾಲೇಜಿನ ಡೀನರಿಗೆ ವೈಯಕ್ತಿಕವಾಗಿ ಪತ್ರಬರೆದು ಅವಶ್ಯವಿದ್ದ ಮಾಹಿತಿ ಪೂರೈಸಲು ಕೇಳಿಕೊಂಡಿದ್ದರೂ ಅವರಿಂದ ಉತ್ತರ ಬಂದಿರಲಿಲ್ಲ. 'ಉಚ್ಚ' ಅಧಿಕಾರಿಗಳೆಲ್ಲ ವೈಯಕ್ತಿಕವಾಗಿ ಭೆಟ್ಟಿಯಾಗದೇ ಇಂಥ 'ಸಣ್ಣ' ಕೆಲಸ ಹೇಗೆ ಮಾಡಿಯಾರು?

ಎಲ್ಲಿ ಇಳಿಯಬೇಕು? ಎಂದು ತಿಳಿಯದ್ದರಿಂದ ಸಹಪ್ರಯಣಿಕರಿಗೆ ವಿಚಾರಿಸಿದಾಗ ಕೃಷಿ ಕಾಲೇಜು ನಗರದ ಸ್ಟೇಶನ್ನಿನಿಂದ ದೂರ ಇರುವುದಾಗಿ ಹೇಳಿದರು. ಅದಕ್ಕೂ ಮೊದಲಿನ ಸ್ಟೇಶನ್ನಿನಲ್ಲೇ ಇಳಿದು ಟಾಂಗಾ ಮಾಡಿಕೊಂಡು ಹೋಗಬೇಕು, ಕಾಲೇಜಿನ ಪಕ್ಕದಲ್ಲೇ ಹೋಟಲ್ಲುಗಳಿವೆ, ಎಂದು ಗೊತ್ತಾಯಿತು. ಉದಯಪುರದಲ್ಲಿ ಟಾಂಗಗಳೇ ಮುಖ್ಯ ವಾಹನ. ಪೂರ್ಣ ಬಾಡಿಗೆಕೊಡಬೇಕೆಂದಿಲ್ಲ ಇನ್ನೂ ಇಬ್ಬರು ಮೂವರು ಪ್ರಯಾಣಿಕರಿದ್ದರೆ 'ಸವಾರಿ' ಬಾಡಿಗೆ ಕೇವಲ ನಾಲ್ಕಾಣೆಯಾಗುತ್ತದೆ ಎಂದೆಲ್ಲ ಹೇಳಿದರು. ಹಾಗೆಯೇ ಇಳಿದು ಲಗುಬಗೆಯಿಂದ ಕಾಲೇಜಿನ ಹತ್ತಿರದ ಹೋಟಲ್ಲಿನಲ್ಲಿ ಇಳಿದು ಬೇಗನೇ ಮುಖಕ್ಷೌರ, ಸ್ನಾನ ಮುಗಿಸಿ, ಸೂಟು ಧರಿಸಿ, ಕಾಗದ, ಪತ್ರಗಳೊಡನೆ ಕಾಲೇಜಿಗೆ ಧಾವಿಸಿದೆ. ಕಾಲೇಜಿನ ಆಫೀಸಿನಲ್ಲಿ ವಿಚಾರಿಸಿದರೆ, ನನ್ನ ಬಗೆ ತಮಗೆ ಯಾವುದೇ ಪತ್ರ ದಿಲ್ಲಿಯಿಂದ ಬಂದಿಲ್ಲವೆಂದು ಹೇಳಿದರು. ನೆರೆಯ ಕೃಷಿ ವಿಶ್ವವಿದ್ಯಾಲಯದಲ್ಲಿ ವಿಚಾರಿಸೆಂದು ಸಲಹೆ ಕೊಟ್ಟರು. ಅಲ್ಲಿ ಹೋದಾಗ ರಿಜಿಸ್ಟ್ರಾರರ 'ಬಾಬು' (ಕ್ಲಾರ್ಕ) ಆದರದಿಂದ ಬರಮಾಡಿಕೊಂಡು ನನ್ನ ಕಾಗದ ಪತ್ರಗಳನ್ನು ಪರೀಕ್ಷಿಸಿ ತಮ್ಮಲ್ಲಿ ಅಂತಹ ಪತ್ರಗಳು ಬಂದಿವೆಯೇ? ಎಂದು ಹುಡುಕಾಡಿ "ಅಂಥ ಯಾವ ಪತ್ರವೂ ತಮ್ಮಲ್ಲಿ ಬರದ್ದರಿಂದ ನೀವು ಹಾಜರಾಗುವ ಸಾಧ್ಯತೆಯಿಲ್ಲ" ಎಂದಾಗ ಆಕಾಶವೇ ಕಳಚಿ ಬಿದ್ದಂತಾಯಿತು. ಸಾವರಿಸಿಕೊಂಡು ಸಿ. ಎಸ್. ಆಯ್. ಆರ್. ದವರ ಪತ್ರದ ಆಧಾರದ ಮೇಲೆ ನಾಲ್ಕು ದಿನದ ಪ್ರವಾಸ ಕೈಗೊಂಡು ಬಂದಿದ್ದೇನೆ. ಏನು ಮಾಡಬೇಕು ಎಂದಾಗ ಆತ "ರಿಜಿಸ್ಟ್ರಾರರನ್ನು ಭೇಟಿಯಾಗಿ; ಆದರೆ ಅವರಿಂದ ಹೆಚ್ಚಿನ ಸಹಾಯವಾಗಲಾರದು" ಎಂದು ತನ್ನ ಕೆಲಸ ಮುಂದುವರಿಸಿದ.

ರಿಜಿಸ್ಟ್ರಾರರು ಯಾವುದೋ ಇಂಟರವ್ಯೂದೊಳಗೆ ತೊಡಗಿದ್ದರಿಂದ ಕೂಡಲೇ ಕಾಣಲಾಗಲಿಲ್ಲ. ಮೂವತ್ತು ಮೊಳದುದ್ದ ರುಮಾಲು ಧರಿಸಿದ ಚಪರಾಸಿ ಖುರ್ಚಿಯೊಂದರಲ್ಲಿ ಕೂಡ್ರಿಸಿ ಯಾರು ಬೇಕು ಎಂದಾಗ ರಿಜಿಸ್ಟ್ರಾರರನ್ನು ಭೇಟ್ಟಿಯಾಗಬೇಕೆಂದು ಧಾರವಾಡೀ ಟಾಂಗಾವಾಲಾರ ಹಿಂದಿಯಲ್ಲಿ ಹೇಳಿದೆ. ಆತ

ಇಂಟರವ್ಯೂ ಮುಗಿದಾಕ್ಷಣ ಭೇಟಿಯಾಗಬಹುದೆಂದು ಮೇವಾಡಿಯಲ್ಲಿ ಹೇಳಿದ. ಚಹಾ ಕುಡಿಯಲು ನಾಲ್ಕಾಣೆ ಕೇಳುವ ಬದಲಾಗಿ ಕುರ್ಚಿಕೊಟ್ಟು ಕೂಡ್ರಿಸಿದ ಚಪರಾಸಿಗೆ ದೀರ್ಘಾಯುಸ್ಸು ಕೋರಿದೆ. ನಡುವೊಮ್ಮೆ ರಿಜಿಸ್ಟ್ರಾರರು ಲಗುಬಗೆಯಿಂದ ಬಂದು ಯಾವುದೋ ಕಾಗದ ಪತ್ರಗಳೊಂದಿಗೆ ಹೋದರೂ ನಾನವರ ಲಕ್ಷಕ್ಕೆ ಹೋಗಲಿಲ್ಲ. ಸುಮಾರು ನಾಲ್ಕು ಗಂಟೆಗೆ ರಿಜಿಸ್ಟ್ರಾರರು, ಅವರ ಹಿಂದೆ ಚಹ - ಬಿಸ್ಕೀಟು ತಂದ ಮಾಣಿ ಒಳಗೆ ಬಂದರು. ನಾನಾರು ಎಂದು ತಿಳಿಯುವ ಮೊದಲೇ ಚಹ ತಿಂಡಿಗಳನ್ನು ತೆಗೆದುಕೊಳ್ಳುವಂತೆ ಆಗ್ರಹಪಡಿಸಿ ತಮಗೆ ಬೇರೆ ತರಲು ಆಜ್ಞೆಯಿತ್ತರು. ಹಸಿದ ಹೊಟ್ಟೆ ಅವರನ್ನು ಹರಸಿ ಚಹ ಸ್ವೀಕರಿಸಿತು. ಅವರೂ ಕಾಗದ ಪತ್ರಗಳನ್ನು ಪರೀಕ್ಷಿಸಿ ತಮಗೆ ಯಾವುದೇ ನಿರ್ದೇಶನ ದೊರೆತಿಲ್ಲ. ಆದರೆ ಜಯಪುರದ ಸಮೀಪದ ಜೊಬನೇರದಲ್ಲಿ ನಮ್ಮ ವಿಶ್ವವಿದ್ಯಾಲಯಕ್ಕೆ ಸೇರಿದ ಇನ್ನೊಂದು ಕೃಷಿ ಕಾಲೇಜು ಇದೆ. ಬಹುಶಃ ನಿಮಗೆ ಅಲ್ಲಿ ಸೇರಲು ತಿಳಿಸಿರಬಹುದು, ಎಂದಾಗ ದೂರದಲ್ಲಿ ಆಶಾಕಿರಣ ಮಿಂಚಿದಂತಾಯಿತು. ಜೋಬನೇರದ ಬಗ್ಗೆ ನನಗೇನೂ ತಿಳಿಯದು ಎಂದಾಗ ಸಾಕಷ್ಟು ಮಾಹಿತಿ ನೀಡಿ, ಕೂಡಲೇ ಹೊರಟರೆ ಒಂದು ಟ್ರೇನು ಸಿಗುವದೆಂದರು. ಅವರ ಆದರ - ನಿರ್ದೇಶನಗಳಿಗೆ ಕೃತಜ್ಞತೆ ಸಲ್ಲಿಸಿ, ಹೊಟೇಲಿನವನಿಗೆ ಬಾಡಿಗೆ ತೆತ್ತು ತಿರುಗಿ ಟಾಂಗಾ ಏರಿ ನಗರದ ರೇಲ್ವೆ ನಿಲ್ದಾಣಕ್ಕೆ ಹೊರಟೆ.

ನಾನು ಹೊಸಬನೆಂದು ಅರಿತ ಟಾಂಗಾವಾಲಾ ಉದಯಪುರದ ಇತಿಹಾಸವನ್ನು ಹೇಳಲಾರಂಭಿಸಿದ. ಅಕಬರನು ಚಿತೋಡಗಡವನ್ನು ಉಧ್ವಸ್ತಗೊಳಿಸಿದ ನಂತರ ಪ್ರತಾಪನು ಅರವಲಿ ಬೆಟ್ಟಗಳಲ್ಲಿ ಆಶ್ರಯ ಪಡೆದ. ಅವನ ಮಗ ಉದಯಸಿಂಗ್ ಬೆಟ್ಟದ ಕಂದರಗಳಲ್ಲಿ ಕೃತಕ ಸರೋವರಗಳನ್ನು ನಿರ್ಮಿಸಿ ಈ ಸುಂದರ ನಗರವನ್ನು ಸ್ಥಾಪಿಸಿದ. ಅಂದಿನಿಂದ ಇದು ಉದಯಪುರ ಎಂಬ ಹೆಸರನ್ನು ಪಡೆದಿದೆ! ಎಂದು ಹೇಳಿದ.

ಇದು ಗುಲಾಬಿ ಗಾರ್ಡನ್, ದೂರ ಶಿಖರ ಹೊಳೆಯುತ್ತದಲ್ಲ, ಅದು ಮೇವಾಡದ ರಾಣಾರ ಅರಮನೆ, ಈ ಕಡೆ ಪ್ರತಾಪ್ ಮೆಮೊರಿಯಲ್, "ಸಹೇಲಿಯಾಂ ರೀ ಬಾಡೀ" (ಗೆಳತಿಯರ ಹೂದೋಟ) ಎಂದೆಲ್ಲ ಬಣ್ಣಿಸಹತ್ತಿದ. ಆದರೆ ಅವನ ಮಾತುಗಳನ್ನು ಲಕ್ಷಗೊಟ್ಟು ಕೇಳುವ ಮನಸ್ಥಿತಿಯಲ್ಲಿ ನಾನಿರಲಿಲ್ಲ. "ಉದಯ ಪುರದಲ್ಲಿ ಒಂದು ವಾರವಾದರೂ ನಿಲ್ಲಬೇಕು ಮಾಸ್ತರಸಾಬ್, ಇಲ್ಲಿಯ ಕೋಟೆ, ಕೊತ್ತಳ, ಮಂದಿರಗಳನ್ನೆಲ್ಲ ಸರಿಯಾಗಿ ತೋರಿಸುತ್ತಿದ್ದೆ" ಎಂದು ಹೇಳಿದ. ನಿಲ್ದಾಣದಲ್ಲಿ ಇಳಿದಾಗ ಮಾತು ಮಾಡಿದ್ದಕ್ಕಿಂತ ನಾಲ್ಕಾಣೆ ಹೆಚ್ಚು ಕೊಟ್ಟದ್ದರಿಂದ ದೊಡ್ಡ ಸಲಾಮು

ಮಾಡಿದ. ಜೋಬನೇರದ ಟಿಕೇಟು ಕೊಂಡು ಟ್ರೇನನ್ನೇರಿದೆ. ಅದು ಅಲ್ಲಿಂದಲೇ ಹೊರಡುವ ಟ್ರೇನಾದ್ದರಿಂದ ಮಲಗಲು ಸ್ಥಳ ದೊರೆಯಿತು. ರೇಲಿನ ಚಕ್ರ ತಿರುಗಲಾರಂಭಿಸುವ ಮೊದಲೇ ನನ್ನ ವಿಚಾರಚಕ್ರ ತಿರುಗಲಾರಂಭಿಸಿತು. ಜೋಬನೇರ ಕಾಲೇಜಿನಲ್ಲಿಯೂ ಸೇರಿಸಿಕೊಳ್ಳದಿದ್ದರೆ ಏನು ಮಾಡುವುದು? ಇಷ್ಟೊಂದು ಬೆವರು ಸುರಿಸಿ, ರಕ್ತಕುದಿಸಿ, ಉಚ್ಚಶಿಕ್ಷಣ ತರಬೇತಿಗಳನ್ನು ಪಡೆದರೂ ಕೇವಲ ನಾನೂರೋ ಐನೂರೋ ವೇತನದ ನೌಕರಿಗಾಗಿ ಹಪಾಪಿಸುವಂತಾಯಿತಲ್ಲ! ಎಂದು ಕಸಿವಿಸಿಯಾಯಿತು. ನಂತರ, ಲಕ್ಷಾಂತರ ಭಾರತೀಯರು ಸಂಜೆಯ ರೊಟ್ಟಿ ಎಲ್ಲಿಂದ ಬಂದೀತು ಎಂದು ದಿಕ್ಕುಗಾಣದೇ ಬದುಕುತ್ತಿದ್ದಾರೆ, ಎಂದು ನೆನೆಸಿಕೊಂಡು ನಾನು ಅವರಿಗಿಂತ ಸಾವಿರ ಪಾಲು ಹೆಚ್ಚು ನೆಮ್ಮದಿಯಾಗಿದ್ದೇನೆ, ಎಂದು ಸಮಾಧಾನ ತಂದುಕೊಂಡೆ. ಮುಂದಿನ ಸ್ಟೇಶನ್ನಿನಲ್ಲಿ ಬಿಸಿ ಬಿಸಿ ಪೂರಿ ಮಾಡಿ ಮಾರುತ್ತ "ಠೇಲೆವಾಲಾ" ನಡೆದಿದ್ದ. ಐದು ಪೂರಿ ಕೊಡು ಎಂದಾಗ ಗಣಿತ ಕಚ್ಚಾ ಇದ್ದ ಮೇವಾಡಿ, ತೂಕ ಮಾಡಿ ಕೊಡುತ್ತೇನೆಂದ. ಒಂದು ಪಾವು ಪೂರಿ ಕೊಂಡಾಗ, ಒಂದು ದೊನ್ನೆಯಲ್ಲಿ ಮಸಾಲೆಹಾಕಿದ ಬೇಳೆ, ಗೊರಟ ಇದ್ದ ಮಾವಿನ ಕಾಯಿಯ ಉಪ್ಪಿನಕಾಯಿ ಮತ್ತು ಒಂದು ದೊಡ್ಡ ಹಸಿಮೆಣಸಿನಕಾಯಿಯನ್ನು ಕೊಟ್ಟ. ಬಾಳೇಹಣ್ಣುಗಳನ್ನು ಕೊಳ್ಳುವಾಗ ಅದನ್ನೂ ತೂಕ ಮಾಡಿದ್ದಾಯಿತು. ಅವನ್ನಷ್ಟು ತಿಂದು, ನೀರು ಕುಡಿದು ತಿರುಗಿ ಟ್ರೇನು ಹತ್ತಿದೆ. ಚಳಿಯಿಂದ ರಕ್ಷಿಸಿಕೊಳ್ಳಲು ರಾಜಸ್ಥಾನಿ ಪ್ರಯಾಣಿಕರು ಹಾಸಿಗೆಯನ್ನು ಹೋಲುವ 'ರಜಾಯಿ'ಗಳನ್ನು ಹೊದ್ದು ಕುಳಿತಿದ್ದರು. ಚಲಿಸುವ ಟ್ರೇನು ಜೋಗುಳ ಹಾಡಿ ನನ್ನನ್ನು ಮಲಗಿಸಿತು.

೩. ಜೋಬನೇರಕ್ಕೆ

ರೇಲಿನ ಜೋಗುಳ ನಿಂತು ಜನರ ಗದ್ದಲ ಹೆಚ್ಚಾದಾಗ ಚಿತ್ತೋಡಗಡ ಬಂತೆಂದು ಕೆಳಗಿಳಿದೆ. ಅಹಮ್ಮದಾಬಾದದಿಂದ ಜೈಪುರಕ್ಕೆ ಹೋಗುವ ಟ್ರೇನು ಬರಲು ತಡವಿದ್ದುದರಿಂದ ಮೈಕೊರೆಯುವ ಚಳಿಯಲ್ಲಿ ನಡುಗುತ್ತ ನಿಂತೆ. ನಾಲ್ಕು - ಐದು ಪ್ರಯಾಣಿಕರು ಸೇರಿ ಕಾಗದದ ಚೂರು, ತರಗೆಲೆಗಳನ್ನು ಸುಟ್ಟು ಚಳಿ ಕಾಸಲಾರಂಭಿಸಿದರು. ಇನ್ನೊಂದು ಗುಂಪು ರಜಾಯಲ್ಲಿ ಸೇರಿಕೊಂಡು ಒಂದೇ ಬೀಡಿ ಸೇದಲಾರಂಭಿಸಿತು. ಆ ಬೀಡಿಯನ್ನು ಬಾಯಲ್ಲಿಟ್ಟು ಸೇದದೇ ಮುಷ್ಟಿಯಲ್ಲಿಟ್ಟು ಒಂದು 'ದಮ್ಮು' ಸೇದಿ ನಂತರ ಇನ್ನೊಬ್ಬನಿಗೆ ಕೊಡುವದು ನಿಯಮವಿದ್ದಂತೆ ತೋರಿತು. ಈ ಸಾಮೂಹಿಕ ಧೂಮ್ರಪಾನ ಮೋಜಿನದೆನಿಸಿತು. ಹಸಿದವರು ಅಲ್ಲಿಯೇ 'ಪೂಡೀ-ಸಾಗ್' (ಪೂರಿ-ಪಲ್ಯ) ಮತ್ತು ಪೂಡೀ-ರಬಡೀ (ಪೂರಿ ಮತ್ತು ಯಾಲಕ್ಕಿ, ಸಕ್ಕರೆ ಸೇರಿಸಿದ ದಪ್ಪ ಬಾಸುಂದಿ) ಕೊಂಡು ತಿನ್ನಹತ್ತಿದರು. ನಾನು ದೇಹವನ್ನು ಬೆಚ್ಚಗಿಡಲು ಇತಿಹಾಸವನ್ನು ಮೆಲುಕು ಹಾಕುತ್ತಿದ್ದೆ. ಬಾಪ್ಪಾರಾವಳನು ಈ ನಗರಕ್ಕಾಗಿ ಲೋದಿ ಅರಸನೊಡನೆ ಕಾದಿದ. ಅದೆಷ್ಟು ಸಂಗ್ರಾಮಗಳಿಗೆ ಚಿತ್ತೋಡ ರಣಭೂಮಿಯಾಗಲಿಲ್ಲ. ಅದೆಷ್ಟು ಸಲ ಚಿತ್ತೋಡಗಡ ಶತ್ರುಗಳನ್ನು ಹಣ್ಣು ಮಾಡಿಲ್ಲ! ಅಲ್ಲಾ ಉದ್ದೀನನಂತಹ ಮಹಾನ್ ದಂಡನಾಯಕ ಪದ್ಮಿನಿಯ ರೂಪರಾಶಿಯನ್ನು ಕನ್ನಡಿಯಲ್ಲಿ ನೋಡಿ ಮೇಣದಂತೆ ಕರಗಿಹೋಗಲಿಲ್ಲವೇ? ಪದ್ಮಿನಿಗಾಗಿ ಚಿತ್ತೋಡಗಡ ನಾಶವಾದರೂ ಅವಳ ಕೂದಲು ಕೊಂಕಲಿಲ್ಲ. ಜೋಹಾರ ಮಾಡಿದ ಪದ್ಮಿನಿ, ಕರ್ಮವತಿ ಮತ್ತಿನ್ನಿತರ ರಜಪೂತ ರಮಣಿಯರಲ್ಲಿ ಎಂಥ ಆತ್ಮಾಭಿಮಾನ, ಕೆಚ್ಚೆದೆಗಳು ತುಂಬಿ ತುಳುಕುತ್ತಿರಬೇಕು! ಆ ಅಂಧಕಾರದಲ್ಲಿ ಚಿತ್ತೋಡದ ಕೋಟೆ ಕಾಣಿಸುತ್ತದೆಯೇ ಎಂದು ನೋಡಿದೆ. ಕುಂಭರಾಣಾನ ಕೀರ್ತಿಸ್ತಂಭ, ಅಸ್ಪಷ್ಟವಾಗಿ ಕಾಣಿಸುತ್ತಿದ್ದಂತೆ ಭಾಸವಾಯಿತು. ದೂರದ ಅರಮನೆಯಲ್ಲಿ ಗಾಯನ ಸಭೆ ನಡೆದಿದೆ. ರಜಪೂತ ರಮಣಿ ಪ್ರಿಯತಮನ ತೋಳ ತೆಕ್ಕೆಯಲ್ಲಿ ಇದು ಚಳಿಗಾಲವೆಂಬುದನ್ನೇ ಮರೆತಿರಬಹುದೇ?..........ರೇಲು ಕರ್ಕಶ ಶಬ್ದ ಮಾಡುತ್ತ ಪ್ಲಾಟಫಾರ್ಮಿನ ಮೇಲೆ ನಿಂತಿತು. ನನ್ನ ಕನಸಿನ ಭಂಗವಾಯಿತು.

ಕಿಶನಗಡ, ಭಿಲವಾಡಾ, ಅಜಮೇರ ಸ್ಟೇಶನ್ನುಗಳು ಯಾವಾಗ ಬಂದುಹೋದವೆಂದು ತಿಳಿಯಲೇ ಇಲ್ಲ. ಫುಲೇರಾ ಜಂಕ್ಷನ್ ಬಂದಿತು. ತಿಂಡಿಗೆಂದು ಗಾಡಿ ನಿಂತಿತು. ಹತ್ತಾರು ಕೈಗಾಡಿಗಳು ಹಲವಾರು ಮಿಠಾಯಿಗಳನ್ನು ಹೊತ್ತು ತಿರುಗುತ್ತಿದ್ದವು. ಸೋಹನ್ ಹಲ್ವ (ಮೈದಾ, ಸಕ್ಕರೆ, ಗೋಡಂಬಿ, ಜಾಸ್ತಿ ತುಪ್ಪ ಹಾಕಿದ ಗೋಲಾಕಾರದ ಗಟ್ಟಿ ಮಿಠಾಯಿ), ಮತ್ತು ರೇವಡಿ (ಎಳ್ಳಿಗೆ ಸಕ್ಕರೆ ಪಾಕು ಸೇರಿಸಿದ ಗಟ್ಟಿ ಮಿಠಾಯಿ) ಕೊಂಡು ರುಚಿ ನೋಡಿ ಕಚೋರಿ-ಚಹ ಸೇವಿಸಿದ್ದಾಯಿತು. ಇನ್ನು ಅರ್ಧ ತಾಸಿನಲ್ಲಿ ನಾನು ಇಳಿಯಬೇಕಾಗಿದ್ದ ಸ್ಟೇಶನ್ ಬರುವದು, ಅಲ್ಲಿ ಟ್ರೇನು ಒಂದೇ ನಿಮಿಷ ನಿಲ್ಲುವುದು ಎಂದು ತಿಳಿದುಕೊಂಡಿದ್ದೆ. ರೇಲಿನಾಳೊಬ್ಬ ಉರಿಯುವ ಹಿಲಾಲು ಹಿಡಿದು ಚಿಕ್ಕ ಸ್ಟೇಶನ್ ಒಂದರಲ್ಲಿ "ಅಸಲಪೂರ - ಜೋಬನೇರ" ಎಂದು ಮಲಗಿದ್ದವರನ್ನು ಎಬ್ಬಿಸುವಂತೆ ಕೂಗಿದ್ದರಿಂದ ಇದ್ದ ಎರಡೇ ಕೈಗಳನ್ನು ನಾಲ್ಕು ಮಾಡಿ ಸಾಮಾನಿನೊಂದಿಗೆ ಕೆಳಗೆ ಧುಮುಕಿದೆ. ಇಡೀ ಟ್ರೇನಿನಿಂದ ಇಳಿದವನು ನಾನೊಬ್ಬನೇ. ಆದ್ದರಿಂದ ಸರಿಯಾದ ಸ್ಟೇಶನ್ನಿನಲ್ಲಿ ಇಳಿದಿದ್ದೇನೆಯೇ ಎಂದು ಸಂದೇಹ ಪಡುವಂತಾಯಿತು. ಸುತ್ತಲೂ ಇನ್ನೂ ಕತ್ತಲು ಕವಿದಿತ್ತು. ದೂರದ ನಾಲ್ಕು ಕಂಭಗಳಲ್ಲಿ ಮೇಣಬತ್ತಿಯಷ್ಟು ಪ್ರಕಾಶಮಾನವಾದ ದೀಪಗಳು, ಕಂಬಗಳನ್ನು ಜನರ ಢಿಕ್ಕಿಯಿಂದ ರಕ್ಷಿಸುತ್ತಿದ್ದವೇ ಹೊರತು ಪ್ರವಾಸಿಕರಿಗೆ ಅವುಗಳಿಂದ ಯಾವ ಲಾಭವೂ ಇರಲಿಲ್ಲ. ದೂರದಿಂದ ಮಿನುಗು ಕಂದೀಲು ದೀಪವೊಂದು ನನ್ನ ಹತ್ತಿರವೇ ಬರುವುದು ಕಾಣಿಸಿತು. ನಡುವಯಸ್ಸಿನ ಸ್ಟೇಶನ್ ಮಾಸ್ತರು ಬಂದು ಟಿಕೇಟನ್ನು ಕೇಳಿ ಪಡೆಯುವ ಬದಲು "ಮಾಸ್ಟರ್ ಸಾಬ್ ನಮಸ್ತೆ. ಕುಶಲ ಮಂಗಲ್?" ಎಂದು ವಿಚಾರಿಸಿ "ತಾವು ಹೊಸದಾಗಿ ಬಂದಂತೆ ಇದೆ. ಕೃಷಿ ಕಾಲೇಜಿನ ಮಾಸ್ಟರ್ (ಅಧ್ಯಾಪಕರು) ಇರಬೇಕು" ಎಂದು ತನಗೆ ಎಲ್ಲ ಮಾಸ್ಟರರ ಪರಿಚಯವಿದೆಯೆಂದು ಹೇಳುತ್ತ ತನ್ನ ಆಫೀಸಿಗೆ ಕರೆದುಕೊಂಡು ಹೋದರು. ಸಣ್ಣದೊಂದು ಕೋಣೆ. ವಿವಿಧ ಉಪಕರಣಗಳು, ಫೋನ, ಫಾಯಿಲುಗಳ ದಪ್ಪ ದಪ್ಪ ರಜಿಸ್ಟರುಗಳು, ವಿವಿಧ ಎಚ್ಚರಿಕೆಗಳ ವಾಕ್ಯಗಳಿಂದ ತುಂಬಿ ಹೋಗಿತ್ತು. ಲಾರ್ಡ ವಿಲಿಂಗ್ಡನ್, ಭಾರತದ ಗವರ್ನರ ಜನರಲ್‌ನಾಗಿ ಬಂದಾಗ ಮಾಡಿಸಿದ ಮುರುಕು ಕುರ್ಚಿಯ ಮೇಲೆ ಕೂಡ್ರಿಸಿ ಹೊಸದಾಗಿ ಬಂದವರು ತಮ್ಮ ಸ್ಟೇಶನ್ ನೋಡಿ ಹೇಗೆ ಮೋಸಹೋಗುತ್ತಾರೆಂದು ವಿವರಿಸಿದರು.

ಹಿಂದೆ ಸ್ಟೇಶನ್ನಿನ ಹೆಸರು ಅಸಲಪುರ ಎಂದಿಷ್ಟೇ ಇತ್ತಂತೆ. ಕೃಷಿ ಕಾಲೇಜ ಆದಂದಿನಿಂದ ಅದರ ಮುಂದೆ ಜೋಬನೇರ ಸೇರಿಸಲಾಯಿತಂತೆ, ಕಾಲೇಜು ಅಲ್ಲಿಂದ ಸುಮಾರು ಏಳು ಮೈಲು ದೂರ ಇರುವದಾಗಿ ಹೇಳಿದರು. ಹಿಂದಕ್ಕೆ ಯಾವುದೇ ವಾಹನ ಸೌಕರ್ಯಗಳಿಲ್ಲದ್ದರಿಂದ ನಡೆದೇ ಮರಳ ಗುಡ್ಡೆಗಳನ್ನು ಹತ್ತಿ ಇಳಿದು ಹೋಗಬೇಕಾಗಿತ್ತು; ಇಲ್ಲವೇ ಒಂಟೆಯನ್ನು ಏರಬೇಕಾಗುತ್ತಿತ್ತು, ಜೋಬನೇರ

ತಲುಪಲು, ಈಗ ಪಕ್ಕಾರಸ್ತೆ ಮಾಡಿದ್ದಾರೆ. ಅಲ್ಲದೇ ಪ್ರವಾಸಿಕರನ್ನು ಕರೆದೊಯ್ಯಲು ನಿಯಮಿತವಾಗಿ ಬಸ್ಸುಗಳು ಓಡಾಡುತ್ತವೆ- ಎಂದು ಅಭಿಮಾನದಿಂದ ಹೇಳಿದರು. ಹಿಂದೊಮ್ಮೆ ಪ್ರಾಧ್ಯಪಕರೊಬ್ಬರು ಅಲಹಾಬಾದಿನಿಂದ ಬಂದವರು ವಿದ್ಯುತ್ ಪಂಕ, ಟೇಬಲ್ ಲ್ಯಾಂಪುಗಳೊಡನೆ ಬಂದು ಇಳಿದರಂತೆ. ಜೋಬನೇರದಲ್ಲಿ ವಿದ್ಯುತ್ ಪೂರೈಕೆ ಇಲ್ಲವೆಂದಾಗ ಮರು ಟ್ರೇನು ಹಿಡಿದು ಹೋಗಿಬಿಟ್ಟರಂತೆ. "ನೀವೀಗ ತಿರುಗಿ ಹೋಗುವ ಪ್ರಸಂಗ ಬರಲಿಕ್ಕಿಲ್ಲ. ಜೋಬನೇರಿಗೆ ವಿದ್ಯುತ್ ಬಂದಿದೆ" ಎಂದರು. ರೇಲುಕುರ್ಚಿಯ 'ಖಟಮಲ್' (ತಗಣಿ)ಗಳು ತಮ್ಮ ಪ್ರತಾಪ ತೋರಿಸಲಾರಂಭಿಸಿದ್ದರಿಂದ ಅಲ್ಲಿಂದೆದ್ದು ಹೊರಗೆ ಬಂದೆ. ಅದಾಗ ಬೆಳಕು ಹರಿಯಲಾರಂಭಿಸಿದ್ದರಿಂದ ಪರಿಸರವೆಲ್ಲ ಕಾಣಿಸಲಾರಂಭಿಸಿತು. ಕೆಂಪು ಪಗಡಿಯ, ಕರಿ ಮೀಸೆಯ ರಾಜಪೂತ ಪ್ರಯಾಣಿಕರು ಬೆಂಕಿ ಕಾಸಿಕೊಳ್ಳುತ್ತಿದ್ದರು. ಕೃಷಿಕಾರನೊಬ್ಬ ದೂರದಲ್ಲಿ ಧ್ವನಿ ಎತ್ತರಿಸಿ ಹಾಡುತ್ತ ಅದಾಗಲೇ ದುಡಿಮೆ ಪ್ರಾರಂಭಿಸಿದ್ದ. ಮಯೂರ ದಂಪತಿ ಇಷ್ಟು ಬೇಗ ಮುಂಜಾವಾಯಿತೇ? ಎಂದು ಅಚ್ಚರಿಪಡುತ್ತ ತಮ್ಮ ಗರಿಗಳನ್ನು ಕೊಕ್ಕಿನಿಂದ ಕೆದರಿಕೊಳ್ಳಲಾರಂಭಿಸಿದವು. ಅಲ್ಲೊಂದು ಇಲ್ಲೊಂದು ಗಿಡಮರಗಳು ಮರುಭೂಮಿಯಲ್ಲಿ ತಲೆಯೆತ್ತಿಕೊಂಡು ನಿಂತಿದ್ದವು. ನೂರಾರು ಗಿಳಿಗಳು ಸೊಪ್ಪಿಗಾಗಿ, ಉರುವಲಿಗಾಗಿ ಬೋಳಿಸಿದ ಮರಗಳ ಮೇಲೆ ಕಣ್ಣುಮುಚ್ಚಾಲೆ ನಡೆಸಿದ್ದವು. ಈ ಬೋಳು ಮರಗಳಿಗೆ ಗಿಳಿಗಳ ರೆಕ್ಕೆಗಳೇ ಪರ್ಣಗಳಾಗಬಹುದೇನೋ ಎಂದು ಕಲ್ಪನೆ ಓಡಿಸಲು ಯತ್ನಿಸಿದೆ. ಹಾಳು ಮನೆ, ಬೋಳು ಮರಗಳಲ್ಲಿ ಆಶ್ರಯ ಪಡೆದ ಕಪಿತಂಡ, ಇಂದು ಯಾರ ಹೊಲ ಹಾಳುಗೆಡಹುವುದೆಂದು ಯೋಚಿಸುತ್ತಲೇ ಜಿಗಿಯಿತು. ಮಾರುತ, ಅಲ್ಪ ಪರ್ಣಗಳೊಂದಿಗೆ ಚಕ್ಕಂದವಾಡುತ್ತ ಮರಳನ್ನು ಒಂದು ದಿನ್ನೆಯಿಂದ ಇನ್ನೊಂದು ದಿನ್ನೆಗೆ ಸಾಗಿಸುತ್ತ ನಡೆದಿದ್ದ.

ಯಮಧರ್ಮರಾಯನ ಕೋಣನಂತೆ ಧೂಳು ಹಾರಿಸುತ್ತ, ಗರ್ಜಿಸುತ್ತ ಮೋಟಾರೊಂದು ಬಂದು ನಿಂತಿತು. ಜಯಪುರ ಕಡೆಯಿಂದ ಬರುವ ಟ್ರೇನಿಗೆ ಐದೇ ನಿಮಿಷಗಳಿದ್ದುದರಿಂದ ಲಗುಬಗೆಯಿಂದ ಟಿಕೀಟು ಪಡೆದು ಪ್ರಯಾಣಿಕರು ಪ್ಲಾಟಫಾರ್ಮಿಗೆ ಧಾವಿಸಿದರು. ನನ್ನ ಸಾಮಾನುಗಳನ್ನು ತರಲು ಹೋದಾಗ ನೀಲಿ ಸಮವಸ್ತ್ರಧಾರಿ, ರೇಲ್ವೆಯ ಲಾಯನ್‌ಮನ್ನನು, ಎಲ್ಲ ಸಾಮಾನುಗಳನ್ನು ಮೋಟಾರಿಗೆ ಸಾಗಿಸುವುದು ಕಂಡು ನೆಮ್ಮದಿಯೆನಿಸಿತು. ಹೊಸ ಮಾಸ್ತರ್‌ಜಿಗೆ ಮುಂದಿನ ಸೀಟಿನಲ್ಲಿ ಕೂಡ್ರಿಸಿ ಎಂಟಾಣೆ ಪಡೆದು ಸಲಾಂ ಹೊಡೆದು ಹೊರಟುಹೋದ. ಬಂದ ಟ್ರೇನಿನಿಂದ ಅನೇಕರು ಬಂದು ಬಸ್ಸಿನಲ್ಲಿ ಕುಳಿತರು. ಅವರಲ್ಲಿಯ ಒಬ್ಬರಿಗೆ ಕೃಷಿ ಕಾಲೇಜಿನ ಬಗ್ಗೆ ವಿಚಾರಿಸಿದಾಗ ತಾನೂ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕನಿದ್ದೇನೆ. ತನ್ನ ಹೆಸರು ಹರಗ್ಯಾನ ಸಿಂಗ್ ಎಂದು ಪರಿಚಯ ಮಾಡಿಕೊಂಡರು. ಇನ್ನೂ ಎರಡು ಟ್ರೇನು ಬಂದ ಹೊರತು

ಈ ಬಸ್ಸು ಬಿಡುವುದಿಲ್ಲವೆಂದು ವಿವರಿಸಿ ಚಹಾ ಕುಡಿಯಲು ಕರೆದುಕೊಂಡು ಹೋದರು. ಹುಲ್ಲಿನ ಛಾವಣಿ ಹಾಕಿದ ಸಣ್ಣ ಅಂಗಡಿಯಲ್ಲಿ ಮಣ್ಣಿನ ಮಡಕೆ ತುಂಬ ನೀರು, ಒಂದು ಸ್ಟೋವ್, ಡಬ್ಬಿಯಲ್ಲಿ ಸೇವು ಇಟ್ಟುಕೊಂಡು ಚಹದಂಗಡಿ ನಡೆಸಿದ್ದ ಒಬ್ಬ. ಕುಳಿತುಕೊಳ್ಳಲು ಕಲ್ಲಿನ ಬಾಕುಗಳು. ಎರಡು ಚಹಾ ಎಂದಾಗ ಲೋಟಾಕ್ಕೆ ಕಬ್ಬಿಣದ ಹಿಡಿಕೆ ಕೂಡ್ರಿಸಿದ ಸವಟಿನಿಂದ ಮಡಕೆಯಿಂದ ಎರಡು ಸವಟು ನೀರು ತೆಗೆದು ವಾರಕ್ಕೊಮ್ಮೆ ಬೆಳಗುವ ಕೆತ್ತಲಿಗೆ ಅದನ್ನು ಸುರಿದು, ಉರಿಗಿಂತ ಮಸಿ ಹೆಚ್ಚು ಕೊಡುತ್ತಿದ್ದ ಸ್ಟೋವಿನ ಮೇಲಿಟ್ಟು, ಅದಕ್ಕೆ ಸಕ್ಕರೆ, ಹಸಿಶುಂಠಿ ಯಾಲಕ್ಕಿ ಸೇರಿಸಿದ. ಸ್ಟೋವನ್ನು ಗಾಳಿಯಿಂದ ರಕ್ಷಿಸಲು ತಗಡೊಂದನ್ನು ನಿಲ್ಲಿಸಿದ. ನೀರು ಕಾದಾಗ ಚಹಪುಡಿ, ಬಿಸಿಹಾಲು ಸೇರಿಸಿ, ಕೊಳಕು ಬಟ್ಟೆಯಿಂದ ಸೋಸಿ, ಮಾಸ್ತರಸಾಬರಿಗೆ ಮಣ್ಣಿನ ಕಪ್ಪಿನ ಬದಲು ಗ್ಲಾಸಿನಲ್ಲಿ ಚಹಾ ಕೊಟ್ಟ. ನೀರು ಬೇಕು ಎಂದಾಗ ಕುಳಿತಲ್ಲಿಂದಲೇ ಲೋಟಾಸೌಟಿನಿಂದ ನೀರು ತೆಗೆದು ಬೊಗಸೆಯಲ್ಲಿ ಸುರಿದು ಕುಡಿಯಲು ಹೇಳಿದ. ಅಭ್ಯಾಸವಿಲ್ಲದ್ದರಿಂದ ಮೈಮೇಲೆ ನೀರು ಚೆಲ್ಲಿತು. ಮಾಸ್ತರಸಾಬರು ಅನುನುಭವಿಗಳು ಎಂದು, ತಾನೇ ಬಂದು ಒಂದು ಹನಿ ಬೀಳದಂತೆ ಕುಡಿಯುವುದನ್ನು ತೋರಿಸಿಕೊಟ್ಟು, ಗ್ಲಾಸಿನಲ್ಲಿ ಬೇರೆಯಾಗಿ ನೀರು ಕೊಟ್ಟ. ನೀರು, ಚಹ ಕುಡಿದ ಗ್ಲಾಸುಗಳನ್ನು ನಾವೇ ತೊಳೆದು ಇಡುವ ಪ್ರಸಂಗ ಬಂದಾಗ ಬೊಗಸೆಯಲ್ಲಿ ನೀರು, ಮಣ್ಣಿನ ಕಪ್ಪಿನಲ್ಲಿ ಚಹ ಕುಡಿಯುವುದರ ಮಹತ್ವದ ಅರಿವಾಯಿತು. ಬಾಲ್ಯದಲ್ಲಿ ಜುಲಾಬು ತೆಗೆದುಕೊಂಡಾಗ ಕುಡಿಯುವ ಶುಂಠಿ ಕಷಾಯದ ರುಚಿ ಚಹಕ್ಕೆ ಇದ್ದರೂ ಗ್ಲಾಸಿಗೆ ನಾಲ್ಕಾಣೆಯಂತೆ ದುಡ್ಡು ಪಡೆದಾಗ ಇದು ರಾಜಸ್ಥಾನದ ಅತ್ಯಂತ ರುಚಿಕರ ಚಹ ಎಂಬ ಕಲ್ಪನೆ ಬಂದಿತು!

ಡ್ರಾಯವರನು ಆಗಷ್ಟೇ ಹಜಾಮತಿ ಮುಗಿಸಿಕೊಂಡು ಚಹದಂಗಡಿಯನ್ನು ಪ್ರವೇಶಿಸಿದನಾದ್ದರಿಂದ ಬಸ್ಸು ಬಿಡಲು ಬಹಳ ವೇಳೆ ಇದೆ! ಎಂಬ ಅರಿವಾಗಿ ಎಳೆಬಿಸಿಲಿನಲ್ಲಿ ನಿಂತೆವು. ಇನ್ನೆರಡು ಟ್ರೇನು ಬಂದ ನಂತರ ಪ್ರಯಾಣಿಕರು ವಾಹನದ ಒಳಗಡೆಯೂ, ಮೇಲ್ಗಡೆಯೂ ಸ್ಥಾಪಿತರಾದರು. ಸೂಟುಧಾರಿ ಡ್ರಾಯವರ, ಎರಡು ಮೂರು ಮೈಲು ಕೇಳಿಸುವಂತೆ ಹಾರ್ನು ಬಾರಿಸಿದಾಗ ಕಿಂದರಿ ಜೋಗಿಯ ಕೊಳಲಿಗೆ ಬರುವ ಇಲಿಗಳಂತೆ ಮೂಲೆ ಮೂಲೆಗಳಿಂದ ಪ್ರಯಾಣಿಕರು "ರುಕ್ಕೆ, ರುಕ್ಕೆ" (ನಿಲ್ಲಿಸು) ಎನ್ನುತ್ತ ಬಂದು ಹತ್ತಿದರು. ಮೈಲಿಕಲೆಯುಳ್ಳ ಮುಖದ ಕಂಡಕ್ಟರನು ಓಡುವ ಬಸ್ಸಿನಲ್ಲಿ ಹತ್ತುತ್ತ ಇಳಿಯುತ್ತ ಎಲ್ಲರ ಹತ್ತಿರ ಹಣ ಪಡೆದರೂ ಟೀಕೇಟು ಹರಿಯುವ ಗೋಜಿಗೆ ಹೋಗಲಿಲ್ಲ. ಟಿಕೇಟು ಪುಸ್ತಕದಲ್ಲಿ ಮಾತ್ರ ಪ್ರಯಾಣಿಕರಿರುವಷ್ಟು ನಂಬರನ್ನು ಗುರುತು ಹಾಕಿದ್ದ. ಎಲ್ಲಿಯಾದರೂ ತಪಾಸಣೆ ನಡೆಯಲಿದೆ, ಎಂದು ಸಂದೇಹ ಬಂದರೆ ಅಷ್ಟು ಟಿಕೇಟುಗಳನ್ನು ಹರಿದು ಹಾಕಿದರಾಯಿತಂತೆ! ಸರಕಾರ ಎಷ್ಟು ಕಾನೂನು

ಮಾಡಿದರೇನು? ಎಷ್ಟು ಕರ ಹೇರಿದರೇನು? ಅದನ್ನು ಪಾಲಿಸುವವರಿಗೆ ತೊಂದರೆಯೇ ಹೊರತು ಇಂಥವರಿಗೆ ಅವುಗಳಿಂದ ಯಾವ ಹಾನಿಯೂ ಆಗದು ಎನಿಸಿತು.

ಅರ್ಧಮೈಲಿಗೊಮ್ಮೆ ಮೋಟಾರು ನಿಲ್ಲುತ್ತ ಹೊರಟಿತ್ತು. ಈ ಹೊಲಗಳೆಲ್ಲ ಕಾಲೇಜಿಗೆ ಸೇರಿದವೆಂದು ಜೊತೆಗಿದ್ದ ಪ್ರಾಧ್ಯಾಪಕರು ವಿವರಿಸಿದರು. ಉದಯಪುರದಲ್ಲಿ ನನಗಾದ ಫಜೀತಿಯ ಬಗ್ಗೆ ಅವರಿಗೆ ಹೇಳಿ, ಜೋಬನೇರದಲ್ಲಿ ಅಂತಹದೇ ಪರಿಸ್ಥಿತಿ ಬಂದರೆ ಏನು ಮಾಡುವುದು? ಎಂದು ಕೇಳಿದಾಗ. 'ನಮ್ಮ ಕಾಲೇಜಿನ ಡೀನರು ಬಹಳ ಒಳ್ಳೆಯವರು, ಒಂದಾನು ವೇಳೆ ಯಾವ ಕಾಗದಪತ್ರಗಳೂ ಬಾರದಿದ್ದರೆ ದಿಲ್ಲಿಗೆ ಟ್ರಂಕ್ ಕಾಲ್ ಮಾಡಿ ವಿಚಾರಿಸಿ ನಿಮ್ಮನ್ನು ಸೇರಿಸಿಕೊಳ್ಳದೇ ಬಿಡಲಾರರು' ಎಂದು ಅಭಿಮಾನದಿಂದ ಹೇಳಿದಾಗ ನೆಮ್ಮದಿ ಅನಿಸಿತ್ತು. ಊರು ಬರುತ್ತಿದ್ದಂತೆ ಹೊಸದಾಗಿ ಕಟ್ಟುತ್ತಿದ್ದ ವಸತಿಗೃಹಗಳು ಕಾಣಿಸಿದವು. ಅವು ತಯಾರಾದರೆ ಒಂದು ನನಗೂ ಸಿಗಬಹುದೆಂದರು. ಆ ತನಕ ಉಳಿದುಕೊಳ್ಳಲು ಒಳ್ಳೆ ಹೊಟೇಲು ಯಾವುದು ಇದೆ? ಎಂದು ಕೇಳಿದಾಗ ಮನಸ್ವೀ ನಕ್ಕು "ಈ ಹಳ್ಳಿಯಲ್ಲಿ ಒಳ್ಳೆಯ ಚಹಾ ಅಂಗಡಿ ಒಂದು ಇದ್ದರಲ್ಲವೇ ಹೊಟೇಲ್ಲು ಇರುವುದು?" ಎಂದರು. ಬಸ್ಸು ಕಾಲೇಜಿನ ಆವಾರದಲ್ಲಿ ನಿಂತಿತು. ಹರಗ್ಯಾನ ಸಿಂಗರು ನನ್ನನ್ನು ಇಳಿಸಿ ತಮ್ಮ ಆಫೀಸಿಗೇ ಕರೆದುಕೊಂಡು ಹೋಗಿ ರೂಮೊಂದನ್ನು ತೋರಿಸಿ ಬಟ್ಟೆಬರೆ ಬದಲಿಸಲು ಹೇಳಿ. ಕೆಲಸಕ್ಕೆ ಹಾಜರಾಗೆಂದರು. ಅದಕ್ಕೆ ಹೊಂದಿ ಬಚ್ಚಲು, ಕಕ್ಕಸು ಇದ್ದರೂ ನೀರೇ ಇರಲಿಲ್ಲ. ಅವರ ಕೋಣೆಯಲ್ಲೇ ಸಾಮಾನು ಇಟ್ಟು, ತಯಾರಾಗಿ ಡೀನರನ್ನು ಕಾಣಲು ಹೊರಟೆ.

ಕೃಷಿ ಕಾಲೇಜಿನ ಕಟ್ಟಡಗಳೆಲ್ಲ ಹೊಸವು. ಪ್ರತಿಯೊಂದು ವಿಭಾಗದ ಕಟ್ಟಡಗಳನ್ನೂ ಬೇರೆ ಬೇರೆಯಾಗಿಯೇ ಕಟ್ಟಿ ದೊಡ್ಡದಾದ ಪಟಾಂಗಣ ಬರುವಂತೆ ಮಾಡಿದ್ದಾರೆ. ರಾಜಸ್ಥಾನಿ ವಾಸ್ತುಕಲೆಯಲ್ಲಿ ಗುಮ್ಮಟ ಹೊಂದಿದ್ದ ಭವ್ಯ ಕಟ್ಟಡ ಆಫೀಸಿಗೆ ಮೀಸಲಾಗಿತ್ತು. ದೊಡ್ಡ ರುಮಾಲು ಸುತ್ತಿಕೊಂಡು, ದೊಡ್ಡ ಮೀಸೆ ಬೆಳೆಸಿ ಖಾಕಿ ಬಟ್ಟೆ ಧರಿಸಿದ ಚಪರಾಸಿಯ ಕೈಯಲ್ಲಿ ನನ್ನ ಹೆಸರು ಬರೆದ ಚೀಟಿಯನ್ನು ಡೀನರ ಹತ್ತಿರ ಕಳಿಸಿದಾಗ ಕೂಡಲೆ ಬರಮಾಡಿಕೊಂಡರು. ಚಪರಾಸಿ ತೂಗು ಬಾಗಿಲು ತೆರೆದು ತಲೆ ಬಗ್ಗಿಸಿ ಬಿಟ್ಟಾಗ ಒಳಗೆ ಹೋದೆ. ದೊಡ್ಡ ಹಾಲಿನ ನೆಲಕ್ಕೆ ಗುಡಾರ ಹಾಸಲಾಗಿತ್ತು. ಒಂದು ಮೂಲೆಯಲ್ಲಿ ಡೀನರ ಆಪ್ತ ಬಾಬು (P.A.), ಕೇರಳದ ಜಾನ್, ಟಾಯಪ್ ಮಾಡುತ್ತ ಕುಳಿತಿದ್ದ. ನನ್ನನ್ನು ನೋಡಿ ತಾನೂ ದಕ್ಷಿಣ ಭಾರತದವನೇ! ಎಂದು ಮುಗುಳುನಗೆ ನಕ್ಕು ಸ್ವಾಗತಿಸಿದ. ಡೀನರ ಭೇಟಿಗಾಗಿ ಬರುವವರಿಗೆ ಕೂಡಲೆಂದು ಹತ್ತಾರು ಕುರ್ಚಿಗಳನ್ನು ಇಟ್ಟಿದ್ದರು. ಹಾಲನ್ನು ದಾಟಿದ ಮೇಲೆ ಡೀನರ ಆಫೀಸು ಬಂದಿತು. 'ಸುಪ್ರಭಾತ' ಎಂದು ಒಳಗೆ ಹೋದಾಗ ಎದ್ದು ನಿಂತು ಆದರದಿಂದ

ಬರಮಾಡಿಕೊಂಡರು. ಉದಯಪುರಕ್ಕೆ ಹೋಗಿ ಬರುವ ಪ್ರಸಂಗ ಬಂದದ್ದಕ್ಕಾಗಿ ನೊಂದುಕೊಂಡರು. ನಾನು ಹಾಜರಾದ ಕಾಗದ ಪತ್ರಗಳನ್ನು ಕೂಡಲೇ ತಯಾರಿಸುವಂತೆ ಬಾಬುವಿಗೆ ಹೇಳಿದರು. ಅಷ್ಟರಲ್ಲಿ ಹರಗ್ಯಾನಸಿಂಗರು ಬಂದು ಹಿಂದಿಯಲ್ಲಿಯೇ ಡೀನರೊಂದಿಗೆ ಮಾತುಕತೆ ನಡೆಸಿದರು. ಅವರ ಸಂಭಾಷಣೆಯ ಮೇಲಿಂದ ಹರಗ್ಯಾನಸಿಂಗರು ಅದೇ ವಿಶ್ವವಿದ್ಯಾಲಯದ ರೀಡರ ಸ್ಥಳದ ಇಂಟರವ್ಯೂಗೆ ಹೋಗಿದ್ದರೆಂದೂ ಕೃಷಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ಎರಡು ರಾಜಕೀಯ ಬಣಗಳಿಗೆ ಎಂದೂ, ವಿರೋಧಿ ಪಂಗಡದವರು ತಮ್ಮ ಉಮೇದುವಾರರನ್ನು ಎತ್ತಿಕಟ್ಟಿದ್ದರೂ ವಿಜಯದ ಮಾಲೆ ಸಿಂಗರ ಕೊರಳಿಗೇ ಬಿದ್ದಿದೆ! ಎಂಬುದನ್ನು ತಜ್ಞರು ಆಪ್ತವಾಗಿ ತಿಳಿಸಿದ್ದಾರೆ, ಎಂದೂ ತಿಳಿಯಿತು. ಇದರಿಂದ ಡೀನರಿಗೆ ಹೆಚ್ಚಿನ ಸಂತೋಷವಾಯಿತು. ಅಷ್ಟರಲ್ಲಿ ಡೀನರು ಹೇಳಿಕಳಿಸಿದ್ದರಿಂದ ಪ್ರಾಣಿಶಾಸ್ತ್ರ - ಕೀಟ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಬಿ. ಪಿ. ಮಾಥುರರು ಹಸನ್ಮುಖರಾಗಿ ಪ್ರವೇಶಿಸಿದರು. ಹಸ್ತಲಾಘವ ಮಾಡಿ ತಮ್ಮ ಪರಿಚಯ ಮಾಡಿಕೊಟ್ಟರು. ನಂತರ ಸಿಂಗರನ್ನು ಅಭಿನಂದಿಸಿದರು. "ಇವರ (ನನ್ನ) ಯೋಗಕ್ಷೇಮವೆಲ್ಲ ನಿಮ್ಮ ಹೊಣೆ" ಎಂದು ಡೀನರು ಅವರಿಗೆ ಹೇಳಿದಾಗ ತಾನೆಲ್ಲ ವ್ಯವಸ್ಥೆ ಮಾಡುತ್ತೇನೆಂದರು. ಡೀನರಿಗೆ ಕೃತಜ್ಞತೆ ತಿಳಿಸಿ ಡಾ. ಬಿ.ಪಿ. ಮಾಥುರರೊಡನೆ ಹೊರಗೆ ಬಂದೆ. ಅವರು ಚಪರಾಸಿಯನ್ನು ಕರೆದು ಹರಿಬಕ್ಷನನ್ನು ಕರೆತರಲು ಆಜ್ಞಾಪಿಸಿದರು. ಅವನು ಬಂದಾಗ "ಗ್ಯಾನಲತಾ (ಜ್ಞಾನ ಲತಾ) ಅಡಿಗೆ ಪ್ರಾರಂಭಿಸುವ ಮೊದಲೇ ಹೋಗಿ ಊಟಕ್ಕೆ ಅತಿಥಿಯೊಬ್ಬರು ಬರಲಿದ್ದಾರೆಂದು ಹೇಳಿ ಬಾ" ಎಂದರು. ನನ್ನ ಸಾಮಾನುಗಳು ಎಲ್ಲಿವೆಯೆಂದು ಕೇಳಿ ಅವನ್ನು ಮನೆಗೆ ಮುಟ್ಟಿಸಲು ಹೇಳಿದರು. ಗ್ಯಾನಲತಾ, ಅವರ ಮಡದಿಯ ಹೆಸರು, ಎಂಥ ಸೊಗಸಾಗಿದೆ! ಎಂದುಕೊಂಡೆ. ಸಿಂಗ ಮತ್ತು ಬಿ. ಪಿ. ಯವರು ಅದೆಷ್ಟೋ ಹೊತ್ತು ವಿಶ್ವವಿದ್ಯಾಲಯದ ರಾಜಕಾರಣದ ಬಗ್ಗೆ ಮಾತನಾಡಿದರು. ಅವರ ಸಂಭಾಷಣೆಯಲ್ಲಿ ಬರುವ ವ್ಯಕ್ತಿಗಳ ಪರಿಚಯ ಇಲ್ಲದ್ದರಿಂದ ಯಾವುದೂ ಅರ್ಥವಾಗಲಿಲ್ಲ.

ಮಧ್ಯಾಹ್ನ ಡಾ. ಮಾಥುರರೊಡನೆ ಅವರ ಮನೆಗೆ ಹೊರಟೆ. ಊರೊಳಗಿನ ರಸ್ತೆಗಳು ಹೊರಗಿನ ರಸ್ತೆಗಳಿಗಿಂತ ಕನಿಷ್ಟವಾಗಿದ್ದವು. ಬರೇ ಮರಳಿನಿಂದ ಮಾಡಿದಂತಿದ್ದವು. ಕೆಳಗಿಳಿದು ಮೇಲೆ ಹತ್ತಿ ಅಂಕು ಡೊಂಕಾಗಿ ಹೋಗುವ ಓಣಿಗಳಿಂದ ಕರೆದುಕೊಂಡು ಮನೆ ಮುಟ್ಟಿದರು. ಎರಡಂತಸ್ತಿನ ಸಿಮೆಂಟ ಕಾಂಕ್ರೀಟಿನ ದೊಡ್ಡ ಮನೆಯೊಂದನ್ನು ಅವರು ಬಾಡಿಗೆಗೆ ಕೊಂಡಿದ್ದರು. ಯಾರೋ ಸಾಹುಕಾರ ಮಾರವಾಡಿಯ ಮನೆಯಂತೆ ಅದು. ಮಾಲಕ, ಕಲಕತ್ತೆಯಲ್ಲಿ ಹಣ ಗಳಿಸುವುದರಲ್ಲಿ ಮಗ್ನನಾಗಿದ್ದರಿಂದ ಇಲ್ಲಿಯ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. ಮನೆಯ ಮುಂದಿನ

ಉಕ್ಕಿನ ಗೇಟು ತೆಗೆದಾಗ ಮನೆಯವರಿಗೆ ನಾವು ಬಂದದ್ದು ತಿಳಿಯಿತು. ಮಾಳಿಗೆಯಿಂದಲೇ 'ಪಾಪಾಜೀ' ಎಂದು ಮಕ್ಕಳು ಕೂಗಿದರು. ನಂತರ ಒಂಟೆಯೂ ಒಳಗೆ ಹೋಗಲು ಬರುವಂತೆ ಮಾಡಿದ ಭವ್ಯ ಕಟ್ಟಿಗೆಯ ಬಾಗಿಲು ಬಂದಿತು. ಆದರೆ ಈ ಬಾಗಿಲು ರಕ್ಷಣೆಗೆಂದು ಸದಾಕಾಲ ಮುಚ್ಚಿರುವದರಿಂದ ಮಧ್ಯದಲ್ಲಿಯೇ "ಕನಕನ ಕಿಂಡಿ"ಯಂತೆ ಮಾಡಿದ್ದ ಬಾಗಿಲೊಳಗಿಂದ ತಲೆ ಬಗ್ಗಿಸಿ ಒಳಸೇರಬೇಕಾಯಿತು. ಎದುರಿಗೆ ಚೌಕೋನಾಕೃತಿಯ ಅಂಗಳ. ಸುತ್ತಲೂ ಬೀಗ ಧರಿಸಿ ನಿಂತ ಕೋಣೆಗಳು. ಒಂದು ಮೂಲೆಯಲ್ಲಿ, ನೆಲಮಾಳಿಗೆಯಲ್ಲಿ ಕಟ್ಟಿದ ಹೌದು ಇದೆ. ಮಳೆ ಬಂದಾಗ ಕಟ್ಟಡದ ಮೇಲೆ ಬಿದ್ದ ಪ್ರತಿಯೊಂದು ಹನಿಯೂ ಈ ಹೌದಿನಲ್ಲಿ ಸಂಚಯವಾಗುವ ವ್ಯವಸ್ಥೆ ಮಾಡಿದ್ದಾರೆ. ಕುಡಿಯುವುದಕ್ಕೆ ಬಿಟ್ಟು ಉಳಿದದ್ದಕ್ಕೆಲ್ಲ ವರ್ಷದುದ್ದಕ್ಕೂ ಈ ನೀರನ್ನೇ ಉಪಯೋಗಿಸುತ್ತಾರಂತೆ! ಬೇಡವಾದ ಸಾಮಾನೆಲ್ಲ ಕೆಳಗಿನ ಖೋಲಿಗಳಲ್ಲಿಟ್ಟು ಮಾಳಿಗೆಯ ಮೇಲೆ ಸಂಸಾರ ಹೂಡಿದ್ದರು. ಮಾಥುರ ಪರಿವಾರದವರು.

ಮುಗುಳ್ನಗೆ ಸೂಸುತ್ತ ಬಂದು ಕೈಜೋಡಿಸಿದ ಪತ್ನಿಗೆ, "ಲಕ್ಷ್ಮಿ, ಇವರು ಡಾಕ್ಟರ ಕಾಮತರು' ಎಂದು ಪರಿಚಯ ಮಾಡಿಕೊಟ್ಟಾಗ ಗ್ಯಾನಲತಾ, ಲಕ್ಷ್ಮಿ ಹೇಗಾದಳು ಎಂದು ಅಚ್ಚರಿಯಾಯಿತು. ಬಹುಶಃ ಅವಳನ್ನು ವರಿಸಿದ ನಂತರ ಗ್ಯಾನ (ಜ್ಞಾನ) ಹೋಗಿ ಲಕ್ಷ್ಮಿಯೇ ಧಾರಾಳವಾಗಿ ಬರುತ್ತಿದ್ದರಿಂದ ಈ ಹೆಸರು ಬಂದಿರಬೇಕು! ಎಂದು ಕೊಂಡೆ. ತಾಯಿಯ ಆದೇಶದಂತೆ ಹಿರಿಮಗ ಪಿಂಟು. ಕಿರಿ ಮಗಳು ಬೇಬಿ "ಅಂಕಲಜಿ"ಗೆ (ಮಾಮಾಗೆ!) ನಮಸ್ಕಾರ ಮಾಡಿದರು. ಗೃಹಿಣಿ, ನನಗಾಗಿ ಮೀಸಲಿರಿಸಿದ ಕೋಣೆ ತೋರಿಸಿದಳು. "ದೂರದ ಪ್ರಯಾಣದಿಂದ ನೀವು ದಣಿದಿರಬೇಕು, ಹಸಿದಿರಬೇಕು, ಅಡಿಗೆ ಸಿದ್ಧವಾಗುತ್ತಿದೆ. ಬೇಗ ಬಟ್ಟೆ ಬದಲಿಸಿ ಬನ್ನಿ" ಎಂದು ಚಾವಿಯ ಗೊಂಚಲು ತಿರುವುತ್ತ ಪತಿದೇವನತ್ತ ಹೋದಳು.

೪. ಪರಿಚಯ

ಊಟ-ತಿಂಡಿಗಿಂತಲೂ ನನಗೆ ಸ್ನಾನದ ಅವಶ್ಯಕತೆ ಹೆಚ್ಚು ಇತ್ತು. ಐದು ದಿನದ ಪ್ರವಾಸದಲ್ಲಿ ಕಲೆಹಾಕಿದ ದೂಳು, ಬೆವರುಗಳು ಮೈತುಂಬ ತಾಂಡವವಾಡುತ್ತಿದ್ದವು. ಆದರೆ ಕೈಕಾಲುಗಳನ್ನೇ ಸರಿಯಾಗಿ ತೊಳೆದುಕೊಳ್ಳಲು ಬಚ್ಚಲಲ್ಲಿ ನೀರು ಇರದಾಗ ಸ್ನಾನದ ಮಾತು ದೂರವೇ ಉಳಿಯಿತು. ಊಟಕ್ಕೆ ಕರೆ ಬಂದಿತು. ಕಲಾಯಿ ಇಲ್ಲದ ಎರಡು ದೊಡ್ಡ ಹಿತ್ತಾಳೆ ತಾಟುಗಳು ಟೇಬಲ್ಲಿನ ಮೇಲೆ ಇದ್ದವು. ಊಟಕ್ಕೆ ಕುಳಿತಾಗ ಮಾಥುರರು ಏನೋ ನೆನಪಾದವರಂತೆ, "ಗ್ಯಾನಲತಾಳಿಗೆ ನಮ್ಮ ಅತಿಥಿಯ ಪರಿಚಯ ಮಾಡಿಕೊಡಲೇ ಇಲ್ಲ. ಅವಳನ್ನು ಕಳಿಸು ಲಕ್ಷ್ಮಿ" ಎಂದರು. ಆಗ ನಾನು ಮೋಸ ಹೋದದ್ದು ತಿಳಿಯಿತು. ಐದು ನಿಮಿಷ ಕಳೆದಿರಬಹುದು, ಗೋದಿ ಹಿಟ್ಟಿನ ಕೈ ಯಿಂದಲೇ "ಘುಂಗಟ್" ಸರಿಪಡಿಸಿಕೊಳ್ಳುತ್ತ ಬಂದ ರಾಜಸ್ಥಾನಿ, ಅಡಿಗೆಯಾಕೆ ನಾಚುತ್ತ ವಂದನೆಗಳನ್ನು ಸಲ್ಲಿಸಿದಾಗ ಈ ನಿರಕ್ಷರಿಗೆ ಗ್ಯಾನಲತಾ ಎಂದು ಹೆಸರಿಟ್ಟವರಾರು? ಎಂದು ಆಶ್ಚರ್ಯವಾಗದೇ ಇರಲಿಲ್ಲ. ಬೈತಲೆಯಿಂದ ಇಳಿಬಿಟ್ಟ ಹಿತ್ತಾಳೆಯ ಆಭರಣ, ಬೇಟೆಗಾರನು ಬಳಸುವ "ಹೆಡ್ ಲಾಯಿಟ್" ದಂತಿತ್ತು. ಗೇಣುದ್ದ ಕೂದಲನ್ನು ಕೆಂಪು ದಾರದಿಂದ ಬಿಗಿದು ಜಡೆ ಹಾಕಿಕೊಂಡಿದ್ದಳು. ಕಿವಿಗೆ ಬೆಳ್ಳಿಯ ಲೋಲಕಗಳು, ಉಂಗುರದಂತಿದ್ದ ಕಲಾತ್ಮಕವಾದ ಮೂಗುತಿ, ಕುತ್ತಿಗೆಗೆ ಕಪ್ಪು ಕೆಂಪು ದಾರಗಳು. ಬೆಳ್ಳಿಯ ಪೊಳ್ಳಾದ ಆಭರಣಗಳು, ಕೈತುಂಬ ವಿವಿಧ ಲೋಹದ ಬಳೆಗಳು. ಬೆರಳಿಗೆ ಹಿತ್ತಾಳೆಯ, ಬೆಳ್ಳಿಯ ಆಭರಣಗಳು, ಸೊಂಟಕ್ಕೆ ಹಗ್ಗದಷ್ಟು ದಪ್ಪ ಬೆಳ್ಳಿಯ ಸೊಂಟ ಪಟ್ಟಿ, ನೂರು ನಿರಿಗೆಗಳುಳ್ಳ ಕೇಸರಿ ಲಂಗ ನಾಭಿಯ ಕೆಳಗೆ; ಜರಿಯ ಕೆಲಸ ಮಾಡಿದ ಗಿಡ್ಡ ರವಕೆ, ಬೆನ್ನಹಿಂದೆ ಕಟ್ಟುವಂತಹದು. ಕಲಾತ್ಮಕವಾಗಿ ಹೂಗಳನ್ನು ಬಿಡಿಸಿಟ ಮುಸುಕು (ಘೂಂಗಟ್) ಎಡಗಡೆಯಿಂದ ಬಂದು ತಲೆಯನ್ನಾವರಿಸಿತ್ತು. ವರ್ಣಮಯ ಉಡುಪು ವರ್ಣಚಿತ್ರಕ್ಕೆ ಯೋಗ್ಯವಿದ್ದರೂ ಕಣ್ಣಿಗೆ ಹಬ್ಬವನ್ನುಂಟುಮಾಡಲಿಲ್ಲ.

ನನಗೊಂದು ಥಾಲಿ (ತಾಟು) ಕೊಟ್ಟು, ತಂದೆ-ಮಕ್ಕಳು ಇನ್ನೊಂದು ಥಾಲಿಯನ್ನು ತೆಗೆದುಕೊಂಡರು. ಫುಲ್ಕಾ (ಕೆಂಡಗಳ ಮೇಲೆ ಉಬ್ಬಿಸಿದ ಗೋದಿರೊಟ್ಟಿ) ಆಲೂ

ಸಬ್ಜಿ (ಬಟಾಟೆ ಪಲ್ಯ) ಮತ್ತು ದಾಲ (ಮಸಾಲೆಯಿಲ್ದೆ ಒಗ್ಗರಿಸಿದ ಬೇಳೆ) ಇವಿಷ್ಟೇ ತಟ್ಟೆಗೆ ಬಂದವು, ಹೊಸ ಪ್ರದೇಶದ ಊಟ ಸೇರುವುದೊ ಇಲ್ಲವೋ ಎಂದು ಮುಂಬಯಿಯಿಂದ ಹೊರಡುವಾಗಲೇ ಬೇಡೇಕರರ ಹಸಿಮೆಣಸಿನಕಾಯಿ, ಮತ್ತು ಲಿಂಬೆ ಹಣ್ಣಿನ ಉಪ್ಪಿನಕಾಯಿಯ ಎರಡು ದೊಡ್ಡ ಬಾಟ್ಲಿ ಒಯ್ದಿದ್ದೆ. ತಾಟಿನಲ್ಲಿ ಬಡಿಸಿದ್ದು ನೋಡಿ, ಮೆಲ್ಲನೆ ಅವನ್ನು ತಂದೆ. ಅದರಿಂದಾಗಿ ಊಟಕ್ಕೆ ರುಚಿ ಬಂದಿತು. ಎಲ್ಲರೂ ಉಪ್ಪಿನಕಾಯಿ ಬಹಳ ಚೆನ್ನಾಗಿದೆ ಎಂದು ತಿಂದರು. "ಮದ್ರಾಸಿಗಳಿಗೆ (ಅವರಿಗೆ ದಕ್ಷಿಣ ದೇಶದವರೆಲ್ಲ ಮದರಾಸಿಗಳೇ!) ಅನ್ನ, ಮೊಸರು ಸೇರುತ್ತದೆಂದು ಗೊತ್ತು, ಈಗ ಮಾಡಲಿಕ್ಕೆ ಆಗಲಿಲ್ಲ, ಸಂಜೆಗೆ ಅಕ್ಕಿ ತರಿಸಿ ಅನ್ನ ಮಾಡಿಸುತ್ತೇನೆ" ಎಂದಳು ಗೃಹಿಣಿ. ಟೇಬಲ್ಲಿನ ಮೇಲಿದ್ದ ತಂಬಿಗೆಯಿಂದ ಬೊಗಸೆಯಲ್ಲಿ ನೀರು ಹಾಕಿ ಕುಡಿದಾಗ ಇದಾಗಲೇ ರಾಜಸ್ಥಾನಿಯಾಗಿದ್ದೀರಲ್ಲ! ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಊಟ ಮುಗಿಸಿ ಬಿ.ಪಿ. ಅವರು ಜೇಬಿನಿಂದ ಕರವಸ್ತ್ರವೆಳೆದು, ಕೈ ಒರಸಿಕೊಂಡಾಗ ನನಗೆ ಆ ಪದ್ಧತಿ ಸರಿಬೀಳದೇ, ತಂಬಿಗೆಯಲ್ಲಿದ್ದ ಸ್ವಲ್ಪ ನೀರಿನಿಂದಲೇ ಕೈ ತೊಳೆಯಹೋದೆ. ಲಕ್ಷ್ಮಿ, ಲಗುಬಗೆಯಿಂದ ಬೇರೊಂದು ಪಾತ್ರೆಯಿಂದ ನೀರು ಹನಿಸಿ, ಕುಡಿಯುವ ನೀರಿನಿಂದ ರಾಜಸ್ಥಾನದಲ್ಲಿ ಕೈ ತೊಳೆಯಬಾರದೆಂದು ತೋರಿಸಿಕೊಟ್ಟಳು. ಅಷ್ಟರಲ್ಲಿ ನೀರಿನವ, ಹಿಡಿಕೆ ಕೂಡಿಸಿದ ಚಿಮಣಿ ಎಣ್ಣೆ ಡಬ್ಬಿಯಲ್ಲಿ ನೀರು ತಂದು ಅಡಿಗೆಯ ಬಾಗಿಲಲ್ಲಿ ಇಟ್ಟ. ಲಕ್ಷ್ಮಿ ಎರಡು ಡಬ್ಬಿ ನೀರು ಹಾಕಿಸಿಕೊಂಡು ಇಪ್ಪತ್ತು ಪೈಸೆ ಕೊಟ್ಟಾಗ, ಜೋಬನೇರದಲ್ಲಿ ನೀರಿನ ಮಹತ್ವ ತಿಳಿಯಿತು. ಇಲ್ಲಿ ನೀರನ್ನು ಹಾಲಿಗಿಂತ ಕಾಳಜಿಪೂರ್ವಕವಾಗಿ ಬಳಸಬೇಕು! ಎಂದು ಉಪದೇಶವಿತ್ತಳು ಲಕ್ಷ್ಮಿ. ಅವಳು ಹಿಂದೀ ಧಾಟಿಯಲ್ಲಿ ಇಂಗ್ಲೀಷು ಮಾತಾಡುವುದು ಕೇಳಲು ಬಲು ಮೋಜಾಗಿತ್ತು.

ಊಟದ ನಂತರ ಬಿ.ಪಿ. ಮಾಥುರರು ಸಿಗರೇಟು ಹೊತ್ತಿಸಿದರು. ನನಗಾಗಿ ಅಡಿಕೆ ಬಂದಿತು. ಅಡಿಕೆಯ ಅಭ್ಯಾಸವಿಲ್ಲವೆಂದಾಗ "ಚಟಗಳೆಲ್ಲ ನಿಮಗೇ ಮೀಸಲೇ?" ಎಂದು ಅರ್ಥ ಪೂರ್ಣವಾಗಿ ಲಕ್ಷ್ಮಿ ಗಂಡನತ್ತ ನೋಡಿದಳು. ಲೋಕಾಭಿರಾಮವಾಗಿ ಮಾತನಾಡುತ್ತ ಬಿ.ಪಿ. ಅವರು ಪ್ರವಾಸದ ವಿವರ ಕೇಳಿದರು. ಹಾಸಿಗೆ, ರಜಾಯಿಗಳಿಲ್ಲದೇ ನಾಲ್ಕು ದಿನ ಪ್ರವಸ ಮಾಡಿದೆ ಎಂದರೆ ಯಾರೂ ನಂಬಲಿಲ್ಲ. ನನಗಾಗಿ ಮನೆಯಾಗಲಿ, ಖೋಲಿಯಾಗಲಿ ಬೇಗ ಗೊತ್ತು ಮಾಡಿ! ಎಂದು ವಿನಂತಿಸಿಕೊಂಡಾಗ "ಈ ಊರಿನಲ್ಲಿ ಮನೆ ಸಿಗುವುದು ಅಷ್ಟೊಂದು ಸುಲಭವಲ್ಲ. ಅವಶ್ಯ ಪ್ರಯತ್ನಿಸುತ್ತೇನೆ. ಆದರೆ ಸಿಗುವ ತನಕ ನಮ್ಮ ಮನೆಯಲ್ಲಿ ಮನೆಯವನಂತೆಯೇ ಇರಬೇಕು. ಈಗ ಅಮೇರಿಕಕ್ಕೆ ಹೋದ ಡಾ. ಶರ್ಮಾ ಅವರೂ

ಮನೆ ಸಿಗುವ ತನಕ ನಮ್ಮ ಮನೆಯಲ್ಲಿಯೇ ಇದ್ದರು ಎಂದು, ಇದೇನು, ಈ ಹಳ್ಳಿಯಲ್ಲಿ ಹೊಸದಲ್ಲ ಎಂದು ವಿವರಿಸಿದರು. ಅಷ್ಟರಲ್ಲಿ 'ರಾಣಿ ಬಂದಳು, ರಾಣಿ ಬಂದಳು' ಎಂದು ಮಾಥುರರ ಮಗ ಪಿಂಟು ಕೂಗಿದ. ಸರದಾರ ಪಟೇಲರು ರಾಜರನ್ನೆಲ್ಲ ಅಡಗಿಸಿದಾಗ ಈ ರಾಣಿ ಎಲ್ಲಿಂದ ಈ ಹಳ್ಳಿಗೆ ಬಂದಳು ಎಂದು ಅಚ್ಚರಿಪಟ್ಟಾಗ ತಲೆತುಂಬ ಘೂಂಗಟ್ ಹೊದ್ದುಕೊಂಡ ಭಾಂಡಿ ತಿಕ್ಕುವವಳು ಅಡಿಗೆಯ ಮನೆಯ ಕಡೆಗೆ ನುಸುಳಿದಳು. ಅಷ್ಟರಲ್ಲಿ ಬಿ.ಪಿ... "ರಾಣಿ, ನಾನು ಹೇಳಿದ್ದು ನಿನ್ನ ಗಂಡನಿಗೆ ತಿಳಿಸಿದೆಯಾ?" ಎಂದು ಕೇಳಿದರು.; ನಮ್ಮನ್ನು ಮುಸುಕಿನೊಳಗಿಂದ ಸರಿಯಾಗಿ ನೋಡುತ್ತ ತನ್ನ ಮುಖವನ್ನು ಮಾತ್ರ ತೋರಿಸದೇ, 'ನಾನು ಹೇಳಿದಾಗ, ಸಿಟ್ಟಿಗೆದ್ದು, ಇದೇನು ಹೇಳುತ್ತಿ? ನಿನಗೆ ಬಲಶಾಲಿಯಾದ ಹೋರಿ ಬೇಕೋ ಇಲ್ಲವೇ ಚಕ್ಕಡಿಗೆ ಕಟ್ಟುವ ಎತ್ತು ಬೇಕೋ ಎಂದು ಕೂಗಾಡಿದರು" ಎಂದು ಒಳಗೆ ಹೋಗಿಬಿಟ್ಟಳು. ಈ ಮಾತನ್ನು ವಿವರಿಸುತ್ತ, "ಈಕೆಗೆ ಈಗಲೇ ಹದಿಮೂರು ಮಕ್ಕಳಿವೆ. ಈಗ ಹದಿನಾಲ್ಕನೆಯ ಸಲ ಗರ್ಭಿಣಿಯಿದ್ದಾಳೆ. ಪತಿಗೆ ಈಗಾದರೂ ಅಪರೇಶನ್ ಮಾಡಿ ಕೊಳ್ಳೆಂದು ಹೇಳಿಕಳಿಸಿದರೆ ಹೀಗೆ ಹೇಳಿದನಂತೆ. ಇವರ ಆರ್ಥಿಕ ಜೀವನ ನಮ್ಮದಕ್ಕಿಂತ ಎಷ್ಟು ಭಿನ್ನವಾಗಿದೆ ನೋಡಿ. ಹುಟ್ಟುವ ಪ್ರತಿ ಮಗುವಿಗೆ ಬಾಜರಾ ರೊಟ್ಟಿ (ಸಜ್ಜೆ ರೊಟ್ಟಿ) ಇದೆ! ಅನ್ನುತ್ತಾರೆ. ಮಗು ಬಾಲ್ಯದಿಂದಲೇ ದುಡಿದು ದಿನಕ್ಕೆ ಹತ್ತಾಣೆ- ಹನೆರಡಾಣೆ ಗಳಿಸಲು ಪ್ರಾರಂಭಿಸುತ್ತದೆ. ಪ್ರತಿಯೊಂದು ಮಗುವಿನಿಂದ ಮನೆಯ ಯಜಮಾನನ ಉತ್ಪನ್ನ ಬೆಳೆಯುವಂತೆ ಇದ್ದರೆ ಕುಟುಂಬ ಯೋಜನೆ ಮಾಡು ಎಂದರೆ ಅವನೇಕೆ ಮಾಡಿಯಾನು? ಇವರ ಜೀವನದ ಮಟ್ಟ ಏರಿದಾಗಲೇ ತಾವಾಗಿ ಕುಟುಂಬ ಯೋಜನೆಗೆ ಹಾತೊರೆದಾರು ಎಂಬ ಸತ್ಯ ನಮ್ಮ ಸರಕಾರದ ಗಮನಕ್ಕೆ ಬರುತ್ತಿಲ್ಲವಲ್ಲ!" ಎಂದು ಬಿ.ಪಿ. ಸತ್ಯವನ್ನೇ ನುಡಿದರು.

ಕೆಳಗಡೆ ಮೆಹತರ (ಭಂಗಿ) ಬಂದು ಮೇಲಿನಿಂದ ಒಗೆದ ಸಿಪ್ಪೆ, ಕಸ, ಕಡ್ಡಿಗಳನ್ನು ಡಬ್ಬಿಯಿಂದ ಎತ್ತಿ ತುಂಬಿಕೊಂಡು ಕಸಗೂಡಿಸಿ ಹೊರಟುಹೋದ. ಅಷ್ಟರಲ್ಲಿ ಕಾಲೇಜಿನ ಪ್ಯೂನ ಕನ್ಹೈಯಲಾಲ ಬಂದಿದ್ದರಿಂದ ಲಕ್ಷ್ಮಿ ಕಪಾಟಿನ ಬೀಗ ತೆಗೆದು ಹಣ ಎಣಿಸಿಕೊಟ್ಟು ಏನೇನು ಪೇಟೆಯಿಂದ ತರಬೇಕು ಎಂದು ಹೇಳಿದಳು. ಹದಿನೈದು ನಿಮಿಷದಲ್ಲಿ ಅವನು ಅಲೂ, ಬಂಯಗನ್, ಪ್ಯಾಜ (ಬಟಾಟೆ, ಬದನೆಕಾಯಿ, ಉಳ್ಳಾಗಡ್ಡೆ) ಅಮರೂದ (ಪೇರಲ ಹಣ್ಣು) ತಂದ. ಪ್ರತಿಯೊಂದು ಸಾಮಾನಿನ ಬೆಲೆಯನ್ನು ತಿರುತಿರುಗಿ ಕೇಳಿ ಹಣ ಎಣಿಸಿ ನೋಡಿ ಹಣವನ್ನು ಕಪಾಟಿನಲ್ಲಿಟ್ಟು ಲಕ್ಷ್ಮಿ ಬೀಗ ಜಡಿದಳು. ನಂತರ ಡಿಪಾರ್ಟಮೆಂಟಿನ ಮಾಲಿ, ಗುಲಾಬ ಬಂದ. ಬರುವಾಗ ಕೆಲವು ಹೂವಿನ ಗಿಡಗಳನ್ನು ಕಾಲೇಜಿನ ಹೂದೋಟದಿಂದ ತಂದಿದ್ದ.

ಜತೆಗೆ ತಂದ ಕ್ಷಾರಗಳನ್ನು ಹಾಕಿ ಕುಂಡಗಳಲ್ಲಿ ಅವನ್ನು ನಟ್ಟ. ನಂತರ ಗೋಧಿಯನ್ನು ಚಕ್ಕಿ (ಗಿರಣಿ)ಗೆ ಒಯ್ದು ಹಿಟ್ಟು ಮಡಿಸಿ ಕೊಂಡು ಬಂದ. 'ರಾತ್ರಿ ನಿದ್ರೆ ಸರಿಯಾಗಿರಲಿಕ್ಕಿಲ್ಲ, ಸ್ವಲ್ಪ ವಿಶ್ರಾಂತಿಸಿರಿ' ಎಂದು ನನಗೆ ಬಿ.ಪಿ. ಹೇಳಿ ತಾವೂ ವಿಶ್ರಾಂತಿ ಪಡೆಯಲು ಹೋದರು.

ಎದ್ದಾಗ ಹರಿಬಕ್ಷ ಸ್ಟೋವ ಹೊತ್ತಿಸಿ ಚಹಾಕ್ಕೆ ನೀರು ಇಟ್ಟಿದ್ದ. ಮೊದಲೊಮ್ಮೆ, ಕಿಟ್ಲಿ ಕಪ್ಪುಗಳನ್ನೆಲ್ಲ ಬಿಸಿನೀರಿನಿಂದ ತೊಳೆದು ನಂತರ ಮತ್ತೆ ಚಹಕ್ಕೆಂದು ಎಸರಿಟ್ಟ. ಅದು ಕುದಿದರೂ ಕಾಲೇಜಿನ ಡೇರಿಯ ಹಾಲು ಬಂದಿರಲಿಲ್ಲವಾದ್ದರಿಂದ ಸ್ಟೋವ ಆರಿಸಿದ. ಸೀಟಿಯ ಸಪ್ಪಳ, ಭಾರವಾದ ಕ್ಯಾನ ಕೆಳಗಿಟ್ಟ ಸಪ್ಪಳದಿಂದ ಹಾಲು ಬಂದಿದೆ ಎಂದು ತಿಳಿಯಿತು. ಎಮ್ಮೆಯ, ಆಕಳ ಹಾಲಿಗಾಗಿ ಎರಡೆರಡು ಪಾತ್ರೆ ಒಯ್ದು, ಇಷ್ಟೇಕೆ ತಡವೆಂದು ಹಾಲಿನವನನ್ನು ಬೆದರಿಸಿ, ತಿರುಗಿ ಸ್ಟೋವ ಹತ್ತಿಸಿ, ಹಾಲುಕಾಸಿ, ಎಸರಿಟ್ಟು ಹರಿಬಕ್ಷ ಚಹ ತಯಾರಿಸಿದಾಗ ಸೂರ್ಯ, ಪಡುವಣದಲ್ಲಿ ಮುಳುಗುವದರಲ್ಲಿದ್ದ. ಲಕ್ಷ್ಮಿ ಬೀಗದೊಳಗಿಂದ ದಾಲಮೋಟ (ಹುರಿದ ಮಸೂರಿ ಕಾಳು ಮತ್ತು ತೀರ ತೆಳ್ಳಗಿನ ಸೇವುಗಳ ಮಿಶ್ರಣ), ತಂದು ಟೇಬಲ ಮೇಲಿಟ್ಟು, ತಾನು ತಿನ್ನುತ್ತ ನಮಗೆಲ್ಲ ಚಹ ತಯಾರಿಸಿದಳು. ನಾವು ಪ್ಲೇಟಿಗೆ ಕೈಹಾಕುವ ಹೊತ್ತಿಗೆ ಮಕ್ಕಳೆಲ್ಲ ಮುಗಿಸಿಬಿಟ್ಟಿದ್ದರು. ತೀರ ಕಡಿಮೆ ಸಕ್ಕರೆ, ಹಾಲು ಸೇರಿಸಿದ ಚಹ ನಾಲಿಗೆಗೆ ರೂಢಿ ಇಲ್ಲದ್ದರಿಂದ ಸೇರಲಿಲ್ಲ. ಲಕ್ಷ್ಮೀಪತಿ ಮಾತ್ರ ಸಿಗರೇಟು ಸೇದುತ್ತ ತೃಪ್ತಿಯಿಂದ ಮೂರು ಕಪ್ ಚಹ ಸೇವಿಸಿದರು. ಅಷ್ಟರಲ್ಲಿ ಗೋವಿಜ್ಞಾನದ ಹಿರಿಯ ಪ್ರಾಧ್ಯಾಪಕರಾದ ಡಾ. ರಾವತರು ಅಲ್ಲಿ ಬಂದರು. ಅವರೊಡನೆ ಇನ್ನೊಮ್ಮೆ ಚಹವಾಯಿತು.

ರಾವತ್, ಬಿ.ಪಿ. ಸೇರಿ ಕಾಲೇಜಿನ, ವಿಶ್ವವಿದ್ಯಾಲಯದ ರಾಜಕಾರಣವನ್ನು ಬಹಳ ಹೊತ್ತು ಮಾತನಾಡುತ್ತ ಕುಳಿತರು. ಅವರ ಮಾತಿನ ಮೇಲಿನಿಂದ ರಾವತರು ಈಗ ರೀಡರ್ ಇದ್ದಾರೆಂದೂ ಪ್ರಾಧ್ಯಾಪಕ ಸ್ಥಳಕ್ಕೆ ಅರ್ಜಿ ಹಾಕಿದ್ದರೆಂದೂ ಇವರು ಬರೇ ಎಮ್. ಎಸ್, ಸಿ. ಇದ್ದುದರಿಂದ ವಿರೋಧಿ ಪಂಗಡದವರು ತಮ್ಮ ಪಿ. ಎಚ್. ಡಿ. ಆದ ಉಮೇದುವಾರನನ್ನು ಆರಿಸಲಿಕ್ಕೆ ಒತ್ತಾಯ ತರಬಹುದೆಂದು ರಾವತರ ಸಂಶಯವಿದೆಯೆಂದೂ ತಿಳಿಯಿತು. ರಾವತರು ರಜಪೂತರಿದ್ದರಿಂದ ರಜಪೂತ ಸಿನೇಟರರ ಬೆಂಬಲವೆಲ್ಲ ಅವರಿಗೆ ಇದೆಯೆಂದರು. ಅವರು ಹೊರಟುಹೋದ ನಂತರ ಬಿ.ಪಿ. ತನಗೆ ರಾಜಕಾರಣ ಎಳ್ಳಷ್ಟೂ ಸೇರದೆಂದೂ ಆದರೆ ಹಿರಿಯ ಪ್ರಾಧ್ಯಾಪಕರು ಅಷ್ಟೊಂದು ಮಾತನಾಡುತ್ತಿದ್ದಾಗ ತಾನು ಸುಮ್ಮನಿರಲಾಗಲಿಲ್ಲವೆಂದು ಕ್ಷಮೆ ಕೋರಿದರು. ರಾವತರು ಬಹಳ ಮುಂದುವರಿದ ವಿಚಾರದವರು, ಮಕ್ಕಳಿಗೆ

ಡೆಹರಾಡೂನಿನ ಸೈನಿಕ ಶಾಲೆಯಲ್ಲಿ ಶಿಕ್ಷಣ ಕೊಡಿಸಿದ್ದಾರೆ, ಹಿರಿಯ ಮಗಳು ಅತಿ ಚತುರೆ, ಕುದುರೆಯಿಂದ ವಿಮಾನದವರೆಗೆ ಎಲ್ಲವನ್ನೂ ನಡೆಸಬಲ್ಲಳು, ಅವಳ ತಾಯಿ ಅತಿ ಸುಂದರಿ, ಮನೆಯನ್ನು ಸುಂದರವಾಗಿ ಇಟ್ಟಿದ್ದಾರೆ ಪರೋಕ್ಷ ಎಂದು ಅವರ ಕುಟುಂಬದ ಪರಿಚಯ ಮಾಡಿಕೊಟ್ಟರು.

ಹೊಸಬರು ಜೋಬನೇರಕ್ಕೆ ಬಂದ ದಿನ ಡೀನ ಸಾಹೇಬರನ್ನು ಬಂಗಲೆಯಲ್ಲಿ ಭೆಟ್ಟಿಯಾಗುವುದು ರೂಢಿಯಾಗಿಬಿಟ್ಟಿದೆಯಂತೆ. ಹೀಗಾಗಿ ಅವರನ್ನು ಕಂಡುಬರೋಣವೆಂದು ಬಿ.ಪಿ. ಬಟ್ಟೆ ಬದಲಿಸಲು ಹೋದರು. ಹೊರಡುತ್ತಿದ್ದಂತೆ ಲಕ್ಷ್ಮಿ "ಡೀನರ ಶ್ರೀಮತಿಜಿ, ಕಾಲೇಜಿನ ಶಿಕ್ಷಕ ವರ್ಗಕ್ಕೆಲ್ಲ 'ಮಾತಾಜಿ'ಯಾಗಿದ್ದಾರೆ. ಅವರು ಒಲಿದರೆ ನಾರಿ, ಮುನಿದರೆ ಮಾರಿ, ಆದ್ದರಿಂದ ಅವರಿಗೆ ದೊಡ್ಡ ನಮಸ್ಕಾರ ಹಾಕಿಬನ್ನಿ" ಎಂದು ಕಿವಿಮಾತು ಹೇಳಿದಳು. ನಾವು ಡೀನರ ಮನೆ ತಲುಪಿದಾಗ ಅವರು ಹೂದೋಟದಲ್ಲಿ ತಿರುಗಾಡುತ್ತಿದ್ದರು. ಬಂದವರಿಗಾಗಿ ಕೂಡ್ರಲು ಹಾಕಿದ ಕುರ್ಚಿಗಳ ಮೇಲೆ ಕುಳಿತೆವು. ಅವರೂ ಬಂದು ಕುಳಿತು ಲೋಕಾಭಿರಾಮವಾಗಿ ಮಾತನಾಡಲು ಪ್ರಾರಂಭಿಸಿದರು. ಅಷ್ಟರಲ್ಲಿ ಶ್ರೀಮತಿ ಡೀನರೂ ಬಂದು ಸೇರಿ ಸಂಭಾಷಣೆ ಆರಂಭಿಸಿಯೇ ಬಿಟ್ಟರು. ಅವರು ಉಟ್ಟ ಬಣ್ಣದ ರೇಶ್ಮೆ ಸೀರೆ, ಶ್ವೇತ ಮೈಬಣ್ಣಗಳಿಂದ ಒಮ್ಮೆಲೆ ಪಾಶ್ಚಾತ್ಯ ಮಹಿಳೆಯಂತೆ ಕಂಡರೂ ಹತ್ತಿರದಿಂದ ನೋಡಿದಾಗ ತೊನ್ನು ರೋಗದಿಂದ ಅವಳ ಮೈಯೆಲ್ಲ ಬಿಳುಪು ಒಡೆದದ್ದು ಗೊತ್ತಾಯಿತು. ಹೆಚ್ಚಿನ ಸೌಜನ್ಯದಿಂದ ತಲೆಬಾಗಿ ನಮಿಸಿದೆ. ಅದರಿಂದ ಪ್ರಸನ್ನರಾಗಿ ಬರ್ಫಿ, ದಾಳಮೋಟ, ಚಹಾ ಕೊಟ್ಟು ಸತ್ಕರಿಸಿದರು. "ವಿದೇಶದಿಂದ ಒಮ್ಮೆಲೇ ಜೋಬನೇರದಂತಹ ಹಳ್ಳಿಗೆ ಬಂದದ್ದರಿಂದ ನಿಮಗೆ ಹೇಗೋ ಅನಿಸುತ್ತಿರಬೇಕು. ಸಿನೆಮಾ, ನಾಟಕಗಳಂತಹ ಯಾವುದೇ ವಿಧದ ವಿನೋದಾವಳಿಗಳು ಇಲ್ಲಿ ಇಲ್ಲ. ಚಹ ಕುಡಿದು ಹರಟುವದೇ ಹಳ್ಳಿಯ ಜನರ ರಂಜನೆಯಾಗಿದೆ.......... ಎಂಥ ಸಹಾಯ ಬೇಕಾದರೂ ಬಿ.ಪಿ ಗೆ ಹೇಳಿ, ಇಲ್ಲವೆ ಯಾವ ಸಂಕೋಚವಿಲ್ಲದೇ ನಮಗೂ ಹೇಳಿ"ಡೀನರೆಂದರು. ನಮಸ್ಕಾರ ಹೇಳಿ ನಾವು ಡೀನ ದಂಪತಿಗಳನ್ನು ಬೀಳ್ಕೊಂಡೆವು. ದಾರಿಯಲ್ಲಿ, ಫುಲವಾರಿಲಾಲರಲ್ಲಿ ಹರಟೆ ಮುಗಿಸಿ ಮನೆಗೆ ಹೊರಟಾಗ ಬಿ.ಪಿ. ಡಿಪಾರ್ಟಮೆಂಟಿನಲ್ಲಿ ಅಧ್ಯಾಪಕರಾಗಿದ್ದ ಕೈಲಾಸ್ ಶ್ರೀವಾಸ್ತವರು ಭೆಟ್ಟಿಯಾದರು. ನವಯುವತಿಯಂತೆ ಕಾಲಿಗೆ ಗೆಜ್ಜೆ, ಸೊಂಟಕ್ಕೆ ಪಟ್ಟಿ ಧರಿಸಿ ಅತ್ಯಾಧುನಿಕ ರೀತಿಯಲ್ಲಿ ಸಿಂಗರಿಸಿಕೊಂಡು ಅವರ ಜೊತೆಗೆ ಬರುತ್ತಿದ್ದವಳು ಅವರ ಪತ್ನಿ ಎಂದಾಗ ನಂಬಲಾಗಲಿಲ್ಲ, ಅವರು ಮಾತಾಜಿಯ ಅಣ್ಣನ ಮಗನಾಗಿದ್ದರೆ, ಪತ್ನಿ ರಾಜಸ್ಥಾನದ ಚೀಫ್ ಎಂಜಿನಿಯರರ ಮಗಳೆಂದು ಗೊತ್ತಾಯಿತು.

ದಾರಿಯಲ್ಲಿ ಕೈಲಾಸ್ ಶ್ರೀವಾಸ್ತವ ದಂಪತಿಗಳು ಸಿಕ್ಕಿದ್ದರೆಂದು ತಿಳಿದ ಲಕ್ಷ್ಮಿ ಹೆಚ್ಚಿನ ವಿವರಣೆ ನೀಡಿದಳು. "ಬಟ್ಟೆಬರೆಯ ಬಗ್ಗೆ ಕೈಲಾಸ್ ಅವರಷ್ಟು ಯಾವ ನಟ ಶ್ರೇಷ್ಠರೂ ಹೆಣಗುತ್ತಿಲ್ಲ, ತಲೆ, ಭರದಿಂದ ಬೋಳಾಗುತ್ತಿದ್ದರೂ ಬಟ್ಟೆ ಬರೆಗಳು ಭಾರಿ ಅಚ್ಚು ಕಟ್ಟಾಗಿರಬೇಕು. ಅವರು ಮೂರೋ ಆರೋ ಕರವಸ್ತ್ರ ಇಟ್ಟಿರುತ್ತಾರೆ. ಕೋಟಿನ ಕಿಸೆಯಲ್ಲಿರುವುದು ತೋರಿಕೆಯ ಕರವಸ್ತ್ರ. ಎಡಜೇಬಿನಲ್ಲಿರುವುದು ತಲೆ ಒರಸಿಕೊಳ್ಳುವುದು. ಬಲ ಕಿಸೆಯಲ್ಲಿಟ್ಟಿರುವುದು ಬೆವರು ಒರೆಸಿಕೊಳ್ಳುವುದು. ಪ್ಯಾಂಟಿನ ಹಿಂದಿನ ಕಿಸೆಯಲ್ಲಿರುವುದು ಬೂಟ್ ಒರಸಿಕೊಳ್ಳುವುದಂತೆ! ಬೂಟಿನಲ್ಲಿ ಮುಖಕಾಣುವಷ್ಟು ಪಾಲಿಷ್ ಮಾಡಿಸುತ್ತಾರೆ. ಸ್ವಲ್ಪ ಧೂಳು ಕೂತರೂ, ರಸ್ತೆಯ ಪಕ್ಕದಲ್ಲೇ ನಿಂತು ಬೂಟು ಒರಸಿ ಮತ್ತೆ ಮುಂದೆ ಸಾಗುವರಂತೆ! ಅವರ ಹಿರಿಯ ಮಗಳಿಗೆ ಹದಿನಾರು ವರ್ಷ ಪ್ರಾಯವಾದರೂ ಅವರ ತಾಯಿ ತಾನಿನ್ನೂ ಕುಮಾರಿಯಂತೆ ವರ್ತಿಸುತ್ತಾಳೆ. ಜೋಬನೇರದ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಅವಳ ವೇಷ ಭೂಷಣಗಳನ್ನೆಲ್ಲ ವಿದ್ಯಾರ್ಥಿನಿಯರು ಅನುಕರಿಸಲು ಯತ್ನಿಸುತ್ತಾರೆ. ಸ್ಕೂಲಿಗೆ ಹೋದೊಡನೆ ಪತ್ರ ಬರೆದು ವಿದ್ಯಾರ್ಥಿಗಳ ಕೈಯಲ್ಲಿ ಕೊಟ್ಟು ಪತಿದೇವರಿಗೆ ತಲುಪಿಸಲು ಹೇಳುತ್ತಾಳೆ. ಅದಕ್ಕೆ ಉತ್ತರ ಬರೆದು ಚಪರಾಸಿಯ ಕೈಯಲ್ಲಿ ಪತಿ ಕಳಿಸುತ್ತಾರೆ. ಇಬ್ಬರೂ ನೌಕರಿ ಮಾಡುತ್ತಿದ್ದರೂ ಬರುವ ಹಣ, ವೇಷ ಭೂಷಣಗಳಿಗ ಸಾಲದೇ ಜಯಪುರದ ಮಾರವಾಡಿಗಳ ಹತ್ತಿರ ಸಾಲ ಮಾಡಿದ್ದಾರೆ. ಮಗನನ್ನು ಡೆಹರಾಡೂನಿನ ಸೈನಿಕ ಸ್ಕೂಲಿಗೆ ಸೇರಿಸಿದೆ. ಅವನು ಎರಡು ವರ್ಷ ಸತತ ಫೇಲಾದನಂತೆ. ಈ ದಂಪತಿಗಳು ತಮಗೆ ಯೋಗ್ಯರೆನಿಸಿದವರ ಮನೆಗಷ್ಟೇ ಹೋಗುತ್ತಾರೆ............." ಎಂದು ಲಕ್ಷ್ಮಿ ಏನೇನೋ ಹೇಳಲಾರಂಭಿಸಿದಾಗ "ಏನು ಇಂದು ಊಟಗೀಟ ಇಲ್ಲವೇ? ಬಡಿಸುತ್ತೀಯಾ ಅಥವಾ ಮಾತಿನಿಂದಲೇ ಹೊಟ್ಟೆ ತುಂಬಿಸುತ್ತೀಯಾ?" ಎಂದು ಬಿ.ಪಿ. ಹೇಳಿದಾಗ ಲಗುಬಗೆಯಿಂದ ತಾಟು, ಅಡಿಗೆಗಳು ಟೇಬಲ್ಲಿಗೆ ಬಂದವು. ಅಡಿಗೆಯಲ್ಲಿ ಅನ್ನವೊಂದು ವಿಶೇಷವಿತ್ತು. ಉಳಿದ ಅನ್ನವೆಲ್ಲ ಸ್ವಲ್ಪ ಸ್ವಲ್ಪವೇ ಬಡಿಸಿಕೊಂಡು ಊಟಮಾಡುತ್ತಲೇ ಇದ್ದ ಪತ್ನಿಗೆ "ಕೊಬ್ಬಿಗೆಅನ್ನ ಒಳ್ಳೆಯದಲ್ಲ"ವೆಂದು ಪತಿ ಎಚ್ಚರಿಸಿದರು. ಆದರೂ ಅಡಿಗೆ ಮಿಗಿಸಲು ಮನಸ್ಸಾಗದೇ ಲಕ್ಷ್ಮಿ ಎಲ್ಲವನ್ನೂ ಖಾಲಿಮಾಡಿಯೇ ಎದ್ದಳು.

ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿಡಲೆಂದು ಊಟವಾದ ಮೇಲೆ ಬಿಸಿ ಬಿಸಿ ಕೆನೆಯಲ್ಲಿ ಕಾಫಿ ಸಿದ್ಧವಾಯಿತು. ನಿದ್ರೆ ಬಾರದೆಂದು ನಾನು ಕುಡಿಯದಿದ್ದರೂ ಉಳಿದವರೆಲ್ಲ ಕುಡಿದರು. ನನಗೆ 'ನವಾರ'ದ ಪಟ್ಟಿಗಳ ಮಂಚದ ಮೇಲೆ ದಪ್ಪವಾದ ಹಾಸಿಗೆ. ಹೊದ್ದುಕೊಳ್ಳಲು ರಗ್ ಮತ್ತು ರಜಾಯಿಗಳು ಸಿದ್ಧವಾಗಿದ್ದವು. ಮಲಗುವ

ಮೊದಲು ಅನುಭವಗಳನ್ನೆಲ್ಲ ವರ್ಣಿಸಿ ಮನೆಗೆ ಪತ್ರ ಬರೆದೆ. ಹಾಸಿಗೆ, ತುಂಬ ಬೆಚ್ಚಗಿದ್ದುದರಿಂದ ಬೇಗನೆ ನಿದ್ರೆ ಬರಲಿಲ್ಲ. ಮಾಥುರ ದಂಪತಿಗಳ ಆದರದ ಸ್ವಾಗತವಿಲ್ಲದಿದ್ದರೆ ಈ ಹಳ್ಳಿಯಲ್ಲಿ ಬದುಕುವುದು ಎಷ್ಟು ಕಠಿಣವಾಗುತ್ತಿತ್ತು ಎನಿಸದೇ ಇರಲಿಲ್ಲ. ಯಾವಾಗ ನಿದ್ರೆ ಆವರಿಸಿತೆಂದು ತಿಳಿಯಲೇ ಇಲ್ಲ. ಮುಂಜಾನೆ ಐದು ಗಂಟೆಗೆ ಹಾಲಿನವನು ಸೀಟಿ ಊದಿದಾಗ ಎಚ್ಚರವಾಯಿತು. ಆದರೆ ಹಾಲು ಹಾಕಿಸಿಕೊಳ್ಳಲು ಪಾತ್ರೆ ಕೂಪನ್ನುಗಳು ಹತ್ತಿರ ಇಲ್ಲದ್ದರಿಂದ ನಾನು ಎದ್ದು ಪ್ರಯೋಜನವಾಗುವಂತಿರಲಿಲ್ಲ. ಬಹಳ ಹೊತ್ತು ಅತ ಸೀಟಿ ಬಾರಿಸಿದ ನಂತರ ಬಿ.ಪಿ. ಎದ್ದು ಹಾಲು ಹಾಕಿಸಿಕೊಂಡು ತಿರುಗಿ ಮಲಗಿದರು. ಹರಿಬಕ್ಷ ಬೆಳಿಗ್ಗೆ ಬಂದು ಚಹ ಮಾಡಿ ಎಬ್ಬಿಸಿದಾಗ ಒಬ್ಬೊಬ್ಬರೇ ಎದ್ದು ಬೇಗ ಪ್ರಾತರ್ವಿಧಿಗಳನ್ನು ಮುಗಿಸಿ, ಚಹಾಕ್ಕೆ ತಯಾರಾದರು.

೫. ಕಾಲೇಜಿನಲ್ಲಿ

ಬಿ.ಪಿ.ಯವರೊಡನೆ ಕೀಟಶಾಸ್ತ್ರದ ವಿಭಾಗಕ್ಕೆ ಹೊರಟಾಗ ಸಸ್ಯಶಾಸ್ತ್ರ ವಿಭಾಗದ ಹೂ ದೋಟದಿಂದ "ಬಿ.ಪಿ.ಯವರಿಗೆ ನಮಸ್ಕಾರ" ಎಂದು ಯಾರೋ ಕರೆದದ್ದರಿಂದ ಅಲ್ಲಿ ಹೋಗಬೇಕಾಯಿತು. ಎಳೆಯ ಬಿಸಿಲಲ್ಲಿ ಹುರಿದ ಸೇಂಗಾ ತಿನ್ನುತ್ತ, ರೇಡಿಯೋ ಸಂಗೀತ ಕೇಳುತ್ತ ಟೇಬಲ್ಲಿನ ಮೇಲೆ ಹರಡಿದ್ದ ವಿದ್ಯಾರ್ಥಿಗಳ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತಿದ್ದುವುದನ್ನೂ ಬಿಟ್ಟು ಡಾ. ಸುಧೀರ ಶ್ರೀವಾಸ್ತವರು ನಮ್ಮನ್ನು ಮಾತನಾಡಿಸಿದ್ದರು. ಚಪ್ರಾಸಿ ರಾಮನಿವಾಸ ಇನ್ನೆರಡು ಕುರ್ಚಿ ತಂದು ಹಾಕಿದ. ಹೊಸಬನ ಪರಿಚಯದ ನಂತರ ಇಬ್ಬರಿಗೂ ಸೇಂಗಾ ಕಾಳು ಬಂದವು. ಅಮೇರಿಕೆಯಲ್ಲಿ ಎರಡು ವರ್ಷ ಕಳೆದು ಬಂದಿದ್ದ ಶ್ರೀವಾಸ್ತವರು ನನ್ನ ಅಮೇರಿಕೆಯ ವಾಸ್ತವ್ಯದ ಬಗ್ಗೆ ಕೇಳುತ್ತಿರುವಾಗಲೇ "ನನ್ನ ಬೆನ್ನು ನನ್ನನ್ನು ಕೊಲ್ಲುತ್ತಿದೆ" ಎಂದು ಹೇಳುತ್ತ ಡಾ. ಪಟೇಲರೂ ನಮ್ಮನ್ನು ಕೂಡಿಕೊಂಡರು. ಅವರಿಗೆ ಬೆನ್ನಹುರಿಯ ನೋವು ಇರುವುದರಿಂದ ತಾವು ಹೋಗುವಲ್ಲಿ ಮೃದು ದಿಂಬುವೊಂದನ್ನು ತೆಗೆದುಕೊಂಡೇ ಅಡ್ಡಾಡುತ್ತಾರೆ. ಎಲ್ಲರೂ ಸೇರಿ ಅಮೇರಿಕದ ಶಿಕ್ಷಣ ಪದ್ಧತಿ, ಶಿಕ್ಷಕ - ವಿದ್ಯಾರ್ಥಿಗಳ ನಡುವೆ ಇರುವ ಅತ್ಯಲ್ಪ ಅಂತರ, ಅಲ್ಲಿಯ ವಿಶ್ವವಿದ್ಯಾನಿಲಯಗಳ ಹಿತವಾದ ವಾತಾವರಣದ ಕುರಿತು ಮಾತನಾಡುತ್ತಿರುವಾಗ ಬಿಸಿ ಬಿಸಿ ಚಹ ಬಂದಿತು. ಅಷ್ಟರಲ್ಲಿ ಪ್ರಸಾರ ವಿಭಾಗದ ಡಾ. ಪ್ರಸಾದರೂ ಬಂದು ಹರಟೆಯಲ್ಲಿ ಸೇರಿಕೊಂಡರು. ಅಮೇರಿಕೆಯಲ್ಲಿ ಸ್ತ್ರೀ-ಪುರುಷರ ಸಂಬಂಧ ಕುರಿತು ಮಾತನಾಡುತ್ತ ತಮ್ಮದೊಂದು ಅನುಭವ ಹೇಳಿದರು. ಅವರ ಡಾಕ್ಟರೇಟದ ಪ್ರಬಂಧದ ಟಾಯಪಿಂಗ್ ನಡೆದಿತ್ತಂತೆ. ಒಂದು ದಿನ ವಿಪರೀತ ಚಳಿ ಬಿದ್ದಿತ್ತು. ದೂರದಿಂದ ಕಾರನ್ನು ಓಡಿಸಿಕೊಂಡು ಬಂದ ಯುವತಿ ಟಾಯಪಿಸ್ಟ ತನ್ನ ಕೈಗಳು ಸೆಟೆದುಹೋಗಿವೆಯೆಂದಳಂತೆ. ತಮಾಷೆಗಾಗಿ ತಾವು 'ನಿನ್ನ ಕೈಗಳನ್ನು ಬೆಚ್ಚಗೆ ಮಾಡಲೇ?' ಎಂದು ಕೇಳಿದಾಗ 'ದಮ್ಮಯ್ಯ ಅಷ್ಟು ಉಪಕಾರ ಮಾಡಿ' ಎನ್ನುತ್ತ ತನ್ನ ಕೈಗಳನ್ನು ಮುಂದೆ ಚಾಚಿದಳಂತೆ. ತಮ್ಮ ಬಿಸಿರಕ್ತದ ಕೈಗಳಿಂದ ತಿಕ್ಕಿ ಕಾವು ಕೊಡುವದರಲ್ಲಿ ಅದರ ಬಿಸಿ ಅವಳ ದೇಹವನ್ನೇ ವ್ಯಾಪಿಸಿರಬೇಕು. 'ಮರುಕ್ಷಣ ನನ್ನ ತೋಳುಗಳಲ್ಲಿ ಆಕೆ ಬಂಧಿತಳಾಗಿದ್ದಳು' ಎಂದು ಹೇಳಿ ಕಿಲಕಿಲನೆ ನಕ್ಕರು. ಕಾಡಿಗೆಗಿಂತ ಕಪ್ಪು ಇದ್ದ ಈ ವಾಮನ ಮೂರ್ತಿಯ ಮಾತಿನಲ್ಲಿ ವಿಶ್ವಾಸ

ಹುಟ್ಟದೇ ನಾವೆಲ್ಲ ನಕ್ಕೆವು. ಅಲ್ಲಿ ಸೇರಿದವರೆಲ್ಲ ಅಮೇರಿಕೆಯ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಬಂದವರಿದ್ದೆವು. ಭಾರತದಲ್ಲಿ ಈ ಮೊದಲು ಎಲ್ಲಿಯೂ ನೋಡುದ ಮುಕ್ತ ವಾಚಾಳಿತನ ಬೆರಗುಗೊಳಿಸಿತು, ಅಲ್ಹಾಬಾದ ವಿಶ್ವವಿದ್ಯಾಲಯದಲ್ಲಿ ಓದಿದ ಡಾ. ಶ್ರೀ ವಾಸ್ತವರು ಅಲ್ಲಿಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ವಾತಂತ್ರ್ಯವಿದ್ದುದನ್ನು ನೆನೆದರು. ಪ್ರಾಧ್ಯಾಪಕರನ್ನು ಸಭೆಗಳಲ್ಲಿ ಟೀಕಿಸುತ್ತಿದ್ದರೂ ಅವರು ವಿರೋಧಿಸುತ್ತಿರಲಿಲ್ಲವಂತೆ. ವಿದ್ಯಾರ್ಥಿಗಳ ಮೇಲೆ ಕಿನಿಸೂ ಇಟ್ಟುಕೊಳ್ಳುತ್ತಿರಲಿಲ್ಲವೆಂದರು. ಬಿ.ಪಿ. ಅವರು ಅದೇ ವಿಶ್ವವಿದ್ಯಾಲಯದವರು. ಡಾ. ಪ್ರಸಾದರು ಬಿಹಾರದವರಾದರೆ ಡಾ. ಪಟೇಲ ಅಹಮದಾಬಾದದಿಂದ ಬಂದವರಿದ್ದರು. ಡಾ. ಪ್ರಸಾದರು, ವಿದ್ಯಾರ್ಥಿಗಳ ಕಲ್ಯಾಣದ ಡೀನರಾಗಿದ್ದರಿಂದ ಹಾಸ್ಟೇಲಿಗೆ ಹೋಗಿಬರಲು ಎದ್ದರು. ಬಿ.ಪಿ.ಯವರು ಡೀನರ ಭೆಟ್ಟಿಗೆಂದು ಎದ್ದಾಗ ನಾನೂ ಎದ್ದೆ. ಸಂಜೆಗೆ ನನ್ನನ್ನು ಕರೆದುಕೊಂಡು ತಮ್ಮಲ್ಲಿ ಬರುವಂತೆ ಡಾ. ಶ್ರೀವಾಸ್ತವರು ಬಿ.ಪಿ. ಅವರಿಗೆ ಆಮಂತ್ರಣವಿತ್ತರು. ಬಿ.ಪಿ - ಡೀನರ ಸಂಭಾಷಣೆ ಕೇಳಲು ಆಸಕ್ತಿಯಿಲ್ಲದೇ ಕಾಲೇಜಿನ ಆವಾರವನ್ನು ನೋಡಿ ಬರುತ್ತೇನೆಂದೆ. ಅವರು ಪ್ರಯೋಗಾಲಯದ ಸಹಾಯಕ ದಾಧೀಚನನ್ನು ಜೊತೆಗೆ ಕಳಿಸಿಕೊಟ್ಟರು.

ಕೀಟ ವಿಭಾಗದಿಂದಲೇ ಪ್ರಾರಂಭಿಸಿದೆವು. ಇಬ್ಬರು ಅಧ್ಯಾಪಕರು ಇನ್ನೂ ಬಂದಿರಲಿಲ್ಲ. ಬಂದವರಲ್ಲಿ ಒಬ್ಬರು ಬ್ಯಾಂಕಿಗೆ ಹೋಗಿದ್ದರೆ, ಇನ್ನೊಬ್ಬರು ಕಾಲೇಜಿನ ಸಹಕಾರೀ ಭಂಡಾರದಲ್ಲಿ ಸಾಮಾನುಗಳನ್ನು ಕೊಳ್ಳಲು ಹೋಗಿದ್ದರು. ಹೀಗಾಗಿ ಟೈಪಿಸ್ಟ್ ಶೇಖರಬಾಬು, ಪ್ರಯೋಗಾಲಯದ ಇನ್ನೊಬ್ಬ ಸಹಾಯಕ ಭುಟಿಯಾ, ಪ್ರಾಣಿ ಸಂಗ್ರಾಹಕ ಸೋನಿ ಮತ್ತು ಇತರ ಸಹೋದ್ಯೋಗಿಗಳ ಭೇಟಿಯನ್ನು ದಾಧೀಚ ಮಾಡಿಸಿದ ನಂತರ ಹೂ ಹಣ್ಣು ವಿಭಾಗಕ್ಕೆ ಹೋದೆವು. ಅದರ ಮುಖ್ಯಸ್ಥರು ಜಯಪುರಕ್ಕೆ ಹೋಗಿದ್ದರು. ದನಕರುಗಳ ಮತ್ತು ಹೈನು ಶಾಸ್ತ್ರದ ಖಾತೆಯಲ್ಲಿ ವಿದ್ಯಾರ್ಥಿಗಳಿಗೆ ಐಸ್ ಕ್ರೀಂ ಮಾಡುವ ವಿಧಾನ ಕಲಿಸಿಯಾದ ಮೇಲೆ ಅದನ್ನು ತಿನ್ನುವುದರಲ್ಲಿ ಅಧ್ಯಾಪಕ ವರ್ಗ ಮಗ್ನವಾಗಿತ್ತು. ಕಾಯಿಪಲ್ಯ ವಿಭಾಗದಲ್ಲಿ ಗಜ್ಜರಿಯಿಂದ ಉತ್ತಮ ಪೇಯ ತಯಾರಿಸುವ ಪ್ರಯೋಗ ನಡೆದಿತ್ತು. ಸಕ್ಕರೆ, ಎಸೆನ್ಸ ಸೇರಿಸಿದ ಗಜ್ಜರಿ ರಸದಲ್ಲಿ ನಮಗೂ ಇಷ್ಟು ಪಾಲು ಸಿಕ್ಕಿತು. ಇಂಜಿನಿಯರಿಂಗ ವಿಭಾಗದಲ್ಲಿ ಚಹಾ ಪಾರ್ಟಿ ನಡೆದಿತ್ತು. ವಿಸ್ತರಣಾ ವಿಭಾಗದಲ್ಲಿ ಕಲಾಕಾರನೆಂದು ಕೆಲಸ ಮಾಡುತ್ತಿದ್ದ ಘಾಟಕನಿಗೆ ನಾನು ಆತ್ಮೀಯನೆಂದು ಕಂಡಿರಬೇಕು. ನಾಗಪುರದವನಾದ ಆತ ಕಟಕದ ಭತ್ತದ ಸಂಶೋಧನಾ ಸಂಸ್ಥೆಯಲ್ಲಿ ಕೆಲಸ ಮಾಡಿ ಇಲ್ಲಿ ಬಂದಿದ್ದ. ಸ್ಟೆಟಿಸ್ಟಿಕ್ಸ ವಿಭಾಗದ ಮುಖ್ಯಸ್ಥರು ಒಬ್ಬ ಮಹಾರಾಷ್ಟ್ರಿಯನ್. ಕೋಳಿ ಸಾಕಾಣಿಕೆಯ ವಿಭಾಗದವರು ಕೃಷಿಕರಿಗೆ ಒಳ್ಳೆಯ ಮೊಟ್ಟೆಗಳನ್ನು ಹೇಗೆ ಉತ್ಪಾದಿಸಬೇಕೆಂದು ತೋರಿಸಲು ಪ್ರತಿ ತತ್ತಿಗೆ ಮೂರು ರೂಪಾಯಿ ಖರ್ಚು ಮಡಿ ಮೂವತ್ತು ಪೈಸೆಗೆ ಒಂದು ಮಾರುವಂತಹ

ತತ್ತಿಗಳನ್ನು ನಿರ್ಮಿಸಿದ್ದಾರೆಂದು ದಾಧೀಚ ಹೇಳಿದ. ಧಾನ್ಯ ವಿಭಾಗದ ಆಪ್ಟೆಗೆ ಒಂದಕ್ಷರ ಮರಾಠಿ ಬರುತ್ತಿರಲಿಲ್ಲ. ಕೊನೆಗೆ ಅವರು ಗ್ವಾಲೇರದವರೆಂದು ತಿಳಿಯಿತು. ಶೂನ್ಯತೆ ಆವರಿಸಿದ ಕ್ರೀಡಾ ವಿಭಾಗಕ್ಕೆ ಬಂದೆವು. ಅದರ ಮೇಲ್ವಿಚಾರಕರಾಗಿದ್ದ ಸಿಂಗರು ದೇಹ, ಬುದ್ಧಿ ಎರಡರ ಬೆಳವಣಿಗೆಗೂ ಲಕ್ಷ ಕೊಡಲು ಮರೆತವರಂತೆ ಕಂಡರು.

ಎದುರಿಗೆ ವಿದ್ಯಾರ್ಥಿಗಳ ವಸತಿಗೃಹ ಕಂಡಿತು. ಯಾರೋ ಎಂಜಿನಿಯರ ಮಹಾಶಯ ಕಟ್ಟಡವನ್ನು ಚೆನ್ನಾಗಿಯೇ ಕಟ್ಟಿಸಿದ್ದ. ಆದರೆ ವಿದ್ಯಾರ್ಥಿಗಳೆಲ್ಲ ಚಹ ಮಾಡಿ, ಪಾತ್ರೆಗಳನ್ನು ಕಪ್ಪು ಬಸಿಗಳನ್ನು ಖಿಡಕಿಯಲ್ಲೆ ತೊಳೆದು ಅವುಗಳೆಲ್ಲ ಅಸಹ್ಯರೂಪ ತಾಳಿದ್ದವು. ಅಲ್ಲಲ್ಲಿ ಸಿಮೆಂಟು ಕಿತ್ತಿಹೋಗಿತ್ತು. ಗೋಡೆಗೆ ತೆಗೆದ ಗಿಲಾಯಿ, ಮಾಡಿಗೆ ಬಡಿದ ಸಿಮೆಂಟ ಸದಾಕಾಲ ಉದುರುತ್ತಲೇ ಇರುತ್ತದಂತೆ. ವಿದ್ಯುತ್ ದೀಪದ ತಂತಿಗಳೆಲ್ಲ ಅಲ್ಲಲ್ಲಿ ಜೋಕಾಲಿಯಾಡುತ್ತಿದ್ದವು. ಒಂದರ ಸ್ವಿಚ್ಚೂ ಸ್ವಸ್ಥಾನದಲ್ಲಿರಲಿಲ್ಲ. ಇದೆಲ್ಲ ತಿಳಿಗೇಡಿ ವಿದ್ಯಾರ್ಥಿಗಳ ಕೆಲಸವಿರಬಹುದೇ? ಅನಿಸಿತು. ಊಟದ ಮನೆಗೆ ಹೊಂದಿಸಿದ ನಲ್ಲಿಗಳಲ್ಲಿ ಒಂದೂ ಕೆಲಸ ಮಾಡುತ್ತಿರಲಿಲ್ಲ. ಸಿಂಕುಗಳಲ್ಲಿ ನೀರು ಹರಿದು ಹೋಗದೇ ನಾರುತ್ತಿದ್ದವು. ಅವುಗಳ ಹೊರಗೆ ಕೊಳಚೆ ಮಡುವು ನಿಂತಿದ್ದವು. ಉನ್ನತ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಈ ಅನಾರೋಗ್ಯಕರ ವಾತಾವರಣ ನೋಡಿ ಆಶ್ಚರ್ಯ ಪಡುವಂತೆ ಆಯಿತು. ಕಟ್ಟಡದ ಕೆಲಸವೆಲ್ಲ ಸಾರ್ವಜನಿಕ ಸೇವಾ ಖಾತೆಯವರೇ ವಹಿಸಿಕೊಂಡದ್ದು ಇದಕ್ಕೆ ಕಾರಣವಂತೆ. ರಾಜಸ್ಥಾನಿ ವಾಸ್ತುಶಿಲ್ಪದ ಮಾದರಿಯ ಕಟ್ಟಡಗಳು ದೂರದಿಂದ ಭವ್ಯವಾಗಿ ಕಂಡರೂ ಹತ್ತಿರದಿಂದ ಟೊಳ್ಳಾಗಿ ತೋರುತ್ತಿದ್ದವು. ಬಿದ್ದುಹೋದ ಭಾಗಗಳಿಗೆ ದುರಸ್ತಿಯಿಲ್ಲದೇ ಕೇವಲ ಸುಣ್ಣ ಬಳಿದದ್ದರಿಂದ ಹತ್ತಿರದಿಂದ ಅಸಹ್ಯವಾಗಿ ತೋರುತ್ತಿದ್ದವು. ಪ್ರೊ. ವಸಿಷ್ಟರ ವೈಯಕ್ತಿಕ ಮೇಲ್ವಿಚಾರಣೆಯಲ್ಲಿ ಬೆಳೆಸಿದ ಹಣ್ಣು ತೋಟ ಮಾತ್ರ ಚೆನ್ನಾಗಿ ರೂಪಗೊಂಡಿತ್ತು.

ಕಟ್ಟಡಗಳಿಗೆ ಹೊಂದಿಯೇ ಕಾಲೇಜಿನ ಫಾರ್ಮು ಇದೆ. ಬಂಗಾರದ ತೆನೆಗಳನ್ನು ಹೊತ್ತು ನಿಂತ ಗೋದಿಯ ಸಸಿಗಳು ನಮ್ಮನ್ನು ಸ್ವಾಗತಿಸಿದವು. ಬಣ್ಣ ಬಣ್ಣದ ವೇಷ ಭೂಷಣ ತೊಟ್ಟು, ಕಾಲಿಗೆ ಗಿಳಿ ಮೂಗಿನ 'ಜೂತೆ' ಧರಿಸಿದ ರಾಜಸ್ಥಾನಿ ರಮಣಿಯರು ತಲೆಯೆತ್ತಿ ಆಗಂತುಕರನ್ನು ನೋಡಿ ನಾಚಿ, ಮುಸುಕೆಳೆದು ಮತ್ತೆ ಕೆಲಸದಲ್ಲಿ ತಲೆ ಹಾಕಿದರು. ಹುಲುಸಾಗಿ ಮೀಸೆ ಬೆಳೆಸಿ, ದೊಡ್ಡ ರುಮಾಲು ಧರಿಸಿದ ಕೂಲಿ, ಪೊದೆಗಳಿಗೆ ನೀರು ಬಿಡುತ್ತಿದ್ದ. ನಂತರ ಫುಲಗೋಬಿ (ಕಾಲಿಫ್ಲವರ್)ಗಳು ಅರಳಿ ನಿಂತ ಕೈತೋಟ ಬಂದಿತು. ದೂರದಲ್ಲಿ ಬಿ. ಎಚ್. ಸಿ. ಕೀಟನಾಶಕವನ್ನು ಕೈಯಿಂದಲೇ ಬೂದಿಯಂತೆ ವಿಪುಲವಾಗಿ ಫ್ಲಾವರ್‌ಗಳ ಮೇಲೆ ಸಿಂಪಡಿಸುತ್ತ ಆಳೊಬ್ಬ ನಿಂತದ್ದು

ನೋಡಿ, ಸಂಕಟವಾಯಿತು. ಈ ರಾಸಾಯನಿಕಗಳು ಕೀಟಗಳಿಗೆ ವಿಷಕಾರಿಯಿದ್ದಂತೆ ಮಾನವನಿಗೂ, ಅವನ ಸಾಕು ಪ್ರಾಣಿಗಳಿಗೂ ಅಪಾಯಕಾರಿ. ಚರ್ಮವನ್ನು ಭೇದಿಸಿ, ಒಳಗೆ ಪ್ರವೇಶಿಸುವ ಶಕ್ತಿ ಇವುಗಳಿಗಿದೆಯಾದ್ದರಿಂದ ಯಂತ್ರೋಪಕರಣಗಳಿಂದ ಅವನ್ನು ಸಿಂಪಡಿಸಬೇಕಲ್ಲದೇ ಸ್ಪರ್ಶವಾಗದಂತೆ ಕೈಚೀಲಗಳನ್ನು ಧರಿಸಬೇಕು. ಮುಂಜಾವಿನಲ್ಲಿ ಅಥವಾ ಸಂಜೆಗಳಲ್ಲಿ ಅವನ್ನು ಸಿಂಪಡಿಸಬೇಕು. ಗಾಳಿ ಅದನ್ನು ಹೊತ್ತು ಕೊಳ, ಬಾವಿ, ಮೇವುಗಳಿದ್ದಲ್ಲಿ ಹೋಗುವ ಸಾಧ್ಯತೆ ಇದ್ದುದರಿಂದ ಗಾಳಿ ಬೀಸದಿದ್ದಾಗ ಅವುಗಳ ಸಿಂಪಡಿಸುವಿಕೆ ಆಗಬೇಕು. ಇವಾವ ನಿಯಮ ಪಾಲಿಸದೇ ಹೊಲದಲ್ಲಿದ್ದ ಎಲ್ಲ ಕೀಟಗಳನ್ನು ಕೊಂದು, ಭಾರಿ ಕಾಯಿಪಲ್ಯ ಬೆಳೆಸುವಂತೆ ಮಾಡಿದ ಯೋಜನೆಯಂತಿತ್ತು. ಈ ಹಳ್ಳಿ ಮುಕ್ಕ ಇದೇ ಕೆಲಸವನ್ನು ಒಂದು ತಿಂಗಳ ತನಕ ಮುಂದುವರಿಸಿದರೆ ಅವನನ್ನೆ ಆಹುತಿ ತೆಗೆದುಕೊಳ್ಳಬಹುದಾಗಿತ್ತು, ಅದು. ರೈತರಿಗೆ ಸಲಹೆ ನೀಡುವ, ಕೃಷಿಕ್ರಾಂತಿಗೆ ಆಧಾರ ಸ್ತಂಭಗಳಂತೆ ಇರುವ ಕೃಷಿ ಕಾಲೇಜುಗಳಲ್ಲಿ ಹೀಗಾಗುವುದುಂಟೆ? ಎಂದು ವಿಸ್ಮಯಪಡುವಂತೆ ಆಯಿತು. ಕಾಲೇಜಿನ ಈ ಪುಷ್ಟ ತರಕಾರಿ ತಿನ್ನುವುದಕ್ಕಿಂತ ಹಳ್ಳಿಗರು ಬೆಳೆಸಿದ ಹುಳುಕಿದ್ದರೂ ನಡೆಯುವ ತರಕಾರಿಯನ್ನೇ ಬಳಸುವುದೆಂದು ಅಂದೇ ನಿರ್ಧರಿಸಿಬಿಟ್ಟೆ.

ಅಲ್ಲಿ ಇಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಪ್ರಯೋಗ ಮತ್ತು ನಿರೀಕ್ಷಣೆಗಳಿಗಾಗಿ ವಿವಿಧ ಬೆಳೆಗಳನ್ನು ಬೆಳೆಸಿದ್ದರು. ನಂತರ ಪೇರಲ ಮತ್ತು ದಾಳಿಂಬದ ತೋಟಗಳು ಬಂದವು. ಅವಕ್ಕೆ ನೀರು ಪೂರೈಸಲು ಇದ್ದ ಟ್ಯೂಬ ಬಾವಿಯ ಪಂಪು ಒಂದೇ ಸಮನೆ ದುಡಿಯುತ್ತಿತ್ತು. ದೂರದಲ್ಲಿ ಒಂಟೆಯೊಂದು ನೀರಿನ ಟಾಕಿ ಕೂಡ್ರಿಸಿದ ಗಾಡಿ ಹೊತ್ತುಕೊಂಡು ಬರುತ್ತಿತ್ತು. ಕಾಲೇಜಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಅಂದರೆ ಎಂಟು ಪೈಸೆಗೆ ಒಂದು ಕ್ಯಾನಿನಂತೆ ನೀರನ್ನು ಮಾರುವ ಕರಾರಿನಂತೆ ಆತ ಟ್ಯೂಬ್ ಬಾವಿಯಿಂದ ನೀರುತುಂಬಲು ಅವಕಾಶವಿತ್ತು. ಬಾವಿ ದಾಟಿದ ನಂತರ ಕಾಲೇಜಿನ ಹೊಲಗಳು ಬಂದವು. ಹೆಚ್ಚಿನವುಗಳಲ್ಲಿ ಗೋಧಿ ಬೆಳೆದರೆ ಅಲ್ಲಲ್ಲಿ ಎಳ್ಳು, ಹೆಸರು ಕಾಣಿಸುತ್ತಿದ್ದವು. ನಂತರ ಕುಕ್ಕುಟಾಲಯಗಳು ಬಂದವು. ಒಂದು ಕಡೆ ತತ್ತಿಗಳನ್ನು ಬೆಚ್ಚಗೆ ಇಟ್ಟು ಅವುಗಳಲ್ಲಿ ಮರಿಗಳು ಬೆಳೆಯುವಂತೆ ಏರ್ಪಾಡಿತ್ತು. ಹೊರ ಬಂದ ಮರಿಗಳನ್ನು ಇನ್ನೊಂದು ಕೋಣೆಗೆ ಸ್ಥಳಾಂತರಿಸಿ ಅಲ್ಲಿ ಬೆಳೆಸುವ ವ್ಯವಸ್ಥೆ ಮಾಡಿದ್ದರು. ನಂತರ ಶ್ವೇತ, ಕೆಂಪು, ನಾಶೀ ಪುಡಿ ಬಣ್ಣದ ಗಂಡು-ಹೆಣ್ಣು ಕೋಳಿಗಳು ಪ್ರತ್ಯಕ್ಷವಾದವು. ಮನಸ್ಸಿಗೆ ಬಂದಾಗ ಮನದಣಿ ತಿಂದು ಬೆಚ್ಚಗಿನ ಗೂಡುಗಳಲ್ಲಿ ಸಂತತಿ ನಿರ್ಮಾಣದ ಒಂದೇ ಉದ್ದೇಶದಿಂದ ಅವು ಜೀವಿಸುತ್ತಿದ್ದವು. ಚಳಿ-ಬಿಸಿಲು ಎನ್ನದೇ ಕಾದ ಮಳಲಲ್ಲಿ ಕೆದರಿ ಕೆದರಿ ಸಿಗುವ ಹುಳ ಹುಪ್ಪಡಿಗಳಿಗಾಗಿ ಹೆಣಗುವ ತನ್ನ ಬಂಧುವರ್ಗವನ್ನು ಇವು ಮರೆತಿದ್ದವು. ಆದರೆ ಅದರ ಜೊತೆಗೆ ಯಾವುದಾದರೂ ಸಾಂಸರ್ಗಿಕ ರೋಗ

ಬಂತೆಂದರೆ ತಾವೆಲ್ಲ ಸಾಯಬಹುದಾದ ಸಾಧ್ಯತೆಯನ್ನು ಅವು ಮರೆತಂತಿದ್ದವು. ಅಮೇರಿಕೆಯಿಂದ ತರಿಸಿದ ಹುಂಜಗಳನ್ನು, 'ಟರ್ಕಿ'ಗಳನ್ನು ಹೆಚ್ಚು ಕಾಳಜಿಯಿಂದ ಬೇರೆ ಕಡೆಯೇ ಸಾಕಿದ್ದರು.

ಎದುರಿಗೆ ದನಗಳ ದಡ್ಡಿ ಬಂದಿತು. ನೀರಿಲ್ಲದ ರಾಜಸ್ಥಾನದಲ್ಲಿ ದನಗಳು ಬಾಲ್ದಿಗಟ್ಟಲೆ ಹಾಲು ಹಿಂಡುತ್ತಿದ್ದವೆಂದರೆ ನಮ್ಮ ಊರವರು ಯಾರೂ ನಂಬುವಂತಿರಲಿಲ್ಲ. ಇಲ್ಲಿಯ ಹಾಲಿಗೆ ಹೆಡಸು ಜಾಸ್ತಿಯಾದ್ದರಿಂದ, ಖವಾ(ಖೋವಾ) ಮಿಠಾಯಿಗಳಿಗೆ ಅದನ್ನು ಹೆಚ್ಚಾಗಿ ಬಳಸುವರು. ನಾವಲ್ಲಿ ಹೋದಾಗ ಗೋವುಗಳಿಗೆ ಸ್ನಾನ ಮಾಡಿಸಿ, ನೀರು ಕುಡಿಸಿ ಮೇವು ಹಾಕಿ ಅಪವೇಳೆಯಲ್ಲಿ ಹಾಲು ಹಿಂಡುವ ಸಂಭ್ರಮ ನಡೆದಿತ್ತು. ನಾನು ಸೋಜಿಗ ಪಟ್ಟಾಗ ಕಾಲೇಜಿನ ಪದ್ಧತಿಯನ್ನು ದಾಧೀಚ ಬಣ್ಣಿಸಿದ. ರಾತ್ರೆ ಎರಡೂವರೆಗೆ ಕೆಲಸಗಾರರು ಎದ್ದು ಬಂದು ಎಲ್ಲ ದನಗಳನ್ನು ಹಿಂಡಿ ಹಾಲಿನ ಲೆಕ್ಕಾಚಾರವನ್ನು ನಮೂದಿಸಿ, ಕ್ಯಾನುಗಳಲ್ಲಿ ಹಾಲು ಸುರುವಿ, ಬೀಗ ಹಾಕಿ ಹಂಚಲು ಹೊರಟಾಗ ಬೆಳಕು ಹರಿಯುವದಂತೆ. ಗೌಳಿಗರು ಅಷ್ಟು ಬೆಳಿಗ್ಗೆ ಕಲಸ ಬಗೆಹರಿಸಿದಾಗಲೇ ಬೆಳಿಗ್ಗೆ ಚಹಕ್ಕೆ ಹಾಲು ಒದಗುತ್ತದೆ. ಅದರಂತೆ ನಡು ಹಗಲಿನಲ್ಲಿ ಹಾಲು ಕರೆದರೆ ಮಧ್ಯಾಹ್ನದ ಚಹಾಕ್ಕೆ ತಾಜಾ ಹಾಲು ಸಿಗುತ್ತದೆ, ಎಂದು ತಿಳಿಯಿತು. ಕಾಲೇಜಿನ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ರಿಯಾಯಿತಿಯಲ್ಲಿ ಹಾಲು ಮಾರಲ್ಪಡುವುದು. ಆಕಳ ಹಾಲು ಲೀಟರಿಗೆ ಅರವತ್ತು ಪೈಸೆಗಳಿದ್ದರೆ, ಎಮ್ಮೆಯ ಹಾಲು ಎಪ್ಪತ್ತು ಪೈಸೆಗಳು. ಅಮೇರಿಕೆ ಬಿಟ್ಟ ನಂತರ ನಾನು ಉತ್ತಮ ಹಾಲನ್ನೇ ಕಂಡಿರಲಿಲ್ಲವಾದ್ದರಿಂದ ಅವರು ಕರೆಯುತ್ತಿದ್ದ ಹಾಲಿನ ಬಾಲ್ದಿಯನ್ನೇ ಕೊಂಡು ಕುಡಿಯುವ ಆಶೆಯಾಯಿತು! ವಿವಿಧ ಜಾತಿಯ ಆಡುಗಳನ್ನು ಸಾಕಿದ್ದರು. ಅವುಗಳ ಹಾಲು ಮುದುಕರಿಗೆ, ಶಿಶುಗಳಿಗೆ ಮಾತ್ರ ಮೀಸಲಿತ್ತು. ಮರಕ್ಕೆ ಕಟ್ಟಿಹಾಕಿದ ಕೋಣ ಒಂದು ಸಾಕ್ಷಾತ್ ಯಮಧರ್ಮರಾಯನ ವಾಹನವನ್ನೇ ಪ್ರತಿನಿಧೀಕರಿಸಿತ್ತು. ಅದರ ಕೆಂಗಣ್ಣು ನೋಡಿದರೆ ಯಾರೂ ಹೆದರುವಂತಿತ್ತು. ಹಾಗೆಯೇ ಸರಪಳಿಯಿಂದ ಬಿಗಿದ ನಾಲ್ಕಾರು ಗೂಳಿಗಳು ಕಾಣಿಸಿಕೊಂಡವು.

ಬಿ.ಪಿ.ಯವರು ಇನ್ನೂ ಡೀನರೊಂದಿಗೆ ಹರಟೆ, ರಾಜಕಾರಣಗಳಲ್ಲಿ ತೊಡಗಿರಬೇಕೆಂದು ಊಹಿಸಿ, ದಾಧೀಚನಿಗೆ ಕೃತಜ್ಞತೆಗಳನ್ನು ತಿಳಿಸಿ ಜೋಬನೇರ ಊರನ್ನು ಸುತ್ತಿಬರಲು ಹೊರಟೆ. ಪತ್ನಿ ಸಮೇತ ದೊಣ್ಣೆ ಹಿಡಿದು ಹೊರಟವನೊಬ್ಬ ನನ್ನನ್ನು ನೋಡಿ, "ಬೋಲೋ ಶ್ರೀರಾಮಜಿಕೀ" ಎಂದು ಹೇಳಿದಾಗ ಹೀಗೇಕೆ ಅನ್ನುತ್ತಿದ್ದಾನೆ ಎಂದು ವಿಸ್ಮಯಪಟ್ಟೆ. ಮುಂದೆ ಹೋದಾಗ ಅಂಗಡಿಕಾರನೊಬ್ಬ "ಜೈ ಮಾತಾಜಿಕೀ" ಎಂದಾಗ ಡೀನರ ಪತ್ನಿ, ಮಾತಾಜಿ, ಇಷ್ಟೊಂದು ಪ್ರಸಿದ್ಧಳೇ? ಎಂದು

ಸೋಜಿಗವಾಯಿತು. ನಂತರದ ದಿನಗಳಲ್ಲಿ ಅವರು ಹಾಗೆಂದಾಗ ಶ್ರೀರಾಮಜಿಕಿ ಜೈ, ಜೈ ಮಾತಾಜಿಕಿ! ಅನ್ನುವುದನ್ನು ರೂಢಿ ಮಾಡಿಕೊಂಡೆ.

ಊರಲ್ಲಿ ಯಾವ ಬೀದಿ, ರಸ್ತೆಗಳಿಂದ ಹೊರಟರೂ ಬಲು ಬೇಗ ಊರು ಮುಗಿದುಬಿಡುತ್ತಿತ್ತು. ಊರು ತೀರ ಚಿಕ್ಕದೆಂದು ಮನವರಿಕೆಯಾಗಿ ಮನೆಗೆ ಮರಳಿದರೆ ಬಿ. ಪಿ. ಇನ್ನೂ ಬಂದಿರಲಿಲ್ಲ. "ಹರಟೆಗೆ ಕುಳಿತರೆ ಅವರಿಗೆ ವೇಳೆಯ ಪರಿವೆಯಿಲ್ಲ" ಎಂದಳು ಲಕ್ಷ್ಮಿ. ಕೊನೆಗೊಮ್ಮೆ ಒಂದು ಗಂಟೆಗೆ ಬಂದು "ರೋಟಿ-ಸಬ್ಜಿ"ಯ ಊಟವನ್ನು ಮುಗಿಸಿ, ವಿಶ್ರಾಂತಿ ಪಡೆದು, ಸಂಜೆಗೆ ಡಾ. ಶ್ರೀವಾಸ್ತವರ ಮನೆಗೆ ಹೊರಟೆವು. ಅಧ್ಯಾಪಕ ಯಾದವನ ಮನೆಯ ಮುಂದಿನಿಂದ ಹಾಯ್ದು ಹೋಗುವಾಗ, "ಡಾಕ್ಟರ ಸಾಹೇಬ ನಮಸ್ತೆ" ಎಂದು ಬಿ.ಪಿ.ಯವರಿಗೆ ನಮಸ್ಕರಿಸಿ ನನ್ನ ಪರಿಚಯ ಮಾಡಿಕೊಂಡ. ತುಟಿಗೆ ದಪ್ಪಗೆ ಕೆಂಬಣ್ಣ ಬಳಿದುಕೊಂಡಿದ್ದ ಅವನ ಹೆಂಡತಿ ಕಗ್ಗ ಹಳ್ಳಿಯವಳಂತೆ ಕಂಡಳು. ನಂತರ ಅಧ್ಯಾಪಕ ಸಚಾನರ ಕುಟುಂಬದ್ದೂ ಪರಿಚಯವಾಯಿತು. ಅವರ ಪತ್ನಿಯೂ ನಿರಕ್ಷರಿಯಾಗಿದ್ದರೂ ಭಾರೀ ಜಾಗರೂಕತೆಯಿಂದ ಅಲಂಕರಿಸಿಕೊಂಡಿದ್ದಳು.

ಡಾ. ಸುಧೀರ ಶ್ರೀವಾಸ್ತವರು ತಮ್ಮ ಕಿರಿಯ ಮಗನನ್ನು ಎತ್ತಿಕೊಂಡೇ ನಮ್ಮನ್ನು ಸ್ವಾಗತಿಸಿದರು. ತೀರಾ ಸಾದಾ ಉಡುಪಿನಲ್ಲಿದ್ದ ಅವರ ಪತ್ನಿ ಬಿ.ಎ., ಬಿ. ಟಿ. ಪದವೀಧರೆಯೆಂದು ತಿಳಿದಾಗ ಆಶ್ಚರ್ಯವೆನಿಸಿತು. ವಿದೇಶದಿಂದ ಮರಳುವಾಗ ತಂದ ಹಲವಾರು ಸಾಮಾನುಗಳು ಕಪಾಟುಗಳನ್ನು ಅಲಂಕರಿಸಿದ್ದವು. ಸಂಜೆಯ ಚಳಿ ಹೆಚ್ಚುತ್ತಿದ್ದಂತೆ ಮನೆಯ ಯಜಮಾನಿ ನಿಗಿ ನಿಗಿ ಕೆಂಡಗಳಿದ್ದ ಬಾಲ್ದಿಯ ಒಲೆಯನ್ನು ಬೈಠಕ ಖಾನೆಯಲ್ಲಿ ತಂದಿಟ್ಟಳು. ಇಟ್ಟದ್ದು ಬಿ.ಪಿ.ಯವರ ಹತ್ತಿರವಾಯಿತಂತೆ! ಅದೇಕೆ ಎಂಬುದನ್ನು ವಿನೋದಪ್ರಿಯ ಶ್ರೀವಾಸ್ತವರು ವಿವರಿಸಿದರು. ತಮ್ಮಾಕೆ ಅಲಹಾಬಾದ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ. ತಾನು ಕಾಗೆಮರಿಯಂತೆ ಇದ್ದುದರಿಂದ ಪೂರ್ಣ ಚಂದ್ರನ ಮುಖವುಳ್ಳ ಬಿ.ಪಿ. ಅವರಲ್ಲಿ ಆಕೆಗೆ ಮೊದಲಿನಿಂದಲೂ ಆಸಕ್ತಿಯಂತೆ! ಇದನ್ನು ತಾನು ಸಿದ್ಧ ಮಾಡುತ್ತೇನೆಂದು ಯಾವ ಯಾವುದೋ ಹಳೆಯ ಫೋಟೋ, ಪತ್ರಿಕೆಗಳನ್ನು ತಂದು ಟೇಬಲ್ ಮೇಲೆ ಹರವಿದರು. ಈಗ ವಿವಾಹಿತೆಯಾಗಿ ಮೂರು ಮಕ್ಕಳಾದರೂ ಬಿ.ಪಿ. ಅವರಲ್ಲಿ ಆದರ ಆಕೆಗೆ ಕಡಿಮೆಯಾಗಿಲ್ಲವೆಂದರು. ಈ ಮಾತಿನಿಂದ ಬಿ.ಪಿ. ಸಂತುಷ್ಟರಾದರೂ, ಆಕೆ ಮಾತ್ರ ತರ್ಕಕ್ಕೆ ಇಳಿಯದೇ ಒಳಗೆ ಹೋಗಿ ಕಾಫಿ, ಬಿಸ್ಕತ್ತು, ದಾಲಮೋಟ ತಂದರು. ನಂತರ ನೆರೆಮನೆಯ ಪಟೇಲ ದಂಪತಿಗಳೂ ನಮ್ಮನ್ನು ಕೂಡಿಕೊಂಡರು. ತಾಯಿಯಂತೆ ಕಾಣುತ್ತಿದ್ದವಳನ್ನು ತಮ್ಮ ಪತ್ನಿ ಎಂದು ಪರಿಚಯ ಮಾಡಿಕೊಟ್ಟಾಗ ಆದ ಅಚ್ಚರಿ ಅಷ್ಟಿಷ್ಟಲ್ಲ. ಬಹಳ ಹೊತ್ತಿನ

ತನಕ ಮಾತು ಕತೆಗಳು ಸಾಗಿದವು. ಹೊತ್ತಾದ್ದರಿಂದ ತಮ್ಮಲ್ಲಿಯೇ ಊಟ ಪೂರೈಸುವಂತೆ ಶ್ರೀವಾಸ್ತವ ದಂಪತಿಗಳು ಆಗ್ರಹಮಾಡಿದರೂ ಲಕ್ಷ್ಮಿ ಕಾದಿರುತ್ತಾಳೆಂದು ಬಿ.ಪಿ.ಯವರು ಎದ್ದು ನಿಂತರು.

"ಅವರನ್ನೂ ಕರೆದುಕೊಂಡೇ ಬರಬೇಕಾಗಿತ್ತು" ಎಂದು ಶ್ರೀಮತಿ ಶ್ರೀ ವಾಸ್ತವಳೆಂದಾಗ, "ನಿನ್ನ ಭೆಟ್ಟಿಗೆ ಅವರು ಬರುವಾಗ ಭಾಭಿಜಿ (ಅತ್ತಿಗೆ) ಯನ್ನು ಹೇಗೆ ಕರೆ ತಂದಾರು?" ಎಂದು ಶ್ರೀ ವಾಸ್ತವರು ಇನ್ನಷ್ಟು ನಕ್ಕರು. ಮನೆಗೆ ತಲುಪಿದಾಗ, "ಇಷ್ಟು ರಾತ್ರಿ ಮಾಡಿ ಹಿಂತಿರುಗುತ್ತಾರೆಯೇ? ಗ್ಯಾನಲತಾ, ರಾಣಿಯರು ಕಾದು ಕಾದು ಈಗಷ್ಟೇ ಹೋದರು" ಎಂದು ಲಕ್ಷ್ಮಿ ಮುನಿಸು ತೋರುತ್ತ ಅವರ ಪಾಲಿನ ಕೆಲಸವನ್ನು ತಾನೇ ಮಾಡಬೇಕೆಂದು ಗೊಣಗಿದಳು. "ಒಂದು ದಿನ ಬಗ್ಗಿ ಕೆಲಸ ಮಾಡಿದರೆ ಅಡ್ಡಿಯಿಲ್ಲ. ಬೊಜ್ಜಾದರೂ ಕರಗೀತು!" ಪತಿದೇವರೆಂದಾಗ ಸಿಡಿಮಿಡಿಗೊಂಡು ತಣ್ಣಗಾದ ಪರಾಠಾ-ಪಲ್ಯಗಳನ್ನೇ ನಮಗೆ ತಿನಿಸಿದಳು.

೬. ಊರಿನಲ್ಲಿ

ಕಾಲೇಜಿನ ಆವಾರ ದಾಟಿದ ಕೂಡಲೇ ಧರ್ಮಶಾಲೆಯಂತಹ ಕಟ್ಟಡದೊಳಗಿಂದ ವಿದ್ಯಾರ್ಥಿಗಳು ಪಠಣ ಮಾಡುವುದು ಕೇಳಿಸಿದ್ದರಿಂದ ಇದೊಂದು ಶಾಲೆಯಿರಬೇಕೆಂದು ಅನಿಸಿತು. ವಿದ್ಯಾರ್ಥಿಗಳು ಮೈಗೆ ಅಂಟುವ ಕೋಟು, ಮಾಸಿದ ಧೋತರ ಉಟ್ಟು ಗಿಳಿ ಮೂಗಿನ ಬೂಟು ಧರಿಸಿ, ನೆಲದಮೇಲೆಯೇ ಕುಳಿತು ಪಾಠ ಓದುವುದರಲ್ಲಿ ತೊಡಗಿದ್ದರು. ನಾಲ್ಕು ತಿಂಗಳಿನಿಂದ ಕ್ಷೌರ ಕಾಣದ ದಪ್ಪ ಕೂದಲಿನಲ್ಲೂ ಜುಟ್ಟು ಎದ್ದು ಕಾಣಿಸುತ್ತಿತ್ತು. ಜುಟ್ಟು ಬಿಟ್ಟು ತಲೆ ಬೋಳಿಸಿ, ನಾಮ ಇಟ್ಟುಕೊಂಡವನು ಪಂಡಿತ (ಬ್ರಾಹ್ಮಣ) ಮಾಸ್ತರನಿರಬೇಕು. ಅರೇ! ಇದೇನಿದು? ಕಟ್ಟಡಕ್ಕೆ ಮಾಡೇ ಇಲ್ಲವಲ್ಲ! ಬಹುಶಃ ಯಾವನೋ ಧರ್ಮಾತ್ಮ ಠಾಕೂರನು ದಾನವಾಗಿ ಕೊಟ್ಟ ಭೂಮಿ, ಹಣಗಳಲ್ಲಿ ಮಾಡಿಲ್ಲದೆ ಶಾಲೆ ಕಟ್ಟಲು ಮಾತ್ರ ಸಾಧ್ಯವಿದ್ದಿರಬೇಕು; ಅಥವಾ ಸರಕಾರೀ ಕಂಟ್ರಾಕ್ಟರನ ಸಹಾಯದಿಂದ ಕಟ್ಟಿಸಿದ ಶಾಲೆಯ ಚಪ್ಪರ ಎರಡೇ ವರ್ಷದಲ್ಲಿ ಬಿದ್ದು ಹೋಗಿರಬೇಕು. ನಂತರ ಸುಣ್ಣ ಬಳಿಯಲಿಕ್ಕೆ ಹಣವನ್ನು ಸರಕಾರ ಮಂಜೂರು ಮಾಡಿದರೂ ಮಾಡಿನ ರಚನೆಗೆ ಹಣ ಕೊಟ್ಟಿರಲಿಕ್ಕಿಲ್ಲ. ಎಂತಹ ಅನ್ಯಾಯ. ಹತ್ತಿರದ ಕಾಲೇಜಿನ ವಾರ್ಷಿಕೋತ್ಸವಕ್ಕೆ ಹತ್ತರಿಂದ ಹದಿನೈದು ಸಾವಿರ ರೂಪಾಯಿ ವೆಚ್ಚ ಮಾಡುತ್ತಿರಬೇಕು, ಅದರಲ್ಲಿ ಶೇಕಡಾ ಹತ್ತರಷ್ಟು ಉಳಿಸಿದರೆ ಈ ಶಾಲೆಗೆ ಚಪ್ಪರ ಬರುತ್ತಿತ್ತು. ಇಂಥ ವಿಚಾರಗಳು ಎಂದೂ ಆಯಾ ಅಧಿಕಾರಿಗಳಿಗೆ ಬರುವುದಿಲ್ಲವೆಂದು ನೆನೆಸಿ ನೊಂದುಕೊಂಡೆ. ಮಗ್ಗುಲಿನ ಇನ್ನೊಂದು ಕೋಣೆಯಿಂದ ಮಾಸ್ತರರೊಬ್ಬರು ತಮ್ಮ ವಿದ್ಯಾರ್ಥಿಗಳನ್ನು ಡ್ರಿಲ್ ಮಾಡಿಸಲೆಂದು ಬಿಸಿಲಲ್ಲಿ ಕರೆದೊಯ್ದರು. ಪಾಪ! ಮುಂಜಾನೆಯಿಂದ ವಿದ್ಯಾರ್ಥಿಗಳು ಏನಾದರೂ ತಿಂದಿದ್ದವೋ ಇಲ್ಲವೋ. ಹರಿದ ಬಟ್ಟೆಗಳು ಕವಾಯತು ಮಾಡುವಾಗ ಇನ್ನಷ್ಟು ಹರಿದಾವೆಂದು ಹೆದರಿಕೊಂಡಂತೆ ಇದ್ದವು ಮಕ್ಕಳು. ಕೆಲವು ತಮ್ಮ ಅಣ್ಣಂದಿರ ಹಳೆಯ ಅಗಲವಾದ ಚೊಣ್ಣಗಳನ್ನು ತೊಟ್ಟಿದ್ದವು. ಬಹುಶಃ ಅವನ್ನು ಇವರ ತಮ್ಮಂದಿರೂ ತೊಡಬೇಕೆಂದು ಅವು ಜಾಗ್ರತೆ ವಹಿಸುತ್ತಿರಬೇಕು. ಎಲೆಗಳಿಲ್ಲದ ಮರದ ನೆರಳಿನಲ್ಲಿ ಇನ್ನೊಂದು ಕ್ಲಾಸು ನಡೆಯುತ್ತಿತ್ತು. ಬಾಗಿಲು, ಮಾಡು ಇಲ್ಲದ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೇಸಿಗೆಯ

ಉರಿ ಬಿಸಲು, ಚಳಿಗಾಲದಲ್ಲಿ ತಣ್ಣಗಿನ ಗಾಳಿ, ಮಳೆಗಾಲದಲ್ಲಿ ಅಷ್ಟು ಮಳೆ ಯಥೇಷ್ಟವಾಗಿ ಸಿಗುವಂತಿದ್ದರೂ ಪ್ರಧಾನ ಶಿಕ್ಷಕರ ಕೋಣೆಯಲ್ಲಿ ಗಡಿಯಾರ-ರೇಡಿಯೋಗಳು ಕಂಗೊಳಿಸುತ್ತಿದ್ದವು. ಬಹುಶಃ ಇವನ್ನು ಪ್ರತಿ ಮುಂಜಾನೆ ಹೊತ್ತು ತರುವದು. ಸಂಜೆ ತಿರುಗಿ ಅವರ ಮನೆಗೆ ತಲುಪಿಸುವುದು ಒಂದು ಭಾಗ್ಯ ಎಂದು ತಿಳಿದುಕೊಂಡ ವಿದ್ಯಾರ್ಥಿಗಳು ಅವನ್ನು ಮಾಡುತ್ತಿರಬಹುದು. ಮರದ ಆಶ್ರಯದಲ್ಲಿದ್ದ ಕರಿಹಲಗೆಯ ಮೇಲೆ ಅಂದಿನ ದಿನಾಂಕ, ಹಾಜರಿ ವಿಶೇಷ ಸಮಾಚಾರಗಳನ್ನು ಹಿಂದಿಯಲ್ಲಿಯೇ ಬರೆದಿದ್ದರು. ಅದು ವಿಶ್ರಾಂತಿಯ ಸಮಯವಾಗಿರಬೇಕು. ವಿದ್ಯಾರ್ಥಿಯೊಬ್ಬ ಓಡುತ್ತ ಬಂದು. ಮರಕ್ಕೆ ತೂಗ ಹಾಕಿದ ಮೋಟಾರಿನ ಲೋಹದ ಚಕ್ರಕ್ಕೆ ಸಲಾಕಿಯಿಂದ "ಗಂಟೆ" ಬಡಿದು ಎಲ್ಲರಿಗೂ ತಿಳಿಸಿದ. ಹುಡುಗರೆಲ್ಲ ಕಪಿಸೈನ್ಯದಂತೆ ಹೊರಗೆ ಬಂದರು. ಅಲ್ಲಲ್ಲಿ ರಸ್ತೆಯಲ್ಲಿ ಮೂತ್ರ ವಿಸರ್ಜನೆ ಮಾಡಿದರೂ ಮಾನವ ಬಿಟ್ಟ ನೀರನ್ನೆಲ್ಲ ಹೀರಿಕೊಳ್ಳುವ ತಾಕತ್ತು ಆ ಮರುಭೂಮಿಗಿತ್ತು! ಸ್ವಲ್ಪ ಧನಿಕ ವಿದ್ಯಾರ್ಥಿಗಳು, ಹತ್ತು ಪೈಸೆಯ ಸೇಂಗಾ, ಚಕ್ಕಲಿ, ಪಾನಿಪುರಿ ಕೊಂಡು ತಿನ್ನುತ್ತಿದ್ದರು. ಅವರು ಕೊಂಡಾಗ ತಮಗೂ ಕೂಡ ಸಿಕ್ಕೀತೇ ಎಂದು ಬಡ ಮಕ್ಕಳು ಅವರ ಹಿಂದೆ ತಿರುಗುತ್ತಿದ್ದರು. ಯಾರೋ ಒಬ್ಬ "ಮಾಸ್ತರಸಾಹೇಬ ನಮಸ್ತೆ" ಎಂದ. ಎಲ್ಲರೂ ಹಾಗೆಯೇ ಕೂಗುತ್ತ ನನ್ನನ್ನು ಹಿಂಬಾಲಿಸಿದರು. ಶುಭ್ರ ಬಟ್ಟೆ, ಬೂಟು ಧರಿಸಿದವರೆಲ್ಲ ಮಾಸ್ತರಸಾಹೇಬರೇ! ಎಂದು ಅವರೆಲ್ಲ ನಂಬಿದಂತೆ ಇತ್ತು.

ಎದುರಿನ ಕಟ್ಟಡದಲ್ಲಿ ಇಳಿ ವಯಸ್ಸಿನ ಹೆಂಗೆಳೆಯರು, ಮುದುಕಿಯರು ಒಬ್ಬೊಬ್ಬರಾಗಿ ಒಳಗೆ ಹೋಗುತ್ತಿದ್ದರು. ಇವರಾರೂ ಬಣ್ಣದ ಬಟ್ಟೆ, ಮೈತುಂಬ ಆಭರಣ ತೊಟ್ಟಿರದ್ದರಿಂದ ವಿಧವೆಯರೆಂದು ಸ್ಪಷ್ಟವಾಯಿತು. ನಿದ್ರೆ ಬಾರದೇ, ವೇಳೆ ಹೋಗದೇ ಎಲ್ಲರೂ ಸೇರಿ ಭಜನೆ ಮಾಡಲು ಬಂದಿದ್ದರು. ಈ ಕಟ್ಟಡ ರಸ್ತೆಗೆ ಬೆನ್ನು ಮಾಡಿ ನಿಂತಿದ್ದರಿಂದ ಒಳಗೆ ಏನು ನಡೆದಿದೆಯೆಂಬುದು ಕಾಣಿಸುತ್ತಿರಲಿಲ್ಲ. ಇನ್ನೊಂದು ದಿಕ್ಕಿಗೆ ಹಣಿಕೆ ಹಾಕಿದಾಗ ದೇವಿಜಿಯ ದೊಡ್ಡದೊಂದು ಚಿತ್ರದ ಎದುರಿಗೆ ಕಾವಿಯ ವಾನರ ಟೋಪಿ, ಬಟ್ಟೆಗಳನ್ನು ಧರಿಸಿದ ಸಾಧುವೊಬ್ಬ ಆಸೀನನಾಗಿದ್ದು ಕಂಡಿತು. ಆತ ಕಲಿಸಿದ ಭಜನೆಯ ಹಾಡುಗಳನ್ನು ಚಪ್ಪಾಳೆ ತಟ್ಟುತ್ತ ಹಾಡಿ ವೃದ್ಧೆಯರ ಸಮೂಹ, ಸ್ವರ್ಗದಲ್ಲಿ ತಮಗೊಂದು ಸ್ಥಾನವನ್ನು ಭದ್ರಗೊಳಿಸಲು ಹವಣಿಸುತ್ತಿತ್ತು, ನಂತರದ ಕಟ್ಟಡದಲ್ಲಿ ಇಪ್ಪತ್ನಾಲ್ಕು ತಾಸು ಉರಿಯುತ್ತಿದ್ದ ದೀಪಗಳು ಇದೊಂದು ಊರಿನ ವಿದ್ಯುತ್ ಕೇಂದ್ರವೆಂದು ಸಾರಿದವು. ಕೆಲಸವೇನೂ ಇಲ್ಲದ್ದರಿಂದ ಒಂದೆಡೆಗೆ ಕೆಲವರು ಮೂರಡಿಯ ಹಲಗೆ ಬಾರಿಸುತ್ತ ರಾಜಪೂತರ ಶೌರ್ಯದ "ಚಾರಣ ಗೀತ" ಹಾಡುತ್ತ ಕುಳಿತಿದ್ದರು. ವಿದ್ಯುತ್ತಿನ ಮುಖ್ಯ ಕಚೇರಿ, ಹತ್ತಿರದ ಸಾಂಭರ ಸರೋವರದಲ್ಲಿತ್ತು (ಅಲ್ಲಿ ಉಪ್ಪು ನೀರಿನ ಸಾಂಭರ ಸರೋವರವಿದ್ದು ಊರಿಗೂ

ಅದೇ ಹೆಸರು) ಹೀಗಾಗಿ ಚಿಕ್ಕ ಪುಟ್ಟ ಕೆಲಸಗಳಿಗೆ ಅಲ್ಲಿ ಓಡಬೇಕಂತೆ. ಅಲ್ಲಿಂದ ತಿಂಗಳಿಗೊಮ್ಮೆ ಬಾಬು, ಹಣ ವಸೂಲಿಗೆ ಬರುವನಂತೆ. ಬಂದಾಗ ತಪ್ಪದೇ ಹಣ ಪಾವತಿ ಮಾಡಬೇಕು. ಇಲ್ಲದಿದ್ದರೆ ವಿದ್ಯುತ್ ಪೂರೈಕೆಯನ್ನು ಕೂಡಲೇ ನಿಲ್ಲಿಸುವುದರಲ್ಲಿ ತುಂಬ ಶೂರರಂತೆ - ಈ ಕೆಲಸಗಾರರು. ಪ್ರತಿ ಸಾರೆ ಹೀಗೆ ನಿಲ್ಲಿಸಿದಾಗ ಐದು ರೂಪಾಯಿ ಕೊಟ್ಟು ಕೈ ಬಿಸಿ ಮಾಡಿದಾಗಲೇ ಜೋಬನೇರದ ಮನೆಗಳು ದೀಪ ಕಾಣುವಂತೆ ಆಗುವದಂತೆ.

ರಸ್ತೆ ಅಂಚಿನ ಹೊಲದಲ್ಲಿ ರೈತನು ಎತ್ತುಗಳನ್ನು ಹೂಡಿ ಬಾವಿ - ನೀರು ಎತ್ತಿ ಹೊಲಕ್ಕೆ ಹಾಯಿಸುತ್ತಿದ್ದ. ಅನತಿ ದೂರದಲ್ಲಿ ಪುರಾತನ ಕಟ್ಟಡದ ಹತ್ತಿರದ ಮರಗಳ ಮೇಲೆ ಹತ್ತಾರು ಹದ್ದುಗಳು ಏನೋ ನೆಟ್ಟ ದೃಷ್ಟಿಯಿಂದ ದೂರ ನೋಡುತ್ತಿವೆ. ಕಟ್ಟಡದ ಎದುರಿನಲ್ಲಿ ಶವದ ದಹನ ನಡೆದಿತ್ತು. ಹೊತ್ತು ತಂದವರು, ಆಪ್ತರು ತಲೆ ಬೋಳಿಸಿಕೊಳ್ಳುವುದರಲ್ಲಿ ತೊಡಗಿದ್ದರು. ನಂತರ ತಣ್ಣೀರಿನ ಸ್ನಾನ ಮಾಡಿ ಗೃಹಾಭಿಮುಖರಾದ್ದರಿಂದ ಅದೊಂದು ಊರಿನ ಸ್ಮಶಾನವೆಂದು ಖಾತ್ರಿಯಾಯಿತು. ಹಾಗೇ ಸುತ್ತುಹಾಕಿ ನಡೆದು ಬಂದೆ. ಈಗ ಜೋಬನೇರ ಊರನ್ನು ಸೇರುತ್ತಿದ್ದೇನೆ! ಎಂದು ನೆನಪು ಮಾಡಿ ಕೊಡಲು ನಗರಸಭೆಯ "ಚುಂಗೀ" ನಾಕಾ (ಟೋಲನಾಕಾ) ನಿಂತಿತ್ತು. ಅಪ್ಪಣೆಯಿಲ್ಲದೇ ವಾಹನಗಳು ಮುಂದೆ ಹೋಗಕೂಡದೆಂದು ಡಾಂಬರು ಹೊತ್ತು ತಂದ ಖಾಲಿ ಪೀಪೆಗಳಲ್ಲಿ ಕಲ್ಲು - ಮಣ್ಣು ಸೇರಿಸಿ ಅವುಗಳ ಮೇಲೆ ಉದ್ದಕ್ಕೆ ಹಲಗೆ ಹಾಕಿದ್ದರು. ನಗರಸಭೆಗೆ ಹೆಚ್ಚು ಉತ್ಪನ್ನವಿಲ್ಲವೆಂದೋ, ಅಥವಾ ಬಂದ ಉತ್ಪನ್ನ ಆಡಳಿತಗಾರರಿಗೆ ಸಾಲದೆಂತಲೋ, ಕಟ್ಟಡಕ್ಕೆ ಗೋಡೆಗಳಿಲ್ಲದೇ ಹುಲ್ಲಿನ ಛಾವಣಿ ಮಾತ್ರ ಇತ್ತು. ನಾಕೆದಾರನೂ ತನ್ನ ಒಳ್ಳೆ ಬಟ್ಟೆಗಳನ್ನು ನಗರಸಭೆಯ ನೌಕರಿ ಮಾಡುವಾಗ ಯಾಕೆ ಬಳಸಬೇಕೆಂದು ಮೀನು ಹಿಡಿಯುವ ಬಲೆಯಂತಿದ್ದ ಒಂದು ಬನಿಯನ್ ಮತ್ತು ಅದಕ್ಕಿಂತ ಸ್ವಲ್ಪ ಉತ್ತಮವಾದ ಅಂಡರವೇರ ಧರಿಸಿ, ಖುರ್ಚಿಯ ಬದಲಾಗಿ ನಗರಸಭೆಯವರು ಕೊಟ್ಟ ಮುರಕಲು ಚಾರಪಾಯಿ (ಮಂಚ)ಯ ಮೇಲೆ ಮಲಗಿಯೇ ತನ್ನ ಕಾರ್ಯ ನಿರ್ವಹಣೆ ಮಾಡುತ್ತಿದ್ದ. ವೇಳೆಯ ಸದುಪಯೋಗ ಮಾಡಿಕೊಳ್ಳಲು ತನ್ನ ಖಾಸಗಿ ಸೊತ್ತಾದ ಟ್ರಾನ್ಸಿಸ್ಟರ ಮಾತ್ರ ಸದಾ ಅವನಿಗಾಗಿ ಹಾಡಲು ಸಿದ್ಧವಾಗಿಯೇ ಇರುತ್ತಿತ್ತು. ನಾನೊಂದು ವಾಹನವಲ್ಲವೆಂದು ಖಾತ್ರಿಯಾದ ನಂತರ ತಪಾಸಣೆ ಇಲ್ಲದೇ ಊರೊಳಗೆ ಬಿಟ್ಟ! ಉತ್ತರ ದಿಕ್ಕಿಗೆ ಅರವಲಿ ಬೆಟ್ಟಗಳ ಸಾಲು ಇದ್ದುದರಿಂದ ಅಲ್ಲಿ ಬಿದ್ದ ನೀರು ಊರೊಳಗೆ ಹರಿಯದಂತೆ ಊರ ಸುತ್ತಲೂ ಕಾಲುವೆಯೊಂದನ್ನು ರಚಿಸಿದ್ದಾರೆ. ಈಗ ರಸ್ತೆ, ಕಾಲುವೆಯ ಮೇಲೆ ರಚಿಸಿದ ಸಣ್ಣದೊಂದು ಸೇತುವೆಯ ಮೇಲಿಂದ ಹಾದುಹೋಗುತ್ತದೆ. ಇಲ್ಲಿಯ ತನಕ ಕಲ್ಲಿನ ಮೇಲೆ ರೇವೆ ಹಾಕಿ ರಸ್ತೆ ಮಾಡಿದರೆ, ಈಗ ಇಳಿಜಾರಾಗಿದ್ದರಿಂದ ರೇವೆಯ ಮೇಲೆ ಕಲ್ಲು ಹಾಸಿ ರಸ್ತೆ

ಮಾಡಿದ್ದಾರೆ. ಬಲದಿಕ್ಕಿನ ಗುಡಿಸಲು. ಇದುರಿಗೆ ಮುದಕಿಯೊಬ್ಬಳು ಮಹಾತ್ಮಾಗಾಂಧಿಯವರು ಬಳಸುತ್ತಿದ್ದಂತಹ ಚರಕದಿಂದ ನೂಲುತ್ತಿದ್ದಳು. ಎಡಗಡೆಯಲ್ಲಿ ಮೂರಂತಸ್ತಿನ 'ಹವಾ ಮಹಲ್'. ಇದರಲ್ಲಿ ದನಗಳನ್ನೂ ಕಟ್ಟಿದ್ದಾರೆ. ಒಂಟೆಗಳೂ ನಿಂತಿವೆ. ಒಂದು ಮಗ್ಗಲಿಗೆ ದೇವಸ್ಥಾನವಿದೆ. ಮಹಡಿಯ ಮೇಲೆ ಜನ ವಾಸಿಸುತ್ತಿದ್ದರು. ಎದುರಿಗೆ ನೀರಿಲ್ಲದ ಬಾವಿಯಿದೆ. ಅದರ ಕಟ್ಟೆಯ ಮೇಲೆ ನವ ಯುವತಿಯೊಬ್ಬಳು ಚೊಂಬಿನಲ್ಲಿಯ ನೀರಿನಿಂದ ಕೈತೊಳೆದು ನುಣುಪಾದ ಕಲ್ಲಿನಿಂದ ಕಾಲು ತಿಕ್ಕಿ ತಿಕ್ಕಿ ಸ್ವಚ್ಛ ಮಾಡುತ್ತ ಕುಳಿತಿದ್ದಳು.

ಮೇಲೇರಿದ್ದ ಘೂಂಗಟ್ ಪರಪುರುಷನನ್ನು ನೋಡುತ್ತಲೇ ಸರಕ್ಕನೆ ಇಳಿದು ಈ ಹೊಸಬನಾರು ? ಎಂದು ಅವಳಿಗೆ ನೋಡುವಷ್ಟು ಕಿಂಡಿಯನ್ನು ಬಿಟ್ಟಿತು. ಎದುರು ಮನೆಯ ಹುಡುಗಿಯೊಬ್ಬಳು ಮುಸುರೆ ಪಾತ್ರೆಗಳನ್ನು ರಸ್ತೆಯ ಮಧ್ಯದಲ್ಲಿ ತಂದಿಟ್ಟು ನಯವಾದ ಮಳಲಿನಿಂದ ತುಂಬಿ ತಿಕ್ಕಿ, ಸ್ವಚ್ಛಮಾಡಿ, ಒಳ ಬಟ್ಟೆಯಿಂದ ಒರೆಸಿದಾಗ ಅವು ಬಂಗಾರದ ಪಾತ್ರೆಗಳಂತೆ ಹೊಳೆಯಲಾರಂಭಿಸಿದವು. ಇಷ್ಟು ವರ್ಷ, ಉಣ್ಣೆ -ರೇಶಿಮೆಯ ಬಟ್ಟೆಗಳನ್ನಷ್ಟೇ " ಡ್ರಾಯ್ ಕ್ಲೀನ್" ಮಾಡುತ್ತಾರೆಂದು ತಿಳಿದವನಿಗೆ ಭಾಂಡಿಗಳನ್ನೂ ಅದೇ ರೀತಿ ಕ್ಲೀನ್ ಮಾಡಲು ಸಾಧ್ಯವಿದೆಯೆಂದು ನೋಡಿ ಆಶ್ಚರ್ಯವಾಯಿತು. ಬಾಜೂ ಮನೆಯವಳು ಮನೆಯಲ್ಲಿಯ ಕಸಕಡ್ಡಿ, ಕಾಯಿಪಲ್ಯೆಗಳ ಸಿಪ್ಪೆ, ತಂದು ನಾಲ್ಕು ರಸ್ತೆ ಕೂಡುವಲ್ಲಿ ಇದ್ದ "ತಿಪ್ಪೆಗೆ" ಸುರಿದಳು. ಅವುಗಳಲ್ಲಿ ಇರಬಹುದಾದ ಆಹಾರಕ್ಕಾಗಿ ನಾಯಿ - ಹಂದಿಗಳಲ್ಲಿ ಘನಘೋರ ಯುದ್ಧ ನಡೆಯಿತು. ಚಿಕ್ಕ ಚೊಕ್ಕ ಸಂಸಾರದಲ್ಲಿ ವಿಶ್ವಾಸವಿಡದ ಹಂದಿಗಳು ದೊಡ್ಡ ಸಂಖ್ಯೆಯಲ್ಲಿದ್ದರೂ ನಾಯಿಗಳು ಅವುಗಳ ಕಿವಿ, ಮೈದೊಗಲಿಗೇ ಬಾಯಿ ಹಾಕಿದ್ದರಿಂದ ಅವು ಕಾಲಿಗೆ ಬುದ್ಧಿ ಹೇಳಿದವು. ನಾಯಿಗಳಿಗೆ ಹೆಚ್ಚೇನೂ ಸಿಗದ್ದರಿಂದ ಅವು ಜೋಲು ಮುಖ ಹಾಕಿ ಓಡಿದವು. ಈಗ ಅಡಗಿ ನಿಂತ ಹಂದಿಗಳು ಓಡಿ ಬಂದು ನಾಯಿಗಳಿಗೆ ಸೇರದ್ದನ್ನು ತಿಂದು ತೇಗಿದವು. ಸೂಕರಸಂಸಾರ ಹೊಟ್ಟೆ ತುಂಬಿಸಿಕೊಂಡು ಬೇರೇನೂ ಕೆಲಸವಿಲ್ಲದ್ದರಿಂದ ರತಿಕ್ರೀಡೆಯಲ್ಲಿ ತೊಡಗಿದರೆ ಮರಿಗಳು ದ್ವಂದ್ವದಲ್ಲಿ ತೊಡಗಿದವು. ಕಿರಿದಾದ ಓಣಿಯಿಂದ ಹಾಯುತ್ತಿರುವಾಗ ಮಹಡಿಯ ಮೇಲಿಂದ ಸಾಬಣದ ನೀರು ಮೈಮೇಲೆ ಸಿಡಿಯಿತು. ಧನಿಕ ಮಾಸ್ತರಸಾಹೇಬರು ನೀರಿನಿಂದ ಸ್ನಾನ ಮಾಡುತ್ತಿರಬೇಕೆಂದು ರಸ್ತೆಯ ಇನ್ನೊಂದು ಅಂಚಿಗೆ ಸರಿದಾಗ ಕಸಕಡ್ಡಿಯ ರಾಶಿ ದೊಪ್ಪೆಂದು ಒಂದೆರಡು ಇಂಚು ಮುಂದೆ ಬಿದ್ದಿತು. ಮೈಮೇಲೆ ಹಾರಿದ ಧೂಳು ಜಾಡಿಸುತ್ತ ಮುಂದುವರಿದೆ. ರಸ್ತೆಯಲ್ಲಿ ಹರಿಯುತ್ತಿದ್ದ ಕೆಂಬಣ್ಣದ ನೀರು, ಇಲ್ಲಿ ಬಟ್ಟೆಗೆ ಬಣ್ಣಹಾಕುವವನ ಮನೆಯಿರಬೇಕೆಂದು ಸಾರಿತು. ಎಂದೂ ಸ್ವಚ್ಛಮಾಡದ ಹಿತ್ತಾಳೆಯ 'ಕಡಾಯಿ' ಯಲ್ಲಿಯ ಕೇಸರಿ ಬಣ್ಣದಲ್ಲಿ ಗಿರಾಕಿಗಳು ಕೊಟ್ಟ ರುಮಾಲು,

ಓಢಣಿ (ಮುಸುಕು)ಗಳ ಜಾಳು ಬಟ್ಟೆಗಳನ್ನು ಅದ್ದಿ ಬಿಸಿಲಿಗೆ ಹರಹುವುದರಲ್ಲಿ ಮನೆಯ ಸೊಸೆ ತೊಡಗಿದ್ದಳು. ಮುದಿಮಾವ, ಹಲಗೆಯ ಮೇಲೆ ಒಣಗಿದ ಬಣ್ಣದ ಬಟ್ಟೆ ಹರವಿ ಕೈಯಿಂದಲೇ ವಿವಿಧ ನಕ್ಷೆಗಳನ್ನು ಮುದ್ರಿಸುತ್ತಿದ್ದ. ಬಹುಸಂಖ್ಯಾತ ರಾಜಸ್ಥಾನಿಗಳು ಸ್ವಚ್ಛತೆಗಾಗಿ ಬಟ್ಟೆಗಳನ್ನು ನೀರಲ್ಲಿ ತೋಯಿಸುವುದಕ್ಕಿಂತ ಬಿಸಿಲಲ್ಲಿ ಒಣಗಿಸುವುದರಿಂದ ಬಟ್ಟೆಯ ಬಣ್ಣ ಖಾತ್ರಿ ಇರಬೇಕೆಂಬ ಕಡ್ಡಾಯವಿಲ್ಲ. ಅತ್ತೆ, ಬಾಜರಾದ ರೊಟ್ಟಿಗಳನ್ನು ಬಡಿಯುತ್ತ ಒಲೆಯ ಮೇಲಿದ್ದ ಮಣ್ಣಿನ ಮಡಕೆಯ ಒಡಕಲಲ್ಲಿ ಅದನ್ನು ಬೇಯಿಸುತ್ತ ಸೊಸೆಗೆ ಮಾರ್ಗದರ್ಶನ ನೀಡುತ್ತಿದ್ದಳು. ನೆರೆಮನೆಯ ವಿಧುರ ಮುದುಕನೊಬ್ಬ ತನಗೆ ಇಂತಹ ಸಂಸಾರದ ಭಾಗ್ಯವಿಲ್ಲವೆಂದು ಮರುಗುತ್ತ ಶಾಲಾ ಮಕ್ಕಳಿಗೆ ಮಾರಲೆಂದು "ಪಾನಿಪುರಿ" ತಯಾರಿಸುತ್ತಿದ್ದ.

ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತ, ಶುಭ್ರ ಪಂಚೆ ಉಟ್ಟು ತೋಳಿದ್ದ ಬನಿಯನ್ ಹಾಕಿಕೊಂಡ ಮಹಾಶಯನೊಬ್ಬ ಎದ್ದು ನಿಂತು ನಮಿಸಿ ತಾನು ಊರಿನ ಗಡಿಯಾರ ದುರಸ್ತಕನೆಂದು ಪರಿಚಯ ಮಾಡಿಕೊಂಡ. ಅವನು ತನ್ನ ಕೆಲಸಕ್ಕೆ ಹೆಚ್ಚಿಗೆ ಹಣ ತೆಗೆದುಕೊಳ್ಳದಿದ್ದರೂ ಅವನ ದುರಸ್ತಿಯೂ ಹೆಚ್ಚು ದಿನ ತಡೆಯದೆಂದು ನಂತರದ ದಿನಗಳಲ್ಲಿ ತಿಳಿದುಕೊಳ್ಳುವಂತಾಯಿತು. ಎದುರಿಗೆ ಜೋಬನೇರದಲ್ಲಿ ಸುಲಭವಾಗಿ ಕಾಣಸಿಗದ ಬ್ರೆಡ್, ಬೆಣ್ಣೆ, ಬಿಸ್ಕಿಟು ಮಾರುವ ಅಂಗಡಿಯೊಂದು ಕಾಣಿಸಿತು. ನೋಡುತ್ತಿರುವಾಗಲೇ ಅದರ ಯಜಮಾನ ಕೈ ಜೋಡಿಸಿ ಎದ್ದುನಿಂತು ಹರಕು ಮುರುಕು ಇಂಗ್ಲೀಷಿನಲ್ಲಿ ಮಾತನಾಡಿಸಿದ. 'ನನ್ನ ಹೆಸರು ಗ್ಯಾನಚಂದ ತಿವಾರಿ, ಕಾಲೇಜಿನಲ್ಲಿ ಗುಮಾಸ್ತ. ಲಾಭಕ್ಕಿಂತ ಮಾಸ್ಟರ ಸಾಹೇಬರಿಗೆ ಸಹಾಯವಾಗಲೆಂಬ ಉದ್ದೇಶದಿಂದ ಈ ಅಂಗಡಿ ನಡೆಸುತ್ತೇನೆ' ಎಂದ. ಹದಿನೈದು ರೂಪಾಯಿ ಕೊಟ್ಟು ಮೆಂಬರನಾದರೆ ಜೈಪುರದ ತಾಜಾ ಬ್ರೆಡ್ ಸಪ್ಲ್ಯ ಮಾಡುವುದಾಗಿ ವಿವರಿಸಿದ. 'ನಾನಿನ್ನೂ ಸಂಸಾರ ಹೂಡಿಲ್ಲ. ಆನಂತರ ಬಂದು ಭೆಟ್ಟಿಯಾಗುವೆ' ಎಂದು ಬೀಳ್ಕೊಂಡೆ. ನಂತರ ಎರಡು ಹಾಳು ಬಿದ್ದ ಮನೆಗಳು ಬಂದವು. ಅಲ್ಲಿ ಹತ್ತಾರು ಮಕ್ಕಳು ತಾಯ ಹಾಲಿಗೆ ಕಚ್ಚಾಡುತ್ತಿದ್ದುದರಿಂದ ಇದೊಂದು ಸೂಕರ ಪ್ರಸೂತಿಗೃಹವೆಂದು ತಿಳಿಯಿತು. ಹತ್ತಿರ ದಲ್ಲಿಯೇ ಸೂಕರಗಳು ಆರ್ತವಾಗಿ ಚೀರಿದ್ದು ಕೇಳಿಸಿತು. ಹರಿಜನ ಹುಡುಗರು ಹಗ್ಗದ ಕೊಂಡಿ ಮಾಡಿ ಹಂದಿಗಳನ್ನು ಹಿಡಿಯಲು ಯತ್ನಿಸಿದಾಗ ಅವು ಚೀರುತ್ತ ಓಡುತ್ತಿದ್ದವು. ಕೊನೆಗೊಮ್ಮೆ ಬಲಿತ ಹಂದಿಯೊಂದು ಸಿಕ್ಕುಬಿದ್ದಾಗ ಅದರ ಸೊಂಡಿಲು, ಕಿವಿ, ಕಾಲುಗಳನ್ನು ನಾಲ್ಕಾರು ಜನ ಗಟ್ಟಿಯಾಗಿ ಹಿಡಿದರು. ಇನ್ನೊಬ್ಬ ಲಗುಬಗೆಯಿಂದ ಅದರ ಕೂದಲು ಬೋಳಿಸಿದ. ಊರಿನ ಹಂದಿಗಳನ್ನೆಲ್ಲ ಬೇರೆ ಬೇರೆ ಹರಿಜನ ಕುಟುಂಬಗಳು ಸಾಕಿವೆಯಂತೆ. ಉದರ ಪೋಷಣೆಗೆ ಊರವರ ಕೃಪೆಗೆ ಬಿಟ್ಟು ಪ್ರಸೂತಿಗೆ ಹಾಳುಮನೆ ಒದಗಿಸಿದ್ದಾರಂತೆ! ಬೋಳಿಸಿದ ಕೂದಲನ್ನು ತೂಕಮಾಡಿ,

ಬಣ್ಣ ಬಳಿಯುವ ಬ್ರಶ್‌ಗಳನ್ನು ಮಾಡುವ ಕಾರಖಾನೆಗಳಿಗೆ ಪೂರೈಸುತ್ತಿದ್ದು ಅವಕ್ಕೆ ತುಂಬ ಬೇಡಿಕೆಯಿದೆಯಂತೆ.

ಅಂಗಡಿಕಾರನೊಬ್ಬ ಗ್ರಾಮೀಣ ರೂಪಸಿಯೊಬ್ಬಳನ್ನು ಸ್ಟೂಲಿನಮೇಲೆ ಕೂಡ್ರಿಸಿ ಕಾಲನ್ನು ಕೊರಡೊಂದರ ಮೇಲೆ ಇರಿಸುವಂತೆ ಮಾಡಿ, ತನ್ನ ಭಾರವಾದ ಸುತ್ತಿಗೆಯಿಂದ ಅವಳ ಕಾಲಿಗೆ ಬಡಿಯುತ್ತಿದ್ದುದನ್ನು, ಆಕೆ ಕಣ್ಣು ಮುಚ್ಚಿದ್ದನ್ನು, ದೂರದಿಂದ ಕಂಡು ಹೌಹಾರಿದೆ! ಹತ್ತಿರ ಬಂದಾಗ ಸುಮಾರು೨ ಸೇರು ಬೆಳ್ಳಿಯ ಕಾಲ್ಗಡಗವನ್ನು ಆಕೆ ಧರಿಸಿದ್ದು ಬಿಗಿಮಾಡಲು ಹಾಗೆ ಬಡಿಸಿಕೊಂಡದ್ದು ಅರಿವಾಗಿ ನಗುಬಂದಿತು. ನಂತರದ ಮನೆಯ ಜಗುಲಿಯ ಮೇಲೆ ಮುದಿಯನೊಬ್ಬ ಬೆಂಕಿಯ ಮೇಲೆ ಹಳದಿ, ಹಸಿರು, ಕೆಂಪು.ಅರಗನ್ನು ಕರಗಿಸಿ, ಉದ್ದುದ್ದ ಎಳೆಗಳನ್ನು ಮಾಡಿ ಅದನ್ನು ದುಂಡಗಿನ ಕೊರಡಿಗೆ ಸುತ್ತಿ ಹೆಂಗಳೆಯರ ಬಳೆಗಳನ್ನು ನಿರ್ಮಿಸುತ್ತಿದ್ದ. ಅವನ ಪತ್ನಿ ಆರಿದ ಬಳೆಗಳನ್ನು ಸ್ವಲ್ಪ ಬಿಸಿಮಾಡಿ ಅವುಗಳಿಗೆ ವಿವಿಧ ಬಣ್ಣದ, ಆಕಾರದ ಗಾಜುಗಳನ್ನು ಚಿಮ್ಮಟಿಗೆಯಿಂದ ಒತ್ತಿ ಕೂಡ್ರಿಸಿದಳು. ಎಷ್ಟು ಕಡಿಮೆ ಬೆಲೆಯಲ್ಲಿ ಎಷ್ಟು ಸುಂದರ ಬಳೆಗಳನ್ನು ತಯಾರಿಸಿ ಇವರು ಕೊಡುತ್ತಾರಲ್ಲ! ಎನಿಸಿತು. ಹುಡುಗನೊಬ್ಬ ಹಳೆಯ ಮುರಿದ ಬಳೆಗಳನ್ನು ಪುಡಿಮಾಡಿ ಕಾಸಿ, ಬಡಿದು, ಅದಕ್ಕೆ ಬಣ್ಣ ಹಾಕುವದ್ದರಲ್ಲಿದ್ದ. ಕಾಜಿನ ಬಳೆಗಳು ಒಡೆದರೆ ಉಪಯೋಗವಿಲ್ಲ. ಅರಗಿನ ಬಳೆಗಳು ಹಳೆಯವಾದರೆ, ಒಡೆದು ಹೋದರೆ ತಿರುಗಿ ಅವನ್ನು ಉಪಯೋಗಿಸಬಹುದು ಎಂದು ತಿಳಿಯಿತು.

ನಂತರ "ರೇಗಾರ" ಓಣಿ ಬಂದಿತು. ರಾಜಸ್ಥಾನಿ ಸಮ್ಮಗಾರ, ರಾಜಸ್ಥಾನಿ ಬುಟುಗಳಿಗಾಗಿ ಚರ್ಮವನ್ನು ಕತ್ತರಿಸಿ ಬಿಸಿಲಿಗೆ ಹರವಿದ್ದ. ಆತ ಮಾರಾಟಕ್ಕೆ ಇಟ್ಟ ಬೂಟುಗಳಲ್ಲಿ ಎಡ ಮತ್ತು ಬಲಗಾಲಿನ ಬೂಟುಗಳಲ್ಲಿ ಅಂತರವಿಲ್ಲದ್ದು ನೋಡಿ ಮೋಜೆನಿಸಿತು. ಒಂದು ಕಳೆದುಕೊಂಡರೆ, ಇಲ್ಲವೇ ನಾಯಿ ಕದ್ದೊಯ್ದರೆ ಜೋಡಿ ಹಾಳಾಗದಂತೆ ಮಾಡಲು ಇದು ಉಪಾಯವಾಗಿರಬಹುದು, ಎಂದುಕೊಂಡೆ. ಅಲ್ಲದೇ ಸ್ತ್ರೀಪುರುಷರ "ಜೂತೆ"ಗಳಲ್ಲಿ ಯಾವ ಭೇದವೂ ಇರಲಿಲ್ಲ. ಸಣ್ಣ ಸಣ್ಣ ಮಕ್ಕಳುಮೇಣ ಸವರಿದ ನೂಲಿನಿಂದ ಚರ್ಮವನ್ನು ಹೊಲಿಯುತ್ತಿದ್ದಾರೆ. ಒಬ್ಬನು ಅಂಚುಗಳಿಗೆ ಕೆಂಬಣ್ಣ ಸವರಿದರೆ, ಇನ್ನೊಬ್ಬನು ನೂಲಿನ ಬಣ್ಣದ ಗೊಂಡೆಗಳನ್ನು ಹಚ್ಚುತ್ತಿದ್ದಾನೆ. ನೆರೆಯ ಚಮಗಾರ ಒಂಟೆಯ ಮೇಲೆ ಹಾಕುವ ಥಡಿಯ ತಜ್ಞನೆಂಬಂತೆ ಕಾಣುತ್ತಿದ್ದ. ಹಗುರಾದ ಬೆಂಡು ಕಟ್ಟಿಗೆಯಿಂದ ಜೋಡಿ ಆಸನಗಳನ್ನು ಒಂಟೆಯ ಡುಬ್ಬದ ಮೇಲೆ ಸರಿಯಾಗಿ ಕೂಡ್ರುವಂತೆ ನಿರ್ಮಿಸಿ ಅದಕ್ಕೆ ಗೋಣಿಯನ್ನು ಮೊಳೆಗಳಿಂದ ಬಡಿದಿದ್ದಾನೆ. ಮೃದು ಕಟ್ಟಿಗೆ ಮತ್ತು ಚರ್ಮಗಳನ್ನು ಸರಸಿನಿಂದ ಜೋಡಿಸಿದ್ದಾನೆ. ಆಸನದ ಸುತ್ತಲೂ ಕೆಂಪು, ಹಳದಿ, ಕೇಸರಿ, ಹಸಿರು ಗೊಂಡೆಗಳಿಂದ ಅಲಂಕರಿಸಿದ್ದಾನೆ. ಮುಂದಿನ

ಆಸನದಲ್ಲಿ ಕುಳಿತವ, ಜಾರದಂತೆ ಮಾಡಿದರೆ ಹಿಂದಿನ ಆಸನದಲ್ಲಿ ಸವಾರಿ ಮಾಡುವವನಿಗೆ ಹಿಡಿದುಕೊಳ್ಳಲು ನಾಳದ ಆಕಾರದ ಸಲಾಕಿಯನ್ನು ಜೋಡಿಸಿದ್ದಾನೆ. ಡುಬ್ಬದಿಂದ ಥಡಿ ಜಾರದಂತೆ ಕಟ್ಟಲು ದಾರಗಳನ್ನು ಹಾಯಿಸುವುದಕ್ಕಾಗಿ ಸ್ಥಳವನ್ನು ಬಿಟ್ಟಿದ್ದಾನೆ. ಈತನ ವಂಶಜರು ರಾಣಾ ಪ್ರತಾಪನ ಕಾಲದಿಂದಲೂ ಇಂತಹದೇ ಥಡಿಗಳನ್ನು ನಿರ್ಮಿಸಿ ಹೊಟ್ಟೆ ತುಂಬಿಕೊಂಡಿರಬೇಕು! ಅನಿಸಿತು.

ಇನ್ನೊಂದು ಬೀದಿಯ ಮನೆಯೊಂದರ ಒಳಗೆ ಜೋಡೆತ್ತುಗಳು, ವರ್ತುಲಾಕಾರವಾಗಿ ತಿರುಗುತ್ತ ಗಾಣವನ್ನು ತಿರುವುತ್ತಿದ್ದುದರಿಂದ ಇದು ಗಾಣಿಗನ ಮನೆಯೆಂದು ತಿಳಿಯಿತು. ಎಳ್ಳು ಗಾಣದಲ್ಲಿ ತಿರುವಿ ತಾಜಾ ಎಣ್ಣೆ ಕೊಂಡೊಯ್ಯಲು ಗಿರಾಕಿಗಳು, ಭರಣಿ, ಬಾಟ್ಲಿ, ಪಾತ್ರೆಗಳೊಂದಿಗೆ ಸಿದ್ಧವಾಗಿ ನಿಂತಿದ್ದರು. ಕೆಲವರು ಎಣ್ಣೆಗೆ ತಾವು ಬೆಳೆದ ಎಳ್ಳು ತಂದಿದ್ದರು. ನಂತರ ಹಿಟ್ಟಿನ ಗಿರಣಿ ಬಂದಿತು. ಬಾಜರಾ ತಂದವನು ಬಡವನೆಂದೂ, ಗೋದಿಯನ್ನು ತಂದವ ಸಿರಿವಂತನೆಂದೂ ಯಾರೂ ಹೇಳುವಂತಿತ್ತು. ಹಿಟ್ಟು ಮಾಡಿದ ಕೂಲಿ ಪ್ರತಿ ಕಿಲೋಗೆ ಎರಡು ಪೈಸಾ ಮಾತ್ರ ಎಂದು ತಿಳಿದು ಆನಂದವಾಯಿತು. ಕಡೆಗೆ ನೋಡಿದರೆ ಒಂದು ಕಿಲೋದಲ್ಲಿ ಐವತ್ತು ಗ್ರಾಮ ಹಿಟ್ಟನ್ನು 'ತ್ರುಟಿ' ಎಂದು ಇಟ್ಟುಕೊಳ್ಳುವ ಪದ್ಧತಿ ಇದೆ ಎಂದು, ಊರಿನ ಹೆಚ್ಚು ಜನ ತಾವೇ ಹಿಟ್ಟನ್ನು ಬೀಸಿಕೊಳ್ಳುವದರಿಂದ, ಹೆಚ್ಚಿನ ವ್ಯಾಪಾರವಿಲ್ಲವೆಂದು, ಮಾಲಕನು ವಿವರಿಸಿದ. ಅತ್ತ ಇತ್ತ ಓಡಾಡುತ್ತಿದ್ದ ಹುಂಜಗಳು ನಾನು ಮುಸಲರ ಕೇರಿಗೆ ತಲುಪಿದೆ, ಎಂದು ಸೂಚಿಸಿದವು. ಹೆಂಗಳೆಯರು ಕೆಂಪು ಚೂಡಿದಾರ ಪಾಜಾಮಾ, ಉದ್ದ ತೋಳಿನ ಶರ್ಟು ತೊಟ್ಟು ಓಣಿಯಲ್ಲಿ ತಲೆಮರೆಸಿಕೊಂಡಿದ್ದರು. ಕೈಗೆ ಬಳೆ, ಕಾಲಿಗೆ ಬೆಳ್ಳಿಯ ಗೆಜ್ಜೆ ಧರಿಸಿ ಬಾಯಿತುಂಬ ವೀಳ್ಯ ಮೆದ್ದು ತುಟಿಕೆಂಪು ಮಾಡಿಕೊಂಡಿದ್ದರು. ಈ ಹೊಸಬ ಯಾರು ಎಂದು ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿದರು. ನೂಲಿಗೆ ವಿವಿಧ ಬಣ್ಣಗಳನ್ನು ಗಂಡಸರು ಕೊಡುತ್ತಿದ್ದರೆ, ಮಕ್ಕಳು ಬಣ್ಣ ಹಾಕುವ ನೂಲನ್ನು ನೀರಲ್ಲಿ ಕುದಿಸುತ್ತಿದ್ದರು. ಹೆಂಗಳೆಯರು ಗಿರಾಕಿಗಳು ತಂದುಕೊಟ್ಟ ಬಟ್ಟೆಗಳಿಗೆ ವಿವಿಧ ನಕ್ಷೆಗಳು ಬರುವಂತೆ ದಾರ ಸುತ್ತಿ ಗಂಟು ಹಾಕುತ್ತಿದ್ದರು. ಈ ರೀತಿಯ 'ಬಾಂಧಣಿ' (ಕಟ್ಟಿ ಬಣ್ಣ ಹಾಕಿದ) ರಾಜಸ್ಥಾನಿ ಸೀರೆಗಳು ಪ್ರಸಿದ್ಧವಿವೆ. ಹಸಿದ ಹೊಟ್ಟೆ ಊಟದ ನೆನಪು ಮಾಡಿ ಕೊಟ್ಟು, ಮುಖ್ಯ ಪೇಟೆಯನ್ನು ನೋಡುವ ಗೋಜಿಗೆ ಹೋಗದೇ ಬೇಗ ಮನೆಗೆ ಬಂದೆ.

೨. ಪೇಟೆಯಲ್ಲಿ

ಎಲ್ಲ ಊರುಗಳಲ್ಲಿ ಕೊಳಚೆ ಕಾಲುವೆಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ನಿರ್ಮಿಸಿದರೆ ಜೋಬನೇರ ನಗರಪಾಲಿಕೆಯವರು ರಸ್ತೆಗೆ ಅಡ್ಡವಾಗಿ ಏಕೆ ನಿರ್ಮಿಸಿದ್ದಾರೆ? ಎಂದು ಯೋಚಿಸುತ್ತ ನಡೆದಿರುವಾಗ ಕಾಲೇಜ ವಿದ್ಯಾರ್ಥಿಯೊಬ್ಬ ವೇಗವಾಗಿ ಸಾಯಕಲ್ ಓಡಿಸಿಕೊಂಡು ಬಂದ. ಆ ಇಕ್ಕಟ್ಟಿನ ಸ್ಥಳದಲ್ಲಿ ಒಂದೆಡೆ ತಿಪ್ಪೆ ರಾಶಿ, ಇನ್ನೊಂದು ಕಡೆಗೆ ಸುಖನಿದ್ರೆಯಲ್ಲಿರುವ ಸೂಕರಗಳು, ಯಾವ ಕಡೆಗೆ ಸರಿಯಬೇಕೆಂದು ಅನುಮಾನಿಸಿ, ಸವಾರಿ ಸಾಯಕಲ್ ಇಳಿದು ಗಟಾರನ್ನು ದಾಟಿ ತಿರುಗಿ ಏರಿ ಹೊರಟುಹೋದ. ಆಗ ಹೊಳೆಯಿತು ಈ ಅಡ್ಡ ಗಟಾರಗಳು, ವೇಗ ಪರಿಮಿತಿಯನ್ನು ನಿಯಂತ್ರಿಸುವ ಉಪಾಯಗಳೆಂದು! ಎದುರಿನಿಂದ ನೀರು ತುಂಬಿದ ಎತ್ತಿನಗಾಡಿ ಬಂದಿತು. ದಾರಿಹೋಕರಿಗೂ ನೀರು ಕೊಳ್ಳುವವರಿಗೂ ತಿಳಿಯಲೆಂದು ಕೈಯಲ್ಲಿಯ ಬಾರಕೋಲಿನಿಂದ ಪಿಪಾಯಿಯ ಮೇಲೆ ಬಡಿಯುತ್ತಲೇ ಬಂದ. ಕಾಲುವೆ ಬಂದಾಗ ಎತ್ತುಗಳನ್ನು ನಿಲ್ಲಿಸಿ ಚಕ್ರಗಳು ಹೋಗುವಂತೆ ಎರಡು ಕಲ್ಲುಗಳನ್ನು ಕಾಲುವೆಯ ಮೇಲೆ ಜೋಡಿಸಿದಾಗ ಅದು ಮುಂದಕ್ಕೆ ಹೋಯಿತು. ರಸ್ತೆಗಳು ಮೂರರಿಂದ ಮೂವತ್ತು ಅಡಿ ಅಗಲವಾಗಿದ್ದರೆ ಸರಾಸರಿ ಆರೇ ಅಡಿಗಳಿಗೆ ಬರುವಂತಿತ್ತು. ಅಸಲಪುರದಿಂದ ಜಯಪುರಕ್ಕೆ ಹೋಗುವ ಮಾರ್ಗಕ್ಕಿಂತ ಕಿರಿದಾಗಿತ್ತು. ಇದೇ ಮಾರ್ಗದಲ್ಲಿ ಮುಖ್ಯ ಪೇಟೆಯಿದೆ. ಊರೊಳಗೆ ಹೋಗುತ್ತಿದ್ದಂತೆ ಎಲ್ಲಕ್ಕೂ ಮೊದಲು ರಾಜ - ಮಹಾರಾಜರಿಗೆ ವಂದನೆಗಳನ್ನು ಸಲ್ಲಿಸಲು ನಿಂತ ತೋಪುಗಳಂತೆ ಭಾಸವಾಗುವ ಒಂಟೆಗಾಡಿಗಳು. ರಾಜರನ್ನು ಕಳೆದುಕೊಂಡ ರಾಜಸ್ಥಾನಿಗಳಿಗೆ ಇಷ್ಟಾದರೂ ಗೌರವ ಬೇಡವೇ? ಮೋಟಾರಿನ ಹಳೇ ಟಾಯರಗಳನ್ನು ಗಾಲಿಗಳಾಗಿ ಬಳಸಿ, ಒಂಟೆಯ ಕುತ್ತಿಗೆಗೆ ನಿಲುಕುವಂತೆ ಉದ್ದ ನೊಗ ರಚಿಸಿರುತ್ತಾರೆ. ಉಕ್ಕಿನ ಪಟ್ಟಿಗಳನ್ನು ಬಿಗಿದು ಚೌಕದಂತೆ ಮಾಡಿದ ಗಾಡಿ ಸಾಮಾನುಗಳ ಚೀಲ, ಕಲ್ಲು, ಮಣ್ಣು, ಸಿಮೆಂಟ, ಕಟ್ಟಿಗೆ, ಉಕ್ಕುಗಳನ್ನು ತುಂಬಿ ಒಯ್ಯಲು ಉಪಯೋಗವೇ ಹೊರತು ಪ್ರವಾಸಕ್ಕೆ ಅಷ್ಟೊಂದು ಅನುಕೂಲವಾಗಿಲ್ಲ. ಒಂಟೆಗಳನ್ನು ಹಿತ್ತಿಲಲ್ಲಿ ಕಟ್ಟಿದರೂ ಗಾಡಿಗಳನ್ನು ರಸ್ತೆಯಲ್ಲಿಯೇ ಬಿಡುವುದು ವಾಡಿಕೆ. ಒಂಟೆ ಮೊಣಕಾಲು, ಮೊಣಕೈಯೂರಿ, ಎದೆಯ ಮೇಲಿನ

ದಿನ್ನೆಯಷ್ಟೇ ನೆಲಕ್ಕೆ ಊರುವಂತೆ ಅಸಹ್ಯವಾಗಿ ಕುಳಿತಿತ್ತು. ಪ್ರಾಣಿ, ಕಾಣಲು ಅಸಹ್ಯಕಾರಿಯಾಗಿರುವಂತೆ ಕೂಡ್ರುವುದೂ ಅಸಹ್ಯವಾಗಿರಬೇಕೇ? ಎಂದು ಯೋಚಿಸುತ್ತಿರುವಾಗ ಚಿಕ್ಕಂದಿನ ಪಾಠಗಳ ನೆನಪಾಯಿತು, "ಒಂಟೆಗೆ ಮಳಲುಗಾಡಿನ ಹಡಗವೆಂದು ಏಕೆ ಎನ್ನುತ್ತಾರೆ?" ಕೆಂಡದಂತೆ ಕಾದ ಮಳಲಲ್ಲಿ ತನ್ನ ಶರೀರವನ್ನು ಸಂರಕ್ಷಿಸಿಕೊಳ್ಳಲು ದೇಹದ ಆದಷ್ಟು ಹೆಚ್ಚಿನ ಭಾಗವನ್ನು ಭೂಮಿಯಿಂದ ದೂರ, ಎತ್ತರಕ್ಕೆ ಏರಿಸಿ ಹಿಡಿಯುವದು ಅವಕ್ಕೆ ರೂಢಿಯಾಗಿರಬೇಕು. ಒಂಟೆ ತನ್ನ ಡುಬ್ಬದಲ್ಲಿರುವ ನೀರಿನ ಚೀಲವನ್ನು ಒಮ್ಮೆ ತುಂಬಿಕೊಂಡಿತೆಂದರೆ ಒಂದು ತಿಂಗಳಾದರೂ ನೀರಿಲ್ಲದೇ ಬದುಕಬಲ್ಲದು, ಎಂದೂ ನೀರಿಲ್ಲದೇ ಸಾಯುವವರನ್ನು ಎಷ್ಟೋ ಸಲ ಒಂಟೆಯನ್ನು ಕಡಿದು ಅದರ ನೀರನ್ನು ಕೂಡಿಸಿ ಬದುಕಿಸಲಾಯಿತೆಂದೂ ಶಾಲೆಯ ಹುಡುಗರು ಹೇಳುತ್ತಿದ್ದ ದಂತಕಥೆಗಳು ನೆನಪಾಗಿ ನಗುಬಂದಿತು. ಒಂಟೆ ತನ್ನ ಚೀಲದಲ್ಲಿ ನೀರನ್ನು ಸಂಗ್ರಹಿಸದೇ ಅದಕ್ಕಾಗಿಯೇ ನಿರ್ಮಿತವಾದ ದೇಹದ ಛಿದ್ರಗಳಲ್ಲಿ ಸಂಚಯಿಸುತ್ತದೆ. ಒಂಟೆಗೆ ಬಾಯಾರಿಕೆಯಾದಾಗ ಮಾತ್ರ ಆ ನೀರನ್ನು ಸೇವಿಸಬಹುದೇ ಹೊರತು ಮಾನವನಿಗೆ ಅದು ಸಿಗುವ ಸಾಧ್ಯತೆಯಿಲ್ಲ. ಕಳ್ಳರು, ದರೋಡೆಗಾರರು ಒಂಟೆಗಳನ್ನು ಚೆನ್ನಾಗಿ ತರಬೇತುಗೊಳಿಸಿ ತಮ್ಮ ವೃತ್ತಿಗೆ ಬಳಸುತ್ತಾರಂತೆ. ಅದಕ್ಕೆ ಸೆರೆ ಕುಡಿಸಿ ಓಡಿಸಿದರೆ ಎಂಥ ಪೋಲಿಸ ವ್ಯಾನಿಗೂ ಹಿಂಬಾಲಿಸುವುದು ಸಾಧ್ಯವಿಲ್ಲವಂತೆ! ನೆರೆಮನೆಯ ಒಂದು ಒಂಟೆಗೆ ಸಿಟ್ಟು ಬಂದಿರಬೇಕು. ಹಿಂಗಾಲು ಅಗಲಮಾಡಿ ಮಾಂಸದ ಮುದ್ದೆಯಂತೆ ಇದ್ದ ನಾಲಗೆಯನ್ನೊಮ್ಮೆ ಹೊರಗೆ ತೆಗೆದು ಮಂಗನಂತೆ ಹಲ್ಲು ಕಿರಿಯುತ್ತ ಆರ್ತವಾಗಿ ಕೂಗಿತು. ಯಜಮಾನ ಲಗುಬಗೆಯಿಂದ ಹೊರಗೆ ಬಂದು "ಹತ್ತಿರ ಯಾರೂ ಹೋಗದಿರಿ, ಸಿಟ್ಟಿನ ಭರದಲ್ಲಿ ಒಂಟೆಗಳು ಮನುಷ್ಯನ ತಲೆಗೇ ಬಾಯಿ ಹಾಕಿದ ಉದಾಹರಣೆಗಳಿವೆ"ಯೆಂದ. ನಂತರ ಒಂಟೆಯನ್ನು ಸಾಂತ್ವನಗೊಳಿಸಲು ಹೋದ. ಇಂಥ ರುದ್ರಾವತಾರ ತಾಳಿದ ಒಂಟೆಗಳಿಂದ ತಮ್ಮ ತಲೆಗಳನ್ನು ಸಂರಕ್ಷಿಸುವ ಸಲುವಾಗಿಯೇ ಇವರು ಮೂವತ್ತು ಮೊಳದ ಮುಂಡಾಸು ಸುತ್ತುತ್ತಿರಬಹುದೇ! ಎನಿಸಿತು. ಒಂಟೆಯ ಮರಿಗಳಿಗೆ ಮೈತುಂಬ ಕೂದಲು ಇದ್ದರೂ ಅವು ಬೆಳೆದಂತೆ ಕಿರಿದಾಗುತ್ತ ಹೋಗುತ್ತವೆ. ಅಲ್ಲದೇ ಕಾಲಕಾಲಕ್ಕೆ ಅವನ್ನು ಕತ್ತರಿಸುತ್ತಿರುತ್ತಾರೆ.

ಎದುರಿನಿಂದ ಒಂಟೆ ಗಾಡಿಯೊಂದು ಜನರನ್ನು ಹೊತ್ತು ತರುತ್ತಿತ್ತು. ಅರೇ! ಇದೇನು ಪ್ರವಾಸಿಕರು ಬಣ್ಣ ಬಣ್ಣದ ರಜಾಯಿಯಲ್ಲಿ ಅಡಗಿ ಕುಳಿತಿರುವರಲ್ಲ. ಒಣ ಬಿಸಿಲು, ಮೈ ಕೊರೆಯುವ ತಂಗಾಳಿಯಿಂದ ಸಂರಕ್ಷಿಸಿಕೊಳ್ಳಲು ಇರಬಹುದು ಎಂದು ಹಾದು ಮುಂದೆ ಹೋಗುತ್ತಿದ್ದಾಗ ರಜಾಯಿಯೊಳಗಿನ ಹೆಣ್ಣು ಕಣ್ಣುಗಳು ದಿಟ್ಟಿಸಿ ನೋಡುತ್ತಿದ್ದ ಭಾಸವಾಗಿ ತಿರುಗಿ ನೋಡಿದೆ. ಆಕರ್ಷಕ ಬಟ್ಟೆ ಧರಿಸಿದ ಮೂರು

ನಾಲ್ಕು ಹಸುಳೆಗಳು ಮುಖ ಹೊರಗೆ ಹಾಕಿ ನನ್ನನ್ನು ನೋಡಿ ಮತ್ತ ರಜಾಯಿಯೊಳಗೆ ಸೇರಿ ಕೊಂಡವು. ಅವರ ಹಿಂದಿನ ಗಾಡಿಯಲ್ಲಿ ನಾಲ್ಕು, ಎಂಟು - ಹತ್ತು ವರ್ಷದ ಹುಡುಗರು ಜರಿಯಂಚಿನ ಪಗಡಿ (ರುಮಾಲು, ಕಿವಿಗೆ ಆಭರಣ ಧರಿಸಿ, ಹೊಳೆಯುವ ಬಟ್ಟೆಯ ಜೋಧಪುರಿ, ಚೂಡೀದಾರ್ ಪಾಯಜಾಮಾ, ಕಾಲಿಗೆ ಜರಿಯ ಕೆಲಸ ಮಾಡಿದ 'ಜೂತೆ' ಧರಿಸಿ ಎಡಗಡೆಯ ಸೊಂಟಕ್ಕೆ ತಮಗಿಂತ ಉದ್ದವಾದ 'ತಲವಾರ'ವನ್ನು ಸಿಗಿಸಿಕೊಂಡಿದ್ದವು. ಕೂಡಲೇ ಹೊಳೆಯಿತು, ಇದು ಸಾಮೂಹಿಕ ಮದುವೆಯ ದಿಬ್ಬಣವೆಂದು. ಗೋಲಿ, ಚಿಣಿಫಣಿ, ಕಣ್ಣುಮುಚ್ಚಾಲೆ ಆಡುವ ದಿನಗಳಲ್ಲಿಯೇ ಸಂಸಾರದಲ್ಲಿ ನಿಜವಾದ ಪತಿ-ಪತ್ನಿಯರ ಆಟಗಳನ್ನೇ ಇಲ್ಲಿಯ ಬಾಲದಂಪತಿಗಳು ಆಡುವ ಪ್ರಸಂಗ ತೀರಾ ಸಾಮಾನ್ಯ. ಶಾರದಾ ಕಾನೂನು ಜಾರಿಗೆ ಬಂದು ಯಾವ ಕಾಲವಾಯಿತೋ! ಆದರೆ ರಾಜಸ್ಥಾನದಲ್ಲಿ ಬಾಲವಿವಾಹಗಳೇ ಹೆಚ್ಚು ಪ್ರಚಲಿತವಿವೆ. ನಮ್ಮ ದೇಶದಲ್ಲಿ ಎಷ್ಟು ಕಾನೂನುಗಳನ್ನು ಮಾಡಿದರೇನು? ಅವುಗಳನ್ನು ಜಾರಿಯಲ್ಲಿ ತರುವವರಿಗಾಗಲಿ ಇತರರಿಗಾಗಲಿ ಅವುಗಳಲ್ಲಿ ನಂಬಿಗೆಯಿಲ್ಲದ್ದರಿಂದ ಅವು ಪರಿಣಾಮವನ್ನು ಕೊಡುವುದೇ ಇಲ್ಲ. ಅಂತೆಯೇ ವರದಕ್ಷಿಣೆ, ನಿರಕ್ಷರತೆ, ಅಸ್ಪೃಶ್ಯತೆಯ ನಿರ್ಮೂಲನ ಕಾಯಿದೆಗಳು ಹುಟ್ಟುವ ಮೊದಲೇ ಸತ್ತಿರುತ್ತವೆ.

ಎದುರಿಗೆ ಬಂದ ದೊಡ್ಡ ಮಳಲದಿನ್ನೆ ಈ ಊರಿನ ಬಸ್ ನಿಲ್ದಾಣ. ಅದರ ಮೂಲೆಯಲ್ಲಿ ಅಲೆಮಾರಿಗಳಾದ 'ಗಡಿಯಾಲೋಹಾರ'ರು ಬೀಡುಬಿಟ್ಟಿದ್ದಾರೆ. ತಮ್ಮ ಚಕ್ಕಡಿಗಳನ್ನು ನಿಲ್ಲಿಸಿ ಜೋಪಡಿ ಕಟ್ಟಿ ಸಂಸಾರ ಹೂಡಿದ್ದಾರೆ. ಒಂದು ಕುಟುಂಬ ಕಲ್ಲಿಗೆ ಸಾಣೆ ಹಿಡಿಯುತ್ತಿದ್ದರೆ, ಇನ್ನೊಂದು ಬೀಗಗಳನ್ನೂ, ಮತ್ತೊಂದು ಚಾಕುಗಳನ್ನೂ ಮಾಡುವದರಲ್ಲಿ ತೊಡಗಿದೆ. ಒಂದೆಡೆ ಹೆಂಗಸೊಬ್ಬಳು ಬೆಂಕಿಗೆ ಚರ್ಮದ ಕೊಳವೆಯಿಂದ ಗಾಳಿ ಹಾಕುತ್ತಿದ್ದರೆ, ಗಂಡಸು ಕಾದ ಲೋಹವನ್ನು ಬಡಿಯುತ್ತಿದ್ದಾನೆ. ಒಬ್ಬ ಗೃಹಿಣಿ ಬೀಸುವ ಕಲ್ಲಿಟ್ಟು ಬಾಜ್ರಾ ಬೀಸುತ್ತಿದ್ದಾಳೆ. ಪಕ್ಕದಲ್ಲೇ ಕುಮಾರಿಯೊಬ್ಬಳು ಕಲ್ಲಿನ ಒಲೆಯ ಮೇಲೆ ಮಡಕೆಯ ಚೂರಿನಲ್ಲಿ ಬಾಜ್ರಾ ರೊಟ್ಟಿ ಬೇಯಿಸಿ ತಮ್ಮ - ತಂಗೆಂದಿರಿಗೆ ತಿನ್ನಿಸುತ್ತಿದ್ದಾಳೆ. ಈ ಜನಾಂಗ ಕಪ್ಪಾಗಿದ್ದರೂ ಗಟ್ಟಿ ಮುಟ್ಟಾಗಿ, ಆಕರ್ಷಕ ರೂಪವುಳ್ಳವರು. ನಗರಸ್ಥ ರಾಜಾಸ್ಥಾನಿ ಮಹಿಳೆಯರ ಬೊಜ್ಜಿಗೂ ಈ ಹೆಂಗಳೆಯರ ಮಾಟವಾದ ಮೈಕಟ್ಟಿಗೂ ಏನೇನೂ ಸಂಬಂಧವಿಲ್ಲ. ಮೈ ಕೈ, ಎದೆ, ಮುಖ ಹಣೆಯ ಮೇಲೆಲ್ಲ ವಿವಿಧ ಹಚ್ಚೆಯ ನಕ್ಷೆಗಳನ್ನು ಹಾಕಿಸಿಕೊಂಡಿದ್ದಾರೆ. ಗಡಿಯಾ ಲೋಹಾರರಿಗೆ ಚಾರಿತ್ರಿಕ ಹಿನ್ನೆಲೆಯಿದೆ. ರಾಜಸ್ಥಾನದ ಗ್ರಾಮೀಣ ಜನರ ಲೋಹದ ಸಾಮಾನುಗಳ ಅವಶ್ಯಕತೆಗಳನ್ನು ಪೂರೈಸುತ್ತಾ ಹಳ್ಳಿಯಿಂದ ಹಳ್ಳಿಗೆ ತಿರುಗುವ ಈ ಜನಾಂಗ ರಜಪೂತ ಅರಸರಿಗೆ ನಿಷ್ಠೆಯಿಂದ ನಡೆದುಕೊಂಡಿದೆಯಂತೆ. ಮೊಗಲರ ವಶವಾದ ಚಿತೋಡಗಡವನ್ನು ಮರಳಿ ಪಡೆಯುವ ತನಕ ಒಂದೆಡೆ ನಿಲ್ಲದೇ ಹಾಸಿಗೆಯ

ಬದಲು ಹುಲ್ಲಿನ ಮೇಲೆ ಮಲಗುವೆ ಎಂದು ರಾಣಾ ಪ್ರತಾಪನು ಪ್ರತಿಜ್ಞೆ ತೊಟ್ಟಾಗ ಆತನ ಅನುಯಾಯಿ ಲೋಹಾರರೂ ಈ ಪ್ರತಿಜ್ಞೆ ಕೈಕೊಂಡರಂತೆ. ಈ ಮಾತಿಗೆ ಶತಮಾನಗಳೇ ಕಳೆದು ಹೋದರೂ, ಅವರ ವಂಶಜರಾದ ಈ ಜನಾಂಗವೂ ಅದೇ ಪಣ ಮುಂದುವರಿಸಿದೆಯಂತೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅವರು ಸ್ಥಾಯಿಯಾಗಿ ನೆಲೆಸುವಂತೆ ಮಾಡಲು ಬೃಹತ್ತರವಾದ ಗೃಹನಿರ್ಮಾಣ ಯೋಜನೆಯೊಂದನ್ನು ಸಿದ್ಧಪಡಿಸಿ, ಲೋಹಾರರನ್ನೆಲ್ಲ ಕರೆಸಿ, ಅವರ ಶತಮಾನಗಳ ಹಿಂದಿನ ಪ್ರತಿಜ್ಞೆ ಈಡೇರುವ ಸಮಯ ಬಂದಿದೆ, ಭಾರತೀಯ ಪ್ರಧಾನಿ ಈಗ ದಿಲ್ಲಿಯ ಆಳರಸು' ಎಂದು ವಿವರಿಸಿ ನಟನೆಯ ಯುದ್ಧದಲ್ಲಿ (ಅತಿಥಿಗಳಾಗಿ ಬಂದ) ಪ್ರಧಾನಿಗಳನ್ನು ಸೋಲಿಸಿ, ಇನ್ನು ಮುಂದೆ ಲೋಹಾರರು ನೆಲೆಯಾಗಬೇಕೆಂದು ಅವರ ವಾಸಕ್ಕಾಗಿ ಎಲ್ಲ ಸವಲತ್ತುಗಳನ್ನು ಕೊಟ್ಟರೂ ಈ ನಾಟಕದಲ್ಲಿ ನಂಬಿಗೆಯಿಡದೇ, ಅವರು ರಕ್ತಗತವಾದ ಅಲೆಮಾರಿ ಜೀವನವನ್ನೇ ಮುಂದುವರಿಸಿದ್ದಾರೆ.

ವಾದ್ಯಗಳು ಮೊಳಗುತ್ತಿರುವಾಗ ಪಟಾಕ್ಷಿಗಳು ಸಿಡಿಯುತ್ತಿರುವಾಗ ಜನಸಮೂಹವೊಂದು ಎದುರಿಗೆ ಬರುವುದು ಕಂಡಿತು. ಮದುವೆಯ ಮೆರವಣಿಗೆಯಿರಬೇಕೆಂದು ಅಂಗಡಿಯೊಂದರ ಪಕ್ಕಕ್ಕೆ ನಿಂತೆ. ಆದರೆ ಮದುಮಗನಿರಬೇಕಿದ್ದ ಸ್ಥಳದಲ್ಲಿ ದಿಗಂಬರ ಸನ್ಯಾಸಿಯೊಬ್ಬನನ್ನು ನೋಡಿ ಬೆಚ್ಚಿದೆ. ಆತನ ಹಿಂದೆ ರೇಶಿಮೆ ಬಟ್ಟೆ ಬಂಗಾರದ ಚೈನು, ಬಂಗಾರದ ಬಟನ್‌ಗಳನ್ನು ಧರಿಸಿದ ಪುರುಷ ಸಮೂಹ ಅದರ ಹಿಂದೆ ಜರತಾರಿಯ "ಗೋಟಾ" ಬಟ್ಟೆ ಧರಿಸಿ ಬಂಗಾರವನ್ನು ಹೇರಿಕೊಂಡ ಹೆಂಗಳೆಯರ ಗುಂಪು ಹೊರಟಿತ್ತು. ಅಂಗಡಿಕಾರರಲ್ಲಿ ಹಲವರು ಜಯಜಯಕಾರ ಹಾಕಿದರು. ಇನ್ನ್ಯಾರೋ ಚುರು ಮುರಿಯನ್ನು ಪುಷ್ಪಗಳಂತೆ ಎರಚಿದರು. ನಾನು ನಿಂತ ಅಂಗಡಿಯವ ಮೆರವಣಿಗೆ ದಾಟಿದ ಮೇಲೆ "ಮಾಸ್ತರ ಸಾಹೇಬ ನಮಸ್ತೆ" ಎಂದು, "ಹೊಸದಾಗಿ ಊರಿಗೆ ಬಂದಿರುವಿರಾ? ಕಾಲೇಜಿನಲ್ಲಿ ಪ್ರಾಧ್ಯಾಪಕರಿರುವಿರಾ?" ಎಂದು ಕೇಳಿದ. ನಂತರ ಮೆರವಣಿಗೆಯಲ್ಲಿದ್ದ ಸಾಧುವಿನ ಬಗ್ಗೆ, "ಅವರೊಬ್ಬ ದೊಡ್ಡ ಸನ್ಯಾಸಿಗಳು" ಎಂದು ವಿವರಿಸಿ ಜೈನ ಮಂದಿರದಲ್ಲಿ ಅವರ ಪ್ರವಚನವಿದೆಯೆಂದ. ತಾವು ಜೈನ ಬಂಧುಗಳು; ಎಲ್ಲ ತರದ ಕಿರುಕೋಳ ವ್ಯಾಪಾರಿಗಳು; ತಮ್ಮ ಒಬ್ಬ ಸಹೋದರ ಕಾಲೇಜಿನಲ್ಲಿ ಪ್ರಧಾನ ಖಜಾಂಚಿ ಎಂದೆಲ್ಲ ಹೇಳಿದ. ಕಾಲೇಜಿಗೆ ಸಾಮಾನು ಹಾಕಿಯೇ ಇವರು ಸಾಹುಕಾರರಾಗಿದ್ದಾರೆಂಬ ಮಾತಿನಲ್ಲಿ ಯಾವ ಸಂಶಯವೂ ಇದ್ದಿರಲಿಲ್ಲ. ಅಷ್ಟರಲ್ಲಿ ಆತನ ಒಬ್ಬ ಸೋದರ ನೀರು ತುಂಬಿದ ಕೊಡ, ಹಗ್ಗದೊಡನೆ ಮನೆಗೆ ಹೊರಟವ ತಮ್ಮನಿಗೆ ಏನೋ ಹೇಳಿ ಹೋದ. ಇಂತಹ ಆಗರ್ಭ ಶ್ರೀಮಂತರು ಬಾವಿಯಿಂದ ನೀರು ಜಗ್ಗಿ ತರುವುದನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿದಾಗ, ನವು ಜೈನರು, ಕೆಳಜಾತಿಯವರು ತಂದ ನೀರು

ಮುಟ್ಟುವಂತಿಲ್ಲ, ಅಲ್ಲದೇ ಜೈನರಿಗಾಗಿ ಬೇರೆಯೇ ಬಾವಿಯಿದೆ, ಎಂದ. ಹೊಸವರ್ಷದ ಕೆಲೆಂಡರ ಒಂದನ್ನು ಕೊಟ್ಟ. ಕೆಲವು ಫಾಯಿಲುಗಳನ್ನು, ಮಸಿ, ಪೆನ್ಸಿಲ್, ರಬ್ಬರಗಳನ್ನು ಕೊಂಡಾಗ, ಅದರ ಬೆಲೆ ತನಗೆ ತಿಳಿಯದು ಅಣ್ಣನಿಗೆ ವಿಚಾರಿಸಿ ಹಣ ಪಡೆಯುವೆನೆಂದ. (ಹದಿನೈದು ದಿನಗಳಾದರೂ ಹಣ ಕೇಳಲು ಬಾರದ್ದರಿಂದ, ಯಾವ ಖಾತೆಯಲ್ಲೂ ನನ್ನ ಲೆಕ್ಕಾಚಾರ ಬರೆದಿಡದಿದ್ದರಿಂದ ಹೊಸಬನಿಗೆ ತಮ್ಮವನ್ನಾಗಿ ಮಾಡಿಕೊಳ್ಳುವದು ಈ ವಿಧಾನ ಇದ್ದಿರಬಹುದೆಂದು ಇನ್ನೊಂದು ಅಂಗಡಿಯಲ್ಲಿ ಅವುಗಳ ಬೆಲೆಯನ್ನು ವಿಚಾರಿಸಿ ನಾನೇ ಲೆಕ್ಕ ಮಾಡಿಕೊಟ್ಟು ಬಂದೆ.)

ದಾರಿಯಲ್ಲಿ ಫಾಟಕ್ ಸಿಕ್ಕ. ತಮ್ಮಲ್ಲಿ ಬರಬೇಕೆಂದು ಕರೆದುಕೊಂಡು ಹೊರಟ. ದಾರಿಯಲ್ಲಿ ಕಿರಾಣಿ ಅಂಗಡಿಯೊಂದನ್ನು ಹೊಕ್ಕ. ಅಲ್ಲಿದ್ದ ಬೆಲ್ಲ ನೊಣಗಳಿಗೆ ಆಹುತಿಯಾಗಿತ್ತು. ನಾಲ್ಕು ವಿಧದ ಸಕ್ಕರೆ ಮಾರಾಟಕ್ಕೆ ಇಟ್ಟಿದ್ದರು. ಹುಡಿಬೆಲ್ಲ(ಬೂರಾ), ಕೆಂಪು ಸಕ್ಕರೆ, ಮೊರಿಸ ಸಕ್ಕರೆ, ಹರಳಿನ ಸಕ್ಕರೆ ಇದ್ದವು. ಇಮ್ಲಿ (ಹುಣಿಸೆಹಣ್ಣು) ವಿಚಾರಿಸಿದಾಗ ಅದಿಲ್ಲ. ಬೇರೇನೋ ಇದೆಯೆಂದ. ತೋರಿಸಲು ಹೇಳಿದಾಗ ಸ್ಫಟಿಕವನ್ನು ಹೋಲುವ ಆದರೆ ತೀರ ಹುಳಿ ಇದ್ದ ಹರಳನ್ನು ಕೊಟ್ಟ. ಅದು ಬೇಡವೆಂದಾಗ 'ಆ ಮಚೂರ' ಕೊಡಲೇ? ಎಂದ. (ತೀರ ಹುಳಿಯಾದ ಮಾವಿನ ಕಾಯಿಗಳ ತಿರುಳನ್ನು ಒಣಗಿಸಿ ಕುಟ್ಟಿ ಮಾಡಿದ ಪುಡಿ.) ಅದನ್ನಿಷ್ಟು ಖರೀದಿಸಿ, ಸ್ವಲ್ಪ ಚಹಾಪುಡಿ ಖರೀದಿಸಿ ಹತ್ತು ರೂಪಾಯಿ ನೋಟು ಕೊಟ್ಟಾಗ, ಪೆಟ್ಟಿಗೆಯಲ್ಲಿ ಚಿಲ್ಲರೆ ಇಲ್ಲದಿರುವಾಗ ತಾನು ಕುಳಿತ ಗೋಣಿ ತಟ್ಟಿನ ಅಡಿಯಲ್ಲಿ ಹುಡುಕಿದ, ಹಿಂದೆ ಇದ್ದ ಸಿಗರೇಟಿನ ಡಬ್ಬಿ ತೆರೆದು ನೋಡಿದ. ಎದ್ದು ನಿಂತು ಬೋರ್ನವಿಟಾದ ಡಬ್ಬಿಯಿಂದ ಕೆಲವು ಚಿಲ್ಲರೆ ತೆಗೆದ ನಂತರ ಒಳಗೆ ಹೋಗಿ ಇನ್ನಷ್ಟು ಚಿಲ್ಲರೆ ನೋಟುಗಳನ್ನು ತಂದುಕೊಟ್ಟಿದ್ದನ್ನು ನೋಡಿದೆ. ಎಂತಹ ಕಳ್ಳನಿಗೂ ಎಲ್ಲ ಹಣ ಒಮ್ಮೆಲೇ ಸಿಗದಂತೆ ಇಡುವ ವ್ಯಾಪಾರಿಯ ಬುದ್ಧಿ ಚಾತುರ್ಯಕ್ಕೆ ತಲೆದೂಗಿದೆ. ನೆರೆಯ ಅಂಗಡಿಯವನು ಹಳ್ಳಿಗರು ತಂದ ಗೋಧಿ, ಬಾಜ್ರಾ, ತೂಗಿ ತೆಗೆದುಕೊಂಡು ಅವುಗಳ ಬದಲಾಗಿ ಉಪ್ಪು, ಮೆಣಸು, ಬೆಂಕಿಪೆಟ್ಟಿಗೆ, ತಂಬಾಕು, ಎಣ್ಣೆಗಳನ್ನು ಕೊಡುತ್ತಿದ್ದ. ಬಡವರು ಹಣವಿಲ್ಲದಿದ್ದಾಗ ತಾವು ಶೇಖರಿಸಿದ ಧಾನ್ಯಗಳನ್ನು ಬನಿಯಾರಿಗೆ ಕೊಟ್ಟು ತಮಗೆ ಬೇಕಾದ ಸಾಮಾನುಗಳನ್ನು ಒಯ್ಯುವ ಪರಿಪಾಠ ಬಂದಿದೆ. ವ್ಯಾಪಾರಿಗಳು ಮಾತ್ರ ಎರಡೂ ಕಡೆಯಿಂದ ಲಾಭ ಹೊಡೆದು ಸಿರಿವಂತರಾಗುತ್ತಾ ಇದ್ದಾರೆಂದು ಫಾಟಕ್ ಹೇಳಿದ.

ಯಾವುದೋ ಅಂಗಡಿಯ ಸಂದಿಯೊಳಗಿಂದ ದೊಡ್ಡದೊಂದು ಕಮಾನು ದಾಟಿ ಫಾಟಕ್‌ನ ನಿವಾಸಕ್ಕೆ ಬಂದೆವು. ಒಳಗೆ ಕಾಲಿಡುತ್ತಿದ್ದಂತೆ ದನಕರುಗಳು ಅಂಬಾ ಎಂದು ಸ್ವಾಗತಿಸಿದವು. ಕೊಳೆತ ಹುಲ್ಲು, ಸೆಗಣಿ, ಮೂತ್ರಗಳ ವಾಸನೆ ಏಕ ಪ್ರಕಾರವಾಗಿ

ಬರುತ್ತಿತ್ತು. ಈ ಕೊಳಚೆಯಲ್ಲಿ ಇದ್ದು, ಇದೇ ರೂಢಿಯಾಗಿದೆಯೆಂದು ಅಂದ. ಕಗ್ಗತ್ತಲಿನಲ್ಲಿ ಇದ್ದ ಪಾವಟಿಗೆಗಳನ್ನು ಒಂದೊಂದಾಗಿ ಹತ್ತಿದಾಗ ಬೇರೊಂದು ಸಂಸಾರದ ನಡುವೆ ಪ್ರವೇಶಿಸಿದೆವು! ಅದನ್ನು ದಾಟಿ ಹೋದಾಗ ಫಾಟಕ್‌ನ ಎರಡು ಖೋಲಿಗಳ ಮನೆ ಬಂದಿತು, ಇನ್ನೊಬ್ಬ ಅವಿವಾಹಿತ ಅಧ್ಯಾಪಕನೊಡನೆ ಅಡಿಗೆಯವಳೊಬ್ಬಳನ್ನು ನೇಮಿಸಿ ಸಂಸಾರ ಹೂಡಿದ್ದ. ರೇಡಿಯೋದಲ್ಲಿ ವಿವಿಧಭಾರತಿ ಹಚ್ಚಿ, ಸ್ಟೋವ ಹತ್ತಿಸಿ ಚಹ ಮಾಡಿದ. ಚಹ ಸೇವಿಸುತ್ತಿದ್ದಾಗ ನೌಕರಿಗಾಗಿ ಎಂಥ ಕಗ್ಗಳ್ಳಿಗೆ ಬರಬೇಕಾಯಿತೆಂದು ವಿಷಾದಿಸಿದ, ಕಾಲೇಜಿನಲ್ಲಿ, ವಿಶ್ವವಿದ್ಯಾಲಯದ ಎಲ್ಲ ಕ್ಷೇತ್ರಗಳಲ್ಲಿ ಕಾಯಸ್ಥರದೇ ಮೇಲುಗೈಯೆಂದು ಹಲವಾರು ಸಂಗತಿಗಳನ್ನು ಹೇಳಿದ. ಅಡಿಗೆಯವಳು ಬಂದಾಗ ಆ ನೆಪದಿಂದ ಫಾಟಕ್‌ನನ್ನು ಬೀಳ್ಕೊಂಡೆ.

ಮೂರು - ನಾಲ್ಕು ಮಿಠಾಯಿ ಅಂಗಡಿಗಳು ಸಾಲಾಗಿ ಬಂದವು. ಬೂಂದಿಲಾಡು, ಜಾಮುನ, ಬರ್ಫಿ, ಜಿಲೇಬಿ, ರಬಡಿ, ದಾಲಮೋಟ, ಗಾಂಟಿಯಾ, ಸೇವು ಇವುಗಳಲ್ಲಿ ಪ್ರಮುಖವಾಗಿದ್ದವು. ಮಣ್ಣಿನ ದೊಡ್ಡ ಪಾತ್ರೆಗಳಲ್ಲಿ ಚಾಕುವಿನಿಂದ ಕತ್ತರಿಸಬಹುದಾದ ಗಟ್ಟಿ ಮೊಸರು ಇತ್ತು. ನಂತರದ ಜವಳಿ ಅಂಗಡಿಗಳಲ್ಲಿ ಕೆಂಪು, ಹಳದಿ, ಕೇಸರಿ, ಹಸುರು ಬಣ್ಣದ ರಬ್ಬಾದ ಬಟ್ಟೆಗಳೇ ಪ್ರಧಾನವಾಗಿದ್ದವು. ಗ್ರಾಮೀಣ ಸ್ತ್ರೀಪುರುಷರು ತಾವು ಕೊಳ್ಳಬೇಕಾದ ಬಟ್ಟೆಯ ಪ್ರತಿ ಥಾನು ಬಿಡಿಸಿ ಮೊಳ ಹಾಕಿ ಅಳೆಯುತ್ತಿದ್ದರು. ಬನಿಯಾ ಹೇಳಿದ ಬೆಲೆಗೆ ಗಿರಾಕಿ ಒಪ್ಪದ್ದರಿಂದ ಕೊಂಡುಕೊಳ್ಳುವ ಮಾತು ಜೋರಾಗಿದ್ದವು. ಊರಿನ ಹೃದಯ ಸ್ಥಾನದಲ್ಲಿ ರಾಜಕಾರಣಿಗಳಿಗೆ, ಧರ್ಮಪ್ರಚಾರಕರಿಗೆ, ಭಾಷಣ ಮಾಡಲು ಅನುಕೂಲವಾಗುವಂತೆ ಕಟ್ಟೆಯನ್ನು ನಿರ್ಮಿಸಿದ್ದಾರೆ. ಈಗ ಅದು ಖಾಲಿ ಇದ್ದುದರಿಂದ ಮೂರು ನಾಲ್ಕು ಜನ ಹರಟೆಯಲ್ಲಿ ಮಗ್ನರಾಗಿದ್ದ ಸ್ಥಳ. ಅಲ್ಲೆ ಸಿಂಪಿಗಳೂ ಕುಳಿತಿದ್ದಾರೆ. ಒಬ್ಬನು ೨೨ ಗಜ ಬಟ್ಟೆಯ ಘಾಗರಾ (ಲಂಗ) ಹೊಲಿದರೆ ಇನ್ನೊಬ್ಬ ಪುರುಷರ ಕಸೆ ಬಂಡಿ ಮಾಡಿ ಅದಕ್ಕೆ ಕೆಂಪು ಗೋಟು ಹೊಲಿಯುತ್ತಿದ್ದ. ಮಗದೊಬ್ಬ ರಜಾಯಿಗಾಗಿ ಚೀಲ ಹೊಲಿಯುತ್ತಿದ್ದ. ಹತ್ತಿರದಲ್ಲೆ ಹಾಸಿಗೆಗಳ ಅಂಗಡಿಯಿತ್ತು. ಪತಿ ಹತ್ತಿಯನ್ನು ಹಿಂಜಿ ಹಾಕಿದರೆ ಪತ್ನಿ ರಸ್ತೆಯಂಚಿಗೆ ಕುಳಿತು ರಜಾಯಿ ಹೊಲಿಯುತ್ತಿದ್ದಳು. ಆ ಅಂಗಡಿಯಲ್ಲೇ ಅವರು ಸಂಸಾರ ಹೂಡಿರಬೇಕು. ಮಕ್ಕಳು ಹತ್ತಿ ಗಂಟಿನ ಮೇಲೆ ಕುಳಿತು ಬಾಜ್ರಾಭಕ್ರಿ-ಖೀಮಾ ತಿನ್ನುತ್ತಿದ್ದರು. ನಂತರದ ಅಂಗಡಿ, 'ಆಯುರ್ವೇದೀಯ ಔಷಧಗಳು' ಎಂದು ಬೋರ್ಡು ಹೊತ್ತರೂ ಒಬ್ಬನೂ ಗಿರಾಕಿಯಿರಲಿಲ್ಲ. ಆದರೂ ನಾಲ್ಕು ಜನ ಅಣ್ಣ - ತಮ್ಮಂದಿರು ಏಕಚಿತ್ತದಿಂದ ಲೆಕ್ಕ ಬರೆಯುವದರಲ್ಲಿ ಮಗ್ನರಾಗಿದ್ದರು. ನಂತರದ ಎರಡೂ ಅಂಗಡಿಗಳನ್ನು ಕಿವುಡ ಬಡಿಗನೊಬ್ಬ ಬಾಡಿಗೆಗೆ ಹಿಡಿದಿದ್ದ. ಊರಿನ ಪ್ರಾಧ್ಯಾಪಕ ವರ್ಗವೆಲ್ಲ ಅವನ ಹತ್ತಿರವೇ ಫರ್ನಿಚರ ಮಾಡಿಸುವದಂತೆ. ಆತನ

ವೈಶಿಷ್ಟ್ಯವೆಂದರೆ ಹೊಸದಾಗಿ ಬಂದವರು ಆರ್ಡರ್ ಕೊಟ್ಟ ಸಾಮಾನುಗಳನ್ನು ಅವರು ಬಿಟ್ಟು ಹೋದರೂ ಮಾಡುವದರಲ್ಲಿಯೇ ಇರುವ! ಹೀಗಾಗಿ ಆ ವರ್ಗಕ್ಕೆ ಜಯಪುರದಿಂದ ಸಾಮಾನು ತರಿಸುವದು ತಪ್ಪಲಿಲ್ಲ. ನಂತರ 'ಮಟ್ಟಿಕಾ ತೇಲ' (ಚಿಮಣಿ ಎಣ್ಣೆ) ಮಾರುವವನ ಅಂಗಡಿ. ಊರಿಗೆಲ್ಲ ಎಣ್ಣೆ ಪೂರೈಸುವವನಾತ. ಔಷಧದ ಅಂಗಡಿಯಲ್ಲಿ ಅಂಗಡಿ ತುಂಬ ಗಾದಿಗಳನ್ನು ಹಾಕಿ ಬಿಳೀ ಬಟ್ಟೆಯನ್ನು ಹಾಸಲಾಗಿದೆ. ಔಷಧಿ ಒಯ್ಯುವ ಕಾಲೇಜಿನ ವೃಂದ ಹೆಚ್ಚಾಗಿ ಸಂಜೆಯಲ್ಲಿ ಬರುವುದರಿಂದ ಈಗ ಅಂಗಡಿಯವರು ಇಸ್ಪೀಟ ಆಟದಲ್ಲಿ ಮೈ ಮರೆತಿದ್ದಾರೆ. ಒಂದು ಮೂಲೆಯಲ್ಲಿ ರಿಫ್ರಿಜಿರೇಟರ ನಿಂತಿದೆ. ದೊಡ್ಡ ಅಂಗಡಿಯಲ್ಲಿ ಸೌಂದರ್ಯ ಪ್ರಸಾಧನಗಳು, ಮನೆಬಳಕೆಯ ಸಾಮಾನು ಹಿಡಿದು ವಿದ್ಯುತ್ ಪಂಕಗಳು, ಹೊಲಿಗೆಯ ಯಂತ್ರಗಳು ಕೂಡ ಇದ್ದವು. ಶುಭ್ರ ಧೋತರ, ಶರ್ಟು ಧರಿಸಿ, ಮುರಿಗೆ ಹಾಕಿದ, ಹಗ್ಗದಂತೆಯೇ ತೋರುತ್ತಿದ್ದ ಎತ್ತರದ ಪಗಡಿಧಾರಿ ಯಜಮಾನ ಎದ್ದು ನಿಂತು ತೀರ ಪರಿಚಿತನಂತೆ ಸ್ವಾಗತಿಸಿದ. ನಾನು ಬಂದ ಸಮಾಚಾರ ಗೊತ್ತಿದ್ದರೂ ದರ್ಶನವಾಗಿರಲಿಲ್ಲ. ನಾನಾಗಿ ಅಂಗಡಿಗೆ ಬಂದಿದ್ದರಿಂದ ಅತಿ ಸಂತೋಷವಾಗಿದೆಯೆಂದ. ತಮ್ಮಲ್ಲಿ ಎಲ್ಲ ತರದ ಸಾಮಾನು ಸಿಗುತ್ತವೆ, ಊರಿನಲ್ಲಿಯ ಇತರರಿಗಿಂತ ರಿಯಾಯಿತಿ ದರದಲ್ಲಿ ಮಾರುವುದರಿಂದ ಕಾಲೇಜಿನ ಶಿಕ್ಷಕವೃಂದವೆಲ್ಲ ತಮ್ಮಲ್ಲಿಯೇ ಸಾಮಾನುಕೊಳ್ಳುತ್ತಾರೆ. ಎಂದೆಲ್ಲ ಒಂದೇ ಉಸಿರಿನಲ್ಲಿ ಹೇಳಿದ. ಮಾತಾಡಿ ದಣಿದಾಗ ಕಂಚಿನ ತಂಬಿಗೆಯಿಂದ ನೀರು ಸುರಿದುಕೊಂಡು ರಾಜಸ್ಥಾನಿ ಪದ್ಧತಿಯಿಂದ ಕುಡಿದ.

ಬಾವಿಗಳೆಲ್ಲ ಊರ ಹೊರಗೇ ಇವೆ. ದೊಡ್ಡವಾಗಿ ಆಳವಾಗಿ ಅಗೆದ ಬಾವಿಗಳಿಗೆ ಚೌಕೋನಾಕಾರವಾಗಿ ಕಟ್ಟೆ ಕಟ್ಟೆ ಗಡಗಡೆಗಳನ್ನು ಜೋಡಿಸಿದ್ದಾರೆ. ಮಹಿಳೆಯರು ಮೂರು ನಾಲ್ಕು ಅಳತೆಯ ಮಣ್ಣಿನ ಕೊಡಗಳನ್ನು, ಚಿಕ್ಕ ಬಾಲ್ದಿ ಮತ್ತು ಹಗ್ಗಗಳನ್ನು ಹೊತ್ತು ನೀರಿಗೆ ಬರುತ್ತಿದ್ದರು. ನಾಲ್ಕು ಸಲ ಆ ಚಿಕ್ಕ ಬಾಲ್ದಿಯಿಂದ ನೀರು ತೆಗೆದರೆ ಒಂದು ಮಣ್ಣಿನ ಕೊಡ ತುಂಬುವುದು. ನೀರನ್ನು ಸೇದಿ ಸೇದಿ ಎರಡು ಮಡಕೆ ತಲೆಯ ಮೇಲೆ ಕೈಯ್ಯಲೊಂದು ಮಡಕೆ ನೀರು ತಂದರೆ ಉಸ್ಸಪ್ಪಾ! ಎನ್ನಬೇಕು. ಮಾಂಸವನ್ನು ಮಾರುವ ಮುಸಲರ ಕೇರಿ ಬೇರೆಯೇ ಇದೆ. ಹಲಾಲ ಪದ್ಧತಿಯಿಂದ ಕೊಂದ ಟಗರಿನ ಮಾಂಸವನ್ನು ದೊಡ್ಡದೊಂದು ಹಲಗೆಯ ಮೇಲೆ ಹರವಿದ್ದಾರೆ. ನೊಣಗಳಿಂದ ಸಂರಕ್ಷಿಸುವುದರ ಸಲುವಾಗಿ ಮಲಿನವಾದ ಬಟ್ಟೆಯನ್ನು ಅದರ ಮೇಲೆ ಹಾಸಿದ್ದಾರೆ. ರಾಜಸ್ಥಾನದಲ್ಲಿ ಉಣ್ಣೆಗಾಗಿ ದೊಡ್ಡ ಪ್ರಮಾಣದಲ್ಲಿ ಕುರಿಗಳನ್ನು ಸಾಕುವುದರಿಂದ, ಜೈನರು, ಇತರ ವೈಶ್ಯರು ಶಾಕಾಹಾರಿಗಳಿದ್ದುದರಿಂದ ಮಾಂಸ ತುಂಬ ಅಗ್ಗವಾಗಿ ಮಾರಲ್ಪಡುತ್ತದೆ.(ಆ ದಿನಗಳಲ್ಲಿ ಎರಡೂವರೆ ರೂಪಾಯಿಗೆ ಕಿಲೋದಂತೆ ಮಾರುತ್ತಿತ್ತು.)

ಊರಿನ ಅಂಚೆ-ಆಫೀಸು ಇನ್ನೊಂದು ದಿಕ್ಕಿಗಿದೆ. ಹೊರಗೆ ರಜಿಸ್ಟರ, ಟಿಕೇಟು, ಮನಿಯಾರ್ಡರ, ಎಂದು ಬೋರ್ಡುಗಳನ್ನು ತುಗ ಹಾಕಿದ್ದಾರೆ. ಬಾಗಿಲಿಗೆ 'ಪರವಾನಗಿ ಹೊರತು ಯಾರೂ ಒಳಗೆ ಬರಕೂಡದು' ಎಂದು ಬರೆದಿದ್ದರೂ ಕಾಲೇಜಿನ ವಿದ್ಯಾರ್ಥಿಗಳೆಲ್ಲ ತಮ್ಮ ಪತ್ನಿಯ ಪತ್ರ ಬಂದಿದೆಯೇ ಎಂದು ಕೇಳಲು ಪೋಸ್ಟಮನ್ ರಮಝಾನನನ್ನು *ಸುತ್ತುವರೆದಿದ್ದರು. ಅಂತರದೇಶಿಯ ಪತ್ರಗಳನ್ನು ಕೊಳ್ಳುವುದಕ್ಕಾಗಿ ಎಷ್ಟು ಹೊತ್ತು ಕಿಡಕಿಯ ಹೊರಗೆ ನಿಂತರೂ ಯಾರೂ ಮಾತನಾಡಿಸಿದ್ದರಿಂದ ನಾನೂ ಒಳಗೆ ಹೋದೆ. ಅಲ್ಲಿ ಹಣ್ಣು ಮುದುಕ 'ಬಾಬಾ'ನನ್ನು ಟಿಕೀಟು ಮಾರಲು ಕೂಡ್ರಿಸಿದ್ದರು. ಆತನಿಗೆ ಕಿವಿ ಕೇಳಿಸದು, ಕಣ್ಣು ಕಾಣಿಸದು, ಲೆಕ್ಕ ಬಾರದು. ಒಂದು ರೂಪಾಯಿಯ ಅಂತರ್ದೇಶೀಯ ಪತ್ರಗಳನ್ನು ಎಣಿಸುವದ್ಕಾಗಿ ಬೊಟ್ಟುಗಳನ್ನು ನಾಲಿಗೆ ನೀರಿನಿಂದ ಒದ್ದೆಮಾಡಿ ಪ್ರತಿಯೊಂದರ ಮೇಲೂ ಹೆಬ್ಬೊಟ್ಟಿನ ಗುರುತುಗಳನ್ನು ಮೂಡಿಸುತ್ತ ಮೂರು ಸಲ ಎಣಿಸಿಕೊಟ್ಟರೂ 'ಎಣಿಸಿತೆಗೆದು ಕೊಳ್ಳಿ' ಎಂದು ಹೇಳಿದ. "ಮಾಸ್ತರಸಾಬ ನಿಮಗೊಂದು ಪತ್ರವಿದೆ" ಎಂದು ವಿದ್ಯಾರ್ಥಿಗಳ ನಡುವಿನಿಂದ *ರಮಝಾನನು ನುಸುಳಿಕೊಂಡು ಬಂದು ಅದನ್ನು ಕೈಗಿತ್ತಾಗ ಆನಂದವಾಗಿತ್ತು. ಊರಿನಿಂದ ಬಂದ ಪ್ರಥಮ ಪತ್ರವಾಗಿತ್ತು.

ಆ ರಸ್ತೆಯ ಕೊನೆಯಲ್ಲಿದ್ದ ಕಟ್ಟಡ "ಜೀವನಮಲ್ ಕಬರಡಿಯಾ ಧರ್ಮಾರ್ಥ ಆಸ್ಪತ್ರೆ" ಎಂಬ ಬೋರ್ಡು ಹೊತ್ತು ನಿಂತಿತ್ತು. ಕೆಳಗೆ ಡಾ. ಎಸ್. ಎಸ್. ಪುರೋಹಿತ M.B.B.S. ಎಂದು ಕಿರು ಬೋರ್ಡೂ ಇತ್ತು. ಊರಿಗೊಬ್ಬ ಡಾಕ್ಟರನಿದ್ದಾನೆ ಎಂದು ನೆಮ್ಮದಿಯಾಯಿತು. ಅಲ್ಲಿಂದ ಹಾದುಹೋಗುವ ಕಿರಿದಾರಿಯ ಎರಡೂ ಬದಿಗೆ ಮನೆಗಳು ಇದ್ದವು. ಅಲ್ಲಿಯ ಹಲವರು ಈ ಹೊಸ ಮಾಸ್ಟರ ಸಾಹೇಬಯಾರು? ಎಂದು ತಮ್ಮ ತಮ್ಮಲ್ಲಿ ವಿಚಾರಿಸಿಕೊಂಡರು. ಮುಂದೆ ಹೊರಟಾಗ ಹೊರಟ ಸ್ಥಳಕ್ಕೆ ಆ ದಾರಿ ಬಂದು ಕೂಡುವುದರಿಂದ ಜೋಬನೇರದ ಹೆಚ್ಚಿನ ಭಾಗಗಳನ್ನು ನೋಡಿದ್ದೇನೆಂಬ ಕಲ್ಪನೆ ಬಂದಿತು.

---

* ರಮಝಾನನ ಕರ್ತವ್ಯ ನಿಷ್ಠೆಯ ಬಗ್ಗೆ ಊರವರಿಗೆಲ್ಲ ಅಭಿಮಾನ. ಮನಿಯರ್ಡರು, ರಜಿಸ್ಟರ, ವಿ.ಪಿ ಏನೇ ಇರಲಿ ಯಾವ ತೊಂದರೆಯಿಲ್ಲದೇ ಮುಟ್ಟಿಸುತ್ತಾನೆ. ಮನೆಯಲ್ಲಿ ಅಡಚಣೆ ದಿನಗಳು ಬಂದಾಗ ಒಳ್ಳೆಯ ಮಾಸ್ಟರ ಸಾಬರನ್ನು ಹಿಡಿದು ಚೀಟಿ ಬರೆಯಿಸಿಕೊಂಡು ಬೇಳೆ, ಪಲ್ಯ ಮುಂತಾದವನ್ನು ಪಡೆಯುವ.; ನನ್ನ ಮದುವೆಯ "ಖುಷಿ"ಗೆಂದು ಐದು ರೂಪಾಯಿಯ ಸಾಮಾನೆಂದು ಇದೇ ರೀತಿ ಪಡೆದ. ಅವನದೊಂದು ಛಾಯಾಚಿತ್ರ ತೆಗೆದು ತಯಾರಿಸಿಕೊಟ್ಟಾಗ ಅವನಿಗಾದ ಆನಂದಕ್ಕೆ ಮೇರೆಯೇ ಇರಲಿಲ್ಲ. ಇಂದಿಗೂ ಜೋಬನೇರ ಪತ್ತೆಗೆ ಬಂದ ಪತ್ರಗಳನ್ನು ರಿಡಾಯರೆಕ್ಟ ಮಾಡಿ ಕಳಿಸುವಾಗ, "ಕಾಮತ ಸಾಬ ನಮಸ್ತೆ. ನಿಮ್ಮ ನೆನಪು ತಪ್ಪದೇ ಆಗುತ್ತದೆ" ಎಂದು ಚುಟುಕು ವಾಕ್ಯ ತಪ್ಪದೇ ಸೇರಿಸುತ್ತಾನೆ.

೮. ವಿಂಗಡದ ಗುಡಿ

"ಮಾತಾಜಿಯ ದರ್ಶನ ಪಡೆದುಕೊಂಡು ಬಂದಿರಾ?" ಎಂಬ ಲಕ್ಷ್ಮಿಯ ಪ್ರಶ್ನೆಗೆ "ಬಿ. ಪಿ.ಯವರೇ ಕರೆದುಕೊಂಡು ಹೋಗಿದ್ದರಲ್ಲ? ಎಂದು ಉತ್ತರಿಸಿದಾಗ ಆಕೆ ಗಹಗಹಿಸಿ ನಕ್ಕಳು. "ಡೀನರ ಶ್ರೀಮತಿ ಕಾಲೇಜಿನವರಿಗೆ ಮಾತಾಜಿಯಾದರೆ ಊರವರಿಗೆಲ್ಲ ಮಾತಾಜಿ ಬೇರೆಯೊಬ್ಬಳೇ ಇದ್ದಾಳೆ. ಊರ ಹಿಂದೆ ಎತ್ತರವಾದ ಬೆಟ್ಟಗಳಿವೆಯಲ್ಲ! ಅಲ್ಲಿ ಕೋಟೆ-ಕೊತ್ತಳಗಳ ನಡುವೆ ಮಾತಾಜಿಯ ಮಂದಿರವಿದೆ. ಆ ಮಾತಾಜಿ ಭಕ್ತರು ಬೇಡಿದ್ದನ್ನೆಲ್ಲ ನೀಡುತ್ತಾಳೆ. (ಹಳ್ಳಿಯವನು 'ಜೈ ಮಾತಾಜಿಕಿ' ಎಂದದ್ದು ಈ ದೇವಿಯ ಕುರಿತೇ ಎಂದು ಈಗ ನೆನಪಾಯಿತು.) ನಾವು ಹೊಸದಾಗಿ ಈ ಊರಿಗೆ ಬಂದಾಗ ನಾನು ಒಬ್ಬ ಮಗನನ್ನು ಡಾಕ್ಟರ ಸಾಹೇಬ (ಯಜಮಾನರು)ರು ಮಗಳನ್ನೂ, ಬೇಡಿಕೊಂಡಿದ್ದೆವು. ದೇವಿಜಿ ಇಬ್ಬರ ಬೇಡಿಕೆಯನ್ನೂ ಪೂರೈಸಿದಳು." ಎಂದಳು. ನಾನು "ಪತ್ನಿಯೇ ಬಾರದಾಗ ಪುತ್ರ - ಪುತ್ರಿಯರನ್ನು ಬೇಡಿಕೊಂಡರೆ ದೇವಿಜಿ ಹೇಗೆ ದಯಪಾಲಿಸಿಯಾಳು?" ಎಂದು ಕೇಳಿದಾಗ ಪತಿ-ಪತ್ನಿಯರಿಬ್ಬರೂ ನಕ್ಕರು. "ಮೊದಲು ಒಳ್ಳೆಯ ಪತ್ನಿಯನ್ನು ದಯಪಾಲಿಸುವಂತೆ ಕೇಳಿಕೊಳ್ಳಿ" ಲಕ್ಷ್ಮಿಯೆಂದಳು. ಬಿ.ಪಿ.ಯವರು "ಇಲ್ಲಿಗೆ ಬಂದ ಬ್ರಹ್ಮಚಾರಿಗಳೆಲ್ಲ ಮಾತಾಜಿಯ ಆಶೀರ್ವಾದದಿಂದಲೇ ವಿವಾಹಿತರಾಗುತ್ತಾರೆ. ವಿವಾಹವಾಗದೇ ಈ ಊರು ಬಿಟ್ಟವರು ಆಜನ್ಮ ಬ್ರಹ್ಮಚಾರಿಯಾಗಿಯೇ ಉಳಿದುಕೊಂಡಿದ್ದಾರೆ. ಅದರಲ್ಲಿಯೂ 'ಕ' ಅಕ್ಷರದ ಅಡ್ಡ ಹೆಸರಿನವರು ವಿವಾಹವಾಗುವುದೇ ವಿರಳ. ಕಾಲರಾ, ಖುರಾನಾ, ಖರೆ ಇವರೆಲ್ಲ ಈಗಲೂ ಬ್ರಹ್ಮಚಾರಿಗಳೇ! ನೀವಾದರೂ ಈ ವರ್ಗಕ್ಕೆ ಸೇರದೇ ಬೇಗನೆ ಕನ್ಯೆಯೊಬ್ಬಳನ್ನು ದಯಪಾಲಿಸುವಂತೆ ಮಾತಾಜಿಗೆ ಬೇಡಿಕೊಳ್ಳಿ" ಎಂದು ಹೇಳಿದಾಗ, ಕೂಡಲೇ ಮಂದಿರವಿರುವ ದಿಕ್ಕಿನಲ್ಲಿ ಭಯಭಕ್ತಿಯಿಂದ ನಮಿಸಿ ಪತ್ನಿ-ಪುತ್ರಿಗಾಗಿ ಮಾತಾಜಿಗೆ ಪ್ರಾರ್ಥಿಸಿಕೊಂಡೆ! ನನಗೊಂದು ಹಾಸಿಗೆ, ತಲೆದಿಂಬು, ರಜಾಯಿ, ಮಾಡಿಸಿಕೊಡುವ ಜವಾಬ್ದಾರಿಯನ್ನು ಬಿ.ಪಿ.ಯವರು ಹೊತ್ತರು, ಅಂಗಡಿಕಾರನಿಗೆ ಹೇಳಿಕಳಿಸಿ ಅದಕ್ಕೆ ಬೇಕಾಗುವ ಬಟ್ಟೆ - ಬರೆಗಳನ್ನು ಮನೆಗೇ ತೆಗೆದುಕೊಂಡು ಬರುವಂತೆ ಮಾಡಿದರು. ಆ ಬಡಪಾಯಿ ಎರಡು - ಮೂರು ಬಾರಿ ಬಂದರೂ ನಾವು ಸಿಗದ್ದರಿಂದ ರಾತ್ರೆಗೆ ತಿರುಗಿ ಬಂದು ಒಳ್ಳೊಳ್ಳೇ ಬಟ್ಟೆ ತೋರಿಸಿದ. ಅವುಗಳ

ಅಗಲಳತೆ ಎಷ್ಟು ಬೇಕು? ಎಂದು ಪತಿ-ಪತ್ನಿಯರಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ಈಗ ಒಂಟಿ ರಜಾಯಿಯಿಯನ್ನೇ ಹೊಲಿಸಿ ಪತ್ನಿ ಬಂದನಂತರ ಅವಳ ಆಯ್ಕೆಯಂತೆ ಜೋಡಿ ರಜಾಯಿ ಹೊಲಿಸಿದರಾಯಿತು ಎಂದು ಬಿ.ಪಿ. ವಾದಿಸಿದರೆ ಈಗಲೇ ಜೋಡಿಯನ್ನು ಹೊಲಿಸಿದರೆ ಬೇಗನೆ ಪತ್ನಿ ಬಂದಾಳು. ಎಂದು ಲಕ್ಷ್ಮಿಯ ತರ್ಕ. ಕೊನೆಗೆ ನಲವತ್ತು ರೂಪಾಯಿಯ ರೇಶಿಮೆ ಬಟ್ಟೆಯನ್ನು ರಜಾಯಿಗಾಗಿ ಆರಿಸಿದರೂ ಹಾಸಿಗೆಯ ಬಟ್ಟೆ ಅವರಾರಿಗೂ ಮನಸ್ಸಿಗೆ ಬರದೇ ಜಯಪುರದಿಂದ ತಾವೇ ತಂದು ಕೊಡುವ ಜವಾಬ್ದಾರಿಯನ್ನು ಹೊತ್ತರು. "ಹೆಣ್ಣಿನಂತೆಯೇ ಕೋಮಲವಾಗಿದೆ ರಜಾಯಿ ಬಟ್ಟೆ" ಎಂದು ಬಿ.ಪಿ. ಪತ್ನಿಯತ್ತ ನೋಡಿ ಕುಹಕ ನಗೆ ನಕ್ಕರು.

ದೇವಿಜಿಯ ಆರ್ಶೀವಾದದ ಫಲ ಎಂಬಂತೆ ಧಾರವಾಡದ ಕನ್ಯೆಯೊಡನೆ ಮದುವೆ ನಿಶ್ಚಯಿಸಲಾಗಿದೆ. ಎಂದು ತಂದೆಯವರ ಪತ್ರ ಬಂದಿತು. ಹೆಣ್ಣಿನ ಕಡೆಯವರು ಅಷ್ಟೊಂದು ಅನುಕೂಲಸ್ಥರಲ್ಲದ್ದರಿಂದ ವರದಕ್ಷಿಣೆಯ ಮಾತು ತಾನು ಎತ್ತಲಿಲ್ಲವಾದರೂ ಅವರಾಗಿ ತಮ್ಮ ಯಥಾನುಶಕ್ತಿ ಮದುಮಗಳಿಗೆ ಒಡವೆ ಹಾಕಿ ವಿವಾಹ ಮಾಡಿಕೊಡುತ್ತೇನೆ, ಎಂದಿದ್ದಾರೆ. "ಕಮ್ತಿಯವರು ವರದಕ್ಷಿಣೆ ತಾರದ ಹೆಣ್ಣನ್ನು ತಂದುಕೊಳ್ಳುವರೇ! ಒಂದೇ ಸಲ ಹದಿನೈದು - ಇಪ್ಪತ್ತು ಸಾವಿರ ತರುವ ಕನ್ಯೆಯ ಬದಲಾಗಿ ಪ್ರತಿವರ್ಷ ಆರು ಸಾವಿರ ದುಡ್ಡು ತರುವವಳನ್ನು (ವಧು ನೌಕರಿ ಮಾಡುತ್ತಿದ್ದಳು) ಹುಡುಕಿದ್ದಾರೆಂದು ಜನರು ಆಡಿಕೊಳ್ಳಲಾರಂಭಿಸಿದ್ದಾರೆ!" ನಮಗೆಲ್ಲ ಈ ವಿವಾಹ ಬೇಗ ನೆರವೇರಬೇಕು ಎಂದು ಆಸೆ ಎಂದು ಅವರು ಬರೆದಿದ್ದರು. ಮಂಗಲ ವಾದ್ಯಗಳು ಮೊಳಗುತ್ತಿರುವಾಗ, ಹೆಂಗೆಳೆಯರೆಲ್ಲ ಸಂಭ್ರಮದಿಂದ ಓಡಾಡುತ್ತಿರುವಾಗ ಮದುವೆಯೇನೋ ಮೋಜಿನಿಂದ ಮಾಡಿಕೊಳ್ಳಬಹುದು. ಆನಂತರ ಏನು? ಎಂದು ವಿಚಾರಿಸುವದು ಬೇಡವೇ? ಇನ್ನೂ ನನ್ನದೇ ಎಂದು ಕರೆದುಕೊಳ್ಳಬಹುದಾದ ಬಾಡಿಗೆ ಮನೆಯೂ ಸಿಕ್ಕಿರಲಿಲ್ಲ. ಅದೇ ತಾನೇ ನೌಕರಿಗೆ ಪ್ರಾರಂಭಿಸಿದ್ದರಿಂದ ಕೈಯಲ್ಲಿ ಕಾಸಿರಲಿಲ್ಲ. ಮದುಮಗಳನ್ನು ಈ ಮರಳುಗಾಡಿನ ಹಳ್ಳಿಗೆ ಕರೆತಂದರೆ ಅವಳೇನು ಅಂದುಕೊಂಡಾಳು! ಸಂಸಾರಕ್ಕೆ ಬೇಕಾದ ಯಾವ ಸಾಮಾಗ್ರಿಗಳೂ ನನ್ನಲ್ಲಿ ಇಲ್ಲವಲ್ಲೆಂದು ವಿಚಾರಿಸುತ್ತಿದ್ದಾಗ ಬಿ.ಪಿ. ಯುವಕನೊಬ್ಬನನ್ನು ಕರೆತಂದು "ಹಣ್ಣು ಹಂಪಲು ವಿಭಾಗದಲ್ಲಿ ಪ್ರಯೋಗಾಲಯದ ಸಹಾಯಕನೆಂದು ಈತ, ಭಟನಾಗರ, ಕೆಲಸ ಮಾಡುತ್ತಿದ್ದಾನೆ. ಕೈ ನೋಡಿ ಒಳ್ಳೆಯ ಜೋತಿಷ ಹೇಳುತ್ತಾನೆ" ಎಂದು ಪರಿಚಯಮಾಡಿಕೊಟ್ಟರು. ಆಗಂತುಕನು ತೀರ ಹರುಕು ಮುರುಕು ಇಂಗ್ಲಿಷಿನಲ್ಲಿ ಮಾತನಾಡಲಾರಂಭಿಸಿದ್ದರಿಂದ ಹಿಂದಿಯಲ್ಲಿ ಮಾತನಾಡಿದೆ. ಆದರೂ ಆತ ಇಂಗ್ಲಿಷ್ ಬಿಡಲೊಲ್ಲ. ಆತನ ಜೋತಿಷವಾಗಲಿ, ತಲೆಹರಟೆಯಾಗಲೀ ಬೇಕಿರಲಿಲ್ಲವಾದ್ದರಿಂದ ಅಂಚೆಮನೆಗೆ ಹೋಗುವ ನೆಪಹೂಡಿ ಹೊರಟುಬಿಟ್ಟೆ.

ಮರುದಿನದಿಂದ ಕ್ರಿಸ್‌ಮಸ್ ರಜೆಗಾಗಿ ಕಾಲೇಜು ಮುಚ್ಚಲಿತ್ತು. ಆಗ ಉದಯಪುರದಲ್ಲಿ ಯಾವ ಯಾವದೋ ಮೀಟಿಂಗ್ ನಡೆಯಲಿದ್ದವಂತೆ. ಟ್ರೇನಿನಿಂದ ಪ್ರಯಾಣ ಮಾಡಿದರೆ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿಗೆ ಖರ್ಚು ಬರುವದೆಂದು ಕೆಲ ಅಧ್ಯಾಪಕರು ಕಲೇಜಿನ ಮೋಟಾರನ್ನು ಒಯ್ಯಲು ನಿರ್ಧರಿಸಿದರು. ಸರಿ. ಮೋಟಾರು ಹೋಗಲಿದ್ದರಿಂದ ಜತೆಗೆ ಹೆಂಡತಿ ಮಕ್ಕಳೂ ಹೊರಟರು! ಬಿ. ಪಿ. ಕುಟುಂಬವೂ ಈ ಸಂಸಂಧಿಯನ್ನು ಕಳೆದುಕೊಳ್ಳಲಿಲ್ಲ. ನನಗೂ ಕರೆದರೂ ಹೋಗದೆ ಮನೆ ಕಾಯಲಿಕ್ಕೆ ಉಳಿದುಕೊಂಡೆ. ಮುಂಜಾನೆ ಹಾಲಿನವನ ಸೀಟಿಯಾದ ಕೂಡಲೇ, ಕೂಪನ್ನುಗಳಿದ್ದರೂ ದುಡ್ಡು ಕೊಟ್ಟೇ ಒಂದು ಲೀಟರ ಹಾಲು ಕೊಂಡೆ. ಹರಿಬಕ್ಷನು ಚಹ ಮಾಡಿ ಕೊಟ್ಟು ತಾನೂ ಕುಡಿದು ಹೋದನಂತರ, ಪೇಟೆಗೆ ಹೋಗಿ ಒಂದು ಬಾಟ್ಲಿ ಚಿಮಣಿ ಎಣ್ಣೆ, ತರಕಾರಿ ಮುಂತಾದುವನ್ನು ತಂದೆ. ನೀರಿನವನ ಕಡೆಯಿಂದ ನಾಲ್ಕಾರು ಟಿನ್ ನೀರು ಹಾಕಿಸಿಕೊಂಡು ಸ್ಟೋವ ಮೇಲೆ ನೀರು ಕಾಸಿ ಚೆನ್ನಾಗಿ ಸ್ನಾನಮಾಡಿದೆ. ಒಂದು ಸ್ನಾನಕ್ಕೆ ಎಪ್ಪತ್ತು ಪೈಸಾ ಖರ್ಚು ಬಂದರೂ ಪ್ರವಾಸದ ಧೂಳು, ದಣಿವು, ಕೊನೆಗೊಮ್ಮೆ ಹೋದಂತೆನಿಸಿ ನೆಮ್ಮದಿಯೆನಿಸಿತು. ಒಳಗಿನಿಂದ 'ಮೂಡಾ' ಒಂದನ್ನು ತಂದು (ರಾಜಾಸ್ಥಾನದಲ್ಲಿ ದಪ್ಪ ಹುಲ್ಲಿನ ದಂಟುಗಳಿಂದ ಬೆತ್ತದ ಖುರ್ಚಿಗಳನ್ನು ಮಾಡುತ್ತಾರೆ. ಬೆನ್ನು ಇದ್ದು ಕೂಡ್ರುವವು 'ಮೂಡಾ'ಗಳು. ಬೆನ್ನಿಲ್ಲದ ಚಿಕ್ಕ ಆಸನಗಳು 'ಮೂಡಿ'ಗಳು. ಬೆಲೆ ನಾಲ್ಕೈದು ರೂಪಾಯಿಗಳಾಗಿದ್ದರೂ ತುಂಬ ಹಗುರವಾಗಿ ಕೂಡ್ರಲು ಚೆನ್ನಾಗಿರುತ್ತವೆ.) ಎಳೆಬಿಸಿಲಿನಲ್ಲಿ ಕುಳಿತೆ. ದೂರದ ರೇಡಿಯೊದಲ್ಲಿ ಲತಾಮಂಗೇಶಕರಳ ಪ್ರಣಯ ಗೀತ ಕೇಳಿಸುತ್ತಿದ್ದಾಗ, ವೈವಾಹಿಕ ಜೀವನದ ಹಗಲುಗನಸು ಕಾಣುತ್ತಿದ್ದಾಗ, ಕೆಳಗಿನಿಂದ ಯಾರೋ "ಡಾಕ್ಟರಸಾಬ, ಡಾಕ್ಟರಸಾಬ" ಎಂದು ಕರೆದದ್ದು ಕೇಳಿಸಿತು. ಬಿ.ಪಿ. ಯವರನ್ನು ಎಲ್ಲರೂ ಅದೇ ಹೆಸರಿನಿಂದ ಕರೆಯುವದು ರೂಢಿಯಾದ್ದರಿಂದ ಅವರಿಲ್ಲವೆಂದು ಹೇಳಲು ಹೋದಾಗ ನೋಡಿದರೆ ಜೋತಿಷಿ ಭಟನಾಗರ ನಿಂತಿದ್ದ. ಆತ ಕರೆದದ್ದು ನನ್ನನ್ನೇ. ಇವನೆಲ್ಲಿ ಪೀಡಾ ಬಂದನೆಂದು ಯೋಚಿಸುತ್ತಿರುವಾಗಲೇ ಹತ್ತಾರು ಪ್ರಶ್ನೆಗಳನ್ನು ಕೇಳಿದ. ನೂರೆಂಟು ವಿಷಯ ಮಾತನಾಡಿದ. ಕೈ ನೋಡಿ ಭವಿಷ್ಯ ಹೇಳುತ್ತೇನೆಂದಾಗ ನನಗದರಲ್ಲಿ ವಿಶ್ವಾಸವಿಲ್ಲವೆಂದರೂ ತಾನು ಹೇಳಿದ್ದು ಕೇಳಿದನಂತರ ತಾನಾಗಿ ವಿಶ್ವಾಸ ಉಂಟಾಗುತ್ತದೆ, ಎಂದು ಬಲವಂತಮಾಡಿ ಕೈ ನೋಡಿದ. ನಾನೊಬ್ಬ ದೊಡ್ಡ ಅಧಿಕಾರಿಯಾಗುತ್ತೇನೆ, ಧನಿಕನಾಗುತ್ತೇನೆ ಎಂದು ಅವನು ಹೇಳಿದ ಭವಿಷ್ಯದಿಂದ ಇದ್ದ ಸ್ವಲ್ಪ ವಿಶ್ವಾಸವು ಹಾರಿ ಹೋಯಿತು. ಕೊನೆಗೆ ನೋಡಿದರೆ ಆತನಿಗೆ ಅಮೇರಿಕೆಗೆ ಹೋಗಬೇಕಾಗಿತ್ತಂತೆ. ಅದಕ್ಕೆ ಬೇಕಾದ ಸಲಹೆ ಪಡೆಯಲು ಮತ್ತು ಅರ್ಜಿಯನ್ನು ಟಾಯಪ್ ಮಾಡಿಸಿಕೊಳ್ಳಲು ಬಂದಿದ್ದ. ಉಣ್ಣೆಯ ಜಾತಿಗೆ ಸೇರಿದ ಆತನನ್ನು

ಸಾಗಹಾಕುವದರಲ್ಲಿ ಗ್ಯಾನಲತಾ ಬಂದು ಅಡಿಗೆ ಏನುಮಾಡಲಿ? ಎಂದು ವಿಚಾರಿಸಿದಳು. ಎಂತಹ ತರಕಾರಿ ತಂದುಕೊಟ್ಟರೂ ಅವಳು ಮಾಡಿದ ಅಡಿಗೆಗೆ ಒಂದೇ ರುಚಿ. ಸ್ವಲ್ಪ ವಿಶ್ರಾಂತಿ ಪಡೆಯುವದೊಳಗೆ ಯಾರೋ ಬಾಗಿಲು ಬಡೆದರು. ಹುಡುಗ ವರ್ತಮಾನಪತ್ರಿಕೆ ಕೊಟ್ಟು ಹೋದ. ಅದನ್ನು ಓದುವದರಲ್ಲಿ ಹಾಲು ಬಂದಿತು. ಹರಿಬಕ್ಷ ಬಂದ. ಗ್ಯಾನಲತಾ, ರಾಣಿ ಎಲ್ಲರೂ ಬಂದು ಹೋಗುವದರೊಳಗೆ ಇಡೀ ದಿನ ಕಳೆಯಿತು.

ವಸಂತಕಾಲದಲ್ಲಿ ಪಕ್ಷಿಗಳು ತಮ್ಮದೇ ಆದ ಗೂಡನ್ನು ಕಟ್ಟಿ ಸಂಸಾರ ಹೂಡುವಂತೆ ನನ್ನ ಬಾಳಿನಲ್ಲಿ ವಸಂತ ಋತುವನ್ನು ಇದೀಗ ಕಂಡುಕೊಂಡ ಕಾಲದಲ್ಲಿ ನನ್ನದೇ ಒಂದು ಗೂಡನ್ನು ಮಾಡಿಕೊಳ್ಳುವ ಹಂಬಲ ಪ್ರಬಲವಾಯಿತು. ಬಾಡಿಗೆಯ ಮನೆಗಾಗಿ ಎಲ್ಲ ಕಡೆಗೆ ಹುಡುಕಾಡಿದೆ. ಅನೇಕರನ್ನು ವಿಚಾರಿಸಿದೆ. ನನಗೆ ಎರಡು ಕೋಣೆಯ ಮನೆ ಸಾಕಾಗಿತ್ತು. ಆದರೆ ಬಿ.ಪಿ. ದೊಡ್ಡ ಮನೆಯನ್ನೇ ಹುಡುಕುತ್ತಿದ್ದರು. ಒಮ್ಮೆ ಅವರೊಡನೆ ಮಾತನಾಡುತ್ತಿದ್ದಾಗ ಇಂಜಿನಿಯರಿಂಗ ವಿಭಾಗದ ವಾಜಪೇಯವರಿಗೆ ಉದಯಪುರಕ್ಕೆ ವರ್ಗವಾದ ಸಮಾಚಾರ ಕಿವಿಗೆ ಬಿದ್ದಿತ್ತು. ಆ ಮನೆ ಚೆನ್ನಾಗಿ, ಕಾಲೇಜಿಗೆ ಹೋಗುವ ದಾರಿಯಲ್ಲೇ ಇತ್ತು. ಆದ್ದರಿಂದ ಆ ಮನೆಯ ಹತ್ತಿರದಿಂದ ಹಾದು ಹೋಗುವಾಗ ಬಿ.ಪಿ.ಯವರಿಗೆ ಮನೆಯ ವಿಷಯ ಜ್ಞಾಪಿಸಿದೆ. ಕೂಡಲೇ ಅವರು ಬಾಜಪೇ ಅವರನ್ನು ಮಾತನಾಡಿಸಿ ಹೋಗೋಣ ಎಂದು ಅವರ ಮನೆಯ ಮೆಟ್ಟಿಲು ಹತ್ತಿಯೇ ಬಿಟ್ಟರು. ಅನಿರೀಕ್ಷಿತವಾಗಿ ನಾವು ಹೋದರೂ ಆದರದಿಂದಲೇ ಸ್ವಾಗತಿಸಿದ್ದರು ಬಾಜಪೇ ದಂಪತಿಗಳು. ಶ್ರೀಮತಿ ಬಾಜಪೇ ಸುಂದರಳಾಗಿದ್ದಂತೆ ಮನೆಯನ್ನೂ ತುಂಬ ಸುಂದರವಾಗಿ, ಅಚ್ಚುಕಟ್ಟಾಗಿ ಇಟ್ಟಿದ್ದಳು. ಕೈಗೊಂದು ಕಾಲಿಗೊಂದು ಆಳು ಇದ್ದ ಲಕ್ಷ್ಮಿಗೆ ಮನೆಯನ್ನು ವ್ಯವಸ್ಥಿತವಾಗಿ ಇಡುವದು ಕೊನೆಗೂ ಸಾಧಿಸದ್ದು ನೆನಪಾಯಿತು. ಬಾಜಪೇ ಎಮ್. ಎಸ್. ಸಿ.,ಯನ್ನು ಮೂರನೇ ವರ್ಗದಲ್ಲಿ ಪಾಸುಮಾಡಿದ್ದರಿಂದ ಬಹಳ ಕಷ್ಟ ಪಟ್ಟರೆಂದೂ ಉದಯಪುರಕ್ಕೆ ಹೋದರೆ ತಿರುಗಿ ಅವರು ಪರೀಕ್ಷೆಗೆ ಕಟ್ಟಲು ಸಾಧ್ಯವಾಗಬಹುದೆಂದೂ ಅವರ ಮಾತಿನ ಮೇಲಿಂದ ತಿಳಿಯಿತು. ಶ್ರೀಮತಿ ಬಾಜಪೇಗೆ ಉದಯಪುರದಲ್ಲಿ ನೌಕರಿ ಮಾಡಲು ಸಾಧ್ಯವಾಗಬಹುದೆಂಬ ಆಸೆಯನ್ನು ಬಿ.ಪಿ. ವ್ಯಕ್ತಪಡಿಸಿದರು. ತಾನು ಮೂರೇ ದಿನಗಳಲ್ಲಿ ಮನೆಯನ್ನು ಖಾಲಿ ಮಾಡುವುದಾಗಿ, ಮನೆಯ ಮಾಲಕ ಜೈಪುರದಲ್ಲಿ ಇರುವುದರಿಂದ ಬಾಡಿಗೆಯನ್ನು ಅವನ ಇಲ್ಲಿಯ ಖಾತೆಗೆ ಜಮಾ ಮಾಡುತ್ತಿದ್ದುದಾಗಿ ಬಾಜಪೇ ಹೇಳಿದರು. ಮನೆಯ ಚಾವಿಯನ್ನು ನನಗೇ ಕೊಡುವದಾಗಿ ಹೇಳಿದರು. ಒಡೆಯನ ಚಿಕ್ಕಪ್ಪ ಸದ್ಯ ಊರಲ್ಲಿದ್ದು ಅವನನ್ನು ಮಾತನಾಡಿಸುವುದು ಒಳ್ಳೆಯದೆಂದು ಸೂಚಿಸಿದರು. ಮನೆಗೆ ಹೋಗುತ್ತ ಧಾನ್ಯಖಾತೆಯಲ್ಲಿದ್ದ ಪಂತ ಸಾಹೇಬರನ್ನು ಕೂಗಿ ಕರೆದು ಮಾಲಕನ ಚಿಕ್ಕಪ್ಪನಿಗೆ ಈ

ಬಗ್ಗೆ ತಿಳಿಸಲು ಕೇಳಿಕೊಂಡೆವು. ಗಿರಾಕಿಗಳು ಬ್ರಾಹ್ಮಣ ಇಲ್ಲವೇ ಜೈನರು ಇರಬೇಕು! ಎಂದು ಕರಾರು ಇದ್ದುದರಿಂದ ಮನೆ ಸಿಗುವಂತಿತ್ತು. ಇಷ್ಟಾದರೂ ಮನೆ ಎಲ್ಲಿ ತಪ್ಪಿಹೋಗುತ್ತದೆಯೋ ಎಂಬ ದಿಗಿಲು ನನಗೆ. ಅಂತೆಯೇ ಮನೆ ಖಾಲಿಯಾಗುವುದೇ ತಡ. ನನ್ನದೊಂದು ಬೀಗವನ್ನು ಜಡಿದು ಬಂದೆ.

ನಾನು ತಂದ ಸಾಮಾನು ಅತ್ಯಲ್ಪವಾಗಿದ್ದರೂ ಅದನ್ನು ಹೊಸಮನೆಗೆ ಸ್ಥಳಾಂತರಿಸಲು ಹರಿಬಕ್ಷನನ್ನು ಜೊತೆಗೆ ಕಳಿಸಿದರು. ಜೊತೆಗೆ ಎಷ್ಟು ಬೇಡವೆಂದರೂ ಟೇಬಲ, ಚಾರಪಾಯಿ, ಮೂಡಾಗಳನ್ನು ಕಳಿಸಿದರು. ನನ್ನ ಹಾಸಿಗೆ, ರಜಾಯಿಗಳೂ ಸಿದ್ಧವಾಗಿದ್ದರಿಂದ ಸುಖವಾಗಿ ನಿದ್ರಿಸಲು ಅನುಕೂಲವಾಯಿತು. ಮನೆಯನ್ನು ಸಾಫ್ ಮಾಡಲು ಹರಿಬಕ್ಷ ನೆರವಾದ. ಹೋಗುವಾಗ ಬೇಡವೆಂದರೂ ಎರಡು ರೂಪಾಯಿ ಕೊಟ್ಟು ಕಳಿಸಿದೆ. ಹಳೆಯ ಮಡಕೆಗಳನ್ನು ಬಾಜಪೇ ಅವರು ಬಿಟ್ಟುಹೋದದ್ದರಿಂದ ನೀರು ತುಂಬಲು ಅನುಕೂಲವಾಯಿತು. ಪನಿಹಾರಿ (ನೀರು ಹೋರುವವ) ಬೋದುವಿಗೆ ದಿನಾಲು ನೀರು ತಂದು ಹಾಕುವಂತೆ ಹೇಳಿದೆ. ಅವನು ಆದಾಗಲೇ ತಂದ ಬಾವಿಯ ನೀರು ಬೆಚ್ಚಗಿತ್ತು. ಅದನ್ನು ಬಿಸಿಲಿಗಿಟ್ಟು ಇನ್ನಷ್ಟು 'ಬಿಸಿ'ಮಾಡಿ ಸ್ನಾನ ಮುಗಿಸಿದೆ. ಇದು ನನ್ನ ಮನೆ. ಇಂದಿನಿಂದ ನಾನು ಸ್ವತಂತ್ರ ಎಂಬ ಭಾವನೆ ಎಷ್ಟೋ ನೆಮ್ಮದಿ ತಂದಿತು. ಮನೆಯನ್ನು ಇನ್ನೊಮ್ಮೆ ಸರಿಯಾಗಿ ನೋಡೋಣವೆಂದು ಹೊರಟೆ.

ನ್ಯೂಯಾರ್ಕದಲ್ಲಿ ಎತ್ತರವಾಗಿ ಕಡ್ಡಿಪೆಟ್ಟಿಗೆಯಂತೆ ನಿಂತ ವಿಶ್ವಸಂಸ್ಥೆಯ ಕಟ್ಟಡದಂತೆ ಜೋಬನೇರದಲ್ಲಿ ನಮ್ಮ ಮನೆ ನಿಂತಿತ್ತು. ಹೊರಗಿನಿಂದ ನೋಡಿದವರಿಗೆ ಇದೆಂತಹ ಮನೆ ಅನಿಸಿದರೂ ಒಳಗಿನಿಂದ ಮಾತ್ರ ತುಂಬ ಅನುಕೂಲವಾಗಿ, ರಮ್ಯವಾಗಿತ್ತು, ಮೂರಂತಸ್ತಿನ ಮನೆ. ಶ್ವಾನ-ಸೂಕರಗಳು ಗೃಹಪ್ರವೇಶ ಮಾಡಬಾರದು ಎಂಬ ಮುಂಜಾಗ್ರತೆಯಿಂದ ರಸ್ತೆಗೆ ಹೊಂದಿಯೇ ಸಲಾಕಿಗಳ ಗೇಟನ್ನು ಜೋಡಿಸಿದ್ದರು. ಅದಕ್ಕೆ ಬಣ್ಣ-ಎಣ್ಣೆ ಇಲ್ಲದ್ದರಿಂದ ತೆಗೆದಾಗೊಮ್ಮೆ ಕುಯ್ಯೋ! ಎಂದು ಕಿರುಚುವದರಿಂದ ಯಾರೋ ಬಂದರೆಂದು ಸಹಜವಾಗಿಯೇ ತಿಳಿಯುವಂತಿತ್ತು. ರಸ್ತೆಗೆ ತಾಗಿದ್ದ ಕೆಳಂತಸ್ತಿನಲ್ಲಿ ದನಕರು ಕಟ್ಟಲು ವ್ಯವಸ್ಥೆಯಿತ್ತು. ಅವುಗಳ ಓಡಾಟಕ್ಕೆ ಬೇರೆಯೇ ಹೆಬ್ಬಾಗಿಲು ಇತ್ತು. ಕಾಲೇಜಿನ ಹಾಲು ಪಡೆಯುವವರಿಗೆ ಇದೊಂದು ಪ್ರತ್ಯೇಕ ಮನೆಯಂತೆ ಉಪಯೋಗಿಸಲು ಸಾಧ್ಯವಿತ್ತು. ಬದಿಗಿದ್ದ ಪಾವಟಣಿಗೆಗಳು ಮೇಲಂತಸ್ತಿಗೆ ಹೋಗುತ್ತಿದ್ದವು. ಅರ್ಧ ದಾರಿಯಲ್ಲಿ ಎಡಕ್ಕೆ ಸದಾಕಾಲ ಮುಚ್ಚಬೇಕಾದ ಬಾಗಿಲು ಇದೆ. ರಾಜಸ್ಥಾನದ ಪರಿಚಯವಿಲ್ಲದವರು ಅದೊಂದು ಹಜಾರವೆಂದು ತಿಳಿಯಬಹುದು - ಆದರೆ ಅದು ಅತ್ಯಾಧುನಿಕ ಕಕ್ಕಸ! ಅದನ್ನು ಸ್ವಚ್ಛವಾಗಿಡಲು ಗುಂಡಿಯನ್ನು ತೋಡಬೇಕೆಂದಿಲ್ಲ. ಸರಪಳಿ ಎಳೆಯಬೇಕೆಂದಿಲ್ಲ. ನಲ್ಲಿ

ತಿರುವಬೇಕೆಂದಿಲ್ಲ. ಈ ಸೇವೆಗೆ ಸದಾ ಸಿದ್ಧವಾಗಿಯೇ ಇರುತ್ತದೆ ಸೂಕರ ಸೈನ್ಯ. ತಮ್ಮ ಸೇವೆ ಬೇಕು ಎಂದು ತಿಳಿದಾಕ್ಷಣ ಅಗ್ನಿಶಾಮಕ ದಳಕ್ಕಿಂತ ವೇಗವಾಗಿ ಬಂದುಬಿಡುತ್ತವೆ. ಸೇವೆಯ ಆತುರತೆ ಅತಿಯಾಗಿ ತೋರದಂತೆ ಶಿಕ್ಷಿಸಲು ದೊಣ್ಣೆ, ಕಲ್ಲು ಸದಾಕಾಲ ಸಿದ್ಧವಿಟ್ಟಿರಬೇಕಾಗುತ್ತದೆ! ಎಡಗಡೆಗೆ ಚಚ್ಚೌಕವಾದ ತೆರವಾದ ಸ್ಥಳವಿದೆ. ಇದ್ದಲಿ, ಕಟ್ಟಿಗೆಗಳನ್ನು ಅಲ್ಲಿ ದಾಸ್ತಾನು ಮಾಡಬಹುದು. ಎದುರಿಗೆ ವಿಶಾಲವಾದ ಏಳು ಬಾಗಿಲುಗಳುಳ್ಳ ಹಜಾರ ಬರುತ್ತದೆ. ಪ್ರತಿಯೊಂದು ದ್ವಾರಕ್ಕೂ ಜೋಡು ಕದಗಳು. ಬೇಸಿಗೆಯಲ್ಲಿ ಗಾಳಿ ಒಳಗೆ ಬಂದರೂ ಮರಳು ಮತ್ತು ನೊಣಗಳನ್ನು ತಡೆಹಿಡಿಯಲು ಜಾಳಿಗೆ ಕೂಡ್ರಿಸಿದ ಕದಗಳಿವೆ. ಚಳಿಗಾಲದಲ್ಲಿ ತಂಗಾಳಿ ಬಾರದಂತೆ ತಡೆಹಿಡಿಯಲು ಸಾಗವಾನಿಯ ಕದಗಳು. ಮನೆ ತುಂಬ ಉಕ್ಕಿನ ಬಳೆ, ಮೊಳೆಗಳು ದೇವಸ್ಥಾನದಲ್ಲಿ ಅಲಂಕಾರಗಳನ್ನು ತೂಗ ಹಾಕಲಿಕ್ಕೆ ಇಟ್ಟಂತಿವೆ. ಅಲ್ಲದೆ ಗೋಡೆಯಲ್ಲಿಯೇ ನಿರ್ಮಿಸಿದ ಮೂರು ಕಪಾಟುಗಳಿವೆ. ಅದಕ್ಕೆ ಹೊಂದಿ ಪುಟ್ಟ ಒಳಕೋಣೆ. ಹವೆಯಾಡಲು ರಾಜಸ್ಥಾನಿ ಮಾದರಿಯ ಬೆಳಕಿಂಡಿಗಳು ಮಾತ್ರ. ಚಳಿ ಹೆಚ್ಚಾದಾಗ ಬೆಚ್ಚಗಿರಬಹುದು. ಉಳಿದ ದಿನಗಳಲ್ಲಿ ಪತ್ನಿಯ ಅಲಂಕಾರದ ಕೋಣೆಯಾಗಲು ಬೇಕಾದ ಕಪಾಟುಗಳಿವೆ. ಒಂದರಲ್ಲಿ ಸೀರೆ, ಕುಪ್ಪಸ, ಲಂಗ ಮುಂತಾದವನ್ನು ಇಡಬಹುದು. ಈ ಪುಟ್ಟ ಒಂದರಲ್ಲಿ ಕುಂಕುಮ, ಕಾಡಿಗೆ, ಕನ್ನಡಿ ಎಲ್ಲ ವಿರಾಜಿಸುವವು ಎಂದು ಕಲ್ಪಿಸಿಕೊಂಡಾಗ ರೋಮಾಂಚವಾಯಿತು. ಹೆಣ್ಣೊಂದು ನನಗಾಗಿ ತನ್ನ ಹಿಂದಿನ ಜೀವನವನ್ನೆಲ್ಲ ಮರೆತು ಈ ಕೊಂಪೆಗೆ ಬರಲಿದೆ ಎಂದು ನೆನೆನಸಿಕೊಂಡು ನೆಮ್ಮದಿಯೆನಿಸಿತು. ಅಪರಿಚಿತ ವ್ಯಕ್ತಿಯೊಬ್ಬಳೊಂದಿಗೆ ಹೇಗೆ ಹೊಂದಿಕೊಳ್ಳಬಲ್ಲೆ? ನಾನು ಸುಖದಿಂದ ಇರಬಹುದಾದ ಈ ಹಳ್ಳಿಯ ಜೀವನ ಅವಳಿಗೆ ಒಗ್ಗೀತೇ? ಈಗ ಅವಳು ಏನು ಮಾಡುತ್ತಿರಬಹುದು? ನನ್ನನ್ನು ನೆನೆನಸುತ್ತಿರಬಹುದೇ?............ ಎಂದೆಲ್ಲ ಯೋಚಿಸುತ್ತಿದ್ದಾಗ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದ ಅರಿವಾಗಿ, ಎಡದಲ್ಲಿದ್ದ ಖೋಲಿಗೆ ಹೋದೆ. ಬಾಜಪೇ ದಂಪತಿಗಳು ಇದನ್ನೇ ಅಡಿಗೆ ಮನೆಯಂತೆ ಉಪಯೋಗಿಸುತ್ತಿದ್ದರು. ನಾವು (ನಾನು ಎಂಬ ಸ್ಥಳದಲ್ಲಿ ಆಗಲೇ ನಾವು ಅನಿಸಲಾರಂಭಿಸಿತ್ತು!) ಹಾಗೆಯೇ ಮಾಡಬೇಕು. ನಂತರ ಜಾಳಿಗೆ ಕದ ತೆಗೆದು ಗ್ಯಾಲರಿಗೆ ಹೋದೆ. ಪಾರಿವಾಳಗಳು ತುಂಬ ಹೊಲಸು ಮಾಡಿದ್ದವು. ಅದನ್ನು ಸ್ವಚ್ಛಮಾಡಬೇಕು. ಅದಕ್ಕೆ ಹೊಂದಿದ್ದ ಬಾಗಿಲು ಇಲ್ಲದ ಸಣ್ಣ ಖೋಲಿಯನ್ನೇ ಪರದೆ ಹಚ್ಚಿ ಇಲ್ಲವೇ ಬಾಗಿಲು ಕೂಡ್ರಿಸಿ ಸ್ನಾನಗೃಹ ಮಾಡಬಹುದು.

ಇದಕ್ಕೂ ಮೇಲಿನ ಅಂತಸ್ತಿನಲ್ಲಿ ಶಾಂತಿದೂತ ಪಾರಿವಾಳಗಳು ರಾಜ್ಯವಾಳುತ್ತಿವೆ. ರಾಜಸ್ಥಾನಿ ಮಹಿಳೆಯರು ಪರಪುರುಷರನ್ನು ನಿಸ್ಸಂಕೋಚವಾಗಿ ನೋಡಲೆಂದು ಮಾಡಿದ ಪುಟ್ಟ ಪುಟ್ಟ ಕಂಡಿಗಳಿಂದ ಪಾರಿವಾಳಗಳು ನಿರ್ಭಿಡೆಯಿಂದ

ಬಂದುಹೋಗುತ್ತಿದ್ದವು. ಕೆಲವು ಕಿಟಕಿಗಳಿವೆ. ಅವಕ್ಕೂ ಬಾಗಿಲು ಇಲ್ಲ. ಅವಕ್ಕೇನಾದರೂ ಪರದೆ ಹಾಕಬೇಕಾಗಿದ್ದರೆ ಒಂದು ಟಾಕಿ ಬಟ್ಟೆಯಾದರೂ ಬೇಕು. ಇದು ಅಧಿಕೃತವಾದ ಅಡಿಗೆ ಮನೆ. ಅಂತೆಯೇ ಉರುವಲು, ಇದ್ದಿಲು ಉಪಯೋಗಿಸಬಹುದಾದ ಒಲೆ ಇಡಲು ಸ್ಥಳ, ನೀರು ಹೋಗಲು ಅನುಕೂಲ, ನೊಣಗಳಿಂದ ರಕ್ಷಿಸುವ ಕಪಾಟುಗಳನ್ನು ಕೂಡ್ರಿಸಿದ್ದಾರೆ. ಇದನ್ನು ಛಾಯಾಗ್ರಹಣದ ಕತ್ತಲು ಕೋಣೆ ಮಾಡಬಹುದೆಂದು ಲೆಕ್ಕಾಚಾರ ಹಾಕಿದೆ. ಅದಕ್ಕೆ ಹೊಂದಿದ್ದ ಕೋಣೆ ಧೂಳು ತಿನ್ನುತ್ತ ಬಿದ್ದಿತ್ತು. ಅದನ್ನು ಸ್ವಚ್ಛಗೊಳಿಸಿ ಅತಿಥಿಗಳ ಬಳಕೆಗೆ ಇಡಬಹುದು ಎಂದುಕೊಂಡೆ. ಕೆಳ ಅಂತಸ್ತಿನ ಹಜಾರದಷ್ಟೆ ದೊಡ್ಡ ಹಜಾರ ಮೇಲೂ ಇದೆ. ಆದರೆ ಅದಕ್ಕೆ ಮಾಡು ಇಲ್ಲ. ಬಿಸಿಲು -ಬೆಳಕು-ಗಾಳಿಗಳು ಧಾರಾಳವಾಗಿವೆ. ಇದರ ಮೇಲ್ಗಡೆ ಇನ್ನೊಂದು ಅಂತಸ್ತು ಇದೆ. ಅಲ್ಲಿಗೆ ಹೋದರೆ ಇಡೀ ಜೋಬನೇರದ ನೋಟ ಕಾಣಿಸುತ್ತಿತ್ತು. ವಿಶ್ರಾಂತಿಯ ಸಲುವಾಗಿ ಕಲ್ಲಿನ ಆಸನಗಳಿದ್ದವಲ್ಲದೇ ಚಳಿಗಾಲದಲ್ಲಿ ಬಿಸಿಲು ಕಾಯಿಸಲು, ಬೇಸಿಗೆಯಲ್ಲಿ ರಾತ್ರಿ ವಿರಮಿಸಲು ಬೇಕಾದಷ್ಟು ತೆರವಾದ ಸ್ಥಳ ಅಲ್ಲಿತ್ತು.

ಸಂಜೆಗೆ ಮನೆಗೆ ಪತ್ರ ಬರೆಯಲು ಕುಳಿತಾಗ ಒಮ್ಮೆಲೇ ದೀಪಗಳು ಹೋಗಿಬಿಟ್ಟವು. ಇನ್ನೇನು ಮಾಡವುದೆಂದು ಉಪ್ಪರಿಗೆಯೇರಿದೆ. ಸೂರ್ಯನಾಗಲೇ ಪ್ರಖರತೆ ಕಳೆದುಕೊಂಡು ಭೂತಾಯಿಯ ಮಡಿಲು ಸೇರುವುದರಲ್ಲಿದ್ದ. ಗಗನವೆಲ್ಲ ಕೆಂಬಣ್ಣದಿಂದ ಅಲಂಕರಿಸಿದಂತೆ ಇತ್ತು. ವಿರುದ್ಧ ದಿಕ್ಕಿನಿಂದ ನಗುಮುಖದ ಹುಣ್ಣಿಮೆಯ ಚಂದ್ರ ಕಣ್ಣುಮುಚ್ಚಾಲೆ ಆಡುತ್ತ ದೂರದ ಬೆಟ್ಟಗಳನ್ನು ಏರಿ ಮೇಲಕ್ಕೆ ಬರುತ್ತಿದ್ದ. ಸೂರ್ಯ- ಚಂದ್ರರ ನಡುವೆ ಹರಡಿಕೊಂಡಿತ್ತು ಜೋಬನೇರ. ಕೊಳಕು, ಕುರೂಪಿ ಜೋಬನೇರ, ಹುಣ್ಣಿಮೆಯ ಬೆಳಕಿನಲ್ಲಿ ಬೆಡಗಿನ ರಾಣಿಯ ರೂಪ ತಳೆದು ನಿಂತಳು. ಹಿಂಬದಿಗೆ ಅರವಲಿ ಬೆಟ್ಟದ ಸಾಲುಗಳು. ಹಗಲಲ್ಲಿ ಅಂದಗೇಡಿಯಾಗಿದ್ದ ಕೋಟೆ ಕೊತ್ತಳಗಳು ಈಗ ಪ್ರಾಚೀನ ಅರಮನೆಗಳ ಭವ್ಯತೆ ಪಡೆದವು. ಅನತಿದೂರದಲ್ಲಿ ನವಿಲೊಂದು ಬಿಲ್ಲಿನಂತೆ 'ಭೋಂಯ್' ಎಂದು ಹಾರಿ ತನ್ನ ಮರದ ಆಶ್ರಯ ಪಡೆಯಿತು. ಇದರಿಂದಾಗಿ ಮೊದಲೇ ಆ ಮರದಲ್ಲಿ ಆಶ್ರಯ ಪಡೆದ ಮಯೂರ ವರ್ಗದಲ್ಲಿ ಅಲ್ಲೋಲ ಕಲ್ಲೋಲವಾಯಿತು. ಒಂದು ಮರದಿಂದ ತಾನು ಈ ಮರದ ಆಶ್ರಯದಲ್ಲಿ ಇದ್ದೇನೆ ಎಂದು ಒಂದು ಹೇಳಿದರೆ, ಒಂದು ತಿಂಗಳಿನಿಂದ ತಾವು ಸ್ಥಾಯಿಯಾಗಿರುವುದಾಗಿ ಕೆಲವು ಚೀರಿ ಹೇಳಿದವು. ಮಾತಿಗೆ ಮಾತು ಬೆಳೆದು ಚುಂಚಿಗೆ ಚುಂಚು ತಗಲಿ, ಕಾಲಿನಬಡಿದಾಟ ಪ್ರಾರಂಭವಾಗುವುದರಲ್ಲಿದ್ದಾಗ, ಆಗಂತುಕ ಜಾಣ ನವಿಲೇ ಇನ್ನೊಂದು ಮರಕ್ಕೆ ಹಾರಿ ಹೋಯಿತು. ವೀರ ಹನುಮಾನನ ಅನುಯಾಯಿಗಳಾದ ವಾನರರ ಸೇನೆಯದುರು ನಾಳೆಯಿಂದ ಸ್ವಂತ ಮನೆ ಕಟ್ಟಲು ಪ್ರಾರಂಭಿಸಬೇಕು. ಆದರೆ ಅಲ್ಲಿಯ ತನಕ ಎಲ್ಲಿ ವಿಶ್ರಾಂತಿ ಮಾಡುವುದು? ಎಂದು

ಯೋಚಿಸುತ್ತ ರಸ್ತೆಯ ಮಗ್ಗಲಿನ ಕಟ್ಟಡದಿಂದ ಇನ್ನೊಂದು ಕಟ್ಟಡಕ್ಕೆ ಜಿಗಿದವು. ಈ ಗಡಿಬಿಡಿಯಲ್ಲಿ ತಾಯಿಯಿಂದ ಅಗಲಿದ ಮರಿಕೋತಿಗಳು ಆರ್ತವಾಗಿ ಕೂಗುತ್ತಿದ್ದವು. ಇದೀಗ ಮುಂಜಾವು ಆಗುತ್ತಿದೆಯೇ? ಸಂಜೆಯಾಗುತ್ತಿದೆಯೇ? ಎಂದು ತಿಳಿಯದೇ ಗೊಂದಲದಲ್ಲಿ ಬಿದ್ದ ಗಿಳಿಗಳು ತಮ್ಮೊಳಗೇ ಚರ್ಚಾಕೂಟ ನಡೆಸಿದ್ದವು. ದಣಿದ ಒಂಟೆಗಳು ದಿನವೆಲ್ಲ ದುಡಿದರೂ ಯಜಮಾನನ ಅತಿ ಆಸೆ ಮುಗಿಯಲೊಲ್ಲದು ಎಂದು ಗೊಣಗುತ್ತ ಎಳೆಯಲಾರದ ರಥವನ್ನು ಎಳೆಯುತ್ತ ನಡೆದಿದ್ದವು. ಎಲ್ಲಿಯೋ ಆಜನ್ಮ ವೈರಿಗಳಾದ ನಾಯಿ-ಹಂದಿಗಳ ನಡುವೆ ನಾಲ್ಕನೆಯ ಮಹಾ ಯುದ್ಧ ಪ್ರಾರಂಭವಾಗಿರಬೇಕು. ಗೆಲ್ಲಲಾರದ ಹಂದಿಗಳು ಬೊಬ್ಬೆಯಿಟ್ಟವು. ಪುಟ್ಟ ಹಕ್ಕಿಗಳು ಕಣ್ಣುಮುಚ್ಚಾಲೆಯಾಟವನ್ನು ಇನ್ನೂ ಮುಗಿಸದೇ ಗಿಡದಿಂದ ಗಿಡಕ್ಕೆ ಹಾರುತ್ತಿದ್ದವು. ಸ್ವಾರ್ಥಿ ಮಾನವ ಮಾತ್ರ, ನಿಸರ್ಗದ ಈ ಆಗುಹೋಗುಗಳಿಗೆ ಕಣ್ಣಿದ್ದು ಕುರುಡನಾಗಿ, ತನ್ನ ಗೇಣುದ್ದ ಹೊಟ್ಟೆ ತುಂಬಿಕೊಳ್ಳುವುದರಲ್ಲಿ ಮೈಮರೆತಿರುವ. ಹೆಂಗೆಳೆಯರು ದಿನದಲ್ಲಿ ಕೊನೆಯ ಬಾರಿ ನೀರು ತರುತ್ತಿದ್ದಾರೆ. ಯಾರೋ ಒಲೆ ಹಚ್ಚಿ ಅಡಿಗೆ ಪ್ರಾರಂಭಿಸಿದ್ದಾರೆ. ನೆರೆಯವರು ಸಾಯಂಕಲಹ ಪ್ರಾರಂಭಿಸಿ ಎತ್ತರದ ಧ್ವನಿಯಲ್ಲಿ ಕೂಗಾಡುತ್ತಿದ್ದಾರೆ. ಹಸಿದ ಮಗುವೊಂದು ತಾಯ ಹಾಲಿಗಾಗಿ ಅಳುತ್ತಿದೆ. ಎಲ್ಲಿಯೋ ದೂರದಲ್ಲಿ ಹಿನ್ನೆಲೆಗಾಯಕನಾಗಲು ಬಯಸುವ ವಿದ್ಯಾರ್ಥಿಯೊಬ್ಬ ಕರ್ಕಶವಾಗಿ ಪ್ರೇಮಗೀತವೊಂದನ್ನು ಹಾಡಿ ಕಂಠಕ್ಕೆ ತರಬೇತಿ ಕೊಡುತ್ತಿದ್ದಾನೆ. ಎಷ್ಟೋ ಹೊತ್ತು ಜೋಬನೇರದ ಪರಿಸರ ನೋಡುವುದರಲ್ಲಿ ಮೈಮರೆತಿದ್ದೆ. ಎಚ್ಚರವಾದಾಗ ಚಂದ್ರನು ಮೇಲಕ್ಕೆ ಏರಿಬಂದಿದ್ದ. ಮಂದ ಮಾರುತನು ಮೈದಡವುತ್ತಿದ್ದ. ಹಾಲು ಚೆಲ್ಲಿದಂತಹ ಬೆಳದಿಂಗಳು. ನಗರದಲ್ಲಿ ಇಂತಹ ಸೌಂದರ್ಯ ಎಂದಿಗಾದರೂ ಸವಿಯಲು ಸಾಧ್ಯವೇ? ನೋಡುತ್ತಿದ್ದಂತೆ ವಿದ್ಯುತ್ ದೀಪಗಳು ಹತ್ತಿಕೊಂಡವು. ಈ ಹೊಸ ಬೆಳಕಿನಲ್ಲಿ ಜೋಬನೇರದ ಕುಂದುಕೊರತೆಗಳೇ ಎದ್ದು ಕಾಣಿಸಲಾರಂಭಿಸಿ, ಅದು ರುಚಿಸದೇ ಸ್ವಪ್ನಲೋಕ ಬಿಟ್ಟು ಭಾರವಾದ ಕಾಲುಗಳು ಜಡವಾದ ದೇಹ ಹೊತ್ತು ಪಾವಟಣಿಗೆಗಳಿಂದ ಇಳಿದವು.

ಸೂರ್ಯಪ್ರಕಾಶದಲ್ಲಿಯೇ ರಸ್ತೆಯಲ್ಲಿರುವ ನಾಯಿ, ಹಂದಿ, ಕತ್ತೆ, ತಿಪ್ಪೆ-ಕೊಳಚೆಗಳನ್ನು ತಪ್ಪಿಸಿ ನಡೆಯುವುದು ಕಷ್ಟದ್ದಾಗಿರುವಾಗ ರಾತ್ರಿ ತಿರುಗಾಡುವದು ಅಪಾಯಕಾರಿ. ಟಾರ್ಚ್ ಇರದ್ದರಿಂದ ದೀಪಗಳು ಇರುವಾಗಲೇ ಊಟ ಮಾಡಿ ಬರುವುದು ಒಳ್ಳೆಯದೆಂದು ಹಾಸ್ಟೇಲ ಮಾರ್ಗ ಹಿಡಿದೆ. ಹಾಸ್ಟೇಲಿನ ಊಟ ಹೇಗೂ ಇರಲಿ. ಸಬ್‌ಜಿ ರೋಟಿಯ ಬಿ.ಪಿ. ಮನೆಯ ಊಟಕ್ಕೆ ಪೂರ್ಣ ವಿರಾಮ ಕೊಡಲು ಸಾಧ್ಯವಾದುದ್ದಕ್ಕೆ ಆನಂದವಾಗಿತ್ತು. ಇಷ್ಟು ದಿನದ ಅವರ ಅನ್ನದ ಋಣ ಹೇಗೆ ತೀರಿಸುವದೆಂದು ಅಲೋಚಿಸುತ್ತಿರುವಾಗಲೇ ಹಾಸ್ಟೆಲು ಬಂದು ಬಿಟ್ಟಿತ್ತು.

೯. ಮಾತಾಜಿ

ನಮ್ಮ ವಿಭಾಗದ ಕೆ. ಎಮ್. ಮಾಥುರ ಹಾಸ್ಟೇಲಿನ ಮೇಲ್ವಿಚಾರಕರಿದ್ದುದರಿಂದ, ನಾನು ಅಲ್ಲಿಗೇ ಊಟಕ್ಕೆ ಬರುವ ವಿಚಾರವನ್ನು ಮ್ಯಾನೇಜರನಿಗೆ ತಿಳಿಸಿ ನನ್ನ ಯೋಗ ಕ್ಷೇಮವನ್ನು ಅವನಿಗೆ ಒಪ್ಪಿಸಿದರು. ಆದ್ದರಿಂದ ಊಟಕ್ಕೆ ಹೋದೊಡನೆ ಆತ ನಮಸ್ಕರಿಸಿ ವಿನಯ ತೋರಿದ, ವಿದ್ಯಾರ್ಥಿಗಳು ರಜೆಯಲ್ಲಿ ಊರಿಗೆ ಹೋಗಿದ್ದರಿಂದ ಕೆಲವರೇ ಊಟಕ್ಕಾಗಿ ಉಳಿದಿದ್ದರು. ಅಂಡರ್‌ವೇರ, ಬನಿಯನ್ ಧರಿಸಿದ, ಕಲ್ಲಿ ಮೀಸೆಯ ಧಾಂಡಿಗನೊಬ್ಬ ಥಾಲಿಯನ್ನು ಮುಂದಿಟ್ಟಾಗ ಟ್ರೇನಿನಲ್ಲಿದ್ದೇನೋ, ಹಾಸ್ಟೆಲಿನಲ್ಲಿದ್ದೇನೋ ಗೊತ್ತಾಗಲಿಲ್ಲ. ಎಲ್ಲ ಅಡಿಗೆಯನ್ನು ಬಡಿಸುವಂತೆ ಖಾನೆಗಳಿದ್ದ ತಾಟಿನಲ್ಲಿ ಬೇಳೆ, ಪಲ್ಯ, ಉಪ್ಪು, ಮೊಸರು, ಅನ್ನ, ರೋಟಿಗಳಿದ್ದವು. ಬೇಳೆಗೆ ಉಪ್ಪು, ಖಾರ, ಮಸಾಲೆ ಯಾವುದೂ ಇರಲಿಲ್ಲ. ಪಲ್ಯದ ಮೇಲೆ ಹೆಚ್ಚಾಗಿ ತೇಲುವ ಎಣ್ಣೆಯನ್ನು ನೋಡಿ ಹೀಗೇಕೆ ಎಂದು ಆಳಿಗೆ ಕೇಳಿದೆ. ನನಗಾಗಿ ಹೆಚ್ಚಿನ 'ಘೀ' (ತುಪ್ಪ) ಹಾಕಲು ಮ್ಯಾನೇಜರ ಸಾಹೇಬರು ತಿಳಿಸಿದ್ದಾರೆಂದ. ಆ ಎಣ್ಣೆ ತೆಗೆಯಿಸಿ, ಇನ್ನು ಮುಂದೆ ನನಗೆ ಈ ಹೆಚ್ಚಿನ ತುಪ್ಪ ಬೇಡವೆಂದು ಹೇಳಿದೆ. ಬಟಾಟೆ-ವಟಾಣಿ (ಆಲೂ-ಮಟರ)ದ ಪ್ರಸಿದ್ಧ ಪಲ್ಯ ಉರಿಕಾರವಾಗಿತ್ತು. ಮೊಸರು ಗಟ್ಟಿಯಾಗಿ ಚೆನ್ನಾಗಿತ್ತು. ಹೀಗಾಗಿ ಕೆಂಡದ ಮೇಲೆ ಉಬ್ಬಿಸಿದ ರೊಟ್ಟಿಗಳನ್ನು ಮೊಸರಿನೊಂದಿಗೆ ತಿಂದೆ. ಪಲ್ಯದಷ್ಟು ಕಡಿಮೆ ಬಡಿಸಿದ ಅನ್ನ ಇಲ್ಲಿಯ ವೈಶಿಷ್ಟ್ಯವೆಂದು ತಿಳಿದುಕೊಂಡು ಅಷ್ಟನ್ನೇ ಊಟ ಮಾಡಿ ಮುಗಿಸಿದೆ. ಹಿಂದಿರುಗುತ್ತಿರುವಾಗ ದೀಪಗಳು ನಡುದಾರಿಯಲ್ಲೇ ಹೋಗಿಬಿಟ್ಟದ್ದರಿಂದ ಮುಂದೆ ಹೋಗುವ ಸಾಹಸ ಮಾಡದೇ ಅಲ್ಲೆ ಹದಿನೈದು ನಿಮಿಷ ನಿಲ್ಲುವಂತಾಯಿತು. ಕಾಲೇಜು ಪ್ರಾರಂಭವಾದ ನಂತರ ಬಿಡುವು ಸಿಗಲಿಕ್ಕಿಲ್ಲವೆಂದು, ಊರಿನ ದೇವತೆ ಮಾತಾಜಿಯ ದರ್ಶನ ಪಡೆದು ಬರೋಣವೆಂದು ಮರುದಿನ ಹೊರಟೆ. ಊರನ್ನು ಹರಸುವ ಮಾತಾಜಿಯ ವಾಸ ಊರ ಹಿಂದೆ. ಅಂತೆಯೇ ಊರಿನ ಕೊಳಚೆಯನ್ನು ದಾಟುವಾಗ ಕಣ್ಣು ಅರಳಿಸಿ, ಮೂಗು ಮುಚ್ಚಿ ಮುಂದೆ ಹೋಗಬೇಕಾಯಿತು. ಎತ್ತರದ ಗುಡ್ಡದ ಮೇಲಿದ್ದ ದೇವಸ್ಥಾನಕ್ಕೆ ಗುಡ್ಡದಡಿಯಲ್ಲೇ ಗೇಟು ಮಾಡಿದ್ದಾರೆ. ಅಲ್ಲಿ ಹೋದಾಗ ಗೇಟಿನ ಬಳಿಯಲ್ಲೇ ರಜಪೂತನೊಬ್ಬ ಏನೋ ಬರೆಯುತ್ತ ಕುಳಿತಿದ್ದ. ನನ್ನನ್ನು ನೋಡಿ ದಿಗ್ಗನೆದ್ದು "ಈ ಬಡವನಿಂದ ಏನು ಸೇವೆಯಾಗಬೇಕು?" ಎಂದು ನಮಸ್ಕರಿಸಿದ.

ಮಾತಾಜಿಯ ಮಂದಿರಕ್ಕೆ ಹೋಗಬೇಕಾಗಿದೆಯೆಂದೆ. ಈ ಬದಿಯಿಂದ ರಸ್ತೆಯಿಲ್ಲವೆಂದು ಹೇಳಿ ಮಗನನ್ನು ಕರೆದು ರಸ್ತೆ ತೋರಿಸಲು ಹೇಳಿದ. ಊರಲ್ಲೆಲ್ಲ ಒಂದು ಒಳ್ಳೆಯ ರಸ್ತೆ ಇಲ್ಲದಿದ್ದರೂ ಹುರಬರಕಾದ ಕಾಡುರಸ್ತೆಯುಲ್ಲಿ ಮಂದಿರಕ್ಕೆ ಹೋಗುವಲ್ಲಿ ಸಿಮೆಂಟ ರಸ್ತೆ ಮಾಡಿದ್ದು ನೋಡಿ ಆಶ್ಚರ್ಯವಾಯಿತು. ವಿಚಾರಿಸಲಾಗಿ ಅಲ್ಲಿ ನಗರ ಸಭೆಯ ಅಧ್ಯಕ್ಷರು ವಾಸಿಸುವುದರಿಂದ ನಗರ ಪಾಲಿಕೆಗೆ ಆ ರಸ್ತೆಯೇ ಮುಖ್ಯವೆನಿಸಿರಬೇಕು ಎಂಬ ತುಂಟ ಉತ್ತರ ದೊರೆಯಿತು! ಈ ರಸ್ತೆ ಬಿಟ್ಟು ಮೇಲಕ್ಕೆ ಹೋದರೆ ಕಾಲು ದಾರಿಗೆ ಶರಣು ಹೋಗಬೇಕು. ಇಲ್ಲಿ ಹೊರಟವರೆಲ್ಲ ದೇವಿಜೀಯ ಕೃಪಾಕಟಾಕ್ಷಕ್ಕಾಗಿ ಹಾತೊರೆಯುವವರಷ್ಟೇ ಎಂದು ಹೇಳಲು ಬರುವಂತಿಲ್ಲ. ಎದ್ದೊಡನೆ ಮಾಡಬೇಕಾದ ಕೆಲಸವನ್ನು ವೇಳೆಯ ಅಭಾವದ ಮೂಲಕವೋ, ಬೇರಾವ ಕಾರಣಕ್ಕಾಗಿಯೋ ಮುಂದೂಡಿದವರು, ಕೋಟೆ - ಕೊತ್ತಳ ನೋಡಬಯಸಿದವರು, ಜೋಬನೇರದ ವಿಹಂಗಮ ನೋಟಕ್ಕೆ ಎಳಸುವವರು, ದೇವಿಜಿಯ ಪೂಜೆಯ ಪ್ರಸಾದದ ಆಸೆಯಿಂದ ಹೋಗುವ ಮಕ್ಕಳು, ಪರೀಕ್ಷೆ ಪಾಸುಮಾಡಿಸೆಂದು ಕೇಳಿಕೊಳ್ಳಲು ಹೊರಟ ವಿದ್ಯಾರ್ಥಿಗಳು, ಸಂತಾನದ ಹರಕೆ ಹೊತ್ತ ದಂಪತಿಗಳು, ಒಳ್ಳೆ ದಿನಗಳನ್ನು ಬಯಸುವ ವೃದ್ಧರು ಆ ಮಾರ್ಗದಲ್ಲಿ ಇದ್ದರು. ತೀರ್ಥದ ಗಿಂಡಿ, ನೈವೇದ್ಯದ ತಟ್ಟೆ, ಹಳೇ ಡಬ್ಬಿಯಲ್ಲಿ ನೀರು ಹೊತ್ತು ಹೋಗುತ್ತಿದ್ದವರ ಹಿಂದೆ ಸೂಕರ ಪಡೆಯೂ ಹೊರಟಿತ್ತು. ಅಲ್ಲಲ್ಲಿ ನೀರು ಹರಿದು ಕೊರಕಲದ ಇಲ್ಲವೇ ಮಣ್ಣು ತೆಗೆದದ್ದರಿಂದ ಉಂಟಾದ ಹೊಂಡಗಳಿರುವ ಬಯಲು ಪ್ರದೇಶ ಊರಿನ ಸಾರ್ವಜನಿಕ ಕಕ್ಕಸು. ಅದರಲ್ಲಿ ಅರ್ಧ ಭಾಗ ಸ್ತ್ರೀಯರಿಗೆ, ಉಳಿದರ್ಧಭಾಗ ಗಂಡಸರಿಗೆ ಮೀಸಲು. ನಡುವಿನ ಭಾಗ ಪಾಲಕರನ್ನು ಹಿಂಬಾಲಿಸಿ ಬಂದ ಮಕ್ಕಳಿಗೆ ಮೀಸಲಿರಬೇಕು! ಕೆಲವೊಮ್ಮೆ ಸೂಕರಗಳು ತಮ್ಮ ಸರದಿ ಬರುವ ತನಕ ತಾಳ್ಮೆ-ಶಿಸ್ತು ತೋರದೇ ಇನ್ನೂ ಕ್ರಿಯೆ ನಡೆದಿರುವಾಗಲೇ ಭೋಜನಕ್ಕೆ ಎಳಸುವದರಿಂದ ಅಂಥ ಸಮಯದಲ್ಲಿ ಅದಕ್ಕೆ ಬುದ್ಧಿಕಲಿಸಲು ಸ್ತ್ರೀ-ಪುರುಷರು ಬಡಿಗೆ ಹಿಡಿದೇ ಹೊರಟಿದ್ದಾರೆ. ಒಯ್ದ ನೀರು ಕಡಿಮೆ ಬಿದ್ದಾಗ ಅಥವಾ ನೀರೇ ಇಲ್ಲದಾಗ ಏನು ಮಾಡುವುದು ಎಂದು ಜನ ತಲೆಕೆಡಿಸಿಕೊಳ್ಳುವುದಿಲ್ಲ. ನಯವಾದ ಉಸುಕು ಯಾವತ್ತೂ ಅವರ ಸಹಾಯಕ್ಕೆ ಬರುವದು. ಮಕ್ಕಳ ಮಲವಿಸರ್ಜನೆಯ ನಂತರವೂ ಮಳಲಿನಿಂದ ಸ್ವಚ್ಛ ಮಾಡಿಬಿಡುತ್ತಾರೆ!

ಈ ಮೆರವಣಿಗೆಯ ನಡುವೆ ತಾವೇನೂ ಕಡಿಮೆ ಇಲ್ಲವೆಂದು ಮಯೂರಗಳು ವೈಯಾರದಿಂದ ಆಗೊಮ್ಮೆ, ಈಗೊಮ್ಮೆ ನುಸುಳಿ ಹೋಗುತ್ತಿದ್ದವು. ಸ್ವಲ್ಪ ಗುಡ್ಡ ಏರಿದ ನಂತರ ಕಪಿರಾಜ್ಯ ಪ್ರಾರಂಭವಾಯಿತು. ಅವುಗಳನ್ನು ಬೆದರಿಸುತ್ತ ಚದರಿಸುತ್ತ ಮಾನವ-ಕಪಿಸೈನ್ಯ ಮುಂದುವರಿದಿತ್ತು. ಇಲ್ಲಿಯ ನೀರಿನಲ್ಲಿ ಗಡಸುತನವಿದೆಯೆಂದು

ತೋರುತ್ತದೆ. ಅಂತೆಯೇ ಕಪಿವರ್ಗ ಇಷ್ಟು ಭಯಭೀತಿಯಿಲ್ಲದೇ ದೇವಿಜಿಗೆ ಅರ್ಪಿಸಲು ತಂದ ತಿಂಡಿ, ಹಣ್ಣು, ತೆಂಗಿನಕಾಯಿಗಳನ್ನು ಎತ್ತಿ ಒಯ್ದು ತಾವೇ ತಿಂದು ತೇಗುತ್ತಿದ್ದವು. ಸ್ವಲ್ಪ ಮುಂದೆ ನಡೆದ ನಂತರ ಭಕ್ತಮಂಡಳಿ ವರ್ಗಣಿ ಹಾಕಿ ಮಾಡಿಸಿದ ಒಳ್ಳೆ ಕಲ್ಲು ರಸ್ತೆ ಬಂದಿತು. ಒಮ್ಮೆಲೇ ಏರು ಇಲ್ಲದೇ ರಸ್ತೆ ಹಾವಿನಂತೆ ಸುತ್ತಿ ಸುತ್ತಿ ಮೇಲಕ್ಕೆ ಏರುತ್ತದೆ. ಮಂದಿರದ ತನಕ ವಿದ್ಯುತ್ತನ್ನು ಒಯ್ದಿದ್ದಾರೆ. ಜೋಬನೇರದ ಮನೆಗಳ ಮೇಲಿನಿಂದ ನೋಡಿದರೆ ಸಂಗಮರವರಿಕಲ್ಲಿನ ದೇವಾಲಯದಂತೆ ಭಾಸವಾಗುವ ಕಟ್ಟಡ ಹತ್ತಿರದಿಂದ ನೋಡಿದರೆ ಸುಣ್ಣ ಬಳಿದ ಧರ್ಮಶಾಲೆಯಂತೆ ಇತ್ತು. ಹತ್ತಿರದಲ್ಲೊಂದು ಮುಳ್ಳಿನ ಮರ. ಅದರ ಮೇಲೆಲ್ಲ ಮಹಿಳೆಯರು ಬಗೆಬಗೆಯ ಬಟ್ಟೆಯ ಚೂರುಗಳನ್ನು ಹಾಕಿದ್ದರು. ದೂರದೂರದ ಊರುಗಳಿಂದ ಹರಕೆ ಹೊತ್ತು ಇಲ್ಲಿಗೆ ಬಂದು ಅರಿವೆಗಳನ್ನು ಅರ್ಪಿಸುವುದು ವಾಡಿಕೆಯಂತೆ. ಅದನ್ನು ದಾಟಿದಾಗ ದೊಡ್ಡದೊಂದು ಅಂಗಳ ಬರುತ್ತದೆ. ಇಲ್ಲಿ ಗುಡ್ಡವೇರಿ ದಣಿದು ಬರುವ ಭಕ್ತರಿಗಾಗಿ ನಲ್ಲಿ ಹಚ್ಚಿದ ಸಿಮೆಂಟ ಟಾಕಿಯಲ್ಲಿ ನೀರು ತುಂಬಿ ಇಟ್ಟಿದ್ದಾರೆ. ಇನ್ನೊಂದು ಮಗ್ಗಲಿಗೆ ಐದು ಅಡಿ ವ್ಯಾಸವುಳ್ಳ ನಗಾರಿ ಇಟ್ಟಿದ್ದಾರೆ. ಅದನ್ನು ಬಾರಿಸಿದರೆ ಜೋಬನೇರಕ್ಕಷ್ಟೇ ಅಲ್ಲ, ಸುತ್ತಲ ನಾಲ್ಕು ಹಳ್ಳಿಗಳಿಗೆ ಕೇಳುವಷ್ಟು ದೊಡ್ಡ ಸಪ್ಪಳವಾಗುತ್ತದೆ. ಭಕ್ತರು ಮೇಲಿಂದ ಮೇಲೆ ದೀಪೋತ್ಸವ ನೆರವೇರಿಸುವುದರಿಂದ ಎಲ್ಲ ಕಡೆಯಲ್ಲೂ ಮಣ್ಣಿನ ಹಣತೆಗಳು ಎಣ್ಣೆಯ ಕಪ್ಪು ಕಲೆ ಹೊತ್ತು ನಿಂತಿವೆ. ಕೋಟೆ-ಕೊತ್ತಳಗಳ ಹಿನ್ನೆಲೆಯಲ್ಲಿ ದೀಪಗಳಿಂದ ಈ ಮಂದಿರ ಕಂಗೊಳಿಸುವಾಗ ದೂರದಿಂದ ಅರಮನೆಯಂತೆ ಭಾಸವಾಗುತ್ತಿರಬೇಕು. ಗುಡ್ಡದ ಆಧಾರದಲ್ಲೆ ಗುಡಿಯನ್ನು ಕಟ್ಟಿಸಿ ದೇವಿಜಿಯ ವಿಗ್ರಹ ಸ್ಥಾಪಿಸಿದ್ದಾರೆ. ಅಲ್ಲಲ್ಲಿ ಗೂಡು ಕಟ್ಟಿದ ಹಕ್ಕಿಗಳು ಒಳಗೆ-ಹೊರಗೆ ಹಾರುತ್ತಲೇ ಇದ್ದವು. ಈ ಮಾತಾಜಿಯ ವಿಗ್ರಹ ಸೌಮ್ಯವಾಗಿದ್ದರೂ ವರ್ಚಸ್ಸು ಜೋರಾಗಿಯೇ ಇದೆಯಂತೆ. ಭಕ್ತರ ಎಷ್ಟೇ ಬಿಕ್ಕಟ್ಟಿನ ಕೆಲಸವಿದ್ದರೂ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಿಯ ತನಕವೂ ಹೋಗಿ ಕೆಲಸ ಮುಗಿಸಿ ಅನುಗ್ರಹಿಸುತ್ತಾಳಂತೆ. ಮಹಿಳಾಮಣಿಯೊಬ್ಬಳು ಭಾರತದ ಪ್ರಧಾನ ಮಂತ್ರಿಯಾದ ಮೇಲಂತೂ ದೇವಿಜಿಯ ಪ್ರತಿಷ್ಠೆ ಗಗನಕ್ಕೇರಿ ಭಕ್ತವೃಂದವೂ ಹಿರಿದಾಗಿದೆಯಂತೆ. ಆದ್ದರಿಂದ ತೆಂಗಿನಕಾಯಿ-ಬಾಳೇಹಣ್ಣಿನ ಲಂಚ ಕೊಡದಿದ್ದರೂ ಭಯಭಕ್ತಿಯಿಂದ ಮಾತಾಜಿಗೆ ವಂದಿಸಿ ನನಗಾಗಿ ಒಳ್ಳೆಯ ಅರ್ಧಾಂಗಿಯನ್ನೂ, ಅವಳಿಗೊಬ್ಬ ಒಳ್ಳೆಯ ಪತಿಯನ್ನೂ ಅನುಗ್ರಹಿಸುವಂತೆ ಬೇಡಿಕೊಂಡೆ!

ಮುಖ್ಯ ಗುಡಿಯ ಎರಡೂ ಮಗ್ಗಲಿಗೆ ಇದ್ದ ಚಿಕ್ಕ ಗುಡಿಗಳನ್ನು ನೋಡಿಯಾಯಿತು. ನಂತರ ಯಾವ ದಾರಿಯೂ ಇಲ್ಲದ ಮಂದಿರದ ಹಿಂದೆ ಇದ್ದ ಎತ್ತರದ ಗುಡ್ಡವನ್ನು ಏರಲಾರಂಭಿಸಿದೆ. ಬರೇ ಆಡು ಕುರಿಗಳನ್ನು ಹೊತ್ತು ರೂಢಿ ಇರುವ ಕಲ್ಲು - ಮಣ್ಣುಗಳಿಗೆ ಈ ಹೊಸಬನ ಭಾರ ತಾಳುವದು ಅಸಾಧ್ಯವಾಗಿ ಅವು

ಉರುಳಲಾರಂಭಿಸಿದವು. ಹಾಗೂ ಹೀಗೂ ಏರುತ್ತ ಗುಡ್ಡದ ತುತ್ತತುದಿಯಲ್ಲಿ ಗಿಡದ ಆಶ್ರಯದಲ್ಲಿದ್ದ ಬಂಡೆಯ ಮೇಲೆ ಆರೂಢನಾಗಿ ಊರಿನ ಸೊಬಗನ್ನು ಸವಿಯಲಾರಂಭಿಸಿದೆ. ಎದುರಿನಲ್ಲಿ ನಾಲ್ಕೈದು ಚೌರಸ ಮೈಲಿನ ಬಯಲು ಪ್ರದೇಶ ಹರಡಿಕೊಂಡಿದೆ. ಅಲ್ಲಲ್ಲಿ ಮಾನವನ ಕೊಡಲಿಯೇಟಿಗೆ ತುತ್ತಾದ ಗಿಡಮರಗಳು, "ಇದು ಫಲವತ್ತಾದ ಭೂಮಿ; ನೀರು ಒಂದೇ ಇದ್ದರೆ ಬಂಗಾರ ಬೆಳೆಯಬಹುದಾದ ಪ್ರದೇಶವೆಂದು" ಸಾಕ್ಷಿ ಹೇಳಿದವು. ಎಡ ದಿಕ್ಕಿಗೆ ಕಾಲೇಜಿನ ಹೊಸ ಸೃಷ್ಟಿಯೊಂದು ನಿರ್ಮಾಣವಾಗುತ್ತಿದೆ. ಬಲದಿಕ್ಕಿನಲ್ಲಿ ಜೋಬನೇರ ಊರು ಹರಡಿಕೊಂಡಿತ್ತು. ಮಳೆ ತೀರ ಕಡಿಮೆ ಬೀಳುವದರಿಂದ ಎಲ್ಲರೂ ಬೋಳು ಮಾಳಿಗೆಯ ಪಕ್ಕಾ ಮನೆಗಳನ್ನೇ ಕಟ್ಟಿದ್ದರು. ಈ ಮನೆಗಳ ವೈಶಿಷ್ಟ್ಯವೆಂದರೆ ಪ್ರಾರಂಭದಲ್ಲಿಯೇ ಮನೆಯ ಕಟ್ಟಡವನ್ನು ಸಂಪೂರ್ಣವಾಗಿ ಕಟ್ಟದೇ ಒಂದು ಭಾಗ ಕಟ್ಟಿ ಮುಂದೆ ಕಟ್ಟಲು ಬರುವಂತೆ ಇನ್ನರ್ಧ ಭಾಗವನ್ನು ಬಿಟ್ಟುಬಿಡುವದರಿಂದ ಇದೀಗ ಕಟ್ಟಿಸಿದ ಮನೆಯೂ ಗೋಡೆಬಿದ್ದ ಪುರಾತನ ಮನೆಯಂತೆ ಭಾಸವಾಗುತ್ತದೆ. ಊರಿಗೆ ಕಾಲೇಜೇ ದೊಡ್ಡ ಆಕರ್ಷಣೆ. ಜನವಸತಿ ಆರೇಳು ಸಾವಿರವಿದ್ದರೂ ಮುಂಬೈ - ಕಲಕತ್ತೆಗಳಲ್ಲಿ ವಾಸವಾಗಿದ್ದ ಧನಿಕರು ಒಳ್ಳೆಯ ಮನೆಗಳನ್ನು ತಮ್ಮ ಈ ಊರಿನಲ್ಲಿ ಕಟ್ಟಿಸಿದ್ದಾರೆ. ಮದ್ರಾಸು-ಕೋಲಂಬೊಗಳಲ್ಲಿ ವ್ಯಾಪಾರ ಮಾಡುವ ನವಾಯತರು ಭಟಕಳ (ಉತ್ತರ ಕನ್ನಡದಲ್ಲಿ)ದಲ್ಲಿ ಕಟ್ಟಿಸಿದಂತೆ! ಇವುಗಳಲ್ಲಿ ಹೆಚ್ಚಿನ ಮನೆಗಳು ಕಾಲೇಜ ಪ್ರಾಧ್ಯಾಪಕರಿಗೇ ಮೀಸಲು. ಗುಡ್ಡದ ಒಂದು ಬದಿಗೆ ಅರಮನೆಯನ್ನು ಹೋಲುವ ದೊಡ್ಡ ಮನೆ ಇದೆ. ಇದು ಊರಿನ ಠಾಕೂರರ ಮನೆಯಂತೆ. ಮಾತಾಜಿಯ ಮಂದಿರದ ಆವಾರದಲ್ಲಿ ಮಳೆಯ ನೀರನ್ನು ಸಂಗ್ರಹಿಸಲು ಕೆರೆಯೊಂದನ್ನು ಕಟ್ಟಿದ್ದಾರೆ. ಆದರ ನೀರು ಚೆನ್ನಾಗಿರದಿದ್ದರಿಂದ ಅದನ್ನು ಬಳಸುವುದಿಲ್ಲ. ಊರಿನವರ ಮಾತು- ನಗುಗಳು ತೂರಿ ತೂರಿ ಮೇಲಕ್ಕೆ ಬರುತ್ತಿದ್ದವು. ಮನೆಯ ಮಾಡುಗಳಲ್ಲಿ ಹೆಂಗೆಳೆಯರು ವಿರಮಿಸಿದರೆ ಮಕ್ಕಳು ತಮ್ಮ ತಮ್ಮ ಗಾಳಿಪಟಗಳನ್ನು ಹಾರಿಸುತ್ತಿದ್ದರು. ಒಬ್ಬನ ಗಾಳಿಪಟವನ್ನು ಇನ್ನೊಬ್ಬಾತ ಸಿಕ್ಕಿಸಿ ಹಾಕಿ ಅದನ್ನು ಹರಿಯುವಂತೆ ಮಾಡುವದು ಅವರ ಆಟ. ಹಾಗೆ ಹರಿದಾಗ "ಏಽಽ ಕಾಟಾಽಽ" ಎಂಬ ಕೂಗು ಶಿಖರಕ್ಕೆ ಮುಟ್ಟುತ್ತಿತ್ತು. ಒಡೆಯನಿಲ್ಲದ ಆ ಹರಿದ ಗಾಳಿ ಪಟಕ್ಕಾಗಿ ಹತ್ತಾರು ಪೋಲಿ ಹುಡುಗರು ಬಡಿಗೆಗಳೊಂದಿಗೆ ಧಾವಿಸುತ್ತಿದ್ದರು. ಆ ಪಟಗಳು ತುಂಟ ಗಾಳಿಯ ಸಹಾಯದಿಂದ ಅಲ್ಲಿ ಇಲ್ಲಿ ಬೀಳುವಂತೆ ನಟಿಸಿ ಅನರೀಕ್ಷಿತವಾಗಿ ಯಾರದಾದರೂ ಮಾಡಿನ ಮೇಲೆ ಇಲ್ಲವೇ ವಿದ್ಯುತ್ ತಂತಿಯ ಮೇಲೆ ವಿರಮಿಸಿಬಿಡುತ್ತಿದ್ದವು. ಎತ್ತರದ ಗುಡ್ಡದ ಮೇಲೂ ಹತ್ತಾರು ಗಾಳಿಪಟಗಳಿದ್ದವು.

ದೂರದಲ್ಲಿ ಆಕಾಶ ಸೀಳಿ ನಿಂತ ಕೋಟೆ ಕೈಮಾಡಿ ಕರೆಯಿತು. ಅಲ್ಲಿಗೆ ಹೋಗಲು ನಿರ್ದಿಷ್ಟ ರಸ್ತೆ ಇರಲಿಲ್ಲ. ಗಾಳಿಪಟಗಳನ್ನು ಹಾರಿಸಲು ಹೊರಟವರ ಕಾಲುದಾರಿ

ಹಿಡಿದು ಹೊರಟೆ. ಕೋಟೆಯ ಹೊರಗೆ ಒಂದು ಮುಸಲ್ಮಾನರ ಗೋರಿ. ನಾಲ್ಕು ನೂರು ವರ್ಷಗಳಿಂದ ಕೋಟೆಯ ಬಗ್ಗೆ ಯಾರೂ ಆಸ್ಥೆ ವಹಿಸದಿದ್ದರೂ ಗೋರಿ ಮತ್ತು ಅದರ ಪರಿಸರವನ್ನು ಯಾರೋ ಶುಚಿಯಾಗಿ ಇಡುವಂತೆ ಇದೆ. ರಜಪೂತರ ವಿಜಯಪತಾಕೆ ಈ ಕೋಟೆಯ ಮೇಲೆ ಮೆರೆಯುತ್ತಿದ್ದಾಗ ಒಬ್ಬ ಮುಸಲ್ಮಾನ, ವೇಷ ಮರೆಸಿ ಕೋಟೆಯೊಳಗೆ ಪ್ರವೇಶ ಪಡೆದನಂತೆ. ಅವನೊಬ್ಬ ಗುಪ್ತಚಾರನೆಂದು ತಿಳಿದಾಗ ಕೋಟೆಯ ಮೇಲಿಂದ ಈ ಬಂಡೆಗಲ್ಲಿಗೆ ಆತನನ್ನು ಅಪ್ಪಳಿಸಿ ಕೊಂದರಂತೆ. ಅಭಿಮಾನಿಗಳು (ಅವನ ಕುಹಕತನವನ್ನೋ, ಶೌರ್ಯವನ್ನೋ, ಧರ್ಮವನ್ನೋ ಮೆಚ್ಚಿ!) ಈ ಗೋರಿ ಕಟ್ಟಿ ಇಂದಿಗೂ ಅದಕ್ಕೆ ಆಗಾಗ ಸುಣ್ಣ ಬಳಿದು ಅದರ ಯೋಗಕ್ಷೇಮ ವಿಚಾರಿಸುತ್ತ ಬಂದಿದ್ದಾರೆ. ಕೋಟೆಯ ಒಳಗೆ ಹೋಗಲು ಚಿಕ್ಕ ಚಿಕ್ಕ ಮೆಟ್ಟಿಲುಗಳು. ನಂತರ ಒಂದು ಉಕ್ಕಿನ ಹೆಬ್ಬಾಗಿಲು. ಮಧ್ಯದಲ್ಲಿ ಕೆರೆಯೊಂದಿದೆ. ಅದನ್ನು ದಾಟುವಾಗ ಎಚ್ಚರಿಕೆ ವಹಿಸದಿದ್ದರೆ ಬೀಳುವದು ಖಂಡಿತ. ಮಳೆಯ ನೀರನ್ನು ಇದರಲ್ಲಿ ಸಂಗ್ರಹಿಸಿ ಉಪಯೋಗಿಸುತ್ತಿದ್ದರಂತೆ. ಅಲ್ಲಿಂದ ಒಂದಡಿ ಅಗಲದ ರಸ್ತೆ ನುಸುಳಿಕೊಂಡು ಒಳಗೆ ಹೋಗುತ್ತದೆ. ಬಹುಶಃ ಸೈನ್ಯದ ಚಲನವಲನಕ್ಕಾಗಿ ಬೇರೊಂದು ಗುಪ್ತ ರಸ್ತೆಯಿದ್ದಿರಬೇಕು. ಮುಂದೆ ಕೋಟೆಯನ್ನು ಅನೇಕ ವಿಧದಲ್ಲಿ ವಿಭಾಗಿಸಿದ್ದಾರೆ. ಇದು ವೈರಿಗಳು ಊರ ಮೇಲೆ ದಾಳಿಯಿಟ್ಟಾಗ ಸಂರಕ್ಷಣೆಗಾಗಿ ಬಂದ ಊರ ಹೆಂಗೆಳೆಯರಿಗಾಗಿ ಇರಬೇಕು. ಈ ಆಯಕಟ್ಟಿನ ಸ್ಥಳದಲ್ಲಿದ್ದ, ಹಿಂದೊಮ್ಮೆ ಸುಂದರವಾಗಿದ್ದ ಮಹಲು, ರಾಣಿಯರು ಮತ್ತು ರಾಜಕುಮಾರಿಯರಿಗಾಗಿ ಇದ್ದಿರಬೇಕು. ತೋಪು - ತುಬಾಕಿಗಳನ್ನಿಡಲು, ಮದ್ದು ಗುಂಡುಗಳನ್ನು ಹಾರಿಸಲು ವೈರಿಗಳ ಚಲನವಲನಗಳನ್ನು ನಿರೀಕ್ಷಿಸಲು ಎತ್ತರದ ಸ್ಥಳಗಳನ್ನು ನಿರ್ಮಿಸಿದ್ದಾರೆ. ಒಂದಾನೊಂದು ಕಾಲದಲ್ಲಿ ಈ ಕೋಟೆ ರಾಜಸ್ಥಾನದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿರಬೇಕು. ಭೀಕರ ಕದನಗಳು ಇಲ್ಲಿ ನಡೆದಿರಬಹುದು. ಇಲ್ಲಿಯ ಪ್ರತಿಯೊಂದು ಕಲ್ಲಿಗೂ ರಕ್ತದ ಅಭಿಷೇಕವಾಗಿರಬಹುದು. ಎಷ್ಟು ರಜಪೂತರು ಈ ಕೋಟೆಯ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿರುವರೋ ಏನೋ! ಇಂದು ಹತ್ತಾರು ಟನ್ ಭಾರದ ಕಲ್ಲುಗಳನ್ನು ಹೊತ್ತುನಿಂತ ಕಟ್ಟಿಗೆಯನ್ನು ಹುಳು ಹುಪ್ಪಡಿಗಳು ತಿಂದು ತೇಗುತ್ತಿವೆ. ಪ್ರಶಾಂತವಾದ ಮಹಲುಗಳು ಕಣ್ಣುಕಪ್ಪಡಿಗಳ ವಾಸಸ್ಥಾನವಾಗಿವೆ. ಕೋಟೆಯ ಕಲ್ಲುಗಳೆಲ್ಲ 'ಮರೆಯದಿರೋ ಮೂರ್ಖ ಮಾನವ! ನಿನಗೂ ನನ್ನಂತಹ ದಿನಗಳು ಬಂದಾವು!' ಎಂದು ಎಚ್ಚರಿಸುತ್ತಿದ್ದಂತೆ ಕಂಡವು. ನಮ್ಮದು ಎಂತಹ ದೇಶ! ನಮ್ಮ ಇತಿಹಾಸ, ಸಂಸ್ಕೃತಿಗಳನ್ನು ನೆನಪಿಗೆ ತಂದುಕೊಡುವಂತಹ ಇಂತಹ ಅಪೂರ್ವ ಸ್ಮಾರಕಗಳನ್ನು ನಾವಾಗಲಿ, ನಮ್ಮ ದೇಶದ ಸರಕಾರವಾಗಲಿ ರಕ್ಷಿಸಿಕೊಳ್ಳುತ್ತಿಲ್ಲವಲ್ಲ! ಎಂದು ಕಸಿವಿಸಿಯಾಯಿತು. ಬ್ರಿಟನ್ನಿನಲ್ಲಿ ಪ್ರತಿಯೊಂದು ಇಂಥ ಕಲ್ಲುಬಂಡೆಯನ್ನು

ಕಾದಿರಿಸಿ ಯಾತ್ರಾಸ್ಥಳವನ್ನಾಗಿ ಮಾಡುತ್ತಿದ್ದರು. ಅಮೇರಿಕೆಯಲ್ಲಿ ಇದ್ದರೆ ಮೇಲಿಂದ, ಕೆಳಗಿನಿಂದ, ಒಳಗಿನಿಂದ ಇಂಥ ಕೋಟೆಗಳನ್ನು ನೋಡಲು ಬರುವಂತೆ ಸವಲತ್ತುಗಳನ್ನು ಕಲ್ಪಿಸಿಕೊಡುತ್ತಿದ್ದರಲ್ಲದೇ ನೋಡಲು ಬರುವವರಿಗಾಗಿ ಎಲ್ಲ ಬಗೆಯ ಅನುಕೂಲಗಳನ್ನು ಒದಗಿಸುತ್ತಿದ್ದರು. ಕಲೆಯ ಕಣಿಯಾಗಿರುವ ಸೋಮನಾಥಪುರ, ಬೇಲೂರ, ಹಳೇಬೀಡುಗಳಲ್ಲಿಯೇ ಇಂಥ ಸವಲತ್ತುಗಳಿಲ್ಲದಾಗ ಈ ಹಾಳು ಕೋಟೆಯಲ್ಲಿ ಎಲ್ಲಿಂದ ಬರಬೇಕು? ಎಂದು ನಿಜಸ್ಥಿತಿಯ ಅರಿವಾಯಿತು. ಕೋಟೆಯ ತುತ್ತ ತುದಿಯೇರಿ ಹರಡಿಕೊಂಡಿದ್ದ ರಜಪುತರ ಗತವೈಭವದ ಅವಶೇಷಗಳನ್ನು ನೋಡಿ ಅವರ ಶೌರ್ಯಕ್ಕಾಗಿ ತಲೆಬಾಗಿದೆ. ಭಾರವಾದ ಮನಸ್ಸಿನಿಂದ ಜಾರುವ ಬಂಡೆಗಳ ಮೇಲೆ ಜಾರುತ್ತ ಗುಡ್ಡ ಇಳಿದು ಬಂದೆ.

ಮನೆಯಲ್ಲಿ ಕುಳಿತು ಕೆಲಸ ಮಾಡಲು ಮನಸ್ಸಾಗದಿದ್ದರಿಂದ ಮನೆಯ ಉಪ್ಪರಿಗೆಯನ್ನೇರಿ ನಿಂತೆ. ಪ್ರತಿಯೊಬ್ಬರ ಮನೆಯಲ್ಲೂ ಎಲ್ಲರೂ ಹೆಚ್ಚಾಗಿ ಬಳಸುವ ಸ್ಥಳವೆಂದರೆ ಉಪ್ಪರಿಗೆಯ ಖಾಲಿ ಸ್ಥಳವೆಂದು ತೋರಿತು. ರಾತ್ರಿಯೆಲ್ಲ ಚಳಿಯಿಂದ ನಡುಗುತ್ತಿದ್ದವರು ಬೆಳಿಗ್ಗೆ ಎಳೆಬಿಸಿಲಿನಲ್ಲಿ ಕುಳಿತು ಚಳಿಯನ್ನು ಓಡಿಸುತ್ತಾರೆ. ಎರಡು ಮನೆಯಾಚೆಯ ಉಪ್ಪರಿಗೆಯ ಮೇಲಿನವರು ಇಷ್ಟು ಮುಂಜಾನೆ ಏನು ಮಾಡುತ್ತಿರಬಹುದು ಎಂದು ನೋಡಿದೆ. ಅವರು ಹಾಡುತ್ತ ಧಾನ್ಯ ಆರಿಸುತ್ತ ಬಿಸಿಲು ಕಾಸುತ್ತಿರುವುದು ಅರಿವಾಯಿತು. ಸೂರ್ಯನು ಏರುತ್ತಿದ್ದಂತೆ ನೆರೆಮನೆಯ ಪತಿದೇವ, ಮೊದಲೇ ಅರೆಬಾಲ್ದಿ ನೀರನ್ನು ಸ್ನಾನ ಮಹಡಿಯನ್ನೇರಿ ತಂದು ಬಿಸಿಲಿಗೆ ಕಾಸಲು ಇಟ್ಟಿದ್ದ. ಅದರಲ್ಲಿ ಅರ್ಧ ನೀರನ್ನು ಸ್ನಾನ ಮಾಡಿ, ಉಳಿದರ್ಧ ನೀರಿನಲ್ಲಿ ಧೋತರ ಹಿಂಡಿಹಾಕಿದ. ಮತ್ತೂ ಬಾಲ್ದಿಯಲ್ಲಿ ಎರಡು ತಂಬಿಗೆ ಪತ್ನಿಗಾಗಿ ಉಳಿಸಿದ್ದನ್ನು ನೋಡಿದಾಗ ಬಲೇ ಮೋಜೆನಿಸಿತು. ನೀರಿನ ಅಭಾವದಿಂದಾಗಿ ಯಾರ ಮನೆಯಲ್ಲಿಯೂ ನೀರುಕಾಸಿ ಸ್ನಾನ ಮಾಡುವ ಪದ್ಧತಿಯಿಲ್ಲ. ತಣ್ಣೀರಿನಿಂದ ಬಲು ಸ್ವಲ್ಪ ನೀರಿನಲ್ಲಿ ಕೈಕಾಲು ತೊಳೆಯುವುದು, ಬಟ್ಟೆಗಳನ್ನು ಬಿಸಿಲಲ್ಲಿ ಒಣಗಿಸಿ ಡ್ರೈಕ್ಲೀನ್ ಮಾಡಿ ತೊಡುವುದು ಸಾಮಾನ್ಯ. ವಾರಕ್ಕೊಮ್ಮೆ ಸ್ನಾನ ಮಾಡುವವರೂ ಇದ್ದಾರೆ. ಹೆಂಗಸರೂ ಉಪ್ಪರಿಗೆಯ ಒಂದು ಬದಿಗೇ ಸ್ನಾನ ಮಾಡುತ್ತಾರೆ! ಗಂಡಸರಿಗೂ ಹೆಂಗಸರಿಗೂ ಇರುವ ವ್ಯತ್ಯಾಸವಿಷ್ಟೆ. ನೆರೆಹೊರೆಯ ಮನೆಗಳಲ್ಲಿ ಪುರುಷರು ಇಲ್ಲದಾಗ ಚಾರಪಾಯಿಯೊಂದನ್ನು ಅಡ್ಡ ಇಟ್ಟು ಪರಪುರುಷರಾರಾದರೂ ನೋಡಿದರೆ ಎಂದು ಹೆದರುಗಣ್ಣುಗಳಿಂದ ನೋಡುತ್ತ ನಿಮಿಷದಲ್ಲಿ ಸ್ನಾನ ಮುಗಿಸಿ ಓಡುವರು. ಮಧ್ಯಾಹ್ನವಾದರೆ ಪತಿದೇವ ಊಟಕ್ಕಾಗಿ ಅಲ್ಲಿಯೆ ಅದೇ ಚಾರಪಾಯಿಯ ಮೇಲೆ ಆಸೀನನಾಗುವನು. ಪತ್ನಿಯು ಒಂದು ಥಾಲಿಯಲ್ಲಿ ಊಟವನ್ನಿಟ್ಟುಕೊಂಡು ಮೇಲಕ್ಕೆ ಬರುವಳು. ಇದೇ ವೇಳೆಗಾಗಿ ಕಾದಿದ್ದ ಕೋತಿಯೊಂದು ಎಲ್ಲಿಂದಲೋ ಬಂದು

ಒಂದೆರಡು ರೋಟಿಗಳನ್ನು ಎತ್ತಿಕೊಂಡು ಓಡುವದು. ಸಿಟ್ಟಿಗೆದ್ದ ಪತಿದೇವ ಕೋಲನ್ನೆತ್ತಿ ಹಿಂಬಾಲಿಸುವುದರಲ್ಲಿ ಉಪ್ಪರಿಗೆಯಿಂದ ಉಪ್ಪರಿಗೆಗೆ ಜಿಗಿಯುತ್ತ ಕೋತಿಯು ನಿಮಿಷದಲ್ಲಿ ಮಾಯವಾಗಿ ಬಿಡುವುದು. ನಂತರ ಪತ್ನಿಯು ಪತಿಯ ಊಟ ಮುಗಿಯುವ ತನಕ ಕೋಲನ್ನು ಹಿಡಿದು ಕೋತಿಯಿಂದ ಊಟವನ್ನು ಕಾಯುವಳು. ನವಿಲೊಂದು ಬಂದು ರೋಟಿಯ ಚೂರೇನಾದರೂ ಸಿಗಬಹುದೆಂದು ಕಣ್ಣರಳಿಸಿ ಕಾಯುತ್ತದೆ. ರೋಟಿ, ಮೂಲಿ, (ಮೂಲಂಗಿ) ಚಟ್ನಿಯ ಊಟ ಮುಗಿಸಿ ಒಂದು ತಂಬಿಗೆ ನೀರು ಕುಡಿದು ರುಮಾಲು ಧರಿಸಿ ಯಜಮಾನ ಮನೆಯನ್ನು ಬಿಟ್ಟ ಮೇಲೆ ಪತ್ನಿ ಅದೇ ಥಾಲಿಯಲ್ಲಿ ಊಟ ಮುಗಿಸುತ್ತಾಳೆ. ನಂತರ ಮೂಲೆಯಲ್ಲಿ ರಾಶಿ ಹಾಕಿದ ಮಳಲಿನಿಂದ ಹೊಳೆಯುವಂತೆ ಥಾಲಿ ಮತ್ತಿತರ ಪಾತ್ರೆಗಳನ್ನು ತಿಕ್ಕಿ ಒಣಹಾಕಿ ಬಟ್ಟೆಯಿಂದ ಒರೆಸಿದರೆ ಅಡಿಗೆ, ಊಟ, ಮುಸುರೆಗಳ ಕೆಲಸ ಮುಗಿಸಿದಂತೆ. ಜೋಬನೇರಿನಲ್ಲಿ ಬಹು ಸುಂಖ್ಯಾತರು ಜೈನಧರ್ಮಕ್ಕೆ ಸೇರಿದವರಿದ್ದಾರೆ. ಹೀಗಾಗಿ ಸೂರ್ಯಾಸ್ತದ ಮೊದಲೇ ಊಟ ಮುಗಿಸಿ ಬಿಡುತ್ತಾರೆ. ಮನೆಯಲ್ಲಿ ವಿದ್ಯುತ್ ಇಲ್ಲದವರೂ ಬೇಗ ಕೆಲಸ ತೀರಿಸಿ ಬಿಡುವರು. ಮಧ್ಯಾಹ್ನದ ಊಟದ ವೇಳೆ ಬೇರೆ ಬೇರೆಯಾಗಿದ್ದರೂ ಸಾಯಂಕಾಲ ಮಾತ್ರ ಹೆಚ್ಚು ಕಡಿಮೆ ಊಟ ಒಂದೇ ವೇಳೆ ಜರುಗುವುದರಿಂದ ಆ ವೇಳೆಯಲ್ಲಿ ವಾನರ ಸೇನೆಗೆ ಬಿಡುವೇ ಇಲ್ಲ. ಎಲ್ಲ ಉಪ್ಪರಿಗೆಗಳ ಮೇಲೂ ಭೋಜನಕೂಟ ಸಾಗಿರುತ್ತದೆ. ಊಟದ ನಂತರ ದಿನದಲ್ಲಿ ಕೊನೆಯ ಬಾರಿಗೆ ನೀರಿಗೆ ಹೋಗುವವರು ಇದ್ದಾರೆ. ದಿನವಿಡೀ ಬಿಡುವಾಗದವರು ಊಟ ಮುಗಿಸಿ ತಂಬಿಗೆ ತೆಗೆದುಕೊಂಡು ಹೋಗುವವರಿದ್ದಾರೆ. ಇನ್ನು ಸ್ವಲ್ಪ ಸಮಯದಲ್ಲೆ ಕತ್ತಲಾಗಿ ಬಿಡುವುದರಿಂದ ಮಹಿಳೆಯರೆಲ್ಲ ಸಾಂಘಿಕವಾಗಿ ಈ ಕಾರ್ಯಕ್ರಮಕ್ಕೆ ಹೊರಡುವುದು ರೂಢಿ. ಎಲ್ಲರಿಗಿಂತ ಮೊದಲು ಹೊರಟವಳು ಮನೆಯ ಮುಂದಿನ ಚೌಕದಲ್ಲಿ ಇತರರಿಗಾಗಿ ಕಾಯುತ್ತಾಳೆ. ಒಬ್ಬೊಬ್ಬರಾಗಿ ಬಂದನಂತರ ಎಲ್ಲರೂ ಹೊರಡುವರು. ತಿರುಗಿ ಆ ಚೌಕಕ್ಕೆ ಬಂದಾಗಲೇ ಅವರ ಹರಟೆ ಕೊನೆಗೊಳ್ಳಬೇಕು. ನಂತರ ಆ ಚೌಕದಲ್ಲಿ ವಿದ್ಯಾರ್ಥಿಗಳು ಸೇರುತ್ತಾರೆ. ಎತ್ತರದ ಧ್ವನಿಯಲ್ಲಿ ಯುವತಿಯರ ಬಗ್ಗೆ, ಚಲನಚಿತ್ರಗಳ ಬಗ್ಗೆ ಚರ್ಚೆಯಾಗುವದು. ಉಳಿದ ಊರುಗಳಲ್ಲಿ ಗಾಂಧಿ ಚೌಕ, ನೆಹರೂ ಚೌಕಗಳನ್ನು ನೋಡಿದ್ದ ನಾನು ಈ ಚೌಕಿಗೆ 'ಹರಟೆ ಚೌಕ' ಎಂದು ನಾಮಕರಣ ಮಾಡಿದೆ. ಉಪ್ಪರಿಗೆಯ ಮೇಲೆ ಶತಪಥ ಇಡುವಾಗ ಆಚೆಯ ಮನೆಯ ಮಕ್ಕಳು ಉಪ್ಪರಿಗೆಯಲ್ಲಿ ಆಡುವದು ಕಾಣಿಸುತ್ತಿತ್ತು. ಚೆನ್ನಾಗಿ ದಷ್ಟ ಪುಷ್ಟವಾದ ಮಕ್ಕಳಾದ್ದರಿಂದ ಧನಿಕರವು ಎಂಬುದು ಸ್ಪಷ್ಟವಿತ್ತು. ಹೊಸಬನನ್ನು ನೋಡಿ ಪುಟ್ಟ ಹುಡುಗನೊಬ್ಬ "ಮಾಸ್ಟರ ಸಾಬ ನಮಸ್ತೆ" ಎಂದ. ನಾನು ಪ್ರತಿ ನಮಸ್ಕಾರ ಹೇಳಿದೆ. ಅವನಿಗೆ ಮೋಜೆನಿಸಿರಬೇಕು. ಮತ್ತೆ ನಮಸ್ಕಾರ ಹೇಳಿದ. ಜೊತೆಗಿದ್ದ ಮಕ್ಕಳೂ ನಮಸ್ಕಾರ ಹೇಳಿದವು. ನಾನೂ

ಅವರ ಉತ್ಸಾಹ ಕುಗ್ಗಿಸಲು ಮನಸ್ಸಾಗದೇ ಪ್ರತಿಯಾಗಿ ನಮಸ್ಕಾರ ಹೇಳುತ್ತಿದ್ದೆ. ಏನೋ ಕೆಲಸದ ನೆನಪಾಗಿ ಕೆಳಗೆ ಇಳಿದು ಬರದಿದ್ದರೆ ಈ ಕಾರ್ಯಕ್ರಮ ಎಷ್ಟು ವೇಳೆ ಜರುಗುತ್ತಿತ್ತೊ ಏನೋ! ಕೆಳಗಿಳಿದು ಬರುತ್ತಿದ್ದಂತೆ ಗರS, ಗರSS ಗರSSS ಎಂದು ಕಷ್ಟದಿಂದ ಉಸಿರು ಬಿಡುತ್ತಿದ್ದದ್ದು ಕೇಳಿ ಅಲ್ಲಿಯೇ ನಿಂತೆ. ಆದರೆ ಸುತ್ತಲೂ ಯಾರ ಭೀತಿ ಆಕ್ರೋಶದ ಅಳು ಕೇಳದ್ದರಿಂದ ಇದೆಂಥ ಸಪ್ಪಳವೆಂದು ತಿಳಿಯಲೇ ಇಲ್ಲ.

ಮರುದಿನ ಮಧ್ಯಾಹ್ನದ ಊಟಕ್ಕಾಗಿ ಹಾಸ್ಟೇಲಿಗೆ ಹೋದಾಗ ಎದುರಿಗೆ ಇಬ್ಬರು ಮಹಿಳೆಯರು ಆಕರ್ಷಕ ಗೋಟಾ ಕೆಲಸ ಮಾಡಿದ ಉಡುಗೆಯುಟ್ಟು ಬರುತ್ತಿದ್ದರು. ಕಂಠದ ಆಭರಣ, ಬಳೆ, ಸೊಂಟ ಪಟ್ಟಿಗಳೆಲ್ಲ ಸಿರಿವಂತರ ಮನೆಯವರು ಎಂದು ಸೂಚಿಸಿದವು. 'ಮೆಹಂದಿ'ಯಿಂದ ಕೈಕಾಲುಗಳನ್ನು ಅಲಂಕರಿಸಿಕೊಂಡು ಕಾಲಿಗೆ ಬೆಳ್ಳಿಯ ಚೈನುಗಳನ್ನು ತೊಟ್ಟಿದ್ದರು. ತಮ್ಮ ಮುಖಕಮಲ ಗಂಡಸರಿಗೆ ಕಾಣದಂತೆ ಮುಸುಕು ಹಾಕಿಕೊಂಡರೂ ಗಂಡಸರನ್ನು ತಾವು ಮಾತ್ರ ಕದ್ದು ನೋಡುವ ರೂಢಿ ಸರಿ ಬೀಳಲಿಲ್ಲ! ಅಂತೆಯೇ ಮುಸುಕಿನ ಕಂಡಿಯಿಂದ ನನ್ನನ್ನು ನೋಡಲು ಅವರು ಹವಣಿಸಿದಾಗ ನಾನೂ ತಲೆಯೆತ್ತಿ ನೋಡಿದೆ. ಕೇವಲ ಕಣ್ಣುಗಳು ಕಂಡವು. ಇಂಥ ಸುಂದರಿಯರು ಮುಖ ಮುಚ್ಚಿಕೊಳ್ಳದೇ ತಿರುಗಿದರೆ ದೃಷ್ಟಿಯಾಗುವುದು ಖಂಡಿತವೆಂದು ಯೋಚಿಸುತ್ತ ಅವರನ್ನು ದಾಟಿ ಮುಂದೆ ಹೋಗುವವನಿದ್ದೆ. ನನ್ನ ಎದುರಿಗೇ ಅವರಿಬ್ಬರೂ ನಿಂತು ಬಿಟ್ಟರು. "ಮಾಸ್ಟರಸಾಬ್........" ಎನ್ನುತ್ತಿರುವಾಗಲೇ ಕಣ್ಣೆತ್ತಿ ತಮ್ಮನ್ನು ನೋಡಿದ ಅಪರಾಧಕ್ಕಾಗಿ ಹೀಗಳೆಯುವರೆಂದು ನೆನಸಿಯೇ ನಡುಕವಾಯಿತು. ಅವರು ತಮ್ಮ ಮುಖದ ಮುಸುಕು ಸರಿಸಿದರೂ ಮುಖ ನೋಡುವ ಧೈರ್ಯವಾಗಲಿಲ್ಲ! "ನಿನ್ನೆ ಸಾಯಂಕಾಲ ನಮ್ಮ ಮಕ್ಕಳು ನಿಮ್ಮನ್ನು ಕಾಡುತ್ತಿದ್ದವು. ಕ್ಷಮಿಸಬೇಕು" ಎಂದರು. ಆಗ ಇವರು ನೆರಮನೆಯ ಜೈನರ ಸೊಸೆಯಂದಿರು, ಎಂದು ತಿಳಿಯಿತು. "ಪರವಾಗಿಲ್ಲ. ನಮಸ್ಕಾರ ಹೇಳುತ್ತಿದ್ದರೆ ಕಾಡಿಸಿದಂತೆ ಆಯಿತೇ?" ಎಂದಾಗ ಅವರಿಬ್ಬರೂ ಮುಗುಳ್ನಕ್ಕರು. "ಬರುತ್ತೇವೆ ನಮಸ್ಕಾರ" ಎಂದು ಹೇಳಿ ತಿರುಗಿ ಮುಖ ಮುಚ್ಚಿಕೊಂಡು ಹೊರಟರು.

೧೦. ಜಯಪುರಕ್ಕೆ

ಕರ್ನಾಟಕ ಕಾಲೇಜಿನಲ್ಲಿ ಕಲಿತ ದಿನೇಶರಾವನು ಜಯಪುರದ ರಾಜಸ್ಥಾನ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟು ಮಾಡುತ್ತಿದ್ದನೆಂದು ಯಾರೋ ಹೇಳಿದ ನೆನಪಿತ್ತು. ಧಾರವಾಡದಲ್ಲಿ ಅಷ್ಟೊಂದು ಪರಿಚಯದಿಂದ ಇದ್ದವರು ಜೋಬನೇರಿಗೆ ಬಂದು ಅವನನ್ನು ಭೆಟ್ಟಿಯಾಗದೇ ಇರಲಾದೀತೇ? ಸರಿ. ಜೋಬನೇರ - ಜಯಪುರಗಳ ನಡುವೆ ಪತ್ರಗಳು ಓಡಾಡಿದವು. ತನ್ನಲ್ಲಿಗೇ ಮೊದಲು ಬರಲು ಆತ ಆಮಂತ್ರಿಸಿದ. ತೀರ ಅವಶ್ಯಕವಾದ ಕೆಲ ಸಾಮಾನುಗಳನ್ನೂ ತರಬೇಕಾಗಿದ್ದರಿಂದ ಜಯಪುರಕ್ಕೆ ಹೋಗುವದೆಂದು ನಿರ್ಧರಿಸಿದೆ. ಅಸಲಪುರಕ್ಕೆ ಹೋಗಿ ಟ್ರೇನು ಹಿಡಿಯುವದಕ್ಕಿಂತ ನೇರ ಜಯಪುರಕ್ಕೇ ಹೋಗುತ್ತಿದ್ದ ಬಸ್ಸಿನಿಂದ ಹೋಗಬೇಕೆಂದು ಬಸ್ಸಿನ ವೇಳಾಪತ್ರಿಕೆಯ ಬಗ್ಗೆ ವಿಚಾರಿಸಿದರೆ ಯಾವ ಬಸ್ಸಿಗೂ ನಿಶ್ಚಿತ ವೇಳಾಪತ್ರಿಕೆ ಇಲ್ಲದ್ದು, ತಿಳಿಯಿತು. ಸಾಕಷ್ಟು ಪ್ರವಾಸಿಗರು ತುಂಬಿದ ಮೇಲೆ ಬಸ್ಸು ಹೊರಡುವುದು ವಾಡಿಕೆಯಂತೆ! ಬಸ್ ಬಿಡುವ ಮೊದಲು ಗುಡ್ಡದ ಮೇಲಿನ ದೇವಿಜಿಗೂ ತಲುಪುವಂತೆ ಡ್ರಾಯವರ ಮೂರು ಬಾರಿ ಹಾರ್ನ ಬಾರಿಸುತ್ತಾನೆ. ಮೊದಲ ಬಾರಿಯ ಹಾರ್ನ ಕೇಳಿಯೇ ಗುಡ್ಡವನ್ನು ಇಳಿದು ಬಂದು ಬಸ್ಸು ಹತ್ತುವಷ್ಟು ವೇಳೆ ಇರುತ್ತದೆ. ಪ್ರಥಮ ಬಸ್ಸಿಗೇ ಹೋದರೆ ಚೆನ್ನಾಗಿರುತ್ತದೆಂದು ಇನ್ನೂ ಕತ್ತಲೆ ಇರುವಾಗಲೇ ಮನೆಗೆ ಬೀಗ ಜಡಿದು ಹೊರಟೆ. ಅದಾಗಲೇ ಸೂಕರ ವರ್ಗ, ಎದ್ದು ಗಸ್ತಿ ಹಾಕಲಾರಂಭಿಸಿತ್ತು. 'ಇಷ್ಟು ಮುಂಜಾನೆ ಇವಕ್ಕೆಲ್ಲಿ ಆಹಾರ ಒದಗಬೇಕು' ಎಂದು ಕೊಂಡು ರಸ್ತೆಗೆ ಇಳಿದು ಹೋಗುತ್ತಿದ್ದ ಹಾಗೆ ರಸ್ತೆಯ ಅಂಚಿನಲ್ಲಿ ಕುಳಿತ ಗೃಹಿಣಿ ಅನಿರೀಕ್ಷಿತವಾಗಿ ಪುರುಷನೊಬ್ಬನನ್ನು ನೋಡಿ ಎದ್ದು ನಿಂತಳು. ಎರಡು ಮಾರು ಬಿಟ್ಟು ಕುಳಿತವಳು ಏಳುವದರಲ್ಲಿದ್ದಳು. ಅದಕ್ಕೂ ನಂತರ ಕುಳಿತವಳು "ಪ್ರತಿಷ್ಠಿತ ಪುರುಷನೆಂದು ಭಾವಿಸಿದ್ದೀಯಾ? ಹೊಸದಾಗಿ ಬಂದ ಮಾಸ್ತರ ಸಾಬ ಈತ" ಎಂದು ಧೈರ್ಯ ಹೇಳುವದರ ಜೊತೆಗೆ ಶಿಕ್ಷಕರು ಪುರುಷರಲ್ಲಿ ಗಣನೆಯಾಗುವುದಿಲ್ಲ" ಎಂಬ ನಂಬಿಕೆಯಿಂದ ಹೇಳಿದಳು. ಮೂವರೂ ನಿಶ್ಚಿಂತೆಯಿಂದ ತಮ್ಮ ಕಾರ್ಯಕ್ರಮ ಮುಂದುವರಿಸಿದರು.

ನಿಂತ ಮೋಟಾರಿನಲ್ಲಿ ಡ್ರಾಯವರ, ಕ್ಲೀನರ, ಕಂಡಕ್ಟರರು ನಿದ್ರಿಸುತ್ತಿದ್ದುದರಿಂದ ಪಕ್ಕದ ಚಹಾ ಅಂಗಡಿಗೆ ಹೋಗಿ ಚಹಾ ಮಾಡಿಕೊಡಲು ಹೇಳಿದೆ. ಪ್ರಯಾಣಿಕರು ಒಬ್ಬೊಬ್ಬರಾಗಿ ಬರಲಾರಂಭಿಸಿದರು. ಅಂಗಡಿಕಾರನೇ ಬಂದು ಬಸ್ಸಿನ ಒಳಗಿದ್ದವರನ್ನು ಎಬ್ಬಿಸಿದ. ಚಹಾ ಕುಡಿದು ಮುಗಿಯುತ್ತಿದ್ದಂತೆ ಹಿಂದೊಮ್ಮೆ ಸೈನ್ಯದಲ್ಲಿ ಟ್ರಕ್ ಆಗಿ ಸೇವೆ ಸಲ್ಲಿಸಿ ಈಗ ಪ್ರವಾಸಿಕರ ಬಸ್ ಆಗಿ ಮಾರ್ಪಟ್ಟ ವಾಹನದೊಳಗಿಂದ ಕಂಡಕ್ಟರನ್ನು ಜೈಪುರ್ ಜೈಪುರ್" ಎಂದು ಶಂಖನಾದ ಮಾಡಿದ. 'ಈ ಬಸ್ ಮೊದಲು ಮುಟ್ಟುವುದಿಲ್ಲವೆ?' ಎಂದು ವಿಚಾರಿಸಿದಾಗ, ತನ್ನ ಬೆಳ್ಳಿಯ ಎರಡು ಹಲ್ಲು ಕಾಣುವಂತೆ ನಕ್ಕು ಅಂಗಡಿಕಾರ, "ಇದು ಒಳದಾರಿಯಿಂದ ಹೋಗುತ್ತದೆ. ದಾರಿ ಕೇವಲ ಹದಿನೆಂಟು ಮೈಲು ಇದ್ದರೂ ನಾಲ್ಕು ತಾಸು ತೆಗೆದುಕೊಳ್ಳುತ್ತದೆ. ಇದನ್ನು ಡಾಂಬರ ರಸ್ತೆ ಮಾಡುವವರಿದ್ದಾರಂತೆ. ಆದರೆ ತಮ್ಮ ಊರೊಳಗಿಂದ ರಸ್ತೆ ಹಾದುಹೋಗಬೇಕು ಎಂದು ರಾಜಕಾರಣಿಗಳು ಕಚ್ಚಾಡುತ್ತಿದ್ದಾರೆ. ಅದರ ಇತ್ಯರ್ಥವಾದ ನಂತರವೇ ಪಕ್ಕಾ ರಸ್ತೆ ಬಂದೀತು. ಅಲ್ಲಿಯ ತನಕ ಈ ಮೂವತ್ತು ನಾಲ್ಕು ಮೈಲಿನ ರಸ್ತೆಯೇ ಗತಿ" ಎಂದು ನಿದ್ರಿಸುತ್ತಿದ್ದ ಬಸ್ಸಿನ ಕಡೆಗೇ ಬಟ್ಟು ಮಾಡಿದ. ಈ ಬಸ್ಸಿನಲ್ಲಿ ಪ್ರಯಾಣಿಕರು ಒಬ್ಬೊಬ್ಬರಾಗಿ ಬರಹತ್ತಿದರು. ಜಯಪುರದಿಂದ ಸಾಮಾನು ತರಲು ತಂದ ಗೋಣಿ ಚೀಲಗಳನ್ನು ಇಟ್ಟುಹೋದನೊಬ್ಬ, ಹಳದಿ ಬಟ್ಟೆಯಲ್ಲಿ ಬಿಗಿದ ಎರಡು ಗಂಟು ಇಟ್ಟು ಹೋದ ಇನ್ನೊಬ್ಬ, "ದಾಡಿ ಮಾಡಿಕೊಂಡು ಬರುತ್ತೇನೆ, ತನ್ನನ್ನು ಬಿಟ್ಟು ಹೋಗಬೇಡ" ಎಂದು ಕಂಡಕ್ಟರನಿಗೆ ಹೇಳಿ ಹೋದ ಮತ್ತೊಬ್ಬ. ಮೋಟಾರಿನಲ್ಲಿ ನಾನೊಬ್ಬನೇ ಕುಳಿತ ಪ್ರಯಾಣಿಕ. ಆದರೂ ಕಂಡಕ್ಟರನಿಗೆ ಸ್ಥಳ ಕಾದಿರಿಸಿದವರು, ಹೇಳಿಹೋದವರು.... ಬರಲಿರುವವರು, ಇವರೆಲ್ಲರ ಲೆಕ್ಕಾಚಾರ ಇದ್ದುದರಿಂದ ಕೊನೆಯಬಾರಿ ಹಾರ್ನ ಬಾರಿಸಿ "ಇಸ್ಟಾರ್ಟ" (ಇಂಜಿನ್ ಪ್ರಾರಂಭಿಸಲು) ಮಾಡುವಂತೆ ಹೇಳಿದ. ಗುಡುಗಿನ ಸಪ್ಪಳದಂತೆ ಇದ್ದ ಅದರ ಮಿಡಿತವನ್ನು ಕೇಳಿ ಒಬ್ಬೊಬ್ಬರೇ ಬರಹತ್ತಿದರು. ಮಧ್ಯದಲ್ಲಿಯೇ ಬೀಡಿ ತರಲು ಒಬ್ಬ ಹೋದ. ಹಜಾಮನು ತನ್ನ ಅಂಗಡಿಯಿಂದ ಮೂವರು ಬರಲಿದ್ದಾರೆಂದು ಕೂಗಿ ಹೇಳಿದ. ಚಹಾ ಅಂಗಡಿಯವನು ಕೊನೆಯ ಗಿರಾಕಿಯಿಂದ ಹಣ ಪಡೆದ ನಂತರ ಮೋಟಾರು ಹೊರಟಿತು. ಇರುವೆ ವೇಗದಿಂದ ಹೊರಟ ಮೇಲೂ ಜನ ಹತ್ತುತ್ತಲೇ ಇದ್ದರು. ಹೆಂಗಳೆಯರು ಬರುತ್ತಿದ್ದರೆ ಕಂಡಕ್ಟರನು 'ರುಕ್ಕೆ ರುಕ್ಕೆ' (ನಿಧಾನವಾಗಿ) ಎಂದು ಕೂಗುವ. ಪ್ರಾಧ್ಯಾಪಕರೊಬ್ಬರು, ಆಳಿನ ಕಡೆಯಿಂದ ಜಾಗ ಹಿಡಿಸಿದವರು, ತಮ್ಮ ಮನೆಯ ಮುಂದೆಯೇ ಮೋಟಾರು ನಿಲ್ಲಿಸಿ ಹತ್ತಿಕುಳಿತರು. ಅವರ ಸಾಮಾನು ಮೇಲೆ ಹಾಕಲು ಹದಿನೈದು ನಿಮಿಷ ತಗಲಿದವು. ಒಳಗೆ ಕೂಡ್ರುವ, ನಿಲ್ಲುವ ಸ್ಥಳ ತುಂಬಿ ಹೋಗಿದ್ದರಿಂದ ಹಳ್ಳಿಗರನ್ನು ಬಸ್ಸಿನ ಟಾಪ್ ಮೇಲೆ ಕೂಡ್ರಿಸಲಾಯಿತು ಅಲ್ಲಿ ಅವರೆಲ್ಲ

ರಜಾಯಿ ಹೊದ್ದು ಕುಳಿತು. ಬೀಡಿ ಸೇದುತ್ತ ಹರಟೆ ಹೊಡೆಯಲಾಂಭಿಸಿದರು. ಇನ್ನೇನು ಊರು ಮುಗಿಯಿತು, ವೇಗವಾಗಿ ಮೋಟಾರು ರಸ್ತೆ ಸಾಗಬಹುದು, ಎಂದು ನಿರೀಕ್ಷಿಸುವಲ್ಲಿ ಪ್ರಯಾಣಿಕರು ಇಳಿಯುವ ಹಳ್ಳಿಗಳು ಬರಲಾರಂಭಿಸಿದವು. ಪೆಟ್ರೋಲನ್ನು ಉಳಿಸುವದಕ್ಕಾಗಿ ಡ್ರಾಯವರನು ಇಳಿಜಾರು ಬಂದಾಗ ಇಂಜಿನನ್ನು ಬಂದು ಮಾಡಿ ತಿರುಗಿ ಏರಿ ಬಂದಾಗ ಪ್ರಾರಂಭಿಸುತ್ತಿದ್ದನು. ಈಗ ಗಾಡಿ ಪ್ರಾರಂಭವಾಗಲು ನಿರಾಕರಿಸುತ್ತದೆ. ಕಂಡಕ್ಟರನು 'ಹೆಂಡಲ್' ಹೊಡೆಯಬೇಕು. ದನಕರುಗಳು ಅಡ್ಡಗಟ್ಟಿದಾಗ ಬಿಚ್ಚಿಹೋದ ತಂತಿಯನ್ನು ಹುಡುಕಿ ಜೋಡಿಸಿ ಹಾರ್ನ ಮಾಡಬೇಕು. ಜೋಡಿಸಿದ ತಂತಿಯನ್ನು ಸಕಾಲದಲ್ಲಿ ಬಿಡಿಸದೇ ಇದ್ದರೆ ಹಾರ್ನ ಕೂಗುತ್ತಲೇ ಇರುತ್ತಿತ್ತು. ಕಂಡಕ್ಟರನು ಒಂದು ರೂಪಾಯಿ ಅರವತ್ತು ಪೈಸಾ ಪಡೆದು ತಿಕೀಟು ಕೊಟ್ಟು "ದಾರಿಯ ಮೇಲೆ ಚಕ್ಕಿಂಗ ಇದೆ. ತಿಕೀಟು ಜೋಪಾನವಾಗಿಡಿ. ಇಲ್ಲದಿದ್ದರೆ ಪೋಲಿಸರು ನಮಗೆ 'ಚಾಲನ್' ಕೊಡುತ್ತಾರೆ" ಎಂದು ಎಚ್ಚರಿಸಿದ. ದಾರಿಯಲ್ಲಿ ರೈತರು ಗೋಧಿಚೀಲ, ತರಕಾರಿ, ಮೊಟ್ಟೆಗಳೊಡನೆ ನಿಂತಿದ್ದರು. ಜಯಪುರಕ್ಕೆ ಅವನ್ನು ಸಾಗಿಸುವದಕ್ಕಾಗಿ ತಡೆದು ತಡೆದು ಗಾಡಿ ಸಾಗುತ್ತಿತ್ತು.

ಬೋರಾಜದಲ್ಲಿ ಏಜಂಟನೊಬ್ಬ ಇದ್ದುದರಿಂದ ಪ್ರಯಾಣಿಕರು ಅವನಿಂದಲೇ ತಿಕೀಟು ಪಡೆಯಬೇಕು ಎಂಬ ಕಾನೂನು. ಅವನಿನ್ನೂ ಮಲಗಿದ್ದನೋ ಏನೋ! ಐದು ನಿಮಿಷ ಸತತವಾಗಿ ಹಾರ್ನ ಬಾರಿಸಿದ ನಂತರ ಓಡುತ್ತ ಬಂದ. ಒಂದು ತಿಂಗಳಿನಿಂದ ಬೋಳಿಸದ ಗಡ್ಡ, ಕಂಕುಳಲ್ಲಿ ಹಣ ಕೂಡಿಸುವ ಖಾಕಿ ಚೀಲ, ಮೊಳಕಾಲವರೆಗೆ ಬರುವ ಕೊಳಕು ಪಂಚೆಯ ಪಂಡಿತಜಿ (ಬ್ರಾಹ್ಮಣ) ಬಂದ. ಪ್ರಯಾಣಿಕರ ಯಾದಿ ಕೊಟ್ಟ, ತನ್ನ ಕಮಿಷನ್ ಪಡೆದು, ಎಂಟಾಣೆ ಕಡಿಮೆಯಿದೆ ಎಂದ. 'ಇದೇನು ಪಂಡಿತಜಿ? ಪ್ರತಿಸಲ ಹೀಗೆ ಹಣ ಕಡಿಮೆ ಕೊಟ್ಟರೆ ನಾವು ಮಾಲಕರಿಗೆ ಏನೆಂದು ಹೇಳಬೇಕು?' ಎಂದು ಕಂಡಕ್ಟರ ದೊಡ್ಡ ಧ್ವನಿ ತೆಗೆದಾಗ ಇದೊಂದು ಸಲ ಕ್ಷಮಿಸೆಂದ. ಇಷ್ಟಾದರೂ ಕಾದ ಮೋಟಾರಿಗೆ ಮಗನಿಂದ ನೀರು ಹಾಕಿಸಿದ್ದಕ್ಕೆ ಹತ್ತು ಪೈಸಾ ಗಿಟ್ಟಿಸದೇ ಬಿಡಲಿಲ್ಲ. ಮೋಟಾರ ನಿಲ್ದಾಣದಲ್ಲಿಯೇ ಪುರಾತನವಾದ ಕೋಟೆಯೊಂದಿದೆ. ಆದರೆ ಅದರಲ್ಲಿ ಆಧುನಿಕ ಖೋಲಿ, ಕಿಡಕಿಗಳನ್ನು ಮಾಡಿಸಿ ಠಾಕೂರರ ವಂಶಜರು ವಸತಿ ಬಿಟ್ಟಿದ್ದಾರೆ. ಬೋರಾಜದ ನಂತರ ಅಲ್ಲಲ್ಲಿ ನೀರಿನ ಒರತೆಯಿದ್ದುದರಿಂದ ಹುಲುಸಾದ ಹುಲ್ಲು ಬೆಳೆದಿತ್ತು. ಕುರುಬರು ನೂರಾರು ಕುರಿಗಳನ್ನು ಮೇಯಲು ಬಿಟ್ಟು ತಾವು ಆಟದಲ್ಲಿ ತೊಡಗಿದ್ದರು. ಕುರಿಗಳು ಮೋಟಾರನ್ನು ಅಡ್ಡಗಟ್ಟಿ ನಿಂತದ್ದರಿಂದ ಡ್ರಾಯವರನು ಇಳಿದು ಕುರುಬ ಹುಡುಗರನ್ನು ಹಿಡಿಯಲು ಓಡಿದ. ಅವರು ಕಾಲಿಗೆ ಬುದ್ಧಿ ಹೇಳಿದರು. ನಂತರ ಸಪಾಟಾದ ಬಯಲು ಬಂದಿತು. ನೀರಿದ್ದರೂ ಈ ನೆಲ ಕೃಷಿಮಾಡದೇ ಏಕೆ ಬಿಟ್ಟಿದ್ದಾರೆ? ಎಂದು

ಸಹಪ್ರಯಾಣಿಕರಿಗೆ ವಿಚಾರಿಸಿದೆ. ಮಣ್ಣಿನಲ್ಲಿ ಆಮ್ಲಾಂಶ ಹೆಚ್ಚಿಗೆ ಇದ್ದುದರಿಂದ ಹೆಚ್ಚಿನ ಬೆಲೆ ಬರುತ್ತಿಲ್ಲ. ಆದರೆ ತಲೆ ಇದ್ದ ರೈತನೊಬ್ಬ ಇಲ್ಲೆ ಒಳ ಹಳ್ಳಿಯಲ್ಲಿ ಒಂದು ಆಳವಾದ ಬಾವಿ ತೋಡಿ ಅಲ್ಲಿಂದ ಬಂದ ಮಣ್ಣು ಹೊಲದಲ್ಲಿ ಹಾಕಿ ಬಂಗಾರ ಬೆಳೆಯುತ್ತಿದ್ದಾನೆ, ಕೃಷಿ ಕಾಲೇಜಿನ ಪಂಡಿತರು ಈ ವಿಧಾನ ಕಲಿಯಲು ಅವನತ್ತ ಧಾವಿಸಿ ಬಂದರು, ಎಂದು ವಿವರಿಸುವಷ್ಟರಲ್ಲಿ ಅಜಮೇರದಿಂದ ಜಯಪುರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ಕಂಡಿತು. ಕಂಡಕ್ಟರನು ಮೇಲೆ ಕುಳಿತವರನ್ನು ಇಳಿಸಿ ಮಂದೆಯಂತೆ ಬಸ್ಸಿನಲ್ಲಿ ತುಂಬಿಸಿದ. ಜಯಪುರಕ್ಕೆ ಹೊರಟ ಕೆಲ ಪ್ರಯಾಣಿಕರು ಇಳಿದರು. ಅಜಮೇರದಿಂದ ಬರುವ ಯಾವುದಾದರೊಂದು ಬಸ್ಸು ಹಿಡಿದುಕೊಂಡರೆ ಬಲು ಬೇಗ ಜಯಪುರ ತಲುಪಬಹುದೆಂದು ಅವರ ಲೆಕ್ಕಾಚಾರ.

ಎದುರಿನಿಂದ ಬರುವ ಇನ್ನೊಂದು ಮೋಟಾರಿನ ಡ್ರಾಯವರನು ಕೈಕೊಡಹಿ ರಸ್ತೆಯಲ್ಲಿ ಪೋಲಿಸರ ತಪಾಸಣೆ ಇಲ್ಲವೆಂದ. ಇವನೂ ಇಲ್ಲವೆಂದ. ಮೋಟಾರು ರಾಜಮಾರ್ಗ ಬಿಟ್ಟು ಮಳಲಿನ ರಸ್ತೆಯತ್ತ ಹೊರಳಿತು. ಬಗ್ರು ಸ್ಟ್ಯಾಂಡ ಮೇಲೆ ನಿಂತಿತು. ಪ್ರಯಾಣಿಕರೆಲ್ಲ ಇಳಿದು ಚಹ -ತಿಂಡಿಗಳಿಗಾಗಿ ಹೋದರು. ಕುಂಟಿಯೋರ್ವಳು ಬಸ್ಸಿಗೆ ನೀರು ಕುಡಿಸಿ ಐದು ಪೈಸೆ ಪಡೆದಳು. ಹತ್ತಿರದಲ್ಲಿ ಇದ್ದ ಶಾಲೆಯ ಮಕ್ಕಳಿಗೆ ವಿಶ್ರಾಂತಿಗಾಗಿ ಬಿಟ್ಟಿದ್ದರಿಂದ ಅವರು ಮೋಟಾರನ್ನು ಸುತ್ತುವರಿದು ಅದಕ್ಕೆ ಬಡಿದುಕೊಂಡಿದ್ದ ಧೂಳಿನ ಮೇಲೆ ಭಂವರಲಾಲ, ರಾಮನಿವಾಸ, ಪುಕರಾಜ ಎಂದು ತಮ್ಮ ಹೆಸರುಗಳನ್ನು ಬರೆದು ಆನಂದಿಸಿದರು. ಅಂಗಡಿಯವರು ಗಿರಾಕಿಗಳೊಡನೆ ವ್ಯಾಪಾರ ಮಾಡಿ ಡ್ರಾಯವರ, ಕ್ಲೀನರ ಕಂಡಕ್ಟರರಿಗೆ ಪುಕ್ಕಟ ಚಹಾ ಕೊಡುವತನಕ ಅರ್ಧತಾಸು ಮೋಟಾರು ಅಲ್ಲಿಯೇ ನಿಂತಿತು. ತಮ್ಮಿಂದ ಅಂಗಡಿಕಾರರಿಗೆ ವ್ಯಾಪಾರ ಮಾಡಿಸಿ ತಾವು ಪುಕ್ಕಟೆ ಚಹಾ ಕುಡಿಯುವ ಸಲುವಾಗಿಯೇ ಬಗ್ರುಗೆ ಬರುತ್ತಾರೆ, ಮಕ್ಕಳು! ಎಂದು ಪ್ರಯಾಣಿಕನೊಬ್ಬ ಗೊಣಗಿದಾಗ, ಇಲ್ಲಿಂದ ಸೀದಾ ಜಯಪುರಕ್ಕೆ, ಮತ್ತೆಲ್ಲೂ ನಿಲ್ಲಿಸುವುದಿಲ್ಲವೆಂದು ಆಶ್ವಾಸನ ಕೊಟ್ಟು ಡ್ರಾಯವರ ಬಸ್ಸು ಬಿಟ್ಟ. ಒಂದು ಮೈಲು ಬಿಡುವದರೊಳಗೆ ಟಾಯರು ಸಂಪುಹೂಡಿಬಿಟ್ಟಿತು. ಪ್ರಯಾಣಿಕರು ತಿರುಗಿ ಚಹ ಕುಡಿದು ಬಂದರು.

ಯಾವುದೋ ಊರಿನ ಸಂತೆ ಇದ್ದಿರಬೇಕು. ಅಂತೆಯೇ ನೂರಾರು ದನಕರುಗಳನ್ನು ಹೊಡೆದುಕೊಂಡು ಹೊರಟಿದ್ದರು ಗೋಪಾಲರು. ಅಲ್ಲೊಂದು ಇಲ್ಲೊಂದು ಒಂಟೆಯ ತಂಡ ಹೊರಟಿತ್ತು. ಕೆಲವು ಕಡೆಗೆ ಒಂಟೆಗಳು ವಿರಮಿಸುತ್ತ ಯಜಮಾನರು ತೆಗೆದು ಹಾಕಿದ ಬೇವಿನ ಸೊಪ್ಪನ್ನೇ ತಿಂದು ತೇಗಿದವು. ಒಂಟೆಗಳ ಡುಬ್ಬಗಳ ಮೇಲೆ ಹೇರಿದ ಅಡಿಗೆಯ ಸಲಕರಣೆಗಳು, ಅವರು ಬಹು ದೂರದಿಂದ

ನಡೆದು ಬರುತ್ತಿದ್ದಾರೆಂದು ಸಾಕ್ಷಿ ಹೇಳಿತು. ಇಲ್ಲಿಯ ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಇದ್ದುದರಿಂದ ಪಂಪುಗಳ ಸಹಾಯದಿಂದ ಟ್ಯೂಬ ಬಾವಿಯಿಂದ ನೀರುಎತ್ತಿ ಹುಲುಸಾದ ಬೆಳೆ ತೆಗೆದಿದ್ದಾರೆ. ಹಲವಾರು ಮಾವಿನ ಮತ್ತಿತರ ಹಣ್ಣಿನ ತೋಟಗಳನ್ನು ಮಾಡಿದ್ದಾರೆ. ಇಷ್ಟರಲ್ಲಿ ಎದುರಿಗೆ ಬಂದ ಟ್ರಕ್ ಡ್ರಾಯವರನು ದೀಪಹಾಕಿ ಮುಂದೆ ತಪಾಸಣೆ ಇದೆ ಎಂದು ಎಚ್ಚರಿಸಿದ, ಎಂಟು - ಹತ್ತು ಜನರನ್ನು ಕೆಳಗಿಳಿದು ಹೋಗಲು ಹೇಳಲಾಯಿತು. ಹಲವರ ತಲೆ ಕಾಣದಂತೆ ಬಗ್ಗಿ ಕೂಡ್ರಲು ವಿನಂತಿಸಿದಾಗ ಅವರೂ ಏನೂ ವಿರೋಧಿಸದೇ ಸಹಕರಿಸಿದರು. ಪೋಲಿಸನಿಗೆ ಐದು ರುಪಾಯಿಯ ನೋಟು ಕೈಗೆ ತಾಗಿದಾಗ ಎಲ್ಲವು ಕಾನೂನುಬದ್ಧವಾಗುವುದರಿಂದ ಮೋಟಾರು ತನ್ನ ಪ್ರಯಾಣ ಮುಂದುವರಿಸಿತು. ಅಲ್ಲೊಂದು, ಇಲ್ಲೊಂದು ಲೋಹಾರರ ತಂಡ ಠಾಣ್ಯ ಹಾಕಿ ಕೆಲಸದಲ್ಲಿ ಮೈಮರೆತಿದ್ದವು. ಬಾಗಿಲು ಕಿಟಕಿಗಳಿಗೆ ಕಲ್ಲಿನಲ್ಲಿ ಕೊರೆದ ಇಲ್ಲವೇ ಅಚ್ಚಿನಿಂದ ಸಿಮೆಂಟಿನಲ್ಲಿ ತಯಾರಿಸಿದ ನಕ್ಷೆಯ ಕೆಲಸವಿದ್ದ ಮತ್ತು ರಾಜಸ್ಥಾನಿ ಮಾದರಿಯ ಪಲ್ಲಕ್ಕಿಯ ಗುಮ್ಮಟದ ಕಟ್ಟಡಗಳು ಜಯಪುರ ಸಮೀಪಿಸುತ್ತಿದೆಯೆಂದು ಹೇಳಿದವು. ರೇಲ್ವೆ ಹಾದಿಯ ಮೇಲೆ ಕಟ್ಟಿದ ಸೇತುವೆಯ ಮೇಲಿಂದ ಬಸ್ಸು ಹಾದು ಹೋಯಿತು. ಬಲಗಡೆಗೆ ನೂರಾರು ಮೋಟಾರುಗಳನ್ನು ನಿಲ್ಲಿಸಲಾಗಿತ್ತು. ಪುಣೆ-ಕಲ್ಯಾಣಗಳ ನಡುವೆ ನಿಂತ ಸೈನಿಕ - ವಾಹನಗಳಂತೆ ನಿಂತದ್ದು ನೋಡಿದ್ದೆ. ಇವು ಸರಕಾರಿ ಸಾರಿಗೆಯ ಮೋಟಾರುಗಳು. ಕಾಲಕಾಲಕ್ಕೆ ಸರಿಯಾಗಿ ದುರಸ್ತಿ ಮಾಡದೇ, ವಿವಿಧ ಭಾಗಗಳನ್ನು ಕದ್ದೊಯ್ದು ಮೂಲೆಗುಂಪಾದ ವಾಹನಗಳಿವು! ಎಂದು ಯಾರೋ ಹೇಳಿದರು. ಕಾರ್ಯದಕ್ಷತೆಯಲ್ಲಿ ನಮ್ಮ ರಾಜ್ಯದ ಸಾರಿಗೆಗೆ ಇವರೂ ಸರಿಗಟ್ಟಿದ್ದಾರೆ ಎಂದು ಕೊಂಡೆ. ವಿಧಾನಸಭಾ ಸದಸ್ಯರ ಹಾಸ್ಟೇಲ ಮತ್ತು ಆಕಾಶವಾಣಿಗೆ ಹೋಗುವವರಿಗಾಗಿ ಮೋಟಾರು ನಿಂತಿತು. ಚಹಾ ಮತ್ತು ಕಿರಾಣಿ ಅಂಗಡಿಗಳನ್ನು ದಾಟುತ್ತ ಚಾಂದಪೋಲ ನಿಲ್ದಾಣದಲ್ಲಿ ಮೋಟಾರು ನಿಂತಿತು.

ಎದುರಿಗೆ ಸವಾಯಿ ಜಯಸಿಂಗನು ಕಟ್ಟಿಸಿದ ಜಯಪುರ ನಗರದ ಚಾಂದಪೋಲ ಹೆಬ್ಬಾಗಿಲು ಹೊಸಬರನ್ನು ಸ್ವಾಗತಿಸಿತು. ಇಪ್ಪತ್ತು ಅಡಿಗಳಷ್ಟು ಎತ್ತರದ ಮತ್ತು ಒಂಭತ್ತು ಅಡಿ ಅಗಲದ ಗುಲಾಬಿ ವರ್ಣದ ಗೋಡೆಗಳನ್ನು ಕಟ್ಟಿದ್ದಾರೆ. ಇಲ್ಲಿ ಸೈನ್ಯವನ್ನು ಇಟ್ಟು ಹಿಂದೆ ನಗರವನ್ನು ವೈರಿಗಳಿಂದ ಸಂರಕ್ಷಿಸುತ್ತಿದ್ದಿರಬೇಕು. ಇಷ್ಟು ಬೇಗ ವಿಶ್ವವಿದ್ಯಾಲಯಕ್ಕೆ ಹೋಗಿ ಮಾಡುವದೇನಿದೆಯೆಂದುಕೊಂಡು, ಹೆಬ್ಬಾಗಿಲಿನಿಂದ ಎದುರುಗಡೆ ಹಾಯ್ದು ಹೋದ ಹೆದ್ದಾರಿಯಿಂದ ಹೊರಟೆ. ಎಲ್ಲೆಲ್ಲೂ ಅಂಗಡಿಗಳು, ಒಂದು ಶಿವಾಲಯ. ಮುಂದಕ್ಕೆ ಹೋದರೆ ಭವ್ಯ ಕಟ್ಟಡವೊಂದು ಗೋಚರಿಸಿತು. ಅದರ ಮೇಲೆ ಬರೆದದ್ದು 'ಝನಾನಾ ಹಾಸ್ಪಿಟಲ್' ಎಂದು ಓದಿ ಮಹಿಳೆಯರ ಆಸ್ಪತ್ರೆಯೆಂದು ತಿಳಿದು ಕೊಂಡೆ. "ಒಂದೆರಡು ಸವಾರಿ" ಎಂದು ಕೇಳುವ

ಟಾಂಗಾವಾಲಾನತ್ತ ತಿರುಗಿನೋಡಿದೆ. "ಪೋಲೊಕ್ಟಿ" (ಪೋಲೋ ವಿಕ್ಟರಿ ಸಿನೇಮಾ ಮಂದಿರ!) "ಟೇಸನ್" (ಸ್ಟೇಶನ್) ತಲಾ ಎರಡಾಣೆ ಎಂದು ಕೂಗುತ್ತಿದ್ದ. ಈಗಾಗಲೇ ಅದರಲ್ಲಿ ಮೂವರು 'ಸವಾರ'ರಿದ್ದರು. ಇನ್ನೆರಡು ಸವರಿಗಳನ್ನೂ ಹೊರಲು ತಯಾರಾಗಿ ನಿಂತಿದ್ದ ಕುದರೆಯನ್ನು ನೋಡಿ ತಲೆದೂಗಿದೆ. ಎರಡು ರೂಪಾಯಿ ಪಡೆದು ಕೇವಲ ಇಬ್ಬರನ್ನು ಹೊರುತ್ತಿದ್ದ ಬಡಕಲು ಧಾರವಾಡಿ ಕುದುರೆಗಳ ನೆನಪಾಯಿತು. ವಿಶ್ವವಿದ್ಯಾಲಯಕ್ಕೆ ಹೋಗಲು "ಸಿಟಿ ಬಸ್ ಇದೆಯೇ?" ಎಂದು ಒಬ್ಬನನ್ನು ವಿಚಾರಿಸಿದಾಗ "ಅನೇಕ ಇವೆ. ಅಜಮೇರ ಗೇಟದಿಂದ ಹೊರಡುತ್ತವೆ" ಎಂದ. ಅದರ ದಿಕ್ಕನ್ನು ಕೇಳಿ ತಿಳಿದುಕೊಂಡು ತಿರುಗಿದಾಗ ಗೇಟಿನ ಹತ್ತಿರ ಜಂಗುಳಿ ನೆರೆದಿತ್ತು. ಗೌಳಿಗರು ಆಕಳು - ಎಮ್ಮೆಗಳನ್ನು ನಿಲ್ಲಿಸಿಕೊಂಡಿದ್ದರು. ಹಾಲಿನ ಬೆಲೆಗಳನ್ನು ಕುದುರಿಸಿ ಗಿರಾಕಿಗಳು ನಿಂತಿದ್ದರೆ. ಹಿಂಡಿದ ಹಾಲು ಕೊಳ್ಳುವಷ್ಟು ಗಿರಾಕಿಗಳು ಸಿಕ್ಕಿದಾಗ, ಹಾಲನ್ನು ಗಿರಾಕಿಗಳ ಮುಂದೆಯೇ ಹಿಂಡಿಕೊಡುವ ಈ ಪದ್ಧತಿ ಮೋಜೆನಿಸಿತು. ಇನ್ನೊಂದೆಡೆ ತರಕಾರಿ ಮಾರುವ ಹೆಂಗೆಳೆಯರು, ದೊಡ್ಡ ದೊಡ್ಡ ಕ್ಯಾಬೇಜ, ಕಾಲಿಫ್ಲಾವರ, ಬದನೆಕಾಯಿ, ಟೊಮ್ಯೊಟೋಗಳನ್ನು ಮಾರುವದರಲ್ಲಿ ಮೈಮರೆತಿದ್ದರು.

ಚಾಂದಪೋಲ ಗೇಟಿನ ಒಳಗಡೆ ಹೋಗುತ್ತಿದ್ದಂತೆ ಗೋಡೆಯ ಖೋಲಿಯಲ್ಲಿ ಪೋಲಿಸರು ಕುಳಿತದ್ದು ಲಕ್ಷಕ್ಕೆ ಬಂದಿತು. ಹಳೆಯ ಗೋಡೆಯ ಆಧಾರ ಪಡೆದು ಅನೇಕ ಅಂಗಡಿಗಳು ತಲೆಯೆತ್ತಿ ನಿಂತಿವೆ. ಗೇಟಿನ ನಂತರ ಚೌಕೋನಾಕಾರದ ಸ್ಥಳ ಬಿಟ್ಟು ಇನ್ನೊಂದು ಬಾಗಿಲು ಇದೆ. ಹಿಂದಕ್ಕೆ ಈ ಸ್ಥಳದಲ್ಲಿ ಹೆಬ್ಬಾಗಿಲು ಕಾಯುವ ಪ್ರತೀಹಾರರು ಇದ್ದಿರಬೇಕು. ಇಂದು ಹಣ್ಣು ಹಂಪಲು ಮಾರುವ ಸಿಂಧಿಗಳು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಮಾರವಾಡಿಯೊಬ್ಬ ಅಲ್ಲಿ ಇಲ್ಲಿ ಸಕ್ಕರೆ ಚೆಲ್ಲುತ್ತ ಹೋಗುತ್ತಿದ್ದ. ಹಾಗೇಕೆ ಮಾಡುತ್ತಿದ್ದಾನೆ, ಎಂದು ಹತ್ತಿರ ಹೋಗಿ ನೋಡಿದರೆ ಇರುವೆಗಳ ಸಾಲುಗಳಿಗೆ ಆತ ಆಹಾರ ನೀಡುತ್ತಿದ್ದುದು ಲಕ್ಷಕ್ಕೆ ಬಂದಿತು. ಹೆಬ್ಬಾಗಿಲು ದಾಟಿ ಬಝಾರದ ರಸ್ತೆಗುಂಟ ಸಾಗಿದೆ. ಎಡಗಡೆಗೆ ಒಂದು ದೇವಾಲಯ. ಅಲ್ಲೊಬ್ಬ ಧರ್ಮಿಷ್ಟ, ಜೋಳಿಗೆಯಲ್ಲಿಯ ಬೂಂದಿಕಾಳುಗಳನ್ನು "ಪರಷಾದ್" ಎಂದು ಹಂಚುತ್ತಿದ್ದುದರಿಂದ ಬಹಳ ಜನ ಅವನನ್ನು ಮುತ್ತಿದ್ದರು. ನೂರು ಅಡಿಗಿಂತಲೂ ಅಗಲವಿದ್ದ ರಸ್ತೆಯ ಎರಡೂ ಬದಿಗೆ ಧಾನ್ಯಗಳ ರಾಶಿ ಹಾಕಿದ ಕಿರಾಣಿ ಅಂಗಡಿಗಳ, ಗುಲಾಬಿವರ್ಣದ ಈ ಕಟ್ಟಡದ ಮಹಡಿಯ ಮೇಲೆ ಹಲವಾರು ಸಂಸಾರಗಳು ಮನೆ ಮಾಡಿಕೊಂಡಿವೆ. ಕಣ್ಣಿಗೆ ಕಾಡಿಗೆ, ತುಟಿಗೆ ಕೆಂಬಣ್ಣ ಸವರಿ, ಮಿಂಚುವ ಆಭರಣಗಳನ್ನು ಧರಿಸಿದ ಸ್ತ್ರೀಯರು ದಾರಿಹೋಕರನ್ನು ನೋಡುತ್ತ ನಿಂತ ವಿಧಾನದಿಂದ ಆ ಗೃಹಗಳಲ್ಲಿಯ ಜೀವನದ ಕಲ್ಪನೆ ಬಂದಿತು. ಸಂಜೆ ಹೊತ್ತಿಗೆ ಕೈಯಲ್ಲಿ ಹೂ ಮಾಲೆಗಳನ್ನು ಹಿಡಿದುಕೊಂಡು ಬರುವ ರಸಿಕರಿಗಾಗಿ ಈ ಗೃಹಗಳಲ್ಲಿ ರತ್ನಗಂಬಳಿ

ಹಾಸಿ, ವಾದ್ಯ ಮೇಳಗಳೊಂದಿಗೆ ಗೆಜ್ಜೆಕಟ್ಟಿಕೊಂಡು ಹಾಡು, ನರ್ತನಗಳಲ್ಲಿ ತೊಡಗಿರುವ ವರ್ಗವಿದು ಇರಬಹುದೇ? ಎಂದು ಅನುಮಾನವಾಯಿತು. ಎದುರಿಗೆ ಬಂದ ಮುಖ್ಯ ಅಡ್ಡ ರಸ್ತೆಯ ಹೆಸರು 'ಖಜಾನೆವಾಲೊಂಕಾ ರಾಸ್ತಾ' ಎಂದು ಓದಿ ಮೋಜೆನಿಸಿತು. ಅಲ್ಲಿ ಅಜಮೇರಗೇಟಿಗೆ ಹೋಗುವುದರ ಬಗ್ಗೆ ವಿಚಾರಿಸಿದೆ. ಮುಂದೆ "ಛೋಟಿ ಚೌಪಡ" ಬರುತ್ತದೆ. ಅಲ್ಲಿ ಬಲದಿಕ್ಕಿಗೆ ತಿರುಗಿದರೆ 'ಕಿಶನ ಪೋಲ ಬಝಾರ', ಹಾಗೇ ಮುಂದೆ ಹೋದರೆ ಅಜಮೇರಗೇಟ ಬರುತ್ತದೆಂದು ತಿಳಿಯಿತು. ಎದುರಿನ ಅಂಗಡಿಯವನೊಬ್ಬ ಹದ್ದುಗಳಿಗೆ ರೊಟ್ಟಿಗಳನ್ನು, ಬಜಿಗಳನ್ನು ಒಗೆಯುತ್ತಿದ್ದ. ಅವು ಮೇಲಕ್ಕೆ ಹಾರಾಡುತ್ತ ಗುರಿ ಇಟ್ಟು ಪಂಜಗಳಲ್ಲಿ ಹಿಡಿಯುವದು ತಮಾಷೆಯಗಿತ್ತು. ಇನ್ನೊಂದು ಕಡೆಗೆ ಕೆಲವು ಕೆಂಪು ಮೂತಿಯ ಮಂಗಗಳಿಗೆ ಬಾಳೆಹಣ್ಣು ತಿನಿಸುವ ಕಾರ್ಯಕ್ರಮ ನಡೆದಿತ್ತು. ಛೋಟಿ ಚೌಪಾಡದಲ್ಲಿ ಹಲವರು ಗೊಂಡೆಹೂವಿನ ಮಾಲೆಗಳ ರಶಿ ಹಾಕಿ ಒಬ್ಬ ಮಾರಲು ಕುಳಿತಿದ್ದ. ಎಲ್ಲಿಂದಲೋ ಬಿಳಿಯ ಆಕಳೊಂದು ಬಂದು ಮಾಲೆಗೆ ಬಾಯಿ ಹಾಕಿ ತಿನ್ನತೊಡಗಿತು. ಅದನ್ನು ತೆಗೆಯುವ ಯತ್ನಮಾಡಿದಾಗ "ತಿನ್ನಲಿ ಬಾಬು" ಎಂದು ಹೂ ಮಾರುವವನೇ ಹೇಳಿದಾಗ ಸೋಜಿಗವೆನಿಸಿತು.

ಕಿಶನಪೋಲ ಬಝಾರದಲ್ಲಿ ಚಾರಪಾಯಿ, ನವಾರ, ಟೇಬಲ, ಮುಡ್ಡೆ, ಕಸಬರಿಗೆ, ಹಗ್ಗ ಇನ್ನಿತರ ಗೃಹಕೃತ್ಯದ ಸಾಮಾನುಗಳೇ ಹೆಚ್ಚಾಗಿವೆ. ಅಜಮೇರಗೇಟಿನ ಹತ್ತಿರ ಬರುತ್ತಿದ್ದಂತೆ ಹಳೇ ಗೋಡೆಗೆ ತಾಗಿ ಹಲವಾರು ಒಂದೇ ಮಾದರಿಯ ಗುಲಾಬಿ ಬಣ್ಣದ ಅಂಗಡಿಗಳಿದ್ದವು. ನಿರಾಶ್ರಿತರಾಗಿ ಬಂದು, ಕಷ್ಟಪಟ್ಟು ಮುಂದೆ ಬಂದ ಸಿಂಧಿಗಳು ನೆಹರೂ ಬಝಾರವನ್ನು ತಮ್ಮದನ್ನಾಗಿ ಮಾಡಿಕೊಂಡು ರಂಗುರಂಗಿನ ಬಟ್ಟೆಗಳನ್ನು, ಹೆಂಗೆಳೆಯರ ಶೃಂಗಾರ ಸಾಧನಗಳನ್ನು ಮಾರುತ್ತಿದ್ದರು. ಬಲ ದಿಕ್ಕಿಗೆ ಮೀನು, ಮಾಂಸ, ಮೊಟ್ಟೆಗಳನ್ನು ಮಾರುವವರ ಅಂಗಡಿಗಳು ಸಾಲಾಗಿ ನಿಂತಿದ್ದವು. ಅಜಮೇರ ಗೇಟು ದಾಟಿದ ನಂತರ ಅಗಲವಾದ ಆಧುನಿಕ ಕಟ್ಟಡಗಳನ್ನು ಹೊತ್ತ ರಸ್ತೆ, ಸರ್ಕಲ್ಲು ಮೈಸೂರ ನಗರವನ್ನು ನೆನಪಿಗೆ ತಂದಿತು. ಜಯಪುರದ ದೊರೆಗಳು ಮೈಸೂರಿನ ದಿವಾನ ಮಿರ್ಜಾ ಇಸ್ಮಾಯಿಲ್‌ರನ್ನು ಜಯಪುರಕ್ಕೆ ಕರೆಸಿಕೊಂಡಾಗ ಅವರ ಆಡಳಿತದಲ್ಲಿ ಜಯಪುರ ನಗರ, ತುಂಬ ಸುಧಾರಿಸಿತಂತೆ. ನಗರದ ಪ್ರಮುಖರಸ್ತೆಗೆ ಮಿರ್ಜಾ ಇಸ್ಮಾಯಿಲ್ (ಎಮ್. ಆಯ್.) ರೋಡ್ ಎಂದು ಹೆಸರಿಟ್ಟಿದ್ದಾರೆ. ಎದುರಿಗೆ ಸರಕಾರಿ ಖಾದಿ ಭಾಂಡಾರ ಒಂದು ಇತ್ತು. ಅದರಲ್ಲಿ ಒಂದು ಶೋ ರೂಮ್. ರಾಜಸ್ಥಾನೀ ಮಾದರಿಯಲ್ಲಿ ಹಿತ್ತಾಳೆಯಲ್ಲಿ ಕೆತ್ತಿದ ಮೂರ್ತಿಗಳು, ಗಂಧ ಹಸ್ತಿದಂತಗಳಲ್ಲಿ ಕೊರೆದ ಆಕೃತಿಗಳು, ಆಕರ್ಷಕ ರೀತಿಯ ಆಭರಣಗಳು, ಬಟ್ಟೆಬರೆಗಳು, ಚರ್ಮದ ಸಾಮಾನುಗಳು, ಅರಗಿನ ವಸ್ತುಗಳು, ಚೀನಿಮಣ್ಣಿನ ಪಾತ್ರೆಗಳು ಮುಂತಾದವು ಅಲ್ಲಿದ್ದವು. ಬರಲಿರುವ ವಧುವನ್ನು ಜ್ಞಾಪಿಸಿಕೊಂಡು,

ಇಲ್ಲಿಯ ಕೆಲ ಸಾಮಾನು ಕೊಂಡರೆ ಸಂತೋಷಭರಿತಳಾಗಬಹುದೆಂದು ಒಳಗೆ ಹೋಗಿ ವಿವಿಧ ಸಾಮಾನುಗಳ ಬೆಲೆ ಕೇಳಿದಾಗ ಅವುಗಳೆಲ್ಲ ಹಣದ ಹೊಳೆ ಹರಿಸುವ ವಿದೇಶೀ ಪ್ರವಾಸಿಗರ ಸಲುವಾಗಿ ಇವೆ. ನನ್ನಂತಹ ಭಾರತೀಯರು ಕೇವಲ ಅವನ್ನು ನೋಡಿ ಆನಂದಿಸಬಹುದು ಎಂದು ಅರಿವಾಯಿತು. ಭಾವೀ ಪತ್ನಿಯನ್ನು ಈ ಅಂಗಡಿಗೆ ಕರೆತರಬಾರದೆಂದು ಆಗಲೇ ನಿರ್ಧರಿಸಿಬಿಟ್ಟೆ!

ಸಿಟಿ ಬಸ್ಸು ಅದೇ ಆಗ ಬಂದು ನಿಂತಿದ್ದರಿಂದ ಬಿಡಲು ಅರ್ಧ ತಾಸಿದೆ! ಎಂದ ಕಂಡಕ್ಟರ. ಖಾಸಗಿ ಬಸ್ಸಿನವ "ಸಾಂಗಾನೇರ ಸಾಂಗಾನೇರ" ಎಂದು ಕೂಗುತ್ತಿದ್ದುದರಿಂದ ವಿಶ್ವ ವಿದ್ಯಾಲಯದ ಮೇಲಿಂದ ಹೋಗುತ್ತಿದೆಯೇ ಎಂದು ಕೇಳಿದೆ. "ಹೌದು, ಈಗ ಬಿಡುತ್ತದೆ" ಎಂದೊಡನೆ ಹತ್ತಿದೆ. ಮೋಟಾರು ಹೊರಡುತ್ತಿದ್ದಂತೆ ಎಲ್ಲಕ್ಕೂ ಮೊದಲು ಕಾಲೇಜಿನ ಕಟ್ಟಡದಂತೆ ತೋರುತ್ತಿದ್ದ ಮಹಾರಾಣಿ ಗಾಯತ್ರಿ ದೇವಿ ಹುಡುಗಿಯರ ಶಾಲೆ ಇತ್ತು. ದೂರದಲ್ಲಿ ಪ್ರಾಣಿಸಂಗ್ರಹಾಲಯದ ಹಿನ್ನೋಟ ಕಂಡಿತು. ನಂತರ ಬಂದ ಮಹಾರಾಣಿ, ಮಹಾರಾಜಾ ಕಾಲೇಜುಗಳನ್ನು ನೋಡಿ ತಿರುಗಿ ಮೈಸೂರಿನ ನೆನಪಾಯಿತು. ಮೋಟಾರು ಸವಾಯಿ ಮಾನಸಿಂಗ ರಸ್ತೆಗೆ ಹೊರಳಿದಾಗ "ಬಡಿ ಇಸ್ಪತಾಲ" (ಸವಾಯಿ ಮಾನಸಿಂಗ್ ಆಸ್ಪತ್ರೆ)ದ ಹತ್ತಿರ ಪ್ರಯಾಣಿಕರು ಇಳಿದರು. ರಾಮಬಾಗ್ ಅರಮನೆ. ಈಗ ಶ್ರೀಮಂತರ ಹೋಟೆಲಾಗಿ ಮಾರ್ಪಟ್ಟು ನಿಂತದ್ದು ಕಂಡಿತು. ಹೆದ್ದಾರಿಯಿಂದ ಬಸ್ಸು ಓಡಲಾರಂಭಿಸಿದಾಗ ಅರಾವಲ್ಲಿಯ ಬೆಟ್ಟಗಳು ಕಾಣಿಸಿದವು. ಅವುಗಳ ಆಶ್ರಯದಲ್ಲಿ ರಾಜಸ್ಥಾನ ವಿಶ್ವವಿದ್ಯಾಲಯದ ಕಟ್ಟಡಗಳು ಹರಡಿಕೊಂಡಿದ್ದವು. ತುಂಬ ರಮಣೀಯವಾಗಿತ್ತು. ಉಕ್ಕಿನ ಗೇಟಿನ ಎದುರಿಗೆ ಇಳಿದು ಒಳಗೆ ಹೋಗುತ್ತಿದ್ದಂತೆ, ರಾಜಸ್ಥಾನ ವಾಸ್ತುಶಿಲ್ಪದಲ್ಲಿ ಕಟ್ಟಿದ ಭವ್ಯಕಟ್ಟಡಗಳು ಮತ್ತು ಸುಂದರವಾಗಿ ಬೆಳೆಸಿದ ಹೂದೋಟಗಳು ಕಣ್ಣಿಗೆ ಹಬ್ಬವನ್ನುಂಟು ಮಾಡಿದವು. ಭೋಟಾ ಮಹಾಬಳೇಶ್ವರ ಎಂದು ನಾಮಕರಣ ಮಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಆವಾರದಷ್ಟು ಸುಂದರ ಕ್ಯಾಂಪಸ್ ಬೇರೊಂದು ಭಾರತೀಯ ವಿಶ್ವವಿದ್ಯಾನಿಲಯ ಇಲ್ಲವೇ ಇಲ್ಲವೆಂದು ನಂಬಿದ ಧಾರವಾಡಿಗರ ಮನೋವೃತ್ತಿ ನೆನೆಸಿಕೊಂಡೆ. ಅಣ್ಣಾ, ಬನಾರಸ ವಿಶ್ವವಿದ್ಯಾಲಯಗಳ ಆವಾರಗಳು ತಮ್ಮದೇ ವಿಧದಲ್ಲಿ ಸುಂದರವಾಗಿವೆ. ದಾರಿಯಲ್ಲಿಯ ಗಾಂಧಿಭವನ ತುಂಬಾ ಪ್ರಶಾಂತವಾದ ಸ್ಥಳವಾಗಿತ್ತು. ಪುರುಷರ ವಸತಿಗೃಹ ದೂರದ ಬೆಟ್ಟಗಳ ಆಶ್ರಯದಲ್ಲಿ ನಿಂತಿದ್ದರಿಂದ ಸುತ್ತಮುತ್ತಲಿನ ಕಟ್ಟಡ ಈಜುಕೊಳಗಳನ್ನು ನೋಡುತ್ತ ವಿಶ್ವವಿದ್ಯಾಲಯದ ಆವಾರವನ್ನು ದಾಟಿ ಕಿರಿದಾದ ರಸ್ತೆಯನ್ನು ತುಳಿದು ಹೋಗುವಾಗ ಹಾಸ್ಟೇಲು ಕಟ್ಟಡ ಬಂದಿತು.

೧೧. ಗುಲಾಬಿ ನಗರದಲ್ಲಿ

ಹಾಸ್ಟೇಲಿನ ಪ್ಯೂನನನ್ನು ವಿಚಾರಿಸಿದಾಗ ಅವನೇ ಮಹಡಿಯ ಮೇಲೆ ಕರೆದೊಯ್ದು ರಾವನ ಕೋಣೆಯನ್ನು ತೋರಿಸಿದ. ರಾವನು ಆಗಿನ್ನೂ ಮುಂಜಾವಿನ ಸುಖನಿದ್ರೆಯಲ್ಲಿ ಇದ್ದ! ತುಂಬ ಹೊತ್ತು ಕೂಗಿದ ಮೇಲೆ ಗೊಣಗುತ್ತ ಎದ್ದು ಬಾಗಿಲು ತೆಗೆದ, ಗಡಿಯಾರ ಹನ್ನೊಂದರ ಅಂಕೆಯನ್ನು ತೋರಿಸಿದರೂ ತನ್ನ ಇನ್ನೂ ಒಂದು ತಾಸಿನ ನಿದ್ರೆ ಬಾಕಿ ಉಳಿದಿದೆಯೆಂದ. ಬಚ್ಚಲಿಗೆ ಅವನು ಹೋದಾಗ ಕೋಣೆಯಲ್ಲೊಮ್ಮೆ ಕಣ್ಣು ಹಾಯಿಸಿದೆ. ಸ್ಟೋವ ಹತ್ತಿಸಿ ಒಗೆದ ನೂರಾರು ಕಡ್ಡಿಗಳು ನೆಲದ ಮೇಲೆ ಬಿದ್ದಿದ್ದವು. ವೇಳೆಗೆ ಬಿಸಿ ಮಾಡದೇ ಒಡೆದು ಹೋದ ಹಾಲು ಕೀಟಗಳನ್ನು ಆಮಂತ್ರಿಸಿತ್ತು, ಒಂದೆಡೆ ಇಟ್ಟ ಬ್ರೆಡ್ಡು ಮುದಿಯಾದ್ದರಿಂದ ಬಿಳಿಗಡ್ಡೆ ಬೆಳೆದಿತ್ತು. ಎರಡು ಮೂರು ತತ್ತಿಗಳ ಜೀವಾಂಶವೆಲ್ಲ ಒಣಗಿ ಹೋಗಿ ಅವು ಅಲ್ಲಾಡತೊಡಗಿದ್ದವು. ಒಂದು ಕಡೆಗೆ ಬಟ್ಟೆಗಳು ಅಗಸನ ದಾರಿ ಕಾಯುತ್ತ ರಾಶಿ ಬಿದ್ದರೆ ಇನ್ನೊಂದಡೆ ಪುಸ್ತಕಗಳ ರಾಶಿ ಬಿದ್ದಿತ್ತು. ಪತ್ನಿಯಿಂದ ಬಂದ ಪತ್ರ, ಟೇಬಲ ಮೇಲೆ ಇತ್ತು. ಚಹ ಬೇಡವೆಂದರೂ ರಾವನಿಗೆ ಬೇಕೇ ಆದ್ದರಿಂದ ಚಪ್ರಾಸಿಗೆ ಹಾಲು ತರಲು ಹೇಳಿದ. ಈಗ ಹಾಲು ಸಿಗುವ ಸಂಭವವಿಲ್ಲವೆಂದು ಹೇಳಿದ್ದರಿಂದ ಕ್ಯಾಂಟೀನದಲ್ಲೇ ಕುಡಿದರಾಯಿತೆಂದು ಹೊರಟೆವು. ಧಾರವಾಡದ ಸಮಾಚಾರವನ್ನೆಲ್ಲ ಮಾತನಾಡುತ್ತ ಪರಿಚಯದವರೆಲ್ಲ ಎಲ್ಲೆಲ್ಲಿ ಇದ್ದಾರೆ, ಏನೇನು ಮಾಡುತ್ತಲಿದ್ದಾರೆ ಎಂಬ ಸಮಾಲೋಚನೆ ನಡೆಯಿತು. ರಾವನ ಸಹಪಾಠಿ, ವ್ಯಾಸನ ಕೋಣೆ ದಾರಿಯಲ್ಲೇ ಇದ್ದುದರಿಂದ ಅವನೂ ಜೊತೆಗಿದ್ದರೆ ಒಳ್ಳೆಯದೆಂದು ಅತ್ತ ತಿರುಗಿದೆವು. ವಿಶ್ವಿವಿದ್ಯಾಲಯಕ್ಕೆ ಹೊರಡುವದರಲ್ಲಿದ್ದ ವ್ಯಾಸನು ನಮ್ಮನ್ನು ಸ್ವಾಗತಿಸಿ ತಿನ್ನಲು 'ಸುಖಾಮೇವಾ' (ಗೋಡಂಬಿ, ಕೊಬ್ಬರಿ, ಕಲ್ಲುಸಕ್ಕರೆ, ದ್ರಾಕ್ಷಿ) ಮುಂತಾದವುಗಳ ಮಿಶ್ರಣ) ಕೊಟ್ಟ. ವ್ಯಾಸ್ ತನ್ನ ಖೋಲಿಯನ್ನು ಅಚ್ಚುಕಟ್ಟಾಗಿ ಇಟ್ಟಿದ್ದ. ಮೂವರೂ ಸಣ್ಣದೊಂದು ಹೋಟೆಲಿಗೆ ಹೋಗಿ, ಸಾಮೋಸಾ, ದಾಲಮೋಟ ತಿಂದು ಚಹ ಕುಡಿದು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗಕ್ಕೆ ಹೋದೆವು.

ಪ್ರಾಣಿಶಾಸ್ತ್ರ ವಿಭಾಗಕ್ಕೆ ನನ್ನ ಗುರುಗಳಾಗಿದ್ದ ಡಾ. ರಾಮಸ್ವಾಮಿಯವರೇ ಮುಖ್ಯಸ್ಥರಾಗಿದ್ದಾರೆಂದು ತಿಳಿದು ಆನಂದವಾಯಿತು. ವ್ಯಾಸ್, ಅವರ ನೇತೃತ್ವದಲ್ಲಿ ಡಾಕ್ಟರೇಟಿಗಾಗಿ ಸಂಶೋಧನೆ ನಡೆಸಿದ್ದ. ಡಾ. ಪಿ. ಎನ್. ಶ್ರೀವಾಸ್ತವರು ರೇಡಿಯೋ ಜೀವನಶಾಸ್ತ್ರದ ಮುಖ್ಯಸ್ಥರಿದ್ದು ರಾವನು ಅವರ ನೇತೃತ್ವದಲ್ಲಿ ಸಂಶೋಧನೆ ನಡೆಸಿದ್ದ. ಡಾ. ಸಕ್ಸೇನಾ ಎನ್ನುವವರು ಕೀಟ ವಿಭಾಗದ ಮುಖ್ಯಸ್ಥರಾಗಿದ್ದರು. ಡಾ. ಶ್ರೀವಾಸ್ತವರ ಸಂಶೋಧನೆ, ಪ್ರಾಣಿಗಳಲ್ಲಿ ಸಂತತಿ ಪ್ರತಿಬಂಧಕ ಅಭ್ಯಾಸದ ಬಗ್ಗೆ ಇದ್ದುದರಿಂದ ಅವರ ಬಳಿ ವಿವಿಧ ಸಂಸ್ಥೆಗಳ ಗ್ರ್ಯಾಂಟ್ ಇದ್ದುದಲ್ಲದೇ ಅತ್ಯಾಧುನಿಕವಾದ, ಅಮೇರಿಕೆಯಿಂದ ತರಿಸಿಕೊಂಡ ಉಪಕರಣಗಳಿದ್ದವು. ಅಂತೆಯೇ ಅಧಿಕ ವಿದ್ಯಾರ್ಥಿಗಳು ಅವರೊಡನೆ ಸಂಶೋಧನೆ ಮಾಡಲು ಆಶಿಸುತ್ತಾರೆ. ರಾಸಾಯನಿಕಗಳು ಮತ್ತು ರೇಡಿಯೋ ಎಕ್ಟಿವ್ ಧಾತುಗಳಿಂದ ವಿವಿಧ ಪ್ರಾಣಿಗಳ ಜನನೇಂದ್ರಿಯಗಳು, ಮತ್ತು ಅದಕ್ಕೆ ಸಂಬಂಧಿಸಿ ಅಂಗಾಂಗಗಳ ಮೇಲೆ ಯಾವ ಪರಿಣಾಮ ಉಂಟಾಗುತ್ತದೆ ಎಂದು ಕಂಡುಹಿಡಿಯುವುದು ಅವರ ಉದ್ದೇಶವಾಗಿತ್ತು. ಈ ಪ್ರಯೋಗಕ್ಕೆ ಬೇಕಾಗುವ ಮೀನು, ಕಪ್ಪೆ, ಇಲಿ, ಮಂಗಗಳನ್ನು ಅವರೇ ಸಾಕಿದ್ದರಿಂದ ಅಲ್ಲಿ ಹೋದರೆ ಪುಟ್ಟ ಪ್ರಾಣಿಸಂಗ್ರಹಾಲಯಕ್ಕೆ ಹೋದಂತೆಯೇ ಅನಿಸುತ್ತಿತ್ತು. ಕೆಲವು ಪ್ರಯೊಗಾಲಯಗಳನ್ನು ಅತಿ ಸೂಕ್ಷ್ಮ ಉಪಕರಣಗಳಿಗಾಗಿಯೇ ಮೀಸಲಿಟ್ಟಿದ್ದಾರೆ. ಇವುಗಳಲ್ಲಿ ಪ್ರಾಯೋಗಿಕ ಪ್ರಾಣಿಗಳ ವಿವಿಧ ಅವಯವಗಳನ್ನು ಸೇರಿಸಿದರೆ, ವಿವಿಧ ಧಾತುಗಳು ಎಷ್ಟು ಪ್ರಮಾಣದಲ್ಲಿ ಇವೆ? ಎಂದು ತಿಳಿಸುವ ಬುದ್ಧಿ ಶಕ್ತಿ ಈ ಯಂತ್ರಗಳಿಗಿದೆ. ನಂತರ, ಉಳಿದ ಎಲ್ಲಾ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಇರಬೇಕಾದ ಪ್ರಾಣಿಗಳು, ಎಲವು, ಚರ್ಮಗಳನ್ನು ನೋಡಿ ಮುಗಿಸುವದರೊಳಗೆ ವ್ಯಾಸ್, ನಮಗೆಲ್ಲ ಮಾಡಿ ಇಟ್ಟಿದ್ದ ಚಹಾ ಹೀರುತ್ತಿದ್ದಂತೆ ಸೊಂಪಾದ ಹರಟೆಯಾಯಿತು. “ವಿವಾಹ ಪೂರ್ವದಲ್ಲಿ ರಾವನು ಪ್ರಯೋಗಾಲಯಕ್ಕೆ ಹೋದರೆ ಹಾಸ್ಟೇಲಿಗೆ ಮರಳುವದನ್ನು ಮರೆಯುತ್ತಿದ್ದ. ಮದುವೆಯಾದ ಮೇಲೆ ಊರಿಗೆ ಹೋದರೆ ತಿಂಗಳುಗಟ್ಟಲೆ ಜಯಪುರಕ್ಕೆ ಬರಲು ಮರೆಯುತ್ತಾನೆ” ಎಂದಾಗ ಎಲ್ಲರೂ ನಕ್ಕರು. ಪತ್ನಿಯ ಜೊತೆಗೆ ರಾವನಿಗೆ ಪುತ್ರನೂ ಇದ್ದದ್ದು ಈಗ ಗೊತ್ತಾಯಿತು. ಸಿಗುವ ನಾಲ್ಕು ನೂರು ರೂಪಾಯಿ ಶಿಷ್ಯ ವೇತನದಲ್ಲಿ ಅವನ ಖರ್ಚೇ ಹೊರಡದಿದ್ದಾಗ ಜಯಪುರದಲ್ಲಿ ಅವನ ಸಂಸಾರದ ಖರ್ಚು ನೀಗಿಸುವುದು ಸಾಧ್ಯವೇ ಇರಲಿಲ್ಲವೆಂದು ಪತ್ನಿ-ಪುತ್ರರನ್ನು ಊರಲ್ಲಿಯೇ ಬಿಟ್ಟು ಬಂದಿದ್ದ! ಇಷ್ಟೇ ಅಲ್ಲದೇ ಆಗಾಗ ಮನೆಯವರಿಂದ ಹಣ ತರಿಸಿಕೊಳ್ಳುವ ಪ್ರಸಂಗ ಬರುತ್ತದೆಯಂತೆ. ದುಡ್ಡು ಕೊಟ್ಟು ತಂದ ಹಾಲು, ಬ್ರೇಡ್, ಮೊಟ್ಟೆಗಳನ್ನು ಹಾಳುಮಾಡಿ ಹೋಟೆಲಿಗೆ ಹೋಗುವಂತಾದರೆ ನಾನೂರು ಏಕೆ ಒಂದು ಸಾವಿರ ರೂಪಾಯಿಯೂ ಸಾಕಾಗಲಿಕ್ಕಿಲ್ಲ ಎಂದಾಗ, ಇದೆಲ್ಲ ನನಗೆ ಹೇಗೆ ತಿಳಿಯಿತೆಂದು ಅವನಿಗೆ ಆಶ್ಚರ್ಯ.

ವ್ಯಾಸನನ್ನು ಅಲ್ಲಿಯೇ ಬಿಟ್ಟು ನಾವಿಬ್ಬರೂ ಖರೀದಿಗೆಂದು ಹೊರಟೆವು. ರಾಮನು "ಸಾಯಕಲ್ ರಿಕ್ಷಾಮೇಲೆ ಹೋಗೋಣವೇ ಇಲ್ಲವೇ ಆಟೋ ರಿಕ್ಷಾದ ಮೇಲೆಯೇ?" ಎಂದು ಕೇಳಿದಾಗ ಸಿಟಿ ಬಸ್ಸಿನಲ್ಲಿ ಹೋಗೋಣವೆಂದಾಗ ಅವಾಕ್ಕಾದ. ಜಯಪುರದ ಪ್ರಥಮ ದರ್ಶನದಲ್ಲೆ ಸಿಟಿ ಬಸ್ಸಿನಿಂದ ವಿಶವಿದ್ಯಾಲಯಕ್ಕೆ ಬಂದೆನೆಂದಾಗ ತಲೆದೂಗಿದ. ಮೂರು ವರ್ಷ ಜಯಪುರದಲ್ಲಿ ಕಳೆದರೂ ಅವನಿಗೆ ವಿಶ್ವವಿದ್ಯಾಲಯದ ತನಕ ಸಿಟಿ ಬಸ್ ಸರ್ವಿಸ್ ಇರುವದು ಗೊತ್ತೇ ಇರಲಿಲ್ಲವಂತೆ. ಈಗ ವೇಳೆಯ ಅಭಾವವಿದ್ದುದರಿಂದ ರಿಕ್ಷಾದಲ್ಲಿಯೇ ಹೋಗೋಣವೆಂದ. ತೀರ ಹರಕುಮುರುಕ ಹಿಂದಿಯಲ್ಲಿ ಅಜಮೇರ ಗೇಟಿಗೆ ಹೋಗಲು ಎಷ್ಟು ತೆಗೆದುಕೊಳ್ಳುವಿ? ಎಂದು ಕೇಳಿದ. ಅವನು ಹೇಳಿದ ಹಿಂದಿ ಅಂಕೆ ಇವನಿಗೆ ತಿಳಿಯದಿದ್ದರಿಂದ ಇಂಗ್ಲಿಷಿನಲ್ಲಿ ಹೇಳು ಎಂದ. ನನ್ನ ಹಿಂದಿ ಅವನದಕ್ಕಿಂತ ಚೆನ್ನಾಗಿದ್ದರಿಂದ ನಾನೇ ಮುಂದಾಗಿ ಅವನು ಹೇಳಿದ ಬಾಡಿಗೆಗೆ ಒಪ್ಪದೇ ಇನ್ನೊಬ್ಬನ ಹತ್ತಿರ ಹೊರಾಗ ಅವನು ನಾನು ಹೇಳಿದ ಬಾಡಿಗೆಗೇ ಒಪ್ಪಿ ಬಂದ. ನನಗಿಷ್ಟು ಒಳ್ಳೆಯ ಹಿಂದಿ ಬರುತ್ತದೆಂದು ರಾವನಿಗೆ ಅಚ್ಚರಿ. ಅವನಿಗೆ ಅದೇ ವಿಶ್ವ ವಿದ್ಯಾಲಯದಲ್ಲಿ ನೌಕರಿ ಸಿಗುವ ಸಾಧ್ಯತೆ ಇದೆ. ಆದರೆ ಅದಕ್ಕೂ ಪೂರ್ವದಲ್ಲಿ ಹಿಂದಿ ಕಲಿಯಲು ಪ್ರಾಧ್ಯಾಪಕರು ಹೇಳಿದ್ದರಿಂದ ಶಂಖನಾದ ಮಾಡುತ್ತಿದ್ದ. ಒಂದೆರಡು ವರ್ಷ, ಇಂಗ್ಲಿಷ್ ಶಿಕ್ಷಣದ ಮಾಧ್ಯಮ ರಾಜಸ್ಥಾನದಲ್ಲಿ ಇರುವ ತನಕ, ತಾನು ಅಲ್ಲಿ ಇರುವದಾದರೂ ಒಂದಿಲ್ಲೊಂದು ದಿನ ದಕ್ಷಿಣಕ್ಕೆ ಹೋಗಲೇಬೇಕಾಗುವದೆಂದು ಭವಿಷ್ಯ ನುಡಿದ.

ಅಜಮೇರ ಗೇಟಿನ ಹತ್ತಿರ ಇಳಿದು ನೆಹರು ಬಝಾರ ಮಾರ್ಗವಾಗಿ ಹೊರಟೆವು. ಅಂಗಡಿಕಾರರು ಬಾಂಧಣಿ, ಕೋಟಾ, ಸಾಂಗನೇರಿ, ಬಾಡಮೇರಿ ಸೀರೆಗಳನ್ನು ಆಕರ್ಷಕವಾಗಿ ತೂಗುಹಾಕಿದ್ದರು. ಇದಾವ ಅಂಗಡಿ ಎಂದು ತಲೆಯೆತ್ತಿ ನೋಡಿದರಾಯಿತು. ಅಂಗಡಿಕಾರನು ವಂದಿಸಿ ಸ್ವಾಗತಿಸುವ. 'ನೀವು ಏನು ಕೊಳ್ಳಬೇಕಾಗಿಲ್ಲ, ಒಮ್ಮೆ ಬಂದು ಮಾಲನ್ನು ನೋಡಿ ಹೋಗಿ' ಎನ್ನುವ ರಾವನಿಗೆ ಬನಿಯನ್ ಮತ್ತು ಕರವಸ್ತ್ರಗಳನ್ನು ಕೊಳ್ಳಬೇಕಾಯಿತು. ಒಳಗೆ ಹೊಕ್ಕ ನಂತರ ನಾವು ಯಾರು ಏನು? ಎಂದು ವಿಚಾರಿಸಿ ಅಂಗಡಿಯುವ ನಮ್ಮ ಸಹೋದ್ಯೋಗಿಗಳೆಲ್ಲ ತಮ್ಮಲ್ಲಿಯೇ ವ್ಯಾಪಾರ ಮಾಡುತ್ತಾರೆಂದ. ಹಲವಾರು ನಮೂನೆಯ ಬನಿಯನ್‌ಗಳನ್ನು ತೋರಿಸಿ,ತನ್ನಲ್ಲಿ ಇಲ್ಲದ್ದನ್ನು ಪಕ್ಕದಂಗಡಿಯಿಂದ ತರಲು ಮಗನಿಗೆ ಸಿಂಧಿ ಭಾಷೆಯಲ್ಲಿ ನಿರ್ದೇಶನ ಕೊಟ್ಟು ಅದನ್ನು ಗೋಡೌನಿನಿಂದ ತರಿಸಿರುವುದಾಗಿ ನಮಗೆ ಹೇಳಿ ನಾವು ಅನೇಕ ಸಾಮಾನು ಕೊಳ್ಳುವಂತೆ ಮಾಡಿದ. ಹಣ ಈಗಲೇ ಕೊಡಬೇಕೆಂದಿಲ್ಲ, ಇನ್ನೊಂದು ದಿನ ಕೊಟ್ಟರಾಗುತ್ತದೆ! ಎಂದ. ಚಹಾ ಬೇಡವೆಂದದ್ದರಿಂದ ಕೊಕೋ ಕೋಲಾ ತರಿಸಿಯೇ ಬಿಟ್ಟ. ತನಗೆ ನೆಗಡಿಯಾದ್ದರಿಂದ ರಾವನು ಕುಡಿಯುವುದಿಲ್ಲವೆಂದ.

ಅವನ ವ್ಯಾಪಾರದ ಪದ್ಧತಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದಾಗ, "ಮಾತೇ ನನ್ನ ಬಂಡವಲು, ನಿರಾಶ್ರಿತನಾಗಿ ಬರಿಗೈಯಿಂದ ಬಂದಾಗಿನಿಂದ" ಎಂದು ಹೇಳಿದಾಗ ಆ ಕರಾಳ ದಿನಗಳನ್ನು ನೆನೆಸಿ ಆತ ಕಸಿವಿಸಿಪಟ್ಟ. ಸಿಂಧದ ತಮ್ಮ ಊರಿನಲ್ಲಿ ಆಪ್ತರನ್ನೆಲ್ಲ ಮುಸಲ್ಮಾನರು ಹೇಗೆ ಹಿಂಸಿಸಿ ಕೊಂದರೆಂದು ನೆನಪಿಸಿಕೊಂಡರೆ ಈಗಲೂ ರಕ್ತ ಕುದಿಯುತ್ತದೆಯೆಂದ. ಆ ದಿನಗಳ ಸಂಕೇತವಾಗಿ ಉಳಿದ ಭುಜದ ಮೇಲಿನ ಇರಿತದ ಕಲೆಯನ್ನು ತೋರಿಸಿದ. ನಿರಾಶ್ರಿತರಿಗೆಂದು ಜಯಪುರದಲ್ಲಿ ಕೊಡ ಮಾಡಿದ ಸ್ಥಳದ ಸಿಂಧಿ ಕಾಲನಿಯಲ್ಲಿ ಇರಲಾರಂಭಿಸಿದಾಗ ತಾಯಿ ಹುರಿದು ಕೊಟ್ಟ ಹಪ್ಪಳಗಳನ್ನು ಝುನಾನಾ ಆಸ್ಪತ್ರೆಗೆ ಬರುವ ಹಳ್ಳಿಗರಿಗೆ ಮಾರುತ್ತಿದ್ದನಂತೆ. ಚಾಂದಪೋಲದಿಂದ ಛೋಟಿ ಚೌಪಡದ ವರೆಗೆ ಅವನ ಹಪ್ಪಳಗಳನ್ನು ಕೊಳ್ಳುವವರು ಅನೇಕ ಜನ ಇದ್ದರಂತೆ. ನಂತರ ಆಸ್ಪತ್ರೆಯ ಅಧಿಕಾರಿಗಳು ಪರಿಸರದಲ್ಲಿ ಯಾವುದೇ ತಿಂಡಿಯನ್ನು ಮಾರಲು ಪ್ರತಿಬಂಧಿಸಿದ್ದರಿಂದ ಮುಂದೆ ಆತ ಛೋಲೆ* ಮಾರುವವನ ಸಹಾಯಕನಾಗಿ ಕೆಲಸ ಮಾಡಿದನಂತೆ. ಸ್ವಲ್ಪ ದೊಡ್ಡವನಾದ ಮೇಲೆ ಕೈಗಾಡಿಯಲ್ಲಿ ಹಣ್ಣುಗಳನ್ನು ಮಾರಲಾರಂಭಿಸಿದ. ಹಣ್ಣಿನ ವ್ಯಾಪಾರದಲ್ಲಿ ಯಾವಾಗ ಲಾಭವಾಗುತ್ತದೆಂದು ಹೇಳಲು ಸಾಧ್ಯವಿರಲಿಲ್ಲ. ಮಾಡಿಕೊಂಡ ಲಾಭದಲ್ಲಿ ಅಲ್ಪ ಬಟ್ಟೆಗಳನ್ನು ಖರೀದಿಸಿ ಸಂತೆ, ಜಾತ್ರೆಗಳಲ್ಲಿ ಮಾರಲಾರಂಭಿಸಿದ. ದೇವರು ಕೈ ಹಿಡಿದದ್ದರಿಂದ ನನ್ನದೇ ಅಂಗಡಿ ತೆಗೆದಿದ್ದೇನೆ, ಎಂದು ಆತ ಹೇಳಿದಾಗ ಆತ್ಮಾಭಿಮಾನ ಉಕ್ಕುತ್ತಿತ್ತು. ಮತ್ತೆ ಏನಾದರೂ ಬೇಕಾದರೆ ತಮ್ಮಲ್ಲಿ ಬರುವಂತೆ ವಿನಂತಿಸಿ ನಮಸ್ಕರಿಸಿ ಬೀಳ್ಕೊಂಡ.

ಮುಂದೆ ಎದುರಿಗೆ ಅತಿ ವಿಶಾಲವಾದ 'ಚೌಡಾ ರಾಸ್ತಾ' ಬಂದಿತು. ಎಡಗಡೆಗೆ ದೊಡ್ಡದೊಂದು ಬೋರ್ಡನ್ನು ಹೊತ್ತ 'ಟೆಕ್' ಸ್ಟೂಡಿಯೋ ನಿಂತಿತ್ತು. ವಿವಾಹವಾಗಿ ಪತಿ ಪುತ್ರರು ಬಂದಾಗ ಅವರ ಫೋಟೋ ತೆಗೆಯಲು ಇಲ್ಲಿಂದಲೇ ಫಿಲ್ಮನ್ನು ಖರೀದಿಸಲು ನಿಶ್ಚಯಿಸಿದೆ. ಬಲಗಡೆಯ ನ್ಯು ಗೇಟಿನಿಂದ ಸಂಗ್ರಹಾಲಯ ಅರಮನೆಯಂತೆ ಕಾಣುತ್ತಿತ್ತು. ಅಲ್ಲಿಯೇ ಕೈಗಾಡಿಯಲ್ಲಿ ಒದಗಿಸುತ್ತಿದ್ದ ಕಬ್ಬಿನ ಹಾಲನ್ನು ಕುಡಿದೆವು. ಬರ್ಫ ಹಾಕಿದರೆ ನಾಲ್ಕಾಣೆಯಂತೆ, ಬರ್ಫ ಹಾಕದಿದ್ದರೆ ಐದು ಪೈಸೆ ಕಡಿಮೆಯೆಂದ. ನಿನ್ನ ಊರಿನಲ್ಲಿ ಕಬ್ಬಿನ ಹಾಲಿಗಿಂತ ನೀರು ತುಟ್ಟಿಯೇ! ಎಂದು ವಿಚಾರಿಸಿದಾಗ ಠೇಲೆವಾಲ (ಕೈಗಾಡಿಯುವ) ನಕ್ಕ. ಬರ್ಫವನ್ನು ಕೊಂಡು ತಂದು, ಅದು ಕರಗದಂತೆ ಕಾದಿರಿಸಿ ಪುಡಿ ಮಾಡಿ ಕಬ್ಬಿನ ಹಾಲಿನಲ್ಲಿ ಸೇರಿಸಬೇಕಾದ್ದರಿಂದ ಐದು ಪೈಸಾ ಹೆಚ್ಚೆಂದ. ಹಸಿ ಶುಂಠಿ ಲಿಂಬೆಹಣ್ಣು ಹಾಕಿದ ಕಬ್ಬಿನ ಹಾಲು ಹಿತವೆನಿಸಿದ್ದರಿಂದ ಇನ್ನೂ ಒಂದೊಂದು ಗ್ಲಾಸು ಕೊಂಡು ಕುಡಿದೆವು.

---

* ತುಂಬಾ ಮಸಾಲೆ. ಆಲೂಗಡ್ಡೆ ಸೇರಿಸಿದ ಕಡಲೆಕಾಳಿನ ಪಲ್ಯ; ಉತ್ತರ ಭಾರತದಲ್ಲಿ ಜನಪ್ರಿಯ ಖಾದ್ಯ. ಈಗ ಬೆಂಗಳೂರಿನಲ್ಲಿ ತೀರ ಪರಿಚಿತ.

ಮುಂದೆ ಬಾಪೂಬಝಾರ ಬಂದಿತು. ರಾಜಸ್ಥಾನಿ ಬೂಟು ಚಪ್ಪಲಿಗಳ ಅಂಗಡಿಗಳು, ಚಶ್ಮಾ, ಸ್ಟೋವ, ಸುಗಂಧದೆಣ್ಣೆ, ಉಪ್ಪಿನಕಾಯಿ, ಹಪ್ಪಳ, ಅಲಂಕಾರದ ಸಾಮಾನುಗಳನ್ನು ಮಾರುವ ಅಂಗಡಿಗಳು ಇಲ್ಲಿದ್ದವು. ಅಲಂಕಾರಪೂರ್ಣವಾಗಿ ಅಚ್ಚುಕಟ್ಟಾಗಿ ಸಾಮಾನುಗಳನ್ನು ಜೋಡಿಸಿದ ಈ ಅಂಗಡಿಗಳನ್ನು ನೋಡುವುದೇ ಆನಂದ. ಅದಾಗಲೇ ಊಟದ ಹೊತ್ತು ಮೀರುತ್ತಿದ್ದುದರಿಂದ ಅದನ್ನು ಮುಗಿಸಿಯೇ ಬಂದರಾಯಿತೆಂದು ಸಾಂಗಾನೇರ ಗೇಟ ದಾಟಿ ಮಿರ್ಜಾ ಇಸ್ಮಾಯಿಲ್ ರೋಡ ಮೇಲಿದ್ದ ಮಾಂಸಾಹಾರಿ, ಹೋಟೆಲುಗಳತ್ತ ಹೊರೆವು. 'ಕ್ವಾಲಿಟಿ' ಮೊದಲು ಬಂದರೂ ಅದು ಅಷ್ಟೊಂದು ಚೆನ್ನಾಗಿಲ್ಲವೆಂದು ರಾವನು ಹೇಳಿದ್ದರಿಂದ "ನಿರೋಸ್" ಗೆ ಹೋದೆವು. ಶುಭ್ರವಸ್ತ್ರದ ಸಮವಸ್ತ್ರಧಾರಿಯೊಬ್ಬ ಬಾಗಿಲು ತೆಗೆದು ನಮ್ಮನ್ನು ಒಳಗೆ ಬಿಟ್ಟ. ಅದೇ ರಾಜಸ್ಥಾನಿ ಉಡುಪು ಧರಿಸಿದ್ದರೆ ಎಷ್ಟು ಚೆನ್ನಾಗಿತ್ತಲ್ಲ ಅನಿಸಿತು. ವಿದೇಶಗಳಲ್ಲಿ ನಮ್ಮ ವೇಷಭೂಷಣಗಳು ಆಕರ್ಷಕವಾಗುವಂತೆ ಮಾಡುವುದರ ಬದಲಾಗಿ ಬ್ರಿಟಿಶರು ನಮ್ಮಲ್ಲಿಯೇ ಬಿಟ್ಟು ಹೋದ ಪಟ್ಟೇವಾಲಾನ ಬಟ್ಟೆಬರೆಗಳು ಸೇರಲೇ ಇಲ್ಲ. ಒಳಗಿನ ಸೇವಕರೂ ಪಾಶ್ಚಾತ್ಯ ಪದ್ಧತಿಯ ಯುನಿಫಾರ್ಮ ಧರಿಸಿದ್ದರು. ಹಸಿದು ಬಂದ ಹೆಚ್ಚಿನ ಗಿರಾಕಿಗಳೆಲ್ಲ ಸೂಟು ಬೂಟು ಧರಿಸಿದವರೇ ಇದ್ದರು. ಆಳು ತಂದು ಕೊಟ್ಟ ದೊಡ್ಡ ಕೋಷ್ಟಕ (ಮೆನು ಕಾರ್ಡು) ನೋಡಿ ಮೀನು, ತಂದೂರಿ ಕೋಳಿ ಮರಿ (ತಂದೂರಿ ಚಿಕನ್) ತರಲಿಕ್ಕೆ ಹೇಳಿದೆವು, ನನಗೆ ಮೊದಲಿನಿಂದಲೂ ಮುಳ್ಳು ಚಮಚ, ಚಾಕುಗಳ ಉಪಯೋಗ ಸೇರದ್ದರಿಂದ ಕೈಯಿಂದಲೇ ಊಟವನ್ನು ಪ್ರಾರಂಭಿಸಿದೆ. ರಾವನು ಅವನ್ನು ಬಳಸಿಯೂ ಮೈಮೇಲೆ ಕೆಡವಿಕೊಂಡ. ಅರ್ಧದಷ್ಟು ತಿಂದು ಬೇಸರವಾಯಿತೆಂದು ಹಾಗೇ ಬಿಟ್ಟ. ಊಟದ ನಂತರ ಪಾಶ್ಚಾತ್ಯರಂತೆ ಚಹ ತರಿಸಿ ಅದನ್ನೂ ಅರ್ಧ ಕುಡಿದು ಬಿಟ್ಟ. ಇಬ್ಬರ ಬಿಲ್ ಹದಿನೇಳು ರೂಪಾಯಿಗಳಾದವು. ವೇಟರನಿಗೆ ಒಂದು ರೂಪಾಯಿ ಭಕ್ಷಿಸು ಕೊಟ್ಟು ಹೊರಗೆ ಬಂದೆವು. ಬರೇ ಮೊಸರು ಅನ್ನ ಇದ್ದರೂ ಇದಕ್ಕಿಂತ ಚೆನ್ನಾಗಿ ಊಟವಾಗುತ್ತಿತ್ತು ಅನಿಸದೇ ಇರಲಿಲ್ಲ.

ಮಿರ್ಜಾ ಇಸ್ಮಾಯಿಲ್ ರಸ್ತೆಯ ಮೇಲೆ ಇದ್ದ ಅಂಗಡಿಗಳು ವಿದೇಶಿಯರ, ಟೂರಿಸ್ಟ್ ಮಂದಿಯ ಸಲುವಾಗಿಯೇ ಇದ್ದಂತೆ ಅನಿಸಿದವು. ಮನೆಯ ಅಲಂಕಾರದ ಸಾಮಾನುಗಳು. ಕಾಶ್ಮೀರಿ ರತ್ನಗಂಬಳಿಗಳು, ಬೆಲೆ ಬಾಳುವ ಗೊಂಬೆಗಳು, ಭಾರಿ ಬೆಲೆಗೆ ಮಾರಾಟಕ್ಕೆ ಇದ್ದವು. ಅಂಗಡಿಯ ಹೊರಮಗ್ಗಲಿಗೆ ಹಿತ್ತಾಳೆಯಲ್ಲಿ ಕೆಲಸ ಮಾಡುವ ಕಲಾಕಾರರಿಗೆ ಅವಕಾಶ ಮಾಡಿಕೊಟ್ಟಿದ್ದರು. ಪಾಶ್ಚಾತ್ಯ ನಾರಿಯೊಬ್ಬಳು ಅವರ ಛಾಯಾಚಿತ್ರ ತೆಗೆದಳು. ಅವಳ ಪತಿ ಅವರಲ್ಲಿ ಒಬ್ಬನ ಚಲನಚಿತ್ರ ತೆಗೆದು ಐದು ರೂಪಾಯಿ ಭಕ್ಷಿಸ್ ಕೊಟ್ಟರು. ಇಡೀ ದಿನ ದುಡಿದರೆ ಅಂಗಡಿಕಾರ ಆತನಿಗೆ ಐದು ರೂಪಾಯಿ ಕೊಡುತ್ತಿದ್ದನೋ ಇಲ್ಲವೊ! ಈ ಹಣದಲ್ಲಿ ಆತ ಪಾಲು ಕೇಳಿದರೂ

ಆಶ್ಚರ್ಯವಿಲ್ಲ. ಹಣವಂತ ಸೆರೆಕುಡುಕರಿಗೆ, ರಸಿಕರಿಗೆ ಪಾನಸುಧೆಯನ್ನು ಒದಗಿಸುವ ಅಂಗಡಿಗಳು ವೈಭವದಿಂದ ನಿಂತಿದ್ದವು. ರಾಜಸ್ಥಾನದ ಹಲವಾರು ದೊರೆಗಳು ತಮ್ಮದೇ ಕೆಲವು ಹೆಸರುವಾಸಿ ಮದ್ಯಗಳನ್ನು ಅನೇಕ ತಲೆಮಾರುಗಳಿಂದ ಒದಗಿಸುತ್ತಿದ್ದು ನೆನಪಾಯಿತು. ನಂತರ ಬಂದ ಒಂದು ಭವ್ಯ ಛಾಯಾಚಿತ್ರದ ಅಂಗಡಿ ನನ್ನನ್ನು ಆಕರ್ಷಿಸಿತು. ಜಯಪುರದ ಮಹಾರಾಜ, ಮಹಾರಾಣಿಯರ ಫೋಟೋಗಳನ್ನು ತೂಗಹಾಕಿದ್ದರು. ಬಹಳ ಕಾಲದ ನಂತರ ಅಂಗಡಿಯ ಒಳಗೆ ಹೊಕ್ಕ ಗಿರಾಕಿಗಳನ್ನು ತುಂಬ ಆದರದಿಂದ ಬರಮಾಡಿಕೊಂಡು ಅಂಗಡಿಕಾರ, ನಾವು ನೋಡಬೇಕೆಂದ ಸಾಮಾನುಗನ್ನು ಇಷ್ಟೂ ಬೇಸರವಿಲ್ಲದೇ ತೋರಿಸಿದ. ಅವನಿಗೆ ಛಾಯಾಚಿತ್ರಗ್ರಹಣದ ಎಳ್ಳಷ್ಟೂ ಪರಿ ಜ್ಞಾನವಿಲ್ಲವೆಂಬುದು ಆತನ ಮಾತಿನಿಂದಲೇ ತಿಳಿಯುತ್ತಿತ್ತು. ಸಾಮಾನಿನ ಬೆಲೆಯೆಲ್ಲ ಮನಸ್ಸಿಗೆ ಬಂದಂತೆ ಹೇಳುತ್ತಿದ್ದ. ಬೆಲೆ ತೀರ ಕಡಿಮೆಯೆಂದು ಕಂಡುಬಂದ ಕೆಲವು ಸಾಮಾನುಗಳನ್ನು ಕೊಂಡುಕೊಂಡೆ. ಹೆಚ್ಚು ಹಣವಿದ್ದರೆ ಇನ್ನಷ್ಟು ಕೊಳ್ಳಬಹುದಿತ್ತೆಂದು ಅನಿಸದೇ ಇರಲಿಲ್ಲ. ಬಹಳ ಕಾಲದ ನಂತರ ವ್ಯಾಪಾರ ಮಾಡಿದ್ದಕ್ಕಾಗಿ ಅಂಗಡಿ ಕಾರನಿಗೂ ಆನಂದವಾಗಿತ್ತು, ಬಹುಶಃ ಆ ಅಂಗಡಿ ಪಿತ್ರಾರ್ಜಿತ ಆಸ್ತಿಯಾಗಿ ಬಂದಿರಬೇಕು. ಅದರ ಹಿಂದೆಯೇ ಮನೆಯಿದ್ದುದರಿಂದ ಬಾಡಿಗೆಯಿಲ್ಲದೆ ಅಂಗಡಿ ತೆಗೆದು ಆತ ಸುಮ್ಮನೆ ಕೂಡ್ರುತ್ತಿರಬೇಕು.

ಸಾಂಗಾನೇರ ಗೇಟ ದಾಟಿ "ಜೋಹರಿ ಬಝಾರಕ್ಕೆ" ಬಂದೆವು. ಹೆಸರು ಸೂಚಿಸುವಂತೆ ಮುತ್ತು ರತ್ನದ ವ್ಯಾಪಾರದ ಪೇಟೆಯಿದು. ಝರಿಯ ಕೆಲಸದ ಬಟ್ಟೆಯಂಗಡಿಗಳೂ ಇದ್ದವು. ರಾಜಸ್ಥಾನಿ ಮಹಿಳೆಯರು ಸಿದ್ಧ ಬಟ್ಟೆಗಳನ್ನು ಹೆಚ್ಚಾಗಿ ಕೊಳ್ಳುವುದಕ್ಕಿಂತ ಬಣ್ಣ ಹಾಕಿಸಿ ಝರಿಯ ಕಸೂತಿ ಕೆಲಸದವರೆಗೆ ತಾವೇ ಮಾಡಿಕೊಳ್ಳುವದರಿಂದ, ಬೆಳ್ಳಿ, ಬಂಗಾರದ ಝರಿ, ಮಣಿಗಳು, 'ಗೋಟಾ'ದ ಹೂವುಗಳ ಅಂಗಡಿಗಳು ಸಾಲಾಗಿ ನಿಂತಿವೆ. ಬಂಗಾರ ತೂಗುವಾಗ ಅವಿಶ್ವಾಸದಿಂದ ಅಕ್ಕ ಸಾಲಿಗನನ್ನೇ ಕಣ್ಣಲ್ಲಿ ಕಣ್ಣಿಟ್ಟು ನೋಡುವಂತೆ ನಾರಿಯರು ಝರಿಯನ್ನು ತುಗುವಾಗಲೂ ಅಷ್ಟೇ ಎಚ್ಚರ ವಹಿಸುತ್ತಾರೆ. ಈ ವ್ಯಾಪಾರಿಗಳು ಹಳೆಯ ಝರಿಯನ್ನೂ ಕೊಳ್ಳುತ್ತಾರೆ. ಜಯಪುರದ ಹವಳ-ಹರಳುಗಳು ತುಂಬ ಪ್ರಸಿದ್ಧವಿವೆ. ಅವುಗಳ ವ್ಯಾಪಾರ ನಡೆಯುವ ಅಂಗಡಿಗಳ ಮುಂದೆ ಕಾಲು ನಿಂತೇ ಬಿಡುತ್ತವೆ. ಮಾರುವವರು, ಕೊಳ್ಳುವವರು ಬೆಲೆ ಬಾಳುವ ಕಲ್ಲುಗಳನ್ನು ನೋಡಿ, ಪರೀಕ್ಷಿಸಿ ಬೆಲೆಯನ್ನು ಹೊಂದಿಸುತ್ತಾರೆ. ಬಣ್ಣದ ಕಾಜುಗಳಿಗೇ ಒಳ್ಳೆ ಆಕಾರ ಕೊಟ್ಟು ಮಾರುವವರೂ ಇದ್ದುದಿರಿಂದ ಪರೀಕ್ಷೆ ಇದ್ದವರಷ್ಟೇ ಕೊಂಡುಕೊಳ್ಳುವ ವ್ಯಾಪಾರಕ್ಕೆ ಇಳಿಯುತ್ತಾರೆ. ಜಯಪುರದಿಂದ ಹವಳಗಳು ವಿದೇಶಕ್ಕೂ ಹೋಗುತ್ತವಂತೆ. ನಂತರ ತುಂಡು ಬಟ್ಟೆ (ಕಟ್ ಪೀಸ್)ಗಳನ್ನು ಮಾರುವವರ ಅಂಗಡಿಗಳು ಬಂದವು. ಟಾಕೆಯ ಕೊನೆಯಲ್ಲಿ

ಉಳಿದ ಇಲ್ಲವೇ ಗಿರಣಿಯಲ್ಲಿ ಬಂದ ತೊಡಕುಗಳಿಗಾಗಿ ಕತ್ತರಿಸಿದ ತುಂಡುಗಳನ್ನು ಹಿಂದೊಮ್ಮೆ ತೀರ ಕಡಿಮೆ ಬೆಲೆಗೆ ಮಾರಿರಬೇಕು. ಆದ್ದರಿಂದ ಈಗಲೂ ತುಂಡು ಅರಿವೆಗಳೆಲ್ಲ ಕಡಿಮೆ ಬೆಲೆ ಸಿಗುತ್ತವೆಂಬ ಭಾವನೆ ಜನರಲ್ಲಿ ಬೇರೂರಿಬಿಟ್ಟಿದೆ. ಆದ್ದರಿಂದ ಈ ಅಂಗಡಿಕಾರರು ಅದರ ಲಾಭ ಪಡೆದುಕೊಳ್ಳಲು ರವಕೆಗೆ, ಶರ್ಟಿಗೆ, ಅಂಡರವೇರ್‌ಗೆ ಬೇಕಾಗುವಷ್ಟು ಬಟ್ಟೆಗಳನ್ನು ಕತ್ತರಿಸಿ, ತುಂಡುಗಳನ್ನೇ ಮಾರುತ್ತಾರೆ. ನಾನೊಮ್ಮೆ ಕೆಲವು ಬಟ್ಟೆಗಳನ್ನು ಕೊಂಡು, ಉಳಿದ ಅಂಗಡಿಯಲ್ಲಿ ಕೊಂಡರೆ ಎಷ್ಟು ಬೀಳುತಿತ್ತು? ಎಂದು ವಿಚಾರಿಸಿದಾಗ ಹೆಚ್ಚು ಕಡಿಮೆ ಒಂದೇ ಬೆಲೆ ಬೀಳುತ್ತಿತ್ತು ಎಂದು ಕಂಡು ಬಂದು ಈ ಮಾರವಾಡಿಗಳ ವ್ಯಾಪಾರ ಬುದ್ಧಿಗೆ ತಲೆದೂಗಿದೆ.

ಸಿಂಧಿ ಮಹಿಳೆಯರು ಭಾರತಕ್ಕೆ ನಿರಾಶ್ರಿತರಾಗಿ ಬರುವಾಗ ತಮ್ಮ ಪರಿಸರದ ಮುಸಲ್ಮಾನರಂತೆ ಪಾಯಜಾಮಾ, ಕಮೀಜ ಧರಿಸಿ, ಅಥವಾ ಗರಾರಾ ತೊಟ್ಟು ಮುಖವನ್ನು ಮುಚ್ಚುವಂತೆ ಓಢಣಿ (ಮುಸುಕು) ಧರಿಸುತ್ತಿದ್ದರು. ಶೀಘ್ರದಲ್ಲೇ ಅವರ ಉಡುಗೆಯಲ್ಲಿ ಹೆಚ್ಚಿನ ಬದಲಾವಣೆ ಬಂದಿತು. ಈಗ ರಾಜಸ್ಥಾನಿಯರಿಗಿಂತ ತೀರ ಭಿನ್ನವಾಗಿ ರಸ್ತೆಯ ಮೇಲೆ ಹೊರಟ ಇತರ ನಾರಿಯರಿಗಿಂತ ಇವರ ಮುಖದ, ಮೈಯ ಅಲಂಕಾರ ಎಷ್ಟರ ಮಟ್ಟಿಗೆ ಹೆಚ್ಚಾಗಿರುತ್ತದೆಯೆಂದರೆ ಸಿಂಧಿ ಮಹಿಳೆಯರನ್ನು ತಟ್ಟನೆ ಗುರುತಿಸಬಹುದು. ಕಾಲಿನಲ್ಲಿ ಝುಗಝುಗಿಸುವ ಚಪ್ಪಲಿ, ನಾಯಲೋನ, ನಾಯಲೆಕ್ಸುಗಳ ಪಾರದರ್ಶಕ ಸೀರೆಗಳ ಮೇಲಿನ ಕಸೂತಿ, ಕಸೂತಿಯಿದ್ದ ಒಳಲಂಗಗಳು ತಿರ ಕಿರಿದಾದ ರವಕೆಗಳು, ತುಟಿಯ ಬಣ್ಣ, ಮುಖದ ಬಣ್ಣಗಳು. ಭುಜಗಳವರೆಗೆ ಇಳಿದು ಬರುವ ಲೋಲಾಕುಗಳು. ವಿವಿಧ ಕೇಶಾಲಂಕಾರಗಳು ಇವರ ವೈಶಿಷ್ಟ್ಯ ಇವರಿಗಾಗಿಯೇ ಮೀಸಲಾದ ಹಲವಾರು ಅಂಗಡಿಗಳಲ್ಲಿ ಹೊಳಪಿನ ನಾಯಲೊನ್, ಸ್ಯಾಟಿನ, ಝರಿ ಮಿಶ್ರಿತ ಬಟ್ಟೆಗಳಿವೆ.

ಈ ಅಂಗಡಿಗಳನ್ನು ನೋಡುತ್ತ ಹೊರಟಾಗ 'ಬಡೀ ಚೌಪಡ' ಬಂದುಬಿಟ್ಟಿತು. ಅಲ್ಲಿ ವಿಶಾಲವಾದ ಚೌಕವಿದೆ. ಜಯಪುರದಲ್ಲಿ ಮುರಾರಜಿ ದೇಸಾಯಿ, ಚವ್ಹಾಣ, ಮಹಾರಾಣಿ ಗಾಯತ್ರಿದೇವಿ, ಅಟಲಬಿಹಾರಿ ಬಾಜಪೇಯಿ ಯಾರೇ ಬಂದರೂ ಅವರ ಭಾಷಣಗಳೆಲ್ಲ ಇಲ್ಲಿಯೇ ಜರುಗುತ್ತವೆಯಂತೆ. ಚೌಕಿನ ಒಂದು ಮೂಲೆಯಲ್ಲಿ ಖಾಸಗಿ ಮೋಟಾರ ಕಂಪನಿಯವರು 'ಅಮೇರ ಅಮೇರ' (ಅಂಬರ) ಎಂದು ಕೂಗುತ್ತಿದ್ದರು. ಇತಿಹಾಸ ಪ್ರಸಿದ್ಧ ಅಂಬರದ ಅರಮನೆಗೆ ಹೊಂದಿಯೇ ಕಾಳಿಯ ಮಂದಿರವಿದ್ದುದರಿಂದ ಯಾವತ್ತು ಅಲ್ಲಿಗೆ ಹೋಗುವ ಪ್ರವಾಸಿಕರು ಇರುತ್ತಾರೆಂದು ತಿಳಿಯಿತು. ಹತ್ತಿರದಲ್ಲೇ ಪ್ರಸಿದ್ಧ ಹವಾ ಮಹಲ್ ವೈಭವದಿಂದ ನಿಂತಿತ್ತು. ಗುಲಾಬಿ ಬಣ್ಣದ ಐದಂತಸ್ತಿನ ಕಟ್ಟಡ ಅರಮನೆಯ ಮುಖವಾಡದಂತೆ ಭಾಸವಾಗುತ್ತದೆ. ಅರ್ಧ

ಪ್ರಕೋನಾಕಾರದಲ್ಲಿ ರಚಿತವಾದ ಕಿಡಕಿಗಳಿಗೆ ಕಲ್ಲಿನಲ್ಲಿ ಕೊರೆದು ನಿರ್ಮಿಸಿದ ತೆರೆಗಳ ಅಡಿಯಲ್ಲಿ ಸಣ್ಣ ಸಣ್ಣ ಕಿಂಡಿಗಳನ್ನು ಬಿಟ್ಟಿದ್ದಾರೆ. ಇವುಗಳ ಮೇಲೆ ನಿರ್ಮಿಸಿದ ಗುಮ್ಮಟಗಳು ರಾಜಸ್ಥಾನಿ ವಾಸ್ತು ಶಿಲ್ಪದಲ್ಲಿ ಇವೆ. ಕೊನೆಯ ಅಂತಸ್ತಿನ ಗುಮ್ಮಟಗಳಿಗೆ ಕಳಸಗಳಿವೆ. ಈ ಕಟ್ಟಡದ ಗೋಡೆ ಕೇವಲ ಎಂಟು ಇಂಚು ಇದ್ದುದರಿಂದ ಅದಕ್ಕೆ ಈ ಹೆಸರು ಬಿದ್ದಿರಬೇಕು, ಇದನ್ನು ೧೭೯೯ರಲ್ಲಿ ಸವಾಯಿ ಪ್ರತಾಪಸಿಂಗನು ಕಟ್ಟಿಸಿದನೆಂದು ಅಲ್ಲಿ ಇದ್ದ ಪಾಟಿ ಹೇಳಿತು. ಅದರ ಅಡಿಯ ಹೊರಜಗಲಿಯಲ್ಲಿ ಭಿಕ್ಷುಕರ ವರ್ಗ ಅಡಿಗೆ ಮಾಡುವುದನ್ನು ನೋಡಿ ಈ ಕಟ್ಟಡದ ಬಗ್ಗೆ ಸರಕಾರ ಎಷ್ಟು ಕಾಳಜಿ ವಹಿಸುತ್ತದೆಂದು ಅರಿವಾಯಿತು. ಹತ್ತಿರದ ಅಂಗಡಿಗೆ ಹೋಗಿ ಚಾಟ್* ತಿಂದು ಚಹಾ ಕುಡಿದೆವು.

ಜೋಬನೇರ ಮೋಟಾರಿಗಾಗಿ ಚಾಂದಪೋಲಿಗೆ ಹೋಗಬೇಕಾದರೆ ತ್ರಿಪೋಲಿಯಾ ಬಝಾರದಿಂದ ಹೊರಟೆವು. ಇಲ್ಲಿ ಹೆಚ್ಚಾಗಿ ಹಿತ್ತಾಳೆ, ತಾಮ್ರ, ಅಲುಮಿನಿಯಂ ಪಾತ್ರೆ, ಉಕ್ಕಿನ ಟ್ರಂಕ್‌ಗಳನ್ನು ಮಾರುವ ಅಂಗಡಿಗಳಿವೆ. ನನಗೆ ಬೇಕಾದ ಮಣೆಗಳು, ನವಾರದ ಮಂಚ, ಸ್ಟೀಲು ಪಾತ್ರೆಗಳನ್ನು ಕೊಂಡು ಮೋಟಾರಿಗೆ ಧಾವಿಸಿದೆ. ಚಾಂದ ಪೋಲದಲ್ಲಿ ಈ ಮೊದಲು ನಿರೀಕ್ಷಿಸಿದಂತೆ ಸಾಯಂ ರಸಿಕರು ಪ್ರೇಯಸಿಯರ ಭೇಟಿಗಾಗಿ ಹೊರಟದ್ದು ಕಂಡಿತು. ಇದೊಂದು ಹೆಸರಾಂತ ಸ್ಥಳವೆಂದು ವ್ಯಾಸನು ಹೇಳುತ್ತಿದ್ದನೆಂದು ರಾವನಿಂದ ತಿಳಿಯಿತು. ಬಸ್ಸು ಬಿಡಲು ಇನ್ನೂ ವೇಳೆಯಿದ್ದುದರಿಂದ ರಾವನಿಗೆ ಹಿಂತಿರುಗಲು ಕೇಳಿಕೊಂಡೆ. ಆದರೆ ರಿಕ್ಷಾದಲ್ಲಿ ಹೋಗದೇ ಮೋಟಾರಿನಲ್ಲಿಯೇ ಹೋಗೆಂದು ಸೂಚಿಸಿದಾಗ ನಕ್ಕು ಬೀಳ್ಕೊಂಡ. ಆದರೆ ಬಸ್ಸಿಗೆ ಕಾಯುವಷ್ಟು ತಾಳ್ಮೆ ಇಲ್ಲದ್ದರಿಂದ ರಿಕ್ಷಾದಲ್ಲೇ ಹೋದನೆಂದು ಅನಂತರ ಭೇಟಿಯಾದಾಗ ಅವನೇ ಹೇಳಿದ, ಮೋಟಾರು, ಜೋಬನೇರ ಹಾದಿ ತುಳಿದಾಗ ಕತ್ತಲಾಗುತ್ತ ಬಂದಿತ್ತು. ಚಂದ್ರನು ಅದಾಗಲೇ ಬಾನಿನಲ್ಲಿ ಬಂದು ಬಿಟ್ಟಿದ್ದ. ಹಗಲಿನಲ್ಲಿ ನೋಡಿದ ಸ್ಥಳಗಳು ಬೆಳದಿಂಗಳಿನಲ್ಲಿ ಬೇರೆಯಾಗಿಯೇ ಕಂಡವು. ಆ ದಿನ ಕಂಡ ಪ್ರತಿಯೊಂದು ಸ್ಥಳವನ್ನು ನೆನಪು ಮಾಡಿಕೊಳ್ಳುತ್ತಿದ್ದಂತೆ ಅವು ನಾನು ತಿಳಿದ್ದಕ್ಕಿಂತ ಸುಂದರವಾಗಿ ಕಂಡವು. ಕೈಕಾಲುಗಳು ವಿಪರೀತ ದಣಿದಿದ್ದರೂ ಮನಸ್ಸು ಉಲ್ಲಸಿತವಾಗಿತ್ತು. ಈ ವರ್ಣಮಯ ರಾಜಸ್ಥಾನದಲ್ಲಿ ವೈವಾಹಿಕ ಜೀವನ ಪ್ರಾರಂಭಿಸುವ ಸುಯೋಗ ಒದಗಿದ್ದಕ್ಕಾಗಿ ಹೆಮ್ಮೆ ಎನಿಸಿತು, ಜೋಬನೇರ ಬಂದಾಗಲೇ ಕನಸಿನ ಲೋಕದಿಂದ ಇಹಲೋಕಕ್ಕೆ ಬಂದಂತಾಯಿತು.

---

* ಪೇರಲ, ಕಿತ್ತಳ; ಬಾಳೆಹಣ್ಣಿನ ತೆಳ್ಳಗಿನ ತೊಳೆಗಳನ್ನು, ನೀರಿನಲ್ಲಿ ನೆನೆ ಹಾಕಿದ ವಡೆಗಳನ್ನು ಮೊಸರು, ಬೆಲ್ಲ, ಹುಳಿ, ಮೆಣಸಿನ ಪುಡಿ, ಮಸಾಲೆಗಳೊಂದಿಗೆ ಸೇರಿಸಿದ ತಿಂಡಿ. ಬೆಂಗಳೂರಿನಲ್ಲಿ ಪರಿಚಿತ

೧೨. ವಿವಾಹ

ಹಲವಾರು ದಿನಗಳಿಂದ ಭುತಿಯಾರ ಮನೆಯಮುಂದೆ ವಾದ್ಯಗಳು ಮೊಳಗುತ್ತಲೇ ಇದ್ದವು. ರಸ್ತೆಯ ಅಂಚಿನಲ್ಲಿ 'ತಕ್ತಾ' ಇಟ್ಟು ಅದರ ಮೇಲೆ ಮೇಲು ಮುಖದ ಎರಡು ಢೋಲುಳನ್ನಿಟ್ಟು ಟಮ್ ಟಮ್ ಟಮಕ್ ಎಂದು ಒಂದೇ ನಾದದಿಂದ ಢೋಲಿನವ ಮುಂಜಾನೆ ಒಂದು ತಾಸು ಸಂಜೆ ಒಂದು ತಾಸು ಬಂದು ಬಾರಿಸಿ ಹೋಗುತ್ತಿದ್ದ. ಭಟ್ಟಂಗಿಗಳು ಜಯಜಯಕಾರ, ದರಬಾರಕ್ಕೆ ರಾಜ-ಮಹಾರಾಜರು ಬರುವ ಮುನ್ಸೂಚನೆ ಆಗಿದ್ದಂತೆ, ಈ, ವಾದ್ಯ ಶುಭ ಕಾರ್ಯಗಳಿಗೆ ಮುನ್ಸೂಚನೆಯಂತೆ. ಇದನ್ನು ಕೇಳಿದ ಪರಿಸರದವರು, ಯಾರ ಮನೆಯಲ್ಲಿ ಏನಿದೆ? ಯಾರ ಮದುವೆ ಯಾರೊಡನೆ ನಿಶ್ಚಯವಾಗಿದೆ? ಎಂದು ವಿಚಾರಿಸುವರು. ಮದುವೆಯ ಮನೆಯ ಮಹಿಳೆಯರು ಕೆಂಪು,* ಕೇಸರಿ, ಹಳದಿ ಬಣ್ಣದ ಹೊಸ ಬಟ್ಟೆಗಳನ್ನು ಧರಿಸಿ, ಬೆಳ್ಳಿ, ಕಂಚು, ಹಿತ್ತಾಳೆಯ ಆಕರ್ಷಣೀಯ ತಾಟಗಳಲ್ಲಿ ಮೋತಿ ಚೂರು, ಬೂಂದಿ ಉಂಡೆ, ಗಟ್ಟಿ ಬೆಲ್ಲಗಳನ್ನು ಇಟ್ಟು, ಕೈಯಿಂದ ಕಸೂತಿ ಮಾಡಿದ, ಹೂವು ಹೆಣೆದ ವಸ್ತ್ರಗಳನ್ನು ಮುಚ್ಚಿ, ಒಂದೇ ರಾಗದಿಂದ ಎಲ್ಲರೂ ಹಾಡುತ್ತ ಅಕ್ಕಪಕ್ಕದ ಮನೆಯವರಿಗೆಲ್ಲ ಶುಭ ಸಮಾಚಾರ ಸಾರುತ್ತ, ಆಮಂತ್ರಣ ನೀಡುತ್ತ ಹೋಗುವರು. ಭೆಟ್ಟಿಯಾದಾಗ ಕಿರಿಯರು ಹಿರಿಯ ಹೆಂಗಳೆಯರ ಕಾಲುಗಳನ್ನು ಒಂದು ನಿಮಿಷ ಮೃದುವಾಗಿ ಅದುಮಿ ಗೌರವ ತೋರುವರು. ಕೆಲವು ಹಿರಿಯರು ಸಾಕೆಂದು ಕಿರಿಯರನ್ನು ಎಬ್ಬಿಸಿ ಆಶೀರ್ವದಿಸಿದರೆ ಉಳಿದವರು ಇದೇ ಸಂಧಿ ಎಂದು ಕಾಲಿನ ವಾತ ಹೋಗುವ ತನಕ ಸೇವೆ ಮಾಡಿಸಿಕೊಳ್ಳುವದುಂಟು! ಸಂಜೆಯಾದೊಡನೆ ಎಲ್ಲರೂ ಊಟವನ್ನು ಮುಗಿಸಿ ಮದುವೆಯ ಮನೆಯ ಅಂಗಳದಲ್ಲಿ ಸೇರಿ 'ಢೋಲಕ್' (ಸಣ್ಣ ಡೋಳು) ಬಾರಿಸುತ್ತ ಹಾಡುತ್ತಾರೆ, ಹಳಬರು ರಜಪೂತ ರಮಣಿಯರ ಸೌಂದರ್ಯ, ಶೌರ್ಯ, ತ್ಯಾಗ, ಪುರುಷರ ಕೆಚ್ಚೆದೆ, ಆದರ್ಶಗಳ ಕುರಿತಾದ ಜಾನಪದ ಗೀತಗಳನ್ನು ಹಾಡಿದರೆ ಆಧುನಿಕ ಹುಡುಗಿಯರು ಹಿಂದಿ ಸಿನಿಮಾ ಧಾಟಿಗೆ ಜೋಡಿಸಿದ

---

* ಉತ್ತರ ಭಾರತದಲ್ಲಿ ಕೆಂಪು ಬಣ್ಣ ಶುಭ ಸೂಚಕ, ವಧುವಿಗೆ ಹೆಚ್ಚಾಗಿ ಜರತಾರಿಯ ಕೆಂಪು ಸೀರೆ ಉಡಿಸುತ್ತಾರೆ.

ಪ್ರೇಮಗೀತಗಳನ್ನು ಹಾಡುವರು. ಮೊದಮೊದಲು ತಾಸರ್ಧ ತಾಸು ನಡೆಯುವ ಈ ಹಾಡುಗಳ ಬೈಠಕು ಮದುವೆಯ ದಿನಗಳು ಹತ್ತಿರ ಬಂದಂತೆ ಮೂರು - ನಾಲ್ಕು ತಾಸುಗಳವರೆಗೂ ನಡೆಯುತ್ತದೆ. ನೆಂಟರು ದೂರದೂರದ ಊರುಗಳಿಂದ ಬಂದು ಸೇರಲಾರಂಭಿಸಿ ಅವರವರಲ್ಲಿ ಹಾಡಿನ ಸ್ಪರ್ಧೆಗಳಾಗುತ್ತವೆ. ಅಂತಹ ಸಮಯದಲ್ಲಿ ಉತ್ಸಾಹಿ ತರುಣಿಯರು ಎದ್ದು ಹಾವಭಾವಗಳೊಂದಿಗೆ ನರ್ತನ ಪ್ರಾರಂಭಿಸುತ್ತಾರೆ. ಅವರ ಜಾನಪದ ಹಾಡುಗಳೂ ಮೋಜಾಗಿರುತ್ತವೆ. ಅವರ ಜಾನಪದ ಹಾಡಗಳೂ ಮೋಜಾಗಿರುತ್ತವೆ. ಮದುಮಗಳು ಸೊಂಟದ ಮೇಲೆ, ತಲೆಯ ಮೇಲೆ ಮಡಕೆಗಳನ್ನು ಇಟ್ಟು ನಾಚುತ್ತ, ಬಳಕುತ್ತ ನೀರಿಗೆ ಹೊರಡುತ್ತಾಳೆ. ಆಗ ಮದುಮಗನು ದೂರದಿಂದ ಸಿಳ್ಳು ಹಾಕುತ್ತಾನೆ. ಅವಳು ಅಂಜಿ ವೇಗವಾಗಿ ಕಾಲು ಹಾಕುತ್ತಾಳೆ. ಅವನು ತನನ್ನು ಹಿಂಬಾಲಿಸುತ್ತಿರುವನೋನೋ ಎಂದು ನವಿಲಿನಂತೆ ಅತ್ತ ಇತ್ತ ನೋಡಿ ಯಾರೂ ಇಲ್ಲವೆಂದು ಖಚಿತ ಪಡಿಸಿಕೊಂಡು ಬಾಗಿ ತೂಗಿ ನೀರನ್ನು ಸೇದುವಳು. ಕೊಡವನ್ನು ತಲೆಯ ಮೇಲೆ ಎತ್ತಲು ಸನಿಹದಲ್ಲಿ ಯಾರೂ ಇಲ್ಲದಾಗ ಬೇವಿನ ಮರದ ಹತ್ತಿರ ಸಪ್ಪಳವಾಗಿ ತಿರುಗಿ ನೋಡಿದರೆ, ಕುಡಿಮೀಸೆಯ ಮದುಮಗ ನಗುತ್ತ ತಾನು ಕೊಡ ಹೊರಿಸಲೇ? ಎಂದು ಕೇಳುತ್ತಾನೆ. ಹೂಂ ಎನ್ನುವ ಧೈರ್ಯ ಇಲ್ಲದೇ ಬೇಡ ಎನ್ನಲಾಗದೇ ಆಕೆ ಅನುಮಾನಿಸುತ್ತ ನಿಂತಾಗ, ಅವನ ಬಲಿಷ್ಠ ತೋಳುಗಳು ಮಣ್ಣಿನ ಕೊಡಗಳನ್ನು ತಲೆಯ ಮೇಲೆ ಹೊರಿಸಿಯೇ ಬಿಡುತ್ತವೆ. ಆಗ ಇಬ್ಬರ ಹಸ್ತ ಸ್ಪರ್ಶವಾಗಿ ತರುಣಿಯ ಕೈ ನಡುಗಿ ಕೊಡವೊಂದು ಉರುಳಿ ಬಿದ್ದು ಒಡೆದು ಹೋಗುತ್ತದೆ. ಅಡಗಿನಿಂತು ತಮಾಷೆ ನೋಡುತ್ತಿರುವ ಸಖಿಯರೆಲ್ಲ ಗೊಳ್ಳೆಂದು ನಗುತ್ತಾರೆ..........................ಇದನ್ನು ಹಾಡಿ, ನರ್ತಿಸಿ ತೋರಿಸುವಾಗ ಒಬ್ಬಳು ವಧುವಾದರೆ, ಇನ್ನೊಬ್ಬಳು ಮೀಸೆ ಇಲ್ಲದ ವರನಾಗುತ್ತಾಳೆ. ಸುತ್ತಲೂ ಕುಳಿತವರೆಲ್ಲ ಸಖಿಯರಾಗುತ್ತಾರೆ. ಇಂಥ ಸನ್ನಿವೇಶಗಳಲ್ಲಿ ಹಳಬರಿಗೆಲ್ಲ ತಮ್ಮ ಬಾಲ್ಯದ ದಿನಗಳು ನೆನಪಾಗಿ ತಾವೂ ಎದ್ದು ನರ್ತಿಸಿದಾಗ ಎಲ್ಲರೂ ಹೊಟ್ಟೆ ಬಿರಿಯುವಂತೆ ನಗುತ್ತಾರೆ! ಎಲ್ಲೋ ಮೂಲೆಯಲ್ಲಿ ನಿಂತು ಈ ತಮಾಷೆ ಕದ್ದು ನೋಡುವಂಥವರೂ ನಗುತ್ತಾರೆ. ಈ ಹಾಡು ನೃತ್ಯದ ಕಾರ್ಯಕ್ರಮಗಳೆಲ್ಲ ಕೇವಲ ಹೆಂಗಳೆಯರಿಗೆ ಮೀಸಲು.

ಮದುಮಗಳಿಗೆ ಬೇಕಾಗುವ ಬಟ್ಟೆಗಳನ್ನೆಲ್ಲ ಗೆಳತಿಯರೆಲ್ಲ ಕೂಡಿ ಬಣ್ಣ ಹಾಕಿಸಿ, ಅದಕ್ಕೆ ಯಾವ ಬಗೆಯ ಜರಿಯ ಕಸೂತಿ (ಗೋಟಾ)ಯ ಕೆಲಸಬೇಕೆಂದು ಚರ್ಚಿಸುತ್ತಾರೆ. ನಂತರ ಬಿಡುವಿನ ಸಮಯದಲ್ಲಿ ವಿವಾಹಿತ, ಅವಿವಾಹಿತ ಗೆಳತಿಯರೆಲ್ಲ ಬಿಸಿಲು ಮಹಡಿಯ ಮೇಲೆ ಕುಳಿತು ಒಬ್ಬೊಬ್ಬರು ಒಂದೊಂದು ಬಗೆಯ ನಕ್ಷೆಗಳನ್ನು ಬಟ್ಟೆಗಳನ್ನು ಮೇಲೆ ಬಿಡಿಸುವರು. ಝುರಿಯಿಂದ ಹೆಣೆಯುವರು. ಮೊದಲು ಮುಗಿಸಿದವರು ಹಿಂದೆ ಬಿದ್ದವರಿಗೆ ಸಹಾಯ ಮಾಡುವರು. ಕೈಗಳು ಕೆಲಸ

ಮಾಡುವಗ ಬಾಯಿಗಳು ಹರಟುತ್ತಿರುತ್ತವೆ. ವಿವಾಹಿತರು ಮದುವೆಯ ಕಾಲದಲ್ಲಿ ತಮಗಾದ ಫಜೀತಿ, ಆನಂದಗಳನ್ನು ಬಣ್ಣಿಸುವಾಗ ಇತರರು ಬಾಯಿತೆರೆದು ಕೇಳುವರು, ಸೊನಗಾರನು ಮನೆಗೇ ಬಂದು ಬೇಕಾದ ಒಡವೆಗಳನ್ನು ಮಾಡಿಕೊಡುವನು. ಮಾಲಕರಿ ಬಂದು ಮಿಠಾಯಿಗಳ ತಯಾರಿಗೆ ತೊಡಗುವನು. ಗೆಳತಿಯರೆಲ್ಲ ಮದರಂಗಿ (ಮೆಹಂದಿ) ಹಿಟ್ಟನ್ನು ನೀರಿನಲ್ಲಿ ಕಲಿಸಿ, ಸೂಜಿಯಿಂದ ಮದುವಣಗಿತ್ತಿಯ ಕೈಕಾಲುಗಳ ಮೇಲೆ ಸುಂದರವಾದ ನಕ್ಷೆಗಳನ್ನು ಬಿಡಿಸುವರು. ಈ ಕಲೆಯಲ್ಲಿಯೇ ಪರಿಣತರಾದ ಹೆಂಗಳೆಯರಿದ್ದರೆ. ಮೆಹಂದಿ ಬಳಿದುಕೊಂಡ ಕೈಗಳು ಎಲ್ಲಿಯೂ ತಾಗದಂತೆ ಕಜ್ಜಿಯಾದವರಂತೆ ಎತ್ತಿಹಿಡಿದು ಓಡಿಯಾಡುವದು ಮೋಜೆನಿಸುತ್ತದೆ. ಸಂಪೂರ್ಣವಾಗಿ ಒಣಗಿದ ನಂತರ ಹುಡಿಯನ್ನು ಝಾಡಿಸಿದರೆ ಗುಲಾಬಿ ಬಣ್ಣದ ನಕ್ಷೆಗಳು, ಎಷ್ಟೋ ಕಾಲದರೆಗೆ ಅಚ್ಚಳಿಯದೇ ಉಳಿಯುತ್ತವೆ. ಮೆಹಂದಿ ಬಳಿಯುವವರ ಕೈಗಳೂ ವರ್ಣಮಯವಾಗಿರುತ್ತವೆ.*

ಮಾರವಾಡಿಗಳಾಗಲಿ, ರಾಜಸ್ಥಾನಿಗಳಾಗಲೀ, ಉಳಿದ ದಿನ ಎಷ್ಟೇ ಕೃಪಣತೆ ತೋರಿಸಿದರೂ ಮದುವೆಯ ಕಾಲದಲ್ಲಿ ಧಾರಾಳವಾಗಿ ಖರ್ಚು ಮಾಡುವರು. ವಿವಾಹಕ್ಕೆ ಹೆಚ್ಚಿನ ಮಹತ್ವ ಕೊಡುವದರಿಂದ ದೇಶದ ತುಂಬ ಹರಡಿಕೊಂಡ ಆಪ್ತರೆಲ್ಲ ಬರುವದು ವಾಡಿಕೆ. ಧನಿಕರ ಮನೆಯ ವಿವಾಹದ ಕಾಲದಲ್ಲಿ ಜೋಬನೇರದ ರಸ್ತೆಗಳೆಲ್ಲ ಕಾರುಗಳಿಂದ ತುಂಬಿಹೋಗಿರುತ್ತವೆ. ಬಹಳ ವರ್ಷ ಪಟ್ಟಣಗಳಲ್ಲಿ ವಾಸವಾಗಿದ್ದವರಿಗೆ ಜೋಬನೇರದ ಕಕ್ಕಸುಗಳು, ಸ್ನಾನದ ಪದ್ಧತಿಗಳು ಸರಿಹೋಗದ್ದರಿಂದ ಜಯಪುರದ ಆಪ್ತರಲ್ಲೋ ಹೋಟೆಲಿನಲ್ಲೊ ಇಳಿದುಕೊಂಡು ದಿನವಿಡೀ ಮದುವೆಯ ಮನೆಯಲ್ಲಿ ಕಳೆದು ಮಲಗಲು ಮತ್ತೆ ಜಯಪುರಕ್ಕೆ ಹೊರಡುವರು. ಮಧ್ಯಮ ವರ್ಗದವರು ಅಂಗಡಿಗಳಲ್ಲಿ ಹಾಸಿದ ಗಾದಿಗಳ ಮೇಲೆ ರಾತ್ರಿಯನ್ನು ಕಳೆಯುವರು. ಮಾರವಾಡಿಗಳ (ರಾಜಸ್ಥಾನಿಗಳ) ಅಂಗಡಿ, ಮನೆಗಳು ಒಂದೇ ಕಟ್ಟಡದಲ್ಲಿ ಇರಬೇಕು, ಮತ್ತು ಅವರು ಎಂದೂ ನೌಕರಿ ಸೇರುವುದಿಲ್ಲ! ಎಂದು ಸಾಮಾನ್ಯ ನಂಬುಗೆಯಿದೆ. ಆದರೆ ತಮ್ಮ ರಾಜ್ಯದಲ್ಲಿಯೇ ಉಳಿದುಕೊಂಡ ರಾಜಸ್ಥಾನಿಗಳಿಗೆ ಇದು ಅನ್ವಯಿಸುವುದಿಲ್ಲ. ಬೇರೆ ಬೇರೆ ರಾಜ್ಯಗಳಿಗೆ ಹೋಗುವವರು ಹೆಚ್ಚಾಗಿ ವ್ಯಾಪಾರಿಗಳು ಇರುವುದರಿಂದ ಮತ್ತು ಅಲ್ಲಿ ಅವರ ಸಂರಕ್ಷಿತತೆಗಾಗಿ ಅಂಗಡಿಗೆ ಹೊಂದಿಯೇ ಮನೆ ಅಥವಾ ಮನೆಯಲ್ಲಿಯೇ ಅಂಗಡಿಗಳನ್ನು ಮಾಡುವದರಿಂದ ಈ ನಂಬಿಕೆ ಬೆಳೆದು ಬಂದಿರಬೇಕು. ಚಿತ್ತೋಡದ ರಾಣಿ ಪದ್ಮಿನಿಯ ಪ್ರತಿಬಿಂಬವನ್ನು ನೋಡಿದ ಅಲ್ಲಾವುದ್ದೀನ್ ಖಿಲಜಿಯ ಭಾಗ್ಯವೂ

---

* ಉತ್ತರದ ಕೆಲವೇ ಪ್ರದೇಶಗಳಿಗೆ ಸೀಮಿತವಾದ ಮೆಹಂದಿ ಅಲಂಕಾರಕ್ಕೆ ಈಗ ಅಖಿಲ ಭಾರತ ವ್ಯಾಪ್ತಿ ದೊರೆತಿದೆ.

ನನ್ನಗಿಲ್ಲದಾಯಿತು! ಪದ್ಮಿನಿಯ ನಾಡಿನವರನ್ನಾದರು ನೋಡಿ ಅವಳು ಹೇಗಿದ್ದಿರಬಹುದೆಂದು ಕಲ್ಪಿಸೋಣವೆಂದರೆ ಪುರುಷನ್ನು ನೋಡಿದೊಡನೆ ಇವರ ಓಢಣಿ ಫಕ್ಕನೆ ಮುಖವನ್ನು ಮುಚ್ಚಿಯೇ ಬಿಡುವುದರಿಂದ ಸಾಧ್ಯವಾಗದ ಮಾತು. ರಾಜಸ್ಥಾನಿ ನಾರಿಯರು ತಮ್ಮ ಆಯುಷ್ಯದ ಕಾಲು ಭಾಗವನ್ನು ನೀರು ಹೊರುವದರಲ್ಲಿಯೂ ಇನ್ನೊಂದು ಕಾಲುಭಾಗವನ್ನು ಮುಸುಕನ್ನು ಮುಖದ ಮೇಲೆ ಎಳೆದುಕೊಂಡು ಹಿಂದೆ ಸರಿಸುವುದರಲ್ಲಿಯೂ ಕಳೆಯುತ್ತಿರಬಹುದೆಂದು ನನ್ನ ಲೆಕ್ಕಚಾರ! ಭೂತಿಯಾನ ಮನೆಯ ವಿವಾಹ ಕಾಲದಲ್ಲಿ ಅವರ ರೂಪರಾಶಿಯ ಅಳತೆ ಹಚ್ಚುವ ಸಂದರ್ಭಸಿಗಬಹುದೆಂದು ಗೆಲುವಾಗಿದ್ದೆ. ಮದುವೆಗೆ ಇನ್ನೂ ಮೂರು ದಿನಗಳಿರಬೇಕಾದರೆ ಬಹಳಷ್ಟು ಹೆಂಗೆಳೆಯರು ಮದುವೆಯ ಮನೆಯ ಒಳಗೂ ಹೊರಗೂ ಓಡಾಡಲಾರಂಭಿಸಿದರು. ತಮ್ಮ ಪಾದರಕ್ಷೆಗಳನ್ನೆಲ್ಲ ರಸ್ತೆಯ ಅಂಚಿನಲ್ಲಿಯೇ ಇಟ್ಟು ಹೋಗುವುದರಿಂದ ಅಲ್ಲಿ ಅವುಗಳ ಸಂತೆಯೇ ಕೂಡಿತ್ತು. ಸಾಮಾನ್ಯ ವರ್ಗದವರಲ್ಲಿ ಪಾದತ್ರಾಣಗಳು ವಿಜೋಡಿಯಾಗಿರುವದೇ ಹೆಚ್ಚು. ಒಂದು ಕಾಲಿನದು ಕೆಂಪು ಇದ್ದರೆ ಇನೊಂದು ಕಾಲಿನದು ಹಸಿರು, ಎಡದ ಚಪ್ಪಲು ಹೊಸದು ಇದ್ದರೆ ಬಲದ್ದು ತೀರ ಹಳೆಯದು. ಕೆಲವರು ಒಂದು ಕಾಲಿಗೆ ಚಪ್ಪಲು ಇನ್ನೊಂದು ಕಾಲಿಗೆ ಬೂಟು ಧರಿಸಿ ಹಳ್ಳಿಯಿಂದ ಬಂದವರಿದ್ದರು! ಇದೇ ಮಾತು ಪುರುಷರ ಪಾದರಕ್ಷೆಗಳಿಗೂ ಅನ್ವಯಿಸುತ್ತದೆ.

ಚಪ್ಪರದ ಬದಿಯಲ್ಲಿ ನೆಲದಲ್ಲಿ ದೊಡ್ಡ ಕುಣಿ ತೆಗೆದು ಅದರ ಮೇಲೆ ಕಬ್ಬಿನ ಹಾಲನ್ನು ಕಾಯಿಸಲು ಉಪಯೋಗಿಸುವಂತಹ ಕೊಪ್ಪರಗಿಯನ್ನು ಏರಿಸಿ ಅದರಲ್ಲಿ ಎಳ್ಳೆಣ್ಣೆ ಸುರಿದರು. ಧಗಧಗ ಬೆಂಕಿಯನ್ನು ಉರಿಸಿದರು. ನೆರೆಹೊರೆಯವರಿಂದ ತಂದ ಬೇಲಣ (ಲಟ್ಟಣಿಗೆ)ಗಳನ್ನು ಹಿಡಿದು ಹೆಂಗಸರೆಲ್ಲ ಪೂಡಿ (ಪೂರಿ) ಲಟ್ಟಿಸಲಾರಂಭಿಸಿದರು, ಊರ ಸುದ್ದಿಗಳನ್ನು ಮಾತಾಡುತ್ತಿದ್ದಂತೆ ಲಟ್ಟಣಿಗೆಗಳು ಚಲಿಸುತ್ತಿದ್ದವು. ಓಢಣಿಗಳು ಹಿಂದಕ್ಕೆ ಸರಿಯಲಾರಂಭಿಸಿದವು. ಒಬ್ಬಳು ವಜ್ರದ ಮೂಗುತಿಯನ್ನು ಧರಿಸಿದರೆ ಇನ್ನೊಬ್ಬಳು ಬಂಗಾರದ ಉಂಗುರವನ್ನೇ ಮೂಗಿಗೆ ಹಾಕಿಕೊಂಡಿದ್ದಳು. ಅಯ್ಯೋ! ಪದ್ಮಿನಿಯ ಪ್ರತಿರೂಪವನ್ನು ನಿರೀಕ್ಷಿಸಿದವನಿಗೆ ಎಂತಹ ನಿರಾಸೆ! ಅವರಲ್ಲಿ ಒಬ್ಬಳಿಗಾದರೂ ಇನ್ನೊಮ್ಮೆ ನೋಡುವ ಸೌಂದರ್ಯವಿರಲಿಲ್ಲ. ಅವರು ಮುಖವನ್ನು ಮರೆಮಾಡಿ ಹೋಗುತ್ತಿರುವುದರಿಂದಲೇ ದೈನಂದಿನ ಕೆಲಸಗಳೆಲ್ಲ ಸುಸೂತ್ರವಾಗಿ ನಡೆಯುತ್ತಿರಬೇಕು ಎನಿಸಿತು. ಇನ್ನೊಮ್ಮೆ ಕದ್ದು ಅವರ ಮುಖದರ್ಶನ ಮಾಡುವ ಸಾಹಸವನ್ನು ಎಂದೂ ಮಾಡಲಿಲ್ಲ.

ಸೂರ್ಯನು ಪಶ್ಚಿಮಕ್ಕಿಳಿಯುತ್ತಿದ್ದಂತೆ ನೆರೆಹೊರೆಯವರು, ಮಕ್ಕಳು, ಮರಿಮಕ್ಕಳೊಂದಿಗೆ ವಿವಾಹಗೃಹಕ್ಕೆ ಬರಲಾರಂಭಿಸಿದರು. ಉಪ್ಪರಿಗೆ ಮೇಲೆ

ಜಮಖಾನಗಳನ್ನು ಹಾಸಿ ತಮ್ಮ ತಮ್ಮ ಸ್ಥಾನಗಳನ್ನು ಕಾದಿರಿಸಿದರು. ಸ್ವಯಂಸೇವಕರು ಪ್ರತಿಯೊಬ್ಬರ ಮುಂದೆಯೂ ಪತ್ರಾವಳಿಗಳನ್ನು ಇಡುತ್ತ ಹೋದರು. ಇನ್ನೊಬ್ಬನು ಅತಿಥಿಗಳು ತಮ್ಮೊಂದಿಗೆ ತಂದ ಲೋಟದಾಲ್ಲಿ ನೀರು ಸುರುವಿದ. ಕೊಂಚ ಆಲೂ ಮಟರ, ಒಂದೊಂದು ಪೂರಿಯನ್ನು ಪತ್ರಾವಳಿಯು ಬದಿಗೆ ಬಡಿಸಿದರು. ನಂತರ ಜಿಲೇಬಿ, ಬೂಂದಿಲಾಡು, ಮೈಸೂರು ಪಾಕು, ಬರ್ಫಿ, ಮೊದಲಾದ ಮಿಠಾಯಿಗಳನ್ನು ಎಲೆ ತುಂಬ ಬಡಿಸಿದರು. ಇಷ್ಟೊಂದು ಪ್ರಮಾಣದಲ್ಲಿ ಮಿಠಾಯಿಗಳು ತಿನ್ನಲು ಸಿಗುವ ಅವಕಾಶ ಕಡಿಮೆಯಾದ್ದರಿಂದ ಎಲ್ಲರೂ ಹೊಟ್ಟೆ ತುಂಬ ತಿಂದರು. ಮೊದಲನೇ ಪಂಕ್ತಿಯವರು ಏಳುವ ಮೊದಲೇ ಎರಡನೇ ಪಂಕ್ತಿಯವರು ಸ್ಥಳ ಹಿಡಿಯಲು ಅವರ ಹಿಂದೆಯೇ ಬಂದು ನಿಂತುಬಿಟ್ಟಿದ್ದರು. ಎಂಜಲು ಪತ್ರಾವಳಿಗಳನ್ನೆಲ್ಲ ತುಂಬಿ ಉಪ್ಪರಿಗೆಯಿಂದ ರಸ್ತೆಯ ಮೇಲೆಯೇ ಒಗೆದು ಬಿಟ್ಟರು. ರಸ್ತೆಯನ ಅಂಚಿನಲ್ಲಿ ನಿಂತ ಹರಿಜನರು, ಸೂಕರ- ಶ್ವಾನಗಳಲ್ಲಿ ಬಿದ್ದ ಚೂರುಗಳಿಗಾಗಿ ಸ್ಪರ್ಧೆ ಪ್ರಾರಂಭವಾಯಿತು. ಆದರೆ ಮಾನವನಿಗೆ ನಾಯಿ, ನಾಯಿಗೆ ಹಂದಿಗಳು ಬೆದರಿ ದೂರ ನಿಂತು, ಸರಿದಿಗಾಗಿ ಕಾದವು. ಜನರು ಐದು - ಆರು ಪಂಕ್ತಿಗಳಲ್ಲಿ ಊಟ ಮಾಡುವದರಿಂದ ಮೊದಲನೇ ಪಂಕ್ತಿಯವರಿಗೆ ಸಿಕ್ಕ ಎಲ್ಲ ಮೀಠಾಯಿಗಳು ಕೊನೆಯವರಿಗೆ ಸಿಗುತ್ತವೆಂಬ ನಿಯಮವಿಲ್ಲ. ಮೂರು ನಾಲ್ಕು ದಿನ ಇಂತಹ ಊಟಗಳು ನಡೆದಿರುತ್ತವೆ.

ಮದುವೆಯ ದಿನ ಬೆಳಿಗ್ಗೆ ಹೆಂಗೆಳೆಯರು ಹೊಸ ಬಟ್ಟೆಗಳನ್ನು ಧರಿಸಿ ಅಲಂಕರಿಸಿದ ಹೊಸ ಮಡಕೆಗಳನ್ನು ಹೊತ್ತುಕೊಂಡು ಹಾಡುತ್ತ ಬಾವಿಗೆ ಹೋಗಿ ನೀರನ್ನು ತುಂಬಿ ತರುವರು. ಗೆಳತಿಯರೆಲ್ಲ ಕುಲುಕುಲು ನಗುತ್ತ ತಮಾಷೆ ಮಾಡುತ್ತ ಮದುಮಗಳನ್ನು ಸಿಂಗರಿಸುವರು. ದೂರದ ಊರಿನಿಂದ ಬಂದು ಬೇರೆ ಕಡೆಗೆ ಇಳಿದುಕೊಂಡ ಮದುಮಗನ ಕಡೆಯವರು ಒಳ್ಳೆಯ ಬಟ್ಟೆ ಧರಿಸಿ ಕೊರಳಿಗೊಂದೊಂದು ಹೂಮಾಲೆ ಧರಿಸುವರು. ಮದುಮಗನು ಹಳದಿ ಇಲ್ಲವೇ ಕೇಸರಿ ಬಣ್ಣದ ಜೋಧಪುರಿ ಕೋಟು ಧರಿಸಿ ಚೂಡಿದಾರ ತೊಟ್ಟು ತಲೆಗೆ ರುಮಾಲು ಸುತ್ತುವನು. ಸೊಂಟಕ್ಕೆ ಉದ್ದವಾದ ಖಡ್ಗವನ್ನು ಸಿಕ್ಕಿಸಿರುತ್ತಾನೆ. ಹೆಚ್ಚಿನ ಅಲಂಕಾರ ಮಾಡಿದ ಅಶ್ವವು ಅವನ ದಾರಿಕಾಯುತ್ತ ಹೊರಗೆ ನಿಂತಿರುತ್ತದೆ. ಹಿಲಾಲು ಹೊತ್ತವರು, ಗ್ಯಾಸಲಾಯಿಟದವರು, ಮಂಗಲವಾದ್ಯದವರು, ಜಯಪುರದಿಂದ ಕರೆಸಿದ ಬ್ಯಾಂಡಿನವರು ಎಲ್ಲರೂ ಸಿದ್ಧವಾದ ನಂತರ, ಮದುಮಗಳಿಗಾಗಿ ಗಂಡಿನ ಕಡೆಯವರು ತಂದ ಬಟ್ಟೆಬರೆ, ವಸ್ತು ಪಡವೆಗಳು, ಊರ ಜನರಿಗೆ ಎದ್ದು ಕಾಣುವಂತೆ ದೀಪದ ಬೆಳಕಿನಲ್ಲಿ ಹಿಡಿದಿರುತ್ತಾರೆ. ಅನಂತರ ಸ್ತ್ರೀವೇಷ ಧರಿಸಿದ ಪುರುಷರ ನೃತ್ಯಮೇಳ, ಮಧ್ಯದಲ್ಲಿ ಯವ್ವನದಲ್ಲಿ ಅದೀಗ ಪದಾರ್ಪಣ ಮಾಡುತ್ತಿರುವ ಮದುಮಗ, ಹಿಂದೆ

ಮಾಲಾಧಾರಿಗಳಾದ ಅವನ ಬಳಗವರು, ಹೊರಡುತ್ತಾರೆ. ಮೆರವಣಿಗೆಯ ಸಂಗಡ ಹೆಂಗೆಳೆಯರು ಹೊರಡುವ ವಾಡಿಕೆಯಿಲ್ಲ.

ಸಮವಸ್ತ್ರಧಾರಿ ಬ್ಯಾಂಡಿನವರು ಸಿನಿಮಾ ಗೀತವನ್ನು ನುಡಿಸುತ್ತಿದ್ದರೆ ಮಂಗಲವಾದ್ಯದವರು ರಾಜಸ್ಥಾನಿ ಗಿತೆಗಳ ಧಾಟಿಯನ್ನು ಬಾರಿಸುವರು. ಪ್ರತಿಸಾರೆ ಕೊಳಚೆಯ ಕಾಲುವೆ ಅಡ್ಡ ಬಂದಾಗೊಮ್ಮೆ ಮೆರವಣಿಗೆ ಐದು ನಿಮಿಷ ನಿಲ್ಲುವದು. ಆಗ ಮೇಳದವರು ನೃತ್ಯಪ್ರದರ್ಶನ ಮಾಡುವರು. ಕಿರಿದಾದ ರಸ್ತೆಯ ಅಂಚಿನಲ್ಲಿ ನಿಲ್ಲಲು ಸ್ಥಳವಿಲ್ಲದ್ದರಿಂದ ಊರ ಜನರೆಲ್ಲ ಉಪ್ಪರಿಗೆಗಳನ್ನೇರಿ ಮೆರವಣಿಗೆಯನ್ನು ನೋಡುವರು. ಆಗೊಮ್ಮೆ ಈಗೊಮ್ಮೆ ಆಪ್ತಮಿತ್ರರು ತಮ್ಮ ಯೋಗ್ಯತೆಗನುಸಾರವಾಗಿ ಒಂದರಿಂದ ಐದು ರೂಪಾಯಿಗಳ ನೋಟುಗಳಿಂದ ಮದುಮಗನ ದೃಷ್ಟಿ ತೆಗೆದು ಆ ನೋಟುಗಳನ್ನು ಹರಿಜನರಿಗೆ ಕೊಡುವರು. ಮದುವೆಮನೆ ಹತ್ತಿರ ಬಂದಾಗ ಮದ್ದು ಗುಂಡುಗಳು ಹಾರುವವು. ಹರಿಜನರು ಮೆರವಣಿಗೆಯನ್ನು ದಾರಿಗೆ ಅಡ್ಡಗಟ್ಟಿ ನಿಲ್ಲುವರು. ಯಜಮಾನರು ಕೊಟ್ಟ ಹಣ ಕಡಿಮೆಯಾಯಿತು ಎನ್ನುವರು. ಇನ್ನೂ ಕೊಡೋಣ! ಎಂದಾಗಲೇ ದಾರಿಯನ್ನು ಬಿಡುವರು. ಮದುಮಗನು ಕುದುರೆಯಿಂದ ಇಳಿದು ಮದುಮಗಳ ಕೊರಳಿಗೆ ಹಾರ ಹಾಕಿ ವಿಧಿವತ್ತಾಗಿ ವಿವಾಹವಾಗಿ ಮತ್ತೆ ಕುದುರೆಯೇರಿ ತನ್ನ ಶಿಬಿರಕ್ಕೆ ಮರಳುವನು, ಮದುಮಗಳಿಗೆ ಅವಳ ತಾಯ್ತಂದೆ, ಆಪ್ತೇಷ್ಟರು ಕೊಟ್ಟ ಉಡುಗೊರೆಗಳನ್ನೆಲ್ಲ ಒಂದು ಖೋಲಿಯಲ್ಲಿ ಇಟ್ಟು ಪ್ರದರ್ಶಿಸುವರು. ಅದರಲ್ಲಿ ಬಂಗಾರದ ಬಳೆ, ವಜ್ರದ ಮೂಗುತಿಯಿಂದ ಹಿಡಿದು, ವಿದ್ಯುತ್ ಪಂಕ, ಸ್ಟೀಲಿನ ಪಾತ್ರೆಗಳು, ಗೋದ್ರೇಜ ಕಪಾಟು, ಸೋಫಾ ಸೆಟ್ಟುಗಳೆಲ್ಲ ಬರುವವು. ವಿವಾಹದ ನಂತರ ಹೆಂಗೆಳೆಯರು ಹಾಡುತ್ತ ಮದುಮಗನ ಪರಿವಾರದವರನ್ನು ಊಟಕ್ಕೆ ಕರೆಯಲು ಹೋಗುವದು, ಎಲ್ಲರೂ ಹಾಡುತ್ತ ತಿರುಗಿ ಬರುವುದು ಪ್ರಾರಂಭವಾಗುತ್ತದೆ. ಮದುವೆಯ ಮರುದಿನ ಕಾಲೇಜಿನ ಶಿಕ್ಷಕ ವರ್ಗಕ್ಕೆ ಔತಣವಿತ್ತು. ನನ್ನಿಂದ ಮಿಠಾಯಿಗಳನ್ನೆಲ್ಲ ತಿನ್ನಲಾಗಲಿಲ್ಲ. ಪೂರಿ-ಪಲ್ಯ ಒಮ್ಮೆಯೇ ಬಂದದ್ದರಿಂದ ಊಟಕ್ಕೆ ಹೋಗಿ ಲಾಭವೇನೂ ಆಗಲಿಲ್ಲ. ಆನಂತರ ಬಂದ ಸಿಗರೇಟು-ಬೀಡಾಗಳೂ ನನ್ನ ಮಟ್ಟಿಗೆ ಪ್ರಯೋಜನಕಾರಿಯಾಗಲಿಲ್ಲ! ಮದುಮಗಳು ಅತ್ತೆಮನೆಯಲ್ಲಿ ಎರಡು ತಿಂಗಳು ಇದ್ದರೆ ತವರು ಮನೆಯಲ್ಲಿ ಮೂರು ತಿಂಗಳು ಇರುವಳು. ಪ್ರತಿಸಾರೆ ಪತಿಗೃಹಕ್ಕೆ ಹೋಗುವಾಗಲೂ ಹಾಡುತ್ತ ಹೋಗಿ ನೆರೆಹೊರೆಯವರಿಗೆ ಹೇಳಿಬರಬೇಕು. ಎಲ್ಲರೂ ಸೇರಿ ಕಣ್ಣೀರು ಹಾಕಬೇಕು. ಅಣ್ಣನು ತಂಗಿಯನ್ನು ಮುಟ್ಟಿಸಿ ಬರಬೇಕು. ಮದುಮಗಳು ಎಷ್ಟೇ ಚಿಕ್ಕವಳಿದ್ದರೂ ಮಾವನಿಗೆ ಪರ ಪುರುಷನಿಗೆ ಮುಖ ತೋರಿಸಬಾರದು. ಹೆಚ್ಚಿನ ಕನ್ಯೆಯರು ವಿವಾಹ ಕಾಲದಲ್ಲಿ ಪುಷ್ಪವತಿಯರಾಗಿರದ್ದರಿಂದ ಪತಿಯೊಡನೆ ಏಕಾಂತವಾಸದ ಮಾತು ದೂರವೇ ಉಳಿಯಿತು. ಅವನೊಡನೆ ಮಾತನಾಡುವ ಅವಕಾಶ ಸಿಗದ್ದರಿಂದ ಕಣ್ಣಿನ ಭಾಷೆ,

ಸಂಜ್ಞೆಗಳಿಂದಲೇ ಮಾತನಾಡುವಂತೆ ಆಗುತ್ತದೆ. ಪತ್ನಿ ದೊಡ್ಡವಳಾದಾಗ ಮತ್ತೆ ಸಮಾರಂಭಗಳು ಏರ್ಪಡುತ್ತವೆ. ಗರ್ಭಿಣಿಯಾದಾಗ, ಪ್ರಸೂತಿಯಾದಾಗ ಎಲ್ಲದಕ್ಕೂ ಸಮಯಾನುಸಾರವಾಗಿ ಹಾಡು-ಹಬ್ಬಗಳಿವೆ.

ಭುತಿಯಾರು ಮಗಳ ಮದುವೆಗೆ ೩೦ ಸಾವಿರ ರೂಪಾಯಿ ಖರ್ಚು ಮಾಡಿರಬೇಕು. ಬಡವರು ಇಷ್ಟೇ ವೈಭವದಿಂದ ಮದುವೆ ಮಾಡದಿದ್ದರೂ ತಮ್ಮ ಯೋಗ್ಯತೆ ಮೀರಿ ಸಾಲವನ್ನಾದರೂ ಮಾಡಿ ಖರ್ಚು ಮಾಡುವರು. ಪಿತೃಗಳ ಶ್ರಾದ್ಧಕ್ಕೂ ಮಿತಿಮೀರಿ ಖರ್ಚು ಮಾಡುವರು. ಊರಿನ ಬನಿಯಾ ಒಬ್ಬ ತನ್ನ ಹತ್ತು ಸಾವಿರ ರೂಪಾಯಿಯ ಆಸ್ತಿಯನ್ನು ತನ್ನ ಮೂವರು ಮಕ್ಕಳಿಗೆ ಬಿಟ್ಟು ತೀರಿಕೊಂಡ. ಹಿರಿಯ ಮಗನು ಒಂದೆರಡು ಸಾವಿರ ರೂಪಾಯಿಯಲ್ಲಿ ತಿಥಿ ಮುಗಿಸೋಣ ಅಂದದ್ದಕ್ಕೆ ಉಳಿದಿಬ್ಬರು ಕೆಂಡ ಕಾರುತ್ತ "ನಿನಗೆ ತಂದೆಯ ಮೇಲೆ ಪ್ರೀತಿ ಇಲ್ಲ. ಅವನು ಗಳಿಸಿದ ಹಣದ ಮೇಲಷ್ಟೇ ಮೋಹ. ನಿನ್ನಿಂದಾಗದಿದ್ದರೆ ನಾವು ವೈಭವದಿಂದ ಶ್ರಾದ್ಧ ಮಾಡಿಸುತ್ತೇವೆ" ಎಂದು ಹದಿಮೂರು ಸಾವಿರ ರೂಪಾಯಿ ವೆಚ್ಚಮಾಡಬೇಕೇ? ನನ್ನ ಮನೆಯ ಹತ್ತಿರ ಸಣ್ಣ ಗುಡಿಸಲು. ಅದರಲ್ಲಿದ್ದ ಹಣ್ಣು ಮುದುಕಿಗೆ ಮೆತ್ತಗಿನ ಬಾಜ್ರಾದ 'ಖೀಚಾ' (ಖಿಚಡಿ) ಕೂಡ ದೊರೆಯದೇ ನರಳುತ್ತಿದ್ದಳು. ಅವಳ ಮಗ ಬೆಳಿಗ್ಗೆ ಎದ್ದು ಕುದುರೆಯೇರಿ ದೂರದ ಹಳ್ಳಿಗಳಿಗೆ ಹೋಗಿ ಮೇವು ತಂದು ತನ್ನ ದನಕರುಗಳಿಗೆ ತಿನ್ನಿಸುವುದಷ್ಟೇ ಮಾಡುತ್ತಿದ್ದ. ಅವನ ನಾಲ್ಕು ಮಕ್ಕಳು ಕಾಲೇಜಿನಲ್ಲಿ ಸಿಪಾಯಿಯಾಗಿಯೋ, ದಿನಕೂಲಿ ಮಾಡಿಯೋ ಬದುಕುತ್ತಿದ್ದರು. ಕೊನೆಗೊಮ್ಮೆ ಆ ಮುದುಕಿ ಸತ್ತಾಗ, ಅವಳು ಬದುಕಿದ್ದಾಗ ಅವಳ ಆಹಾರ, ಔಷಧಿಗಾಗಿ ಮೂರು ರೂಪಾಯಿ ಖರ್ಚು ಮಾಡದ ಮಗ, ಮೊಮ್ಮಕ್ಕಳು ಸೇರಿ ಮೂರು ಸಾವಿರ ರೂಪಾಯಿಯ ಸಾಲ ತೆಗೆದು ಖರ್ಚು ಮಾಡಿ ಅವಳನ್ನು ಸ್ವರ್ಗಕ್ಕೆ ಕಳಿಸಿದರು!

ಇಲ್ಲಿಯ ಮದುವೆಯ ಸಡಗರ ನೋಡಿ ನಾನೂ ರಾಜಸ್ಥಾನಿ ಪದ್ಧತಿಯಲ್ಲಿ ವಿವಾಹವಾದರೆ ಹೇಗಿರುತ್ತದೆಂದು ಯೋಚಿಸಿಯೇ ರೋಮಾಂಚನವಾಯಿತು. ಗುಲಾಬಿವರ್ಣದ ಹದಿನೆಂಟು ಗಜದ ಪಗಡೀ ಸುತ್ತಿ ಅದಕ್ಕೆ ಝರಿಯಿಂದ ಮಾಡಿದ ತುರಾಯಿ ಹಚ್ಚಿಕೊಂಡಿದ್ದೇನೆ. ಬಿಗಿಯಾದ, ಹಳದಿವರ್ಣದ ಬಂದಿಯಾ 'ಅಂಗ ರಖಾ' ತೊಟ್ಟಿದ್ದೇನೆ. ಅದೇ ವರ್ಣದ ಚೂಡಿದಾರ ಪಾಯಜಾಮಾ ಧರಿಸಿದ್ದೇನೆ. ಸೊಂಟಕ್ಕೆ ಖಡ್ಗವನ್ನು ತೂಗ ಬಿಟ್ಟು ಕಾಲಿಗೆ ಮಖಮಲ್ಲಿನಲ್ಲಿ ಕಸೂತಿ ಮಾಡಿದ ರಾಜಸ್ಥಾನಿ ಮಾದರಿಯ ಶೂಸು ಧರಿಸಿ ಸುಂದರವಾದ ಬಿಳಿ ಕುದುರೆ ಹತ್ತಿ ಕುಳಿತಿದ್ದೇನೆ. ಯಶಸ್ಸು ಕೋರಿ ಆಪ್ತರು ಹಾಕಿದ ವಿವಿಧ ವರ್ಣದ ಬಟ್ಟೆಗಳಿಂದ ಹೋಳಿಯಾಡಿ ಬಂದವನಂತೆ ಅನ್ನಿಸುತ್ತದೆ. ನನ್ನ ವಧು ನಾಲವತ್ತು ಗಜದ ಸ್ಯಾಟಿನಿನ ಗಾಗರಾ (ಲಂಗ) ಧರಿಸಿದ್ದಾಳೆ

ಕನ್ನಡಿಗಳನ್ನು ಕೂಡಿಸಿ ಕಸೂತಿ ಮಾಡಿದ ಗೇಣಗಲದ 'ಕಂಚಲೀ' (ರವಕೆ) ತೊಟ್ಟಿದ್ದಾಳೆ. ಕೈಗೆ ತುಂಬ ಬಳೆಗಳು. ಕಾಲಲ್ಲಿ ಭಾರವಾದ ಪೈಜಣ (ಕಾಲಂದುಗೆ), ಸೊಂಟಕ್ಕೆ 'ಕರಧನಿ', ಬೈತಲೆಯಲ್ಲಿ 'ಬೋರ'; ಎರಡುವರೆ ಗಜದ ಪಾರದರ್ಶಕ ಬಟ್ಟೆಯ ಓಢಣೆಯಿಂದ ಅವಳ ಸೌಂದರ್ಯ ತೂರಿ ಹೊರಗೆ ಬರುತ್ತದೆ................ಇಂತಹ ಬಟ್ಟೆಗಳನ್ನು ಧರಿಸಿ ವಿವಾಹವಾದರೆ ನಮ್ಮ ಊರಿನವರಿಗೆಲ್ಲ ತಮಾಷೆಯಾಗಿ ಕಾಣಿಸಬಹುದು. ಇಂತಹ ಹೊಸ ವಿಚಾರಗಳು ಹಿರಿಯರಿಗೆ ಹೇಗೆ ಹಿಡಿಸಬೇಕು? ಹೋಗಲಿ ಇದು ಸಾಧ್ಯವಾಗದಿದ್ದರೆ ಪರವಾಯಿಲ್ಲ. ವಿವಾಹದ ನಂತರವಾದರೂ ರಾಜಸ್ಥಾನಿ ಬಟ್ಟೆ ಬರೆಗಳನ್ನು ಧರಿಸಿ ಭಾವಚಿತ್ರವನ್ನಾದರೂ ತೆಗೆದುಕೊಂಡೇ ತೀರಬೇಕೆಂಬ ಸಂಕಲ್ಪ ಮಾಡಿಕೊಂಡೆ.

* * *

ಜೀವನದಲ್ಲಿ ಒಮ್ಮೆಯೇ ವಿವಾಹವಾಗುವುದು ಇರುವುದರಿಂದ ಕೆಲಕಾಲ ನೌಕರಿ ಮಾಡಿ ನಾಲ್ಕು ಕಾಸು ಉಳಿಸಿಟ್ಟು ಒಂದು ತಿಂಗಳ ರಜೆ ಪಡೆದು ವೈಭವದಿಂದ ಮದುವೆಯಾಗಬೇಕು ಎಂದು ನನ್ನ ವಿಚಾರವಿದ್ದರೆ, ಉಳಿದವರೆಲ್ಲ ಆದಷ್ಟು ಬೇಗ ವಿವಾಹ ಮುಗಿಸಿ ಬಿಡಬೇಕೆಂಬ ಅಭಿಪ್ರಾಯದವರು. ಗೃಹಸ್ಥ ಜೀವನ ನಡೆಸುವ ಕನಸು ನನಗಿದ್ದಿಲ್ಲವೆಂದಲ್ಲ. ಆದರೆ ಜೋಬನೇರವನ್ನು ನೋಡಿ ನವ ವಧು ಓಡಿ ಹೋಗುವಂತಾಗಬಾರದು ಎಂದು ನನ್ನ ಯತ್ನವಾಗಿತ್ತು. ಈ ಅಳುಕನ್ನು ಅವರಾರಿಗೂ ತಿಳಿಸುವಂತೆ ಇಲ್ಲದ್ದರಿಂದ ನಾನೇ ಸೋಲಬೇಕಾಯಿತು. ರಜೆ ಸಿಗುವಂತಿದ್ದರೆ ಮಾತ್ರ ನಿಶ್ಚಯ ತಾಂಬೂಲ ಮಾಡಬಹುದೆಂದು ಪತ್ರ ಬಂದದ್ದರಿಂದ ಬಿ.ಪಿ.ಯವರಿಗೆ ಎಲ್ಲ ವಿವರಗಳನ್ನು ಹೇಳಬೇಕಾಯಿತು. ಅವರು ಹೆಚ್ಚಿನ ರಸಿಕರಿದ್ದುದರಿಂದ ನಿನ್ನ ಕೈ ಹಿಡಿಯುವವಳು ಹೇಗಿದ್ದಾಳೆ? ಎಷ್ಟು ಕಲಿತಿದ್ದಾಳೆ? ಏನು ಮಾಡುತ್ತಿದ್ದಾಳೆ? ಎಂದೆಲ್ಲ ನೂರು ಪ್ರಶ್ನೆಗಳನ್ನು ತೂರಿದರು. 'ಅವಳಿಗೆ' ಮಾರುದ್ದ ಜಡೆಗಳಿವೆ. ನೌಕರಿ ಮಾಡುತ್ತಿದ್ದಾಳೆ ಎಂದು ತಿಳಿದುಕೊಂಡು ಪತ್ನಿಯನ್ನು ತರಾಟೆಗೆ ತೆಗೆದುಕೊಂಡರು. "ಎಮ್. ಎ. ಪಾಸು ಮಾಡಿದ್ದಕ್ಕೆ ಏನಾದರೂ ಮಾಡು. ಶಾಲೆಯಲ್ಲಿ ಕಲಿಸು, ಏನಿಲ್ಲೆಂದರೆ, ಮಕ್ಕಳಿಗಾದರೂ ಕಲಿಸೆಂದರೆ ಹೊಟ್ಟೆ ತುಂಬ ಊಟ ಮಾಡಿ ಕಣ್ಣು ತುಂಬ ನಿದ್ರೆ ಮಾಡುತ್ತಾಳೆ. ಉದ್ದ ಜಡೆಗಳೊಡನೆ ಆಡಬೇಕೆಂದು ಬಾಲ್ಯದಿಂದಲೂ ಕನಸು. ಆದರೆ ನನ್ನ ಪಾಲಿಗೆ ಗೇಣುದ್ದ ಜಡೆಯ ಲಕ್ಷ್ಮಿಯೇ ಬಂದಳು" ಎಂದು ಕುಹಕವಾಡಿದಾಗ ಲಕ್ಷ್ಮಿ 'ನಿಮ್ಮ ಹಳೆಯ ರಿಕಾರ್ಡು ಸಾಕು. ಅವರಿಗೆ ಮಿಠಾಯಿ ಕೊಡಲು ಹೇಳಿ' ಎಂದು ಒಳಗೆ ಹೋಗಿ ತಾನೇ ಬರ್ಫಿ ತಂದು ನಮಗೆ ತಿನಿಸಿದಳು.

ಬಿ.ಪಿ.ಯವರಿಗೆ ತಮಗೆ ಗೊತ್ತಿದ್ದ ಸಮಾಚಾರವನ್ನು ಎಲ್ಲರಿಗೂ ಹೇಳುತ್ತ ತಿರುಗುವ ಹವ್ಯಾಸ. ಅಂತೆಯೇ ಸಣ್ಣ ಊರಿನಲ್ಲಿ ವಿವಾಹದ ಸಮಾಚಾರ ಬಲುಬೇಗ

ಹರಡಿತು. ಎಲ್ಲರೂ ಸಿಕ್ಕ ಸಿಕ್ಕಲ್ಲಿ ಅಭಿನಂದಿಸಲಾರಂಭಿಸಿದರು. ಪ್ರತಿಯೊಬ್ಬರೂ ಕೊಡುವ ಸಲಹೆಗಳು ಬೇರೆ ಬೇರೆಯಾಗಿದ್ದವು. ಅಮೇರಿಕೆಯಲ್ಲಿ ಮೋಜಾಗಿದ್ದರೂ ಅಲ್ಲಿಂದ ಹೆಣ್ಣನ್ನು ತರದೇ ಇದ್ದದ್ದು ಒಳ್ಳೆಯದಾಯಿತು. ನಾಲ್ಕು ದಿನದ ಮೋಜಿಗೆ ಚೆನ್ನಾಗಿದ್ದರೂ ಅವರು ಜೀವನದ ಸಂಗಾತಿಯಾಗಲು, ಅದಕ್ಕಿಂತ ಗೃಹಿಣಿಯಾಗಲು ನಾಲಾಯಕು ಎಂದು ಅಮೆರಿಕೆಗೆ ಹೋಗದವನು ಹೋದವನಿಗೆ ಬುದ್ಧಿಮಾತು ಹೇಳಿದ. "ನೌಕರಿ ಮಾಡುವ ಹೆಣ್ಣು ಆರಿಸಿದ್ದು ಒಳ್ಳೆಯದಾಯಿತು. ಇಂದಿನ ದಿನಗಳಲ್ಲಿ ಒಬ್ಬರ ಪಗಾರದಿಂದಲೇ ದುಃಸಾಧ್ಯ" ಎಂದು ಮಾರವಾಡಿ ಮನೋಭಾವದ ಸಹೋದ್ಯೋಗಿ ಹೇಳಿದ. "ಅವಳಿಗೆ ರಾಜಸ್ಥಾನಕ್ಕೆ ವರ್ಗಮಾಡಿಸಿಕೊಳ್ಳಲು ತಿಳಿಸು" ಎಂದು ವ್ಯಾವಹಾರಿಕ ಸೂಚನೆ ಒಬ್ಬಾತ ಕೊಟ್ಟ. "ಕೂಡಲೇ ವರ್ಗವಾಗುವದು ಸಾಧ್ಯವಾಗದಿದ್ದರೆ ರಜಾ ದಿನಗಳಲ್ಲಿ ಸಂಸಾರ ಹೂಡಿದರಾಯಿತು. ರಾಜೀನಾಮೆ ಮಾತ್ರ ಕೊಡದಿರಲು ಹೇಳು, ಜೋಬನೇರ ಇಷ್ಟು ಕಗ್ಗಹಳ್ಳಿ ಎಂದು ಈಗಲೇ ತಿಳಿಸಿದರೆ ಇಲ್ಲಿಗೆ ಬರಲು ಒಪ್ಪಲಿಕ್ಕಿಲ್ಲ. ಇಲ್ಲಿ ಬಂದ ನಂತರ ನೋಡಿ ಎಲ್ಲವನ್ನು ತಿಳಿದುಕೊಳ್ಳುವಳು" ಎಂದು ಮುಂದಾಲೋಚನೆಯುಳ್ಳ ಇನ್ನೊಬ್ಬಾತ ಹೇಳಿದ. "ಈ ಊರು ಇದ್ದುದಕ್ಕಿಂತ ಹೀನವಾಗಿ ವಿವರಿಸು. ಅಂದರೆ ಇಲ್ಲಿಗೆ ಬಂದ ನಂತರ ನಿರೀಕ್ಷಿಸಿದಕ್ಕಿಂತ ಚೆನ್ನಾದ ಊರು ನೋಡಿ ನೆಮ್ಮದಿಯಿಂದ ಸಂಸಾರ ಹೂಡುವಳು" ಎಂದು ಆಶಾವಾದಿ ನುಡಿದ, ನಮ್ಮಲ್ಲಿಯ ಮದುವೆಯ ಪದ್ಧತಿ ಹೇಗಿರುತ್ತದೆ ಎಂದು ಒಬ್ಬಾತ ಕೇಳಿ ತಿಳಿದುಕೊಂಡ. ಮಗುದೊಬ್ಬ "ಮದುಮಗಳನ್ನು ಇಲ್ಲಿ ಕರೆಯಿಸಿಕೊಳ್ಳಿ. ನಾವೆಲ್ಲ ಸೇರಿ ರಾಜಸ್ಥಾನಿ ಪದ್ಧತಿಯಿಂದ ವಿವಾಹವನ್ನು ನೆರವೇರಿಸೋಣ" ಎಂದ. ಇಷ್ಟಾದರೂ "ನೀನು ಹೊಸದಾಗಿ ನೌಕರಿ ಸೇರಿದ್ದೀಯಾ, ನಮ್ಮಿಂದೇನಾದರೂ ಸಹಾಯ ಬೇಕೇ!" ಎಂದು ಒಬ್ಬರೂ ಕೇಳಲಿಲ್ಲ. ದೇವಿಜಿ ಅನುಗ್ರಹಿಸಿ ವಿವಾಹಕ್ಕೆ ಕನ್ಯೆಯನ್ನು ಒದಗಿಸಿದ್ದಾಳೆಂಬ ವಾರ್ತೆ ಡೀನರಿಗೂ ಮಾತಾಜಿಗೂ ತಲುಪಿತು. ಅವರು ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ರಜೆಗಾಗಿ ಕಾಳಜಿ ಮಾಡಬೇಡಿರೆಂದರು. ಬೇಕಾದಾಗ ವಿವಾಹ ನಿಶ್ಚಯ ಮಾಡಲು ಪಾಲಕರಿಗೆ ಬರೆದು ತಿಳಿಸೆಂದು ಹೇಳಿದರು. ನೌಕರಿ ಪ್ರಾರಂಭಿಸಿದ ಎರಡು ತಿಂಗಳಲ್ಲಿ ವಿವಾಹಕ್ಕಾಗಿ ರಜೆ ಸಿಗಬಹುದೆಂದು ನಾನು ತಿಳಿದಿರದ್ದರಿಂದ ಡೀನರ ಆಶ್ವಾಸನದಿಂದ ಹೆಚ್ಚಿನ ಸಂತೋಷವಾಯಿತು. ಆ ದಿನ ರಾತ್ರಿಯೇ ಕುಳಿತು ಮನೆಗೆ ಒಂದು ಪತ್ರವನ್ನೂ ಬರೆದುಬಿಟ್ಟೆ. ಮುಹೂರ್ತವಿಟ್ಟ ತಾರೀಕಿನ ಬಗ್ಗೆ ತಂದೆಯವರಿಂದ ಉತ್ತರವೂ ಬಂದಿತು.

೧೩. ಕಾಲೇಜು ತೆರೆಯಿತು

ವಿದೇಶದಲ್ಲಿ ಪಡೆದ ಉಚ್ಚ ಶಿಕ್ಷಣ, ವಿಶೇಷ ತರಬೇತಿಗಳಿಗೆ ಭಾರತದಲ್ಲಿ ನೌಕರಿಯ ಅಭಾವವಿರುವುದರಿಂದ ಜಂಗು ಹಿಡಿಯಬಾರದೆಂದು ಸರಕಾರ, ಸಂಬಳ ಕೊಟ್ಟು ನನ್ನ ಸೇವೆಯನ್ನು ಕೃಷಿವಿಶ್ವವಿದ್ಯಾಲಯಕ್ಕೆ ಕೊಡಮಾಡಿತ್ತು. ಕಾಲೇಜಿಗೆ ರಜಾದಿನಗಳಾದ್ದರಿಂದ ಬುದ್ಧಿಯ ನಿರುದ್ಯೋಗಿತನ ಹಾಗೆಯೇ ಉಳಿದಿತ್ತು. ಪ್ರಾರಂಭವಾಗುವ ದಿನಗಳು ಬಂದಂತೆ ಹೆಚ್ಚಿನ ಉತ್ಸಾಹ ಬಂದಿತು. ಆದರೆ ಪ್ರಾರಂಭವಾದರೂ ನನ್ನ ಪಾಲಿಗೆ ಯಾವ ಕೆಲಸವೂ ಬರಲಿಲ್ಲ. ನಾನಾಗಿ ಕೇಳಿದಾಗ, ಪರೀಕ್ಷೆಗೆ ಕೇವಲ ಮೂರು ತಿಂಗಳು ಉಳಿದಿವೆ. ಈಗ ಯಾವ ವಿಷಯವನ್ನು ಕಲಿಸಲು ಕೊಡುವದೂ ಉಚಿತವಾಗಲಾರದು; ಆದ್ದರಿಂದ ಸಂಶೋಧನೆಯಲ್ಲಿ ತೊಡಗಬಹುದೆಂದು ಉತ್ತರ ಬಂದಿತು. ಸಂಶೋಧನೆಗೆ ಯಾವ ಯಾವ ಅನುಕೂಲಗಳಿವೆ? ಎಂದು ಸಂಶೋಧನೆಯನ್ನೇ ಕೈ ಕೊಂಡಾಗ 'ಅಡಿಗೆ ಮನೆಯಲ್ಲಿ ಅಕ್ಕಿ ಇದ್ದರೆ ನೀರಿಲ್ಲ. ಉಪ್ಪಿದ್ದರೆ ಬೇಳೆಯಿಲ್ಲ. ಸ್ಟೋವಿದೆ ಬತ್ತಿಗಳಿಲ್ಲ ಎಂಬ ಸ್ಥಿತಿ ಇದೆ' ಎಂದು ಗೊತ್ತಾಯಿತು. ತಿರುಗಿ ಮುಖ್ಯಸ್ಥರ ಹತ್ತಿರ ಧಾವಿಸಿದೆ. ನಾನೇ ಪ್ರಯೋಗಾಲಯವೊಂದನ್ನು ಕಟ್ಟಬೇಕಾಗಿದೆ. ಅದ್ದರಿಂದ ಸಂಶೋಧನೆ ಮಾಡಬೇಕೆಂದಿರುವ ವಿಷಯದ ವಿವರಗಳು, ಅದಕ್ಕೆ ಬೇಕಾಗುವ ಸಲಕರಣೆಗಳು, ರಾಸಾಯನಿಕಗಳ ಒಂದು ಯಾದಿಯನ್ನು ತಯರಿಸಲು ಹೇಳಿ ಅವುಗಳೆಲ್ಲ ಬರುವ ತನಕ ಸಸ್ಯಶಾಸ್ತ್ರದ ಮತ್ತು ಕೀಟ ಶಾಸ್ತ್ರದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸೂಕ್ಷ್ಮದರ್ಶಕಶಾಸ್ತ್ರ (microtechnique) ಮತ್ತು ಛಾಯಾಚಿತ್ರ ಗ್ರಹಣದ ತರಬೇತಿಯಲ್ಲಿ ಡಾ. ಸುಧೀರರಿಗೆ ಸಹಾಯ ಮಾಡಲು ಹೇಳಿದರು. ಪ್ಲಾಸ್ಟಿಕ್ ಸರ್ಜರಿಯಲ್ಲಿ ಹೆಚ್ಚಿನ ವ್ಯಾಸಂಗ ಮುಗಿಸಿ ರೋಗಿಗೆ ಪ್ರಥಮ ಚಿಕಿತ್ಸೆ ಮಾಡಲು ಕಳಿಸಿದ ಡಾಕ್ಟರನಂತೆ ಆಯಿತು ನನ್ನ ಸ್ಥಿತಿ. ಆದರೂ ಅಸಂತೋಷಗೊಳ್ಳದೇ ಕೆಲಸ ಎಷ್ಟೇ ಚಿಕ್ಕದಿದ್ದರೂ ಅದರಲ್ಲಿ ಸಾರ್ಥಕತೆ ಕಾಣಬಯಸಿ ವಾಚನಾಲಯಕ್ಕೆ ಹೋಗಿ ವೈಜ್ಞಾನಿಕ ಸಾಮಾಗ್ರಿಗಳನ್ನು ಮಾರುವ ವಿವಿಧ ಕಂಪನಿಗಳ ಕೆಟಲಾಗ್ ತೆರೆದು ನನ್ನ ಸಂಶೋಧನೆಗೆ ಅಗತ್ಯವಾದ ಕೆಲವು ಸಲಕರಣೆಗಳ ವಿವರ ಬರೆದು ಅವಶ್ಯಕವಾದ

ಪುಸ್ತಕಗಳನ್ನು ವಾಚನಾಲಯದಲ್ಲಿ ತರಿಸಲು ಕೇಳಿಕೊಂಡೆ, ಎಲ್ಲ ಸೇರಿ ಐದಾರು ಸಾವಿರ ರೂಪಾಯಿಗಳ ಮೊತ್ತವಾಗುತ್ತಿತ್ತು. ಈ ಸಂಶೋಧನಾ ಯೋಜನೆಯನ್ನು ನಾನೇ ಟಾಯ್‌ಪ್ ಮಾಡಿ ಮುಖ್ಯಸ್ಥರಿಗೆ ತೋರಿಸಿದಾಗ ಅವರು ನಕ್ಕು 'ಇಪ್ಪತ್ತು ಇಪ್ಪತ್ತೈದು ಸಾವಿರ ರೂಪಾಯಿಯ ಖರ್ಚಾದರೂ ಬರುವಂತಹ ಯೋಜನೆ ತಯಾರಿಸಬೇಕೆಂದು' ಹಿಂತಿರುಗಿಸಿದರು. ಕೋಷ್ಟಕಗಳನ್ನು ಹುಡುಕಿ ನಿತ್ಯಬಳಕೆಯ ಸಾಮಾನುಗಳನ್ನು ಸೇರಿಸಿ ಅವರು ಹೇಳಿದಷ್ಟು ಹಣದ ವೆಚ್ಚದ ಯೋಜನೆಯ ಕರಡು ಮಾಡಿ ಅವರಿಗೆ ಕೊಟ್ಟೆ.

ಡಾ. ಸುಧೀರರನ್ನು ಕಂಡು ಅವರು ಏನನ್ನು ಕಲಿಸುತ್ತಿದ್ದಾರೆಂದು ಕಂಡು ಹಿಡಿಯ ಹೋದಾಗ ಅವರ ಗಾಡಿ ಬಹಳ ಮುಂದೆ ಹೋಗಿರಲೇ ಇಲ್ಲ. ಅವರಿಗೆ ಇಲ್ಲದ ತಾಪತ್ರಯಗಳು. ಒಂದು ದಿನ ಕ್ಲಾಸಿಗೆ ತಡವಾಗಿ ಬಂದರೆ ಇನ್ನೊಂದು ದಿನ ಬರುವುದನ್ನೇ ಮರೆಯುತ್ತಾರೆ. ಮತ್ತೊಂದು ದಿನ ಡೀನರು ಹೇಳಿ ಕಳಿಸಿದರೆಂದು ಕ್ಲಾಸನ್ನು ಅರ್ಧಕ್ಕೇ ನಿಲ್ಲಿಸಿ ಹೋದರು. ಅವರೆಂದೂ ಪಾಠದ ತಯಾರಿ ಮಾಡಿ ಬರುತ್ತಿರಲಿಲ್ಲ. ಅಮೇರಿಕೆಯಿಂದ ತಂದ ಟಿಪ್ಪಣಿಗಳಿಂದ ತಮಗೆ ಬೇಕಾದ್ದನ್ನು ಕ್ಲಾಸಿನಲ್ಲಿಯೇ ಹುಡುಕಲಾರಂಭಿಸುವರು. ಸಿಗದಿದ್ದಾಗ ವಿದ್ಯಾರ್ಥಿಗಳೊಡನೆ ಕುಳಿತ ನನ್ನನ್ನೇ ವಿಚಾರಿಸುವರು! ವಿದ್ಯಾರ್ಥಿಗಳು ಬಹಳ ಇದ್ದುದರಿಂದ ತನ್ನ ವಿಭಾಗದ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲು ನನಗೇ ಹೇಳಿದರು. ಇದಕ್ಕಾಗಿ 'ಪೆರಾಫಿನ್ ಬಾತ್' ಒಂದನ್ನು ಹನೆರಡು ನೂರು ರೂಪಾಯಿಗಳು ಖರ್ಚು ಮಾಡಿ ಕಲಕತ್ತೆಯಿಂದ ತರಿಸಿ ಇಟ್ಟಿದ್ದರು. ಅದನ್ನು ನೋಡಿದರೇ ಹೆದರಿಕೆಯಾಗುವಂತಿತ್ತು. ಚಿಮಣಿ ಎಣ್ಣೆ ಡಬ್ಬಿಯಿಂದ ಮಾಡಿರಬಹುದಾದ, ನೂರು ರೂಪಾಯಿಗಳಲ್ಲಿ ರಚಿಸಬಹುದಾಗಿದ್ದ ಸಲಕರಣೆಯನ್ನು ಅಷ್ಟೊಂದು ಹಣ ಸುರಿದು ತರಿಸಿದ್ದರು. ನೀರನ್ನು ಹಾಕಿ ನೋಡಿದಾಗ ಅದು ಸೋರಲಾರಂಭಿಸಿತು! ಪ್ರಾರಂಭಿಸಿ ನೋಡಿದಾಗ ಅದರ ಉಷ್ಣತಾಮಾನ ೫೫ ಫಾರನ್ ಹಾಯಿಟಿಗೇ ಸ್ಥಿರವಾಗಿ ನಿಲ್ಲುವ ಬದಲು ಏರುತ್ತ ಹೋಯಿತು. ಇದಕ್ಕಿಂತ ಇಡ್ಲಿ ಪಾತ್ರೆ ಹೆಚ್ಚು ನಿಷ್ಠೆಯ ಕೆಲಸ ಒದಗಿಸಬಹುದಾಗಿತ್ತು! ಎಂದು ಅನಿಸಿದ್ದರಿಂದ ಅದರ ಕಾರ್ಯದಕ್ಷತೆಯ ವರದಿ ನೀಡಿದೆ. ಅದನ್ನು ಕಂಪನಿಗೆ ಕಳುಹಿಸಿ ರಿಪೇರಿ ಮಾಡಿ ತರಿಸುವುದಕ್ಕೆ ಸಾಕಷ್ಟು ಸಮಯ ಮತ್ತು ವೆಚ್ಚಗಳು ತಗಲುತ್ತಿದ್ದುದರಿಂದ ಕಾಲೇಜಿನ ರಿಪೇರಿ ಕೇಂದ್ರಕ್ಕೆ ಅದನ್ನು ಕಳಿಸುವಂತೆ ಆಜ್ಞೆಯಾಯಿತು. ಪ್ರತಿ ದಿನ ಆಳೊಬ್ಬನೊಡನೆ ಅದನ್ನು ಕಳಿಸಿದರೂ ಎಂದಿನಂತೆ ಯಾರೊಬ್ಬರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳದ್ದರಿಂದ ಅದು ಅಲ್ಲಿಯೇ ಕಾಲುಮುರಿದುಕೊಂಡು ಬಿದ್ದಿತ್ತು. ನಾನೇ ಒಂದು ದೇಶೀ ಸಲಕರಣೆ ಯಾಕೆ ತಯಾರಿಸಬಾರದು? ಎಂದು ವಿಚಾರ ಬಂದಿತು.

ಸರಿ, ಜಯಪುರಕ್ಕೆ ಧಾವಿಸಿದೆ. ಹತ್ತು ರೂಪಾಯಿ ಕೊಟ್ಟು ಒಂದು ಹಿತ್ತಾಳೆ ಪಾತ್ರೆ ಖರೀದಿಸಿದೆ. ಅದಕ್ಕೂ ದೊಡ್ಡದಾದ ಒಂದು ಎಲುಮಿನಿಯಮ್ ಮುಚ್ಚಳ, ನಾಲ್ಕು ತಾಮ್ರದ ಮುಚ್ಚಳವಿದ್ದ ಬಟ್ಟಲುಗಳನ್ನು ಕೊಂಡು ಧಾತುವಿನ ಕೆಲಸ ಮಾಡುತ್ತಿದ್ದ ಒಬ್ಬನನ್ನು ಹಿಡಿದೆ. ನನ್ನ ವಿಚಾರ ತಿಳಿದುಕೊಳ್ಳಲು ಆತ ಅರ್ಧ ಗಂಟೆ ತೆಗೆದುಕೊಂಡ. ಆದರೆ ಚಾಚೂ ತಪ್ಪದೇ ಹೇಳಿದಂತೆ ಮಾಡಿಕೊಟ್ಟ. ಒಂದೂವರೆ ರೂಪಾಯಿಯ ಮಾತು ಮಾಡಿದ್ದರೂ ಮುಗಿದಾಗ ಎಡು ರುಪಾಯಿ ಕೊಟ್ಟಾಗ ಕೃತಜ್ಞತೆಯ ಸಲಾಂ ಹೊಡೆದ. ಹದಿನಾಲ್ಕು ರುಪಾಯಿಯೊಳಗೆ ಇಷ್ಟು ಉತ್ತಮ ಸಾಧನವಾಗಬಹುದೆಂದು ಯಾರಾದರು ಹೇಳಿದ್ದರೆ ನಾನೇ ನಂಬುತ್ತಿರಲಿಲ್ಲ. ಒಂದು ಕಡೆ ನೀರು ಸೇರಿಸಲು ಕಿಂಡಿ, ಇನ್ನೊಂದು ಕಡೆ ಉಷ್ಣತಾಮಾಪಕ ಸೇರಿಸುವ ಏರ್ಪಾಡು. ಮಧ್ಯದಲ್ಲಿ ನಾಲ್ಕು ಪೆರಾಫಿನ ಹೊತ್ತ ತಟ್ಟೆಗಳು. ಮೊದಲು ನೀರನ್ನು ಸ್ಟೋವ ಮೇಲೆ ಕಾಯಿಸಿ ನಂತರ ಸಣ್ಣದೊಂದು ಸ್ಪಿರಿಟ ಲ್ಯಾಂಪ್ ಇಟ್ಟರೆ ಉಷ್ಣತಾಮಾನ ಸ್ಥಿರವಾಗಿ ಉಳಿಯುತ್ತಿತ್ತು, ಖರ್ಚು ಮಾಡಿದ ಹಣ ಕಾಲೇಜಿನಿಂದ ಪಡೆದೆ. ಕಾರ್ಯ ಪ್ರಾರಂಭವಾಯಿತು.

ಛಾಯಾಗ್ರಹಣ ಕಲಿಸುವುದಕ್ಕಾಗಿ ಪ್ರಸಾರಣ ವಿಭಾಗದಲ್ಲಿರುವ ಕತ್ತಲುಕೋಣೆಯನ್ನು ಬಳಸಬಹುದೆಂದರು. ಅಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳ ಪತ್ನಿ - ಪುತ್ರಿಯರ ಚಿತ್ರಗಳು ಸದಾಕಾಲ ಸಿದ್ಧವಾಗುತ್ತಲೇ ಇದ್ದುದರಿಂದ ಹೆಚ್ಚಿನ ಸಮಯಗಳಲ್ಲಿ ಅದು ಲಭ್ಯವಾಗಲೇ ಇಲ್ಲ. ಅಂತೆಯೇ ಸ್ವತಂತ್ರವಾದ ಕತ್ತಲುಕೋಣೆ ಇರಬೇಕೆಂದು ಯತ್ನ ನಡೆಸಿದೆ. ಕೊನೆಗೆ ಹಳೆಯ ಕಟ್ಟಡ ಒಂದರಲ್ಲಿ ಮುರುಕು ಸಾಮಾನು ತುಂಬಿದ ಕೋಣೆ ಸಿಕ್ಕಿತು. ಹರಿಬಕ್ಷನಿಗೆ, ಬಿಟ್ಟಿ ಕೆಲಸಗಳಿಂದ ಬಿಡುವು ಸಿಕ್ಕಾಗ ಅವನೊಂದಿಗೆ ನಾನು ಸೇರಿ ಮುರುಕು ಸಾಮಾನುಗಳನ್ನೆಲ್ಲ ಮೂಲೆಗೆ ಒಟ್ಟಿದೆ. ಕೋಣೆಯನ್ನು ಶುಭ್ರ ಮಾಡಲು ಒಂದು ವಾರ ಹಿಡಿಯಿತು. ಕೋಣೆಯಲ್ಲಿ ನೀರು, ವಿದ್ಯುತ್ತು ಎರಡೂ ಇರಲಿಲ್ಲ. ನೀರಿಗಾಗಿ ಕೀಟನಾಶಕದ ಪಿಪಾಯಿಯೊಂದನ್ನು ಖಾಲಿ ಮಾಡಿಸಿ, ಸ್ವಚ್ಛ ಮಾಡಿಸಿ ತಂದಿರಿಸಿಕೊಂಡೆ. ವಿದ್ಯುತ್ ತಂತಿಗಳು ಹತ್ತಿರದಿಂದಲೇ ಹಾಯ್ದು ಹೋಗುತ್ತಿದ್ದರೂ ಕೋಣೆಯೊಳಗೆ ಒಯ್ಯುವುದು ಅಷ್ಟು ಸುಲಭವಾಗಿರಲಿಲ್ಲ. ತಂತಿ ಇಲ್ಲವೆಂದರು. ವಿದ್ಯುತ್ ಬೋರ್ಡಿನ ಅಪ್ಪಣೆ ಪಡೆಯಬೇಕೆಂದರು. ಯೋಗ್ಯತಾವಂತ ಇಂಜಿನಿಯರರಷ್ಟೇ ಆ ಕೆಲಸ ಮಾಡಬಲ್ಲರೆಂದು ಏನೇನೊ ನೆಪ ಹೇಳಿದರು. ಒಂದು ದಿನ ಮುಖ್ಯಸ್ಥರನ್ನೆ ಕರೆದೊಯ್ದು ಈ ಕೆಲಸ ಮಾಡಿಸಿ ಕೊಡಲೇ ಬೇಕೆಂದು ಹೇಳಿದೆ. ವೈಯಕ್ತಿಕವಾಗಿ ಬಂದದ್ದರಿಂದ ಕೂಡಲೇ ಜೋಡಿಸಿ ಕೊಡಲು ಅಪ್ಪಣೆಯಾಯಿತು. ಒಳಗೆ ಬಳಸಲು ತಂತಿಗಳು ಬೇಕು, ಎಂದಾಗ ಜೈನಬಂಧುಗಳಿಂದ ತರಿಸಲು ಹೇಳಿದರು. ಅಲ್ಲಿಗೆ ನಾನೇ ಹೋಗಿ ನೋಡಿದಾಗ ಹಣ ಕೊಟ್ಟು ಕೊಳ್ಳುವಂತಹ

ಯಾವ ತಂತಿಯೂ ಅವರಲ್ಲಿ ಇರಲಿಲ್ಲ. ಆದರೆ ಉದ್ರಿ ತರಲು ಕಾಲೇಜಿನವರು ಅವರ ಅಂಗಡಿಯನ್ನೇ ಆರಿಸಿದ್ದರಿಂದ ಕೊಳ್ಳದೇ ಬೇರೆ ಮಾರ್ಗವಿರಲಿಲ್ಲ. ಆ ತಂತಿಗಳಲ್ಲಿ ಕೆಲವೆಡೆ ತಾಮ್ರದ ತಂತಿಗಳೇ ಇರಲಿಲ್ಲ. ಬರೇ ಪ್ಲಾಸ್ಟಿಕ್ಕಿನ ಹೊರಕವಚವಷ್ಟೇ ಇತ್ತು. ಇಂತಹ ತಂತಿಗಳನ್ನು ಬಳಸಿ ಬೆಂಕಿ ಹತ್ತಿದರೆ ಯಾರು ಹೊಣೆಗಾರರು? ಕತ್ತಲೆ ಕೋಣೆಯಲ್ಲಿ ಆ ತಂತಿಗಳನ್ನೇ ಜೋಡಿಸಿದೆ. ಬಾಗಿಲುಗಳಿಂದ ಬರುವ ಬೆಳಕನ್ನು ತಡೆಗಟ್ಟಲು ಕಪ್ಪು ಕಾಗದ ಅಂಟಿಸಿದೆ. ಟೇಬಲು - ಖುರ್ಚಿಗಳನ್ನು ತರಿಸಿ ಹಾಕಿಸಿಕೊಂಡೆ. ಕೋಣೆ ಸಿದ್ಧವಾಗಿ ಒಂದು ವಾರವೂ ಕಳೆದಿರಲಿಲ್ಲ. ಅದು ಬಾಲಮಂದಿರಕ್ಕೆ ಬೇಕಾದ್ದರಿಂದ ಖಾಲಿ ಮಾಡುವಂತೆ ಅಪ್ಪಣೆ ಬಂದಿತು. ಅದೆಂತಹ ಪ್ರೋತ್ಸಾಹ! ಅದರ ಬದಲಾಗಿ ಚಿಕ್ಕದೊಂದು ಕೋಣೆ ಕೊಟ್ಟರೂ ಎದೆಗುಂದದೇ ಜೇಡನಂತೆ ಮತ್ತೆ ಮೊದಲಿನಿಂದ ಕೆಲಸ ಪ್ರಾರಂಭಿಸಿದೆ. ಒಂದೇ ತಿಂಗಳಿನಲ್ಲಿ ಹೊಸ ಪ್ರಾಧ್ಯಾಪಕರು ಬರಲಿದ್ದಾರೆ. ಅವರಿಗೆ ಕೂಡುವ ಸ್ಥಳದ ಅಭಾವವಿದೆ. ಆದ್ದರಿಂದ ತೆರವು ಮಾಡಲು ಹೇಳಿದರು. ಈ ಎಲ್ಲ ರಗಳೆ ಬೇಡವೆಂದು ನನ್ನ ಮನೆಯ ಹವಾಮಹಲಿನಲ್ಲೆ ಕತ್ತಲು ಕೋಣೆಯ ವ್ಯವಸ್ಥೆ ಮಾಡಿಕೊಂಡೆ. ವಿದ್ಯಾರ್ಥಿಗಳಿಗಾಗಿ ಅದನ್ನೇ ಬಳಸಲಾರಂಭಿಸಿದೆ.

ಕೃಷಿ ಕಾಲೇಜು ರಾಜಸ್ಥಾನದಲ್ಲಿದ್ದರೂ, ಲಕ್ಷ್ಮೀ ಭಜಕರಾದ ಮಾರವಾಡಿಗಳು ಅವಳನ್ನು ಅರಸುತ್ತ ದೇಶದ ತುಂಬ ಹರಡಿಕೊಂಡದ್ದರಿಂದ ಕಾಲೇಜಿನ ಲಾಭ ಪಡೆದುಕೊಂಡವರು ಹೊರನಾಡಿನಿಂದ ಬಂದವರು. ಪ್ರತಿ ಸೆಕೆಂಡಿಗೆ ಜನಸಂಖ್ಯೆ ಏರುತ್ತಿರುವ ಪಶ್ಚಿಮ ಬಂಗಾಲ ಸರಕಾರ, ತಮ್ಮ ಕೃಷಿ ವಿಶ್ವವಿದ್ಯಾನಿಲಯ ಕಲ್ಯಾಣಿಯಲ್ಲಿ ಇದ್ದರೂ ಈ ಕಾಲೇಜಿನಲ್ಲಿ ಪ್ರತಿವರ್ಷ ಇಪ್ಪತ್ತು ಸ್ಥಳಗಳನ್ನು ಕಾದಿರಿಸಿಕೊಂಡಿದೆ. ಇವರಿಗೆ ಸರಕಾರ ವೇತನ ಕೊಡುವುದಲ್ಲದೇ ಸ್ವತಃ ಚುರುಕು ತಲೆಯವರಾದ್ದರಿಂದ ಶಿಷ್ಯವೇತನಗಳನ್ನೂ ದೊರಕಿಸಿಕೊಳ್ಳುತ್ತಿದ್ದರು. ಕಲಿತದ್ದು, ಓದಿದ್ದು, ಸರಿಯಾಗಿ ಮೀನು ತಿನ್ನುವ ತಲೆ ಸೇರಿಕೊಳ್ಳುತ್ತಿದ್ದುದರಿಂದ, ಜ್ಞಾಪಕ ಶಕ್ತಿಯೂ ಚೆನ್ನಾಗಿದ್ದುದರಿಂದ ಗುರುಕೃಪೆಯನ್ನು ಗಳಿಸಿಕೊಂಡಿದ್ದರು. ಅನೇಕರು ತಮ್ಮ ಸಂಸಾರಗಳೊಂದಿಗೆ ಜೋಬನೇರದಲ್ಲಿ ಬಂದು ಇಳಿದಿದ್ದರು. ಇಷ್ಟಾದರೂ ಸ್ಥಾನಿಕ ಜನರೊಂದಿಗೆ ಬೆರೆಯುವ ಅಥವಾ ಹಿಂದಿ ಕಲಿಯುವ ಯತ್ನವನ್ನು ಮಾಡುತ್ತಿರಲಿಲ್ಲ. ಇಲ್ಲಿ ಮೀನು ಸಿಗುವುದಿಲ್ಲ! ಎಂಬ ತಾತ್ಸಾರ ಬೇರೆ. ಪಂಜಾಬದಲ್ಲಿ ಕೃಷಿಗೆ ವಿಶೇಷ ಪ್ರಾಧಾನ್ಯವಿದೆ. ಅಲ್ಲಿಯ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಸಿಗದವರು ಇಲ್ಲಿ ಧಾವಿಸಿ ಬರುತ್ತಿದ್ದರು. ಪ್ರಾಧ್ಯಾಪಕರು ಮುಖ್ಯತಃ ಉತ್ತರ ಪ್ರದೇಶದಿಂದ ಬಂದವರಾದ್ದರಿಂದ ಅವರ ಆಪ್ತರೆಲ್ಲ ಶಿಷ್ಯರಾಗಿ ಉತ್ತರ ಪ್ರದೇಶ, ಬಿಹಾರಗಳಿಂದ

ಬರುತ್ತಿದ್ದರು. ರಾಜಸ್ಥಾನದಲ್ಲಿ ನೆಲೆಸಿದ ಉತ್ತರ ಪ್ರದೇಶದವರ ಮಕ್ಕಳೂ ಈ ಸಂಸ್ಥೆಯ ಲಾಭ ಪಡೆಯುತ್ತಿದ್ದರು. ಇಂಜಿನಿಯರಿಂಗಕ್ಕೆ ಮಹತ್ವ ಅದಾಗಲೇ ಕಡಿಮೆಯಾಗುತ್ತಿದ್ದುದರಿಂದ ಮಂತ್ರಿಗಳ, ದೊಡ್ಡ ಅಧಿಕಾರಿಗಳ ಮಕ್ಕಳು ಕೃಷಿ ಕಾಲೇಜಿಗೆ ಬರಲಾರಂಭಿಸಿದ್ದರು. ಆದ್ದರಿಂದ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಅಲ್ಪ ಸಂಖ್ಯಾತರು ರಾಜಸ್ಥಾನಿಗಳಾಗಿದ್ದರು.

ರಾಜಕಾರಣಿಗಳು ಕಾಲೇಜಿನ ಆಗು ಹೋಗುಗಳಲ್ಲಿ ಹೆಚ್ಚಿನ ಆಸಕ್ತಿವಹಿಸಿ ಅದರ ಪವಿತ್ರತೆಗೆ ಕಂಟಕ ತಂದಿದ್ದರು. ಮೇಲಧಿಕಾರಿಗಳಾದರೂ ತಮ್ಮ ಸ್ವಾರ್ಥ ಸಾಧನೆಗಾಗಿ ಈ ರಾಜಕಾರಣಿಗಳ ಬೆಂಬಲ ಪಡೆದಿದ್ದರಿಂದ ಸೂತ್ರದ ಗೊಂಬೆಗಳಾಗಿ ಕುಣಿಯದೇ ಬೇರೆ ಮಾರ್ಗವಿರಲಿಲ್ಲ. ಜಯಪುರದಲ್ಲಿ ಪ್ಲಾಟೋ, ತೋಟವೊ ಅಗ್ಗ ದರದಲ್ಲಿ ಪಡೆಯಲು, ತಮಗೆ ಅನುಕೂಲವಾಗುವಂತೆ ರಸ್ತೆಗಳನ್ನು ಮಾಡಿಸಿಕೊಳ್ಳಲು, ಮನೆ ಕಟ್ಟಲು ಸಿಮೆಂಟು, ಉಕ್ಕು ಪಡೆಯಲು, ನೀರು, ವಿದ್ಯುತ್ತು ಪಡೆಯಲು ಪ್ರಾಧ್ಯಾಪಕರು ಹತ್ತಾರು ಬಗೆಯಲ್ಲಿ ಈ ರಾಜಕಾರಣಿಗಳ ಸಹಾಯ ಪಡೆದದ್ದು ಉಂಟು. ಆದ್ದರಿಂದ ಎಂತಹ ಸಣ್ಣ ಕೆಲಸವಿದ್ದರೂ ರಾಜಕಾರಣಿಗಳು ಜಯಪುರದಿಂದ ಫೋನ ಮಾಡಿದರೆ ಸಾಕು, ಇಲ್ಲಿಂದ "ನನ್ನಿಂದೇನಾಗಬೇಕು? ಆಜ್ಞೆ ಕೊಡಿ ಸ್ವಾಮಿ" ('ಔರ ಕೋಯಿ ಸೇವಾ? ಫರಮಾಯಿಯೇ") ಉತ್ತರ ಸಿಗುತ್ತದೆ. ಆದ್ದರಿಂದ ಇಷ್ಟೂ ಅರ್ಹತೆ ಇಲ್ಲದವರಿಗೂ ಕಾಲೇಜಿನಲ್ಲಿ ಪ್ರವೇಶ ಸಿಕ್ಕಿತು. ಸಾಲದ್ದಕ್ಕೆ, ನನ್ನ ಮಗನಿಗೆ ಕಕ್ಕಸದ ಹತ್ತಿರದ ಖೋಲಿ ಕೊಟ್ಟಿದ್ದೀರಂತೆ, ಬೇರೆ ಕೊಡಿಸಿ, ನನ್ನ ಆತ್ಮಿಯನಿಗೆ ಹಾಸ್ಟೇಲ್ ಊಟ ಸೇರುವುದಿಲ್ಲವಂತೆ, ಅದಕ್ಕೇನಾದರೂ ಮಾಡಿ, ನನ್ನ ಪುತ್ರನಿಗೆ ಕೆಲವೊಂದು ಪ್ರಾಧ್ಯಾಪಕರು ತಿರ ಕಡಿಮೆ ಗುಣ ಕೊಡುತ್ತಿದ್ದಾರಂತೆ. ಹೀಗೇಕೆ? ಎಂದು ವಿಚಾರಿಸಿ ತಿಳಿಸಿ" ಎಂದು ಫೋನ ಮಾಡುವ ಎಮ್. ಎಲ್. ಎ ಮತ್ತು ಇತರ ಅಧಿಕಾರಿಗಳಿದ್ದರು. ವಸ್ತು ಸ್ಥಿತಿ ಹೀಗಿದ್ದಾಗ ಶಿಕ್ಷಕರಿಗೆ ಸ್ವಾತಂತ್ರ್ಯವೆಲ್ಲಿ ಉಳಿಯಿತು?

ವಿದ್ಯಾರ್ಥಿಗಳಾಗಲೀ ಪ್ರಾಧ್ಯಾಪಕರಾಗಲೀ ಜೋಬನೇರವನ್ನು ತಮ್ಮದನ್ನಾಗಿ ಮಾಡಿಕೊಳ್ಳದೇ ಇದ್ದುದರಿಂದ ಸದಾಕಾಲವೂ ಜಯಪುರಕ್ಕೆ ಹೋಗುವ ವಿಚಾರದಲ್ಲೇ ಇರುತ್ತಿದ್ದರು. ಶನಿವಾರ ಬಂತೆಂದರೆ ಕಾಲೇಜಿನವರು ಮೋಟಾರು, ಟ್ರೇನು ಹತ್ತಿ ಜಯಪುರಕ್ಕೆ ಧಾವಿಸುತ್ತಾರೆ. ಇದಕ್ಕಾಗಿ ಕಲಿಸುವುದನ್ನು, ಕಲಿಯುವುದನ್ನು ತಪ್ಪಿಸುವವರೂ ಇದ್ದಾರೆ. ಕಾಲೇಜು ಮುಂಜಾನೆ ಏಳು ಗಂಟೆಗೆ ಪ್ರಾರಂಭವಾಗುತ್ತಿದ್ದರೂ, ರವಿವಾರ ಸಂಜೆ ಕೂಡ ಮರಳದೇ ಸೋಮವಾರ ಬೆಳಗಿನ ಕ್ಲಾಸು ತಪ್ಪಿಸುವವರೂ ಇದ್ದಾರೆ. ಇಷ್ಟು ಸಾಲದದಕ್ಕೆ ಮಂಗಳವಾರ ಇಲ್ಲವೇ ಗುರುವಾರ

ರಜೆ ಬಂದರೆ ನಡುವಿನ ಒಂದು ದಿನ ಹೆಚ್ಚಿನದನ್ನು ಕಲಿಸದಂತೆ ಕೆಲ ಪ್ರಾಧ್ಯಾಪಕರಿಗೆ ವಿನಂತಿಸಿ ಇನ್ನೂ ಕೆಲವರ ಕ್ಲಾಸು ತಪ್ಪಿಸಿ ನಾಲ್ಕು ದಿನ ರಜೆ ಪಡೆವವರು ಇದ್ದಾರೆ. ಸಂಜೆಗೆ ಜಯಪುರಕ್ಕೆ ಹೋಗಿ ರಾತ್ರೆ ಸಿನೇಮಾ ನೋಡಿ ಮರುದಿನ ಮರಳುವವರೂ ಇದ್ದಾರೆ. ಹೋಗಿಬರುವ ವಿದ್ಯಾರ್ಥಿಗಳಿಂದ ಕಾಯಿಪಲ್ಯ, ಬೀಡಾ, ಇತರ ಸಾಮಾನುಗಳನ್ನು ನಿಯಮಿತವಾಗಿ ತರಿಸುವ ಶಿಕ್ಷಕರಿದ್ದಾರೆ. ಇಂತಹ ವಾತಾವರಣದಲ್ಲಿ ಕಾಲೇಜು ಶಿಕ್ಷಣ, ತರಬೇತಿ ಕೇಂದ್ರವಾಗದೇ ನೌಕರಿಗಾಗಿ ಬೇಕಾಗುವ ಡಿಗ್ರಿ ಪಡೆಯುವ ಸಂಸ್ಥೆಯಾದರೆ ಯಾರೂ ಆಶ್ಚರ್ಯ ಪಡಬೇಕೆಂದಿಲ್ಲ. ಇದಕ್ಕೆಲ್ಲ ಕಳಸ ಎಂಬಂತೆ ಅಮೇರಿಕೆಯ ಕೃಷಿ ವಿಶ್ವವಿದ್ಯಾಲಯಗಳ ಮಾದರಿಯಲ್ಲಿಯೇ ತಾವು ನಡೆಸುತ್ತಿದ್ದೇವೆ ಎಂಬ ಜಂಬ ಬೇರೆ!

ಅಮೇರಿಕೆಯಲ್ಲಿ ಭೂಮಿ ಹೆಚ್ಚು, ಕೃಷಿಮಾಡುವವರು ಕಡಿಮೆ ಪ್ರಮಾಣದಲ್ಲಿ ಇದ್ದುದರಿಂದ ಅಲ್ಲಿಯ ಸರಕಾರ ಕೃಷಿವಿಶ್ವವಿದ್ಯಾಲಯಗಳಿಗೆ ಫಲವತ್ತಾದ ಭೂಮಿಯನ್ನು ಉಂಬಳಿಯಾಗಿ ಕೊಟ್ಟು ಇದರಲ್ಲಿ ಮಾದರಿಯ ಬಂಗರದ ಬೆಳೆಯನ್ನು ಬೆಳೆದು ಕೃಷಿಕರಿಗೆ ತೋರಿಸಿ! ಮತ್ತು ಬೆಳೆಯನ್ನು ಮಾರಿಬಂದ ಹಣದಿಂದ ವಿಶ್ವವಿದ್ಯಾಲಯಗಳನ್ನು ನಡೆಸಿ! ಎಂದಿತು. ಇವುಗಳಿಗೆ ಭೂಮಿ ಉಂಬಳಿಯ ಕಾಲೇಜು (Land - grant College) ಎಂದು ಹೆಸರು. ಈ ಸಂಸ್ಥೆಗಳ ಪ್ರಾಧ್ಯಾಪಕ, ವಿದ್ಯಾರ್ಥಿಗಳ ಸತತ ದುಡಿಮೆಯಿಂದಾಗಿ, ಕೃಷಿ ಉತ್ಪಾದನೆಯಲ್ಲಿ ಅಮೇರಿಕೆ ಬಹಳ ಮುಂದೆ ಹೋಗಿದೆ. ಇಂತಹ ಸಂಸ್ಥೆಗಳ ಸಂಶೋಧನೆಗಳನ್ನು ಬಳಸುವುದರಲ್ಲಿ ಅಮೇರಿಕನ್ ರೈತನೂ ಹಿಂದೆ ಬಿದ್ದಿಲ್ಲ. ಹೆಚ್ಚು ಬೆಳೆ ಕೊಡುವ ಬೀಜಗಳನ್ನು ಆರಿಸಿದನು. ಕೃತ್ರಿಮ ಗೊಬ್ಬರವನ್ನು ಬಳಸಿದನು, ಕೀಟನಾಶಕಗಳನ್ನು ಬಳಸಿ ಬೆಳೆಗೆ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸಿದನು. ವಿವಿಧ ಉಪಕರಣಗಳಿಂದ ಹೆಚ್ಚಿನ ಬೆಳೆ ತೆಗೆಯಲಾರಂಭಿಸಿದನು. ಭಾರತದಲ್ಲಿ ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚು ಜನ ಕೃಷಿಕರಾಗಿದ್ದರೂ ಉಳಿದ ಶೇಕಡಾ ಮೂವತ್ತೂ ಮಂದಿಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸುವದು ಅವರಿಂದ ಆಗುತ್ತಿಲ್ಲ. ಅದೇ ಅಮೇರಿಕೆಯ ಒಬ್ಬ ಒಕ್ಕಲಿಗ ತನ್ನ ಹೊರತಾಗಿ ಇಪ್ಪತ್ತೆರಡು ಮಂದಿಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಬೆಳೆಯುತ್ತಾನೆ. ಎಷ್ಟೋ ಹೊಲಗಳಲ್ಲಿ ಬೆಳೆಗಳನ್ನು ಬೆಳೆಸಕೂಡದು ಎಂದು ಸರಕಾರ ಕೃಷಿಕರಿಗೆ ಹಣ ಕೊಡುತ್ತದೆ. ಅದಾಗ್ಯೂ ಅತ್ಯಧಿಕವಾಗಿ ಬೆಳೆದ ಗೋಧಿಯ ಬೆಲೆ ಇಳಿದು ರೈತರಿಗೆ ಹಾನಿಯಾಗಬಾರದೆಂದು ಮೊದಲು ಸುಟ್ಟು ಹಾಕುತ್ತಿದ್ದರು. ಈಗ ಬಡತನದಿಂದ ಬಳಲುವ ರಾಷ್ಟ್ರಗಳಿಗೆ ಈ ಗೋಧಿಯ ಸದುಪಯೋಗವಾಗುತ್ತಿದೆ. ಬಟಾಟೆಯ ಬೆಳೆಗೂ ಈ ಮಾತು ಅನ್ವಯಿಸುತ್ತದೆ.

ಅಮೇರಿಕೆಯ ಹಣಕಾಸಿನ ವ್ಯವಸ್ಥೆ, ತಾಂತ್ರಿಕ ಜ್ಞಾನ, ಚಲನಚಿತ್ರಗಳು, ಫ್ಯಾಶನ್ ಲೈಂಗಿಕ ಜೀವನಗಳನ್ನು ಮೆಚ್ಚಿ, ಹೆಚ್ಚು ತಲೆಕೆಡಿಸಿಕೊಳ್ಳದೇ ನಮ್ಮವನ್ನಾಗಿ ಮಾಡಿಕೊಂಡಂತೆ ಅವರ ಕೃಷಿ ವಿಶ್ವವಿದ್ಯಾಲಯಗಳ ಮಾದರಿಯನ್ನೂ ನಮ್ಮವನ್ನಾಗಿ ಮಾಡಿಕೊಂಡೆವು. ಅದರ ಪ್ರಕಾರ ಪ್ರತಿ ರಾಜ್ಯಕ್ಕೆ ಕಡಿಮೆಯೆಂದರೆ ಒಂದಾದರೂ ಕೃಷಿ ವಿಶ್ವವಿದ್ಯಾಲಯ ಇದ್ದಿರಬೇಕು. ಅದನ್ನು ನಡೆಸುವುದಕ್ಕಾಗಿ ಸಾಕಷ್ಟು ಭೂಮಿಯನ್ನು ಸರಕಾರ, ಕೊಡಮಾಡುವುದಲ್ಲದೇ ಧನ ಸಹಾಯ ಮಾಡುವುದಾಗಿ ಸಾರಿತು. ಪ್ರತಿ ರಾಜ್ಯದಲ್ಲಿಯೂ ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಭಾಗದಲ್ಲಿಯೇ ಬೇಕೆಂದು ವಿಶೇಷ ಬೇಡಿಕೆಗಳು ಬಂದವು. ಹಣಕಾಸಿನ ಮತ್ತು ಇನ್ನಿತರ ಸವಲತ್ತುಗಳಿಗಿಂತ ರಾಜಕಾರಣವನ್ನು ಹೆಚ್ಚು ಲಕ್ಷದಲ್ಲಿ ಇಟ್ಟು ಹೆಚ್ಚಿನ ಸಮಸ್ಯೆಗಳ ಬಗ್ಗೆ ತೀರ್ಮಾನವಾಗುವಂತೆ ಕೃಷಿ ವಿಶ್ವವಿದ್ಯಾಲಯಗಳ ಹಣೆಬರಹವೂ ಆಯಿತು. ಕೆಲವು ಕಡೆಗೆ ರೊಚ್ಚಿಗೆದ್ದ ಜನರನ್ನು ಸಮಾಧಾನ ಮಾಡುವುದಕ್ಕಾಗಿ ಅವರ ಪ್ರದೇಶದಲ್ಲಿ ಒಂದು ಕೃಷಿ ಕಾಲೇಜು ತೆರೆಯುವಂತಾಯಿತು. ಜೋಬನೇರದ ಠಾಕೂರರು ಹಿಂದೆಯೇ ಒಂದು ಕೃಷಿ ಶಾಲೆಯನ್ನು ತೆಗೆದಿದ್ದರು. ನಂತರ ಅದನ್ನು ಕಾಲೇಜಿಗೆ ಪರಿವರ್ತಿಸಿದರು. ಗೋದಾಮಿನಂತೆ ಕಟ್ಟಿದ ಒಂದೇ ಒಂದು ಕಟ್ಟಡಕ್ಕೆ ಕಾಲೇಜು ಸೀಮಿತಗೊಂಡಿತ್ತು. ಉತ್ತರ ಪ್ರದೇಶದಲ್ಲಿ ಆ ಕಾಲದಲ್ಲೂ ನೌಕರಿಗಳು ಸಿಗುವುದು ದುಸ್ತರವಾಗಿದ್ದರಿಂದ ಸುಶಿಕ್ಷಿತ ನಿರುದ್ಯೋಗಿಗಳು ಅನೇಕರು ಜೋಬನೇರ ಕಾಲೇಜನ್ನು ಸೇರಿಕೊಂಡರು. ಠಾಕೂರರಿಗೆ ಕಾಲಕಾಲಕ್ಕೆ ವೇತನ ಕೊಟ್ಟು ಪೂರೈಸುತ್ತಿರಲಿಲ್ಲವಂತೆ. ಹೀಗಾಗಿ ಆಗಾಗ ಧಾನ್ಯ, ಕಾಳುಕಡಿಗಳನ್ನು ವೇತನ ರೂಪವಾಗಿ ಕೊಡಮಾಡುತ್ತಿದ್ದರಂತೆ! ಆದರೆ ರಾಜಸ್ಥಾನ ಸರಕಾರದಲ್ಲಿ ಅವರ ವರ್ಚಸ್ಸು ಚೆನ್ನಾಗಿ ಇದ್ದುದರಿಂದ ಕಾಲೇಜಿಗೆ ಧನ ಸಹಾಯ ಒದಗುವಂತೆ ಸಾಧ್ಯವಾಯಿತು. ರಾಜಸ್ಥಾನದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿತವಾಗುವ ವಿಚಾರ ಬಂದಾಗ ಸರಕಾರ ಈ ಕಾಲೇಜನ್ನು ವಹಿಸಿಕೊಳ್ಳುವಂತೆ ಒತ್ತಾಯಿಸಿದರು. 'ರಾಜಸ್ಥಾನ ಕೃಷಿ ವಿಶ್ವವಿದ್ಯಾಲಯ'ದ ಮುಖ್ಯ ಕಚೇರಿ ಜಯಪುರದಲ್ಲಿ ಆಯಿತು. ಕಾಲೇಜು ಜೋಬನೇರದಲ್ಲಿ ಉಳಿಯಿತು. ಜೀವನದ ಸೌಲಭ್ಯಗಳು ಹೆಚ್ಚು ಇಲ್ಲದ ಜೋಬನೇರದಿಂದ ಕಾಲೇಜನ್ನು ಜಯಪುರಕ್ಕೆ ಒಯ್ಯಬೇಕೆಂದು ಎಷ್ಟು ಯತ್ನಿಸಿದರೂ ಠಾಕೂರರು ತಡೆಹಿಡಿದರು. ಮುಖ್ಯಮಂತ್ರಿಗಳು ಉದಯಪುರದವರಾದ್ದಂದ ತಮ್ಮ ಊರಿನಲ್ಲೇ ಒಂದು ಕೃಷಿ ವಿಶ್ವವಿದ್ಯಾಲಯ ಇರಬೇಕು ಎಂದು ಅವರಿಗೆ ಅನ್ನಿಸಿದ್ದು ಸಹಜ. ರಾಜಕಾರಣಿಗಳು ರಾಜಮಹಾರಾಜರ ಸ್ಥಾನಗಳನ್ನು ಆಕ್ರಮಿಸಿದಾಗ ಅವರ ಅನಿಸಿಕೆಗಳು ನನಸಾಗದೇ ಉಳಿದಾವೇ? ಜೈಪೂರಿನಲ್ಲಿ ಆಗಲೇ ಒಂದು ವಿಶ್ವವಿದ್ಯಾಲಯವಿದ್ದುದರಿಂದ ಕೃಷಿ

ವಿಶ್ವವಿದ್ಯಾಲಯವನ್ನು ಉದಯಪುರಕ್ಕೆ ಸ್ಥಳಾಂತರಿಸಬೇಕೆಂದೂ ಉದಯಪುರದ ಕೃಷಿ ಕಾಲೇಜನ್ನು ಅದಕ್ಕೆ ಜೋಡಿಸಬೇಕೆಂದೂ ತೀರ್ಮಾನವಾಯಿತು. ಜೋಬನೇರ, ಉದಯಪುರಗಳ ಕೃಷಿ ಕಾಲೇಜು, ಬಿಕಾನೇರದ ಗೋ ಮತ್ತು ಹೈನಶಾಸ್ತ್ರದ ಕಾಲೇಜುಗಳು ಈ ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಗಾದವು.

ಅಮೇರಿಕನ್ ಶಿಕ್ಷಣ ಪದ್ಧತಿಯ ಇನ್ನೊಂದು ವೈಶಿಷ್ಟ್ಯವೆಂದರೆ ವರ್ಷದ ಕೊನೆಯಲ್ಲಿ ಇರುವ ಒಂದೇ ಒಂದು ಪರೀಕ್ಷೆಗೆ ಮಹತ್ವ ಕೊಡದೇ ಪ್ರತಿದಿನ ವಿದ್ಯಾರ್ಥಿಗಳು ಮಾಡುವ ಕೆಲಸಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡುವದು, ಮತ್ತು ಕಲಿಸಿದ ಪ್ರಾಧ್ಯಾಪಕರೇ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಅವರ ಫಲಿತಾಂಶಗಳನ್ನು ತೀರ್ಮಾನಿಸುವುದು. ಈ ಪದ್ಧತಿ ಸರಿಯಾಗಿ ನಡೆಯಬೇಕಾದರೆ ಶಿಕ್ಷಕರು ಹೆಚ್ಚಿನ ಪರಿಶ್ರಮಿಗಳು ಮತ್ತು ನಿಷ್ಪಕ್ಷಪಾತಿಗಳು ಇರಬೇಕು. ಹೆಚ್ಚಿನ ಭಾರತೀಯ ಶಿಕ್ಷಕರಲ್ಲಿ ಈ ಗುಣಗಳಿಲ್ಲ. ರಾಜಸ್ಥಾನಿಗಳು ಉಳಿದವರನ್ನು ಮೀರಿಸಿದ್ದಾರೆ. ಹೆಚ್ಚಿನ ಶ್ರಮವಹಿಸದೇ, ಕಲಿಸಬೇಕಾದ್ದನ್ನು ಕಲಿಸದೇ ಕ್ಲಾಸಿನಲ್ಲಿ ಕಲಿಸದೇ ಇದ್ದುದನ್ನು ಪರಿಕ್ಷೆಯಲ್ಲಿ ಕೇಳುವದಿಲ್ಲವೆಂದು ಹೇಳಿ, ವಿದ್ಯಾರ್ಥಿಗಳ ಯೋಗ್ಯತೆಗೂ ಮೀರಿ ಅವರಿಗೆ ಗುಣಗಳನ್ನು ಕೊಡಲಾರಂಭಿಸಿದ್ದರಿಂದ ಶಿಕ್ಷಕ - ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಕೃತಜ್ಞರಾದರು. ಈ ವ್ಯವಸ್ಥೆ ಇದ್ದುದರಿಂದ ವಿದ್ಯಾರ್ಥಿಗಳು ವಿಷಯ ಜ್ಞಾನ ಮಾಡಿಕೊಳ್ಳುವ ಗೊಡವೆಗೆ ಹೋಗದೇ ಶಿಕ್ಷಕರ ಮರ್ಜಿ ಹಿಡಿಯುವುದರ ಕಡೆಗೆ ಹೆಚ್ಚಿನ ಗಮನ ಕೊಟ್ಟರು. ಅವರು ಜಯಪುರಕ್ಕೆ ಹೊರಟಾಗ ಬಸ್ಸು, ಟ್ರೇನುಗಳಲ್ಲಿ ಸ್ಥಳ ಕಾದಿರಿಸುವುದು, ಅವರ ಮಕ್ಕಳನ್ನು ಎತ್ತಿಕೊಳ್ಳುವದು, ಜಯಪುರಕ್ಕೆ ಹೋದಾಗೊಮ್ಮೆ ಏನು ಬೇಕೆಂದು ವಿಚಾರಿಸಿ ಗುರುದಕ್ಷಿಣೆಯ ರೂಪದಲ್ಲಿ ಅವನ್ನು ಸಲ್ಲಿಸುವದು, ಮೇಲಿಂದ ಮೇಲೆ ಶಿಕ್ಷಕರ ಮನೆಗೆ ಭೇಟಿಯಿತ್ತು, ಅವರಿಗೆ ಇಷ್ಟವಿದ್ದ ರಾಜಕಾರಣದಲ್ಲಿ ಆಸ್ಥೆ ವಹಿಸುವುದು, ಮುಂತಾದ್ದನ್ನು ಆರಂಭಿಸಿದರು. ಇಂತಹ ವಿದ್ಯಾರ್ಥಿಗಳು ಒಮ್ಮೆಯೂ ಹೊಲಗಳಿಗೆ ಹೋಗದೇ ಸೇಂಗಾಕಾಳು ಬೇರಿಗೆ ಆಗುತ್ತವೆಯೋ, ಟೊಂಗೆಗೆ ಆಗುತ್ತವೆಯೋ, ಎಂದು ಅರಿಯದೇ ಪ್ರಾಧ್ಯಾಪಕರು ಕೊಟ್ಟ ನೋಟ್ಸುಗಳನ್ನು ಕಂಠಪಾಠಮಾಡಿ, ಅವರು ಸೂಚಿಸಿದ ಪ್ರಶ್ನೆಗಳಿಗೆ ಉತ್ತರ ತಯಾರಿಸಿ, ಕೃಷಿಪದವೀಧರರಾದರು. ಇಂಥವರಿಂದ ದೇಶದ ಕೃಷಿಯ ಉತ್ಪಾದನೆ ಹೇಗೆ ಹೆಚ್ಚಾಗಬೇಕು? ಇಷ್ಟಾಗಿ ಪದವಿ ಪಡೆದ ನಂತರ ಕೃಷಿಶಾಲೆ, ಕಾಲೇಜುಗಳಲ್ಲಿ ಶಿಕ್ಷಕರಾಗಲು ಅಥವಾ ಕೃಷಿ ಆಫೀಸರರಾಗಿ ಸರಕಾರೀ ನೌಕರಿ ಮಾಡಲು ಇವರೆಲ್ಲ ಯತ್ನಿಸುತ್ತಾರೆ. ಈ ಕಾಲೇಜಿನ ಕೃಷಿ ಪದವೀಧರನೊಬ್ಬ ಎಗ್ರಿಕಲ್ಚರ್ ಆಫೀಸರನಾಗಿ ಹಳ್ಳಿಯೊಂದರಲ್ಲಿ ಬೆಳೆಗಳ ಪರೀಕ್ಷೆಗೆಂದು ಹೋದನಂತೆ. ಹಳ್ಳಿಗರೆಲ್ಲ ತಮ್ಮ ಮೆಣಸಿನ

ಕಾಯಿಯ ಬೆಲೆಗೆ ಕೀಟಬಾಧೆ ಅತಿಯಾಗಿ ಬೆಳೆಯೆಲ್ಲ ನಷ್ಟವಾಗುವ ಸಂಭವವಿದೆಯೆಂದೂ ಅದಕ್ಕೆ ನಿವಾರಣೋಪಾಯಗಳನ್ನು ಸೂಚಿಸಿರಿ ಎಂದೂ ಅವನನ್ನು ಹೊಲಕ್ಕೆ ಕರೆದೊಯ್ದು ತೋರಿಸಿದರಂತೆ. ಕಂಠಪಾಠಮಾಡಿದ ಯಾವ ಟಿಪ್ಪಣಿಯೂ ಆಗ ಅವನ ಸಹಾಯಕ್ಕೆ ಬಾರದ್ದರಿಂದ ಒಕ್ಕಲಿಗರಿಗೆ ಹೇಳಿದ್ದ, "ನೋಡಿ, ಹಸಿರು ಮೆಣಸಿನಕಾಯಿ ಬೆಳೆಯುವುದರಿಂದ ಕೀಟಗಳಿಗೆ ಆಹ್ವಾನ ಕೊಟ್ಟಂತೆ. ಅದೇ ಕೆಂಪು ಮೆಣಸಿನಕಾಯಿ ಬೆಳೆದರೆ ಆ ಬಣ್ಣಕ್ಕೆ ಹೆದರಿ ಕೀಟಗಳು ಹತ್ತಿರ ಸುಳಿಯಲಿಕ್ಕಿಲ್ಲ." ಈ ಉಪದೇಶ ಕೇಳಿ ಆ ಹಳ್ಳಿಗರು ಹಣೆ ಹಣೆ ಬಡೆದುಕೊಂಡರಂತೆ!

೧೪. ಇನ್ನೆರಡು ಕೈ

ವೇತನ ಇಂದು ಬಂದೀತು, ನಾಳೆ ಬಂದೀತು ಎಂಬ ನಿರೀಕ್ಷಣೆಯಲ್ಲಿ ಕೈಯಲ್ಲಿದ್ದ ನಾಲ್ಕು ಕಾಸು ಖರ್ಚಾಗಿ ಹೋದವು. ವೇತನ ಕಳಿಸುವವರು ಮರೆತಿರಬೇಕೆಂದು ನೆನಪಿನ ಪತ್ರ ಕಳಿಸಿದೆ. ಏನೂ ಉಪಯೋಗವಾಗಲಿಲ್ಲ. ಹಣ ಬೇಕಾದರೆ ಕೊಡುತ್ತೇನೆಂದು ಬಿ.ಪಿ. ಎರಡೂ ಮೂರು ಬಾರಿ ಹೇಳಿದರು. ಡೀನರು ಮುಂಗಡವಾಗಿ ಕಾಲೇಜಿನಿಂದ ಹಣ ಕೊಡಿಸುವ ವ್ಯವಸ್ಥೆ ಮಾಡುತ್ತೇನೆಂದರು. ಊರಿನಲ್ಲಿ ನನ್ನ ಅಸಹಾಯ ಸ್ಥಿತಿ ತಂದೆಯವರಿಗೆ ತಿಳಿದಿದ್ದರೆ ಅವರಾಗಿ ತಂತಿಯಿಂದ ಕಳಿಸುತ್ತಿದ್ದರು. ಯಾರಿಂದಲೂ ಸಾಲ ಪಡೆಯಬಾರದೆಂದು ನಿರ್ಧರಿಸಿದೆ. ಸರಕಾರಕ್ಕೇ ನಿರ್ಭಿಡೆಯಿಂದ ಬಿರುಸಾದ ಭಾಷೆಯ ಪತ್ರ ಬರೆದಾಗ, ನೌಕರಿಗೆ ಹಾಜರಾದ ಬಗ್ಗೆ ಕಾಗದ ಪತ್ರಗಳನ್ನು ಕಳಿಸಲು ಕೇಳಿದರು. ಇದಾಗಲೇ ಇವನ್ನೆಲ್ಲ ಕಳಿಸಿಯಾಗಿದ್ದರೂ ಸಂಬಳ ಪಡಯಬೇಕಾದ್ದರಿಂದ ಇನ್ನೊಮ್ಮೆ ಕಳಿಸಿದೆ. ಅನಿರೀಕ್ಷಿತವಾಗಿ, ಕೊನೆಗೊಮ್ಮೆ ಎರಡು ತಿಂಗಳ ವೇತನದ ಸ್ಟೇಟ ಬ್ಯಾಂಕಿನ ಡ್ರಾಫ್ಟ, ರಿಜಿಸ್ಟರ ಆಗಿ ಬಂದಿತು. ನಾಲ್ಕು ವರ್ಷಗಳ ನಂತರ ನನ್ನ ಗಳಿಕೆಯ ಡ್ರಾಫ್ಟ ನೋಡಿಯೇ ಸಂತೋಷಪಟ್ಟೆ. ಅದು ಕ್ರಾಸ್ ಮಾಡಿದ್ದರಿಂದ ಹಣ ಕೊಡಲು ತೊಂದರೆ ಮಾಡಬಹುದೆಂದು ಸಂಗಡ ಪಾಸಪೋರ್ಟ್ ತೆಗೆದುಕೊಂಡು , ಒಂದು ದಿನದ ರಜೆ ಪಡೆದು ಜಯಪುರಕ್ಕೆ ಧಾವಿಸಿದೆ. ಸಾಂಗಾನೇರ ಗೇಟಿನ ಹತ್ತಿರ ಇರುವ ಸ್ಟೇಟ ಬ್ಯಾಂಕಿಗೆ ಮುಟ್ಟುವ ಹೊತ್ತಿಗೆ ಬ್ಯಾಂಕ ತೆರೆಯುವ ವೇಳೆಯಾಗಿ ಹೋಗಿದ್ದರೂ ಗುಮಾಸ್ತರು ವೀಳ್ಯವನ್ನು ಜಗಿಯುತ್ತ, ತೇಗುತ್ತ ನಿಧಾನವಾಗಿ ಬರುತ್ತಿದ್ದರು. “ಉಳಿತಾಯ” ವಿಭಾಗದಲ್ಲಿ ನಿಂತು ಕಾದೆ. ಎಷ್ಟೋ ಹೊತ್ತಿನ ಮೇಲೆ ಕಾರಕೂನ ಬೇರೊಂದು ಸಾಲಿಗೆ ಹೋಗುವಂತೆ ಆಜ್ಞಾಪಿಸಿದ. ಅಲ್ಲಿಯ ಗುಮಾಸ್ತ ಊಟಮಾಡಿ ಸಾಯಕಲ್ ಓಡಿಸಿ ಆಫೀಸಿಗೆ ಮುಟ್ಟುವಷ್ಟರಲ್ಲಿ ಹಸಿವಾದ್ದರಿಂದ ಚಹಾಕ್ಕೆ ಹೋಗಿದ್ದನೆಂದು ತಿಳಿಯಿತು. ಹಿಂತಿರುಗುತ್ತಿದ್ದಂತೆ ಚಹ ಕುಡಿಸಿದ ಗೆಳೆಯನ ಕೆಲಸಮಾಡಿಕೊಡಲು ಅವನನ್ನು ಕರೆದು ಕೊಂಡೇ ಕೌಂಟರ ಒಳಗೆ ಹೊಕ್ಕ, ಅರ್ಧ ತಾಸು ಕಾದಮೇಲೆ ನನ್ನ ಡ್ರಾಫ್ಟ ಒಮ್ಮೆ ನೋಡಿ, ನನ್ನ ಮುಖ ನೋಡಿ “ಇಲ್ಲಿ ನಿಮ್ಮ ಖಾತೆ ಇದೆಯೇ?” ಎಂದು ಕೇಳಿದ. ಇಲ್ಲವೆಂದಾಗ ಪರಿಚಯದವರ ಖಾತೆಗೆ ಜಮಾಮಾಡಿ ಹಣ ಪಡೆಯಬಹುದೆಂದ. “ಈ ಊರಿಗೆ ನಾನು ಹೊಸಬ. ಪರಿಚಯದ

ಖಾತೆದಾರರು ಯಾರೂ ಇಲ್ಲ......" ಎಂದು ಹೇಳುವುದನ್ನು ಕೇಳುವಷ್ಟೂ ತಾಳ್ಮೆ ತೋರದೇ "ಮ್ಯಾನೇಜರರನ್ನು ನೋಡಿ" ಎಂದ. ಹಿಂದಿ ವರ್ತಮಾನ ಪತ್ರಿಕೆ ಓದುತ್ತಿದ್ದ ಮ್ಯಾನೇಜರ, ಗಿರಾಕಿಯ ಸಮಸ್ಯೆ ತಿಳಿದುಕೊಳ್ಳಲು ಹದಿನೈದು ನಿಮಿಷ ತೆಗೆದುಕೊಂಡ. ನನ್ನ ಸಮಸ್ಯೆಯನ್ನು ವಿವರಿಸಿ ಪರಿಚಯದ ಪಾಸಪೋರ್ಟ್ ಇದೆಯೆಂದೆ. ಬಹುಶಃ ವೃತ್ತಪತ್ರಿಕೆಯಲ್ಲಿ ಬ್ಯಾಂಕಿನವರು ಕೇಳಿದ ನ್ಯಾಯವಲ್ಲದ ವೇತನ ಕೊಡಲು ಸರಕಾರ ಒಪ್ಪದಿದ್ದ ವಿವರಗಳು ಬಂದಿದ್ದವೋ ಏನೋ. "ಪಾಸಪೋರ್ಟ್ ನಮಗೆ ಸಂಬಂಧವಿಲ್ಲ, ಖಾತೆ ಇಲ್ಲದವರಿಗೆ ಡ್ರಾಫ್ಟ ಹಣ ಕೊಡಬಾರದೆಂದು ನಮ್ಮ ಕಾನೂನು ಹೇಳುತ್ತದೆ" ಎಂದು ಮತ್ತೆ ವೃತ್ತಪತ್ರಿಕೆ ಓದಲಾರಂಭಿಸಿದ. "ವಿಶ್ವದ ಎಲ್ಲ ರಾಷ್ಟ್ರಗಳೂ ಮನ್ನಿಸುವ ಪಾಸಪೋರ್ಟ ನಿಮಗೆ ಏನೂ ಅಲ್ಲವೇ? ನ್ಯಾಯವಾಗಿ ಹಣ ಪಡೆಯಲು ಬಂದವರಿಗೆ ಕಾನೂನು ಹೇಳುತ್ತಿರಿ. ಅದೇ ದೋಚಿಕೊಂಡು ಬಂದ ಚೆಕ್‌ಗೆ ನಕಲಿ ಸಹಿ ಹಾಕಿದರೆ ಹಣ ಕೊಡುತ್ತೀರಿ" ಎಂದಾಗ ಅವನಲ್ಲಿ ಏನೂ ಪರಿವರ್ತನೆಯಾಗಲಿಲ್ಲ. ಬೇರೆ ರೀತಿಯಲ್ಲಿ ಹಣ ಪಡೆಯಬಹುದಾದ ಮಾರ್ಗವನ್ನೂ ಆತ ಹೇಳಲಿಲ್ಲ. ಪತ್ರಿಕೆ ಓದುತ್ತಲೇ ಹೋದ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ನೊಂದುಕೊಳ್ಳುವಂತೆ ಆಯಿತು. ತಂದೆ ತಾಯಿ ಬಳಗ, ಆಪ್ತ - ಮಿತ್ರರಾರು ಇಲ್ಲದ ಅಮೇರಿಕೆಗೆ ಹೋದ ಹೊಸದರಲ್ಲಿ ನನ್ನ ಶಿಷ್ಯ ವೇತನದ ಚೆಕ್ ಕೊಡಬೇಕಾದರೆ ನನ್ನ ಸಹಿ ತೆಗೆದುಕೊಳ್ಳಲಿಲ್ಲ. ಪರಿಚಯಪತ್ರ ಕೇಳಿರಲಿಲ್ಲ. ಬ್ಯಾಂಕಿನವರೂ ಅಷ್ಟೇ. ಖಾತೆ ಬೇಕು. ಪರಿಚಯ ಬೇಕು ಎಂದು ಒಮ್ಮೆಯೂ ಕೇಳದೇ ಹಣ ಕೊಟ್ಟಿದ್ದರು. ಅದೇ ಹಣದಿಂದ ಯಾರ ಪರಿಚಯವಿಲ್ಲದಿದ್ದರೂ ಖಾತೆಯನ್ನು ಪ್ರಾರಂಭಿಸಿದ್ದೆ. ತಮ್ಮ ಗಿರಾಕಿಗಳಲ್ಲಿ ಬಹಳಷ್ಟು ಜನ ಸಜ್ಜನರು, ಅವರ ಸೇವೆಗಾಗಿಯೇ ಕಾನೂನುಗಳು ಎಂದು ನಂಬಿರುವ ದೇಶಕ್ಕೂ, ಎಲ್ಲರೂ ಕಪಟಿಗಳು, ಸದಾ ಬ್ಯಾಂಕನ್ನು ದೋಚಿಕೊಂಡು ಹೋಗುವ ಹವಣಿಕೆಯಲ್ಲಿರುತ್ತಾರೆಂದು ಭಾವಿಸಿ ಕಾನೂನು ಮಾಡಿದ ಸ್ವದೇಶಕ್ಕೂ ಅಂತರ ನೋಡಿ ರೋಷ ಬಂದಿತು. ಭಾರತದ ಮೂಲೆ ಮೂಲೆಗಳಲ್ಲಿ ಗಿರವಿ ಅಂಗಡಿಗಳನ್ನಿಟ್ಟು, ಬಟ್ಟೆಯಿಂದ ಬಂಗಾರದ ಸಾಮಾನುಗಳ ಮೇಲೆ ಸಾಲ ಕೊಡುವ ಮಾರವಾಡಿಗಳೇನಾದರೂ ಸಹಾಯ ಮಾಡಬಹುದೇ ಎಂದು ಅಂಥ ಅಂಗಡಿಯಲ್ಲಿ ವಿಚಾರಿಸಿದೆ. ಡ್ರಾಫ್ಟನ್ನು ನೋಡಿ 'ಇದು ಸರಕಾರದವರು ಕೊಟ್ಟ ಚೆಕ್, ನೋಟುಗಳು ಇದ್ದಂತೆ' ಎಂದು ತಮ್ಮಲ್ಲಿ ವಿಚಾರಿಸಿ, ಯಾವ ಸಾಕ್ಷಿ, ಪುರಾವೆಗಳಿಲ್ಲದೇ. ಎಂಟು ರೂಪಾಯಿ ಕಡಿಮೆ ಮಾಡಿ ಹಣವನ್ನು ಕೊಟ್ಟುಬಿಟ್ಟರು. ಓಣಿಗೊಂದು ಬ್ಯಾಂಕ್ ಇದ್ದರೂ ಗಿರವಿ ಅಂಗಡಿಗಳು ಯಶಸ್ವಿಯಾಗಿ ಯಾಕೆ ನಡೆಯುತ್ತವೆ? ಎಂದು ಪ್ರಥಮ ಬಾರಿ ಅರಿತುಕೊಂಡೆ.

ಕೈಯಲ್ಲಿ ಹಣ ಬಂದಿದ್ದರಿಂದ ಸಂಸಾರಿಯಾಗುವ ಸಿದ್ಧತೆ ನಡೆಸಿದೆ. ಪತ್ನಿಗೆ ಅಡಿಗೆಗೆ ಸಹಾಯವಾಗಲೆಂದು ನಾಲ್ಕಾರು ಸ್ಟೀಲಿನ ಪಾತ್ರೆಗಳನ್ನೂ, ಊಟಕ್ಕೆಂದು ತಾಟು - ಬಟ್ಟಲು ಇನ್ನಿತರ ಕೆಲ ಸಾಮಾನು ಕೊಂಡೆ. ಹೊಸದಾಗಿ ಬಂದ ಅಧ್ಯಾಪಕ ವರ್ಗಕ್ಕೆ ಕಾಲೇಜಿನವರು ಅರ್ಧ ಕ್ವಿಂಟಲ್ ಗೋದಿಯನ್ನು ಮಾರುವರೆಂದು ತಿಳಿದು ಮೂವತ್ತೆರಡುವರೆ ರೂಪಾಯಿ ಕೊಟ್ಟು ಅದನ್ನು ಕೊಂಡು ತಂದೆ. ಅದೆಂತಹ ಗೋಧಿ! ಒಂದು ಕಲ್ಲು, ಒಂದು ಕಸಕಡ್ಡಿಯಿರಲಿಲ್ಲ. ಪ್ರತಿಯೊಂದು ಕಾಳು ಬಂಗಾರ ಮಣಿಯಂತಿದ್ದವು. ಅದನ್ನು ಚೀಲವೊಂದರಲ್ಲಿ ತುಂಬಿಸಿ ಕಟ್ಟಿಟ್ಟೆ. ಸಂಗಡ ಕಾಲೇಜದವರು ಬೆಳೆಸಿದ ಎಳ್ಳು, ಹೆಸರುಕಾಳುಗಳನ್ನು ಕೊಂಡಾಗ ಸಹೋದ್ಯೋಗಿಗಳು ಗೇಲಿ ಮಾಡಿದರು. ವಿವಾಹದ ಪೂರ್ವದಲ್ಲಿಯೇ ಸಂಸಾರಕ್ಕಾಗಿ ಇಷ್ಟೊಂದು ದುಡಿಯುತ್ತಿಯಾ. ಪತ್ನಿ ಬಂದ ಮೇಲೆ ಏನು ಮಾಡುವಿ ಎಮದು ಊಹಿಸುವುದೂ ಕಷ್ಟ. ನಿನ್ನ ಪತ್ನಿ ಒಳ್ಳೆಯ ಹಣ್ಣನ್ನೇ ಸೆರಗಿಗೆ ಹಾಕಿಕೊಂಡಿದ್ದಾಳೆ' ಎಂದು ತಮ್ಮ ವಿವಾಹ ಪೂರ್ವದ ದಿನಗಳನ್ನು ವಿವರಿಸಿದರು.

ವಿವಾಹಕ್ಕಾಗಿ ಹತ್ತು ದಿನ ರಜೆ ಕೇಳಿ ಅರ್ಜಿ ಸಲ್ಲಿಸಿದ್ದೆ. ಅಳೊಬ್ಬ ಬಂದು ಪಂಡಿತಜಿ (ಮುಖ್ಯ ಗುಮಾಸ್ತ) ನಿಮ್ಮನ್ನು ಕಾಣಬೇಕೆನ್ನುತ್ತಾರೆ ಎಂದು ಹೇಳಿ ಹೋದ. ಅಲ್ಲಿ ಹೋದಾಗ ಮನೆಯಲ್ಲಿ ಕೂಡ್ರುವಂತೆ ಕಾಲು ಖುರ್ಚಿಯಲ್ಲಿ ಮಡಿಸಿಕೊಂಡು ಕುಳಿತು ಹಲ್ಲಿನಲ್ಲಿ ಸಿಕ್ಕಿಕೊಂಡ ತಾಂಬೂಲವನ್ನು ಕಡ್ಡಿಯಿಂದ ಕುರುಕುತ್ತ ಹೊರಗೆ ಹಾಕುತ್ತಿದ್ದ ಒಬ್ಬಾತ "ತಾವೇ ಕಾಮತರೇ? ಇಷ್ಟು ದಿನ ತಮ್ಮ ದರ್ಶನವೇ ಆಗಲಿಲ್ಲವಲ್ಲ?" ಎಂಬ ಮಾತು ಪ್ರಾರಂಭಿಸಿ 'ಹತ್ತು ದಿನದ ರಜೆಗೆ ಸಲ್ಲಿಸಿದ ಅರ್ಜಿ ಬಂದಿದೆ. ಆದರೆ ನೌಕರಿಗೆ ಸೇರಿ ಎರಡು ತಿಂಗಳಾದ್ದರಿಂದ ಎರಡು ದಿನಕ್ಕಿಂತ ಹೆಚ್ಚಿನ ರಜೆ ಮಂಜೂರ ಮಾಡಲು ಸಾಧ್ಯವಿಲ್ಲ" ಎಂದು ಹೇಳಿಬಿಟ್ಟ. "ಸಾಧ್ಯವೋ ಅಸಾಧ್ಯವೋ ಗೊತ್ತಿಲ್ಲ; ಡೀನರು ಒಪ್ಪಿಗೆ ಕೊಟ್ಟಿದ್ದರಿಂದ ಅರ್ಜಿ ಸಲ್ಲಿಸಿದ್ದೇನೆ. ಅವರಿಗೇ ವಿಚಾರಿಸಬೇಕು" ಎಂದೆ. "ವಿಶ್ವವಿದ್ಯಾಲಯದ ಕಾನೂನುಗಳು ಏನೇನು ಇವೆ, ಎಂದು ನಾನೇ ಅವರಿಗೆ ವಿವರಿಸುವಾಗ, ಅವರಿಂದ ನಾನು ತಿಳಿದುಕೊಳ್ಳಬೇಕೇ? ಎಂದು ಮೂಲೆಯಲ್ಲಿದ್ದ ಒಂದು ಮಡಕೆಯಿಂದ ನೀರು ಎತ್ತಿ ಒಂದು ಗುಟುಕು ಬಾಯಲ್ಲಿ ಹಾಕಿ ಮುಕ್ಕಳಿಸಿ ಕಿಟಕಿಯಿಂದ ಹೊರಗೆ ಉಗುಳಿದ. "ನಿಮಗೆ ತಪ್ಪು ಗ್ರಹಿಕೆಯಾಗಿರಬೇಕು. ನಾನು ವಿಶ್ವವಿದ್ಯಾಲಯದ ಅನ್ನ ಉಣ್ಣುತ್ತಿಲ್ಲ. ಕೇವಲ ಕೇಂದ್ರ ಸರ್ಕಾರದ ಕಾನೂನುಗಳು ನನಗೆ ಅನ್ವಯಿಸುತ್ತವೆ" ಎಂದಾಗ ಹೆಯ್! ಹೆಯ್! ಹೆಯ್ ಎಂದು ನಗುತ್ತ ತನ್ನ ಅಜ್ಞಾನಕ್ಕೆ ಮರುಗುತ್ತ "ಹಾಗಾದರೆ ಡೀನ ಸಾಹೇಬರಿಗೇ ಕೇಳಿ ನೋಡುತ್ತೇನೆ. ರಜೆಯ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ಸುಖವಾಗಿ ಚತುರ್ಭುಜರಾಗಿ ಬನ್ನಿ. ಮಿಠಾಯಿ ತಿನ್ನಿಸಲು ಮರೆತೀರಿ ಮತ್ತೆ" ಎಂದು ಬೀಳ್ಕೊಂಡ,

ವಿಶ್ವವಿದ್ಯಾಲಯಕ್ಕೆ ಸೇರಿದ ಪ್ರತಿಯೊಬ್ಬನೂ ಈ ಪಂಡಿತಜಿಯ ದರ್ಶನ ಪಡೆದು ಅವನಿಗೆ ಸಲ್ಲಬೇಕಾದ ಕಪ್ಪಕಾಣಿಕೆ ಮುಟ್ಟಿಸಿದಾಗಲೇ ಅವರ ವೇತನದ ಕಾಗದ ಪತ್ರಗಳು, ಉದಯಪುರಕ್ಕೆ ಹೋಗಿ ಅವರಿಗೆ ಸಂಬಳ ಬರಲು ಪ್ರಾರಂಭವಾಗುವದು ರೂಢಿಯಂತೆ. ನನ್ನ ಸಂಬಳ ನೇರವಾಗಿ ನನ್ನ ಕೈ ತಲುಪುತ್ತಿದ್ದರಿಂದ ಪಂಡಿತಜಿಗೆ ಸಂಕಟವಾಗಿರಬೇಕು!

ತಿರುಗಿ ಊರಿಗೆ ಹೊರಟಾಗ ಕನಸಿನ ರಾಜ್ಯದಲ್ಲಿ ವಿಹರಿಸುತ್ತಿದ್ದುದರಿಂದ ಇಹಲೋಕದ ಆಗು-ಹೋಗುಗಳಲ್ಲಿ ಆಸಕ್ತಿ ಇರಲಿಲ್ಲ. ಮುಂಬಯಿಯಿಂದ ಬಾಲ್ಯದ ಸಂಗಾತಿ, ಆತ್ಮಿಯ, ಹಿತಚಿಂತಕ ಶ್ರೀನಾಥನು ನನ್ನನ್ನು ಕೂಡಿಕೊಳ್ಳುವವನಿದ್ದುದರಿಂದ ಅಲ್ಲಿ ಒಂದು ದಿನ ನಿಲ್ಲಬೇಕಾಯಿತು. ಪುಣೆಯಲ್ಲಿ ನಮ್ಮ ಟ್ರೇನಿನಲ್ಲಿಯೇ, ನನ್ನ ಭಾವೀ ಮೈದುನ ಪ್ರಕಾಶ, ಇನ್ನೊಬ್ಬ ಗೃಹಸ್ಥ ಮತ್ತು ಹಿರಿಯ ಮಹಿಳೆಯೊಡನೆ ಪ್ರಥಮ ವರ್ಗದ ಡಬ್ಬಿ ಹತ್ತುತ್ತಿದ್ದುದನ್ನು ನೋಡಿದೆ. ಗೃಹಸ್ಥರು ಅವನ ಮಾವನೆಂದೂ ಗೃಹಿಣಿ ದಿಲ್ಲಿಯಲ್ಲಿರುತ್ತಿದ್ದ ಮಾವಶಿಯೆಂದೂ ಆ ನಂತರ ತಿಳಿಯಿತು. ನನಗೆ ಪ್ರಕಾಶನ ಪರಿಚಯ ಸಿಕ್ಕರೂ ನನ್ನದು ಅವನಿಗೆ ಸಿಗುವದು ಸಾಧ್ಯವಿರಲಿಲ್ಲ. ಎಂಟು ವರ್ಷಗಳ ಹಿಂದೆ ನಾವು ಭೆಟ್ಟಿಯಾಗಿರಬೇಕು. ಆಗ ಆಡಿನಂತಿದ್ದ ನಾನು ಅಮೆರಿಕೆಯ ಹಾಲು ಕುಡಿದು ಆನೆಯಂತಾಗಿದ್ದೆ. ಮದುಮಗನು ಗಾಂಧೀವರ್ಗದಲ್ಲಿ ಮತ್ತು ಅವನ ಮದುವೆಗೆ ಹೊರಟವರು ಪ್ರಥಮ ವರ್ಗದಲ್ಲಿ ಹೊರಟದ್ದು ಮೋಜಾಗಿತ್ತು. ಹುಬ್ಬಳ್ಳಿಯಲ್ಲಿ ಅವರು ತಮ್ಮ ಹತ್ತಾರು ಸಾಮಾನುಗಳೊಡನೆ ಬಸ್‌ಗಾಗಿ ಕಾಯುವುದನ್ನು ನೋಡಿದೆವು. ಸ್ಟೇಶನ್ನಿಗೆ ಬಂದ ಬಸ್ಸಿನಲ್ಲಿ ಮುಕ್ಕಾಲು ಪಾಲು ರಿಝರ್ವೇಶನ್ ಆಗಿದೆ ಎಂದು ಕಂಡಕ್ಟರು ಹೇಳಿದ. ಮದುವೆಗೆ ಹೊರಟವರು ಹತ್ತಿದ ಹೊನ್ನಾವರದ ಬಸ್ಸನ್ನು ಹತ್ತದೇ ನಾವು ಕಾರವಾರ ಬಸ್ಸನ್ನು ಹತ್ತಿ ಅಂಕೋಲೆಯ ತಿಕೀಟು ಪಡೆದೆವು. ಅವರು ಹತ್ತಿದ ಬಸ್ಸಿನಲ್ಲಿ ನನ್ನ ಸಂಬಂಧಿಕರು, ಮದುವೆಗೆ ಹೊರಟುವರು ರಿಝರ್ವ ಮಾಡಿದ್ದರು. ಪ್ರಕಾಶನು ತಾನು ನಿಮ್ಮ ಸಂಬಂಧಿಕನಾಗುವವನಿದ್ದೇನೆ! ಎಂದು ಅವರೊಡನೆ ಸಲಿಗೆಯಿಂದ ಮಾತನಾಡಿ, ಜಾಗ ಗಿಟ್ಟಿಸಿಯೇ ಬಿಟ್ಟ. ಎಲ್ಲರೂ ನನ್ನ ಮದುವೆಯ ವಿಷಯವನ್ನೇ ಮಾತನಾಡುತ್ತಿದ್ದರು. ಇನ್ನೊಂದು ಸೀಟಿನಲ್ಲಿ ಕುಳಿತು ಇದನ್ನೆಲ್ಲ ನೋಡುತ್ತ ಕೇಳುವದೇ ನಮಗೊಂದು ಮೋಜಾಯಿತು! ಅಂಕೋಲದಲ್ಲಿ ಹೊನ್ನಾವರ ಬಸ್ಸು ಹತ್ತಿದರೆ ಅದರ ಡ್ರಾಯವರ ದಾವೂದನು ನನ್ನ ಸಹಪಾಠಿಯಾಗಬೇಕೇ? ವಿವಾಹ ಹೊನ್ನಾವರದ ಮೊದಲು ಬರುವ ಕುಮಟಾದಲ್ಲಿ ಜರುಗಲಿತ್ತು! ಭಾರೀ ಚಪ್ಪರ ಹಾಕಿದ ಮದುವೆಯ ಮನೆಯ ಮುಂದೆಯೇ ಅರೆ ನಿಮಿಷ, ಬಸ್ಸನ್ನು ನಿಲ್ಲಿಸಿ ದಾವೂದನು, "ಮದುಮಗಳೊಂದಿಗೆ ಮಾತನಾಡಿ ಬರಬಹುದು" ಎಂದು ತುಂಟ ನಗೆ ನಕ್ಕ,

"ಮದುವೆ ಮನೆಯ ಜನರು ಓಡಿ ಬರುವ ಮೊದಲೇ ನಿನ್ನ ಗಾಡಿಯನ್ನು ಓಡಿಸು ಮಹಾರಾಯ" ಎಂದು ಪರಿಪರಿಯಾಗಿ ವಿನಂತಿಸಿಕೊಂಡಾಗ ಹೊರಟು

ಸಕಾಲದಲ್ಲಿ ಮುದ್ರಣಕಾರನು ಆಮಂತ್ರಣ ಪತ್ರಿಕೆ ಸಿದ್ಧ ಮಾಡಿಕೊಡದ್ದರಿಂದ ಬೇರೆ ಬೇರೆ ಕಡೆ ಮುದ್ರಿಸಲು ಕೊಡಲಾಗಿತ್ತು, ಕೊನೆಗೆ ಮುಂಬಯಿ, ಧಾರವಾಡ, ರಾಯಚೂರ, ಕುಮಟಾಗಳಿಂದ ಆಮಂತ್ರಣಗಳ ಸುರಿಮಳೆಯೇ ಆಯಿತು. ನೆನಪಾದವರಿಗೆ, ಭೆಟ್ಟಿಯಾದವರಿಗೆಲ್ಲ ಅವನ್ನು ಹಂಚಿದರೂ ಇನ್ನೂ ಬಹಳಷ್ಟು ಉಳಿದಿದ್ದವು. ಅವನ್ನು ನಮ್ಮ ಭಾವಿ ಪುತ್ರನ ಮದುವೆಗೆ ಹೆಸರಷ್ಟೇ ಬದಲಾಯಿಸಿ ಕಳಿಸಿದರಾಯಿತು! ಎಂದು ಕಾದಿರಿಸಿದೆ. ಒಳ್ಳೆಯ ವರ ಸಿಕ್ಕಿದ್ದಾನೆಂದು ಮಾವನವರು ಶಕ್ತಿ ಮೀರಿ ಖರ್ಚು ಮಾಡಿದರೆ, ಅವರ ಮಗ ಮತ್ತು ವಧು ಕೂಡ ತಾವೂ ಸಾಧ್ಯವಿದ್ದಷ್ಟು ಹಣ ಹಾಕಿದ್ದರಿಂದ ವಿವಾಹದ ತಯಾರಿ ವೈಭವದಿಂದಲೇ ನಡೆದಿತ್ತು. ಬಾಡಿಗೆಯ ಕಲ್ಯಾಣಮಂಟಪದಲ್ಲಿ ಚುಟುಕಿನ ವಿವಾಹ ಮುಗಿಸಿ ನಂತರ ರಿಸೆಪ್ಷನದಲ್ಲಿ ಆಯ್ಸ್ ಕ್ರೀಮ್‌ದೊಂದಿಗೆ ಕೊನೆಗೊಳ್ಳುವ ವಿವಾಹದಲ್ಲಿ ಮೊದಲಿನಿಂದಲೂ ನನ್ನ ವಿಶ್ವಾಸ ಕಡಿಮೆ. ಮದುವೆ ಮನೆಯಲ್ಲಿ ವಿಶಾಲವಾದ ಅಂಗಳದ ತುಂಬ ತೆಂಗಿನ ಗರಿಗಳ ಚಪ್ಪರ ಹಾಕಲಾಗಿತ್ತು. ಅಡಿಗೆಯವರಿಗೆ ಬೇರೆಯೇ ತಾತ್ಪೂರ್ತಿಕ ಕೋಣೆ ನಿರ್ಮಿತವಾಗಿತ್ತು. ಬೇರೊಂದು ಮನೆಯಲ್ಲಿ ನಮ್ಮನ್ನು ಇಳಿಸಿದ್ದರು. ನಮ್ಮನ್ನು ಕರೆಯಲು ಹಿಲಾಲು, ಮಂಗಲವಾದ್ಯ ಗರ್ನಾಲು ಹಾರಿಸುತ್ತ ನೂರೆಂಟು ಜನ ಬಂದಾಗ ಹೆಮ್ಮೆ ಎನಿಸಿತು. ಬೆಳ್ಳಿಯ ತಾಟಿನಲ್ಲಿ ಕಲಶಗನ್ನಡಿ, ತಿಂಡಿಗಳನ್ನು ಹಿಡಿದು ಹೊರಟ ಉತ್ಸಾಹಿ ಹೆಂಗೆಳೆಯರ ಹಿಂದೆ ಹಿಲಾಲು ಬೆಳಕಿನಲ್ಲಿ ನಾನು ಮದುಮಗನಾಗಿ ಮೆರೆದಾಗ ದಿಗ್ವಿಜಯ ಮಾಡಿ ಬಂದವನಂತೆ ಭಾಸವಾಯಿತು! ಆಚೆ ಈಚೆಯ ಮನೆಯವರೆಲ್ಲ ವರನನ್ನು ನೋಡಲು ಓಡಿಬಂದರು. ಮದುಮಗ ನಾಲ್ಕು ವರ್ಷ ಅಮೇರಿಕೆಯಲ್ಲಿ ಇದ್ದನಂತೆ, ಅಲ್ಲಿ ಪಿ. ಎಚ್. ಡಿ. ಮಾಡಿದ್ದಾನಂತೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಆಫೀಸರನೆಂದು ನೇಮಕ ಹೊಂದಿದ್ದಾನಂತೆ. ಮನೆಯಿಂದ ತುಂಬ ಅನುಕೂಲವಾಗಿದ್ದಾನಂತೆ- ಎಂದು ತಾವು ಮದುಮಗನ ಬಗ್ಗೆ ಕೇಳಿದ ಗುಣಗಾನದಲ್ಲಿ ಎಂದಿನಂತೆ ಯಾವ ಸತ್ಯವೂ ಇಲ್ಲವೆಂದು ಗೋಣುಹಾಕಿದರು. 'ಮದುಮಕ್ಕಳ ಬಗ್ಗೆ ಕೇಳುತ್ತಿರುವ ಸಂಗತಿಗಳೆಲ್ಲ ಸತ್ಯವಾಗಿದ್ದರೆ ನಮ್ಮ ದೇಶದಲ್ಲಿ ಬಡತನವೇ ಇರುತ್ತಿರಲಿಲ್ಲ. ಆದರೆ ಇವರೆಲ್ಲ ಘಟೋತ್ಕಚನ ಸೃಷ್ಟಿಯಂತೆ. ವಿವಾಹವಾದ ಮರು ದಿನವೇ ಇವರ ಬಣ್ಣ ಬಯಲಾಗುತ್ತದೆ. ಉಳಿದವರಂತೆ ಈ ಮದುಮಗಳೂ ತನ್ನ ಭಾವೀ ಪತಿಯ ಬಗ್ಗೆ ಕಟ್ಟಿದ ಕನಸುಗಳಿಗೂ, ಇರುವಿಕೆಗೂ ಎಷ್ಟು ಅಂತರವಿದೆಯೆಂದು ಬೇಗ ತಿಳಿದುಕೊಂಡಾಳು! ಎಂದು ಭವಿಷ್ಯವಾಣಿ ನುಡಿದು ತಮ್ಮ ಕೆಲಸಕ್ಕೆ ಹೊರಟುಹೋದರು.

ಯಾರೋ ಕಾಲು ತೊಳೆದರು. ಯಾರೋ ಕೆಂಪು ನೀರಿನಿಂದ ದೃಷ್ಟಿ ತೆಗೆದರು. ಗಂಧದ ತಿಲಕ ಹಚ್ಚಿದರು. ಹೂಮಾಲೆ ಹಾಕಿ, ಕೆನೆಹಾಲು ಕುಡಿಯಲು ಕೊಟ್ಟರು. ಈ ಸತ್ಕಾರವನ್ನು ನೋಡಿ ದಿಬ್ಬಣದ ಹುಡುಗರೆಲ್ಲ ತಾವು ಬೇಗ ದೊಡ್ಡವರಾಗಿ ಮದುವೆ ಮಾಡಿಕೊಳ್ಳಬೇಕೆಂದು ಕನಸು ಕಟ್ಟಿದರು. ಬಾಳೆಯ ಎಲೆಗಳನ್ನು ದೊನ್ನೆಯಂತೆ ತುದಿಗಳನ್ನು ಮಡಿಸಿಟ್ಟು ಹಾಕಿ ಅತಿಥಿಗಳಿಗೆಲ್ಲ ಹಬ್ಬದ ಊಟವಾಯಿತು. ಸತತವಾಗಿ ಪ್ರಯಾಣ ಮಾಡಿದ್ದರಿಂದ ರಾತ್ರೆ ಮಲಗಿಕೊಂಡಾಗ ಒಣ ಕೆಮ್ಮು ಜೋರಾಗಿ ಕಾಣಿಸಿಕೊಂಡಿತು. ಮದು ಮನೆಯಲ್ಲೇನೋ ಜನ ಜಾಗರಣೆ ಮಾಡಿಯೇ ಹೂ ಕಟ್ಟುವದರಲ್ಲಿ ವೀಳ್ಯ ಮಾಡಿಡುವದರಲ್ಲಿ ಸಲಕರಣೆಗಳನ್ನು ಜೋಡಿಸುವುದರಲ್ಲಿ ಇದ್ದರೂ ಮದುಮಗನ ಕೆಮ್ಮಿಗೆ ಏನಾದರೂ ಔಷಧ ಮಾಡಿಕೊಡಬೇಕೆಂದು ಯಾರಿಗೂ ಹೊಳೆಯಲಿಲ್ಲ. ಹತ್ತಿ ತೊಗುವಲ್ಲಿ ನೊಣಕ್ಕೆ ಉಪವಾಸವಂತೆ! ಪುಣ್ಯಕ್ಕೆ ಮರುದಿನ ಎದ್ದಾಗ ಮದುವೆಯ ಉತ್ಸಾಹದಲ್ಲಿ ಕೆಮ್ಮು ಎಲ್ಲೊ ಅಡಗಿ ಹೋಗಿತ್ತು. ತೀರ ನಸುಕಿನಲ್ಲೆ ಭಂಡಾರಿ ವರ್ಗ ಮಂಗಲವಾದ್ಯ ಪ್ರಾರಂಭಿಸಿತ್ತು.

ನೆರೆಹೊರೆಯ ಮಕ್ಕಳೆಲ್ಲ ಹೊಸ ಬಟ್ಟೆ ಧರಿಸಿ ಬೆಳಗ್ಗಿನ ಉಪಹಾರಕ್ಕೆ ಸ್ವಯಂ ಆಮಂತ್ರಿತರಾಗಿ ಬಂದರು. ಅತಿಥಿಗಳಿಗೆ ಮದುಮಗನಿಗಾಗಿ ಇಟ್ಟ ತಿಂಡಿಯನ್ನು ತಾವೇ ಧ್ವಂಸಮಾಡಿದರು. ಹೆಂಗೆಳೆಯರೆಲ್ಲ ತೆಂಗಿನೆಣ್ಣೆ ಹಾಕಿ ಬಾಚಿದ ಕೂದಲಿನ ವಿವಿಧ ಕೇಶಾಲಂಕಾರಗಳನ್ನು ಮಾಡಿಕೊಂಡು, ಮಲ್ಲಿಗೆ, ಸೇವಂತಿಗೆ, ಅಬೋಲಿ ಹೂವಿನ ದಂಡೆಗಳನ್ನು ಮುಡಿದು, ಮುಖಕ್ಕೆ ಎಂದಿಗಿಂತಲೂ ಹೆಚ್ಚಿನ ಪೌಡರ ಲೇಪಿಸಿಕೊಂಡು ಇದ್ದ ಎಲ್ಲ ಒಡವೆಗಳನ್ನು ಧರಿಸಿ ಬನಾರಸಿ ಸಿರೆಗಳನ್ನು ಉಟ್ಟು ಚಪ್ಪರದ ತುಂಬ ವಯ್ಯಾರದಿಂದ ಓಡಾಡುತ್ತಿದ್ದರು. ರಾಜಸ್ಥಾನದ ರಂಗುರಂಗಿನ ಥಾಟು, ಬೆಡಗು ಇಲ್ಲಿ ಇಲ್ಲವಾದರೂ ತನ್ನದೇ ಬಗೆಯ ಸಡಗರ ಹಬ್ಬಿತ್ತು. ಮಹಿಳೆಯರು ಕೊಂಕಣಿ "ವೊವ್ಯೊ" ಹಾಡುತ್ತ ಬಳೆ ಸುರಿಯುವುದು, ಉದ್ದು ಬೀಸುವುದು ಮುಂತಾದ ಮದುವೆಯ ಕಾರ್ಯಕ್ರಮಗಳನ್ನು ಪ್ರಾರಮಭಿಸಿಯೇ ಬಿಟ್ಟರು.

"ಅಬೋಲೆಚೇ ಫೂಲ ತಾಂಬಡೆ ತಾಂಬಡೆ ದಿಸ್ತಾ
ಘೋವಾ ಪೊಳೊವ್ನು ಹಾಸ್ತಾ ಹೊಕ್ಕಲ ಆಮಗೆಲಿ.

(ಅಬೋಲೆ ಹೂ ಬಿರಿದು ಕೆಂಪು ಕೆಂಪಾಗಿ ಶೋಭಿಸುತ್ತದೆ. ವಧು, ವರನನ್ನು (ಕದ್ದು) ನೋಡಿ ನಸುನಗುತ್ತಿದ್ದಾಳೆ.)

ಘರ ದೂರ ಮ್ಹಣು ಚಿಂತಾ ಕರು ನಾಕಾ
ಘೋವಾ ಪುಣ್ಯಾನ ತುಕಾ ಸುಖ ಮೆಳ್ತ.........................)

(ಕೊಡುವ ಮನೆ ದೂರವಾಯಿತೆಂದು ಚಿಂತೆ ಮಾಡಬೇಡ. ಗಂಡನ ಪುಣ್ಯದಿಂದ ನೀನು ಸುಖಿಯಾಗಿರುವಿ.)

ಎಂದು ಆಗೀಗ ಈ ವೊವ್ಯೊಗಳ ಸಾಲುಗಳು ಕಿವಿಗೆ ಬೀಳುತ್ತಿದ್ದವು. ಪಾಂಡುರಂಗಭಟ್ಟ ವೇದಮೂರ್ತಿಗಳು ಎಲ್ಲ ಸಮಾರಂಭಗಳನ್ನು ವೈದಿಕ ಪದ್ಧತಿಗೆ ಅನುಸಾರವಾಗಿ ನೆರವೇರಿಸುವುದರಲ್ಲಿ ಹೆಸರನ್ನು ಗಳಿಸಿದವರು. ಮಂತ್ರಗಳನ್ನು ಶುದ್ಧ ಸಂಸ್ಕೃತದಲ್ಲಿ ಘೋಷಿಸುತ್ತ ಕೆಲವು ಬಾರಿ ಅದನ್ನು ನಮಗೆ ವಿವರಿಸುತ್ತ ಹತ್ತಾರು ವಿಧಿಗಳನ್ನು ಮುಗಿಸಿದರು. ಹೋಮದ ಹೊಗೆಯಿಂದ ಕಣ್ಣು ಕೆಂಪಾದಾಗ, ಮುಂಬೈಯಲ್ಲಿ ಮದುವೆ ಮಾಡಿಕೊಂಡ ಪ್ರಕಾಶ, "ಇದೆಲ್ಲ ಏನೂ ನಾನು ಅನುಭವಿಸಿದ ನೆನಪೇ ಇಲ್ಲ. ಮದುವೆಗೆಂದು ಸಿದ್ಧನಾಗುತ್ತಿದ್ದಂತೆ ಅದು ಮುಗಿದೇ ಹೋಗಿತ್ತು!" ಎಂದು ನಕ್ಕ, ಅಂತರ್‌ಪಟದ ಆಚೆ ನಿಂತ ವಧು ಸಂಕೋಚದಿಂದ ಸಂಕುಚಿತವಾಗಿ ಇನ್ನಷ್ಟು ಗಿಡ್ಡವಾಗಿ ಕಂಡಳು. ರಾಜಸ್ಥಾನಿ ವಿವಾಹ ಕಣ್ಣೆದುರು ಸುಳಿಯಿತು. ಅಗ್ನಿಸಾಕ್ಷಿಯಾಗಿ ವಿವಾಹ ವಿಧಿ ನೆಡೆಯುತ್ತಿದ್ದಂತೆ ಎಷ್ಟೋ ವಿಚಾರಗಳು ಬಂದವು. ಎಲ್ಲಿಯೋ ಹುಟ್ಟಿ ಬೆಳೆದು, ತೀರ ಪರಕೀಯನನ್ನು ವರಿಸುವ ಪದ್ಧತಿಯಲ್ಲಿ ಎಷ್ಟು ಸಂದಿಗ್ಧತೆ, ಅನಿಶ್ಚಿತತೆಗಳು ತುಂಬಿಕೊಂಡಿವೆಯಲ್ಲವೇ? ವಿವಾಹ ಪೂರ್ವದಲ್ಲಿ ಪ್ರತಿಯೊಬ್ಬ ವರನೂ, ಅತ್ಯುತ್ತಮನಾಗಿರುತ್ತಾನೆ. ಆದರೆ ಹೆಣ್ಣಿನ ಪಾಲಿಗೆ ಬಂದವನು ಸಿಡುಕ ಮುಂಗೋಪಿ, ಅವ್ಯವಹಾರಿಕ, ದುಂದುಗಾರ, ರೋಗಿ ಇದ್ದರೆ ಏನುತಾನೇ ಮಾಡುವಂತಿದೆ? ಎಷ್ಟೋ ವರೋತ್ತಮರು "ಡಾಕ್ಟರ' ಎನಿಸಿಕೊಂಡು ಮಗಳನ್ನು ಕೊಟ್ಟು ನಂತರ ಹೋಮಿಯೋಪಥಿಕ್ ಡಾಕ್ಟರ ಆತ ಎಂದು ತಿಳಿಯುತ್ತದೆ. ವಿವಾಹ ಪೂರ್ವದಲ್ಲಿ ಇಂಜಿನಿಯರ್ ಆಗಿದ್ದವ, ನಂತರ ಡಿಪ್ಲೋಮಾ ಪಡೆದವನೋ, ಎಷ್ಟೋ ಸಲ ಮಾಧ್ಯಮಿಕ ಶಾಲೆ ಕಲಿತು ಮೋಟಾರ ಗ್ಯಾರೇಜಿನಲ್ಲಿ ಕೆಲಸ ಮಾಡುವವನೆಂದೋ, ಗೊತ್ತಾದಾಗ ವಧು ಏನು ಮಾಡುವಂತಿದೆ? 'ಪ್ರೊಫೆಸರ್' ಎಂದು ಹೊಗಳಲ್ಪಡುವವ ಡಿಮಾನ್‌ಸ್ಟ್ರೇಟರ ಆಗಿರುವದೂ ಉಂಟು. ಇಂತಹ ಪತಿಯ ಬಗ್ಗೆ ಗೌರವ ಪ್ರೀತಿಗಳು ಬೆಳೆಯಲು ಸಾಧ್ಯವೇ? ನನ್ನ ವಧುವಿಗೂ ನನ್ನ ಬಗ್ಗೆ, ನನ್ನ ನೌಕರಿ ಬಗ್ಗೆ, ನಾನಿರುವ ಊರಿನ ಬಗ್ಗೆ ತಿರಸ್ಕಾರ ಮೂಡಿದರೆ ಏನು ಮಾಡುವುದು? ಎಂದು ಅಳುಕಿದೆ.

ನವಪತ್ನಿಯನ್ನು ಕೈಹಿಡಿದು ಹೊರಗೆ ತರುವಂತೆ ಪುರೋಹಿತರು ಆಜ್ಞಾಪಿಸಿದರು. ವೃದ್ಧೆಯೊಬ್ಬಳು, 'ನಾಚಿಕೆಯ ಸೋಗಿನಿಂದ ಆಮೆಯಂತೆ ಹೋಗುತ್ತಿದ್ದಾಳೆ. ಎಳೆದುಕೊಂಡು ಹೋಗು ಅವಳನ್ನ' ಎಂದಾಗ ಮೆತ್ತಗೆ ಕೈ ಹಿಡಿದವಳನ್ನು ನಿಜಕ್ಕೂ

ಎಳೆದುಕೊಂಡೇ ಹೊರಟಾಗ ಎಲ್ಲರೂ ಬಿದ್ದು ಬಿದ್ದು ನಕ್ಕರು. ಇಬ್ಬರು ಕಿರಿಯ ಹುಡುಗಿಯರು ಬಂದು ನನ್ನ ಕಾಲು ಬೆರಳುಗಳನ್ನು ಪರೀಕ್ಷಿಸಿ ನನ್ನ ಎರಡನೆಯ ಬೆರಳು ಹೆಬ್ಬೆರಳಿಗಿಂತ ಉದ್ದವಾಗಿದ್ದರಿಂದ ನನ್ನ ಯೋಚನೆಯಂತೆಯೇ ನಮ್ಮ ಸಂಸಾರ ನಡೆಯುವದೆಂದು ಭವಿಷ್ಯ ಹೇಳಿದಾಗ, ಆನಂದವಾಯಿತು. ಯಾವನೋ ಛಾಯಾಚಿತ್ರಕಾರ ವಿವಾಹ ನಾಟಕವನ್ನು ಇನ್ನೊಮ್ಮೆ ನಟಿಸಲು ಹೇಳಿದಾಗ ಬೇಸತ್ತೆ. ಸಾವಿರಾರು ಛಾಯಾಚಿತ್ರಗಳನ್ನು ತೆಗೆದ ನನಗೆ ನನ್ನ ವಿವಾಹದ್ದೇ ತೆಗೆಯಲಾಗದ್ದಕ್ಕೆ ಮರುಗಿದೆ. ಯಾರೋ ದಾರಿ ಅಡ್ಡಗಟ್ಟಿ ಪತ್ನಿಯ ಹೆಸರು ಹೇಳುವಂತೆ ಮಾಡಿದರು. ಉತ್ಸಾಹಿ ಹಿರಿಯ ಮಹಿಳೆಯರು 'ಬಾಗಿಲು ಅಡ್ಡ ಹಿಡಿಯುವ' ಹಾಡು ಹಾಡಿದರು, ಬಂಧು ಬಳಗದವರು ಇಬ್ಬರಿಗೂ ಅಸಂಖ್ಯಾತ ಉಡುಗೊರೆಗಳನ್ನು ಕೊಟ್ಟರು. ಮದುವೆಗೆ ಬರಲಾಗದವರು ಪತ್ರ ಬರೆದರು, ತಂತಿ ಕಳಿಸಿದರು.ಇಬ್ಬರ ಪರಿಚಿತರೂ ಸಾಕಷ್ಟು ಜನರಿದ್ದುದರಿಂದ ಬಹಳಷ್ಟು ಶುಭಸಂದೇಶಗಳು ಬಂದಿದ್ದವು.

ಹತ್ತು ದಿನದ ರಜೆಯಲ್ಲಿ ಪ್ರವಾಸಕ್ಕೆ ೮ ದಿನಗಳು ಬೇಕಾಗಿದ್ದುದರಿಂದ ಎರಡೇ ದಿನಗಳಲ್ಲಿ ಪತ್ನಿಯೊಂದಿಗೆ ರಾಜಸ್ಥಾನಕ್ಕೆ ಹೊರಟು ನಿಂತೆ. ಪಾಲಕರು ಪತ್ನಿಯ ಯೋಗ ಕ್ಷೇಮವನ್ನು ಸರಿಯಾಗಿ ವಿಚಾರಿಸಿಕೊಳ್ಳುವಂತೆ ನನಗೆ ಹೇಳಿದರೇ ಹೊರತು ಈ ಮಾತನ್ನೇ ಪತ್ನಿಗೆ ಹೇಳಲಿಲ್ಲ! ಬರುವಾಗ ಒಂದು ಕೈಚೀಲದೊಂದಿಗೆ ಮೂರನೇ ವರ್ಗದಲ್ಲಿ ಬಂದರೆ ತಿರುಗಿ ಹೋಗುವಾಗ ಪತ್ನಿಯ ಜೊತೆಗೆ ಹದಿನೆಂಟು ಸಾಮಾನುಗಳನ್ನು ಹೊತ್ತು ಪ್ರಥಮ ವರ್ಗದಲ್ಲಿ ಹೊರಟಿದ್ದೆ. ಮದುವೆಯಲ್ಲಿ ಮಾಡಿದ ಮಿಠಾಯಿಗಳಲ್ಲಿ ಕೆಲಭಾಗವನ್ನು ಜೋಬನೇರಕ್ಕೆ ಒಯ್ಯುವ ಮನಸ್ಸು ಪತ್ನಿಗಿತ್ತು. ಆದರೆ ನಮ್ಮ ಮದುವೆಯ ಮಿಠಾಯಿಗಳು ಇತರರಿಗಾಗಿ ಇವೆಯೇ ಹೊರತು ನಮಗಾಗಿ ಅಲ್ಲ, ಮತ್ತು ರಾಜಸ್ಥಾನದಲ್ಲಿ ಮಿಠಾಯಿಗೆ ಕೊರತೆಯಿಲ್ಲವೆಂದು ಹೇಳಿ, ಮಿಠಾಯಿಯ ಒಂದು ಹೊರೆಯನ್ನು ಕಡಿಮೆ ಮಾಡಿದ್ದೆ. ತೆಗೆದುಕೊಂಡು ಹೋಗಿದ್ದರೆ ಚೆನ್ನಾಗಿತ್ತು ಎಂದು ಅನಂತರ ತಿಳಿಯಿತು. ಮದುವೆಯ ಮಿಠಾಯಿ ಜೋಬನೇರದವರಿಗೆ ತಿನ್ನಿಸಲಿಲ್ಲ, ನಮಗೂ ತಿನ್ನಲು ಸಿಗಲಿಲ್ಲ ಎಂದು ಇಂದಿಗೂ ಹಂಗಿಸಿಕೊಳ್ಳುತ್ತಿದ್ದೇನೆ!

ಅಹಮ್ಮದಾಬಾದದ ತನಕ ಕಿಡಕಿಯ ಹತ್ತಿರವೇ ಕುಳಿತು ಕೊನೆಯಿಲ್ಲದೇ ಮಾತನಾಡುತ್ತ ಜೀವನದ ಕನಸುಗಳನ್ನು ಹೆಣೆಯುತ್ತ ಹೊರಟರೂ ಮುಂದೆ ಜಯಪುರಕ್ಕೆ ಹೋಗುವ ಡಬ್ಬಿಯಲ್ಲಿ ನಮ್ಮ ಸೀಟು ಕಾದಿರಿಸುವ ಬದಲಾಗಿ ಜೋಧಪುರಕ್ಕೆ ಹೋಗುವ ಬೋಗಿಯಲ್ಲಿ ರಿಝರ್ವ ಮಾಡಿದ್ದರಿಂದ ಅಷ್ಟು ಏಕಾಂತ ಸಿಗಲಿಲ್ಲ. ಸಾಲದ್ದಕ್ಕೆ ಅಜಮೇರದಲ್ಲಿ ಇಳಿಯಬೇಕಾಯಿತು. ಪತ್ನಿಗೆ ಸಾಮಾನು ಕಾಯಲು ಕೂಡ್ರಿಸಿ, ನಾನು ಹೋಗಿ ಬಿಸಿ ಬಿಸಿ "ಪೂಡಿ-ಶಾಖ" ತೆಗೆದುಕೊಂಡು ಬಂದೆ.

ಕಾರವಾರಿ ಪತ್ನಿಗೆ ಮಾರವಾಡೀ ಊಟದ ಪ್ರಥಮ ಪರಿಚಯವಾಯಿತು. ಅನಂತರ ಒಂದು ಪ್ಯಾಸೆಂಜರ್ ಗಾಡಿ ಹತ್ತಿದೆವು. ಜೋಬನೇರದಲ್ಲಿ ರೇಲು ನಿಲ್ಲುತ್ತಿದ್ದಂತೆ ಲಗುಬಗೆಯಿಂದ ಸಾಮಾನುಗಳನ್ನು ಇಳಿಸಿದೆವು. ಕೊನೆಯ ಮೋಟಾರು ಹೋಗಿ ನಾಲ್ಕು ತಾಸಾಗಿತ್ತು. ಹೀಗಾಗಿ ಬೆಳಗಿನವರೆಗೆ ಅಲ್ಲಿಯೇ ಇರಬೇಕಾಯಿತು. ಆ ಚಿಕ್ಕ ಸ್ಟೇಶನ್ನಿನಲ್ಲಿ ವೇಟಿಂಗ ರೂಮ್ ಎಲ್ಲಿಂದ ಬರಬೇಕು? ಸಾಮಾನುಗಳನ್ನೆಲ್ಲ ಒಂದೆಡೆ ಜೋಡಿಸಿಟ್ಟು ಹೋಲ್ಡಾಲು ಬಿಡಿಸಿ, ಜನ ರಹಿತ ಪ್ಲಾಟಫಾರ್ಮಿನ ಮೇಲೆಯೇ ಮಲಗಬೇಕಾಯಿತು. ಜೋಬನೇರದ ಈ ಪ್ರಥಮ ದರ್ಶನದಿಂದಲೇ ಪತ್ನಿ ಮರು ಟ್ರೇನು ಹಿಡಿದು ಎಲ್ಲಿ ಹೊರಡುವಳೋ ಎಂಬ ಅಳುಕು ನನಗೆ. ಆದ್ದರಿಂದ ರಜಪೂತ ಸೈನಿಕನಂತೆ ಸಾಮಾನಿಗಿಂತ ಹೆಚ್ಚಾಗಿ ಪತ್ನಿಗೆ ಕಾವಲಾಗಿ ಮಲಗಿದೆ! ನಿದ್ರೆಯೇ ಬರಲಿಲ್ಲ. ಆದರೆ ಪತ್ನಿ ಮಾತ್ರ ಇದಾವುದರ ಪರಿವೆಯೇ ಇಲ್ಲದೇ ಗಾಢವಾಗಿ ನಿದ್ರಿಸಿ ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದಳು. ಮುಂಜಾನೆ ಎದ್ದಾಗ ತಾನು ಯಾವುದೋ ಸಾಹಸಿಯೊಡನೆ ಅಪರಿಚಿತ ನಾಡಿಗೆ ಬಂದಂತೆ ಭಾಸವಾಗುತ್ತದೆ, ಎಂದು ಹೇಳಿದಾಗ ಸದ್ಯ ಓಡಿಹೋಗುವ ವಿಚಾರ ಮಾಡಿಲ್ಲವಲ್ಲ! ಬದುಕಿದೆ ಎಂದುಕೊಂಡೆ. ಪಕ್ಕದ ಚಹದಂಗಡಿಗೆ ಹೋಗಿ ಕೊರೆಯುವ ತಣ್ಣಿರು ಪಡೆದು ಮುಖತೊಳೆದು. ಹಲ್ಲುಜ್ಜಿ, ರಾಜಸ್ಥಾನಿ ಮಾದರಿಯ ಚಹಾ ಮಾಡಿಸಿ ಕುಡಿದು ನಮ್ಮನ್ನು ಜೊಬನೇರ ಉರಿಗೆ ಮುಟ್ಟಿಸುವ ಮೋಟಾರಿಗಾಗಿ ಕಾಯುತ್ತ ನಿಂತೆವು.

೧೫. ಚಹಾ ಕ್ಲಬ್

ಪಾಶ್ಚಿಮಾತ್ಯ ದೇಶಗಳಲ್ಲಿ ಕಾಫಿ ಬಿಡುವಿನಲ್ಲಿ ವೈಜ್ಞಾನಿಕರು ತಮ್ಮ ಸಂಶೋಧನೆಯ ಬಗ್ಗೆ ಮಾಡಿದ ಪ್ರಗತಿ, ಬಿಡಿಸಿದ ಸಮಸ್ಯೆ ಬೇರಾದ ಸಮಯದಲ್ಲೂ ಮಾಡಲಾಗುವದಿಲ್ಲ ಎಂದು ನಂಬುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಆ ಸಮಯದಲ್ಲಿ ಎಲ್ಲರೂ ಸರಿಸಮಾನರಾಗಿ ತಮ್ಮ ಸಂಶೋಧನೆ, ಸಮಸ್ಯೆಗಳ ಕುರಿತು ಬಿಚ್ಚು ಮನಸ್ಸಿನಿಂದ ಚರ್ಚಿಸುತ್ತಾರೆ. ವಿಚಾರ ವಿನಿಮಯವಾಗುತ್ತದೆ. ಹೆಚ್ಚಿನ ನಿವಾರಣೋಪಾಯಗಳನ್ನು ತಲೆಯಲ್ಲಿ ತುಂಬಿಕೊಂಡು ವಿಜ್ಞಾನಿಗಳು ತಿರುಗಿ ತಮ್ಮ ಕೆಲಸಗಳಿಗೆ ಹೊರಡುವದು ಪರಿಪಾಠ. ಪಾಶ್ಚಾತ್ಯರ ಪ್ರಗತಿಗೆ ಅವರ ವಿಜ್ಞಾನಿಗಳೆಲ್ಲ ಮಾಡಿದ್ದು! ಅತ್ಯವಶ್ಯ ಎಂದು ನಂಬಿದ ಭಾರತೀಯ ವಿಜ್ಞಾನಿಗಳು ತಾವು ಇರುವಲ್ಲೆಲ್ಲ ಚಹಾದ ಸಂಘಗಳನ್ನು ಮಾಡುವ ಪರಿಪಾಠ ಬೆಳೆಯಿಸಿಕೊಂಡಿದ್ದಾರೆ. ನಮ್ಮ ಕೀಟಶಾಸ್ತ್ರ ವಿಭಾಗವೂ ಇದರಲ್ಲಿ ಹಿಂದೆ ಬೀಳಲಿಲ್ಲ. ಕಾಲೇಜಿನ, ಡಿಪಾರ್ಟಮೆಂಟಿನ ಸಾಮಗ್ರಿಗಳು ತಮ್ಮವೇ, ಎಂದು ಭಾವಿಸಿ ಪ್ರಾಧ್ಯಾಪಕರು ತಮಗೆ ಬೇಕಾದ ಟೇಬಲ್, ಕುರ್ಚಿ, ಕಪಾಟು, ಸ್ಟೋವ ಇತ್ಯಾದಿಗಳನ್ನು ಧಾರಾಳವಾಗಿ ಮನೆಗೆ ಒಯ್ದು ಮನಸ್ವೀ ಬಳಸಿ ಮುರುಕಲಾದಾಗ ವಜಾ - ಬಾಕಿಗೆ ಸರಿಯಾಗಬೇಕೆಂದು ಅದನ್ನು ಕಾಲೇಜಿಗೆ ತಂದು ಒಪ್ಪಿಸುವ ಕಾರ್ಯವನ್ನು ಅತಿ ನಿಷ್ಠೆಯಿಂದ ಮಾಡುವರು. ಮುಖ್ಯಸ್ಥರು, “ಈ ಸಾಮಾನುಗಳು ಕೆಲಸಕ್ಕೆ ಬಾರವು. ಅವನ್ನು ತ್ಯಜಿಸಿ ಹೊಸವನ್ನು ಕೊಳ್ಳಲು ಅಪ್ಪಣೆ ಕೊಡಬೇಕು” ಎಂದು ವಿಶ್ವವಿದ್ಯಾಲಯಕ್ಕೆ ಕೇಳಿಕೊಳ್ಳುವರು. ಹೊಸ ಸಾಮಾನುಗಳು ಬೇಕಾದಾಗ ಪೇಟೆಗೆ ಹೋಗಿ ಒಳ್ಳೆಯ ಮಾಲನ್ನು ಯೋಗ್ಯ ಬೆಲೆಗೆ ಕೊಳ್ಳುವುದನ್ನು ಕಾನೂನು ತಡೆಹಿಡಿಯುತ್ತದೆ. ಎಲ್ಲದಕ್ಕೂ ಮೊದಲು ಬೇಕಾಗುವ ಸಾಮಾನಿನ ವಿವರವಾದ ಮಾಹಿತಿಯನ್ನು ನಮೂದಿಸಿ ಯಾದಿಯನ್ನು ತಯಾರಿಸಬೇಕು. ಅದರ ಹತ್ತಾರು ಪ್ರತಿಗಳನ್ನು ಮಾಡಿಸಿ ಸಾಮಗ್ರಿಗಳನ್ನು ಉತ್ಪಾದಿಸುವವರಿಗೆ, ಮಾರುವವರಿಗೆ ಕಳಿಸಿ ಅವರಿಂದ ಪೂರೈಸಲು ಬೆಲೆಗಳನ್ನು ತಿಳಿದು ಅತಿ ಕನಿಷ್ಠ ಬೆಲೆ ಸೂಚಿಸುವವರ ಹತ್ತಿರ ಅದನ್ನು “ಕೋಟೇಶನ್” ಕರೆದು ಕೊಳ್ಳಬೇಕು. ಈ ಕಾನೂನು ನ್ಯಾಯಬದ್ಧವಾಗಿದೆ ಎಂದು ಅನಿಸುತ್ತದೆ. ಅಲ್ಲದೇ ಎಲ್ಲ ಸರಕಾರಿ ಸಂಸ್ಥೆಗಳು ಮತ್ತು ಉಳಿದ ಖಾಸಗೀ

ಸಂಸ್ಥೆಗಳೂ ಈ ಕಾನೂನನ್ನೇ ಪಾಲಿಸುತ್ತಾರೆ. ಆದರೆ ರಾಜಸ್ಥಾನದಲ್ಲಿ ಈ ಕಾನೂನಿನ ಲಾಭ ತೆಗೆದುಕೊಂಡ ಬಗೆ ನೋಡಿ; ಒಬ್ಬ ಅಂಗಡಿಕಾರನೇ ಮೂರು - ನಾಲ್ಕು ಹೆಸರಿನಿಂದ ನಾಲ್ಕು ದರಗಳನ್ನು ಕಳಿಸಿ ಎಲ್ಲ ಲಾಭ ತನಗೇ ದೊರೆಯುವಂತೆ ಮಾಡುತ್ತಾನೆ. ಜೈನ್ ಬಂಧುಗಳು ನಾಲ್ವರು ಇದ್ದರು. ಈ ಪದ್ಧತಿಯಲ್ಲಿ ಆ ವಸ್ತುವಿನ ನಿಜವಾದ ಬೆಲೆ ತಿಳಿದುಕೊಳ್ಳುವ ವ್ಯವಸ್ಥೆ ಇಲ್ಲದ್ದರಿಂದ ನಾನು ವೈಯಕ್ತಿಕವಾಗಿ ಇಪ್ಪತ್ತೆರಡು ರೂಪಾಯಿಗೆ ಕೊಂಡ ಸಾಮಾನುಗಳನ್ನು ಕಾಲೇಜು ಐವತ್ತಾರು ರುಪಾಯಿಗಳಿಗೆ ಕೊಂಡಿತು. ಈ ಹೆಚ್ಚಿನ ಲಾಭದ ಪಾಲು, ಕೊಳ್ಳುವವನಿಗೂ, ಸಾಮಾನು ತೃಪ್ತಿಕರವಾಗಿದೆ ಎಂದು ಒಪ್ಪಿಕೊಳ್ಳುವ ಅಧಿಕಾರಿಯ ಕಿಸೆಗೂ ಹೋಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಈ ರೀತಿಯಿಂದ ಕೊಂಡ ಕೀಟನಾಶಕಗಳಲ್ಲಿ ಮೂರು ನಾಲ್ಕಂಶದಷ್ಟು ಮೈದಾ ಮಿಶ್ರಣ ಮಾಡಿದ್ದರಿಂದ ಕೀಟಗಳನ್ನೇ ಅವುಗಳಲ್ಲಿ ಸೇರಿಸಿದ್ದರೂ ಅವು ಸಾಯುತ್ತಿರಲಿಲ್ಲ! ಮನೆಬಳಕೆಯ ಸಾಮಾನುಗಳನ್ನು ಕೊಂಡು ಕಾಲೇಜ ಸಾಮಾನುಗಳ ಬಳಕೆಗೆ, ಪಾವತಿಪಡೆದು ಹದಿನೈದು ದಿನಗಳಲ್ಲಿ ಅದು ಖರ್ಚಾಯಿತೆಂದು ಖಾತೆಯಲ್ಲಿ ಬರೆಸುವವರೂ ಇದ್ದಾರೆ. ಇಷೆಲ್ಲ ಸ್ವಾತಂತ್ರ್ಯವಿದ್ದಾಗ ಚಹಾ ಕ್ಲಬ್ಬಿಗೆ ಬೇಕಾಗುವ ಸ್ಟೋವ, ಸ್ಟೀಲಿನ ಪಾತ್ರೆ, ಕಪ್ಪು ಕಿಟ್ಲಿಗಳನ್ನು ಕೊಳ್ಳುವದು ದೊಡ್ಡ ಮಾತೇ? ವಿದ್ಯಾರ್ಥಿಗಳೊಂದಿಗೆ ಕೀಟಸಂಗ್ರಹಕ್ಕಾಗಿ ಹೊರಗೆ ಹೋದಾಗ ಅತ್ಯಗತ್ಯವಾಗಿ ಬೇಕಾಗುವ ಸಾಮಾನಿನ ನೆಪದ ಮೇಲೆ ಅದನ್ನು ತರಿಸಿದರಾಯಿತು. ಹರಿಬಕ್ಷನು ಈ ಸಂಘದ ಯೋಗ ಕ್ಷೇಮ ನೋಡಿಕೊಳ್ಳುವಂತಾಯಿತು.

ಮುಂಜಾನೆ ಕಾಲೇಜು ತೆರೆದ ಕೂಡಲೇ "ಪಾಯರೆಕ್ಸ ಬೀಕರ" ತೆಗೆದುಕೊಂಡು ಹಾಲನ್ನು ತರಲು ಆತನು ಹೋಗುವನು. ಒಂದು ಗಾಜಿನ ಬೀಕರಿಗೆ ಹತ್ತು - ಹನ್ನೆರಡು ರೂಪಾಯಿಗಳಿದ್ದರೂ ಶಿಕ್ಷಣ - ಸಂಶೋಧನೆಯ ಹೆಸರಿನಲ್ಲಿ ಅವುಗಳನ್ನು ಧಾರಾಳವಾಗಿ ಖರೀದಿಸಬಹುದಾದ್ದರಿಂದ ಎಲ್ಲರೂ ಎಂಟಾಣೆ ಗ್ಲಾಸಿನ ಬದಲಾಗಿ ಅವನ್ನೇ ಉಪಯೋಗಿಸುತ್ತಿದ್ದರು. ಹಾಲು ತಂದಾದ ಮೇಲೆ ಕೆಡಬಾರದೆಂದು ಕಾಯಿಸಲು ಚಿಮಣಿ ಎಣ್ಣೆ ತರಲು ಪೇಟೆಗೆ ಹೋಗಿಬರುವನು, ದಾಲಮೋಟ, ಸಮೋಸಾ ತರಲು ಇನ್ನೊಮ್ಮೆ ಹೋಗುವನು. ನಂತರ ಹೊತ್ತಿಗೆ ಸರಿಯಾಗಿ ನೀರು ಕಾಸಿ, ಸೊಪ್ಪು ಸೇರಿಸಿ ಸೋಸಿ, ಹಾಲು ಬಿಸಿ ಮಾಡಿ, ಎಲ್ಲರಿಗೂ ಚಹಾ ತಯಾರಾಗಿದೆ ಎಂದು ಹೇಳಿಬರಲು ಹೋಗುವನು, ಚಹಾ ಆರುತ್ತದೆಂದು ಕ್ಲಾಸನ್ನು ಬೇಗ ಬಿಟ್ಟು ಬರುವವರು ಇದ್ದರು. ಸ್ನಾತಕೋತ್ತರ ಕ್ಲಾಸನ್ನು ಅರ್ಧಕ್ಕೆ ಬಿಟ್ಟು ಬಂದು ವಿದ್ಯಾರ್ಥಿಗಳು ಕಾಯುವಂತೆ ಮಾಡಿ, ಚಹಾ-ಹರಟೆಗಳನ್ನು ಮುಗಿಸಿ ಬಂದು ತಿರುಗಿ ಕ್ಲಾಸನ್ನು

ಮುಂದುವರಿಸುವವರೂ ಇದ್ದರು. ಒಮ್ಮೆ ಕರೆದು ಬಂದಾಗ ಬರುವ ಪರಿಪಾಠವನ್ನು ಬಿ.ಪಿ. ಎಂದೂ ಇಟ್ಟುಕೊಂಡಿರಲಿಲ್ಲ. ಅವರು ಬಂದ ಹೊರತು ಇತರರು ಹೇಗೆ ಚಹ ಸ್ವೀಕರಿಸಿಯಾರು? ಅಂತೆಯೇ ಒಬ್ಬ ಅಧ್ಯಾಪಕ ಹೋಗಿ "ಸಾಹೇಬರೇ, ನಡೆಯಿರಿ, ಚಹ ತಣ್ಣಗಾಗುತ್ತಿದೆ" ಎಂದು ವಿನಂತಿಸಿದಾಗಲೇ ಅವರು ಹೊರಡಬೇಕು. ಆತ ಬಾಗಿಲಿನ ಪರದೆ ಎತ್ತಿ ಹಿಡಿದಾಗ ಬಿ.ಪಿ. ಕೃತಜ್ಞತೆ ಸೂಚಿಸುತ್ತ ಹೊರಗೆ ಬರುವರು, ಚಹಾದ ಕೋಣೆ (ಕತ್ತಲು ಕೋಣೆಗೆ ಸ್ಥಳವಿಲ್ಲದಿದ್ದರೂ ಚಹಾದ ಸಲುವಾಗಿ ಕೋಣೆ ಇತ್ತು!) ಸೇರಬೇಕಾದರೂ ಅವರೇ ಮುಂದೆ ಹೋಗಿ ಅಲ್ಲಿಯ ಪರದೆಯನ್ನು ಎತ್ತಬೇಕು. ಚಹಾ ಸೇವಿಸುತ್ತ ರಾಜಕಾರಣದಿಂದ ಕಾಮಶಾಸ್ತ್ರದ ವರೆಗಿನ ಎಲ್ಲ ಸಮಸ್ಯೆಗಳ ಮೇಲೂ ಎಲ್ಲರೂ ವ್ಯಾಖ್ಯಾನ ಕೊಡುತ್ತಿದ್ದರು. ಹರಟೆಯಲ್ಲಿ ಚಹಾ ಆರಿದಾಗ ಇನ್ನಷ್ಟು ಬಿಸಿ ಚಹಾ ಮಾಡಿಸಿ ಅದರಲ್ಲಿ ಸೇರಿಸಬೇಕು. ಈ ಚಹಾದ ಬೈಠಕ್ ಒಂದು ತಾಸಿನಿಂದ ಮೂರು ತಾಸಿನ ವರೆಗೂ ಸಾಗುತ್ತಿತ್ತು. ಆಗಲೇ ಬಿ. ಪಿ.ಯವರನ್ನು ಯಾರಾದರೂ ಹುಡುಕಿಕೊಂಡು ಬರುವದು ಹೆಚ್ಚು. ಅವರಿಗಾಗಿ ತಿರುಗಿ ಚಹಾ ಆಗಬೇಕು. ಎಷ್ಟೋ ಸಲ ಚಹಾದ ಸಮಯಕ್ಕೆ ಸರಿಯಾಗಿ ಬಂದು ಅದು ಮುಗಿಯುವ ಹೊತ್ತಿಗೆ ವೇಳೆಯಾದ್ದರಿಂದ ತಿರುಗಿ ಮನೆಗೆ ಹೋಗುವವರೂ ಇದ್ದರು. ಅನಂತರ ಚಪರಾಸಿಗಳು ಉಳಿದ ಚಹಾವನ್ನು ಹಂಚಿ ಕುಡಿದು, ಭಾಂಡಿ ತಿಕ್ಕಿದರೆಂದರೆ ಅಂದಿನ ದಿನ ಮುಗಿಯಿತು. ಕೀಟಶಾಸ್ತ್ರ ವಿಭಾಗದ ಅಧ್ಯಾಪಕರಿಗೆಂದು ಇರುವ ಒಂದೇ ಒಂದು ಮೂತ್ರಿ ಬಿ.ಪಿಯವರ ಕೋಣೆಗೆ ಹೊಂದಿ ಇದೆ. ಚಹಾದ ನಂತರ ಬಿ.ಪಿ,ಯವರಿಗೊಂದು ಸಿಗರೇಟು ಕೊಟ್ಟು ಕಡ್ಡಿ ಹೊತ್ತಿಸಿ ಹಚ್ಚಿ, ತಾನೂ ಒಂದನ್ನು ಬಾಯೊಳಗಿಟ್ಟುಕೊಂಡು ಅವರನ್ನು ಮೂತ್ರಿಯ ತನಕ ಹಿಂಬಾಲಿಸಿ ಹೋಗಿ ಇನ್ನೂ ಸ್ವಲ್ಪ ಮಾತು ಕತೆಯಾಡಿ ಅವರೊಂದಿಗೆ ಮನೆಗೆ ಹೋಗುವ ಅಧ್ಯಾಪಕರಿದ್ದಾರೆ.

ಪೇಟೆಯ ನಮಕಿನ (ಖಾರಾ), ದಾಲಮೋಟ ತಿಂದು ಯಾರಿಗೋ ಬೇಸರ ಬಂದಿತು, ಆದ್ದರಿಂದ ಪ್ರತಿಯೊಬ್ಬನೂ ಮನೆಯಿಂದಲೇ ಬಾರಿಯಿಂದ ತಿಂಡಿಮಾಡಿಸಬೇಕು. ಚಹಾ ಸಮಯದಲ್ಲಿ ಹರಿಬಕ್ಷನು ಅದನ್ನು ತರಬೇಕೆಂದು ಮಂಡಿಸಿದರು. ಎಲ್ಲರೂ ಒಪ್ಪಿದರೂ ಮನೆಯವರು ಮಾಡಲು ಒಪ್ಪಬೇಕಲ್ಲ? ಒಬ್ಬರು ಮಾಡಿ ತಂದ ನಾಲ್ಕು ದಿನಗಳ ನಂತರ ಇನ್ನೊಬ್ಬರು ತಂದರು. ನನ್ನ ಸರದಿ ಬಂದಾಗ ಜೋಬನೇರದಲ್ಲಿ ರುಬ್ಬುವ ಸಲಕರಣೆಗಳಿಲ್ಲದಿದ್ದರೂ ಇಡ್ಲಿ - ಸಾಂಬಾರ ಮಾಡಿಸಿದ್ದೆ. ಇಡ್ಲಿಯ ರುಚಿಯನ್ನು ಪ್ರಥಮ ಬಾರಿಗೆ ಸವಿದ ಸಹೋದ್ಯೋಗಿಗಳು ಬಹಳ ಚೆನ್ನಾಗಿದೆ ಎಂದು, ನನ್ನ ವೈವಾಹಿಕ ಅನುಭವಗಳ ಬಗ್ಗೆ ಮಾತನಾಡುವಂತೆ ಆಗ್ರಹಿಸಿದರು. "ಮೊದಲು ವಿವಾಹವಾಗಲಿಲ್ಲ ಎಂದು ಒಂದೇ ಸಮಸ್ಯೆ ಇತ್ತು; ಉಳಿದೆಲ್ಲ ನೆಮ್ಮದಿ

ನನಗಿತ್ತು. ಈಗ ವಿವಾಹವಾಗಿದೆ ಎಂಬ ಒಂದೇ ನೆಮ್ಮದಿ ಇದೆ; ಉಳಿದೆಲ್ಲದ್ದೂ ಕೇವಲ ಸಮಸ್ಯೆಯಾಗಿದೆ" ಎಂದು ಚುಟುಕಾಗಿ ಹೇಳಿದಾಗ ಎಲ್ಲರು ಬಿದ್ದು ಬಿದ್ದು ನಕ್ಕರು. ಮನೆಯಿಂದ ತಿಂಡಿ ತರುವ ವ್ಯವಸ್ಥೆಯಲ್ಲಿ ಗೃಹಶಾಖೆಗಳ ಸಹಕಾರವಿಲ್ಲದ್ದರಿಂದ ಹೆಚ್ಚು ದಿನ ನಡೆಯಲಿಲ್ಲ! ಉಳಿದ ಸಹೋದ್ಯೋಗಿಗಳೆಲ್ಲ ಮಾತುಗಾರಿಕೆಯನ್ನು ವಹಿಸಿಕೊಂಡದ್ದರಿಂದ ನನ್ನ ಪಾಲಿಗೆ ಕೇಳುವದಷ್ಟೇ ಉಳಿದಿತ್ತು. ಇದರಿಂದ ನನಗೆ ಹೆಚ್ಚಿನ ಲಾಭವಾಯಿತು. ದಕ್ಷಿಣದ ಬಡಬಗ್ಗರ ಉರ್ದು ಮಿಶ್ರಿತ ಹಿಂದಿ ಬರುತ್ತಿತ್ತೇ ವಿನಾಃ ಉತ್ತರದವರ ಅಪ್ಪಟ ಹಿಂದಿ ಸುಲಭವಾಗಿ ಮಾತನಾಡಲು ಬರುತ್ತಿರಲಿಲ್ಲ. ಜೋಬನೇರದಲ್ಲಿ ಇಂಗ್ಲೀಷಿನಲ್ಲಿ ಮಾತನಾಡಿದರೂ ಹಿಂದಿಯಲ್ಲಿಯೇ ಉತ್ತರಿಸುತ್ತಿದ್ದರು. ಚಹಾ - ಹರಟೆಯೆಲ್ಲ ಹಿಂದಿಯಲ್ಲಿಯೇ ನಡೆಯುತ್ತಿದ್ದುದರಿಂದ ನನ್ನ ಮತ್ತು ಅವರ ಹಿಂದಿಯಲ್ಲಿರುವ ಅಂತರ ಬೇಗ ತಿಳಿದುಕೊಳ್ಳುವಂತಾಯಿತು. ನಾವು "ನಿಮ್ ಊರಾವದು?" (ಎಲ್ಲಾಯ್ತು ನಿಮಗೆ) ಎಂದು ಕೇಳಿದರೆ ಅವರು "ತಮ್ಮ ಬರೋಣ ಎಲ್ಲಿಂದಾಯಿತು?" ಎಂದು ವಿಚಾರಿಸುವರು. ನಾವು 'ಹೇಗಿದ್ದೀರಾ?' ಎಂದು ವಿಚಾರಿಸಿದರೆ, ಅವರು "ತಮ್ಮ ಆಗು ಹೋಗುಗಳು ಹೇಗಿವೆ?" ಎನ್ನುತ್ತಾರೆ. ಈ ಸೂಕ್ಷ್ಮಗಳನ್ನು ತಿಳಿದುಕೊಂಡು ಅಲ್ಲಿಯ ಹಿಂದಿಯಲ್ಲಿಯೇ ಮಾತನಾಡಲು ಪ್ರಯತ್ನಿಸಿದಾಗ ಸಹೋದ್ಯೋಗಿಗಳಿಗೆ ಅಚ್ಚರಿಯಾಯಿತು. ನನ್ನನ್ನು ಬಿಟ್ಟು ಇನ್ನೂ ಮೂವರು ದಕ್ಷಿಣದವರು ಜೋಬನೇರದಲ್ಲಿದ್ದರು. ಮಾಯಕೇಲರು ಇಂಜಿನಿಯರಿಂಗ ವಿಭಾಗದಲ್ಲಿ ಪ್ರಾಧ್ಯಾಪಕರಿದ್ದರೆ, ಉಳಿದ ಇಬ್ಬರು ಚಿಕ್ಕ ನೌಕರಿಯಲ್ಲಿ ಇದ್ದರು. ಕೇರಳದವರಿಗೆ ದೊಡ್ಡ ಅಕ್ಷರಗಳು ಮತ್ತು ಒತ್ತಕ್ಷರಗಳು ಸರಿಯಾಗಿ ಬಾರದ್ದರಿಂದ ಅವರು ಹಿಂದಿಯನ್ನು ಮಲಯಾಳಿ ಧಾಟಿಯಲ್ಲಿಯೇ ಮಾತನಾಡುತ್ತಿದ್ದರು. ಖಾನಾ, ಛೋಟಾ, ಥೋಡಾ, ಖಾಯಾ ಮುಂತಾದವು ಕಾನಾ, ಚೋಟಾ, ತೋಡಾ, ಕಾಯಾ ಎಂದು ಉಚ್ಚರಿಸುತ್ತಿದ್ದುದರಿಂದ ಕಿವಿಗೆ ವಿಚಿತ್ರವಾಗಿ ಕೇಳಿಸುತ್ತಿತ್ತು. ಹರಟೆಗಷ್ಟೇ ಹಿಂದಿಯನ್ನು ಸೀಮಿತಗೊಳಿಸದೇ ವಿದ್ಯಾರ್ಥಿಗಳಿಗೆ ವಿವರಿಸಲು ಕೆಲವು ಸಲ ಕಲಿಸಬೇಕಾದಾಗಲೂ ಹಿಂದಿಯನ್ನೇ ಬಳಸಹತ್ತಿದಾಗ ವಿದ್ಯಾರ್ಥಿಗಳಿಗೆ ಹೆಚ್ಚಿನ ಆನಂದವಾಯಿತು. ಆದ್ದರಿಂದ ಹಿಂದಿಯಲ್ಲಿ ಕಲಿಸಬೇಕಾಗಿ ಬಂದಾಗ ರಾಜಸ್ಥಾನ ಬಿಟ್ಟು ಓಡಬೇಕಾಗುವದೆಂಬ ಹೆದರಿಕೆಯಾಗಲೇ ಇಲ್ಲ. (ರಾಜಸ್ಥಾನದಲ್ಲಿ ಮಾರವಾಡಿ, ಮೇವಾಡಿ, ಹಾಡೌತಿ, ಡುಂಡಾರಿ, ಶೇಖಾವಾಟಿಗಳಂತಹ ಅನೇಕ ಪ್ರಾದೇಶಿಕ ಭಾಷೆಗಳನ್ನು ಮಾತನಾಡುವರು. ಆದರೂ ಹಿಂದಿಯನ್ನು ರಾಜ್ಯ ಭಾಷೆಯಾಗಿ ಪ್ರಥಮವಾಗಿ ಒಪ್ಪಿಕೊಂಡ ಶ್ರೇಯಸ್ಸು ರಾಜಸ್ಥಾನಕ್ಕೆ ಸೇರುತ್ತದೆ. ತಮ್ಮತನವನ್ನು ಬಿಟ್ಟುಕೊಡಲು ಸಿದ್ಧರಿಲ್ಲದ ಅಭಿಮಾನಿ

ರಾಜಸ್ಥಾನಿಗಳು ಹೆಚ್ಚು ಪ್ರಚಲಿತವಿರುವ ಮಾರವಾಡಿ ಭಾಷೆಗೆ ಇನ್ನುಳಿದ ಹದಿನಾಲ್ಕು ಭಾರತಿಯ ಭಾಷೆಗಳಿಗೆ ಸಿಗುವ ಮಾನ್ಯತೆ ಸಿಗುವಂತೆ ಮಾಡಿದ್ದರಿಂದ ಅದರ ಬೆಳವಣಿಗೆಗೆ ಪ್ರೋತ್ಸಾಹ ಸಿಗುವಂತಾಗಿದೆ.)

ಬಹುಶಃ ಚಹಾದ ವೇಳೆಗೆ ಕೇಳಿದ ಹರಟೆ. ಅಲ್ಲಿಯೇ ಬಿಟ್ಟು ಬರಬೇಕೆಂಬ ಕಾನೂನು ಇದ್ದಿರಬೇಕು. ಆದರೆ ಅವು ಸ್ಮೃತಿಪಟಲದ ಮೇಲೆ ಅಚ್ಚೊತ್ತಿದ್ದಂತೆ ಉಳಿದುಕೊಂಡಿದ್ದರಿಂದ ಎಷ್ಟೋ ಸಲ ಗೊಂದಲಕ್ಕೆ ಆಸ್ಪದ ಮಾಡಿಕೊಟ್ಟಿವೆ. ರಾಜಸ್ಥಾನದ ಪ್ರಮುಖ ರಾಜಕಾರಣಿಯ ಬಗ್ಗೆ ಚರ್ಚೆ ನಡೆದಿತ್ತು. "ಎಂಥ ಭ್ರಷ್ಟಾಚಾರಿಗಳು ನಮ್ಮ ರಾಜಕೀಯದಲ್ಲಿ ಸೇರಿಕೊಂಡಿದ್ದಾರೆ! ಸಮಾಜಸುಧಾರಕರೆಂದು ವೇಶ್ಯೆಯ ಮಗಳನ್ನು ಮದುವೆಯಾದರು. ಅಪಾರ ಸಂಪತ್ತನ್ನು ಶೇಖರಿಸಿದಾಗ ವಿಚಾರಣೆಗೆ ಆಸ್ಪದವಾಯಿತು. ನ್ಯಾಯಾಲಯದೆದುರು ತಮ್ಮ ಅತ್ತೆ ಶ್ರೀಮಂತ ವೇಶ್ಯೆಯಾಗಿದ್ದು ಅವಳ ಆಸ್ತಿಯೆಲ್ಲ ಮಗಳಿಗೆ ಬಂದು ತಾನದಕ್ಕೆ ಬಾಧ್ಯಸ್ಥನೆಂದು ಹಿಂದೆ ಮುಂದೆ ನೋಡದೇ ಹೇಳಿಕೆ ಕೊಟ್ಟರಲ್ಲ! ಉದಯಪುರದಲ್ಲಿ ಒಳ್ಳೆಯ ಫಲವತ್ತಾದ ಭೂಮಿಯನ್ನು ಪಡೆದು ಹಣ್ಣಿನ ತೋಟ ಮಾಡಿಕೊಂಡು ಸ್ವಾರ್ಥ ಸಾಧಿಸುವವರು ರಾಜ್ಯದ ಏಳ್ಗೆಯೇಸು ಮಾಡಿಯಾರು?" ಎಂದು ವಿವರಣೆ ಕೊಟ್ಟ ಬಿ.ಪಿ.ಯವರ ಮಾತು ಕೇಳಿದಾಗ ಆ ರಾಜಕಾರಣಿಯ ಬಗ್ಗೆ ಜಿಗುಪ್ಸೆ ಹುಟ್ಟಿತ್ತು. ಒಂದೇ ಒಂದು ತಿಂಗಳ ನಂತರ ಆ ಮಹಾಶಯರೇ ಹರಟೆಯ ಕೇಂದ್ರ ಬಿಂದುವಾದಾಗ, "ಅವರೆಂತಹ ಸಮಾಜ ಸುಧಾರಕರು ನೋಡಿ! ನೂರಾರು ಹೆಂಗಳೆಯರನ್ನು ಮೋಹ ಪಾಶದಲ್ಲಿ ಬಂಧಿಸುವ ವ್ಯಕ್ತಿತ್ವ ಇದ್ದರೂ, ಕುಲವಿಲ್ಲದ ಹೆಣ್ಣನ್ನು ಮದುವೆಯಾಗಿ ಆದರ್ಶ ಪುರುಷನಾಗಿ ಬಾಳಿ ಸಾಮಾನ್ಯರಿಗೆ ಮೇಲ್ಪಂಕ್ತಿ ಹಾಕಿ ಕೊಟ್ಟಿದ್ದಾರೆ. ತಮ್ಮ ಸ್ವಂತ ಖರ್ಚಿನಿಂದ ದ್ರಾಕ್ಷಿ ತೋಟ ಬೆಳೆಸಿ ತೋಟಗಾರಿಕೆಯಲ್ಲಿ ಕ್ರಾಂತಿಯ್ನನೆಬ್ಬಿಸಿದ್ದಾರೆ. ಹೊಟ್ಟೆಕಿಚ್ಚಿನ ಜನ ಅವರನ್ನು ಧನ ಸಂಗ್ರಹಕ್ಕಾಗಿ ಆಪಾದಿಸಿದಾಗ ಕೋರ್ಟಿನಲ್ಲಿ ಸತ್ಯಸಂಗತಿ ಹೇಳಲು ಅಳುಕಲಿಲ್ಲ. ಅವರ ನೇತೃತ್ವದಲ್ಲಿ ಈ ರಾಜ್ಯ ಮುನ್ನಡೆಯಲಿದೆ. ರಾಜಸ್ಥಾನ ಕಾಲುವೆ ಮುಗಿಯಿತೆಂದರೆ ಈ ಭಾಗ ಭಾರತದ ಗೋದಾಮು ಆಗಲಾರದೇ?" ಈ ಮಾತುಗಳನ್ನು ಅದೇ ಬಾಯಿ ಆಡಿದಾಗ, ಇದರಲ್ಲಿ ಯಾವುದು ಸತ್ಯ, ಯಾವುದನ್ನು ಅವರು ನಂಬಿದ್ದಾರೆ ಎಂದೇ ತಿಳಿಯದಾಯಿತು. ತಮಗೆ ಯುವ ಜನಾಂಗದೊಡನೆ ಬೆರೆತು ಇರುವದು ವಿಶೇಷವಾಗಿ ಸೇರುವುದರಿಂದ ಶಿಕ್ಷಣ ಕ್ಷೇತ್ರ ಬಿಟ್ಟು ಹೋಗಲು ಮನಸ್ಸಿಲ್ಲ. ಆದ್ದರಿಂದಲೇ ಡೆಹರಾಡೂನ ಅರಣ್ಯ ಸಂಶೋಧನಾ ಸಂಸ್ಥೆಯವರು ಎಲ್ಲ ಸವಲತ್ತುಗಳನ್ನು ಕೊಡ ಮಾಡಿದರೂ ತಾನು ಅಲ್ಲಿ ಹೋಗಲಿಲ್ಲ ಎಂದು ಒಮ್ಮೆ ಅಂದಿದ್ದರು. ಇನ್ನೊಮ್ಮೆ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ

ಡಾ. ಪಂಡ್ಯರ ಬಗ್ಗೆ ಹೇಳುವಾಗ "ಅವರಿಗೆ ಯಾವ ಯೋಗ್ಯತೆಯೂ ಇಲ್ಲ. ಕೀಟ ಶಾಸ್ತ್ರದಲ್ಲಿ ಯಾವ ಪಾಂಡಿತ್ಯವೂ ಇಲ್ಲ. ಇಂಥವರ ನೇತೃತ್ವದಲ್ಲಿ ಕೀಟ ಸಂಶೋಧನೆ ಏನು ನಡೆಯಬೇಕು? ಅವರ ಸಂಬಂಧಿಕರು ಅಧಿಕಾರದಲ್ಲಿದ್ದಾಗ ಅವರ ಕೃಪೆಯಿಂದ ಈ ಸ್ಥಾನಕ್ಕೆ ಬಂದಿದ್ದಾರೆ, ಇಂಥವರನ್ನು ತಜ್ಞರೆಂದು ಇಂಟರವ್ಯೂಗೆ ಕರೆಸಿದರೆ ದೇವರೇ ಗತಿ! ನನ್ನ ಡೆಹರಾಡೂನಿನ ಇಂಟರವ್ಯೂಗೆ ಇವರನ್ನೇ ಕರೆಸಿದ್ದರು. ನನ್ನ ಆಯ್ಕೆ ಆಗದಂತೆ ನೋಡಿದ ಭೂಪರವರು!" ಎಂದು ಅಂದಿದ್ದರು. ಮಗುದೊಮ್ಮೆ "ತಾನು ಡೆಹರಾಡೂನಿಗೆ ಹೋಗುವದು ಎಲ್ಲವೂ ನಿರ್ಧಾರವಾಗಿತ್ತು. ಆದರೆ ತಾನು ಹೆಚ್ಚಿನ ವೇತನ ಕೇಳಿದಾಗ ಅದಕ್ಕೆ ಅವರು ಒಪ್ಪದೇ ಇದ್ದುದರಿಂದ ಹೋಗಲಿಲ್ಲ" ಎಂದಿದ್ದರು. ಹರಟುವವರು ಸುಳ್ಳು ಹೇಳಬಾರದು, ಒಮ್ಮೆ ಹೇಳಿದ್ದನ್ನು ಮರೆಯಬಾರದು, ಮರೆಗುಳಿಯಾಗಿದ್ದವರು ಹರಟಬಾರದು, ಅಸತ್ಯ ನುಡಿಯಬಾರದು ಎಂದುಕೊಂಡೆ.

ಚಹಾ ಕೂಟದಲ್ಲಿ ವೈಯಕ್ತಿಕ, ಸಾಂಸಾರಿಕ ವಿಷಯಗಳೂ ತ್ಯಾಜ್ಯವಿರಲಿಲ್ಲ, ಬಿ.ಪಿ, ಮಗಳಿಗೆ ಬೆಳವಣಿಗೆಯಿಲ್ಲ. ಬೆನ್ನಿನ ಎಡಕ್ಕೆ ಎದ್ದು ಕಾಣಿಸುವ ಗೂಡು ಇದೆ. ಅದರಂತೆ ಸಚಾನರ ಮಗಳ ಮಾನಸಿಕ ಬೆಳವಣಿಗೆ ಅಗಿರಲಿಲ್ಲ. ಅವರಿಬ್ಬರೂ ಸಂತಾನ ನಿರೋಧಕಗಳನ್ನು ಉಪಯೋಗಿಸಿದ್ದರಿಂದ ಹೀಗಾಗಿದೆ! ಎಂದು ಖಂಡಿತವಾಗಿ ನಂಬಿದ್ದಾರೆ. ಬಿ.ಪಿ. ಮಗ ಬಂಟಿ ಒಮ್ಮೆ ತನ್ನ ತಂಗಿಯ ಜನನೇಂದ್ರಿಯ ನೋಡಿ ತನಗೂ ತನ್ನ ತಂಗಿಗೂ ಏಕೆ ಈ ಅಂತರ? ಎಂದು ಕೇಳಿದನಂತೆ. ಅದಕ್ಕೆ ಅವರು ಮಕ್ಕಳಿಂದ ಯಾವುದನ್ನೂ ಮುಚ್ಚಿಡಬಾರದೆಂದು ಗಂಡು - ಹೆಣ್ಣಿನ, ಶಾರೀರಿಕ ಭೇದಗಳನ್ನು ವಿವರಿಸಿ ಅವನ ತಂದೆ ತಾಯಿಗಳಲ್ಲೂ ಇಂಥ ಅಂತರವಿದೆ ಎಂದು ಮನದಟ್ಟು ಮಾಡಿಕೊಟ್ಟರಂತೆ! ಅವನು ಯಾವಾಗಲೂ ತಂದೆ - ತಾಯಿಗಳ ಮಧ್ಯದಲ್ಲಿ ಮಲಗುವನಂತೆ. ಅವನಿಗೆ ನಿದ್ರೆ ಬಂದ ನಂತರ ಹತ್ತಿರ ಸರಿದರೆ. ಅವನು ಎಚ್ಚರವಾಗಿ ಕೈ ಕಾಲುಗಳಿಂದ ಇಬ್ಬರನ್ನೂ ದೂಡುತ್ತಾನೆ. ಈ ಮಾತು ಹೇಳುತ್ತಿದ್ದಂತೆ ಅವರಿಗೊಂದು ಕಥೆಯ ನೆನಪಾಯಿತು. ಒಬ್ಬ ಯುವಕನು ಒಂದು ಹಳ್ಳಿಗೆ ಕೆಲಸದ ಮೇಲೆ ಹೋದಾಗ ಸಂಜೆಯಾದ್ದರಿಂದ ಊರಿಗೆ ಮರಳುವ ಬಸ್ಸು ತಪ್ಪಿಸಿಕೊಂಡ. ಉಪಾಯವಿಲ್ಲದೇ ಒಂದು ಮನೆಗೆ ಹೋಗಿ "ಈ ರಾತ್ರೆಯನ್ನು ನಿಮ್ಮಲ್ಲಿ ಕಳೆಯಬಹುದೇ?" ಎಂದು ಗೃಹಿಣಿಯನ್ನು ಕೇಳಿದ. ಆಕೆ ತಲೆ ಕೆರೆದುಕೊಳ್ಳುತ್ತ, ತಮ್ಮಲ್ಲಿ ಇರುವುದು ಎರಡೇ ಮಂಚ. ಒಂದರ ಮೇಲೆ ಸಣ್ಣ ಮಗುವಿನೊಂದಿಗೆ ತಾನು ಮಲಗುತ್ತೇನೆ ಇನ್ನೊಂದರ ಮೇಲೆ ತನ್ನ ಹರೆಯದ ಮಗಳು ಮಲಗುತ್ತಾಳೆ. ನಮ್ಮಿಬ್ಬರ ನಡುವೆ ಒಂದು ತಲೆದಿಂಬು ಇಟ್ಟು ಮಲಗಿಕೊಳ್ಳುವದಾದರೆ ಪರವಾಗಿಲ್ಲ ಎಂದಳಂತೆ. ಈ ಕರಾರಿಗೆ ಒಪ್ಪಿ ಯುವಕ ಎರಡನೇ ಮಂಚದ ಮೇಲೆ ಮಲಗಿದ. ಮರುದಿನ ಅವನು ಬೇಗನೆ

ಹೋಗಬೇಕಾಗಿದ್ದರಿಂದ ಹೊರಬಿದ್ದ. ಆದರೆ 'ಗೇಟಿಗೆ ಕೀಲಿ ಹಾಕಿದ್ದರಿಂದ, ಮನೆಯವರ ನಿದ್ರೆ ಕೆಡಿಸಬಾರದೆಂದು ಗೇಟನ್ನೇ ಹಾರಿ ಹೋಗೋಣ ಎಂದು ಸಿದ್ಧತೆ ನಡೆಸಿದಾಗ, ಮನೆಯ ಒಡತಿ ಪ್ರತ್ಯಕ್ಷಳಾಗಿ, "ದಿಂಬನ್ನು ಹಾರದವ, ಗೇಟನ್ನು ಹೇಗೆ ಹಾರುತ್ತಿ?" ಎಂದು ಕೊಂಕು ನುಡಿದು ಬೀಗ ತೆಗೆದು ಅವನನ್ನು ಹೋಗಗೊಟ್ಟಳಂತೆ. ಇಂತಹ ಕತೆಗಳನ್ನು ಕೇಳುತ್ತ ಚಹಾ ಕ್ಲಬ್ಬಿನ ಸದಸ್ಯರು ವೇಳೆಯ ಪರಿವೆಯೇ ಇಲ್ಲದೇ ಕುಳಿತಿರುತ್ತಾರೆ. ಡಿಪಾರ್ಟಮೆಂಟಿನ ಇತರರು ಈ ಮುಕ್ತಾಫಲಗಳನ್ನು ಕೇಳುವ ಆಸೆಯಿಂದ ಕಿಡಕಿ ಬಾಗಿಲುಗಳ ಹತ್ತಿರವೇ ಸುಳಿಯುತ್ತಿರುತ್ತಾರೆ.

ಕೆಲವೊಮ್ಮೆ ಮಾತು ಹೆಂಗೆಳೆಯರತ್ತ ಹೊರಳುತ್ತದೆ. ಯಾರ ಪತ್ನಿ ಸುಂದರಿ ಇದ್ದಾಳೆ? ಯಾರಿಗೆ ಅಡಿಗೆ ಚೆನ್ನಾಗಿ ಬರುತ್ತದೆ? ಯಾರಿಗೆ ವ್ಯವಹಾರ ಜ್ಞಾನವಿಲ್ಲ? ಯಾರು ಯಾರನ್ನು ಆಕರ್ಷಿಸಿದ್ದಾರೆ! ಎಂಬ ಸಂಗತಿಗಳೆಲ್ಲ ಆಗಾಗ ಹೊರಬೀಳುತ್ತವೆ. ಡಾ. ಸಿಂಗರೆಂಬ ಪ್ರಾಧ್ಯಾಪಕರಿಗೆ ಇಬ್ಬರು ಹೆಂಡಂದಿರು. ಅವರ ಅತಿ ಕ್ರೌರ್ಯದಿಂದ ಇಬ್ಬರೂ ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ. ಅಥವಾ ಪತಿಯೇ ಕೊಂದಿರಬಹುದಂತೆ ತಾನು ಸ್ವತಃ ಕುರೂಪಿಯಾದರೂ ಸುಂದರಿಯರಲ್ಲಿ ಆಸಕ್ತಿ ಹೆಚ್ಚು. ಒಬ್ಬ ವಿವಾಹಿತ ರೂಪರಾಣಿಯ ಪತಿಯನ್ನು ಯಮಸದನಕ್ಕೆ ಅಟ್ಟಿ ಅವಳನ್ನು ಮೂರನೆಯ ಹೆಂಡತಿಯನ್ನಾಗಿ ಸ್ವೀಕರಿಸಿದರಂತೆ. ಆದರೆ ಈ ಪತ್ನಿ ಪಾತರಗಿತ್ತಿ ಜಾತಿಯವಳಾದ್ದರಿಂದ ಆಕರ್ಷಕರಾಗಿದ್ದ ಪರಪುರುಷರನ್ನು ಚಹಾಕ್ಕೆ ಕರೆಯುವದು, ಊಟಕ್ಕೆ ಆಮಂತ್ರಿಸುವುದು, ಅವರೊಡನೆ ನಾಟಕ - ಸಿನೆಮಾಗಳಿಗೆ ಹೋಗುವದು ಮಾಡುತ್ತಾಳಂತೆ. ಪತಿದೇವರಿಗೆ ಇದೆಲ್ಲ ಸರಿಬರದಿದ್ದರೂ ಪತ್ನಿಯ ಸೌಂದರ್ಯಕ್ಕೆ ಬಲಿಬಿದ್ದುದರಿಂದ ಸುಮ್ಮನಿರುವರಂತೆ, ಆದರೂ ಮೇಲಿಂದ ಮೇಲೆ ಪತಿ - ಪತ್ನಿಯರಲ್ಲಿ ಚಕಮಕಿ ಆಗುತ್ತಲೇ ಇರುವದಂತೆ, ಬಿ. ಪಿ. ಎತ್ತರವಾಗಿ ಸುರೂಪಿಯಾಗಿದ್ದಾರೆ. (ಯಾರೋ ಅವರಿಗೆ "ಎತ್ತರವಿದ್ದ ಜನರು ಎತ್ತರವಾದ ಕಟ್ಟಡದಂತೆ. ಅವರ ಮೇಲಿನ ಅಂತಸ್ತು ಖಾಲಿಯಾಗಿಯೇ ಇರುತ್ತದೆ" ಎಂದು ಹೇಳಿದ್ದರು! ಡಿಪಾರ್ಟಮೆಂಟಿನಲ್ಲಿ ಎಲ್ಲರೂ ಅವರನ್ನು ಡಾಕ್ಟರ ಸಾಹೇಬ ಎಂದು ಕರೆಯುತ್ತಾರೆ. ಸಿಂಗರ ಪತ್ನಿಯ ಬಗ್ಗೆ ಮಾತು ನಡೆದಾಗ ಯಾರೋ "ಹಾಗಾದರೆ ಡಾಕ್ಟರ ಸಾಹೇಬರಿಗೂ ಶ್ರೀಮತಿ ಸಿಂಗರಿಂದ ಚಹಾ, ಊಟ, ಇಲ್ಲವೆ ಸಿನಿಮಾದ ಜೊತೆಗಾಗಿ ಆಮಂತ್ರಣ ಬರಬಹುದಲ್ಲ!" ಎಂದಾಗ ಅವರಿಗೆ ಬಹಳ ಹರ್ಷವಾಯಿತು. ಜಯಪುರದ ಮಹಾರಾಣಿಯ ಸೌಂದರ್ಯ ವಿವೇಚನೆಯಾಯಿತು. ಆಕೆ ಘಟ್ಟಾ ಅಪೂರ್ವ ಸುಂದರಿ. ಮಹಾರಾಜರ ಅತಿಥಿಗಳೆಲ್ಲ ಆಕೆಯ ಸೌಂದರ್ಯ ರಾಶಿಯನ್ನು ನೋಡಿ ಬೆರಗಾಗಿ ಹೋಗುತ್ತಾರೆ. ಈಗ ರಾಜಕಾರಣದಲ್ಲಿ ಬಿದ್ದು ರಾಜ್ಯದ

ತುಂಬ ಓಡಾಡಿ ಆಕೆಯ ರೂಪರಾಸಿ ಕಳೆಗುಂದಿದೆ. ರಾಜಮಾತಾ ಸಿಂಧಿಯಾ. ಶ್ರೀಮತಿ ಗಾಂಧಿಯವರ ಸೌಂದರ್ಯದ ಪ್ರಭಾವ ರಾಜಕಾರಣದಲ್ಲಿ ಆಗದೇ ಹೋಗಿಲ್ಲ! ಎಂದೆಲ್ಲ ಹರಟೆ ಸಾಗುತ್ತಿತ್ತು.

ಕೀಟಶಾಸ್ತ್ರದ ಮುಖ್ಯಸ್ಥರಾಗಿದ್ದರಿಂದ ವಿಶ್ವವಿದ್ಯಾಲಯದ ಹೆಚ್ಚಿನ ಸಭೆಗಳಿಗೆ ಬಿ.ಪಿ. ಹೋಗಬೇಕಾಗುತ್ತದೆ. ಅಂತಹ ಸಮಯಗಳಲ್ಲಿ ಅವರು ಉದಯಪುರದಿಂದ ತಿರುಗಿ ಬರುವ ದಾರಿಯನ್ನೇ ಕಾಯುತ್ತಿದ್ದ ಉಳಿದವರು ಚಹದ ಸಮಯದಲ್ಲಿ ಅವರಿಗೆ ಪ್ರಶ್ನೆಗಳನ್ನು ಕೇಳಿ ಕೇಳಿ ಮೀಟಿಂಗಿನಲ್ಲಿ ಯಾವ ಯಾವ ಠರಾವು ಪಾಸಾಯಿತೆಂದು ತಿಳಿಯಲು ಯತ್ನಿಸುವವರು. ಅವರ ಮಾತುಕತೆಗಳಿಂದ ವಿಶ್ವವಿದ್ಯಾಲಯದ ಆಡಳಿತಗಾರರಲ್ಲಿ ಎರಡು ತೀರ ವಿರೋಧಿ ಬಣಗಳಿವೆ ಎಂದೂ ಒಂದು ಗುಂಪು ಎತ್ತಿ ಹಿಡಿದದ್ದನ್ನು ಇನ್ನೊಂದು ಗುಂಪು ತೀವ್ರವಾಗಿ ವಿರೋಧಿಸುವುದರಿಂದ ಯಾವುದೇ ಒಂದು ತೀರ್ಮಾನಕ್ಕೆ ಬರುವುದಕ್ಕಿಂತ ಮೀಟಿಂಗಗಳಲ್ಲಿ ಗಲಾಟೆ-ಕಾಳಗಗಳೇ ಹೆಚ್ಚಾಗುತ್ತವೆ ಎಂದೂ, ಉಪಕುಲಪತಿಗಳು ಶಾಂತಿಪ್ರಿಯರಾದ್ದರಿಂದ ಅವರಿಂದ ಈ ಜೂಜಾಟದ ಕೋಳಿಗಳನ್ನು ನಿಯಂತ್ರಿಸುವುದು ಅಸಾಧ್ಯವಾದ ಮಾತಾಗಿತ್ತು ಎಂದೂ ತಿಳಿಯಿತು. ಶಿಕ್ಷಕ ವೃಂದ, ಶಿಕ್ಷಣ, ಸಂಶೋಧನೆ, ಪ್ರಸಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಹೋಗದೇ ತಮಗೆ ಹಣ-ಕಾಸಿನ ಲಾಭವಾಗುವ ವಿಷಯಗಳಲ್ಲಿ ಮಾತ್ರ ವಿಶೇಷ ಆಸ್ಥೆ ವಹಿಸುತ್ತಿತ್ತು. ಕೇಂದ್ರ ಸರಕಾರ, ತನ್ನ ನೌಕರರ ತುಟ್ಟಿ ಭತ್ತೆ ಏರಿಸಿದ ಕೂಡಲೇ ಇವರಗೂ ಏರುವಂತೆ ಆಗಬೇಕು. ಮನೆಯ ಬಾಡಿಗೆಯ ಕೆಲವು ಭಾಗವನ್ನು ವಿಶ್ವವಿದ್ಯಾಲಯ ಕೊಡಬೇಕು. ಜೋಬನೇರದ ಜೀವನ ಜಯಪುರದಕ್ಕಿಂತ ತುಟ್ಟಿಯಾದ್ದರಿಂದ ನಗರ ಸಹಾಯಧನ ದೊರೆಯಬೇಕು. ಮನೆಯವರೆಲ್ಲರ ಔಷಧೋಪಚಾರದ ಖರ್ಚನ್ನು ವಿಶ್ವ ವಿದ್ಯಾಲಯದವರೇ ಕೊಡಬೇಕು. ವಿಮೆಯ ಕಂತುಗಳನ್ನೂ ಅವರೇ ತುಂಬುವಂತೆ ಆಗಬೇಕು. ನಮ್ಮ ವಾಸಕ್ಕಾಗಿ ಮನೆಗಳನ್ನು ಕಟ್ಟಿಸಿಕೊಡಬೇಕು. ಮಕ್ಕಳ ಶಿಕ್ಷಣಕ್ಕಾಗಿ ಶಾಲೆಯೊಂದನ್ನು ಪ್ರತ್ಯೇಕವಾಗಿ ಪ್ರಾರಂಭಿಸಬೇಕು - ಮುಂತಾದ ಹಲವಾರು ಬೇಡಿಕೆಗಳು ಸದಾಕಾಲ ಇರುತ್ತಿದ್ದವು. ಅವನ್ನು ಪಾಸುಮಾಡಿಸಿಕೊಳ್ಳುವ ಸಲುವಾಗಿ ಪ್ರಾಧ್ಯಾಪಕರೆಲ್ಲ ಒಂದು ಸಂಘ ಮಾಡಿಕೊಂಡು ತಮ್ಮ ಪ್ರತಿನಿಧಿಗಳನ್ನು ಸಭೆಗೆ ಕಳಿಸುತ್ತಿದ್ದರು. ಇಂತಹ ಸಭೆಗಳಲ್ಲಿ ನಿರ್ಣಯ ಏನಾಯಿತೆಂದು ಬಿ.ಪಿ.ಯವರನ್ನು ವಿಚಾರಿಸಿ ತಿಳಿದುಕೊಂಡು ಚಹದ ನಂತರ, ಅವರು ಹೇಳಿದ್ದರಲ್ಲಿ ಸತ್ಯ ಎಷ್ಟಿದೆ, ಸುಳ್ಳು ಎಷ್ಟಿದೆಯೆಂದು ವರ್ಗೀಕರಣ ಮಾಡಲು ಉಳಿದವರ ಉಪಸಭೆ ನಡೆಯುತ್ತಿತ್ತು. ಅವರು ತಮ್ಮ ಕೋಣೆಯಲ್ಲಿ ಇಲ್ಲದಿದ್ದರೆ, ಮೂತ್ರ ವಿಸರ್ಜನೆಯ ನೆಪ ಮಾಡಿಕೊಂಡು ಅಲ್ಲಿ ಹೋಗಿ ಟೇಬಲ್

ಮೇಲೆ, ಡ್ರಾಯರಿನಲ್ಲಿ ಇದ್ದ ಕಾಗದಪತ್ರಗಳನ್ನು ಓದಲು ಹಿಂದೆ ಸರಿದವರಲ್ಲ ಈ ಆದರ್ಶ ಶಿಕ್ಷಕ ವೃಂದ! ತಾವು ತಿಳಿದುಕೊಂಡದ್ದನ್ನು ಬಲುಬೇಗ ಕಾಲೇಜಿನ ಇತರ ಅಧ್ಯಾಪಕರಿಗೆ ಬಿತ್ತರಿಸುವರಲ್ಲದೇ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟದ್ದು ಇದ್ದರೆ ಅವರಿಗೂ ಮುಟ್ಟಿಸುವರು. ಆದ್ದರಿಂದ ಗುಟ್ಟಾಗಿ ಇರಬೇಕಾಗಿದ್ದ ವಿಶ್ವವಿದ್ಯಾಲಯದ ನಿರ್ಣಯಗಳು ಕಾಡುಕಿಚ್ಚಿನ ವೇಗದಲ್ಲಿ ಊರಲ್ಲೆಲ್ಲ ಹಬ್ಬಿ, ಬೀದಿಬೀದಿಗಳಲ್ಲಿ, ಹರಟೆ-ಚೌಕುಗಳಲ್ಲಿ ನಿಂತು ಮಾತನಾಡುವ ವಿಷಯವಾಗಿ ಪರಿಣಮಿಸುತ್ತಿತ್ತು. ಇಂತಹ ಚಹಾ ಕ್ಲಬ್ಬುಗಳು ನಡೆಯಗೊಡದಿದ್ದರೆ ಯಾರಿಗೂ ಹಾನಿಯಾಗದಿದ್ದರೂ ಲಾಭ ಮಾತ್ರ ಬಹಳವಾಗಬಹುದೆಂದು ಅನಿಸಿತು.

೧೬. ವಿದ್ಯಾರ್ಥಿಗಳು

ಕಾಲೇಜು ಪ್ರಾರಂಭವಾದ ಹೊಸದರಲ್ಲಿ, ವಿದ್ಯಾರ್ಥಿಗಳ ತಂಡ ಬಂದು ಬಿ. ಪಿ. ಯವರಿಗೆ ವಂದಿಸಿ. ಅವರು ನನ್ನ ಪರಿಚಯ ಮಾಡಿಕೊಡುತ್ತ, ಇನ್ನು ಮುಂದೆ ಇವರು ನಿಮಗೆ ಪಾಠ ಹೇಳಿಕೊಡಲಿದ್ದಾರೆ ಎಂದಾಗ, ನಮ್ರರಾಗಿ ಭಯ ಭಕ್ತಿಯಿಂದ ನಮಿಸಿದರು. ಒಳ್ಳೆಯ ಬಟ್ಟೆಬರೆ ಧರಿಸಿ ಒಳ್ಳೆ ಕುಟುಂಬದಿಂದ ಬಂದ ಜಾಣ ವಿದ್ಯಾರ್ಥಿಗಳು ನಮಿಸಿದಾಗ ಆನಂದವಾದರೂ, ಒಮ್ಮೆ ಕಲಿಸಲು ಪ್ರಾರಂಭಿಸಿದ ನಂತರವೂ ಇದೇ ಆತ್ಮೀಯತೆ, ಗೌರವಗಳನ್ನು ತೋರಿಸಬಹುದೇ? ಎಂಬ ಸಂದೇಹ ಮಿಂಚಿ ಮಾಯವಾಯಿತು. ಕಲಿಸಬೇಕಾದ ಆರು ವಿದ್ಯಾರ್ಥಿಗಳ ಪೂರ್ಣ ಹೆಸರು, ವಿಳಾಸ, ವಯಸ್ಸು, ಶೈಕ್ಷಣಿಕ ಹಿನ್ನೆಲೆಗಳನ್ನು ಪರಾಮರ್ಶಿಸಿದೆ. ಅವರಲ್ಲಿ ಒಬ್ಬನೇ ಸ್ಥಾಯಿ ರಾಜಸ್ಥಾನಿಯಾಗಿದ್ದ. ಉಳಿದವರೆಲ್ಲ ಹೊರ ರಾಜ್ಯಗಳಿಂದ ಬಂದು ನೆಲೆಸಿದವರ ಮಕ್ಕಳೇ ಇದ್ದರು. ನಾಲ್ವರು ಬ್ರಾಹ್ಮಣರು, ಒಬ್ಬ ಮುಸ್ಲಿಮ್, ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದವನಾಗಿದ್ದ. ಒಬ್ಬನು ರಾಜಸ್ಥಾನ ಸರಕಾರದ ವತಿಯಿಂದ ಬಂದವನಾಗಿದ್ದರೆ. ಇನ್ನೊಬ್ಬ ಬಿ.ಪಿ. ಯವರ ಸಹಾಯದಿಂದ ಬಂದಿದ್ದ. ಉಳಿದ ನಾಲ್ವರ ಪಿತೃಮಹಾಶಯರು ಉಚ್ಚ ಅಧಿಕಾರದಲ್ಲಿ ಇದ್ದವರಾಗಿದ್ದರು. ಅವರೆಲ್ಲ ತಂದೆಯ ಹೆಸರು ಹಾಕದೇ ತಮ್ಮ ಮತ್ತು ಕುಲದ ಹೆಸರು ಬರೆಯುತ್ತಿದ್ದರು. ಆದರೆ ತಮ್ಮ ಹೆಸರ ಮುಂದೆ ತಪ್ಪದೇ ಕುಮಾರ ಇಲ್ಲವೇ ಪ್ರಕಾಶ ಎಂದು ಬರೆಯುತ್ತಿದ್ದರು. ರಾಜಸ್ಥಾನಿ ಮಾತ್ರ ಸಿರಫ್ ಎಂದು ಬರೆಯುತ್ತಿದ್ದ. ಅವರೆಲ್ಲ ಕೋಣನಂತೆ ಬೆಳೆದಿದ್ದರೂ ಸ್ನಾತಕೋತ್ತರ ಹಂತದಲ್ಲಿ ವಯಸ್ಸು ಮಾತ್ರ ೧೬, ೧೮ ಎಂದು ಬರೆದಿದ್ದು ನೋಡಿ ಅಚ್ಚರಿಯಾಯಿತು. ಮಧ್ಯವಯಸ್ಕರಂತೆ ಕಾಣುವ ಕೆಲ ಸಹೋದ್ಯೋಗಿಗಳು ನನಗಿಂತ ಎಂಟು ಹತ್ತು ವರ್ಷ ಕಿರಿಯರಿದ್ದರು! ಹದಿನಾಲ್ಕು ವರ್ಷದ ಮಗನ ತಂದೆ, ತನಗೆ ಇಪ್ಪತ್ತೆಂಟು ವರ್ಷವೆಂದಾಗ ತಮಾಷೆಮಾಡುತ್ತಿರಬಹುದೆಂದು ತಿಳಿದಿದ್ದೆ. ನಂತರ ನೋಡಿದರೆ ವಿಶ್ವವಿದ್ಯಾನಿಲಯದ ದಾಖಲೆಯಲ್ಲಿ ಹಾಗೆಯೇ ಇತ್ತು! ಉತ್ತರ ಪ್ರದೇಶದಲ್ಲಿ ಸರಕಾರಿ ನೌಕರಿ ಮಾಡಬಯಸಿದವರು ಹೆಚ್ಚು ಕಾಲ ಸರ್ಕಾರಕ್ಕೆ ಸೇವೆ ಸಲ್ಲಿಸಲಿ! ಎಂಬ ಉದಾರ ಭಾವನೆಯಿಂದ ತಮ್ಮ ವಯಸ್ಸಿನಲ್ಲಿ ಐದರಿಂದ ಹದಿನೈದು ವರ್ಷಗಳವರೆಗೆ ಕಡಿಮೆ ಮಾಡಿ ದಾಖಲೆ ಮಾಡಿರುತ್ತಾರಂತೆ! ಆದ್ದರಿಂದ ತಾಯಿಯ

ಉದರದಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿ ಐದು ವರ್ಷದವರಿರುವಾಗಲೇ ಮಾಧ್ಯಮಿಕ ಶಿಕ್ಷಣ ಮುಗಿಸಿ, ಹದಿನಾರು ವರ್ಷಕ್ಕೆ ಮಾಸ್ಟರ್ಸ ಪದವಿ ಪಡೆದು ಪ್ರಾಧ್ಯಾಪಕರಾಗಿರುವಾಗ ಎರಡು ಮಕ್ಕಳ ತಂದೆಯಾಗಿದ್ದರೆ ಏನೂ ಆಶ್ಚರ್ಯವಿಲ್ಲ. ಅಲ್ಲಿಂದ ರಾಜಸ್ಥಾನಕ್ಕೆ ಬಂದವರು, ಈ ಜಾಡನ್ನು ತಂದದ್ದರಿಂದ ಅಲ್ಲಿಯೂ ಅದು ಚೆನ್ನಾಗಿ ಹಬ್ಬಿಕೊಂಡಿದೆ.

ಗಿರೀಶ ಶರ್ಮನು ರಾಜ್ಯದ ಕೃಷಿ ಅಧಿಕಾರಿಯ ಮಗ. ತಂದೆಯ ವ್ಯಕ್ತಿತ್ವದ ಲಾಭ ಪಡೆದು ಕಾಲೇಜಿನಲ್ಲಿ ಹೆಸರು ಗಳಿಸಿದವ, ವಾಕ್ ಸ್ಪರ್ಧೆಯಲ್ಲಿ ಭಾಗವಹಿಸಲು ಮುಂದಾದಂತೆ, ಧರಣಿ ಸತ್ಯಾಗ್ರಹದಲ್ಲಿಯೂ ಮುಂದು. ಇವುಗಳಲ್ಲಿ ಅವನಿಗೆ ವಿಶ್ವಾಸವಿತ್ತೆಂದಲ್ಲ. ಅದರಿಂದ ಖ್ಯಾತಿಗಳಿಸಬಹುದೆಂಬ ಹುಮ್ಮಸ್ಸು. ದೊಡ್ಡ ರಾಜಕಾರಣಿಯಲ್ಲಿ ಇರಬೇಕಾದ ಕೃತಕ ಸೌಜನ್ಯ, ನಮ್ರತೆ, ವಿನಯಶೀಲತೆ, ಕುಶಲ ಮಾತುಗಾರಿಕೆ ಎಲ್ಲವೂ ಅವನಲ್ಲಿದ್ದವು. ತನ್ನ ಕೆಲಸ ಸಾಧಿಸಬೇಕಾದರೆ ಯಾರನ್ನು ಬೇಕಾದರೂ ಭೆಟ್ಟಿಯಾಗಿ ಇಲ್ಲವೇ ತನ್ನ ಪರಿಚಯದ ಪೂರ್ಣ ಲಾಭ ಪಡೆಯುವ ಚಾತುರ್ಯ ಅವನಲ್ಲಿ ಇತ್ತು, ಅವನ ಗೆಳತನದಿಂದ ಲಾಭ ಪಡೆಯಬಹುದೆಂದು ಭಾವಿಸಿದ ದೊಡ್ಡ ಮಿತ್ರವರ್ಗವೂ ಅವನಿಗಿತ್ತು. ರವಿಶರ್ಮಾ ಒಂಟೆಯಂತೆ ಎತ್ತರವಾಗಿದ್ದರೂ ನರಿಯಂತೆ ಜಾಣ, ನಾಯಿಯಂತೆ ನಂಬಿಗಸ್ಥ. ರವೀಂದ್ರನು ಸರ್ಕಾರದ ವತಿಯಿಂದ ಬಂದದ್ದರಿಂದ ಬುದ್ಧಿಗೆ ಜಂಗುಹಿಡಿದಂತಿದ್ದ. ಝೀಯಾ ಸಿದ್ಧಿಕಿ ದೊಡ್ಡ ರೇಲ್ವೆ ಅಧಿಕಾರಿಯ ಮಗ. ಬಹಳ ಸಭ್ಯ. ಪ್ರಾಮಾಣಿಕ, ಒಣ ಡೌಲು ಇಲ್ಲದವ. ತನ್ನ ಹಸ್ತಾಕ್ಷರದಲ್ಲಿ, ಮಾಡುವ ಕೆಲಸದಲ್ಲಿ, ಅಚ್ಚುಕಟ್ಟುತನವಿತ್ತು. ಭಗಿರಥ ಸಿಂಘನು ಜೋಬನೇರದ ಚಪರಾಸಿಯ ಮಗನಂತೆ. ಅವನ ಉದ್ಧಾರ ಮಾಡಬೇಕೆಂದು ಬದ್ಧ ಕಂಕಣರಾದ ಬಿ.ಪಿ. ವಿಭಾಗದಲ್ಲಿ ಅವನಿಗೆ ಸ್ಥಾನ ಕೊಡಿಸಿದ್ದರು. ಬಡಕುಟುಂಬದವ ಎಂಬುದನ್ನು ಬಿಟ್ಟರೆ ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡುವ ಯಾವ ಯೋಗ್ಯತೆಯೂ ಅವನಿಗಿರಲಿಲ್ಲ. ಸಂಗಮ ಪ್ರಕಾಶ್ ಬಾಜಪೇ ಅಧ್ಯಾಪಕರೊಬ್ಬರ ಬಂಧು. ಅವನಿಗೆ ಬೇರಾವ ವಿಭಾಗದಲ್ಲೂ ಪ್ರವೇಶ ಕೊಡಲು ನಿರಾಕರಿಸಿದ್ದರಿಂದ ದೀನಬಂಧು ಬಿ.ಪಿ. ತಮ್ಮ ವಿಭಾಗದಲ್ಲಿ ಸೇರಿಸಿಕೊಂಡಿದ್ದರು. ಅವನಿಗೆ ಆ ವಿಷಯದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯುವಷ್ಟು ಜ್ಞಾನವೂ ಇದ್ದಿರಲಿಲ್ಲ. ಇಂಗ್ಲಿಷ್ ತೀರಾ "ಕಚ್ಚಾ" ಇತ್ತು. ಮಾಧ್ಯಮಿಕ ಪರೀಕ್ಷೆಯನ್ನು ಆತ ಹೇಗೆ ಪಾಸಾದ? ಎಂದು ಇಂದಿಗೂ ಆಶ್ಚರ್ಯವಾಗುತ್ತದೆ.

ಮೊದಲ ದಿನವೇ ಯಾವ ತಾರೀಕಿಗೆ ಏನು ಓದಿಕೊಂಡು ಬರಬೇಕು ಎಂಬ ಯಾದಿಯನ್ನು ಕೊಟ್ಟು, "ನಾನು ಕಲಿಸಲಿರುವ ವಿಷಯವನ್ನು ಕಷ್ಟಪಟ್ಟು ಪರಿಶ್ರಮ

ವಹಿಸಿ ಕಲಿಸುತ್ತೇನೆ. ನೀವು ದುಡಿಯಲು ಸಿದ್ಧರಾಗಿಯೇ ಬರಬೇಕು. ಸುಲಭವಾಗಿ ಗುಣಗಳನ್ನು ಪಡೆಯಬೇಕೆಂದಿದ್ದವರು ಬೇರೆ ವಿಷಯಗಳನ್ನು ಆರಿಸಬಹುದು. ವಿಷಯವನ್ನು ತಿಳಿದುಕೊಳ್ಳಲು ನನ್ನಿಂದ ಸಹಾಯವಾಗಬೇಕಿದ್ದರೆ ದಿನದ ಯಾವ ಹೊತ್ತಿನಲ್ಲಿಯೂ ಬರಬಹುದು. ಆದರೆ ಪರೀಕ್ಷೆಯನ್ನು ಮುಂದೆ ಹಾಕಬೇಕು. ಕ್ಲಾಸನ್ನು ರದ್ದು ಮಾಡಬೇಕು, ಎಂದು ನನ್ನ ಹತ್ತಿರ ಎಂದೂ ಬರಬೇಕಾಗಿಲ್ಲ" ಎಂದು ಹೇಳಿದೆ. ಆದರೂ ಒಂದೆರಡು ಸಲ ಬಂದು "ಮಧ್ಯಾಹ್ನದ ಬದಲು ಈಗಲೇ ಕ್ಲಾಸು ತೆಗೆದುಕೊಂಡರೆ ಆಗುತ್ತಿತ್ತು. ಶನಿವಾರದ ಕ್ಲಾಸನ್ನು ಸೋಮವಾರ ತೆಗೆದುಕೊಂಡರೆ ಒಂದು ದಿನ ಹೆಚ್ಚು ರಜೆ ಸಿಗುವಂತಾಗುತ್ತಿತ್ತು" ಎಂದು ಉಳಿದ ಶಿಕ್ಷಕರಿಗೆ ಹೇಳುವಂತೆ ನನಗೂ ಹೇಳಿದರು. ಅದಕ್ಕೆಲ್ಲ ಒಪ್ಪದೇ 'ನಿಮಗೆ ರಜೆಯೇ ಮುಖ್ಯವಾಗಿದ್ದರೆ ಕ್ಲಾಸನ್ನು ತಪ್ಪಿಸಬಹುದು ನನ್ನ ಆಕ್ಷೇಪಣೆಯಿಲ್ಲ' ಎಂದಾಗ ರಜೆಯನ್ನು ತಪ್ಪಿಸಿಕೊಂಡರೇ ಹೊರತು ಕ್ಲಾಸನ್ನಲ್ಲ. ಈ ವಿದ್ಯಾರ್ಥಿಗಳು ಒಂದೆರಡು ಸಲ ಹೊಸಬನ ಕಟ್ಟುನಿಟ್ಟಿನ ಬಗ್ಗೆ ಬಿ.ಪಿ. ಯವರಿಗೆ ಹೇಳಿದರಂತೆ. ಅದಕ್ಕವರು "ಒಳ್ಳೆಯ ಶಿಕ್ಷಕನಾದವನು ಸ್ವತಃ ಕಟ್ಟುನಿಟ್ಟಿನವನಿರುತ್ತಾನೆ. ಅಂತಹ ಶಿಕ್ಷಕನನ್ನು ಪಡೆದದ್ದಕ್ಕೆ ಹೆಮ್ಮೆ ಪಡಬೇಕೇ ಹೊರತು ದೂರಿಕೊಳ್ಳುವದಲ್ಲ" ಎಂದರಂತೆ. ವಿದ್ಯಾರ್ಥಿಗಳನ್ನು ಜೋಬನೇರದ ಸುತ್ತಲ ಬೇರೆ ಬೇರೆ ಪ್ರದೇಶಗಳಿಗೆ ಕರೆದೊಯ್ದು ಅಲ್ಲಿಯ ಭೂಗುಣ. ಜೀವಿ ಮತ್ತು ಪ್ರಾಣಿಗಳ ಸಂಬಂಧ ಮುಂತಾದವನ್ನು ವಿವರಿಸಿದಾಗ, ಡಿಪಾರ್ಟಮೆಂಟಿನಲ್ಲಿ ಇದ್ದ ಸಲಕರಣೆಗಳಿಂದಲೇ ವಿವಿಧ ಪ್ರಯೋಗಗಳನ್ನು ಮಾಡಿ ತೋರಿಸಿದಾಗ, ಇನ್ನೂ ತನಕ ತಾವು ಅರಿಯದ ಬೇರೆಯೇ ಕ್ಷೇತ್ರಕ್ಕೆ ಕಾಲಿರಿಸುತ್ತಿದ್ದೇವೆಂದು ಉದ್ಗರಿಸಿದರು. ಛಾಯಾಗ್ರಹಣವನ್ನು ಪ್ರಾರಂಭಿಸಿದಾಗಲಂತೂ ತಾವೊಂದು ಹೊಸ ಲೋಕವನ್ನೇ ಕಂಡು ಹಿಡಿದವರಂತೆ ಆನಂದಿಸಿದರು. ಹವೆಯಾಡದ ಖೋಲಿಯಲ್ಲಿ ವಿದ್ಯುತ್ ಪಂಕವನ್ನಿಟ್ಟು, ನೆಲ ತಂಪಾದ ಮೇಲೆ ಕೆಲಸವನ್ನು ಪ್ರಾರಂಭಿಸಿ ಮುಗಿಸುವಾಗ ರಾತ್ರೆಯ ಒಂದು ಗಂಟೆ ಹೊಡೆದದ್ದು ಇದೆ. ಒಂದು ಬಾಲ್ದಿ ನೀರಿಗೆ ಹತ್ತು ಪೈಸೆ ಕೊಡಬೇಕಾದ ಊರಿನಲ್ಲಿ ಸ್ವಂತ ಖರ್ಚಿನಲ್ಲಿ ವಿದ್ಯಾರ್ಥಿಗಳ ಛಾಯಾ ಚಿತ್ರಕ್ಕಾಗಿ ನೀರು ಪೂರೈಸುವುದು ಸುಲಭದ ಮಾತಾಗಿರಲಿಲ್ಲ. ನೀರಿನ ಉಳಿತಾಯಕ್ಕಾಗಿ ಹಳೆಯ ಮಡಕೆಯೊಂದಕ್ಕೆ ಗುಂಡು ಸೂಜಿಯಿಂದ ತೂತುಮಾಡಿ ಹನಿಹನಿಯಾಗಿ ಬೀಳುವ ನೀರಿನಿಂದ ಛಾಯಾ ಚಿತ್ರಗಳನ್ನು ತೊಳೆಯಬೇಕಾಯಿತು. ಶಿಕ್ಷಣಕ್ಕೆ ಸಂಬಂಧಪಟ್ಟುದಲ್ಲದೇ ಖಾಸಗಿ ಫಿಲ್ಮನ್ನು ಕೂಡಾ ತಂದು ಚಿತ್ರಗಳನ್ನು ಮಾಡಿಕೊಳ್ಳಲು ಅನುಮತಿ ನೀಡಿದ್ದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಹುರುಪು. ತಮ್ಮ ಬಿಡುವಿನ ವೇಳೆಯಲ್ಲೆಲ್ಲ ನನ್ನ ಮನೆಯ ಕತ್ತಲೆ ಕೋಣೆಯ ಬಳಕೆ ಮಾಡುವುದರಿಂದ ನನ್ನ ಬಿಡುವಿಗೆ ಸೊನ್ನೆ ಬಂದರೂ, ವಿದ್ಯಾರ್ಥಿಗಳ ಉತ್ಸಾಹಕ್ಕೆ ತಡೆ ಹಾಕುವ ಮನಸ್ಸಿರಲಿಲ್ಲ, ಒಮ್ಮೆ ಗಿರೀಶನು ತನ್ನ

ಪಾಪಾಜಿ (ತಂದೆ) ಮಮ್ಮೀಜಿ (ತಾಯಿ) ಅಂಕಲ ಮತ್ತು ಅಂಟಿಜಿ (ಚಿಕ್ಕಪ್ಪ-ಚಿಕ್ಕಮ್ಮ) (ಅವರ ಹಿಂದಿ ಬೆಂಗಳೂರ ಕನ್ನಡದಂತೆ ಇಂಗ್ಲಿಷಮಯವಾಗಿರುತ್ತದೆ!) ಮತ್ತು ಗೆಳೆಯರೆಲ್ಲರ ಭಾವಚಿತ್ರಗಳನ್ನು ತೆಗೆದುಕೊಂಡು ಬಂದಿದ್ದ. ಸಿದ್ಧ ರಸಾಯನಗಳು ಇಲ್ಲದ್ದರಿಂದ ಮರುದಿನ ಮಾಡಿಕೊಡುತ್ತೇನೆಂದೆ. ತಾನೇ ತಯಾರಿಸಿಕೊಳ್ಳುವೆನೆಂದ. ಏನೇನು ಮಾಡಬೇಕು? ಎಂದು ವಿವರವಾದ ಮಾಹಿತಿಯನ್ನು ಕೊಟ್ಟು, ಇನ್ನೊಮ್ಮೆ ಅವನಿಂದ ಹೇಳಿಸಿಕೊಂಡು, ನನ್ನ ಕೆಲಸದಲ್ಲಿ ನಾನು ತೊಡಗಿದೆ. ಅರ್ಧ ತಾಸಿನ ನಂತರ ಜೋಲು ಮುಖದೊಂದಿಗೆ ಗಿರೀಶನು ಶುಭ್ರವಾದ ಫಿಲ್ಮನ್ನು ತಂದು ಇದೇಕೆ ಹೀಗಾಯಿತು? ಎಂದು ವಿಚಾರಿಸಲು ಧಾವಿಸಿ ಬಂದಿದ್ದ. ಈಜುಗಾರನು ನೀರಿಗೆ ಧುಮುಕಿ ಕೈಕಾಲು ಬಡಿಯುತ್ತ ಮೀನಿನಂತೆ ಮುಂದೆ ಸರಿದದ್ದನ್ನು ನೋಡಿದ ಹೊಸಬನು, ಈಜು ಅದೆಷ್ಟು ಸುಲಭವೆಂದು ನೀರಿಗೆ ಜಿಗಿದ ಸ್ಥಿತಿ ಅವನದಾಗಿತ್ತು. ಹುರುಪಿನಲ್ಲಿ ಅತಿ ಮುಖ್ಯವಾದ ರಸಾಯನವನ್ನು ಸೇರಿಸುವುದನ್ನೇ ಮರೆತು ಬಿಟ್ಟಿದ್ದನಾತ. ಇನ್ನೊಂದು ದಿನ ಸಿದ್ದಿಕಿ, ತೀರ ಹೆಚ್ಚು ಉಷ್ಣತಾಮಾನವಿದ್ದ ದಿನ ಛಾಯಾ ಚಿತ್ರಣ ಮಾಡಲು ಬಂದು, ಬೇಡವೆಂದರೂ, ಏನಾಗುವುದೆಂದು ನೋಡಿಯೇ ಬಿಡುತ್ತೇನೆಂದು ಪ್ರಾರಂಭಿಸಿದ. ಫಿಲ್ಮಿನಲ್ಲಿದ್ದ ರಸಾಯನಗಳೆಲ್ಲ ಉಷ್ಣತೆಗೆ ಕರಗಿ ಎಲ್ಲವೂ ಮೇಣವಾಯಿತು.

ಬಹುಸಂಖ್ಯಾತ ವಿದ್ಯಾರ್ಥಿಗಳು ಜ್ಞಾನದ ಹಸಿವು ಇಲ್ಲದಿದ್ದರೂ ಒಳ್ಳೆಯ ನೌಕರಿ ಗಿಟ್ಟಿಸುವುದರ ಸಲುವಾಗಿ ಕಾಲೇಜು ಸೇರುವುದು ಸಾಮಾನ್ಯ ಮಾತಾಗಿದೆ. ಪಾಲಕರು ಬೇಕಾದಷ್ಟು ಹಣ ಪೂರೈಸುವರು. ಪ್ರಾಧ್ಯಾಪಕರು ಪಾಸಾಗಲು ಬೇಕಾಗುವಷ್ಟು ಟಿಪ್ಪಣಿಗಳನ್ನು ಪೂರೈಸುವರು. ಹೀಗಾಗಿ ಹೆಚ್ಚಿನ ಸಮಯ ಇವರೆಲ್ಲ ನಿರುದ್ಯೋಗಿಗಳೇ! ಇಂಥ ವಿದ್ಯಾರ್ಥಿಗಳೇ ಕಾಲೇಜಿನಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಅಶಾಂತಿಯನ್ನು ಹಬ್ಬಿಸುವವರು. ಅಂಥವರು ಛಾಯಾಗ್ರಹಣದಲ್ಲಿಯಾದರೂ ಆಸಕ್ತಿ ವಹಿಸಲಿ, ಎಂದು ನಾನು ಮತ್ತು ವಿದ್ಯಾರ್ಥಿಗಳು ತಯಾರಿಸಿದ ಒಳ್ಳೆಯ ಚಿತ್ರಗಳನ್ನು ಆಕರ್ಷಕ ಶಿರೋನಾಮೆಗಳೊಂದಿಗೆ ನೋಟಿಸಬೋರ್ಡಿಗೆ ಹಚ್ಚಲು ಪ್ರಾರಂಭಿಸಿದೆ. ವಾರಕ್ಕೊಮ್ಮೆ ಬದಲಿಸುವ ಈ ಚಿತ್ರಗಳಲ್ಲಿ ವಿದ್ಯಾರ್ಥಿವೃಂದ ಹೆಚ್ಚಿನ ಆಸಕ್ತಿಯನ್ನು ತೋರಿಸಿತು. ಮೆಚ್ಚಿಕೊಂಡವರು ಅವನ್ನು ಯಾರು ತಯಾರಿಸಿದವರೆಂದು ಪತ್ತೆ ಹಚ್ಚಿ ತಮಗಾಗಿ ಪ್ರತಿಗಳನ್ನು ಮಾಡಿಸಿಕೊಂಡರು. ತಮಗೂ ಛಾಯಾಗ್ರಹಣ ಕಲಿಯುವ ಆಸೆಯಿದೆ! ಎಂದರು. ವಿದ್ಯಾರ್ಥಿಗಳ ಹಿತಚಿಂತನೆಯ ಡೀನರು ಬೇರೊಬ್ಬರಿದ್ದುದರಿಂದ ಅವರು ಮುಂದುವರೆದು ಇಂಥ ಸವಲತ್ತು ಒದಗಿಸಿದರೆ ನನ್ನ ಕೈಯಲ್ಲಾದ ಸಹಾಯ ಮಾಡುವೆನೆಂದು ಅವರಿಗೆ ಹೇಳಿದೆ. ಕೆಲ ಸಹೋದ್ಯೋಗಿಗಳು ವಿರಾಮದ ವೇಳೆಯಲ್ಲಿ ಛಾಯಾಗ್ರಹಣದ ತರಬೇತಿಯ ಕ್ಲಾಸು

ನಡೆಸುವಂತೆ ಸೂಚಿಸಿದರು. ಇಷ್ಟನ್ನೇ ಮಾಡಬೇಕಾಗಿದ್ದರೆ ಕೈಯಿಂದ ಸಾಕಷ್ಟು ಹಣ ಖರ್ಚಾಗುತ್ತಿದ್ದಾಗ ಅಂತಹ ಸಾಹಸದ ಹೆಜ್ಜೆಯನ್ನಿಡಲು ಹಿಂಜರಿದೆ. ನೋಟಿಸ ಬೋರ್ಡಿನ ಮೇಲೆ ಛಾಯಾಚಿತ್ರಗಳನ್ನು ಅಂಟಿಸಲು ನೋರಾರು ಆತಂಕಗಳು ಬರಲಾರಂಭಿಸಿವು ಯಾರಿಂದಲೋ ಅಪ್ಪಣೆ ಪಡೆಯಬೇಕು. ಹಚ್ಚಿದ ಮರುಗಳಿಗೆಯಲ್ಲಿಯೇ ಬೇರೆ ಯಾರೋ ನೋಟಿಸ ಒಂದನ್ನು ಛಾಯಾಚಿತ್ರಗಳ ಮೇಲೆಯೇ ಅಂಟಿಸಿಬಿಡುತ್ತಿದ್ದರು. ಯಾವುದೇ ಹೊಸ ವಿಚಾರ ಆಚರಣೆಯಲ್ಲಿ ತಂದರೆ ಸಂತೋಷಪಡುವವರಿಗಿಂತ ಉರಿಯುವವರೇ ಹೆಚ್ಚಿಲ್ಲವೇ ನಮ್ಮಲ್ಲಿ? ಡೀನರು, ಬಿ.ಪಿ. ಯವರು ತಮ್ಮ ಕುಟುಂಬದವರ ಛಾಯಾಚಿತ್ರಗಳನ್ನೆಲ್ಲ ನನ್ನಿಂದ ಮಾಡಿಸಿಕೊಳ್ಳಲು ಉತ್ಸುಕರಾಗಿದ್ದರೇ ಹೊರತು ವಿದ್ಯಾರ್ಥಿಗಳಿಗೆ ಸಹಾಯವಾಗಬಹುದಾದ ಛಾಯಾಚಿತ್ರಗ್ರಹಣ ನಡೆಸುವುದಕ್ಕಾಗಿ ಅಲ್ಲ. ಇಂಥ ವಾತಾವರಣ ಬೇಗನೇ ನಿರುತ್ಸಾಹವನ್ನು ಹುಟ್ಟಿಸಿತು. ನೋಟಿಸ ಬೋರ್ಡಿಗೆ ಚಿತ್ರಗಳನ್ನು ಹಾಕುವುದನ್ನು ನಿಲ್ಲಿಸಿಬಿಟ್ಟೆ. ಇದರಿಂದ ಹರ್ಷಗೊಂಡ ಸಹೋದ್ಯೋಗಿಯೊಬ್ಬ "ಬಂದ ಹೊಸದರಲ್ಲಿ ಎಲ್ಲರೂ ಹೀಗೆಯೇ ಹಾರಾಡುತ್ತಾರೆ. ಇವೆಲ್ಲ ನಾಲ್ಕು ದಿನದ್ದೆಂದು ನನಗೆ ಮೊದಲೇ ಗೊತ್ತಿತ್ತು" ಎಂದು ಪರಿಹಾಸ್ಯವಾಡಿದ್ದು ನನ್ನ ಕಿವಿಯ ಮೇಲೆ ಬಿದ್ದುನೊಂದುಕೊಂಡೆ. ಅನೇಕ ವಿದ್ಯಾರ್ಥಿಗಳು ಬಂದು ಅದನ್ನೇಕೆ ನಿಲ್ಲಿಸಿದಿರಿ? ಎಂದು ಕೇಳಿದರೂ ಅಧಿಕಾರಿಗಳು ಮಾತ್ರ ಹಾಗೆ ಕೇಳುವ ಗೋಜಿಗೆ ಹೋಗಲೇ ಇಲ್ಲ.

ವಿದ್ಯಾರ್ಥಿಗಳು ಆಗೊಮ್ಮೆ ಈಗೊಮ್ಮೆ ಸುಖ ದುಃಖಗಳನ್ನು ವಿಚಾರಿಸಲು ಮನೆಗೆ ಬರುತ್ತಿದ್ದರು. ಅಂತಹ ಸಮಯಗಳಲ್ಲಿ ಅವರು ವಿದ್ಯಾಭ್ಯಾಸದ ಇಲ್ಲವೇ ಸಹೋದ್ಯೋಗಿಗಳ ಬಗ್ಗೆ ಮಾತನಾಡಲು ಯತ್ನಿಸಿದಾಗ ಅದಕ್ಕೆ ತಡೆಹಾಕಿ ಬೇರೆಯೇ ವಿಷಯವನ್ನು ಪ್ರಾರಂಭಿಸುತ್ತಿದ್ದೆ. ಸರ್ದಾರಜಿಯ ನಗೆಹನಿಗಳು, ಕರಾವಳಿಯ ಜನಜೀವನ, ರಾಜಸ್ಥಾನದ ಜನಜೀವನ, ಅಮೇರಿಕನ್ನರು. ಇವುಗಳ ಬಗ್ಗೆಯೇ ನಮ್ಮ ಮಾತುಕತೆ ಸಾಗುತ್ತಿತ್ತು. ಕೊನೆಯಲ್ಲಿ ಕಾಫಿ ಕುಡಿದು ವಂದನೆಯೊಂದಿಗೆ ಬೀಳ್ಕೊಳ್ಳುತ್ತಿದ್ದರು. ತಾವು ಎಷ್ಟೋ ಸಲ ನಿಮ್ಮಲ್ಲಿ ಬಂದಿದ್ದೇವೆಂದು ಹೇಳಿ ಒತ್ತಾಯದಿಂದ ಒಂದೆರಡು ಸಲ ಹಾಸ್ಟೇಲಿಗೆ ಕರೆದೊಯ್ದು ಎಲ್ಲಿಂದಲೋ ಹಾಲು ತಂದು. ಯಾರಿಂದಲೋ ಸಕ್ಕರೆ ತಂದು ಚಹಮಾಡಿ ತಿಂಡಿಯೊಡನೆ ಕೊಟ್ಟಿದ್ದರು. ವಿದ್ಯಾರ್ಥಿಗಳೊಂದಿಗೆ ಸುಲಭವಾಗಿ ಬೆರೆತರೂ, ಹೊಣೆಗಾರಿಕೆ ಮರೆಯದೇ, ಅವರ ಪರಿಚಯ, ಆತ್ಮೀಯತೆಗಳ ದುರ್ಲಾಭ ಪಡೆಯದಂತೆ, ಶಿಕ್ಷಕ - ವಿದ್ಯಾರ್ಥಿಗಳ ಒಳ್ಳೆಯ ಸಂಬಂಧ ನಾನು ಕಲ್ಪಿಸಿಕೊಂಡಂತೆ ಸಾಧಿಸಲು ಹೆಣಗಿದೆ. ಚಳಿಗಾಲ ಕಳೆದು ವಸಂತಾಗಮನದ ಸೂಚಕವಾಗಿ ಬರುವ ಸಂಕ್ರಾಂತಿಯನ್ನು ಕರ್ನಾಟಕದಲ್ಲಿ ಎಳ್ಳು-ಬೆಲ್ಲ, ಮಹಾರಾಷ್ಟ್ರದಲ್ಲಿ ಕುಸುರೆಳ್ಳು ಹಂಚಿ, ತಿಂದು ಆಚರಿಸಿದರೆ ರಾಜ ಸ್ಥಾನದಲ್ಲಿ ಗಾಳಿ

ಪಟಗಳನ್ನು ಹಾರಿಸಿ ಆಚರಿಸುವರು. ಹತ್ತು ಪೈಸೆಯಿಂದ ಒಂದು ರೂಪಾಯಿಯ ಬೆಲೆಬಾಳುವ ಗಾಳಿಪಟಗಳು ಅಂಗಡಿಗಳಲ್ಲಿ ಮಾರಾಟವಾಗುವವು. ಅದರಂತೆ ಬಗೆಬಗೆಯ ದಾರಗಳೂ ಸಿಗುವವು. ತಮ್ಮ ಯೋಗ್ಯತೆಗೆ ಅನುಸಾರವಾಗಿ ಹುಡುಗರು ಹತ್ತು - ಹದಿನೈದು ಗಾಳಿ ಪಟಗಳನ್ನು ತಂದು ಹಾರಿಸುವರು. ಬೋಳು ಮನೆಯ ಗಚ್ಚಿಯಿಂದ ಹಾರಿಸುತ್ತ ಒಂದು ಮಾಡಿನಿಂದ ಇನ್ನೊಂದು ಮಾಡಿಗೆ ಜಿಗಿಯುವವರೂ ಇದ್ದಾರೆ. ಪಟ ಹಾರಿಸುವುದರಲ್ಲಿ ಮೈಮರೆತು ಕೆಳಗೆ ಬಿದ್ದು ಹಲ್ಲು ಮುರಿದುಕೊಂಡವರೂ ಇದ್ದಾರೆ. ಪಟಗಳನ್ನು ಎತ್ತರಕ್ಕೆ ಹಾರಿಸುವುದಕ್ಕಿಂತ ಇನ್ನೊಬ್ಬರ ದಾರವನ್ನು ಹರಿದು ಕೆಡುವುವದು ಸ್ಪರ್ಧೆಯಾಟವಾಗಿದ್ದರಿಂದ ಪ್ರತಿಯೊಬ್ಬನೂ ತಾನು ನೆಲಕ್ಕೆ ಉರುಳಿಸಿದವುಗಳ ಲೆಕ್ಕವನ್ನು ಅಭಿಮಾನದಿಂದ ಹೇಳುತ್ತಾನೆ. ದಾರ ಹರಿದಾಗೊಮ್ಮೆ 'ಏSS ಕಾಟಾSS (ಅದೋ! ಹರಿಯಿತು)' ಎಂಬ ಕೂಗು ಗಗನ ಸೇರುತ್ತದೆ. ಅದರ ಜೊತೆಗೆ ಬಿದ್ದ ಪಟಗಳನ್ನು ಪಡೆಯಲು ಹುಡುಗರ ತಂಡ ನಾಲ್ಕೂ ದಿಕ್ಕುಗಳಲ್ಲಿ ಓಡಾಡಿ ಅವನ್ನು ಆತುರದಲ್ಲಿ ಹಿಡಿದು ಹರಿಯುವದೇ ಹೆಚ್ಚು. ಗಿರೀಶ - ಝಿಯಾರ ಗುಂಪು ಊರಿನ ಎತ್ತರದ ಮನೆಗಳಲ್ಲಿ ಒಂದಾಗಿದ್ದ ನನ್ನ ಮನೆಯ ಉಪ್ಪರಿಗೆಯಿಂದಲೇ ಹಾರಿಸುವುದಾಗಿ ಹೇಳಿದರು. ಸಂಜೆಯ ತನಕ ಪಟ ಹಾರಿಸಿ ದಣಿದಾಗ, ಚಹ ಮಾಡಿ ಕೊಟ್ಟಾಗ ಬಹಳ ಆನಂದವಾಗಿತ್ತು ಅವರಿಗೆ.

ಹೋಳಿಯನ್ನು ರಾಜಸ್ಥಾನದವರು ಅತಿ ಉತ್ಸಾಹದಿಂದ ಆಚರಿಸುವರು. ಇನ್ನು ಒಂದು ತಿಂಗಳು ಇರಬೇಕಾದರೆ ತಮ್ಮ ಹಲಿಗೆಗಳನ್ನು ಹೊರಗೆ ತೆಗೆದು ಚರ್ಮವನ್ನು ಬಿಗಿದು ಕಟ್ಟಿ ಎರಡು ಕಿರಿ ಕೋಲಿನಿಂದ ಅದನ್ನು ಬಾರಿಸುತ್ತ ಸತತವಾಗಿ ಹಾಡುವರು. ಮೂರು ನಾಲ್ಕು ಜನ ಹಲಿಗೆಗಳನ್ನು ಬಾರಿಸುತ್ತ ಮೂರುನಾಲ್ಕು ಜನ ಧ್ವನಿಗೂಡಿಸುತ್ತ ಕೇರಿ ಕೇರಿಗಳಲ್ಲಿ ಹಾಡುತ್ತ ತಿರುಗುವರು, ರಾತ್ರಿಯನ್ನೆಲ್ಲ ಹಾಡುತ್ತ ಕಳೆಯುವವರೂ ಇದ್ದಾರೆ. ಎರಡು ದಿನ ಬಣ್ಣದ ಓಕುಳಿ ಆಡಿ. ದಾರಿ ಹೋಕರಿಗೆಲ್ಲ ಅದರ ಸ್ನಾನ ಮಾಡಿಸುವರು. ಈ ಬಣ್ಣಮಯವಾದ ಬಟ್ಟೆಗಳನ್ನು ವರ್ಷದುದ್ದಕ್ಕೂ ಅಭಿಮಾನದಿಂದ ಧರಿಸುವವರಿದ್ದಾರೆ. ಹೆಂಗಳೆಯರೂ ಓಕಳಿಯಾಡುವ ಪದ್ಧತಿಯಿದೆ. ಪ್ರಾಧ್ಯಾಪಕ ವರ್ಗವೆಲ್ಲ ಡೀನರ ಮನೆಗೆ ಧಾವಿಸಿ ಹೋಳಿಯ ಶುಭ ಚಿಂತನೆ ಹೇಳಿ ಬಣ್ಣ ಹಾಕುವದು ವಾಡಿಕೆಯಂತೆ. ಮಂಗನ ಮುಸುಡಿ ಮಾಡಿಕೊಳ್ಳುವ ಮನಸಿಲ್ಲದೇ ಮನೆಯಲ್ಲೇ ಇದ್ದು ತಮಾಷೆ ನೋಡುತ್ತಿದ್ದೆ. ನಮ್ಮ ಸುಳಿವು ಯಾರಿಗೂ ಹತ್ತದೇ ಇದ್ದುದರಿಂದ ಮೊದಲನೇ ದಿನ ಪಾರಾದೆವು. ಎರಡನೆಯ ದಿನ ಮಧ್ಯಾಹ್ನದ ಸಮಯಕ್ಕೆ ಅದು ಹೇಗೋ ನಾವು ಮನೆಯಲ್ಲಿರುವದು ಪತ್ತೆಯಾಗಿ, ಬಾಗಿಲು ಬಡಿದು ತಂಡವೊಂದು ಬಂದು ನಮ್ಮ ಮೇಲೆ ಬಣ್ಣದ ಮಳೆಗರೆದೇ ಬಿಟ್ಟಿತು. ಕನ್ನಡಿಯಲ್ಲಿ ನೋಡಿಕೊಂಡಾಗ ಪರಿಚಯ ಸಿಗದಷ್ಟು ವಿದ್ರೂಪವಾಗಿತ್ತು, ಗೃಹಿಣಿಗೆ ಇದರಿಂದ ಆನಂದವೇ ಅಯಿತು.

ಅಂತೆಯೇ ಛಾಯಾ ಚಿತ್ರಗಳನ್ನೂ ತೆಗೆಯಿಸಿಕೊಂಡಳು! ನೀರಿಲ್ಲದ ಜೋಬನೇರಿನಲ್ಲಿ ಸ್ನಾನಮಾಡಿ ಶುಭ್ರವಾಗಿ ಕುಳಿತಾಗ, ಇನ್ನೊಮ್ಮೆ ಬಾಗಿಲು ಬಡಿದಾಗ ಗಾಬರಿಯಾದೆವು. ಬಂದವರು ಬಣ್ಣವಿಲ್ಲದ ವಿದ್ಯಾರ್ಥಿಗಳೆಂದು ಕಿಂಡಿಯಿಂದ ನೋಡಿ ದೃಢಪಡಿಸಿಕೊಂಡು ಬಾಗಿಲು ತೆಗೆದೆ. ಅವರ ಸಂಗಡ ಪ್ರಯೋಗಾಲಯದ ಸಹಾಯಕರೂ ಬಂದಿದ್ದರು. ತಾವು ನಮ್ಮಿಬ್ಬರ ಆಶೀರ್ವಾದ ಪಡೆಯಲು ಬಂದಿದ್ದೇವೆ ಎಂದು ಹೇಳಿ ನಮ್ಮಿಬ್ಬರ ಪಾದಗಳನ್ನು ಮುಟ್ಟಿ ನಮಸ್ಕರಿಸಿದಾಗ ನಮಗೆ ಹೇಗೋ ಆಯಿತು. ಈ ಹೊಸಯುಗದಲ್ಲಿಯೂ ಶಿಕ್ಷಕರ ಬಗ್ಗೆ ಗೌರವ ಭಾವವನ್ನು ಅವರು ತಳೆದದ್ದು ನೋಡಿ ಅಭಿಮಾನವೆನಿಸಿತು. ಮಿಠಾಯಿ, ಚಹಗಳ ಸರಬರಾಜಾಯಿತು.

ಸ್ನಾತಕೋತ್ತರ ವಿದ್ಯಾರ್ಥಿಗಳೆಲ್ಲ ಒಂದು ಕಿರು ಸಂಶೋಧನೆಯನ್ನು ನಡೆಸಿ ತಮ್ಮ ಶಿಕ್ಷಣದ ಭಾಗವಾಗಿ, ಒಂದು ಪ್ರಬಂಧವನ್ನು ಬರೆದುಕೊಡಬೇಕಾಗಿತ್ತು. ಸಂಶೋಧನೆಯ ಮೇಲ್ವಿಚಾರಣೆಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ, ಒಬ್ಬ ಅಧ್ಯಾಪಕರನ್ನು ನೇಮಿಸುವುದು ವಾಡಿಕೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಲಿಸಿದ ಅನುಭವ ಬೇಕೆಂದು ಪ್ರತಿಯೊಬ್ಬ ಶಿಕ್ಷಕನು ಹಂಬಲಿಸಿದರೂ ಅದಕ್ಕಾಗಿ ದುಡಿಯಲು ಸಿದ್ಧರಿಲ್ಲದೇ ಕಲಿಸಲು ಸುಲಭವಾಗುವ ವಿಷಯಗಳನ್ನೇ ತಾವು ಆರಿಸಿಕೊಳ್ಳುತ್ತಿದ್ದರು. ನಾನು ಅದು ಬೇಕು, ಇದು ಬೇಕು ಎಂದು ಸ್ಪರ್ಧೆಗಿಳಿಯದೇ ಕೊಟ್ಟ ವಿಷಯವನ್ನು ಕಲಿಸುವುದೆಂದು ನಿರ್ಧರಿಸಿದ್ದೆ. ಹೀಗಾಗಿ ಉಳಿದವರು ಬಿಟ್ಟ ವಿಷಯಗಳು ನನ್ನ ಪಾಲಿಗೆ ಬಂದವು. ಹೊಸ ವಿಷಯಗಳಾದರೂ ಪುಸ್ತಕಗಳನ್ನು ಓದಿ, ಟಿಪ್ಪಣಿ ಮಾಡಿ ಕಲಿಸುವಷ್ಟು ಅವಕಾಶವಿದ್ದುದರಿಂದ ಅನುಕೂಲವೇ ಆಯಿತು. ಪರೀಕ್ಷೆಗೆಂದು ಓದಿದ ವಿಷಯಗಳು ಕಲಿಸುವದರ ಸಲುವಾಗಿ ಓದಿದಾಗ ಹೊಸ ಅರ್ಥ, ವಿಚಾರಗಳನ್ನು ಕಂಡುಕೊಂಡೆ. ನನಗೂ ತರಬೇತಿಯಾಯಿತು! ಸಂಶೋಧನೆಗೆ ವಿದ್ಯಾರ್ಥಿಗಳನ್ನು ಹಂಚಿದಾಗಲೂ ಯಾರಿಗೂ ಬೇಡವಾಗಿದ್ದ ಭಗೀರಥ ಸಿಂಘ್ ನನ್ನ ಪಾಲಿಗೆ ಬಂದ. ಅವನನ್ನು ತರಬೇತಿಗೊಳಿಸುವುದರಲ್ಲಿ ನನ್ನ ಜಾಣ್ಮೆಯ ಪರೀಕ್ಷೆಯಾದೀತು, ಎಂದು ಅದಕ್ಕೂ ಒಪ್ಪಿಕೊಂಡೆ. ಅವನ ಸಮಸ್ಯೆಯನ್ನು ಕೂಲಂಕಷವಾಗಿ ಅಭ್ಯಸಿಸಿ, ಅವನು ಮಾಡಬೇಕಾದ ಕಾರ್ಯಾಗಳ ರೂಪರೇಖೆಗಳನ್ನು ಟಿಪ್ಪಣಿ ಮಾಡಿ ಕೊಟ್ಟೆ. ಅವನು ಕಂಬಳಿಹುಳದ ಮೇಲೆ ಸಂಶೋಧನೆ ಮಾಡಲಿದ್ದ. ಅವನಿಗೆ ಈ ಹುಳ ಎಲ್ಲಿ ಸಿಗುತ್ತದೆ? ಎಂಬುದೊಂದು ಬಿಟ್ಟರೆ ಬೇರೇನೂ ಗೊತ್ತಿಲ್ಲ. ತನ್ನ ಸಂದೇಹಗಳನ್ನು ಕಾಲೇಜಿನ ವೇಳೆಯಲ್ಲಿ ಬಂದು ನಿವಾರಿಸಿಕೊಳ್ಳದೇ ಅವೇಳೆಯಲ್ಲಿ ಮನೆಗೇ ಧಾವಿಸಿ ಬರುತ್ತಿದ್ದ. ತಿರುಗಿ ತಿರುಗಿ ವಿವರಿಸಿದ್ದು ಪತ್ನಿಗೆ ಕಂಠಪಾಠವಾದರೂ ಅವನ ತಲೆಗೆ ಹೋಗುತ್ತಿರಲಿಲ್ಲ. ಆತ ಬರುತ್ತಿದ್ದಂತೆ "ಬಂತಪ್ಪಾ! ನಿಮ್ಮ ಕಂಬಳಿ ಹುಳ!" ಎನ್ನುವಳು. ಅವನೊಂದಿಗೆ ಹೊಲಗಳಿಗೆ ಹೋಗಿ, ಅವುಗಳ ತತ್ತಿಗಳು ಎಲ್ಲಿರುತ್ತವೆ? ಹುಳುವಾಗಿ

ಹೊರಗೆ ಬರಲು ಎಷ್ಟು ಸಮಯ ಹಿಡಿಯುತ್ತದೆ? ದಿನಕ್ಕೆ ಎಷ್ಟು ಪರ್ಣಗಳನ್ನು ಅವು ತಿನ್ನುತ್ತವೆ. ಯಾವ ಜಾತಿಯ ಪರ್ಣಗಳು ಅವಕ್ಕೆ ಆಹಾರವಾಗಿವೆ. ಅವುಗಳ ಜೀವನದ ಮೇಲೆ ಆರ್ದ್ರತೆ, ಉಷ್ಣತೆಗಳ ಪರಿಣಾಮ ಎಷ್ಟು? ಎಷ್ಟು ದಿನಗಳ ನಂತರ ಅವು ಗೂಡುಕಟ್ಟಲು ಪ್ರಾರಂಭಿಸುವವು? ಎಷ್ಟು ದಿನ ನಿದ್ರಾವಸ್ಥೆಯಲ್ಲಿ ಇರುವವು? ಅವುಗಳಿಂದ ಪತಂಗಗಳು ಯಾವಾಗ ಹೊರಬೀಳುವವು? ಹೆಣ್ಣು ಹುಳ ಸರಾಸರಿ ಎಷ್ಟು ಕೀಟಗಳನ್ನು ಇಡುವದು? ಯಾವ ಕೀಟ ನಾಶಕಗಳು ಅವನ್ನು ನಾಶಪಡಿಸುವವು? ಎಂದೆಲ್ಲ ಕಂಡು ಹಿಡಿಯಲು ಹೇಳಿದಾಗ, ಯಾಂತ್ರಿಕವಾಗಿ ಅಷ್ಟನ್ನು ಮಾಡಿ ಮುಗಿಸಿದ. ಅವನಿಗೆ ಬೇಕಾಗುವ ಛಾಯಾಚಿತ್ರಗಳನ್ನು ತೆಗೆದುಕೊಟ್ಟೆ. ಅವನು ಬರೆದ ಇಂಗ್ಲಿಷು, ಇಂಗ್ಲಂಡಿನವರನ್ನೂ ನಾಚಿಸುವಂತೆ ಇದ್ದುದರಿಂದ ಅದನ್ನು ಇಡಿಯಾಗಿ ತಿದ್ದಿ ಬರೆದುಕೊಡಬೇಕಾಯಿತು. ಕೊನೆಗೆ ಉಳಿದ ಎಲ್ಲ ವಿದ್ಯಾರ್ಥಿಗಳ ಪ್ರಬಂಧಕ್ಕಿಂತ "ಕಂಬಳಿ ಹುಳುವಿನ" ಪ್ರಬಂಧವೇ ಚೆನ್ನಾಗಿದೆಯೆಂದು ಎಲ್ಲರೂ ಒಪ್ಪಿಕೊಳ್ಳುವಂತಾಯಿತು.

೧೭. ಬೇಸಿಗೆ ಬಂದಿತು

ಜೋಬನೇರಕ್ಕೆ ದೂರದ ಹಳ್ಳಿಗಳಿಂದ ತರಕಾರಿ ಮಾರಲು ಬರುವುದರಿಂದ ಮಧ್ಯಾಹ್ನ ಅದು ಪೇಟೆಯಲ್ಲಿ ಸಿಗುವುದು ವಾಡಿಕೆ. ಆದ್ದರಿಂದ ಊಟದ ವಿರಾಮದಲ್ಲಿ ಹೋಗಿ, ತರಬೇಕಾಗುತ್ತಿತ್ತು. ಮಾಸ್ತರ ಸಾಹೇಬರ ಸಲುವಾಗಿಯೇ ಜಯಪುರದಿಂದ ತರಕಾರಿ ತಂದು ಮಾರುವವರಿದ್ದರೆ ಅವುಗಳೆಲ್ಲ ಆಳುಗಳನ್ನು ಕಳಿಸಿ ತರಿಸುವ ಮಾಸ್ತರ ಸಾಹೇಬರಿಗೆ ಮೀಸಲು. ಊರಿನ ಜನರಿಗೆ ತರಕಾರಿಗಳೆಲ್ಲ ಯೋಗ್ಯ ಬೆಲೆಗೆ ಸಿಗುತ್ತಿದ್ದರೂ ಆ 'ಶ್ರೀಮಂತ'ರಾದ ಶಿಕ್ಷಕರಿಗೆ ಮಾತ್ರ ಹೆಚ್ಚಿಗೆ ದರಕ್ಕೆ ಮಾರುತ್ತಿದ್ದರು. ಅಂದು ಎಂದಿನಂತೆ ತರಕಾರಿ ಕೊಳ್ಳ ಹೋದಾಗ ಯಾರ ಹತ್ತಿರವೂ ತರಕಾರಿಗಳ ರಾಶಿ ಕಾಣದ್ದರಿಂದ ಯಾವಾಗಲೂ ಕಾಯಿಪಲ್ಲೆ ಕೊಳ್ಳುತ್ತಿದ್ದ ಮುದುಕಿಗೆ ವಿಚಾರಿಸಿದಾಗ ಯಾವುದು ಬೇಕು ಎಂದು ಗಜ್ಜರಿ, ಮೂಲಂಗಿ, ಬದನೆಕಾಯಿಗಳನ್ನು ಹೊರಗೆಳೆದು ತೋರಿಸಿದಳು. "ಮಾರಾಟದ ವಸ್ತುಗಳನ್ನು ಹೀಗೇಕೆ ಮುಚ್ಚಿಟ್ಟಿದ್ದೀಯಾ?" ಎಂದು ವಿಚಾರಿಸಿದಾಗ 'ಮುಚ್ಚಿಡದಿದ್ದರೆ ಈ ಉರಿಬಿಸಿಲಿನಲ್ಲಿ ಐದೇ ನಿಮಿಷಗಳಲ್ಲಿ ಬಾಡದೇ ಉಳಿದಾವೇ?' ಎಂದಳು. ಎಲ್ಲರೂ ಹರಕು ಬಟ್ಟೆಗಳಿಂದ ತರಕಾರಿ ಮುಚ್ಚಿಟ್ಟಿದ್ದು ಕಂಡಿತು. ಈ ಹೆಂಗೆಳೆಯರೆಲ್ಲ ಹಳ್ಳಿಯವರಂತೆ ಕಂಡರೂ ವ್ಯಾಪಾರವನ್ನು ಮಾತ್ರ ಅವರಿಂದಲೇ ಕಲಿಯಬೇಕು. ಎಂದೂ ಕಾನೂನು ಬದ್ಧವಾದ ತಕ್ಕಡಿ, ತೂಕದ ಕಲ್ಲುಗಳನ್ನು ತರುವವರಲ್ಲ. ಒಂದು ಕೋಲಿಗೆ ದಾರದ ಸಹಾಯದಿಂದ ಎರಡು ಬುಟ್ಟಿಗಳನ್ನು ತೂಗಹಾಕಿದರೆ ಅದೇ ತಕ್ಕಡಿಯಾಗುತ್ತದೆ. ಗಣಪ ಮತ್ತು ಹಣಮಪ್ಪನ ಮುಖಗಳನ್ನು ಹೋಲುವ ಕಲ್ಲುಗಳನ್ನೇ ತೂಕಕ್ಕಾಗಿ ಬಳಸುವರು. ಒಂದು ಕಲ್ಲು, ಇನ್ನೂರು ಗ್ರಾಮಿನದು ಅದರ ಸಂಗಡ ಒಂದು ಈರುಳ್ಳಿಯಿಟ್ಟರೆ ಕಾಲು ಕಿಲೋಗ್ರಾಮ್ ಆಯಿತೆನ್ನುವರು, ಅರ್ಧ ಇಲ್ಲವೇ ಒಂದು ಕಿಲೋದ ಕಲ್ಲನ್ನು ಇಡುವ ಬದಲಾಗಿ ಆ ಕಲ್ಲಿನಿಂದಲೇ ಎರಡು ಅಥವಾ ನಾಲ್ಕು ಸಲ ತೂಗಿ ಚೀಲಕ್ಕೆ ಸೇರಿಸುವರು. ಪ್ರತಿ ಸಾರೆ ಐವತ್ತು ಗ್ರಾಮ್ ಕಡಿಮೆ ತೂಗಿದರೆ ಒಂದು ಕಿಲೋ ಮಾರಿದಾಗ ಇನ್ನೂರು ಗ್ರಾಮ್ ಕಡಿಮೆ ಕೊಟ್ಟಂತಾಯಿತು ಎಂದು ಅವರ ಲೆಕ್ಕ. ಮೂಲಂಗಿ, ಬಾಳೇಹಣ್ಣು, ಮಾವಿನಹಣ್ಣು ಏನೇ ಇದ್ದರೂ ತೂಗಿಯೇ ಕೊಡುವರು. ಹಣದ ಬದಲಾಗಿ

ಧಾನ್ಯಗಳನ್ನು ಪಡೆದೂ ತರಕಾರಿ ಕೊಡುತ್ತಾರೆ. ಗೋಧಿಯ ತೂಕದಷ್ಟೆ ತರಕಾರಿ ಕೊಟ್ರೆ ಬಾಜರಾದ ಅರ್ಧ ತೂಕದಷ್ಟು ಕೊಡುವರು, ಬಟಾಟೆ, ಟೊಮ್ಯಾಟೊ, ಕಾಲಿಫ್ಲವರಗಳು ಬೇಕಾದರೆ ಅದರ ಎರಡು ಪಟ್ಟು ಗೋಧಿ, ನಾನಲ್ಕು ಪಟ್ಟು ಬಾಜರಾ ಕೊಡಬೇಕೆಂದು ಅವರ ಲೆಕ್ಕಾಚಾರ, ಕಿರಾಣಿ ಅಂಗಡಿಯವರು, ತರಕಾರಿಯವರು ತೂಕದಲ್ಲಿಯೇ ಹೆಚ್ಚಿನ ಲಾಭ ಮಾಡಿಕೊಳ್ಳುವುದನ್ನು ನೋಡಿ ಇಂತಹುದೇ ಪದ್ಧತಿಯನ್ನು ತಾವೂ ಬಳಸಿದ್ದಾರೆ. ಸಾಮಾನುಗಳನ್ನು ಕಟ್ಟಿಕೊಡಲು ಹಳೆಯ ವರ್ತಮಾನ ಪತ್ರಿಕೆ ಅಥವಾ ಕಾಗದದ ಲಕೋಟೆಗಳನ್ನು ಬಳಸುವ ಬದಲಾಗಿ ತಮ್ಮ ಲಕೋಟೆಗಳನ್ನು ತಾವೇ ತಯರಿಸುತ್ತಾರೆ. ಬ್ಲಾಟಿಂಗ ಹಾಳೆಯನ್ನು ಹೋಲುವ ದಪ್ಪ ಹಳೆಯ ಸಣ್ಣ ಚೂರುಗಳನ್ನು ಜೋಡಿಸಿ, ಕೆಳಗೆ ದಪ್ಪ ರಟ್ಟು ಜೋಡಿಸುವರು. ಅರ್ಧ ಕಿಲೋ ಸಕ್ಕರೆಯನ್ನು ಇಂಥ ಎರಡು ಕಿಲೋ ಸಕ್ಕರೆ ಹಿಡಿಯುವ ಲಕೋಟೆಯಲ್ಲಿ ಕಟ್ಟಿಕೊಟ್ಟು ಸಕ್ಕರೆಯ ಲಾಭದ ಜೊತೆಗೆ ಲಕೋಟೆಯ ಭಾರದಷ್ಟು ಸಕ್ಕರೆಯನ್ನು ಉಳಿಸಿಕೊಳ್ಳುತ್ತಾರೆ. ಅದೇ ಉಪ್ಪು ಖರೀದಿಸಲು ಹೋದರೆ, ಚೀಲಗಳನ್ನು ನಾವೇ ತರಬೇಕೆಂಬ ಕಾನೂನು ಹೇಳುವರು. ಉಷ್ಣತೆಗೆ ಸಾಮಾನುಗಳು ಇಟ್ಟಲ್ಲಿ ನೀರಿನ ಅಂಶ ಕಳೆದುಕೊಂಡು ಭಾರ ಕಡಿಮೆಯಾಗುವದರಿಂದ ಮೇಲಿಂದ ಮೇಲೆ ಅವಕ್ಕೆ ನೀರು ಸಿಂಪಡಿಸಿ ಅವುಗಳ ಭಾರವನ್ನು ಹೆಚ್ಚಿಸುವುದನ್ನು ಕಲಿತಿದ್ದಾರೆ ಈ 'ಮಾರವಾಡಿ'ಗಳು!

ಚಳಿ ಕಳೆದು ವಸಂತಕಾಲದ ಆಲ್ಹಾದಕರವಾದ ಹವೆ ಬರುತ್ತದೆ, ಎನ್ನುವದರೊಳಗಾಗಿ ಮರಳು ಕಾದು ಉಷ್ಣವಾದ ಗಾಳಿ ಬೀಸಲಾರಂಭಿಸುತ್ತದೆ. ಚಳಿಗಾಲದಲ್ಲಿಯಾದರೂ ಬೆಚ್ಚಗಿನ ರಜಾಯಿಯಲ್ಲಿ ಸೇರಿಕೊಳ್ಳಬಹುದಾಗಿತ್ತು. ಬೇಸಿಗೆ ಕಳೆಯುವುದು ತುಂಬಾ ತಾಪದಾಯಕ ಎಂದು ಮಾಸ್ತರ ಸಾಬರಿಗೆ ಅನಿಸಿದರೆ ಬಡವರು ಚಳಿಗಾಲಕ್ಕಿಂತ ಬೇಸಿಗೆಯೇ ಚೆನ್ನು ಅನ್ನುವರು. ತಾವು ರಜಾಯಿ, ಕಂಬಳಿಗಳನ್ನು ಎಲ್ಲಿಂದ ತರುವುದು? ಬೇಸಿಗೆಯಲ್ಲಾದರೆ ಛತ್‌ದ (ಉಪ್ಪರಿಗೆಯ) ಮೇಲೆ ಮಲಗಿಕೊಂಡರೆ ರಾತ್ರೆಯೆಲ್ಲ ಎಷ್ಟೋ ತಂಪು ಅನಿಸುತ್ತದೆ ಎಂದು ಅವರ ತರ್ಕ. ಸೂರ್ಯಾಸ್ತದೊಳಗೆ ಊಟ ಮುಗಿಸಿ ಹರಿದ ಚಾಪೆ, ಹಳೆಯ ಸೀರೆ, ಕುಡಿಯಲು ನೀರು, ಕೈಯಲ್ಲಿ ಒಂದು ದೊಣ್ಣೆ ಹಿಡಿದು ಛತ್ತಕ್ಕೆ ಬರುವರು. ಸೂಕರ ರಾಜಭಾರದಲ್ಲಿ ದೊಣ್ಣೆಯ ಉಪಯೋಗ ತಿಳಿಯಲೇ ಇಲ್ಲ. ಬೆಳಕು ಇರುವ ತನಕ ಕಲ್ಲ ನೆಲದ ಮೇಲೆ ಕುಳಿತು ಹರಟುವರು. ಇಲ್ಲವೇ ಪಗಡೆಯಾಟ ಆಡುವರು. ಕತ್ತಲೆಯಾಯಿತೆಂದರೆ ಮಲಗಿಕೊಂಡು ಬಿಡುವರು, ಬಡವರು ನೆಲದ ಮೇಲೆ ಮಲಗಿದರೆ ಉಳ್ಳವರು, ಬಿದಿರಿನ ಚಾರಪಾಯಿಗಳ ಮೇಲೆ ಮಲಗುವರು.

ಅಡಿಕೆ - ತೆಂಗು ವಿಪುಲವಾಗಿ ಬೆಳೆಯುವ ಕರಾವಳಿ ಪ್ರದೇಶದಲ್ಲಿ ಗಗನವನ್ನೇ ಚಪ್ಪರವನ್ನಾಗಿ ಮಾಡಿಕೊಂಡು ಮಲಗಲು ಅವು ಎಂದೂ ಬಿಡುವುದಿಲ್ಲ. ಯಾವುದೋ ನಿಶಾಚರ ಪಕ್ಷಿ ಮೇಲಿನಿಂದ ಹಾರಿದರೆ ಕುಂಟರಾಗುತ್ತಾರೆಂದು ಹೇಳಿದರೂ, ತೆಂಗು, ಅಡಿಕೆ ಮರದಿಂದ ಏನಾದರೂ ಬಿದ್ದು ಅಪಘಾತವಾಗುವ ಸಂಭವವಿರುವುದೇ ಹೊರಗೆ ಯಾರೂ ಮಲಗದಿರುವುದಕ್ಕೆ ಕಾರಣವಿರಬೇಕು. ಸಣ್ಣವನಿದ್ದಾಗ ಬೆಳದಿಂಗಳ ಕಡಲಿನ ಮರಳಲ್ಲಿ ಮಲಗಿ ರಾತ್ರೆ ಕಳೆಯಬೇಕೆಂದು ಎಷ್ಟೋ ಸಲ ಹಂಬಲಿಸಿದ್ದೆ. ಕಡಲಿನ ತೀರದಲ್ಲಿ ಆ ರೀತಿ ಕಳೆಯುವ ಅವಕಾಶ ಸಿಗದಿದ್ದರೂ ಮರುಭೂಮಿಯಲ್ಲಿ ಅದು ಹಲವು ವರ್ಷಗಳ ತರುವಾಯ ಸಿಕ್ಕಿದ್ದಕ್ಕೆ ಸಂತೋಷವಾಗಿತ್ತು. ಬೇಸಿಗೆ ಪ್ರಾರಂಭವಾದ ಮೇಲೆ ರಾತ್ರೆಯೂಟ ಮುಗಿಸಿ ಹಾಸಿಗೆ, ಹೊದಿಕೆಗಳನ್ನು ಮೇಲುಪ್ಪರಿಗೆಗೆ ಸಾಗಿಸಿದೆವು. ಮೇಲೆ ಮೈಮರೆತು ನಿದ್ರಿಸಿದಾಗ ಕೆಳಗಡೆ ಕಳವು ಆಗದಂತೆ ಬೀಗಗಳನ್ನು ಜಡಿದು ಮೇಲೆ ಬಂದೆವು. ಎಲ್ಲ ಕಡೆಯಲ್ಲಿಯೂ ಹಾಲು ಚೆಲ್ಲಿದಂತೆ ಬೆಳದಿಂಗಳು. ಕಾದ ಭೂಮಿ ಆರುತ್ತಿದ್ದಂತೆ ತಂಗಾಳಿ ಹಿತವಾಗಿ ಬೀಸಲಾರಂಭಿಸಿತು. ಪರಿಸರ ನವ ದಂಪತಿಗಳಿಗೆ ರಸಮಯವಾಗಿತ್ತು. ಮಂದಮಾರುತನಿಗೆ ಮೈಯೊಡ್ಡಿ ಕಲ್ಲುಬೆಂಚುಗಳ ಮೇಲೆ ಅಸೀನರಾಗಿ ಮಾತನಾಡುತ್ತಿದ್ದಂತೆ ವೇಳೆ ಕಳೆದದ್ದು ಗೊತ್ತಾಗಲೇ ಇಲ್ಲ. ಮಿಣುಕು ದಾರಿದೀಪಗಳೂ ಕಣ್ಣು ಮುಚ್ಚಿಕೊಂಡಾಗ ಹನ್ನೊಂದು ಗಂಟೆಯಾಯಿತೆಂದು ತಿಳಿದು ನಿದ್ರಿಸಲು ಎದ್ದಾಗ ಸುತ್ತಲೂ ಕಣ್ಣು ಹಾಯಿಸಿದೆವು. ಮಾತಾಜಿಯ ಮಂದಿರ, ಕೋಟೆ. ಕೊತ್ತಳಗಳು ಎಂದಿನಂತೆ ತಲೆ ಎತ್ತಿಕೊಂಡು ನಿಂತಿದ್ದವು. ಊರ ಜನರು ನಿದ್ರಾವಶರಾಗಿದ್ದರು. ಆಚೆ ಮನೆಯ ಮುದುಕಿಗೆ ನಿದ್ರೆಯೇ ಬರಲಿಲ್ಲವೆಂದು ತೋರುತ್ತದೆ. ಎದ್ದು ಹಾಸಿಗೆಯ ಬಳಿಯೇ ಸ್ವಲ್ಪದೂರ ಮೂತ್ರ ವಿಸರ್ಜಿಸಿ ತಿರುಗಿ ಬಂದು ಮಲಗಿದಳು. (ಮೇಲೆ ಮಲಗುವವರೆಲ್ಲ ಹೀಗೆ ಅಲ್ಲಿಯೇ ಮೂಲೆಯಲ್ಲಿ ಮೂತ್ರ ವಿಸರ್ಜನೆ ಮಾಡುವದು ಪದ್ಧತಿ. ಅಲ್ಲಿಯ ಒಣ ಹವೆ, ಉರಿಬಿಸಿಲುಗಳಗೆ ಅದೆಲ್ಲ ಹೇಳಹೆಸರಿಲ್ಲದೇ ಒಣಗಿಬಿಡುವುದು.) ಮಗುವಿಗೆ ನೀರಡಿಕೆ ಆಗಿರಬೇಕು. ಕುಡಿದು ತಿರುಗಿ ಮಲಗಿಕೊಂಡಿತು. ಕೂಸೊಂದು ಅತ್ತಾಗ ತಾಯಿ ಎದ್ದು ಹಾಲು ಕುಡಿಸಿದಳು. ಕೆಲ ಕ್ಷಣಗಳಲ್ಲಿ ಇಬ್ಬರೂ ನಿದ್ರಾವಶರಾದರು. ಒಂದೇ ಅಂತಸ್ತು ಇರುವ ಮನೆಯ ಮಾಡಿನ ಮೇಲೆ ಮಲಗಿದವರು ತರುಣ ದಂಪತಿಗಳಿರಬೇಕು. ಚಾರಪಾಯಿಯ ಮೇಲೆ ಛಾದರ ಹಾಸಿ ಮರೆಮಾಡಿ ತಮ್ಮ ಮಟ್ಟಿಗೆ ಏಕಾಂತವನ್ನು ಕಲ್ಪಿಸಿಕೊಂಡಿದ್ದರು. ಕೆಲವು ಮನೆಗಳ ಮೇಲೆ ಸ್ತ್ರೀಯರು ಒಂದು ಕಡೆಗೆ ಮಲಗಿದರೆ ಪುರುಷರು ಇನ್ನೊಂದು ಕಡೆಗೆ ಮಲಗಿದ್ದರು. ಅಸ್ತವ್ಯಸ್ತವಾಗಿ ಮಲಗಿದ ಪರಸ್ತ್ರೀಯರನ್ನು ನೋಡುವುದು ಪಾಪ! ಎಂಬ ಕಾನೂನು ಇದ್ದಿರಬೇಕು, ಇವರಲ್ಲಿ ಅನಿಸಿತು.

ಹೊಸ ಪರಿಸರವಿದ್ದುದರಿಂದಲೋ ಅಥವಾ ಬಹಳ ಅಲ್ಹಾದಕರ ವಾತಾವರಣ ಇದ್ದುದರಿಂದಲೋ ಬಹಳ ಹೊತ್ತು ನಿದ್ರೆ ಬರಲೇ ಇಲ್ಲ. ಪತ್ನಿ ಮಾತ್ರ ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದಳು. ಎಷ್ಟೋ ಹೊತ್ತಿನ ಮೇಲೆ ಜೊಂಪು ಹತ್ತಿರಬೇಕು. ಮಗುವಿನ ಚೀತ್ಕಾರವೊಂದರಿಂದ ಒಮ್ಮೆಲೇ ಎಚ್ಚರವಯಿತು. ಜೋಡಿ ಕಿವಿಗಳನ್ನು ಹತ್ತು ಮಾಡಿ ಕೊಂಡು ಕೇಳಿದೆ. ಹೌದು, ಆರ್ತಧ್ವನಿಯ ಚೀರಾಟ, ದೇವಿಜಿಗೆ ಕೇಳುವಷ್ಟು ದೊಡ್ಡದಿದ್ದರೂ ಆ ಪುಣ್ಯವಂತ ಮಾತೆಗೆ ಎಚ್ಚರವಾಗಲೇ ಇಲ್ಲ. ಸಾವಿರ ಕಣ್ಣು ಮಾಡಿ ಧ್ವನಿ ಬರುತ್ತಿದ್ದ ದಿಕ್ಕಿನಲ್ಲಿ ನೋಡಿದೆ. ಎಲ್ಲರೂ ನಿದ್ರಾವಶರು. ಬೆಳದಿಂಗಳಿನಲ್ಲಿ ಏನೂ ಕಾಣಿಸದು. ಕೂಡಲೇ, ಇನ್ನೊಂದು, ಮತ್ತೊಂದು, ಮಗುದೊಂದು ಹೀಗೆ ಹತ್ತಾರು ಧ್ವನಿಗಳು ಏಕಕಾಲಕ್ಕೆ ಕೇಳಿ ಬರಲಾರಂಭಿಸಿದವು. ಆಗ ಮಗುವಿನ ಧ್ವನಿಯಲ್ಲವೆಂದು ಇನ್ನೊಮ್ಮೆ ಪರೀಕ್ಷಿಸಿ ಕೇಳಿದೆ. ಜಡದೇಹದ ಹಕ್ಕಿಯೊಂದು ಒಂದು ಮರದಿಂದ ಇನ್ನೊಂದಕ್ಕೆ ಹಾರಿದಾಗ ಅದು ನವಿಲಿನ ಕೋಕಿಲ ಕಂಠ ಎಂದು ಅರಿವಾಯಿತು. ಕೌಟುಂಬಿಕ ಜಗಳವಿರಬಹುದೇ? ಹಾವು ಮರ ಹತ್ತಿರಬಹುದೇ? ಅಥವಾ ಸಾವಿರ ಕಣ್ಣುಗಳನ್ನು ಒಂದೇ ಬದಿಗೆ ಮುಚ್ಚಿ ನಿದ್ರಿಸುವುದು ತೊಂದರೆಯಾಗಿದ್ದಿರಬೇಕು! ರಾಜ ಸ್ಥಾನಕ್ಕೆ ಬಂದ ನಂತರ ನವಿಲಿನ ಬಗ್ಗೆ ಇದ್ದ ಅಭಿಮಾನ, ಗೌರವಗಳು ಕಡಿಮೆಯಾಗುವಂತೆ ಅವುಗಳ ನಡಾವಳಿಯಿತ್ತು. ಯಾವ ಬೀಜವನ್ನೇ ಬಿತ್ತಲಿ, ಯಾವ ಸಸಿಯನ್ನೆ ಬೆಳೆಸಲಿ, ನವಿಲು ಕುಟುಂಬ, ಅಲ್ಲಿ ಮೇಯಿತೆಂದರೆ ಏನೂ ಚಿಗುರದು! ಇಂಥ ಕೃಷಿ ನಾಶಕ, ಕರ್ಕಶ ಕಂಠದ ಮಯೂರದ ಬಾಹ್ಯ ಸೌಂದರ್ಯಕ್ಕೆ ಮರುಳಾಗಿ ರಾಷ್ಟ್ರೀಯ ಹಕ್ಕಿ ಎಂದು ಗಗನಕ್ಕೆ ಏಕೆ ಏರಿಸಿದ್ದಾರೆ? ಎಂದು ತಿಳಿಯಲಿಲ್ಲ. ಇರುವೆಗೆ ಸಕ್ಕರೆ, ಹದ್ದುಗಳಿಗೆ ಪಕೋಡ ತಿನ್ನಿಸುವ ರಾಜ್ಯದಲ್ಲಿ ನವಿಲಿಗೆ ಏನೂ ಕೇಡು ಮಾಡಲಾರರು, ಸರಕಾರದ ಕಾನೂನುಬದ್ಧ ರಕ್ಷಣೆ ದೊರೆತ ಮೇಲೆ ಮಯೂರ ಜಾತಿ ಸೊಕ್ಕಿನಿಂದ ಮೆರೆಯುವಂತಾಗಿದೆ! ನಿದ್ರಾಭಂಗ ಮಾಡಿದ್ದಕ್ಕೆ ಅವನ್ನು ಶಪಿಸಿ ತಿರುಗಿ ಮಲಗಿದೆ.

ಇನ್ನೊಂದು ತಾಸು ಕಳೆಯುವದರಲ್ಲಿ ಯಾವುದೋ ದೊಡ್ಡ ಸ್ಫೋಟವಾದಂತೆ ಕೇಳಿ ಎಚ್ಚರವಾಯಿತು. ಕನಸಿನಲ್ಲೇ? ಏನು ನಿಜಕ್ಕೂ ಕೇಳಿದೆನೇ! ಎಂದು ಅರಿವಾಗಲು ಎರಡು ನಿಮಿಷಗಳು ಹತ್ತಿದವು. ಗಡಿರಾಜ್ಯವಾದ್ದರಿಂದ ಪಾಕಿಸ್ತಾನದವರೇನಾದರೂ ಆಕಾಶದಾಳಿ ಮಾಡಿದರೇ? ಎಂದು ನೋಡಿದೆ. ಅಥವಾ ಯಾರ ಮನೆ ಕುಸಿಯಿತೇ ಎಂದು ಎದ್ದು ಬಂದು ಕೆಳಗೆ ನೋಡಿದೆ. ಇನ್ನೊಮ್ಮೆ ಭಡ್ ಭಡ್ ಸಪ್ಪಳ ಸಮಿಪದಲ್ಲೇ ಕೇಳಿಸಿತು. ರಾಜಸ್ಥಾನಿಯೊಬ್ಬ ಕಂದೀಲು ಹಿಡಿದು ನಿನತಿದ್ದಾನೆ. ಒಂಟೆಗಾಡಿಯ ತುಂಬ ಕಟ್ಟಿಗೆಯನ್ನು ಹೇರಿ ತಂದಿದ್ದಾರೆ. ನಮ್ಮ ಮನೆಯ ಗೋಡೆಗೆ ಅಪ್ಪಳಿಸುವಂತೆ ಅವನ್ನು ಒಗೆಯುತ್ತಿದ್ದರೆ. ಇನ್ನಿಬ್ಬರು ಅವನ್ನು ಒಳಗೆ ಸಾಗಿಸುತ್ತಿದ್ದಾರೆ.

ಸರಕಾರಕ್ಕೆ ಇ ಕಟ್ಟಿಗೆಯ ಲೆಕ್ಕಾಚಾರ ಇಡುವ ತೊಂದರೆ ಬೇಡವೆಂದು ಅಪರಾತ್ರಿಯಲ್ಲಿ ಅದನ್ನು ಸಾಗಿಸಿ ತಂದಿದ್ದಾರೆಂದು ತಿಳಿಯಲು ತಡವಾಗಲಿಲ್ಲ. ನಮ್ಮಲ್ಲಿಯೂ ಅರಣ್ಯಾಧಿಕಾರಿಗಳ ಸಂಬಂಧಿಕರ ಮನೆಯಲ್ಲಿ ನಡುರಾತ್ರಿ ಕಟ್ಟಿಗೆ ಬಂದು ಬೀಳುತ್ತಿದ್ದುದ್ದನ್ನು ಜ್ಞಾಪಿಸಿಕೊಂಡೆ. ಅಂತರವಿಷ್ಟೆ, ಅರಣ್ಯ ವಿಪುಲವಿದ್ದ ಪ್ರದೇಶದಲ್ಲಿ ಲಾರಿ ತುಂಬ ಕಟ್ಟಿಗೆ ಬಂದರೆ, ಮರುಭೂಮಿಯಲ್ಲಿ ಒಂಟೆಗಾಡಿ ತುಂಬ ಬರುತ್ತದೆ.

ಮುಂಜಾನೆ ನಾಲ್ಕು ಗಂಟೆಯಾಗಿರಬೇಕು. ಬೇಗ ಮಲಗಿದವರು ಅದಾಗಲೇ ಎದ್ದು ಬಿಟ್ಟಿದ್ದರು. ರಸ್ತೆಯಲ್ಲಿ ಜನ ಸಂಚಾರ ಪ್ರಾರಂಭವಾಗಿರದ್ದರಿಂದ ಹೆಂಗಸರ ಪ್ರಾತರ್ವಿಧಿಗೆ ಅನುಕೂಲವಾಗಿತ್ತು. ಬಾಯಿಗೂ ಕೆಲಸ ಕೊಟ್ಟಿದ್ದರು. ನೆರೆಮನೆಯವಳು ಮದುವೆಯಾದ ಮೊದಲ ವರ್ಷವೇ ಬಸುರಿಯಾದದ್ದು; ಸೀತು ಮತ್ತು ಕಾಲೇಜ ಹುಡುಗನ ಪ್ರಣಯದ ವಿಷಯ ಮಾತುಕತೆ ನಡೆಸಿದ್ದಾಗ ಮೆಲುಧ್ವನಿಯಲ್ಲಿ ಮಾತನಾಡಲಾರಂಭಿಸಿದರು. ಸೀತು ನಮ್ಮ ಮನೆಯ ಪಕ್ಕದ ಮನೆಯ ಹುಡುಗಿ, ಯುವಕರನ್ನು ಸುಲಭವಾಗಿ ಬಲೆಯಲ್ಲಿ ಹಾಕಿಕೊಳ್ಳಬಲ್ಲ ಚಂಚಲಾಕ್ಷಿ. ಯಾವನೋ ಕಾಲೇಜ ವಿದ್ಯಾರ್ಥಿಯ ಸಂಗಡ ಅವಳ ಪ್ರೇಮ ಇತ್ತಂತೆ. ರಾತ್ರಿಯ ಭೆಟ್ಟಿಗೆ ಬರಲಿಕ್ಕೆ ತಾನು ಮಲಗುವ ಸ್ಥಳ ಇತ್ಯಾದಿಗಳನ್ನು ವಿವರಿಸಿದ್ದಳಂತೆ. ಆ ಪ್ರೇಮಿ ರಾತ್ರೆ ಒಂದು ಛತ್‌ದಿಂದ ಇನ್ನೊಂದಕ್ಕೆ ಹಾರುತ್ತ ಸೀತುವಿನ ಮನೆಯ ಛತ್ತಿಗೆ ಬಂದು ಅವಳು ಮಲಗಿದ ಹಾಸಿಗೆಯತ್ತ ಧಾವಿಸಿದ. ದುರ್ದೈವದಿಂದ ಅಂದು ಆ ಸ್ಥಳದಲ್ಲಿ ಸೀತುವಿನ ಭಾಭಿ ಮಲಗಿದ್ದಳು. ಆಕೆ ಜೋರಾಗಿ ಕೂಗಿಕೊಂಡಳು. ಪಕ್ಕದಲ್ಲೇ ಮಲಗಿದ ಸೀತುವಿನ ಅಣ್ಣ ಎದ್ದು, ವಿದ್ಯಾರ್ಥಿಯನ್ನು ಚೆನ್ನಾಗಿ ಥಳಿಸಿದನಲ್ಲದೇ ಸೀತುವನ್ನು ಕೂಡಲೇ ಒಬ್ಬ ಹಳ್ಳಿಯ ತರುಣನೊಬ್ಬನಿಗೆ ಮದುವೆಮಾಡಿ ಕೊಟ್ಟಿದ್ದರು. ವಿವಾಹವಾದರೂ ಅವಳಿಗೆ ಕಾಲೇಜ ವಿದ್ಯಾರ್ಥಿಗಳ ಮೇಲಿನ ಆಕರ್ಷಣೆ ಕಡಿಮೆಯಾಗಿರಲಿಲ್ಲ.

ಮುಂಜಾನೆಯ ತಂಗಾಳಿ ಯಾವದೋ ಭಜನಾಮಂಡಳಿಯ ಹಾಡು ಹೊತ್ತು ತಂದಿತು. "ಹರೇರಾಮ ಸೀತಾರಾಮ, ಗೋಪಿಕೃಷ್ಣ ಜೈಜೈ ರಾಮ" ಎಂದು ಕೆಟ್ಟದಾಗಿ ಹಾಡುತ್ತಿದ್ದ ಧ್ವನಿಗಳು ನಮ್ಮ ಮನೆಯ ಹತ್ತಿರದಿಂದಲೇ ಹಾದುಬರುವಂತೆ ಕೇಳಿಸಿತು. ಸದ್ದಿನಿಂದ ಐವತ್ತು ಜನರಿರಬಹುದು, ಎನಿಸಿದರೂ ಇದ್ದವರು ಕೇವಲ ಐದಾರು ಜನ. ಒಬ್ಬನು ಡೋಲು ಬಾರಿಸಿದರೆ ಇನ್ನೊಬ್ಬನು ತಾಳ ಹಿಡಿದಿದ್ದ. ಉಳಿದವರು ಕೈಗಳನ್ನೇ ತಟ್ಟುತ್ತ ಹೊರಟಿದ್ದರು. ಹರಟೆ ಚೌಕಿಗೆ ಬಂದಾಗ ಒಂದು ಹಾಡು ಮುಗಿದಿದ್ದರಿಂದ "ಆಜ ಮಂಗಲವಾರ ಹೈ" ಎಂದು ಹೊಸ ಹಾಡನ್ನು ಪ್ರಾರಂಭಿಸಿದರು. ಯಾವದೋ ದೇವಸ್ಥಾನವನ್ನು ಹೊಕ್ಕಾಗ ಭಜನೆ ನಿಂತಿತು. ಮಂಗಗಳು ಮುಂಜಾನೆ ಎದ್ದು ರಾತ್ರೆ ಮುಚ್ಚಿಟ್ಟು ಉಳಿದ ರೊಟ್ಟಿಗಳನ್ನು ಕದ್ದು

ಜಿಗಿದವು. ತಿಂಡಿಗಾಗಿ ತಿರುಗಿ ರೊಟ್ಟಿಗಳನ್ನು ಬೇಯಿಸಬೇಕಾಯಿತೆಂದು ಬೇಸರಿಸಿದ ಗೃಹಿಣಿ ಮಂಗಗಳನ್ನು ಹೊಡೆಯಲೆಂದು ಹಿಂಬಾಲಿಸಿದಾಗ ಅವು ಮಲಗಿರದವರನ್ನು ಲೆಕ್ಕಿಸದೇ ಹಾಸಿಗೆಗಳ ಮೇಲಿಂದಲೇ ಜಿಗಿದವು. ಮಲಗುವಲ್ಲಿ ಕೋಲುಗಳನ್ನು ಏಕೆ ಇಟ್ಟಿದ್ದರೆಂದು ಈಗ ಅರ್ಥವಾಯಿತು. ಕಾಗೆಗಳು ಮಯೂರಗಳೊಂದಿಗೆ ಸಂಗೀತ ಸ್ಪರ್ಧೆಗೆ ಇಳಿಯಲು ಇಚ್ಚಿಸದೇ ಮೌನವಾಗಿಯೇ ಆಹಾರ ಶೋಧನೆಗೆ ಇಳಿದವು. ಗಿಳಿಗಳು ತಮ್ಮ ನಿತ್ಯದ ಪಾಠ ಪಠಣ ಪ್ರಾರಂಭಿಸಿದವು. ಪಾರಿವಾಳಗಳು ಟೆಲಿಫೋನ ತಂತಿಗಳ ಮೇಲೆ ಒಟ್ಟಾಗಿ ಕುಳಿತು ತಮ್ಮ ಅನ್ನದಾತರು ಇನ್ನೂ ಏಕೆ ಬಂದಿಲ್ಲ? ಎಂದು ಆತುರದಿಂದ ಚರ್ಚಿಸುತ್ತಿದ್ದವು. ಪಾರಿವಾಳಗಳಿಗೆ ಎಸೆದ ಧಾನ್ಯದ ಕಾಳುಗಳು ತಮಗೂ ದೊರೆತಾವೆಂದು ಗುಬ್ಬಚ್ಚಿಗಳು ಕಾದು ಕುಳಿತಿದ್ದವು. ದೂರದ ಮನೆಗಳಲ್ಲಿ ಗೃಹಿಣಿಯರು ಗರ್‌ಗರ್ ಎಂದು ಬಾಜರಾ ಬೀಸಲಿಕ್ಕೆ ಪ್ರಾರಂಭಿಸಿದರು. ಸೀಟಿಯನ್ನು ಕೇಳಿ ಹಾಲನ್ನು ಹಾಕಿಸಿಕೊಳ್ಳಲು ಕೆಳಗೆ ಇಳಿದು ಬಂದೆ. “ಮಾಸ್ಟರ ಸಾಬ ನಮಸ್ತೆ” ಎಂದು ಭಜನಾ ಮಂಡಳದವರು ಮನೆಗೆ ಹೋಗುವಾಗ ನಮಸ್ಕಾರ ಹೇಳಿ ಮುಂದುವರಿದರು. ಊರಲ್ಲಿ ಚಟುವಟಿಕೆಗಳು ಪ್ರಾರಂಭವಾದವು. ನನ್ನ ಗೃಹಿಣಿಯನ್ನು ಎಬ್ಬಿಸಿದಾಗ, “ಇಲ್ಲಿ ಎಷ್ಟು ಪ್ರಶಾಂತವಾಗಿದೆಯಲ್ಲವೇ? ಗಾಢನಿದ್ರೆ ಬೀಳುತ್ತದೆ” ಎಂದಾಗ ಸಮ್ಮತಿ ಸೂಚಿಸಿದರೂ ನಿದ್ರೆಯಾಗದೇ ಕಣ್ಣು ಉರಿಯುತ್ತಿದ್ದವು.

ಸೂರ್ಯದೇವನು ಬೆಂಕಿ ಕಾರುತ್ತ ಗಗನವನ್ನು ಆಳುವಾಗ ಭೂಮಾತೆ ಬಾಯಾರಿಕೆಯಿಂದ ನೀರಿಗಾಗಿ ಹಾತೊರೆಯುವಳು. ಹಳ್ಳ - ಹೊಂಡಗಳಲ್ಲಿ ಬತ್ತಿಹೋಗುವುದರಿಂದ ಪಶು - ಪಕ್ಷಿಗಳಿಗೆ ನೀರು ಸಿಗದು. ಆದರೆ ಧಾರ್ಮಿಕ ರಾಜಸ್ಥಾನಿಗಳು ಪ್ರಾಣಿಗಳಿಗೆ ನೀರು ಪೂರೈಸಲು ವ್ಯವಸ್ಥೆ ಮಾಡಿರುತ್ತಾರೆ. ಟೊಂಗೆಗಳಿಗೆ ಅಲ್ಲಲ್ಲಿ ನೆರಳಿನಲ್ಲಿ ತೂಗು ಹಾಕಿದ ಮಡಕೆಗಳಿಂದ ನೂರಾರು ಹಕ್ಕಿಗಳು ನೀರು ಸವಿಯುವವು. ದಾನಿಗಳು ಊರಲ್ಲೆಲ್ಲ “ಪಿಯಾವು” (ಅರವಟ್ಟಿಗೆ) ಗಳನ್ನು ಏರ್ಪಡಿಸಿರುವರು. ಸಣ್ಣ ಸಣ್ಣ ಗುಡಿಸಲುಗಳನ್ನು ಅಲ್ಲಲ್ಲಿ ಕಟ್ಟಿಸಿ ಹತ್ತಾರು ಮಣ್ಣಿನ ಹಂಡೆಗಳಲ್ಲಿ ನೀರು ತುಂಬಿಸಿ ತಂಪಾದ ನೀರನ್ನು ಕೊಳವೆಯುಳ್ಳ ಚಂಬಿನಿಂದ ಬೊಗಸೆಯಲ್ಲಿ ಹನಿಸುವ ವ್ಯವಸ್ಥೆ ಮಾಡಿರುವರು. ನೀರು ಹನಿಸಲು ಮಹಿಳೆಯರನ್ನು ನೇಮಕ ಮಾಡುತ್ತಾರೆ. ತುಂಬ ಬಾಯಾರಿದವರು ಬೇಕಷ್ಟು ನೀರು ಹಾಕಿಸಿಕೊಂಡು ಎರಡರಿಂದ ಹತ್ತು ಪೈಸಾದ ತನಕ ನೀರು ಹನಿಸಿದವರಿಗೆ ಕೊಡುವುದುಂಟು. ರೇಲ್ವೆಸ್ಟೇಶನ್, ಬಸ್ ಸ್ಟ್ಯಾಂಡ್‌ಗಳಲ್ಲಿ, ಮಕ್ಕಳು ಮಡಕೆಗಳಲ್ಲಿ ನೀರು ತಂದು ಐದು ಪೈಸೆಗೆ ಒಂದು ಗ್ಲಾಸಿನಂತೆ ನೀರು ಕೊಡುವರು. ಅಂದಿನ ದಿನಗಳಲ್ಲಿ ನೀರಿಗೆ ಎಲ್ಲೆಲ್ಲೂ ಹಾಹಾಕಾರ, ಐದು ಬಕೆಟ್ ನೀರು ಪಡೆಯುವವರಿಗೆ ಒಂದೇ ಬಕೆಟ್ ನೀರು ಹಾಕುವನು, ‘ಪನಿಹಾರಿ’. ಆ ನೀರಿಗೆ ಸೊಪ್ಪು, ಸಕ್ಕರೆ ಹಾಕದೆಯೇ ಚಹಾದ ಬಣ್ಣ

ಬಂದಿರುತ್ತದೆ. ಅದನ್ನು ಸೋಸಿ ಕುದಿಸಿದಾಗಲೇ ಕುಡಿಯಲು ಸಾಧ್ಯ. ಮೊಸರು, ಹಾಲುಗಳು ಬಡವರಲ್ಲಿಯೂ ಸಿಗುವ ರಾಜಸ್ಥಾನದಲ್ಲಿ ಸಿರಿವಂತರೂ ನೀರಿಗಾಗಿ ಲೋಭಿಯಾಗುವ ಪ್ರಸಂಗ ಬರುತ್ತದೆ. ಪೂರ್ವ ರಾಜಸ್ಥಾನದಲ್ಲಿ ಸಾಕಷ್ಟು ಮಳೆಯಾಗುವುದರಿಂದ ಇಷ್ಟಾದರೂ ನೀರಿದೆ. ಮೂರು ನಾಲ್ಕು ವರ್ಷ ಸತತ ಮಳೆಯಾಗದ ರಾಜಸ್ಥಾನದ ಬಿಕಾನೇರ, ಜಯಸಲಮೇರ, ಬಾಡಮೇರಗಳಲ್ಲಿ ನೀರನ್ನು ಹತ್ತರಿಂದ ನಲವತ್ತು ಮೈಲು ದೂರದಿಂದ ತರಬೇಕಾಗುತ್ತಿತ್ತು. ೪೦ ವರ್ಷಗಳ ಬಳಿಕ ಇಂದಿರಾಗಾಂಧಿ ಬೃಹತ್ ಕಾಲುವೆಯಿಂದ ಇಲ್ಲಿಯ ನೀರಿನ ಬರ ಬಹುಮಟ್ಟಿಗೆ ಇಂಗಿದೆ. ಆದ್ದರಿಂದ ಅಲ್ಲಿಯ ಜನ ತಮ್ಮ ಹೊಲಗಳನ್ನು ಕಾಯದಿದ್ದರೂ ಬಾವಿಗಳನ್ನು ಬೊಕ್ಕಸದಂತೆ ಕಾಯುವರು. ಆ ಪ್ರದೇಶದಿಂದ ಅಸಲಪುರಕ್ಕೆ ಬಂದ ರೈತನೊಬ್ಬನು ಅಲ್ಲಿ ಹೊಳೆಯೊಂದಕ್ಕೆ ಕಟ್ಟು ಹಾಕಿ ಸಂಗ್ರಹಿಸಿದ ನೀರನ್ನು ನೋಡಿ ಹರ್ಷಗೊಂಡು ಕುಡಿಯಲು ಹೋದಾಗ ಅಲ್ಲಿ ಕಾವಲಾಗಾರನು ಯಾರೂ ಇಲ್ಲದ್ದು ನೋಡಿ ಆಶ್ಚರ್ಯಗೊಂಡು ಬೊಗಸೆಯಲ್ಲಿ ನೀರು ಹಿಡಿದು ಅದರ ದರ್ಶನದಿಂದಲೇ ಆನಂದಿಸಿದನಂತೆ. ತಾನು ನೀರು ಕುಡಿಯುವುದು ಯಾರ ಕಣ್ಣಿಗೆ ಬೀಳುವ ಮೊದಲೇ ಬೇಕಾದಷ್ಟು ನೀರು ಕುಡಿದು ತೇಗಿದನಂತೆ. ಇದಕ್ಕೂ ಮೊದಲು ಜೀವನದಲ್ಲಿಯೇ ಅವನು ಅಷ್ಟೊಂದು ನೀರನ್ನು ನೋಡಿರಲಿಲ್ಲ, ಕುಡಿದಿರಲಿಲ್ಲವಂತೆ!

ಬೇಸಿಗೆಯ ಉರಿಯನ್ನು ತಪ್ಪಿಸಲು ಶಾಲೆ-ಕಾಲೇಜುಗಳು ಮುಂಜಾನೆ ನಡೆಯಲಾರಂಭಿಸಿದವು. ಆಫೀಸಿನ ಬಾಗಿಲು - ಕಿಟಕಿಗಳಿಗೆ ಖಸ್ (ಬಾಳದ ಬೇರುಗಳನ್ನು ಕತ್ತದ ನಾರಿನಂತೆ ಜಾಳಿಗೆ ಮಾಡಿದ) ದ ತಟ್ಟಿಗಳನ್ನು ಕಟ್ಟಿ ಆಗಾಗ ನೀರು ಸಿಂಪಡಿಸಿ ನೌಕರ ವರ್ಗವನ್ನು ತಂಪಾಗಿ ಇಡುವ ಪ್ರಯತ್ನ ಸಾಗಿತು. ಮರುಭೂಮಿಯ ಹವೆ ಕಾದು ಮೇಲೆ ಹೋಗಿ ಒತ್ತಡ ಹೆಚ್ಚಾಗಿ ಹೆಚ್ಚು ಒತ್ತಡದ ಪ್ರದೇಶದಿಂದ ಹವೆ ನುಗ್ಗಿ ಬಂದು 'ಲೂ' (ಬಿಸಿ ಮರಳುಗಾಳಿ) ಪ್ರಾರಂಭವಾಯಿತು. ತನ್ನೊಂದಿಗೆ ಕಲ್ಲು - ಮಣ್ಣು ಮಳಲುಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಂದಿತು. ಬಯಲಲ್ಲಿ ಇಂಥ ಗಾಳಿಗೆ ಸಿಕ್ಕವರಿಗೆ ದೇವರೇ ಗತಿ. ಹವೆ, ಅಂಗಳ, ಮನೆಯೆಲ್ಲ ಧೂಳಿನಿಂದ ತುಂಬಿ ಹೋಗುತ್ತದೆ. ಐದು ನಿಮಿಷಕ್ಕೊಮ್ಮೆ ಗುಡಿಸಬೇಕಾಗುತ್ತದೆ. ಉಸಿರಾಡಿದಾಗ ಉಗಿಯೇ ಶರೀರದಲ್ಲಿ ಸೇರಿದ ಭಾಸವಾಗುತ್ತದೆ. ಪ್ರತಿದಿನವೂ ಜ್ವರದಿಂದ ಬಳಲುವವರಂತೆ ಮೈಯ ಉಷ್ಣತಾಮಾನ ಏರಿರುತ್ತದೆ. ಕುಡಿಯುವ ನೀರಿನಲ್ಲಿಯೇ ಹಾಲು, ಸಕ್ಕರೆ, ಸೊಪ್ಪು ಹಾಕಿದರೆ ಚಹಾ ಆಗುವಂತೆ ಇರುತ್ತದೆ. ಮನೆಯಲ್ಲಿ ಇಟ್ಟ ತರಕಾರಿ, ಕಾಳು ಕಡಿ, ಅಡಿಗೆಯೆಲ್ಲ ಬಲು ಬೇಗ ಒಣಗಿದ ಮೀನಿನಷ್ಟು ಗಟ್ಟಿಯಾಗಿ ಬಿಡುತ್ತವೆ. ಮಾಡಿನ ಮೇಲೆ ಹಳೆಯ ಮಡಕೆಗಳನ್ನು ತಿರುವು ಮುರುವಾಗಿ ಇಟ್ಟ ಬಗೆ ಮತ್ತು ಹವೆಯಾಡದಂತೆ ತಟ್ಟಿ ಕಟ್ಟಿದ ಕೋಣೆಗಳು

ಬೇಸಿಗೆಯಲ್ಲಿ ತಂಪಾಗಿರುತ್ತವೆಯೆಂದು ಆಗ ತಿಳಿಯಿತು. ಉಳಿದ ಕಡೆಗಳಲ್ಲಿ ಬೇಸಿಗೆಯಲ್ಲಿ ಎಲ್ಲ ಬಾಗಿಲು ಕಿಡಕಿಗಳನ್ನು ತೆರೆದಿಟ್ಟರೆ ರಾಜಸ್ಥಾನದಲ್ಲಿ ಉಷ್ಣವಾದ ಒಣಹವೆ ಒಳಗೆ ಸೇರದಂತೆ ಅವುಗಳನ್ನು ಮುಚ್ಚಿಡಬೇಕಾಗುತ್ತದೆ. ಒಮ್ಮೆ 'ಲೂ' ಪ್ರಾರಂಭವಾಯಿತೆಂದರೆ ಮೂರು ನಾಲ್ಕು ದಿನ ಸತತವಾಗಿ ಬೀಸುತ್ತಿರುತ್ತದೆ. ರಾಜಸ್ಥಾನದಲ್ಲಿ ಪ್ರಾರಂಭವಾದ 'ಲೂ' ದಿಲ್ಲಿಯನ್ನು ತಲುಪುತ್ತದೆ. ಆದ್ದರಿಂದ ಇಲ್ಲಿ ಪ್ರಾರಂಭವಾದ ಕೂಡಲೇ ಅದನ್ನು ಎದುರಿಸಲು ದಿಲ್ಲಿಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಾರೆ.

ಕಳೆದ ಎರಡು ಮೂರು ವರ್ಷಗಳಿಂದ ಪಶ್ಚಿಮ ರಾಜಸ್ಥಾನದಲ್ಲಿ ಮಳೆಯಾಗದ್ದರಿಂದ ಅಲ್ಲಿ ಭೀಕರ ಬರಗಾಲ ಪ್ರಾರಂಭವಾಯಿತು. ದೂರದ ಊರುಗಳಿಂದ ಟ್ರಕ್ ಮತ್ತು ಟ್ರೇನುಗಳಲ್ಲಿ ನೀರು ಒದಗಿಸಿದರು. ಅದು ಮಾನವನ ನೀರಡಿಕೆಯನ್ನೇ ತಣಿಸದಾದಾಗ ಪಶುಪಕ್ಷಿಗಳಿಗೆ ನೀರು ಎಲ್ಲಿಂದ ಒದಗಬೇಕು? ಹಾಡಿ ನಲಿಯಬೇಕಾದ ಪಕ್ಷಿಗಳು ನೀರಿಗಾಗಿ ಬಾಯ್ ಬಿಡುತ್ತ ಒದ್ದಾಡಿ ಸಾಯಲಾರಂಭಿಸಿದವು. ದನಕರುಗಳ ಒದ್ದಾಟ ನೋಡಲಾರದೇ ಕೃಷಿಕರು ಮನಸ್ಸಿಗೆ ಬಂದಲ್ಲಿ ಹೋಗಲೆಂದು ಅವುಗಳ ಒಳಿತನ್ನು ಹಾರೈಸಿ ಕಣ್ಣೀರು ಹಾಕಿ, ಬಂಧಮುಕ್ತ ಮಾಡಿದರು. ಅವು ನೀರಿಲ್ಲದೇ ಮರುಭೂಮಿಯಲ್ಲಿ ಓಡಾಡಿ ಬಳಲಿ ಅಸಹಾಯಕತೆಯಿಂದ ಬಿದ್ದಾಗ ರಣ ಹದ್ದುಗಳಿಗೆ ಆಹಾರವಾದವು. ಮರಳುಗಾಡಿನ ಹಡಗುಗಳಾದ ಒಂಟೆಗಳೂ ಡುಬ್ಬದ ಪ್ರಯೋಜನವಾಗದೇ ಸತ್ತವು. ಹಾಲುಹೈನಕ್ಕೆ ಹೆಸರು ಪಡೆದ ದನಕರುಗಳನ್ನು ನೆರೆನಾಡಿಗೆ ಕಳಿಸಿದರು. ನೆಹರು - ಶಾಸ್ತ್ರಿಗಳ ಆಡಳಿತದಲ್ಲಿ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸುವ ಪ್ರಸಂಗ ಬಂದರೆ ಇಂದಿನ ಸರಕಾರ ನೀರನ್ನು ಕೂಡ ಆಯಾತ ಮಾಡುವ ಸಂದರ್ಭ ಬಂದೀತೇ? ಎಂದು ಜನ ಆಡಿಕೊಂಡರು. ಮಂತ್ರಿಗಳು, ಹಾಹಾಕಾರವೆದ್ದ ಪ್ರದೇಶಗಳನ್ನು ಸಂದರ್ಶಿಸಿ ತಮ್ಮ ಪ್ರವಾಸ ಭತ್ತೆಯನ್ನು ಹೆಚ್ಚಿಸಿಕೊಂಡು ಮರಳಿದರು. ವರ್ತಮಾನ ಪತ್ರಿಕೆಗಳಲ್ಲಿ ಜನರ ದುರವಸ್ಥೆಯ ವಿವರ ಮತ್ತು ಕರುಣಾಜನಕ ಚಿತ್ರಗಳು ಪ್ರಕಟಗೊಂಡವು. ಮಂತ್ರಿಗಳು ರಾಜಸ್ಥಾನ ಕಾಲುವೆ ಪೂರ್ಣವಾದ ಮೇಲೆ ಈ ಸ್ಥಿತಿ ಬರಲಾರದು! ಎಂದು ಅಭಯವಿತ್ತರು. ಕ್ಷಾಮ ಪರಿಸ್ಥಿತಿಯನ್ನು ಸಾರಿ ಸರಕಾರವು ಕಾಮಗಾರಿಯ ಕೆಲಸಗಳನ್ನು ಒದಗಿಸಿತು. ಲಕ್ಷಾಂತರ ಟ್ಯೂಬ್ ಬಾವಿಗಳನ್ನು ಅಗಿಸುವ ವ್ಯವಸ್ಥೆ ಮಾಡಲಾಗುವದೆಂದರು. ಇವೆಲ್ಲವುಗಳನ್ನು ಕೇಳಿ ಕೇಳಿ ಕಿವುಡರಾಗಿದ್ದ ಹಳ್ಳಿಗರಲ್ಲಿ ಯಾವ ಆಶಾಭಾವವೂ ಮೂಡಲಿಲ್ಲ. ಅವರು ಯಾರೋ ಮಾಡಿದ ಪಾಪವನ್ನು ಅನುಭವಿಸುತ್ತಲಿದ್ದೇವೆಂದರು. ದೇವರಿಗೆ ಹರಕೆ ಹೊತ್ತರು. ಗುಪ್ತವಾಗಿ ನರಬಲಿ ಕೊಟ್ಟರು. ವರುಣ ದೇವತೆಯನ್ನು ಪ್ರಸನ್ನ ಗೊಳಿಸಲು ಜೋಬನೇರ ಕೋಟೆಯಲ್ಲಿ ಗ್ಯಾಸ ದೀಪದ ಬೆಳಕಿನಲ್ಲಿ ಭಜನೆ ಮತ್ತು ಹರಿಜಾಗರಣಗಳಾದವು. ಧನಿಕರು ಅನ್ನ

ಸಂತರ್ಪಣೆ ಮಾಡಿಸಿದರು. ಕೊನೆಗೊಮ್ಮೆ ತುಂತುರು ಮಳೆಯಾದದ್ದು ರಾಜಸ್ಥಾನಿಗಳ ಪೂಜೆ - ಪುನಸ್ಕಾರಗಳಿಂದ! ಎಂದು ಹೇಳುವದು ಕಷ್ಟದ ಮಾತು. ಆದರೆ ಸರಕಾರದ ಪ್ರಯತ್ನದಿಂದ, ಪುಣ್ಯದಿಂದ, ಖಂಡಿತ ಅಲ್ಲ. ಬಂಗಾಲದಲ್ಲಿ ಮಹಾಪೂರ, ಬಿಹಾರದಲ್ಲಿ ಅತಿವೃಷ್ಟಿಯಿಂದ ಜನಹಾನಿ - ಧನಹಾನಿಯಾಗುವಂತೆ ರಾಜಸ್ಥಾನದಲ್ಲಿ ಮಾನವ ಕೋಟಿಗೆ ಅತ್ಯವಶ್ಯವಿದ್ದ ಕುಡಿಯುವ ನೀರಿನ ವ್ಯವಸ್ಥೆ ಕೂಡ ಇಲ್ಲದೇ ಇಷ್ಟೊಂದು ಹಾನಿಯಾಗುತ್ತಿದ್ದರೂ ಸರಕಾರ ಹವಾಮಹಲಿನಲ್ಲಿಯೇ ವಿರಮಿಸುತ್ತಿದೆ.

ಮೋಡಗಳು ಕವಿದಾಗ, ಗಂಡು ನವಿಲುಗಳು ಗರಿಬಿಚ್ಚಿ ಗದ್ದಲವಿಲ್ಲದ ಉಪ್ಪರಿಗೆಗಳ ಮೇಲೆ ನರ್ತಿಸುವುದನ್ನು - ನೋಡಿ ಚಲನಚಿತ್ರದಲ್ಲಿ ಕಾದಿಡುವ ಅವಕಾಶ ಸಿಕ್ಕಿತು. ಇಷ್ಟಾದರೂ ಸುಲಭವಾಗಿ ರತಿಕ್ರೀಡೆಯಲ್ಲಿ ತೊಡಗುವ ಜಾತಿಯಲ್ಲ ಈ ಹಕ್ಕಿ. ಮಳೆ ಬೀಳಲಾರಂಭಿಸಿದಾಗ ರಾಜಸ್ಥಾನಿಗಳು ಹುಚ್ಚೆದ್ದು ಕುಣಿಯುತ್ತಾರೆ. ಮಕ್ಕಳೆಲ್ಲ ಇದ್ದ ಬಟ್ಟೆಯನ್ನು ಕಳಚಿ ಸುರಿಯುವ ಮಳೆಯಲ್ಲಿ ನಿಂತು ಆನಂದಿಸುತ್ತಾರೆ. ಗೃಹಿಣಿಯರು ವರ್ಷದುದ್ದಕ್ಕೂ ನೀರು ಕಾಣದ ಬಟ್ಟೆಬರೆಗಳನ್ನು ಪ್ರಯಾಸವಿಲ್ಲದೇ ಸಿಗುವ ನೀರಿನಲ್ಲಿ ಒಗೆಯುತ್ತಾರೆ. ಉಳಿದ ದಿನಗಳಲ್ಲಿ ಎರಡು ಬಟ್ಟಲು ನೀರಿನಲ್ಲಿ ಮಿಂದು ಬರುವ ನಾರಿಯರಿಗೆ ವಿಪುಲ ನೀರಿನಲ್ಲಿ ಮೀಯುವ ಆಸೆಯಾಗಿ ಪುರುಷರ ದೃಷ್ಟಿ ಹಾಯದ ಅಂಗಾಂಗಳಿಗೆ ನೀರಿನ ಸುಖ ಸ್ಪರ್ಶವಾಗುವಂತೆ ಮಳೆಯಲ್ಲಿ ಮೈ ಮರೆತು ಬಿಡುವರು. ಒಂದೆರಡು ಮಳೆಗಳಲ್ಲಿ ವರ್ಷದ ಕೊಳಚೆಯೆಲ್ಲ ತೊಳೆದುಹೋದನಂತರ, ಮಾಡಿನ ಮೇಲೆ ಬೀಳುವ ಪ್ರತಿಯೊಂದು ಹನಿಯನ್ನು ನೆಲಮಾಳಿಗೆಯಲ್ಲಿರುವ ಹೌದಿನಲ್ಲಿ ದಾಸ್ತಾನು ಮಾಡುವರು. ಮಳೆಗಾಲದಲ್ಲಿ ಗಿಡಬಳ್ಳಿಗಳು ಚಿಗುರಿಕೊಳ್ಳುವುದರಿಂದ, ಸೆಕೆಯ ತೀವ್ರತೆ ಕಡಿಮೆಯಾಗುವುದರಿಂದ ಆ ದಿನಗಳು ಆಲ್ಹಾದಕರವಾಗಿರುತ್ತವೆ.

೧೮. ಕೃಷಿಮೇಲಾ

ನಮ್ಮ ಕೃಷಿ ವಿಶ್ವವಿದ್ಯಾಲಯಗಳನ್ನೂ ಅಮೇರಿಕನ್ ಮಾದರಿಯಲ್ಲಿ ಹಬ್ಬಿಸಿ ಅಲ್ಲಿಯ ಶಿಕ್ಷಣ ಪದ್ಧತಿ ಅನುಕರಿಸಿದಂತೆ, ಕೃಷಿ - ಶಿಕ್ಷಣ ಮತ್ತು ಸಂಶೋಧನೆಗಳ ಲಾಭ, ಶಾಲೆಗೆ ಹೋಗದ ರೈತನಿಗೂ ಸಿಗಬೇಕೆಂದು, ಪ್ರಸಾರ ಕಾರ್ಯವನ್ನು ಪ್ರತಿಯೊಂದು ವಿಭಾಗದವರೂ ನಡೆಸಬೇಕೆಂದು ನಿರ್ಧರಿಸಿದರಲ್ಲದೇ ಪ್ರತ್ಯೇಕವಾದ ವಿಭಾಗವೊಂದನ್ನೇ ಪ್ರಾರಂಭಿಸಿದರು. ಅಮೇರಿಕೆಯ ರಾಜ್ಯಗಳಲ್ಲಿ ಕೃಷಿ ಮತ್ತು ಅರಣ್ಯದ ಭೂಮಿಗಳೆಲ್ಲ ಜನತೆಯ ಕೈಯಲ್ಲಿ ಇದ್ದದ್ದರಿಂದ ಅವರು ಕಾಲಕಾಲಕ್ಕೆ ಅಲ್ಲಿಯ ಕೃಷಿ ವಿಶ್ವವಿದ್ಯಾಲಯಗಳಿಂದ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ಪಡೆದು ತಮ್ಮ ವೈಯಕ್ತಿಕ ಮತ್ತು ದೇಶದ ಮುನ್ನಡೆಯನ್ನು ಸಾಧಿಸಿಕೊಂಡಿದ್ದಾರೆ. ಇಲ್ಲಿಯವರು ಅಲ್ಲಿಯವರಂತೆಯೇ ಸವಲತ್ತುಗಳು ಬೇಕೆಂದು ಬಡಿದಾಡಿದರೂ ಪಡೆದವುಗಳನ್ನು ಆತ್ಮೋದ್ಧಾರಕ್ಕಾಗಿ ಬಳಸುತ್ತಾರೆಯೇ ಹೊರತು ಕೃಷಿಯ ಸಲುವಾಗಿ ಅಲ್ಲ. ಆಗೊಮ್ಮೆ ಈಗೊಮ್ಮೆ ಹಳ್ಳಿಯ ಸರಪಂಚರನ್ನು, ಗ್ರಾಮಸೇವಕರನ್ನು, ಸ್ವಯಂಸೇವಕರನ್ನು ತರಬೇತಿಗಾಗಿ ಕರೆದು ಹಳ್ಳಿಗರಿಗೆ ಪೌಷ್ಟಿಕ ಆಹಾರ ಹೇಗೆ ಒದಗಿಸಬೇಕು? ಮುಂತಾದವುಗಳ ಬಗ್ಗೆ ಹೇಳಿಕೊಡುವುದುಂಟು. ಅವರು ಬಳಸುವ ಸ್ಟೋವ, ಚಾಕು, ಕತ್ತರಿ, ತಕ್ಕಡಿ, ಸ್ಟೀಲು ಪಾತ್ರೆ, ಮಿಕ್ಸರ್‌ಗಳು ಪಟ್ಟಣಿಗರಿಗೇ ಸರಿಯಾಗಿ ಸಿಗದಾಗ ಅವರ ಮಾದರಿ ಅಡಿಗೆ 'ತಿರುಕನ ಕನಸಿ'ನಂತೆ ಹಳ್ಳಿಗರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ. ಮೂಲಂಗಿ, ಗಜ್ಜರಿ, ಹಸಿ ಈರುಳ್ಳಿ, ಬಾಜರಾ ರೊಟ್ಟಿಗಳನ್ನು ತಿಂದು ನೀರು ಕುಡಿಯುವವರಿಗೆ ಅದರ ಐವತ್ತು ಪಟ್ಟು ಖರ್ಚಿನ ಊಟವನ್ನು ರೂಢಿಸಿಕೊಳ್ಳಲು ಹೇಳಿದರೆ ಅವರು ಮಾಸ್ತರ ಸಾಹೇಬರ ಅಜ್ಞಾನಕ್ಕೆ ನಗದೇ ಏನು ಮಾಡಿಯಾರು? ಎರಡು ರೂಪಾಯಿ ಖರ್ಚು ಮಾಡಿ ನಾಲ್ಕಾಣೆಗೆ ಮಾರುವ ತತ್ತಿಯನ್ನು ಉತ್ಪಾದಿಸುವುದು ಹೇಗೆ ಎಂದು ತೋರಿಸಿದರೆ ಆ ಹಳ್ಳಿಗರು ಇಂಥ ವ್ಯಾಪಾರ ಬುದ್ಧಿಗೆ ಹೇಗೆ ತಾನೇ ತಲೆದೂಗಿಯಾರು? ಹಳ್ಳಿಗರಿಗೆ ಮಾದರಿಗೆಂದು ಯಾರದಾದರೂ ಹೊಲದಲ್ಲಿ ಬಾಜ್ರಾ, ಗೋವಿನಜೋಳ, ಗೋಧಿಗಳನ್ನು ಹುಲುಸಾಗಿ ಬೆಳೆಸುವರು. ಈ ಬೆಳೆಗೆ ನೀರು ಉಣಿಸಲು ತಂದು ಪಂಪು, ಬೀಜ, ಕ್ಷಾರ, ಕೀಟನಾಶಕ ಮೊದಲಾದವುಗಳ ಖರ್ಚು, ಬಂದ ಬೆಳೆಗಿಂತ ಹತ್ತುಪಟ್ಟು ಆಗುವಾಗ ಕೃಷಿಕರು

ಎಂದಾದರೂ ಇಂಥ ಬಂಗಾರದ ಬೆಳೆ ಬೆಳೆದು ಹೊಟ್ಟೆ ತುಂಬ ಉಣ್ಣಲಿಕ್ಕೆ ಆದೀತೇ? ಕಾಲೇಜಿನವರು ನಡಸುವ ಪ್ರಸಾರ ಚಟುವಟಿಕೆಗಳಲ್ಲಿ ಅತ್ಯಂತ ಯಶಸ್ವಿಯಾಗುವುದೆಂದರೆ, ವಾರ್ಷಿಕ ಕೃಷಿ ಮೇಲಾ. (ಕೃಷಿ ಜಾತ್ರೆ).

ಕೃಷಿ ಮೇಲಾಕ್ಕೆ ಎರಡು ತಿಂಗಳಿರುವಾಗ ದೊಡ್ಡ ಚರ್ಚೆಗಳು ಏರ್ಪಟ್ಟು ಬೃಹದ್ ಯೋಜನೆಯೊಂದು ತಯಾರಾಗುವುದು. ಅದರಲ್ಲಿ ಯಾವ ಯಾವ ವಿಭಾಗ ಏನೇನು ಮಾಡಬೇಕೆಂದು ನಮೂದಿಸಲಾಗುವುದು. ಜೀಪುಗಳು, ಧ್ವನಿವಾಹಕಗಳನ್ನು ಹಚ್ಚಿಕೊಂಡು ಹಳ್ಳಿ ಹಳ್ಳಿ, ಕೇರಿ ಕೇರಿ ತಿರುಗುತ್ತ, ಮೇಲಾದ ದಿನಾಂಕ, ವಿವರಗಳನ್ನು ಸೂಚಿಸಿ ಪ್ರತಿಯೊಬ್ಬರಿಗೂ ಆಮಂತ್ರಣ ನೀಡುತ್ತ ತಿರುಗುತ್ತವೆ. ದೊಡ್ಡ ದೊಡ್ಡ ಛಾಯಾಚಿತ್ರಗಳು, ವರ್ಣಚಿತ್ರಗಳು, ಮಾರ್ಗದರ್ಶನದ ಬೋರ್ಡುಗಳು ತಯಾರಾಗುವವು. ನಾಟಕಗಳು, ವಿವಿಧ ವಿನೋದಾವಳಿಗಳು, ಅಲ್ಪೋಪಹಾರ, ಧ್ವನಿಮುದ್ರಿಕೆಗಳು ಮುಂತಾದವುಗಳ ಮೇಲ್ವಿಚಾರಣೆ ವಹಿಸಿಕೊಂಡವರು, ತಮ್ಮ ಮುಂಗಡ ಪತ್ರ ತಯಾರು ಮಾಡಿ ಸಾಮಾನು ಖರೀದಿಗಾಗಿ ಕಾಲೇಜ ಬಸ್ಸಿನಲ್ಲಿ ಜಯಪುರಕ್ಕೆ ಪ್ರಯಾಣ ಬೆಳಸುವರು. ಇದೇ ಸುಸಂಧಿಗಾಗಿ ಕಾಯುತ್ತಿರುವ ಕಾಲೇಜು ಶಿಕ್ಷಕರ ಕುಟುಂಬದವರು ಜಯಪುರಕ್ಕೆ ಹೋಗಿ ಸಿನಿಮಾ ನೋಡಿ, ಪೌಡರ, ಸ್ನೋ, ಚೂಡಿ (ಬಳೆ) ಗಳನ್ನು ಖರೀದಿಸಿ ಬರುವ ವಾಡಿಕೆ ಬೆಳೆದು ಬಂದಿದೆ. ಕಾಲೇಜಿನ ಆವಾರವನ್ನು ಸ್ವಚ್ಛಮಾಡುವುದು, ರಸ್ತೆಯ ಮೇಲೆ ಕೆಮ್ಮಣ್ಣು ಹರಡುವದು, ಮಂಟಪಗಳನ್ನು ನಿಲ್ಲಿಸುವದು, ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು, ನಡೆಯುವವು. ಇದಕ್ಕಾಗಿ ವಿದ್ಯಾರ್ಥಿಗಳ ಸಹಾಯ ಪಡೆಯುವುದಕ್ಕಾಗಿ ವರ್ಗಗಳನ್ನು ಸ್ಥಗಿತಗೊಳಿಸುವುದರಿಂದ ಹೆಚ್ಚಿನ ವಿದ್ಯಾರ್ಥಿಗಳು ತಮ್ಮ ತಮ್ಮ ಊರಿಗೆ ಪಲಾಯನ ಮಾಡಿಬಿಡುವರು. ಕೆಲವು ಶಿಕ್ಷಕರೂ ಕಾಣದಾಗುವರು!

'ಮೇಲಾ'ದ ಮೂರು ದಿನಗಳೆಂದರೆ ಜೋಬನೇರ ಊರಿಗೇ ಹಬ್ಬವಿದ್ದಂತೆ. ಮಕ್ಕಳೆಲ್ಲ ಈ ಸಿದ್ಧತೆಯ ಪ್ರಗತಿ ನೋಡಿ ನೋಡಿ ಆನಂದಿಸುವರು. ಕಳೆದ ವರ್ಷ ಹೀಗಿತ್ತು, ಎಂದು ತಮ್ಮ ಅರಿಯದ ಸ್ನೇಹಿತರಿಗೆ ತಿಳಿಸುವರು. ವರ್ತುಲಾಕಾರದಲ್ಲಿ ತಿರುಗುವ ಜೋಕಾಲಿಗಳು ಬರುವವು. ಮಿಠಾಯಿಯ ಅಂಗಡಿಗಳು ನಿಲ್ಲುವವು. ರಂಗು ರಂಗಿನ ಹೊಸ ಉಡುಪುಗಳನ್ನು ಧರಿಸಿ ಒಂಟೆಗಳ ಡುಬ್ಬವನ್ನೇರಿ ಒಂಟೆ - ಎತ್ತಿನ ಗಾಡಿಗಳಲ್ಲಿ, ಪಾದಯಾತ್ರಿಗಳಾಗಿ, ದೂರದ ಹಳ್ಳಿಗಳಿಂದ ಜನ ಬರುವರು. ಪ್ರದರ್ಶನಗಳಿಗಾಗಿ, ಸ್ಪರ್ಧೆಗಾಗಿ ದನಕರು, ಒಂಟೆಗಳು, ಹಣ್ಣು ಹಂಪಲ, ಕಾಳುಕಡಿಗಳನ್ನು ತರುವರು. ಕಾಲೇಜಿನ ಹೊಲಗಳಲ್ಲಿ ಅವರ ವಾಸ್ತವ್ಯಕ್ಕಾಗಿ ಏರ್ಪಾಡು ಮಾಡಿರುತ್ತಾರೆ. ದನಕರುಗಳಿಗೆ ನೀರು ಕುಡಿಸಿ, ಮೇವು ಹಾಕಿ, ಒಂಟೆಗಳಿಗೆ

ಬೇವಿನಸೊಪ್ಪು ಕಡಿದು ತಂದು ಹಾಕಿ, ಪಗಡಿಗಳನ್ನು ತೆಗೆದು ಮೊಣಕಾಲಿಗೆ ಸಿಗಿಸಿ ಬೀಡಿಯನ್ನೋ, ಹುಕ್ಕಾವನ್ನೊ ಹಳ್ಳಿಗರು ಸೇದುತ್ತಿದ್ದರೆ ಅವರ ಹೆಂಗಸರೆಲ್ಲ ಕಲ್ಲಿನ ಒಲೆಹೂಡಿ, ಮಣ್ಣಿನ ಹಂಚಿನ ಮೇಲೆ ಬಾಜರಾ ರೊಟ್ಟಿಗಳನ್ನು ಬೇಯಿಸಿ ಗಂಡನಿಗೆ ಕೊಟ್ಟು ತಾವೂ ಗುಂಪಾಗಿ ಕುಳಿತು ಊಟ ಮುಗಿಸುವರು. ಪ್ರಯಾಣದ ದಣಿವಿನಿಂದ ಬಯಲಲ್ಲಿಯೇ ಸುಖವಾಗಿ ಮಲಗಿ ನಿದ್ರಿಸುವರು.

ಮುಂಜಾನೆ ಬಂದ ಸ್ವಯಂಸೇವಕರು ಪ್ರದರ್ಶನದ ಸಾಮಾಗ್ರಿಗಳನ್ನು ಮಂಟಪಕ್ಕೆ ಸಾಗಿಸಿ ಆಕರ್ಷಕವಾಗಿ ಅವನ್ನೆಲ್ಲ ಜೋಡಿಸಿಟ್ಟರು. ಕೀಟ ಮಂಟಪದಲ್ಲಿ ಬೆಳೆಗಳನ್ನು ವಿವಿಧ ಹಂತಗಳಲ್ಲಿ ಹಾಳು ಮಾಡುವ ಕೀಟಗಳ ಪಟಗಳನ್ನು ತೂಗುಹಾಕಿ, ಇಂಥ ಕೀಟಗಳನ್ನು ನಿಯಂತ್ರಿಸಲು ಬಳಸುವ ಕೀಟ ನಾಶಕಗಳನ್ನು ಇಟ್ಟಿದ್ದರೆ, ಸಸ್ಯ ಮಂಟಪದಲ್ಲಿ, ಬೆಳೆಗೆ ಬರುವ ರೋಗಗಳು, ಅವುಗಳನ್ನು ನಿಯಂತ್ರಿಸುವ ವಿಧಾನಗಳನ್ನು ವಿವರಿಸುವ ಪಟಗಳನ್ನು ತೂಗಹಾಕಿದ್ದರು. ಇಂಜಿನಿಯರಿಂಗ ಮಂಟಪದಲ್ಲಿ, ಕಾಲುವೆಗಳನ್ನು ಆಗಿಯುವ ಮಾದರಿ, ಪಂಪು, ಉಕ್ಕಿನ ನೇಗಿಲು ಮತ್ತು ಉಳಿದ ಕೃಷಿಯ ಉಪಕರಣಗಳನ್ನು ಪ್ರದರ್ಶಿಸಿದ್ದರು. ಇದರಂತೆ ರಾಕ್ಷಸಾಕಾರವಾಗಿ ಬೆಳಸಿದ ಹೂವುಗಳು, ಹಣ್ಣು ಹಂಪಲ, ತರಕಾರಿ, ಧಾನ್ಯಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಶಿಕ್ಷಕರ ಪತ್ನೀ ವೃಂದ, ಅಲ್ಪೋಪಹಾರದ ಸ್ಟಾಲ್ ತೆಗೆದಿತ್ತು. ಅಲ್ಲಿ ತಯಾರಾದ ಕಚೋರಿ, ಸಾಮೋಸ, ಭೋಲೆಗಳನ್ನು ಮಾರಲು ಯುವತಿಯರು ನಿಂತಿದ್ದರಿಂದ ಅಲ್ಲಿ ಕಾಲೇಜಿನ ವಿದ್ಯಾರ್ಥಿಗಳೆಲ್ಲ ತಿಂಡಿ, ತಿನಸುಗಳನ್ನು ಕೊಂಡು ವಿಶೇಷ ಲಾಭ ಮಾಡಿಕೊಟ್ಟರು. ಹಾಸ್ಟೇಲಿನವರು ಚಹದಂಗಡಿ ಇಟ್ಟಿದ್ದರೂ ಬೆಲೆ ಹೆಚ್ಚು ಇಟ್ಟದ್ದರಿಂದ ಹೆಚ್ಚು ಜನ ನೀರಿನಿಂದಲೇ ತಮ್ಮ ಬಾಯಾರಿಕೆ ಶಮನ ಮಾಡಿಕೊಳ್ಳುತ್ತಿದ್ದರು.

ಮೂರು ಮೈಲು ಸುತ್ತಲೂ ಕೇಳುವಂತೆ ಧ್ವನಿವರ್ಧಕಗಳನ್ನು ಏರ್ಪಡಿಸಿದ್ದರು. ಆಶಾ ಭೋಸಲೆ, ಲತಾಮಂಗೇಶಕರರು ಗಂಟಲು ಬಿರಿಯುವಂತೆ ಹಾಡುತ್ತಿದ್ದರಲ್ಲದೇ ಕೇಳುವ ಕಿವಿಗಳನ್ನೂ ಶಿಕ್ಷಿಸುತ್ತಿದ್ದರು! ಕೆಲವೊಮ್ಮೆ ಸ್ಮೃತಿ ತಪ್ಪಿದವರಂತೆ ಹಾಡಿದ ಸಾಲುಗಳನ್ನೇ ತಿರುತಿರುಗಿ ಹತ್ತು ಸಲ ಹಾಡಿದಾಗ ಹಾಡು ಗಕ್ಕನೆ ಅರ್ಧಕ್ಕೆ ನಿಂತು, ಯಾರು ಯಾರಿಗೋ ಹುಡುಕುತ್ತಿದ್ದಾರೆ ಅವರು ಕೂಡಲೇ ಬರಬೇಕು ಎಂದು ಧ್ವನಿಯೊಂದು ಕಿರುಚುತ್ತಿತ್ತು. ಇನ್ನೊಮ್ಮೆ "ಯಾರದ್ದೋ ಮಗು ತಂದೆ ತಾಯಿಗಳನ್ನು ತಪ್ಪಿಸಿಕೊಂಡಿದೆ, ಹೆಸರು ಗೊತ್ತಿಲ್ಲ. ತಂದೆಗೆ 'ಪಾಪ' ಎಂದೂ ತಾಯಿಗೆ 'ಮಮ್ಮೀ' ಎಂದು ಕರೆಯುತ್ತಿದೆ. ಈ ಪಾಪಾ - ಮಮ್ಮಿಗಳು ಬೇಗನೇ ಬಂದು 'ಮುನ್ನಾ' (ಮಗು)ನನ್ನು ದಯವಿಟ್ಟು ಕರೆದೊಯ್ಯಬೇಕು" ಎಂದು ಘೋಷಣೆ ಬಂದಾಗ ಎಲ್ಲರೂ

ನಗುವರು. ಆಗಾಗ ಧ್ವನಿವಾಹಕ ಎಲ್ಲೆಲ್ಲಿ, ಏನೇನು ಚಟುವಟಿಕೆಗಳು ನಡೆದಿವೆ, ಎಂದು ವಿವರಿಸಿ ಹೇಳಿದಾಗ ಆಸಕ್ತಿ ಇದ್ದವರು ಅಲ್ಲಿಗೆ ಓಡಿ ಹೋಗುವರು. ಉಣ್ಣೆಗಾಗಿ ಸಾಕಿದ ಕುರಿಗಳ ಪ್ರದರ್ಶನವಾಯಿತು. ಅಲ್ಲಿ ದಟ್ಟವಾಗಿ ಬೆಳೆದ ಉಣ್ಣೆಯನ್ನು ಕತ್ತರಿಸಿ ಸ್ವಚ್ಛ ಮಾಡಿ, ನೂತು, ಬಣ್ಣ ಹಾಕಿ, ನೇಯುವವರೆಗಿನ ಎಲ್ಲ ಚಟುವಟಿಕೆಗಳನ್ನು ಮಾಡಿ ತೋರಿಸಿದರು. ನಂತರ ಒಂಟೆಗಳ ಪ್ರದರ್ಶನವಾಯಿತು. ಕುದುರೆಯಂತೆಯೇ ಒಂಟೆಗಳನ್ನು ಪಳಗಿಸಿದರೆ ಅವು ಎಂತಹ ಉಪಯೋಗಕಾರಿ ಪ್ರಾಣಿಯಾಗಬಲ್ಲವು, ಎಂದು ಆ ಪ್ರದರ್ಶನದಿಂದಲೇ ತಿಳಿಯುವಂತಿತ್ತು. ಬಣ್ಣ ಬಣ್ಣದ ಬಟ್ಟೆಗಳನ್ನು ಅವಕ್ಕೆ ಹೊದಿಸಿ, ಕುಂಕುಮವನ್ನು ಹಣೆಗೆ ಸಾರಿಸಿ ಅವುಗಳ ಮಾಲಿಕರು ಸ್ಪರ್ಧೆಯ ನಿರ್ಣಾಯಕರ ಮುಂದೆ ಅವನ್ನು ಕೊಂಡೊಯ್ಯುತ್ತಿದ್ದರು. ನಂತರ ದನಗಳ ಪ್ರದರ್ಶನವಾಯಿತು. ರಾಜಸ್ಥಾನದ ದನಗಳು ಹಾಲು, ಹೈನಕ್ಕೆ ದೇಶದಲ್ಲಿಯೇ ಹೆಸರಾಗಿವೆ. ಅವುಗಳ ತಳಿಯಂತೆ ಪಾಲನೆ - ಪೋಷಣೆಗಳೂ ಮಹತ್ವದ್ದಾಗಿವೆ, ಎಂದು ನೋಡಿದ ಯಾರಿಗೂ ತಕ್ಷಣ ತಿಳಿಯುವಂತಿತ್ತು.

ರಾಜಸ್ಥಾನಿಗಳು ತಮ್ಮದೇ ಆದ ಕಲೆ, ಆಟಗಳನ್ನು ಬೆಳೆಸಿಕೊಂಡಿದ್ದಾರೆ. ಆಟಗಳಲ್ಲಿ ಒಂಟೆಗಳ ಓಟದ ಸ್ಪರ್ಧೆಯಿದೆ. ಸ್ಪರ್ಧಾಳುಗಳು ಬಹಳ ಇದ್ದುದರಿಂದ ಮೂರು ನಾಲ್ಕು ಗುಂಪುಗಳನ್ನು ಮಾಡಿ ಓಡಿಸಿ, ಈ ವಿಜೇತ ಒಂಟೆಗಳನ್ನು ಇನ್ನೊಮ್ಮೆ ಓಡಿಸುವರು. ಪ್ರಾರಂಭದ ಗೀಟಿಯ ಹಿಂದೆ ಸಾಲಾಗಿ ನಿಂತ ಒಂಟೆಗಳು. ಅದರ ಮೇಲೆ ಮದುಮಗನಂತೆ ಬಣ್ಣ ಬಣ್ಣದ ಪೋಷಾಕು ಧರಿಸಿದ ಸವಾರರು, ಹೋರಾಟಕ್ಕೆ ಹೊರಟ ಒಂಟೆಯ ಸೈನ್ಯವನ್ನು ನೆನಪಿಗೆ ತರುವಂತಿತ್ತು. ಗೋಣು ಹಾಕುತ್ತ ಆಚೆ ಈಚೆ ನೋಡುತ್ತ ನಿಂತವುಗಳಿಗೆ ಸೀಟಿ ಹೊಡೆದು ಓಡಲು ಸೂಚನೆ ಕೊಟ್ಟಾಗ ತತ್ತರವೆತ್ತರ ಕಾಲು ಹಾಕುತ್ತ. ಸಿಕ್ಕಾಪಟ್ಟೆ ಧೂಳೆಬ್ಬಿಸಿ ಓಡುವ ವಿಚಿತ್ರ ಪ್ರಾಣಿಗಳು ತುಂಬ ಮೋಜಾಗಿ ಕಾಣಿಸುತ್ತವೆ. ಬಹುಮಾನಿತರ ಆನಂದಕ್ಕೆ ಮೇರೆಯೇ ಇಲ್ಲ. ಒಂಟೆಗಳ ಸಾಮರ್ಥ್ಯ ಪರೀಕ್ಷಿಸುವ ಇನ್ನೊಂದು ಸ್ಪರ್ಧೆಯಾಯಿತು. ನಿಂತ ಒಂಟೆ ಎಷ್ಟು ಜನರ ಭಾರ ಹೊರಬಲ್ಲದು! ಎಂದು ಗೊತ್ತು ಹಚ್ಚುವುದು ಉದ್ದೇಶ. ಅದರ ಡುಬ್ಬದ ಮೇಲೆ ಇಬ್ಬರಷ್ಟೆ ಕೂಡ್ರಲು ಸಾಧ್ಯವಾಗುವಲ್ಲಿ ಎಂಟು ಹತ್ತು ಜನ ಏರಿಕೂಡ್ರುವರು. ಉಳಿದವರಿಗೆ ಕೂಡ್ರಲು ಸ್ಥಳವಿಲ್ಲದಾಗ ಕುಳಿತವರ ಕೈಗಳನ್ನು ಹಿಡಿದು ಜೋತುಬೀಳುವರು. ಹತ್ತು ಹದಿನೈದು ಜನರನ್ನು ಹೊತ್ತ ಒಂಟೆ ನೋವಿನಿಂದ ಕಿರುಚಿಕೊಂಡರೂ ನಿಂತೇ ಇದ್ದರೆ ಮಾತ್ರ ಬಹುಮಾನದ ಅರ್ಹತೆ ಪಡೆಯುವದು. ರಾಜಸ್ಥಾನಿಗಳು ಗಟ್ಟಿಮುಟ್ಟಾಗಿರುವುದರಿಂದ ಒಂಟೆ ಹತ್ತು ಜನರನ್ನು ಹೊತ್ತರೆ ಹದಿನೈದು ಬಂಗಾಲಿಗಳನ್ನು ಸಹಜವಾಗಿ ಹೊರಬಲ್ಲದು. ಸವಾರರೆಲ್ಲ ರಾಜಸ್ಥಾನಿಗಳೇ

ಇರಬೇಕೆಂದು ಕಡ್ಡಾಯವಿಲ್ಲದಿದ್ದರೆ ಬಂಗಾಲಿಗಳ ಗುಂಪನ್ನು ಒಂಟೆಯೊಂದರ ಮೇಲೆ ಹತ್ತಿಸಿದರೆ ಬಹುಮಾನ ಕಟ್ಟಿಟ್ಟದ್ದೇ! ವಿಜೇತರು ಬೀಡಿ ಸೇದುತ್ತ, ತಾವು ಒಂಟೆಗಳಿಗೆ ಹೇಗೆ ತರಬೇತಿ ಕೊಟ್ಟೆವು? ಎಂದು ವಿವರಿಸತೊಡಗಿದರು.

ನಮ್ಮ ಧುರೀಣರಿಗೆ ಬೇರೇನೂ ಬಾರದಿದ್ದರು ಭಾಷಣ ಬಿಗಿಯುವುದು ಸಾಧಿಸಿದ್ದರಿಂದಲೋ ಏನೋ, ಎಂಥ ಸಮಾರಂಭಗಳಿದ್ದರೂ ಅವರನ್ನೇ ಆಮಂತ್ರಿಸಿ ಭಾಷಣ ಮಾಡಿಸುತ್ತಾರೆ. ಕೃಷಿ ಮೇಲಾದಲ್ಲಿ ಅಂಥ 'ವಾಚಾಳಿ'ಯೊಬ್ಬನನ್ನೇ ಕರೆಸಿದ್ದರು. ಸಾರ್ವಜನಿಕ ಸ್ಥಳಗಳಲ್ಲಿ, ಆಕಶಾವಾಣಿಯಲ್ಲಿ, ಶಾಲೆ-ಕಾಲೇಜುಗಳಲ್ಲಿ ಮುಂಜಾನೆಯಿಂದ ರಾತ್ರಿಯ ತನಕ ಭಾಷಣಗಳ ಸುರಿಮಳೆಯೇ ಆಗುತ್ತಿರುವಾಗ ಈ ಭಾಷಣ ಕೇಳುವದಕ್ಕೆ ಯಾರಿಗೆ ಉತ್ಸಾಹವಿರುತ್ತದೆ! ಅದರಲ್ಲಿಯೂ ಎಲ್ಲರೂ ಜಾತ್ರೆಯ ಸಡಗರದಲ್ಲಿ ತೊಡಗಿರುವಾಗ? ಭಾರೀ ಪ್ರೇಕ್ಷಕರನ್ನು ನಿರೀಕ್ಷಿಸಿ ಗುಡಾರ ಹಾಸಿ, ಕುರ್ಚಿಗಳನ್ನು ಇರಿಸಿದರೂ ಅಲ್ಲಿ ಯಾರೂ ಸುಳಿಯದ್ದರಿಂದ ಸಂಚಾಲಕರು, ಕಾಲೇಜಿನ ಶಿಕ್ಷಕರು, ವಿದ್ಯಾರ್ಥಿಗಳು ಮುಂತಾದವರನ್ನೇ ಬಲಾತ್ಕಾರವಾಗಿ ಭಾಷಣ ಕೇಳಲು ಕೂಡ್ರಿಸಿ, ಎಷ್ಟೊ ತಮಾಷೆ ಸಿಗದಂತೆ ಮಾಡಿದರು!

ಜಾತ್ರೆಗಾಗಿ ತಂದ ಹಣದಲ್ಲಿ, ತೊಟ್ಟಿಲು ತೂಗುವ ತಾಯಂದಿರು ತಾವು ತೊಟ್ಟಿಲುಗಳಲ್ಲಿ ಕುಳಿತು ತೂಗಿಸಿಕೊಂಡರು. ಮಕ್ಕಳು, ಗಂಡಸರು ರಸಮಲಾಯಿ (ದೇಶೀ ಆಯ್ಸಕ್ರೀಮ್) ಸವಿದು ಖರ್ಚು ಮಾಡಿದರು. ಬೇಸಿಗೆಯ ಉರಿಯಲ್ಲಿ ಬೇಯುತ್ತಿದ್ದರೂ, ಈ ರಸಮಲಾಯಿಗಾಗಿ ಬೇಸಿಗೆಯನ್ನು ಸ್ವಾಗತಿಸುವವರಿದ್ದಾರೆ. ದೊಡ್ಡ ಪಗಡಿಯುಳ್ಳ ರಾಜಸ್ಥಾನಿ, ಸಾಯಕಲ್‌ಗಾಲಿಗಳ ಕೈಗಾಡಿಯ ಮೇಲೆ ಎರಡು ದೊಡ್ಡ ದೊಡ್ಡ ಮಡಕೆಗಳನ್ನು ಕೆಂಪು ಬಟ್ಟೆಯಿಂದ ಮುಚ್ಚಿ "ರಬಡಿವಾಲಾ, ಕುಲ್ಫಿ ಮಲಾಯಿವಾಲಾ" ಎಂದು ಕೂಗುತ್ತ ಓಣಿ ಓಣಿ ತಿರುಗುತ್ತಿರುತ್ತಾನೆ. ಅವನ ಹಿಂದೆ ನಾಲ್ಕಾರು ಹುಡುಗರು ಸದಾ ತಿರುಗುತ್ತಿರುತ್ತಾರೆ. ಅವನ ಹತ್ತಿರ ಹತ್ತಿರದಿಂದ ಅರವತ್ತು ಪೈಸಾದ ತನಕ ವಿವಿಧ ಬಣ್ಣ, ರುಚಿಗಳುಳ್ಳ ಸುವಾಸನೆಯ ರಸಮಲಾಯಿ ಸಿಗತ್ತದೆ. ಗಿರಾಕಿಗಳು ಹಣ ಕೊಟ್ಟಾಗ ಮಡಕೆಯಿಂದ ಹಿತ್ತಾಳೆಯ ಪಾತ್ರೆ ತೆಗೆದು ಅದರ ಮುಚ್ಚಳಕ್ಕೆ ಬಿಗಿದ ಸಾಯಕಲ್ ಟ್ಯೂಬಿನ ತುಂಡನ್ನು ತೆಗೆದು ಸ್ವಚ್ಛವಾದ ಚಾಕುವಿನಿಂದ ರಸಮಲಾಯಿಗಳನ್ನು, ಚೆನ್ನಾಗಿ ತೊಳೆದು ಒರೆಸಿದ ಒಣ ಎಲೆಗೆ ಕೆಡುವಿ ಅದನ್ನು ತುಂಡುಮಾಡಿ ಚಮಚೆಯ ಬದಲಾಗಿ ಚಮಚೆಯ ಆಕಾರದಲ್ಲಿ ಕತ್ತರಿಸಿದ ಚಿಕ್ಕ ಬಿದಿರ ತುಂಡುಗಳನ್ನು ಕೊಡುವನು. ಆ ರಸಮಲಾಯಿಯ ಉತ್ಕೃಷ್ಟ ಸ್ವಾದ ಮತ್ತು ರಸಮಲಾಯಿವಾಲಾನ ಸ್ವಚ್ಛತೆಗಳನ್ನು ಒಮ್ಮೆ ಕಂಡವರಿಗೆ ಅದನ್ನು ಬಿಡಲು ಎಂದೂ ಮನಸ್ಸು ಬಾರದು. ಜಾತ್ರೆಗಾಗಿ ಹಳ್ಳಿಯ ಸಂಗೀತಗಾರರೆಲ್ಲ ತಮ್ಮ ವಾದ್ಯಗಳೊಂದಿಗೆ

ಬಂದಿದ್ದರು. ಅವರ ಜಾನಪದ ಹಾಡುಗಳನ್ನು ಟೇಪರಿಕಾರ್ಡರದಲ್ಲಿ ಹಿಡಿದಿಡಬೇಕೆಂದು ಹಂಬಲ ನನಗೆ, ಆ ಗದ್ದಲದಲ್ಲಿ ಏನೂ ಸಾಧ್ಯವಾಗದೇ ನನಗಾಗಿಯೇ ಹಾಡಲು ಅವರನ್ನು ಹೇಗೆ ಕೇಳಿಕೊಳ್ಳುವುದು ಎಂದು ವಿಚಾರಿಸುತ್ತಲೇ ಇದ್ದೆ. ಅಲ್ಲಿ ಇಲ್ಲಿ ಓಡಾಡುತ್ತ ದಣಿದ ನಾಲ್ಕೈದು ಯುವಕರು ಕಾಲೇಜಿನ ನನ್ನ ಕೋಣೆಯ ಮುಂದೆಯೇ ಬೀಡಿ ಸೇದುತ್ತ ಹರಟೆ ಹಚ್ಚಿದ್ದರು. ಅದನ್ನೇ ಮೊದಲು ರಿಕಾರ್ಡಮಾಡಿ ಅವರಿಗೆ ಕೇಳುವಂತೆ ಹಚ್ಚಿದೆ. ಅವರು ಬೆಚ್ಚಿಬಿದ್ದು, ತಾವು ಇತರ ಜನರ ಬಗ್ಗೆ ಮಾತನಾಡಿದ್ದು, ತಿರು ತಿರುಗಿ ಆಡುವವರು ಯಾರು ಇರಬಹುದು? ಎಂದು ಸುತ್ತಲೂ ನೋಡಿ ಯಾರನ್ನೂ ಕಾಣದೇ ದಿಙ್ಮೂಢರಾಗಿ ಕುಳಿತರು. ಅವರನ್ನು ಒಳಗೆ ಕರೆದು ತಿರುಗಿ ಇನ್ನೊಮ್ಮೆ ಹಚ್ಚಿದಾಗ ಆನಂದಾಶ್ಚರ್ಯಗಳಿಂದ ಅವರ ಮುಖಗಳು ಅರಳಿದವು. 'ಎಂಥ ಜಾದೂ!' ಎಂದು ಒಬ್ಬನೆಂದರೆ 'ಜಾದೂ ಅಲ್ಲ ಇದು ಯಂತ್ರ' ಎಂದು ಸ್ವಲ್ಪ ನಾಗರಿಕತೆಯನ್ನು ಬಲ್ಲಾತ ಇನ್ನೊಬ್ಬನೆಂದ. ಅವರಿಗೆ ಹಾಡಲು ಹೇಳಿದರೆ ತಮಗೆ ಬರುವುದಿಲ್ಲವೆಂದರು. ನೀರನ್ನು ತರುವಾಗ, ನವಪತ್ನಿ ಮನೆಗೆ ಬಂದಾಗ, ಹೋಳಿಹಬ್ಬದಲ್ಲಿ ಹಾಡುವ ಹಾಡುಗಳನ್ನು ಹಾಡಲು ಹೇಳಿದಾಗ ಮಾತಿನ ಅರ್ಥಮಾಡಿಕೊಂಡು ತಮ್ಮಲ್ಲಿ ಚರ್ಚಿಸಿ ಒಂದೆರಡು ಹಾಡು ಹಾಡಿದರು. ಈ ಹಾಡುಗಳನ್ನು ಕೇಳಿ ಇನ್ನಷ್ಟು ರಾಜಸ್ಥಾನಿಗಳು ಬಂದರು. ಅವರೂ ಕೆಲವು ಗಂಡ ಹೆಂಡಿರ ಸಾಂಸಾರಿಕ ಹಾಡುಗಳನ್ನು ಹಾಡಿದರು. ಏಕತಾರಿಯನ್ನು ಮೀಟುತ್ತ ಒಬ್ಬ ಜಾನಪದ ಗೀತವನ್ನು ಹಾಡಿದ. ಯುವಕನೊಬ್ಬ ಅದರ ಧಾಟಿಯನ್ನು ಕೊಳಲಲ್ಲಿ ಬಾರಿಸಿದ. ಬೈಠಕ ಮಾಡುವ ಗವಾಯರು ತೊಡುವ ಬಟ್ಟೆ ಧರಿಸಿದವನೊಬ್ಬ ರಾಜಸ್ಥಾನಿ ತಂತುವಾದ್ಯವಾದ 'ರಾವಣ ಹತ್ತಾ'ವನ್ನು ಬಾರಿಸಿದ. ಈ ವಾದ್ಯ 'ರಾವಣ ಹಸ್ತೆ'ಯೆಂದು ಹಿಂದೊಮ್ಮೆ ಕರ್ನಾಟಕದಲ್ಲೂ ಪ್ರಚಾರದಲ್ಲಿದ್ದದ್ದು ನೆನಪಾಯಿತು. ಹೆಚ್ಚೆಚ್ಚು ಜನ ಕೋಣೆಯೊಳಗೆ ನುಗ್ಗಹತ್ತಿದ್ದರಿಂದ ಟೇಪರಿಕಾರ್ಡರನ್ನು ಪ್ರಯೋಗಾಲಯದ ದೊಡ್ಡ ಕೋಣೆಗೆ ಒಯ್ದೆ. ಅಲ್ಲಿ ಹಾಡುವ, ಬಾರಿಸುವ ಉತ್ಸಾಹಿ ಹಳ್ಳಿಗರ ಧ್ವನಿಗಳಿಂದ ನನ್ನ ಟೇಪು ತುಂಬಿ ಹೋದರೂ ಅವರ ಸಂಗ್ರಹ ಕಡಿಮೆಯಾಗಿರಲಿಲ್ಲ. ಇನ್ನಷ್ಟು ಟೇಪು ಇದ್ದರೆ ಚೆನ್ನಾಗಿರುತ್ತಿತ್ತು ಅನಿಸಿತು.

ಕೃಷಿಮೇಲಾದ ಸಂಗಡ ಕಾಲೇಜಿನ ವಾರ್ಷಿಕ ಸಮ್ಮೇಳನವನ್ನೂ ಇಟ್ಟುಕೊಂಡಿದ್ದರು. ಉದ್ದ ಜಿಗಿತ. ಗುಂಡು ಒಗೆತ, ಒಳ್ಳೆಯ ನಡತೆಗಳಿಗೆ ಬಹುಮಾನಗಳನ್ನು ಮುಖ್ಯ ಅತಿಥಿಗಳ ಪತ್ನಿಯ ಅಮೃತ ಹಸ್ತದಿಂದ ಕೊಡಿಸಿದರು. ನಂತರ ಕೃಷಿಮೇಲಾದ ವಿಜೇತರಿಗೆ ಪಾರಿತೋಷಕಗಳನ್ನು ಹಂಚಿದರು. ಕಾಲೇಜ ವಿದ್ಯಾರ್ಥಿಗಳೆಲ್ಲ ಸೂಟಿನಲ್ಲಿ ಬಂದರೆ ಹಳ್ಳಿಗರು ತಮ್ಮ ಬಣ್ಣ ಬಣ್ಣದ ದೇಶೀ ಉಡುಪಿನಲ್ಲಿ ತಮ್ಮ ಕುರಿ, ಕೋಳಿ, ಒಂಟೆಗಳೊಂದಿಗೆ ಬಂದಾಗ ಅಭಿಮಾನವೆನಿಸಿತು.

ಅವರು ಪಡೆದ ಸರ್ಟಿಫಿಕೇಟುಗಳಿಂದ ಅವರಿಗೆ ಯಾವ ಲಾಭವಿಲ್ಲದಿದ್ದರೂ ಅದಕ್ಕೆ ಕಟ್ಟು ಹಾಕಿಸಿ ತಮ್ಮ ಹಳ್ಳಿಗೆ ಹಿಂತಿರುಗಿದ ಮೇಲೆ ಪ್ರತಿಯೊಬ್ಬರಿಗೂ ಅಭಿಮಾನದಿಂದ ತೋರಿಸುವರೆಂಬುದರಲ್ಲಿ ಸಂದೇಹವಿಲ್ಲ.

ಆ ರಾತ್ರೆ ಸ್ನೇಹಸಮ್ಮೇಳನದ ಅಂಗವಾಗಿ ವಿವಿಧ ವಿನೋದಾವಳಿಗಳಿದ್ದವು. ಯಾವದೋ ನಾಟಕಕ್ಕೆ ಬೇಕಾಗುವ ಹಿನ್ನೆಲೆ ಸಂಗೀತ, ಟೇಪ ರಿಕಾರ್ಡರ ಮೇಲೆ ಹಚ್ಚಬೇಕಾದ್ದರಿಂದ ನನ್ನನ್ನು ರಂಗದ ಪಕ್ಕದಲ್ಲಿಯೇ ಕೂಡ್ರಿಸಿದರು. ಚಲನಚಿತ್ರದ ಹಾಡುಗಳನ್ನು ಕೂಗಿಸಿ ಕೂಗಿಸಿ ಮುಗಿಸಿದ್ದರಿಂದ ಅಂದು ಮಧ್ಯಾಹ್ನ ರಿಕಾರ್ಡ ಮಾಡಿದ ಹಳ್ಳಿಗರ ಹಾಡುಗಳನ್ನು ಹಚ್ಚಿದೆ. ಕಾಲೇಜು ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕಿವಿಗಳಿಗೆ ಅವು ಕರ್ಕಶವಾಗಿ ಕೇಳಿಸಿದರೂ ಶ್ರೋತೃಗಳಾಗಿ ಕುಳಿತು ಕೇಳುತ್ತಿದ್ದ ಹಳ್ಳಿಗರು ಕೇಳಿ ಆನಂದಿಸುತ್ತ ಕೊನೆಕೊನೆಗೆ ಸಾಮೂಹಿಕವಾಗಿ ಧ್ವನಿಗೂಡಿಸಿ ತಾವೂ ಹಾಡಲಾರಂಭಿಸಿದರು! ವಿನೋದಾವಳಿಗಳ ಪ್ರಾರಂಭದಲ್ಲಿ ಚಲನಚಿತ್ರ ಗೀತಗಳೊಂದಿಗೆ ಚಲನಚಿತ್ರಗಳ ನೃತ್ಯಗಳು, ಪಾಶ್ಚಾತ್ಯ ನೃತ್ಯಗಳನ್ನು ವಿದ್ಯಾರ್ಥಿಗಳು ಮಾಡಿತೋರಿಸಿದರು. ಯಾರಿಗೂ ಅವು ಅಷ್ಟಾಗಿ ಸೇರದಿದ್ದರೂ, ವಿದ್ಯಾರ್ಥಿಗಳ ಪಾಲಕರು ಮಾತ್ರ ಆನಂದಿಸಿದರು. ನಂತರದ ರಾಜಸ್ಥಾನಿ ಪ್ರಣಯ ನೃತ್ಯ ಎಲ್ಲರಿಗೂ ಮೆಚ್ಚಿಗೆಯಾಯಿತು. ಘಾಗರಾ, ಘೂಂಗಟ್ ಧರಿಸಿದ ಯುವಕ, ಯುವತಿಯನ್ನು ನಾಚಿಸುವಂತೆ ಹಾವಭಾವಗಳನ್ನು ತೋರಿದ. ನಂತರ ಕಾಲೇಜಿನ ನೇಪಾಳಿ ವಿದ್ಯಾರ್ಥಿಗಳು ಕೃಷ್ಣಲೀಲೆಯ ಒಂದು ನೃತ್ಯವನ್ನು ಮಾಡಿ ತೋರಿಸಿದರು. ಗುಜ್ಜಾನೆ ಮರಿಯಂತಿದ್ದ ಬಹಾದೂರ ಸಿಂಗ್ ಇಷ್ಟು ಚೆನ್ನಾಗಿ ಮೈ ಮಣಿಸಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಗಂಗಾನಗರದ ಪಂಜಾಬಿ ವಿದ್ಯಾರ್ಥಿಗಳು 'ಭಾಂಗಡಾ' ನೃತ್ಯ ಮಾಡಿದರು. ಅವರು ಬೆಳೆಯುವ ಬಂಗಾರದ ಗೋಧಿ, ಕುಡಿಯುವ ಹಾಲು, ಲಸ್ಸಿಗಳ ಸಾಮರ್ಥ್ಯಗಳು ಅವರ ಕುಣಿತದಲ್ಲಿ ಅಡಕವಾಗಿವೆ. ಪಾಕಿಸ್ಥಾನದೊಂದಿಗೆ ನಡೆದ ಕಾಳಗದಲ್ಲಿ ರಾಜಸ್ಥಾನಿಗಳ ಶೌರ್ಯವನ್ನು ರೂಪಿಸುವ ಒಂದು ನಾಟಕದ ಪ್ರಯೋಗವಾಯಿತು. ಅದರಲ್ಲಿ ಹತ್ತಾರು ಚಿಕ್ಕ ಚಿಕ್ಕ ಪಾತ್ರಗಳು. ನೋಡಲು ಬಂದ ಆಪ್ತರು ಮಿತ್ರರು ಪಾತ್ರಗಳಿಗೆ ಒಂದರಿಂದ ಹತ್ತು ರೂಪಾಯಿಗಳ ಬಹುಮಾನವನ್ನು ಸಾರಿದರು. ಕೊನೆಕೊನೆಗಂತೂ ಈ ಅರ್ಥವಿಲ್ಲದ ಬಹುಮಾನಗಳ ಯಾದಿ ಕೇಳಿ ವಾಕರಿಕೆ ಬರುವಂತಾಯಿತು.

ಪ್ರೇಕ್ಷಕರಿಗೆ ನಿದ್ರೆ ಬರುವ ಹೊತ್ತಿಗೆ ಹಳ್ಳಿಗರ ಕಾರ್ಯಕ್ರಮ ಇಟ್ಟುಕೊಂಡಿದ್ದರಿಂದ ಸಿನೇಮಾ ನೋಡಿ ಆನಂದಿಸುವ ವರ್ಗ ಎದ್ದು ಮನೆಗೆ ಹೋಯಿತು. ಇದರಿಂದ ದೇಹಾತಿಗಳು (ಹಳ್ಳಿಗರು) ಮುಂದೆ ಬಂದು ಕೂಡ್ರುವ ಅವಕಾಶ ಸಿಕ್ಕಿತು. ರಸಿಕನೊಬ್ಬ

ಆಧುನಿಕ ನಾರಿಯರು ಮಾಸ್ತರ ಸಾಬರನ್ನು ಹೇಗೆ ಅಂಕಿತದಲ್ಲಿಡುತ್ತಾರೆ, ಎಂದು ಏಕಪಾತ್ರಾಭಿನಯದಿಂದ ತೋರಿಸಿದ. ನಂತರ ಹಳ್ಳಿಯ ಬಯಲಾಟ ಪ್ರಾರಂಭವಾಯಿತು. ನಾಲ್ಕಾರು ಜನ ದೊಡ್ಡ ಢೋಲಕಗಳನ್ನು ತಂದು ಬಾರಿಸುತ್ತ ಹಾಡಹತ್ತಿದರು. ಧ್ವನಿವರ್ಧಕಕ್ಕಿಂತ ಅವರ ಧ್ವನಿ ದೊಡ್ಡದಾದ್ದರಿಂದ ಅದನ್ನು ಮುಚ್ಚಿಟ್ಟುಬಿಟ್ಟರು. ಅವರಿಗೆ ಹತ್ತು ನಿಮಿಷ ಕೊಡಲಾಗಿತ್ತು. ಇಪ್ಪತ್ತು ನಿಮಿಷ ಕಳೆದರೂ ನಿಲ್ಲಿಸುವ ಸೂಚನೆ ಕೊಟ್ಟರೂ, ಅವರು ಭಾವಾವೇಶದಿಂದ ಹಾಡುತ್ತ, ನರ್ತಿಸುತ್ತಲೇ ಇದ್ದುದರಿಂದ ಇನ್ನೈದು ನಿಮಿಷದ ನಂತರ ಪರದೆಯನ್ನು ಇಳಿಸಿಬಿಟ್ಟರು. ಆದರೂ ಅವರು ಹಾಡುತ್ತಲೇ ಇದ್ದರು! ಇಲ್ಲಿ ಹಾಡುವುದಕ್ಕಿಂತ ತಮ್ಮ ಹಳ್ಳಿಯಲ್ಲಿ ಹಾಡಿದ್ದರೆ ಜನ ಹೆಚ್ಚು ಉತ್ಸಾಹದಿಂದ ಕೇಳುತ್ತಿದ್ದರೆಂದು ಗೊಣಗುತ್ತ ಒಳಗೆ ಹೋದರು. ನಂತರ ಸಿನೇಮಾ ಧಾಟಿಯಲ್ಲಿ ರಾಜಸ್ಥಾನಿ ಗೀತಗಳನ್ನು ಹಾಡುವ ಮೇಳ ಬಂದಿತು. ಹಾಡುವವರಿಗಾಗಲೀ ಕೇಳುವವರಿಗಾಗಲಿ ಹುರುಪು ಕಡಿಮೆಯಾಗದಿದ್ದರೂ ವೇಳೆ ಮೀರುತ್ತ ನಡೆದಿತ್ತು. ಬೆಳಗಿನ ಎರಡು ಗಂಟೆ ಆಗಿರಬೇಕು. ಆ ಹಳ್ಳಿಗರ ಹಾಡುಗಳನ್ನು ಆಗಾಗ ಪಚ್ಚಿ ಕೇಳಿದಾಗೆಲ್ಲ ಕೃಷಿಮೇಲಾದ ನೆನಪು ಬರುತ್ತದೆ.

೧೯. ಸಹೋದ್ಯೋಗಿಗಳು

ತಮ್ಮ ಯೋಗ್ಯತೆಗಿಂತ ಜಾತಕಬಲದಿಂದ ಮುಂದೆ ಬಂದವರಲ್ಲಿ ಬಿ.ಪಿ.ಯವರು ಒಂದು ಉತ್ತಮ ಉದಾಹರಣೆ. ಸಂಶೋಧನಾ ಸಹಾಯಕರೆಂದು ಕೆಲಸ ಮಾಡುತ್ತಿದ್ದಾಗ ತಮ್ಮ ಪ್ರೊಫೆಸರರ ಮಗಳನ್ನೇ ಮದುವೆಯಾದರು. ಅಳಿಯನಿಗೆ ಡಾಕ್ಟರೇಟು ಕೊಡಿಸಲು ಮಾವಯ್ಯ ಸಾಕಷ್ಟು ಶ್ರಮಿಸಿದರು. ಬದನೆಗೆ ಹತ್ತುವ ಹುಳುವಿನ ಅಭ್ಯಾಸವನ್ನೇ ಪಿ. ಎಚ್. ಡಿ. ಗೆ ಪ್ರಬಂಧ ವಿಷಯವನ್ನಾಗಿ ತೆಗೆದುಕೊಂಡ ಬಿ.ಪಿ. ಯವರು ಯಾವ ಕೀಟನಾಶಕ ಅದಕ್ಕೆ ಹೆಚ್ಚು ವಿಷಕಾರಿ ಎಂದು ಕಂಡುಹಿಡಿದದ್ದರಿಂದ ತಾವೊಬ್ಬ ಕೀಟ ವಿಷ ತಜ್ಞ(Insect Toxicologist) ಎಂದು ಬಲವಾಗಿ ನಂಬಿದರು. ಉತ್ತರ ಪ್ರದೇಶದಲ್ಲಿ ಸಾಕಷ್ಟು ಪ್ರಯತ್ನಿಸಿ ಎಲ್ಲೂ ನೌಕರಿ ಸಿಗದೇ ಜೋಬನೇರದ ಠಾಕೂರರು ನಡೆಸುತ್ತಿದ್ದ ಕೃಷಿ ಕಾಲೇಜಿನಲ್ಲಿ ಅಧ್ಯಾಪಕರೆಂದು ಬಂದು ಸೇರಿಕೊಂಡರು. ಬೇರು ತೇದುಕೊಡುವವರಿಂದ ಮಿದುಳಿನ ಆಪರೇಶನ್ ಮಾಡುವವರೆಲ್ಲ ಡಾಕ್ಟರರು, ಮೊಳೆ ಹೊಡೆಯುವವನಿಂದ ಹಿಡಿದು ಭಾರೀ ಅಣೆಕಟ್ಟು ಕಟ್ಟಿಸುವವರೆಲ್ಲ ಇಂಜಿನಿಯರುಗಳು ನಮ್ಮ ದೇಶದಲ್ಲಿ. ಅದರಂತೆ ಕಾಲೇಜಿನಲ್ಲಿ ಕಲಿಸುವವರೆಲ್ಲ ಪ್ರೊಫೆಸರರೇ! ಬಿ. ಪಿ. ಯವರೂ ಬಂದಾಗಿನಿಂದ "ಪ್ರೊಫೆಸರರೇ" ಆಗಿಬಿಟ್ಟಿದ್ದರು. ರಾಜ್ಯಕೊಂದು ಕೃಷಿ ವಿಶ್ವವಿದ್ಯಾಲಯ ಇರಬೇಕೆಂಬ ನಿರ್ಣಯದ ಮೇರೆಗೆ ಜೋಬನೇರ ಕಾಲೇಜು, ರಾಜಸ್ಥಾನ ಕೃಷಿ ವಿಶ್ವವಿದ್ಯಾಲಯದ ಭಾಗವಾಯಿತು. ಭಾರತದ ಕೃಷಿ ಶಿಕ್ಷಕರಿಗೆ ಅಮೇರಿಕೆಯಲ್ಲಿ ತರಬೇತಿಕೊಡಬೇಕು, ಎಂಬ ಒಪ್ಪಂದದಂತೆ ಬಿ.ಪಿ. ಒಂದು ವರ್ಷ ಅಮೇರಿಕೆಗೂ ಹೋಗಿ ಬಂದರು. ಅವರು ಹಿಂತಿರುಗಿ ಬರುವಷ್ಟರಲ್ಲಿ ಹಿಂದಿನ ಶಿಕ್ಷಕರನ್ನೆಲ್ಲ ವಿಶ್ವ ವಿದ್ಯಾಲಯದಲ್ಲಿರುವ ದರ್ಜೆಯಲ್ಲಿ ವರ್ಗೀಕರಣ ಮಾಡಿದ್ದರು. ಡೀನರಿಗೂ ಬಿ.ಪಿ.ಯವರಿಗೂ ಜಾತಿ ಬಾಂಧವ್ಯ ಇದ್ದುದರಿಂದ ಸುಲಭವಾಗಿ ರೀಡರ ದರ್ಜೆಗೆ (೭೦೦-೫೦-೧೨೦೦) ಭಡ್ತಿ ಹೊಂದಿದರು. ಆಗ ಅವರ ದರ್ಜೆಯಲ್ಲಿ ಇದ್ದವರು ಒಬ್ಬಿಬ್ಬರೇ ಆದ್ದರಿಂದ ವಿಶ್ವವಿದ್ಯಾಲಯದ ಆಗು - ಹೋಗುಗಳ ನಿರ್ಣಾಯಕರಲ್ಲಿ ಇವರೊಬ್ಬರಾದರು. ಆ ದಿನಗಳಲ್ಲಿ ರಾಜಸ್ಥಾನ ಸರಕಾರದ ಕೃಷಿ ಸಂಶೋಧನಾ ಕೇಂದ್ರ ಜೋಬನೇರದಲ್ಲಿತ್ತು. ಅದರ ಮೇಲ್ವಿಚಾರಕರಾದ ಬಿ.ಕೆ. ಮಾಥುರರು ಕೃಷಿ ವಿಶ್ವವಿದ್ಯಾಲಯದಲ್ಲಿ ಸೇರಲು

ಹವಣಿಸಿದ್ದರಿಂದ ಇಬ್ಬರೂ ತೀವ್ರ ಪ್ರತಿಸ್ಪರ್ಧಿಗಳಾದರು. ಮುಂದೆ ಕೃಷಿ ವಿಶ್ವವಿದ್ಯಾಲಯದವರು ತಮ್ಮದೇ ಸಂಶೋಧನಾ ಕೇಂದ್ರವನ್ನು ಉದಯಪುರದಲ್ಲಿ ತೆಗೆದಾಗ ಜಾತಿಯ ತಳಹದಿಯ ಮೇಲೆ ಬಿ.ಕೆ. ಯವರೇ ಕೇಂದ್ರದ ಡಾಯರೆಕ್ಟರ್ ಎಂದು ಪದಾರೂಢರಾದರು. ಕೇಂದ್ರ ಸರ್ಕಾರ, ಸಂಶೋಧನೆಗೆ ಹೆಚ್ಚು ಹಣ ಮೀಸಲಿಟ್ಟಿದ್ದರಿಂದ ಅವರಿಗೆ ಹೆಚ್ಚೆಚ್ಚು ಅಧಿಕಾರ ಬರಲಾರಂಭಿಸಿತು. ಜೊತೆಗೆ ಡೀನರು, ರಿಜಿಸ್ಟ್ರಾರರು, ಉಪಕುಲಪತಿಗಳೊಂದಿಗೆ ಎಲ್ಲ ಸಭೆ, ಇಂಟರವ್ಯೂಗಳಲ್ಲಿ ಭಾಗವಹಿಸುವ ಸದವಕಾಶ ಸಿಗುತ್ತ ಪ್ರಬಲರಾದರು. ಹಿಂದಕ್ಕೆ ಪ್ರಬಲ ಮಾಂಡಲಿಕರು ತಮ್ಮವೇ ರಾಜ್ಯಗಳನ್ನು ಕಟ್ಟುತ್ತಿದ್ದಂತೆ ವಿಶ್ವವಿದ್ಯಾಲಯದ ರಾಜಕಾರಣದಲ್ಲಿ ಬಿ.ಕೆ. ಮಾಥುರರು ಉದಯಪುರದ ಮಟ್ಟಿಗೆ, ಡೀನ ಮತ್ತು ಬಿ.ಪಿ.ಯವರ ಉಮೇದುವಾರರನ್ನು ಕೆಡಹಿ ತಮಗೆ ಬೇಕಾದವರನ್ನು ಸೇರಿಸಿಕೊಳ್ಳಲಾರಂಭಿಸಿದರು. ಇದರಿಂದ ಅಸಂತುಷ್ಟರಾದ ಡೀನರು ತಾವು ಹಿರಿಯ ಆಡಳಿತರಾರರಾದ್ದರಿಂದ ವಿಶ್ವವಿದ್ಯಾಲಯದ ಆವಾರದಲ್ಲಿದ್ದ ಉದಯಪುರದ ಕೃಷಿ ಕಾಲೇಜಿನಲ್ಲಿ ತಾವು ಇರುವದು ನ್ಯಾಯವೆಂದು ಅಲ್ಲಿ ವರ್ಗಾಯಿಸಿಕೊಂಡು ಸಹಾಯಕ ಡೀನರಾಗಿದ್ದ ಡಾ. ಪರಮಾರರನ್ನು ಜೋಬನೇರಿಗೆ ಕಳಿಸಿದರು. ಅದಾಗಲೇ ವಿಶ್ವವಿದ್ಯಾಲಯದಲ್ಲಿ ಕೀಟಶಾಸ್ತ್ರದ ಪ್ರೊಫೆಸರ ಸ್ಥಳ (೧೨೦೦-೭೦-೧೯೦೦)ವನ್ನು ತುಂಬಲಿದ್ದಾರೆಂದು ಜಾಹಿರಾತು ಕೊಟ್ಟರು. ಈ ದೊಡ್ಡ ಹುದ್ದೆಗೆ ಭಾರತದಲ್ಲಿ ಅನೇಕ ಯೋಗ್ಯತಾವಂತರು ಇದ್ದಿರಬಹುದು. ಅವರೆಲ್ಲರ ಅರ್ಜಿಗಳನ್ನು ತಳ್ಳಿಹಾಕಿ, ತಮಗೆ ಬೇಕಾದವರಷ್ಟೇ ಇಂಟರವ್ಯೂಗೆ ಬರುವಂತೆ ವಿಶ್ವವಿದ್ಯಾಲಯದವರು ನೋಡಿಕೊಳ್ಳುತ್ತಾರೆ. ಬಿ. ಪಿ. ಈ ಹುದ್ದೆಯ ಆಕಾಂಕ್ಷಿಗಳಾಗಿದ್ದು ಅವರಿಗೆ ಹೊರಗಿನ ಯಾರ ಅಂಜಿಕೆಯಿಲ್ಲದಿದ್ದರೂ ಬಿ.ಕೆ. ಮತ್ತು ಉದಯಪುರದ ಕೀಟಶಾಸ್ತ್ರ ವಿಭಾಗದ ಮತ್ತು ಮೇಲಧಿಕಾರಿ ಡಾ. ರಾಠೋಡರ ಹೆದರಿಕೆ ಇದ್ದೇ ಇತ್ತು. ರಾಠೋಡರು, ಅನುಭವಿಕರು, ಹಿರಿಯರು ಅಲ್ಲದೇ ರಜಪೂತರಾಗಿದ್ದರಿಂದ ಸ್ಥಳೀಯ ನಾಯಕರ ಪ್ರಬಲವಾದ ಬೆಂಬಲ ಅವರಿಗಿತ್ತು. ಬಿ.ಪಿ. ತಾವು ಸಾಧಿಸಿಕೊಂಡ ಚದುರಂಗದಾಟ ತಿರುಗಿ ಆಡಲಾರಂಭಿಸಿದರು. ತಮ್ಮ ಆಯ್ಕೆಯಾಗುವಂತೆ. ಜಾತಿಯ ತಜ್ಞರೇ ಇಂಟರವ್ಯೂ ಕಮಿಟಿಯ ಮೆಂಬರರಾಗುವಂತೆ ಘೋರವಾಗಿ ಪ್ರಯತ್ನಿಸಿದರು. ಆ ತಜ್ಞರ ಎಲ್ಲ ಸಂಶೋಧನಾ ಪತ್ರಗಳನ್ನು ಪಠಣ ಮಾಡಿದರು. ಉಳಿದ ಕೆಲ ಪ್ರಯತ್ನಗಳನ್ನೂ ಕೈಕೊಂಡಾಗ ವಿಜಯಮಾಲೆ ಬಿ.ಪಿ.ಯವರ ಕೊರಳಿಗೇ ಬಿತ್ತು. ಆದರೆ ಡಾ. ರಾಠೋಡರ ಪ್ರಾಬಲ್ಯವನ್ನೂ ಕಡೆಗಣಿಸುವಂತೆ ಇರದಿದ್ದರಿಂದ ಇಬ್ಬರನ್ನೂ ಪ್ರೊಫೆಸರರನ್ನಾಗಿ ಮಾಡಿದರು! ಹದಿಮೂರು ರೂಪಾಯಿಯ ಪೆರಾಫಿನ್ ಬಾತ್ ಮತ್ತು ಅಧ್ಯಾಪಕರ ಮನೆಯ ಖಾಸಗಿ ಕತ್ತಲು ಕೋಣೆ ಬಳಿಸುವಷ್ಟು ಸಂಶೋಧನಾ ಸೌಕರ್ಯವಿದ್ದ ವಿಭಾಗಕ್ಕೆ, ಮೇಲ್ವಿಚಾರಣೆಗೆಂದು

ತಿಂಗಳಿಗೆ ಮೂರು ಸಾವಿರ ವೇತನ ಪಡೆಯುವ ಇಬ್ಬರು ಪ್ರೊಫೆಸರರು ಬಂದರು! ಅವರ ವೇತನಕ್ಕೆ ಖರ್ಚು ಮಾಡುವ ಹಣ, ದೇಶದ ಸಂಶೋಧನಾ ಪ್ರಗತಿಯ ಖರ್ಚಿಗೆ ಸೇರಿಸಿದರೆ ನಾವು ನಿಜವಾಗಿಯೂ ಅದ್ಭುತ ಸಂಶೋಧನೆ ಮಾಡುತ್ತೇವೆಂದು ವರದಿಗಳಲ್ಲಿ ತೋರಿಸದೇ ಬೇರೆ ಮಾರ್ಗವಿಲ್ಲ. ಬಿ.ಪಿ. ಇಂಟರವ್ಯೂದಲ್ಲಿ ಚೆನ್ನಾಗಿ ಮಾಡಿದರೆಂದು ಅವರನ್ನು ಹಿರಿಯ ಪ್ರಾಧ್ಯಾಪಕರೆಂದು ತೀರ್ಮಾನಿಸಿದ್ದರಿಂದ ರಾಠೋಡ ಮತ್ತು ಅವರಲ್ಲಿ ಯಾವಾಗಲೂ ನ್ಯಾಯವಾಗುತ್ತಲೇ ಇದ್ದವು. ಈ ಮಲ್ಲಯುದ್ಧದಲ್ಲಿ ಬಿ.ಪಿ. ಯವರನ್ನು ಉರುಳಿಸಲಾಗದ್ದಕ್ಕೆ ಬಿ.ಕೆ. ಯವರು ನೊಂದುಕೊಂಡರು.

ಬಿ.ಪಿ.ಯವರದು ಆಕರ್ಷಣೀಯ ವ್ಯಕ್ತಿತ್ವ. ಯಾವುದಾದರೂ ಉದ್ದಿಮೆಯ ಪ್ರತಿನಿಧಿಯಾಗಿದ್ದರೆ ಆ ಉದ್ದಿಮೆ ಖಂಡಿತವಾಗಿ ಬೆಳೆಯುತ್ತಿತ್ತು. ನಮ್ಮಲ್ಲಿ ಬರೆಯಲು ಬಾರದವರು ವಿಮರ್ಶಕರಾಗುವಂತೆ, ಅಭಿನಯ ಬಾರದವರು ನಿರ್ದೇಶಕರಾಗುವಂತೆ, ಆದರ್ಶವಿಲ್ಲದವರು ಶಿಕ್ಷಕರಾಗುತ್ತಾರೆ. ಬಿ.ಪಿ. ಅವರು, ಪಾಲಕರನ್ನು, ವಿದ್ಯಾರ್ಥಿಗಳನ್ನು, ಸಹೋದ್ಯೋಗಿಗಳನ್ನು ಸಂತೋಷ ಪಡಿಸಲು ಕಾನೂನು ಬಾಹಿರವಾದ ಕೆಲಸ ಮಾಡಲೂ ಸಿದ್ಧರು, ಯಾವ ಸುಳ್ಳು ಹೇಳಲೂ ಸಿದ್ಧರು. ನನ್ನ ಸಂಶೋಧನಾ ಯೋಜನೆಯ ರೂಪರೇಷೆಗಳನ್ನು ಉದಯಪುರಕ್ಕೆ ಕಳಿಸಿದ್ದೇನೆ ಎಂದು ಹೇಳಿದರು. ಅದು ಧೂಳು ತಿನ್ನುತ್ತ ಅವರ ಡ್ರಾವರಿನಲ್ಲಿ ಬಿದ್ದಿದೆ! ಎಂದು ಸಹೋದ್ಯೋಗಿಯೊಬ್ಬ ಬಂದು ಕಿವಿಯಲ್ಲಿ ಉಸುರಿದ್ದ. ಇನ್ನೊಮ್ಮೆ ನನ್ನ ಎದುರಿಗೇ ಡ್ರಾವರಿನಿಂದ ಏನೋ ಹುಡುಕುವಾಗ ಅದು ಹೊರಗೆ ಬಂದದ್ದು ನೋಡಿದಾಗ ಪೆಚ್ಚಾಗದೇ, "ಇದರ ಟಾಯಪಿಂಗ್ ಚೆನ್ನಾಗಿ ಆಗದ್ದರಿಂದ, ಬೇರೆ ಪ್ರತಿಯನ್ನು ಟಾಯ್‌ಪ್ ಮಾಡಿ ಕಳಿಸಿದ್ದೇನೆ" ಎಂದು ಅವರೆಂದಾಗ ಹಸೀ ಸುಳ್ಳು ಹೇಳುತ್ತಿದ್ದಾರೆ! ಎಂದು ನಮ್ಮಿಬ್ಬರಿಗೂ ತಿಳಿದಿತ್ತು. ಒಮ್ಮೆ ಹೀಗೇ ಮಾತನಾಡುತ್ತ 'ತಾನು ಅಲ್ಹಾಬಾದ ವಿಶ್ವವಿದ್ಯಾಲಯದಲ್ಲಿದ್ದಾಗ ಬರೆದ ಕೀಟ ಸಂಶೋಧನೆಯ ಪ್ರಬಂಧವಿದೆ'ಯೆಂದಿದ್ದರು. ಸಹೋದ್ಯೋಗಿ ತಿವಾರಿ, ಬಿಡದೇ ಅವರ ಬೆನ್ನು ಹತ್ತಿ ಅದನ್ನು ತಂದೇ ಬಿಟ್ಟ. ಚೆನ್ನಾಗಿ ರಟ್ಟಿನ ಬಾಯಿಂಡ್ ಮಾಡಿಸಿದ ಪುಸ್ತಕದಂತಿದ್ದ ಪ್ರಬಂಧದ ಒಳಗೆಲ್ಲ ಟಾಯ್‌ಪ್ ಮಾಡಿ ಚಿತ್ರಗಳನ್ನು ಬಿಡಿಸಲಾಗಿತ್ತು. ಈಗ ಶಿಕ್ಷಕ -ರಾಜಕಾರಣಿಯಾಗಿದ್ದರೂ ಹಿಂದೊಮ್ಮೆ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ನೋಡಿದರೆ, ಹೊರಕವರಿನಲ್ಲಿ ಅವರ ಹೆಸರಿದ್ದರೂ ಒಳಮೈಯಲ್ಲಿ ಬೇರೆಯವರ ಹೆಸರನ್ನು ಅಳುಕಿಸಿದ್ದು ಸ್ಫುಟವಾಗಿ ಕಾಣುತ್ತಿತ್ತು! ಪರದೇಶಕ್ಕೆ ಹೋದವರು ಭಾರತಕ್ಕೆ ಮರಳುವಾಗ ತಪ್ಪದೇ ತರುವ ಕ್ಯಾಮರವನ್ನು ಬಿ.ಪಿ. ಯವರೂ ಮರೆಯದೇ ತಂದರೂ ಅದನ್ನು ಬಳಸುವ ವಿಧಾನ ತಿಳಿಯದೇ ಮೂರು ವರ್ಷದ ಹಿಂದೆ ಹಾಕಿದ ಫಿಲ್ಮನ್ನು ನಾನೇ

ಪೂರ್ತಿಗೊಳಿಸಬೇಕಾಯಿತು. ಆದ್ದರಿಂದ ಒಂದು ದಿನ ಚಹಾ ಸಂಘದಲ್ಲಿ "ತಾನು ಅಲ್ಹಾಬಾದದಲ್ಲಿ ಇದ್ದಾಗ ತಯಾರಿಸಿದ ಕೀಟದ ಛಾಯಾಚಿತ್ರಗಳಿವೆ" ಎಂದಾಗ ಆಶ್ಚರ್ಯವಾಯಿತು. ಅವನ್ನು ನೋಡುವ ಕುತೂಹಲದಿಂದ ತಿವಾರಿ ಗಂಟುಬಿದ್ದ. "ಎಲ್ಲಿಯೋ ಇಟ್ಟಿದ್ದೇನೆ, ಸಿಗುತ್ತಿಲ್ಲ. ಮರೆತಿದ್ದೇನೆ" ಎಂದರೂ ದುಂಬಾಲು ಬಿದ್ದಾಗ, ಎಲ್ಲೊ ಧೂಳು ತಿನ್ನುತ್ತ ಬಿದ್ದವುಗಳನ್ನು ಹೊರಗೆಳೆದರು. ನೋಡುತ್ತೇನೆ, ಅವನ್ನು ವಿದ್ಯಾರ್ಥಿಗಳಿಗೆ ತೋರಿಸುವುದಕ್ಕಾಗಿ ಪಠ್ಯಪುಸ್ತಕಗಳಿಂದ ಛಾಯಾಚಿತ್ರಗಾರನು ಪ್ರತಿ ಮಾಡಿದ ಸ್ಲಾಯಿಡಗಳಾಗಿದ್ದವು! ವಿಶ್ವವಿದ್ಯಾಲಯದ ಪ್ರೊಫೆಸರರಿಗೆ ಸಂಶೋಧನೆಯ ಛಾಯಾಚಿತ್ರ ಮತ್ತು ಪುಸ್ತಕದ ಪ್ರತಿಯಲ್ಲಿ ಅಂತರ ತಿಳಿಯದ್ದಕ್ಕಾಗಿ ಹಣೆ ಘಟ್ಟಿಸಿಕೊಂಡೆ.

ತಮ್ಮ ತಂದೆ ಪೋಲಿಸ ಖಾತೆಯಲ್ಲಿ ಯಾವ ಅಧಿಕಾರದಲ್ಲಿ ಇದ್ದಾರೆಂದು ಪ್ರತಿಸಲ ಬೇರೆ ಬೇರೆ ಹುದ್ದೆಗಳನ್ನು ಹೇಳುತ್ತಿದ್ದರು. ಒಮ್ಮೆ ಪೋಲಿಸ ಸಂಪರಿಂಟೆಂಡೆಂಟ ಎಂದು ಹೇಳುವ ಸಾಹಸ ಮಾಡಿದಾಗ ತಿವಾರಿ ಕೂಡಲೇ, "ಅವರು ಎಲ್ಲಿ ಕೆಲಸ ಮಾಡುತ್ತಿದ್ದರು?" ಎಂದು ಕೇಳಿಯೇ ಬಿಟ್ಟ. ಕೂಡಲೇ ಪೆಚ್ಚಾಗಿ ಯಾವುದೋ ಪೋಲಿಸ ಠಾಣೆಯ ಹೆಸರು ಹೇಳಿದರು. ಅವರ ಮನೆಯಲ್ಲಿ ತೂಗಹಾಕಿದ ತಂದೆಯವರ ಛಾಯಾ ಚಿತ್ರದ ಮೇಲಿಂದ ಅವರು ಎಂದೂ ಹವಾಲದಾರನಿಗಿಂತ ದೊಡ್ಡ ಹುದ್ದೆ ಪಡೆದಿರಲಿಲ್ಲವೆಂದು ತಿಳಿಯುವಂತಿತ್ತು. ಅವರ ವಿಧವೆ ತಾಯಿ, ತೀರ ಬಡತನದಲ್ಲಿ ಸಂಸಾರ ಮಾಡಿದವರೆಂದು ಅನಿಸುತ್ತಿತ್ತು. ಅದೇ ಅವರ ಅತ್ತೆ ಗೌರವಸ್ಥ, ಉಳ್ಳವರ ಮನೆಯವರೆಂಬುದು ನೋಡಿದಾಕ್ಷಣ ಗೊತ್ತಾಗುವಂತಿತ್ತು. ಮೊದಲಿನಿಂದ ರೂಢವಾದ ತೀರ ಮಿತವ್ಯಯದ ಜೀವನ ಅವರ ಮನೆಯಲ್ಲಿತ್ತು. ಒಮ್ಮೊಮ್ಮೆ ಈ ಕಾರಣಕ್ಕಾಗಿ ಲಕ್ಷ್ಮಿ, ಪತಿಯೊಡನೆ ವಾಗ್ಯುದ್ಧಕ್ಕೆ ಇಳಿಯುತ್ತಿದ್ದಳು. "ಕಾಶ್ಮೀರಕ್ಕೆ ಕರೆದೊಯ್ಯುವವರಿದ್ದೀರಿ. ದಕ್ಷಿಣ ಭಾರತದ ಪ್ರವಾಸ ಮಾಡೋಣ ಎಂದಿದ್ದಿರಿ. ನಾವು ಮಾತ್ರ ಕೊಳೆಯುವದು ಈ ಕೊಂಪೆಯಲ್ಲಿಯೇ" ಎಂದು ಹಂಗಿಸಿದಾಗ, ಅವಳು ಅಂದದ್ದನೆಲ್ಲ ಒಪ್ಪಿಕೊಂಡಂತೆ ಮಾಡಿ ತಾವು ಸೋತು ಗೆಲ್ಲುತ್ತಿದ್ದರು. ಒಮ್ಮೆ ಅವಳ ತವರು ಮನೆಯಾದ ಅಲ್ಹಾಬಾದಕ್ಕೆ ಕರೆದೊಯ್ದು ಬಿಡುತ್ತೇನೆಂದು ಜಯಪುರದ ವರೆಗೆ ಕರೆದುಕೊಂಡು ಹೋಗಿ ತವರಿಗೆ ಹೋಗುವ ಹಾನಿಯನ್ನು ವರ್ಣಿಸಿ, ಜೋಬನೇರದಲ್ಲಿ ಇದ್ದರೆ ಆಗುವ ಲಾಭವನ್ನು ವಿವರಿಸಿ, ಅವಳ ಮನಸ್ಸನ್ನು ತಿರುಗಿಸಿ, ಮರುಗಾಡಿಯಿಂದಲೇ ಜೋಬನೇರಿಗೆ ತಿರುಗಿ ಕರೆದುಕೊಂಡು ಬಂದಿದ್ದರಂತೆ ಭೂಪರು! ತಮ್ಮ ವರ್ಚಸ್ಸು ಸತ್ತೆಗಳನ್ನು ಬೆಳೆಸಲು, ಬೇಕಾದವರಿಗೆ ಧನಸಹಾಯ ಮಾಡಲು ಹಿಂಜರಿಯುತ್ತಿರಲಿಲ್ಲ. ಹೀಗೆ ಸಹಾಯ ಪಡೆದವರು ತಮ್ಮ ಅನುಯಾಯಿಗಳಾಗುವಂತೆ ನೋಡಿಕೊಳ್ಳುತ್ತಿದ್ದರು. ಅವರ ತಮ್ಮನೊಬ್ಬ ಕಾಲೇಜ ಶಿಕ್ಷಣ ಮುಂದುವರಿಸಲಾರದೇ ಒದ್ದಾಡುತ್ತಿದ್ದ. ಅವನನ್ನು ಜೋಬನೇರಿಗೆ ಕರೆಸಿ

ಮೊದಲ ವರ್ಗದಲ್ಲಿ ಪಾಸಾಗುವಂತೆ ನೋಡಿಕೊಂಡರು. ಇವನಂಥ ಜಾಣ ವಿದ್ಯಾರ್ಥಿ ಆ ಕ್ಯಾಂಪಸದಲ್ಲೆ ಬಂದಿರಲಿಲ್ಲವೆನ್ನುವ ಪ್ರಚಾರ ಮಾಡಿ, ಅವನನ್ನು ಅಮೇರಿಕೆಗೆ ಕಳಿಸುವ ವ್ಯವಸ್ಥೆಯನ್ನೂ ಮಾಡಿದರು. ಅವನು ತನ್ನ ಅಡ್ಡ ಹೆಸರನ್ನು ಬೇರೆಯಾಗಿ ಬರೆಯುತ್ತಿದ್ದರಿಂದ ಅಣ್ಣ - ತಮ್ಮಂದಿರೆಂಬ ವಿಚಾರ ಥಕ್ಕನೆ ಯಾರಿಗೂ ಹೊಳೆಯುತ್ತಿರಲಿಲ್ಲ. ಅವರ ಟೊಳ್ಳುತನ ಎಲ್ಲರಿಗೂ ಗೊತ್ತಿದ್ದರೂ ಅವರಿಂದ ಸ್ವಾರ್ಥ ಸಾಧಿಸಿಕೊಳ್ಳಲು ಸಾಧ್ಯವೂ ಇದ್ದುದರಿಂದ ಅವರ ಸ್ನೇಹ ಹಸ್ತ ಬಯಸುವವರೂ ಇದ್ದರು.

ಕೈಲಾಸ್‌ಮಾಥುರನ ಶೈಕ್ಷಣಿಕ ಹಿನ್ನೆಲೆ ಅಷ್ಟೊಂದು ಚೆನ್ನಾಗಿ ಇರದ್ದರಿಂದ ಯಾವದೋ ಸಣ್ಣ ನೌಕರಿಯಲ್ಲಿ ಇದ್ದನಂತೆ. ಅವನು ಮಾತಾಜಿಯ ದೂರದ ಸಂಬಂಧಿಕನಾದ್ದರಿಂದ, ಅವರ ಕೃಪೆಯಿಂದಾಗಿ ಕೃಷಿ ಕಾಲೇಜಿನಲ್ಲಿ ತಾತ್ಪೂರ್ತಿಕ ಲೆಕ್ಚರರ ಸ್ಥಳಕ್ಕೆ ನೇಮಕ ಹೊಂದಿದ. ಆತ ಕಲಿತದ್ದು ಜಲಜೀವಿಗಳ ಬಗ್ಗೆ (Fresh water zoology). ಆ ವಿಷಯದ ತರಬೇತಿ ನಮ್ಮಲ್ಲಿ ಇಲ್ಲದ್ದರಿಂದ ಆತ ಕೀಟಶಾಸ್ತ್ರ ಕಲಿಯಲೇ ಬೇಕಾಗಿತ್ತು. ಬಿ.ಪಿ.ಯವರ ಕೃಪಾಕಟಾಕ್ಷದಿಂದ ಅದನ್ನು ಪಾಸಾಗಲು ಯತ್ನಿಸಿದ. ಡೀನ , ಮಾತಾಜಿ, ಬಿ.ಪಿ.ಯವರ ಪ್ರಯತ್ನ, ಪರೀಕ್ಷಕರ ಅತಿಥ್ಯಗಳೆಲ್ಲ ನಿರಾತಂಕವಾಗಿ ಸಾಗಿದರೂ, ಮೊದಲ ಪ್ರಯತ್ನಕ್ಕೆ ಆತ ದಾಟಲಿಲ್ಲ. ಎರಡನೇ ಪ್ರಯತ್ನದಲ್ಲಿ ಯಾರದೋ ಟಿಪ್ಪಣಿ ಒದಗಿಸಿಕೊಂಡು, ಬಿ.ಪಿ.ಯವರೊಡನೆ ಸಾಧ್ಯವಿದ್ದ ಪ್ರಶ್ನೆಗಳನ್ನು ಚರ್ಚಿಸಿ ಅಂತೂ ಪಾಸಾದ. ಆದರೆ ಉಳಿದ ಅಭ್ಯರ್ಥಿಗಳೊಡನೆ ಕಾಯಂ ಅಧ್ಯಾಪಕರ ಸ್ಥಳಕ್ಕೆ ಸ್ಪರ್ಧಿಸಿದರೆ ಆತ ಸೋಲುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಅಲ್ಲದೇ ಹೀಗಾದರೆ ಬಿ.ಕೆ. ಅವರ ಪ್ರಾಶಸ್ತ್ಯ ಹೆಚ್ಚಲು ಅವಕಾಶವಾಗುವುದು! ಎಂದು ಬಿ.ಪಿ. ಯೋಚಿಸುತ್ತಿದ್ದಾಗ. ಅಜಮೇರ ಕಾಲೇಜಿನಲ್ಲಿ ಲೆಕ್ಚರರ ಸ್ಥಳವೊಂದನ್ನು ತುಂಬುವರಿದ್ದರೆಂದು ತಿಳಿಯಿತು. ಡೀನರು ಒಂದು ಯೋಜನೆ ತಯಾರಿಸಿ ಅದರ ಪ್ರಕಾರ ಕೈಲಾಸನನ್ನು ಇಂಟರವ್ಯೂಗೆ ಕರೆದು ಆರಿಸಿ ಆಯ್ಕೆಯ ಪತ್ರ ಕೊಡುವದು, ಆದರೆ ಆತ ನೌಕರಿಗೆ ಸೇರದಿದ್ದುದರಿಂದ ಕಾಲೇಜಿನವರು ತಮಗೆ ಬೇಕಾದವರನ್ನು ಸೇರಿಸಿಕೊಳ್ಳಬಹುದೆಂದು ಒಪ್ಪಂದವಾಯಿತು. ಈ ಯೋಜನೆ ಸುಸೂತ್ರವಾಗಿ ನಡೆದಾಗ ಡೀನರು, ಅಜಮೇರ ಕಾಲೇಜಿನ ಆಯ್ಕೆ ಸಭೆಯನ್ನು ವಿಶ್ವವಿದ್ಯಾಲಯದವರು ಮಾನ್ಯ ಮಾಡಿ ಅವರು ಆರಿಸಿದ ಕೈಲಾಸನ ಸೇವೆ ಕಾಲೇಜಿಗೆ ಅತ್ಯವಶ್ಯವಿದ್ದುದರಿಂದ ಅವನಿಗೇ ಇಲ್ಲಿ ಸ್ಥಿರವಾದ ಸ್ಥಳ ಕೊಡಿಸಬೇಕು ಎಂದು ಮಂಡಿಸಿ, ಅದು ಪಾಸ್ ಆಗುವಂತೆ ನೋಡಿಕೊಂಡರಂತೆ. ಇನ್ನೊಂದು ಸಭೆಯಲ್ಲಿ ಡೀನರಿಗೂ, ಬಿ.ಕೆ. ಅವರಿಗೂ ವಾಗ್ಯುದ್ಧವಾದಾಗ ಬಿ.ಕೆ. ಈ ಮಾತನ್ನು ಬಯಲಿಗೆಳೆಯದೇ ಬಿಡಲಿಲ್ಲವಂತೆ. ಕೈಲಾಸ್‌ನ ಭವಿಷ್ಯದ ದೃಷ್ಟಿಯಿಂದ ಸ್ನಾತಕೋತ್ತರ ವರ್ಗಗಳನ್ನು ಕಲಿಸಲಿಕ್ಕೆ ಕೊಟ್ಟರು.

ಸ್ವಂತ ಶಿಕ್ಷಕನಿಗೇ ವಿಷಯದ ಮಾಹಿತಿ ಇಲ್ಲದಿದ್ದಾಗ ಪುಸ್ತಕ ನೋಡಿ ಕಲಿಸಿದ್ದು ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ತಿಳಿದೀತು? ತನ್ನ ಅಜ್ಞಾನವನ್ನು ಡಾಂಭಿಕತನದಿಂದ ತುಂಬಿಕೊಳ್ಳಲು ಆತ ಯತ್ನಿಸುತ್ತಿದ್ದ. ವಿದ್ಯಾರ್ಥಿಗಳು ತಮ್ಮ ಕಲಿಸುವಿಕೆಯಿಂದ ಅಸಂತುಷ್ಟರಾಗಬಾರದೆಂದು ಅವರು ಹೇಳಿದಾಗ ಪರೀಕ್ಷೆಗಳನ್ನು ಇಟ್ಟು ಧಾರಾಳವಾಗಿ ಗುಣಗಳನ್ನು ಕೊಡುತ್ತಿದ್ದ. ತಾನು, ಬೇಕಾದ್ದಕ್ಕಿಂತ ಹೆಚ್ಚು ಪ್ರಯಾಸಪಟ್ಟು ಕಲಿಸುತ್ತೇನೆಂದೂ, ಆದರೆ ವಿಶ್ವವಿದ್ಯಾಲಯದ ಸೇವಕನಲ್ಲದ್ದರಿಂದ ಹಾಗೆ ದುಡಿಯಲು ಬಿಡಲಾಗುವುದಿಲ್ಲದೆಂದು ಹಾಸ್ಯವಾಗಿ ಹೇಳುತ್ತಿದ್ದ. ತನ್ನ ಪ್ರತಿಷ್ಠೆಗಾಗಿ ಜಯಪುರದ ಚೀಫ್ ಇಂಜಿನಿಯರರ ಮಗಳನ್ನು ಮದುವೆಯಾಗಿದ್ದ. ವಿವಾಹದ ಹದಿನಾರು ವರ್ಷಗಳ ತರುವಾಯವೂ ಮಾವನ ಮನೆಗೆ ಹೋಗಬೇಕಾದರೆ ಕಾಳಜಿಪೂರ್ವವಾಗಿ ಬಟ್ಟೆಗಳನ್ನು ಧರಿಸಿ ಹೋಗುತ್ತಿದ್ದ. ಅನಿರೀಕ್ಷಿತವಾಗಿ ಹೋದರೆ ಮಾವನ ಮನೆಯಲ್ಲಿ ಸ್ವಾಗತವಿರಲಿಲ್ಲವೆಂದು ಕಾಣುತ್ತದೆ. ಅಂತಹ ಸಮಯದಲ್ಲಿ ಜಯಪುರದ ಅಗ್ಗದ ಹೊಟೇಲಗಳಲ್ಲಿ ಊಟ ಮುಗಿಸಿಯೇ ಅತ್ತೆ ಮನೆಗೆ ಹೋಗುವ ಪರಿಪಾಠ ಇಟ್ಟುಕೊಂಡಿದ್ದ. ಅವನ ಭಾವ, ಕೀಟನಾಶಕ ಕಂಪನಿಯೊಂದರಲ್ಲಿ ಮಾರಾಟಗಾರನಾಗಿದ್ದ. ಕಾಲೇಜಿಗೆ ಬೇಕಾಗುವ ಹೆಚ್ಚಿನ ಕೀಟನಾಶಕಗಳನ್ನು ಅವನ ಮುಖಾಂತರವೇ ಪಡೆಯುತ್ತಿದ್ದರಲ್ಲದೇ ಅವನ ಕಂಪನಿ ಯಾವುದೇ ಹೊಸ ಕೀಟನಾಶಕವನ್ನು ತಯಾರಿಸಿದರೂ ಅದನ್ನು ಕಾಲೇಜಿನ ಹೊಲಗಳಲ್ಲಿ ಸಿಂಪಡಿಸಿದಂತೆ ಮಾಡಿ ಒಳ್ಳೇ ಪರಿಣಾಮಕಾರಿಯಾಗಿದೆ! ಎಂದು ಸರ್ಟಿಫಿಕೇಟು ಬೇರೆ ಪಡೆದು ರಾಜಸ್ಥಾನ ಸರಕಾರಕ್ಕೆ, ಯಾವ ತೊಂದರೆಯಿಲ್ಲದೇ ದೊಡ್ಡ ಪ್ರಮಾಣದಲ್ಲಿ ರಸಾಯನಗಳನ್ನು ಮಾರುತ್ತಿದ್ದರು. ಕೈಲಾಸನಿಗೆ ಮೂರು ಮಕ್ಕಳು. ಹದಿನಾರರ ಮಗನು ತಂದೆಯಂತೆಯೇ ನಪಾಸು ಆಗುವುದರಲ್ಲಿ ದಾಖಲೆ ಸ್ಥಾಪಿಸಿದರೆ, ಹದಿನಾಲ್ಕು ವರ್ಷದ ಮಗಳು ಶೃಂಗಾರ ವೈವಿಧ್ಯದಲ್ಲಿ ತಾಯಿಯನ್ನು ಮೀರಿಸುತ್ತಿದ್ದಳು. ಕಿರಿಯ ಮಗ ಜಾಣನಿದ್ದುದರಿಂದಲೋ ಏನೋ ತಂದೆ ತಾಯಂದಿರ ಮಾತುಗಳನ್ನೇ ಕೇಳುತ್ತಿರಲಿಲ್ಲ.

ಸಚಾನರು ಠಾಕೂರರ ಕಾಲದಲ್ಲಿಯೇ ಕಾಲೇಜು ಸೇರಿದವರು. ಬುದ್ಧಿವಂತರಲ್ಲದಿದ್ದರೂ ಕಷ್ಟಪಟ್ಟು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಬಿ.ಪಿ.ಯವರ ಸುಳ್ಳುಗಾರಿಕೆಯನ್ನು ಅನುಮೋದಿಸದಿದ್ದರೂ ಅವರ ನೇತೃತ್ವದಲ್ಲಿ ಡಾಕ್ಟರೇಟು ಮುಗಿಸಬೇಕೆಂದಿದ್ದುದರಿಂದ ಅವರನ್ನು ವಿರೋಧಿಸುತ್ತಲೂ ಇರಲಿಲ್ಲ. ಆದರೆ ಅವರ ಬಾಲಬಡೆಯುತ್ತಲೂ ಇರಲಿಲ್ಲ. ಕಾಲೇಜಿನ ವತಿಯಿಂದ ಅಮೇರಿಕೆಗೆ ಹೋಗಲು ಮತ್ತು ಮೇಲಿನ ಹುದ್ದೆ ಪಡೆಯಲು ಹಲವಾರು ಬಾರಿ ಯತ್ನಿಸಿ ನಿರಾಶರಾದ್ದರಿಂದ 'ತಾನು ರಜಪೂತನೂ ಅಲ್ಲ. ಡೀನರ ಜಾತಿಯವನೂ ಅಲ್ಲ; ತನ್ನನ್ನಾರು ಕೇಳಬೇಕು?' ಅನ್ನುತ್ತಿದ್ದರು. ಅವರಿಗೆ ಇಂಗ್ಲಿಷ್ ಮಾತನಾಡಲು ಸರಿಯಾಗಿ

ಬಾರದ್ದರಿಂದ ಈಗ ಇರುವ ನೌಕರಿಯ ಅರ್ಹತೆ ಕೂಡ ಅವನಿಗಿಲ್ಲ ಎಂದು ಬಿ.ಪಿ. ಒಮ್ಮೆ ನನ್ನ ಹತ್ತಿರ ಅಂದಿದ್ದರು. ಅದು ಏನೇ ಇದ್ದರೂ ಡಾಂಭಿಕತನವಿಲ್ಲದ ನಂಬಿಗಸ್ಥ. ಇಂಥವರಿಂದ ಕಾಲೇಜಿಗೆ ಲಾಭವಿಲ್ಲದಿದ್ದರೂ ಹಾನಿಯಂತೂ ಖಂಡಿತವಿಲ್ಲ. ಅವರ ತಮ್ಮ ಅದೇ ಕಾಲೇಜಿನಲ್ಲಿ ಓದುತ್ತಿದ್ದ. ಆದರೆ ಅವರು ತಾವಾಗಿ ಯಾರನ್ನೂ ಭೆಟ್ಟಿಯಾಗಿ ಆತನಿಗೆ ಹೆಚ್ಚಿಗೆ ಗುಣ ದೊರೆಯುವಂತೆ ಪ್ರಯತ್ನಸಿರಲಿಲ್ಲ.

ಯಾದವನು ಕಾಲೇಜಿನಲ್ಲಿ ಹೇಗೆ ಸೇರಿಕೊಂಡನೆಂದು ಗೊತ್ತಿಲ್ಲ. ಆದರೆ ಬಿ.ಪಿ.ಯವರ ನೆಚ್ಚಿನ ಶಿಷ್ಯ ಎಂದು ಎಲ್ಲರಿಗೂ ಗೊತ್ತಿದ್ದ ವಿಷಯ. ಅವನು ತಮ್ಮಲ್ಲಿಯ ಕಿರಿ ವಯಸ್ಸಿನ ಹಿರಿಯ ಶಿಕ್ಷಕನೆಂದು ಬಿ.ಪಿ. ಒಮ್ಮೆ ಅಂದಿದ್ದರು. ಪ್ರತಿಯೊಬ್ಬರನ್ನೂ ಅವರು ಹೊಗಳಿ ಅಟ್ಟಕ್ಕೇರಿಸುವವರಾದ್ದರಿಂದ ಈ ನುಡಿಗೆ ಯಾರೂ ಆಶ್ಚರ್ಯಪಡಬೇಕಾಗಿರಲಿಲ್ಲ. ನನ್ನ ಬಗ್ಗೆಯೂ ಒಮ್ಮೆ "ಕಾಲೇಜಿನಲ್ಲಿ ನನ್ನ 'ಖುಶಾಮದ್' ಮಾಡದೇ ಇರುವವರು ಎಂದರೆ ನೀವೊಬ್ಬರೇ. ಆದರೆ ವಹಿಸಿಕೊಟ್ಟ ಕೆಲಸವನ್ನು ಉಳಿದೆಲ್ಲವರಿಗಿಂತ ದಕ್ಷರೀತಿಯಿಂದ ಮಾಡಿ ಮುಗಿಸುವವರೂ ನೀವೇ ಎಂದೂ ಗೊತ್ತಿದೆ. ಅಂತೆಯೇ ನಿಮ್ಮ ಬಗ್ಗೆ ಹೆಚ್ಚಿನ ಆದರವಿದೆ" ಎಂದಿದ್ದರು. ಯಾದವ್, ತನಗೆ ಬೇಕಾಗಿದ್ದ ಎಲ್ಲ ಸವಲತ್ತುಗಳನ್ನು ಬಿ.ಪಿ.ಯವರಿಂದ ಪಡೆಯುವುದರಲ್ಲಿ ಯಶಸ್ವಿಯಾಗಿದ್ದ. ಹಣಕಾಸಿನ ಅಡಚಣೆ ಬಂದಾಗಲೂ ಅವರ ಆಶ್ರಯವನ್ನು ಪಡೆಯುತ್ತಿದ್ದ. ಬಿ.ಪಿ.ಯವರನ್ನು ಆಶ್ರಯಿಸಿ ಬಿಹಾರದಿಂದ ಕೆಲ ಯಾದವರನ್ನು ರಾಜಸ್ಥಾನಕ್ಕೆ ಕರೆಸಿದ್ದ. ಒಬ್ಬಿಬ್ಬರು ಓಡಿ ಹೋದರೂ ಹಲವರು ಉಳಿದುಕೊಂಡಿದ್ದರು. ಕಾಲೇಜಿಗೆ ತಡಮಾಡಿ ಬರುವುದು, ಮನಸ್ಸಿಲ್ಲದಿದ್ದರೆ ಕ್ಲಾಸನ್ನು ರದ್ದು ಮಾಡುವುದು ಮುಂತಾದ್ದನ್ನು ಮಾಡಿದರೆ ಅವನನ್ನು ಕೇಳುವವರೇ ಇರಲಿಲ್ಲ. ಅವನು ಅಮೇರಿಕೆಗೆ ಹೋಗಬೇಕೆಂದು ಮನಸ್ಸು ಮಾಡಿದಾಗ ಬಿ.ಪಿ.ಯವರು ಯಾವತ್ತೂ ಸೌಲಭ್ಯಗಳನ್ನು ಅವನಿಗೆ ಒದಗಿಸಿಕೊಟ್ಟರು. ಧನ ಸಹಾಯದ ಆಶ್ವಾಸನೆಯನ್ನೂ ಕೊಟ್ಟರು. ಇಷ್ಟು ಮಾಡಿದ್ದಕ್ಕೆ ಆತ ಆಜನ್ಮ ಕೃತಜ್ಞನಿರುತ್ತಾನೆ ಎಂದು ಅವರು ಕಂಡುಕೊಂಡ ಮಾತು. ಅಮೇರಿಕೆಗೆ ಹೋಗಲು ಮಾರ್ಗ ದರ್ಶನ ಪಡೆಯಲೆಂದು ಯಾದವ ಆಗಾಗ ನಮ್ಮಲ್ಲಿ ಬರುತ್ತಿದ್ದ. ಪತ್ರಗಳನ್ನೂ ಟಾಯ್‌ಪ್ ಮಾಡಿಸಿಕೊಳ್ಳುತ್ತಿದ್ದ. ಅಲ್ಲಿಗೆ ಹೋದನಂತರ ಒಂದು ಕೃತಜ್ಞತಾಸೂಚಕ ಪತ್ರ ಬರೆದು, ತಾನು ಬಂದ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯ ಯಾವ ಸವಲತ್ತುಗಳೂ ಇಲ್ಲವೆಂತಲೂ ಥೇಟ್ ಜೋಬನೇರ ಕಾಲೇಜಿನಂತೆಯೇ ಆ ಸಂಸ್ಥೆಯಿದೆಯೆಂದು ಬರೆದು ಈ ಮಾತನ್ನು ಯಾರಿಗೂ ಹೇಳಕೂಡದೆಂದು ವಿನಂತಿಸಿಕೊಂಡಿದ್ದ!

೨೦. ಹೊಸಬರು

ಕೈಕೆಳಗಿನ ಕೆಲಸಗಾರರ ತಂಡವನ್ನು ಹಿಗ್ಗಿಸಿದಷ್ಟು ತಾವು ಸಮರ್ಥ ಮತ್ತು ಯಶಸ್ವಿ ಆಡಳಿತಗಾರರು ಎಂದು ಅಧಿಕಾರದಲ್ಲಿ ಇರುವವರು ಭಾವಿಸಿರುವದರಿಂದ ಪ್ರತಿಯೊಬ್ಬರೂ ತಮಗೆ ಇನ್ನಷ್ಟು ಸಹಾಯಕರು ಬೇಕು ಎಂದು ಕೇಳುವವರೇ! ಕೆಲಸ ಹೆಚ್ಚಾಗಿರುವುದರಿಂದ ಇಬ್ಬರು ಗುಮಸ್ತರು, ನಾಲ್ವರು ಚಪರಾಸಿಗಳು, ಬೇಕೆಂದು ಅಂಚೆ ಆಫೀಸಿನವರು ಕೇಳಿದರೆ, ನಾಲ್ಕು ಕಲಾಕಾರರು, ಆರು ಜನ ಸಹಾಯಕರು ಬೇಕೆಂದು ಆಕಾಶವಾಣಿಯ ಅಧಿಕಾರಿಗಳು ದಿಲ್ಲಿಗೆ ಬರೆದು ಹಾಕುವರು. ಮೂವರನ್ನು ಕೇಳಿದಾಗ ಒಬ್ಬ, ಆರು ಜನರನ್ನು ಕೇಳಿದಾಗ ಇಬ್ಬರಾದರೂ ದಕ್ಕುತ್ತಾರೆಂದು ಅವರು ಅನುಭವದಿಂದ ಕಂಡುಕೊಂಡ ಮಾತು. ಅಂತೆಯೇ ನಮ್ಮ ಸರಕಾರಿ ಮತ್ತು ಸರಕಾರೇತರ ಸಂಸ್ಥೆ ಗಳು ಕೆಲಸಗಾರರಿಂದ ತುಂಬಿದರೂ ಕೆಲಸಕ್ಕೆ ಬದಲಾಗಿ ಹರಟೆಯ ಪ್ರಾಬಲ್ಯವೇ ಹೆಚ್ಚಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳ ಆಯ್ಕೆಯನ್ನು ಕೊಡುವುದರಿಂದ ಅಲ್ಲಿ ಹತ್ತು ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನೆಂಬ ತತ್ವವನ್ನು ಒಪ್ಪಿಕೊಂಡಿದ್ದಾರೆ. ಈ ತತ್ವದ ಮೇರೆಗೆ, ಇನ್ನೂರು ವಿದ್ಯಾರ್ಥಿಗಳು, ಹತ್ತು ವಿಷಯಗಳನ್ನು ಐದು ಡಿಪಾರ್ಟಮೆಂಟುಗಳಲ್ಲಿ ಕಲಿಯುತ್ತಾರೆ, ಎಂದು ಇಟ್ಟುಕೊಂಡರೆ ಕಾಲೇಜಿನಲ್ಲಿ ಎಲ್ಲ ಪ್ರಾಧ್ಯಾಪಕರು ಇಪ್ಪತ್ತೇ ಜನ ಇರುತ್ತಾರೆ. ನಾನು ಅಮೇರಿಕದಲ್ಲಿ ಅಭ್ಯಸಿಸುತ್ತಿದ್ದಾಗ ಕೀಟ ವಿಭಾಗದಲ್ಲಿ ಪ್ರಥಮ ವರ್ಷದಿಂದ ಡಾಕ್ಟರೇಟದ ವರೆಗಿನ ವಿದ್ಯಾರ್ಥಿಗಳಿದ್ದರೂ ಕೇವಲ ಮೂರೇ ಪ್ರಾಧ್ಯಾಪಕರಿದ್ದರು. ಪ್ರಯೋಗಾಲಯದಲ್ಲಿ ಹೆಚ್ಚಿನ ಸಹಾಯದ ಅವಶ್ಯಕತೆ ಇದ್ದಾಗ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ದೈನಿಕ ವೇತನ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಅದೇ ಜೋಬನೇರದ ಕೀಟ ವಿಭಾಗದಲ್ಲಿ ನನ್ನನ್ನು ಹಿಡಿದು ಐವರು ಶಿಕ್ಷಕರು ಮತ್ತು ಎಂಟು ಜನ ಸಹಾಯಕರು ಇದ್ದರೂ ಮತ್ತೆ ಹೆಚ್ಚಿನ ಅಧ್ಯಾಪಕರಿಗೆ ಬೇಡಿಕೆಯನ್ನು ಕಳಿಸಲಾಯಿತು. ಬೇಡಿಕೆ ಕಳಿಸಿದವರೇ ಮಂಜೂರು ಮಾಡುವ ಮಂಡಲಿಯಲ್ಲಿ ಇದ್ದುದರಿಂದ ಅನಾಯಾಸವಾಗಿ ಆ ಎರಡೂ ಸ್ಥಳಗಳನ್ನು ಮಂಜೂರು ಮಾಡಿಸಿಕೊಂಡು ಉಳಿದ ಆಡಳಿತಗಾರರ ದೃಷ್ಟಿಯಲ್ಲಿ ವಿಜಯಿಗಳಾದರು.

ಎಂದಿನಂತೆ, ನಿಷ್ಪಕ್ಷಪಾತದಿಂದ ಯೋಗ್ಯತಾವಂತರನ್ನು ಆರಿಸಲಾಗಿದೆ! ಎಂದು ಜನರ ಕಣ್ಣಲ್ಲಿ ಮಣ್ಣೆರಚಲು ಜಾಹಿರಾತುಗಳನ್ನು ವಿವಿಧ ಪತ್ರಿಕೆಗಳಲ್ಲಿ ಕೊಡಲಾಯಿತು. ಅರ್ಜಿಗಳು ಬಂದವು. ಇಂಟರವ್ಯೂ ನಾಟಕವೂ ನಡೆಯಿತು. ಆದರೆ ಇದಕ್ಕೆ ಮೊದಲೇ ಯಾರ ಆಯ್ಕೆಯಾಗುವುದೆಂದು ಎಲ್ಲರಿಗು ತಿಳಿದಿತ್ತು. ಬರಡಿಯಾ ಉದಯಪುರದ ಜೈನ. ಅವನ ಧನಿಕ ಮಾವ ಜಯಪುರದಲ್ಲಿಯ ಪ್ರಭಾವಶಾಲಿ ವ್ಯಕ್ತಿ. ಬಿ.ಕೆ. ಜಯಪುರದಲ್ಲಿ ಮನೆ ಕಟ್ಟುವಾಗ ತೊಂದರೆಗೆ ಒಳಗಾದಾಗ ಅವರಿಗೆ ನೆರವಾಗಿದ್ದನಂತೆ. ಈ ಋಣವಿದ್ದ ಬಿ.ಕೆ. ದಿಲ್ಲಿಯಲ್ಲಿ ಬರಡಿಯಾನ ಪ್ರಾಧ್ಯಾಪಕರಾಗಿದ್ದವರನ್ನೆ ತಜ್ಞರೆಂದು ಇಂಟರವ್ಯೂಗೆ ಕರೆಸಿಕೊಂಡರು. ಸರಿ. ಅದೇ ವಿಶ್ವವಿದ್ಯಾಲಯದಲ್ಲಿ ಕಲಿತು, ಅದೇ ತಜ್ಞರ ಹತ್ತಿರ ಡಾಕ್ಟರೇಟು ಮಾಡುತ್ತಿದ್ದುದರಿಂದ ಬರಡಿಯಾ ಯಶಸ್ವಿಯಾದ. ಅವನಿಗೆ ವಿಷಯಜ್ಞಾನ, ಕಲಿಸುವಿಕೆಗಳ ಅನುಭವವಿರಲಿಲ್ಲ. ಆದರೆ ಶೈಕ್ಷಣಿಕ ರಾಜಕೀಯದ ಚದುರಂಗದಾಟದ ಪರಿಚಯ ತುಂಬ ಚೆನ್ನಾಗಿತ್ತು. ಅಂತೆಯೇ ಬಂದ ಹೊಸದರಲ್ಲಿ ಕೂಡ ಕಲಿಸುವುದರ ಕಡೆಗೆ ಲಕ್ಷ ಕೊಡದೇ ಅಧಿಕಾರಿಗಳಿಗೂ ಹೆದರದೇ ಬಂದ ದಿನದಿಂದಲೇ ಉದಯಪುರಕ್ಕೆ ಹೋಗಲು ಪ್ರಯತ್ನಿಸಲಾರಂಭಿಸಿದ. 'ತನ್ನ ಪತ್ನಿಗೆ ಜೋಬನೇರದ ಉಷ್ಣ ಒಣಹವೆ ತಡೆಯುವುದಿಲ್ಲ. ಆಗಾಗ ಕಾಯಿಲೆ ಬೀಳುತ್ತಾಳೆ. ಅವಳಿಗೆ ಆದಷ್ಟು ತಂಪು ಹವೆಯಲ್ಲಿ ಇಡಲು ಹೇಳಿದ್ದಾರೆ ಡಾಕ್ಟರರು" ಎಂದು ಡಾಕ್ಟರರ ಸರ್ಟಿಫಿಕೇಟ ಹಾಜರ ಮಾಡಿದ. ಅನಾರೋಗ್ಯದ ರಜೆ ಪಡೆಯಲು ಐದು ರೂಪಾಯಿ ಕೇಳುವ ಡಾಕ್ಟರರು, ನೌಕರಿ ಸೇರಲು ದೃಢಕಾಯನಿದ್ದಾನೆ ಎಂದು ಪರೀಕ್ಷಿಸದೇ ನೀಡಿದ ಸರ್ಟಿಫಿಕೇಟಿಗೆ ಬೆಲೆಯಿಲ್ಲವೆಂದು ತಿಳಿದರೂ ಉದಯಪುರಕ್ಕೆ ಆತನನ್ನು ಕಳಿಸಲು ಬಿ.ಪಿ. ಮತ್ತು ಡೀನರು ಒಪ್ಪಿದರು. ಅಲ್ಲಿ ಡಾ. ರಾಠೋಡರು, ಕೆಲಸ ಮಾಡಿ ವೇತನ ಪಡೆಯುವಂತೆ ನೋಡಿಕೊಂಡಿದ್ದರಿಂದ ಬರಡಿಯಾನಿಗೆ ತೊಂದರೆ ಆಗಿ ತಿರುಗಿ, ಬಿ.ಕೆ. ಮೊರೆಹೋಗಿ ಅವರ ಸಂಶೋಧನೆಯ ವಿಭಾಗದಲ್ಲಿ 'ರೀಡರ್' ಸಮಾನ ಹುದ್ದೆಗೆ ನೇಮಕ ಹೊಂದಿದ. 'ಅತಿ ಸಣ್ಣ ವಯಸ್ಸಿನಲ್ಲಿ ಅತೀ ದೊಡ್ಡ ಅಧಿಕಾರಿಯಾಗಿದ್ದಾನೆ' ಎಂದು ಇಂಗ್ಲಿಷ್ ಕಲಿಯದ ಅವನ ಹೆಂಡತಿ, ಹೆಮ್ಮೆಯಿಂದ ಹೇಳಿಕೊಂಡರೆ ಅದರಲ್ಲಿ ಆಶ್ಚರ್ಯ - ಅಸಾಧ್ಯಗಳಾದವು ಏನೂ ಇರಲಿಲ್ಲ. ವಿಶ್ವವಿದ್ಯಾಲಯದ ಸಸ್ಯವಿಭಾಗದಲ್ಲಿ ಕಾಶ್ಮೀರದ ಕೌಲ್ ಎನ್ನುವವರು ರೀಡರ ಆಗಿದ್ದರು. ಅವರ ತಮ್ಮ ಚಮನ್‌ಲಾಲ್, ಜೋಬನೇರದಲ್ಲಿಯೇ ಪದವೀಧರನಾಗಿ ದಿಲ್ಲಿಯ ಭಾರತೀಯ ಕೃಷಿ ಸಂಶೋಧನಾ ಕೇಂದ್ರದಿಂದ ಎಮ್. ಎಸ್‌ಸಿ. ಆಗಿ ಜಯಪುರದಲ್ಲಿ ರಾಜಸ್ಥಾನ ಸರಕಾರದ ಕೀಟ ಸಂಶೋಧನಾಲಯದಲ್ಲಿ ಸಹಾಯಕನೆಂದು ಕೆಲಸ ಮಾಡುತ್ತಿದ್ದ. ಅಧ್ಯಾಪಕನ ಸ್ಥಳಕ್ಕೆ ಆತ ಅರ್ಜಿ ಸಲ್ಲಿಸಿದಾಗ, ಅನ್ಯಾಯವಾಗಿ ಲಾಭ ಪಡೆಯಲು ಎಂದೂ ಯತ್ನಿಸದ ಕೌಲರು, 'ಚಮನನಿಗೆ ಯೋಗ್ಯತೆಯಿದ್ದರೆ ಮಾತ್ರ

ಆರಿಸಿ. ತನ್ನ ತಮ್ಮನೆಂದು ಪರಿಗಣಿಸಬೇಕಾಗಿಲ್ಲ' ಎಂದು ಬಿ.ಪಿ.ಯವರಿಗೆ ಮೊದಲೇ ಹೇಳಿದ್ದರಂತೆ. ಚಮನನ ಆಯ್ಕೆಯಾದ ನಂತರ "ಅವನೇನೂ ಜಾಣ ವಿದ್ಯಾರ್ಥಿಯಾಗಿರಲಿಲ್ಲ. ತಮ್ಮ - ಕೌಲರ ಮೈತ್ರಿಯಿಂದಾಗಿ ಅವನನ್ನು ಆರಿಸಿದೆ" ಎಂದು ಬಿ.ಪಿ. ಹೇಳಿದರೂ ಚಮನನು ಹಾಜರಾದ ನಂತರ ಅವನಿಗೆ ಕೀಟಶಾಸ್ತ್ರದಲ್ಲಿ ಒಳ್ಳೆಯ ಪಾಂಡಿತ್ಯವಿದ್ದದ್ದು ಗೊತ್ತಾಯಿತು. ಅವನು ಲೆಕ್ಚರರ್ ಆಗಿದ್ದರೂ ಆ ವಿಷಯದಲ್ಲಿ ಪ್ರೊಫೆಸರರಿಗಿಂತಲೂ ಹೆಚ್ಚಿಗೆ ಕೀಟಗಳ ಬಗ್ಗೆ ಅರಿತಿದ್ದನೆಂದು ಮುಚ್ಚುಮರೆಯಿಲ್ಲದೇ ಹೇಳಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ಅವನಲ್ಲಿ ಸಮಯಸಾಧಕತೆ, ಸ್ವಾರ್ಥಗಳಿರಲಿಲ್ಲ. ಕೀಟಶಾಸ್ತ್ರದ ಬಗ್ಗೆ ಆಗಾಗ ಮಾತನಾಡುತ್ತ ಬಿ.ಪಿ. ಅಸಂಬದ್ಧಾಗಿ ಮಾತನಾಡಿದರೆ. ಉಳಿದವರು ಗೋಣು ಹಾಕುತ್ತಿದ್ದರೆ ಚಮನನು "ನೀವು ಹೇಳುವುದು ತಪ್ಪು, ಸತ್ಯ ಸಂಗತಿ ಹೀಗಿದೆ...." ಎಂದು ಹೇಳಿಬಿಡುವನು. ಈ ಪ್ರವೃತ್ತಿ ಬಿ.ಪಿ.ಯವರಿಗೆ ಅವಿಧೇಯಕವೆನಿಸಿದರೆ ಉಳಿದವರಿಗೆ ಅವ್ಯವಹಾರಿಕವೆನಿಸಿತು. ಅವನು ಒಂದು ಕ್ಲಾಸಿಗೆ ಕಲಿಸಬೇಕಾದರೆ ನಾಲ್ಕಾರು ಪುಸ್ತಕಗಳನ್ನು ಓದಿ ಟಿಪ್ಪಣಿ ತೆಗೆದು ಕ್ಲಾಸಿನಲ್ಲಿ ಅಂಶಗಳನ್ನು ವಿವರಿಸಿ ಹೇಳುತ್ತಿದ್ದ. ಕ್ಲಾಸುಗಳನ್ನು ತಪ್ಪಿಸಿ ಬೇರೆಯವರಿಂದ ಕ್ಲಾಸಿನಲ್ಲಿ ಬರೆಯಿಸಿದ ಟಿಪ್ಪಣಿಗಳನ್ನು ಕಂಠಪಾಠ ಮಾಡಿ ಪಾಸಾಗಬಯಸಿದ ವಿದ್ಯಾರ್ಥಿಗಳಿಗೆ ಈ ಪದ್ಧತಿ ಮನಸ್ಸಿಗೆ ಬಾರದ್ದರಿಂದ ಉಳಿದ ಶಿಕ್ಷಕರು ಕೊಡುವಂತಹ ಸುಲಭ ಟಿಪ್ಪಣಿಗಳನ್ನು ಕೊಡುವಂತೆ ಹೇಳಿದರು. ತಾನು ಹೇಳುವುದೆಲ್ಲ ಪಠ್ಯಪುಸ್ತಕಗಳಲ್ಲಿ ಇರುತ್ತದೆ. ಅದನ್ನೇ ತಿರುಗಿ ಬರೆಯಿಸುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ನಿಮಗೆ ಸುಲಭದಲ್ಲಿ ತಿಳಿಯಲಾಗದ ಅಂಶಗಳನ್ನು ವಿವರಿಸುತ್ತೇನೆಂದು ಅವರಿಗೆ ತಿಳಿಹೇಳಿದ. ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಪರಿಶೀಲಿಸುವಾಗ ಅವರ ಇಂಗ್ಲಿಷ್ ಭಾಷೆ, ಅಕ್ಷರದೋಷ, ವ್ಯಾಕರಣಗಳನ್ನು ತಿದ್ದಿ, ವಿಷಯದ ವಿವರಗಳನ್ನು ಸರಿಯಾಗಿ ನೋಡಿ ಗುಣಗಳನ್ನು ಕೊಡುತ್ತಿದ್ದ. ಇತರರು ಚಹಾ ಕ್ಲಬ್ಬಿನಲ್ಲಿ ಚಹಾ ಕುಡಿಯುತ್ತ ಪೇಪರುಗಳನ್ನು ತಪಾಸ ಮಾಡಿ ಕೊಡುವ ಗುಣಗಳಿಗೂ ಚಮನನು ಕೊಡುವ ಗುಣಗಳಿಗೂ ಬಹಳ ಅಂತರವಿದ್ದುದರಿಂದ ವಿದ್ಯಾರ್ಥಿಗಳು ಅಸಂತುಷ್ಟರಾಗಿ, ಬಿ.ಪಿ. ಹತ್ತಿರ ಅವನನ್ನು ದೂರಿಕೊಂಡರು. ಅವನು ಕಲಿಸುವ ಕ್ರಮದ ಬಗ್ಗೆ ವಿದ್ಯಾರ್ಥಿಗಳು ದೂರಿಕೊಂಡದ್ದು ತಿಳಿಯಿಸಿ ಈ ವಿಷಯದಲ್ಲಿ ತನಿಖೆ ನಡೆಸುವಂತೆ ಡೀನರು ತನಗೆ ಹೇಳಿದ್ದಾರೆ ಎಂದು ಬಿ.ಪಿ. ಹೇಳಿ ವಿದ್ಯಾರ್ಥಿಗಳಿಗೆ ಕೊಡಬೇಕಾದ ಸವಲತ್ತುಗಳ ಬಗ್ಗೆ ಅವನಿಗೆ ಬೋಧಿಸಿದರು. ಅಲ್ಲಿಂದೆದ್ದ ಚಮನನು ನೇರ ಡೀನರ ಹತ್ತಿರ ಹೋಗಿ' ವಿದ್ಯಾರ್ಥಿಗಳು ನನ್ನ ಬಗ್ಗೆ ಏನು ದೂರಿಕೊಂಡಿದ್ದಾರೆ?' ಎಂದು ಕೇಳಿದ. ಅದಕ್ಕವರು "ಈತನಕ ತನಗೆ ಯಾವ ದೂರು ಬಂದಿಲ್ಲ. ನೀನು ಚೆನ್ನಾಗಿ ಕಲಿಸುತ್ತಿಯೆಂದು ಪರೋಕ್ಷವಾಗಿ ತಿಳಿದು ಬಂದಿದೆ. ಅದನ್ನೆ ಮುಂದುವರಿಸು"

ಎಂದು ಬೀಳ್ಕೊಟ್ಟರು. ತಿರುಗಿ ಬಂದ ಚಮನ್ "ಷಂಢರಾದ ಮುಖ್ಯಸ್ಥರ ಕೈ ಕೆಳಗೆ ಕೆಲಸ ಮಾಡಲು ಅಸಹ್ಯವಾಗುತ್ತದೆ" ಎಂದು ಎಲ್ಲರಿಗೂ ತಿಳಿಯುವಂತೆ ಗಟ್ಟಿಸಿ ಮಾತನಾಡಿದ. ಇನ್ನೊಮ್ಮೆ ಅವನನ್ನು ಕರೆಯಿಸಿ 'ವಿದ್ಯಾರ್ಥಿಗಳಿಗೆ ತಾನು ಹೇಗೆ ಟಿಪ್ಪಣಿಗಳನ್ನು ಕೊಡುತ್ತೇನೆ' ಎಂದು ಬಿ.ಪಿ. ಯವರು ವಿವರಿಸಿದಾಗ ಕೆರಳಿದ ಚಮನ್ "ವಿಶ್ವವಿದ್ಯಾಲಯದ ಕಾನೂನಿನಂತೆ ನಿಮಗೆ ಕೆಲಸಗಳಿವೆ! ಎಂದು ತೋರಿಸಲು ವಿವಿಧ ವರ್ಗಗಳಿಗೆ ಕಲಿಸುತ್ತೇನೆ ಎಂದು ತೋರಿಸುತ್ತೀರಿ. ಆದರೆ ಆ ಸಭೆ, ಈ ಸಭೆ ಎಂದು ವಾರಕ್ಕೊಂದು ಸಲ ಉದಯಪುರಕ್ಕೆ ಓಡುವವರಿಗೆ, ಇಲ್ಲಿ ಇದ್ದಾಗಲೂ ಡಿಪಾರ್ಟಮೆಂಟಿಗಿಂತ ಡೀನರ ಕೋಣೆಯಲ್ಲಿ ಹೆಚ್ಚು ವೇಳೆ ಕಳೆಯುವವರಿಗೆ, ಡಿಪಾರ್ಟಮೆಂಟಿನಲ್ಲಿದ್ದಾಗಲೂ ಬರೇ ಶೈಕ್ಷಣಿಕ ರಾಜಕಾರಣದ ಬಗ್ಗೆ ಮಾತನಾಡುವವರಿಗೆ, ಕ್ಲಾಸು ತೆಗೆದುಕೊಳ್ಳಲು ಸಮಯವೆಲ್ಲಿದೆ? ಅಮಾವಾಸ್ಯೆಗೊಮ್ಮೆ ಕ್ಲಾಸು ತೆಗೆದುಕೊಂಡಾಗಲೂ ಪಠ್ಯಪುಸ್ತಕದಿಂದ ಎತ್ತಿದ ಟಿಪ್ಪಣಿಗಳನ್ನೇ ಬರಿಸಿ, ಅವುಗಳಿಂದಲೇ ಪ್ರಶ್ನೆ ಕೇಳಿ, ಉತ್ತರ ಪತ್ರಿಕೆಗಳನ್ನು ನಿಮ್ಮ ಪ್ರಯೋಗಾಲಯದ ಸಹಾಯಕರಿಂದ ತಿದ್ದಿಸುವುದು ನಮಗೆ ತಿಳಿಯದ ಮಾತೇ? ವರ್ಷದ ಕೊನೆಯಲ್ಲಿ ವಿಷಯ ಕಲಿಸಿ ಮುಗಿಯದಿದ್ದಾಗ ಉಳಿದ ಅಧ್ಯಾಪಕರಿಗೆ ಮುಗಿಸಲು ಹೇಳುವುದು ನಿಮ್ಮ ಪದ್ಧತಿ, ನನ್ನೊಂದಿಗೆ ಪ್ರಯೋಗಾಲಯದಲ್ಲಿ ನೀವು ಕೆಲಸ ಮಾಡುತ್ತೀರಿ ಎಂದು ವೇಳಾಪತ್ರಿಕೆ ಹೇಳುತ್ತದೆ. ಒಮ್ಮೆಯಾದರೂ ಬಂದಿದ್ದೀರಾ?" ಎಂದು ಕೂಗಾಡಿದ. "ನಾನು ಮೇಲಧಿಕಾರಿಯಾಗಿದ್ದರೂ ಇನ್ನು ತನಕ ಯಾರೊಬ್ಬರ ಮೇಲೂ ಸಿಟ್ಟಿಗೇಳದೇ, ಸಿಪಾಯಿಯಿಂದ ವಿದ್ಯಾರ್ಥಿಗಳವರೆಗೆ ಎಲ್ಲರನ್ನೂ ನಗುಮುಖದಿಂದ ಮಾತನಾಡಿಸುತ್ತೇನೆ. ನೀನು ನನ್ನ ವಿದ್ಯಾರ್ಥಿಯಾಗಿದ್ದು, ನಾನೇ ನೌಕರಿಗೆ ನಿನ್ನನ್ನು ಸೇರಿಸಿಕೊಂಡಾಗಲೂ ಈ ರೀತಿ ಬೆಂಕಿ ಕಾರಲು ನಿನಗೇನು ಅಧಿಕಾರವಿದೆ?" ಎಂದು ಶಾಂತರಾಗಿಯೇ ಎಂದಿನಂತೆ ನಗುಮುಖದಿಂದಲೇ ಅವನಿಗೆ ಕೇಳಿದರು ಬಿ.ಪಿ. "ನನಗೆ ಕೃತಕ, ಘಾತಕವಾದ ನಗೆ ನಗಲು ಬಾರದು. ನಾನು ಬೆವರು ಸುರಿಸಿ ದುಡಿಯುತ್ತೇನೆ. ಕಷ್ಟಪಟ್ಟು ಕಲಿಸುತ್ತೇನೆ. ಆದ್ದರಿಂದ ನನಗೆ ಯಾರ ಹಂಗೂ ಇಲ್ಲ" ಎಂದು ಕಹಿಯಾಗಿ ನುಡಿದು ಚಮನ್ ಹೊರಗೆ ನಡೆದೇಬಿಟ್ಟ.

ಚಮನನಿಗೆ ಮರವು ಹೆಚ್ಚಾದರೂ ಅವನೆಂದೂ ಬುದ್ಧಿಪೂರ್ವಕ ಕರ್ತವ್ಯಗಳನ್ನು ಅಲಕ್ಷಿಸಿದವನಲ್ಲ. ಒಮ್ಮೆ ಜಯಪುರಕ್ಕೆ ಹೋದಾಗ ತನ್ನ ಹಿಂದಿನ ಸಹೋದ್ಯೋಗಿಗಳೊಡನೆ ಹರಟೆ ಹೊಡೆಯುತ್ತ ಮೈಮರೆತು, ಜೋಬನೇರಕ್ಕೆ ಹೊರಡುವ ಕೊನೆಯ ಟ್ರೇನನ್ನು ತಪ್ಪಿಸಿಕೊಂಡ. ಆದರೆ ಮರುದಿನ ಮುಂಜಾನೆ ಮೊದಲನೆ ಕ್ಲಾಸು ಅವನದೇ ಇದ್ದುದರಿಂದ ಮಧ್ಯರಾತ್ರಿ ಜಯಪುರದಿಂದ ಹೊರಡುವ ಅಸಲಪೂರ - ಜೋಬನೇರದಲ್ಲಿ ನಿಲ್ಲಲಾರದ ಟ್ರೇನಿನಿಂದ ಫುಲೇರಾಕ್ಕೆ ಹೋಗಿ ಅಲ್ಲಿಂದ

ರಾತ್ರಿಯಲ್ಲಿ ಹೊರಡುವ ಟ್ರೇನಿನಿಂದ ಅಸಲಪೂರಕ್ಕೆ ಬಂದು ಸ್ಟೇಷನ್ನಿನ ಮೇಲೆಯೇ ಉಳಿದ ವೇಳೆ ಕಳೆದು ಇನ್ನು ಕತ್ತಲಿರುವಾಗಲೇ ಅಲ್ಲಿಂದ ನಡೆಯುತ್ತಲೇ ಜೋಬನೇರಕ್ಕೆ ಬಂದಿದ್ದು ಬೆಳಿಗ್ಗಿನ ಕ್ಲಾಸು ತೆಗೆದುಕೊಂಡಿದ್ದ! ಜೋಬನೇರದ ಎಷ್ಟು ಶಿಕ್ಷಕರು ತಾನೇ ಹೀಗೆ ಮಾಡುವುದು ಸಾಧ್ಯವಿತ್ತು? ಮುಂಜಾಗ್ರತೆ ಇದ್ದರೆ ಅದನ್ನೆಲ್ಲ ತಪ್ಪಿಸಬಹುದಾಗಿತ್ತು, ಆ ಮಾತು ಬೇರೆ.

ಕೌಲನ ಮರವು ಮತ್ತು ಮುಂಜಾಗ್ರತೆಯ ಅಭಾವದಿಂದ ನಾವೂ ಸಾಕಷ್ಟು ತೊಂದರೆಗೆ ಒಳಗಾಗಿದ್ದೇವೆ. ಬೇಸಿಗೆಯ ರಜಾದಿನಗಳಲ್ಲಿ ನಾವು ಕಾಶ್ಮೀರಕ್ಕೆ ಹೋಗಬೇಕೆಂದು ನಿರ್ಧರಿಸಿದ್ದೆವು. ತಾನೂ ಬಹಳ ವರ್ಷಗಳಿಂದ ತಾಯ್ನಾಡಿಗೆ ಹೋಗಿರದ್ದರಿಂದ ಚಮನನೂ ಆ ವರ್ಷ ಹೋಗುವುದನ್ನು ನಿರ್ಧರಿಸಿ ನಾವೆಲ್ಲ ಒಟ್ಟಿಗೇ ಹೊರಡೋಣವೆಂದು ಅವನೇ ಸೂಚಿಸಿದ. ಜೋಬನೇರದಿಂದ ದಿಲ್ಲಿಗೆ ಹೋಗುತ್ತಿದ್ದ ಅಜಮೇರ್ ಪ್ಯಾಸೆಂಜರದಲ್ಲಿ ಮಲಗಿ ಹೋಗಲು ಅವಕಾಶವಿತ್ತು. ಆದರೂ ಫುಲೇರಾ - ರಿಂಗಸ್‌ಗಳ ಮೇಲಿನಿಂದ ಹೋಗುತ್ತಿದ್ದ ಎಕ್ಸಪ್ರೆಸ್ ಟ್ರೇನಿನಿಂದ ನಂತರ ಹೊರಟು, ಬೇಗ (Start late and reach early) ಸೇರಬಹುದು ಎಂದು ಸೂಚಿಸಿದ. ನಾವು ಜೋಬನೇರದಿಂದ ಹೊರಡುವಾಗ ಬಸ್ಸು ಚಲಿಸಿದರೂ ಚಮನನ ಸುಳಿವೇ ಇಲ್ಲ! ಕೊನೆಗೆ ದೂರದಲ್ಲಿ ಅವನನ್ನು ಕಂಡು ಮೋಟಾರು ನಿಲ್ಲಿಸಿದರೆ. "ತಾಳಿ, ಸಿಗರೇಟು ಕೊಳ್ಳುತ್ತೇನೆಂದು" ಧಾವಿಸಿದ. ಟ್ರೇನು ತಪ್ಪಿ ಹೋಗಬಹುದೆಂದು ಉಳಿದವರ ಗದ್ದಲವೊ ಗದ್ದಲ. ಚಮನ ಸೂಚಿಸಿದ ಟ್ರೇನಿಗಾಗಿ ಫುಲೇರಾದಲ್ಲಿ ನಿಂತರೆ ಅದು ಎರಡು ತಾಸು ತಡವಾಗಿ ಬಂದಿತು. ಕೊನೆಗೊಮ್ಮೆ ಬಂದಾಗ ಕೂಡ್ರಲೂ ಸ್ಥಳ ಸಿಗದೇ ನಿಂತೇ ದಿಲ್ಲಿಯ ತನಕ ಪ್ರವಾಸ ಮಾಡಬೇಕಾಯಿತು. ದಿಲ್ಲಿಯಿಂದ ಪಠಾಣಕೋಟಕ್ಕೆ "ಶ್ರೀನಗರ ಎಕ್ಸಪ್ರೆಸ್" ಸಾಯಂಕಾಲ ಹೊರಡಲಿತ್ತು. ಅಲ್ಲಿಯ ತನಕ ವೇಳೆ ಕಳೆಯಲಿಕ್ಕೆ ಯಾವುದಾದರೂ ಪಿಕ್ಚರಿಗೆ ಹೋಗೋಣವೆಂದ. ಎಲ್ಲೆಲ್ಲೂ ಟಿಕೇಟು ಸಿಗದೇ ದಿಲ್ಲಿಯ ಉರಿಬಿಸಿಲಲ್ಲಿ ನಮ್ಮನ್ನು ಸುತ್ತಾಡಿಸಿದ. ಕೊನೆಗೊಮ್ಮೆ ಯಾವುದೋ ಥೇಟರಿನಲ್ಲಿ ತಿಕೀಟು ಸಿಗುವಂತಾಗಿ, ಏಯರ್‌ಕಂಡೀಶನ್ಡ್ ಕಟ್ಟಡದಲ್ಲಿಯ ತಂಪಿಗೆ ಸುಖಾಸನಗಳ ಮೇಲೆ ಹಾಯಾಗಿ ಒರಗಿ ರಾತ್ರೆಯ ನಿದ್ರೆಯನ್ನು ಪೂರ್ತಿಗೊಳಿಸಿದೆವು! ಮುಂದಿನ ಪ್ರಯಾಣ ಸುಖಕರವಾಗಬೇಕೆಂದು ಸ್ಥಳ ಹಿಡಿಯಲು ಜಮಖಾನ, ಛಾದರುಗಳೊಂದಿಗೆ ರೇಲ್ವೆಯಾರ್ಡಿಗೇ ಚಮನ್ ಓಡಿದ. ಟ್ರೇನು ಪ್ಲಾಟುಫಾರ್ಮಿಗೆ ಬಂದು ನಿಂತು ಹತ್ತು ನಿಮಿಷಗಳಾದರೂ ಅವನ ಸುಳಿವು ಸಿಗದ್ದರಿಂದ ನಾನೇ ಮುಂದುವರಿದು ಒಂದು ಡಬ್ಬಿಯನ್ನು ಹೊಕ್ಕು ನಾಲ್ಕು ಮಲಗುವ ಸ್ಥಳಗಳನ್ನು ಹಿಡಿದೆ. ಅವುಗಳಲ್ಲಿ ಒಂದನ್ನು ಪತ್ನಿಗೆ ಕೊಟ್ಟೆ. ಸಾಮಾನು ಇಡುವ ಸ್ಥಳವೊಂದನ್ನು ಪೈಲುವಾನನೊಬ್ಬನಿಗೆ ದಾನಮಾಡಿ ಉಳಿದೆರಡು ಸ್ಥಳ ಕಾಯುವಂತೆ ಅವನಿಗೆ ವಿನಂತಿ ಮಾಡಿಕೊಂಡು, ಚಮನನನ್ನು

ಹುಡುಕಲು ಹೊರಟೆ. ಯಾವುದೋ ಸಣ್ಣ ಡಬ್ಬಿಯಲ್ಲಿ ಅವನು ಮೂವರಿಗೆ ನಿಲ್ಲುವ ಸ್ಥಳ ಕಾದಿರಿಸಿ ಕೊಡ್ರುವ ಸ್ಥಳಗಳಿಗಾಗಿ ಉಳಿದ ಪ್ರಯಾಣಿಕರೊಂದಿಗೆ ಚರ್ಚಿಸಲಾರಂಭಿಸಿದ್ದ! ಒಳ್ಳೆಯ ಶಿಕ್ಷಕ. ವ್ಯವಹಾರ ಚತುರನಿರಬೇಕೆಂಬ ನಿಯಮವಿಲ್ಲವೆಂದು ಅರಿತು ಅವನನ್ನು ಅಲ್ಲಿಂದ ಕರೆದು ತಂದೆ. ಅಷ್ಟೆಲ್ಲ ಜನಸಂದಣಿ ಇರುವಾಗ ಮಲಗಲು ಸ್ಥಳ ಹಿಡಿಯುವದು ಸಾಧ್ಯವಾಗುವುದೆಂಬುದು ಅವನ ಕಲ್ಪನಾಸಾಮ್ರಾಜ್ಯದ ಹೊರಗಿನ ಮಾತಾಗಿತ್ತು. ಶ್ರೀನಗರ ಮುಟ್ಟಿದ ಮರುದಿನ ಮಧ್ಯಾಹ್ನದ ಭೋಜನವನ್ನು ತಾನು ತರುವದಾಗಿಯೂ ನಾವು ಹೊಟೇಲಿನಲ್ಲಿ ಊಟ ಮಾಡಬಾರದಾಗಿಯೂ ಹತ್ತು ಸಲ ಹೇಳಿದ್ದ. ಹನ್ನೆರಡು ಗಂಟೆಯಾಯಿತು ಒಂದು ಗಂಟೆಯಾಯಿತು ಚಮನನ ಸುಳಿವೇ ಇಲ್ಲ. ಮೂರು ಗಂಟೆಯ ತನಕ ಕಾದು, ಕೊನೆಗೆ ಹೊರಗೆಲ್ಲೂ ಊಟ ಸಿಗದ್ದರಿಂದ ಆಲೂ ಟಿಕಿಯಾ, ಹಾಲಿನಲ್ಲಿ ಹಾಕಿದ ಜಿಲೇಬಿ ತಿಂದು, ಚಹ ಕುಡಿದು ಹಸಿವನ್ನು ಮರೆಸಿದೆವು ಮರುದಿನ ಬಂದ ಚಮನನಿಗೆ ತಾನು ಊಟ ತರುವುದನ್ನು ಹೇಳಿದ್ದಾಗಲೀ, ಅದನ್ನು ಮರೆತದ್ದಾಗಲಿ ನೆನಪಿರಲಿಲ್ಲ!

ಚಮನ್, ಸೀಬಾಕಂಪನಿಯ ಭಾರೀ ಅಧಿಕಾರಿಯೊಬ್ಬರ ಏಕಮಾತ್ರ ಪುತ್ರಿಯನ್ನು ವಿವಾಹವಾಗಿ ಮನೆಯೊಳಗಿನ ಮತ್ತು ಹೊರಗಿನ ಶಾಂತಿಗಳನ್ನು ಕೆಡಿಸಿಕೊಂಡಿದ್ದ. ಅವಳಾದರೋ ಮುಂಬಯಿಯ ಅತ್ಯಾಧುನಿಕ ಪರಿಸರದಲ್ಲಿ ಬೆಳೆದವಳು. ತನ್ನ ಸುಖ, ಶಾಂತಿ, ಸಾಮಾಜಿಕ ಸ್ಥಾನಮಾನಗಳಿಗಾಗಿ ಪತಿ ಬೇಕೆಂದು ಭಾವಿಸಿದವಳಾದರೆ ಈತ ಕಾಶ್ಮೀರದ ಪಂಡಿತರ ಸಾಂಪ್ರದಾಯಿಕ ಮನೆತನಕ್ಕೆ ಸೇರಿದವ. ಗರತಿಯಾದವಳು ಗಂಡನಿಗಾಗಿ, ಮನೆಗಾಗಿ ನಿರಂತರ ದುಡಿಯಬೇಕು. ಕಾಲಕಾಲಕ್ಕೆ ಚಹಾ, ತಿಂಡಿ, ಊಟ - ಉಪಚಾರಗಳನ್ನು ಆಕೆ ಒದಗಿಸಬೇಕು, ಎಂದು ದೃಢವಾಗಿ ನಂಬಿದ್ದ. ವಿವಾಹವಾಗಿ ಮೊದಲಸಲ ಜೋಬನೇರಕ್ಕೆ ಬಂದಾಗಲೇ ನರಕದರ್ಶನವಾದಂತಾಗಿ ಅವಳು ಹೌಹಾರಿದ್ದಳು. ಚಮನನು ಮಾಡಬಹುದಾದ ಒಂದೆರಡು ಕೆಲಸ ಹೇಳಿದಾಗ ಅವನು ಮಾಡಿರಲಿಲ್ಲ. ಅಷ್ಟೇ ಅಲ್ಲ ಅತ್ತೆ, ಅದು ಸೊಸೆಯ ಕೆಲಸವೆಂದು ಅವಳಿಂದಲೇ ಮಾಡಿಸಿಬಿಟ್ಟಿದ್ದಳು. ಮದುವೆಯಾಗಿ ಬಂದ ಹೊಸದರಲ್ಲಿ ನಮ್ಮಲ್ಲಿ ಬಂದಾಗಲೇ ಮದುಮಗಳು ಚಮನನ ಮತ್ತು ಅವನ ತಾಯಿಯ ವಿರುದ್ಧ ಹತ್ತಾರು ದೂರು ಹೇಳಿದಳು. ಅವನ್ನೆಲ್ಲ ಖಂಡಿಸುತ್ತಿದ್ದ, ಚಮನ್, ಇಬ್ಬರಿಗೂ ಸಮಾಧಾನ ಮಾಡಿ ಕಳಿಸಿದರೂ ಅದರಿಂದ ಏನೂ ಲಾಭವಾಗಲಿಲ್ಲವೆಂದು ತೋರುತ್ತದೆ. ಮರುದಿನ ತರಕಾರಿ ತರಲು ಅವನನ್ನು ಕಳಿಸಿದಾಗ ಅದನ್ನು ಕೊಂಡು ತಂದು, ಯಾರ ಮನೆಯನ್ನೋ ಹೊಕ್ಕು ಇಸ್ಪಿಟಾಟದಲ್ಲಿ ತಾನು ಬಂದ ಕೆಲಸ ಮರೆತು ಬಿಟ್ಟಂತೆ! ಪತ್ನಿ ರುದ್ರಾವತಾರ ತಾಳಿ ಊರೆಲ್ಲ ಅವನಿಗಾಗಿ ಹುಡುಕಿದಳಂತೆ. ಅವಳು ತಾನು ಎಮ್. ಎ. ಮುಗಿಸುತ್ತೇನೆಂದಾಗ ಆನಂದದಿಂದ ವಿಮಾನ ಮಾರ್ಗವಾಗಿ ಅವಳನ್ನು ಮುಂಬೈಗೆ

ಕಳಿಸಿದ. ಆದರೆ ಅಲ್ಲಿಯೂ ಆಕೆಗೆ ನೆಮ್ಮದಿಯಾಗಲಿಲ್ಲವೆಂದು ತೋರುತ್ತದೆ. ಕಲಿಯುವುದನ್ನು ಬಿಟ್ಟು ಜೋಬನೇರಿಗೆ ತಿರುಗಿ ಓಡಿ ಬಂದಳು. ಆಗ ಅತ್ತೆ, ಕಾಶ್ಮೀರಕ್ಕೆ ಮರಳಿದ್ದರು. ಪತ್ನಿಯನ್ನು ಸಂತೋಷವಾಗಿಡಲು. ಪ್ರಾಧ್ಯಾಪಕರಿಗೆಂದು ಕಾಲೇಜಿನವರು ಕಟ್ಟಿಸಿದ ಹೊಸಗೃಹವೊಂದನ್ನು ಕಷ್ಟದಿಂದ ದೊರಕಿಸಿ ಸಾವಿರಾರು ರೂಪಾಯಿ ಖರ್ಚುಮಾಡಿ, ಹೊಸ ಬಣ್ಣ ಬಳಿದು, ಸೋಫಾಸೆಟ್, ರತ್ನಗಂಬಳಿಗಳನ್ನು ಚಮನ್ ತರಿಸಿದ. ಆದರೆ ಲಾಲ್‌ಗೋಟಾ ಘಟನೆಗಳನ್ನು ನೆಪಮಾಡಿಕೊಂಡು ಮೊದಲಿನಿಂದಲೂ ಆತನ ಬಗ್ಗೆ ಅನಾದರ ತಾಳಿದ ಬಿ.ಪಿ. ಉದಯಪುರಕ್ಕೆ ಅವನನ್ನು ಕಳಿಸಿಬಿಟ್ಟರು. ರವೀಂದ್ರ ಶರ್ಮ ಬೇರುಕೀಟದ ಮೇಲೆ ಸಂಶೋಧನೆ ನಡಿಸಿದ್ದರಿಂದ ಅದರ ಸಮಗ್ರಹಕ್ಕಾಗಿ ಲಾಲಗೋಟಾಕ್ಕೆ ಹೊರಟಿದ್ದ. ಅವುಗಳ ಬಗ್ಗೆ ತನಗೆ ಹೆಚ್ಚು ತಿಳಿದುದ್ದರಿಂದ ಚಮನನಿಗೆ ತನ್ನೊಡನೆ ಬರುವಂತೆ ವಿನಂತಿಸಿಕೊಂಡ. ಕೈಲಾಸ್ ತಾನೂ ಬರುತ್ತೇನೆಂದು ಹೊರಟ. ಇಬ್ಬರ ಸಂಶೋಧನಾ ವಿಧಾನದಲ್ಲಿ ಆಕಾಶ - ಪಾತಾಳಗಳಷ್ಟು ಅಂತರವಿದ್ದದ್ದರಿಂದ, ಊಟ-ತಿಂಡಿಯ ಅನುಕೂಲವಿಲ್ಲದ ದುಡಿತ ತನಗೆ ಸಾಧ್ಯವಾಗದೇ ಕೈಲಾಸನು ಅವರಿಗಿಂತ ಮೊದಲೇ ಹಿಂದಿರುಗಿ ಬಂದು ಕೌಲನ ಬಗ್ಗೆ ಏನೇನೋ ದೂರು ಹೇಳಿದ. ಇಂಥ ಅವಕಾಶವನ್ನೇ ನೋಡುತ್ತಿದ್ದ ಬಿ.ಪಿ.ಯವರು ಡೀನರಿಗೆ ದೂರಿಕೊಂಡರು. ಎರಡು ದಿನಗಳ ನಂತರ ಬಂದ ಚಮನನಿಗೆ ಎಲ್ಲ ವಿಷಯ ತಿಳಿದಾಗ ತನ್ನನ್ನು ವಿಚಾರಿಸದೇ, ಸತ್ಯಸಂಗತಿಯ ಬಗ್ಗೆ ಇತರರಿಂದಲೂ ವಿವರಣೆ ಪಡೆಯದೇ ತಮ್ಮದೇ ನಿರ್ಣಯ ಕೈಕೊಂಡ ಬಗ್ಗೆ ಬಿ.ಪಿ.ಯವರನ್ನು ತರಾಟೆಗೆ ತೆಗೆದುಕೊಂಡು ಬಿಟ್ಟ! ಅವರು ಎಂದಿನಂತೆ ಏನೂ ಆಗಿಲ್ಲವೆಂಬ ತಟಸ್ಥ ಭಾವದಿಂದ ನಗುಮುಖರಾಗಿಯೇ ಇದ್ದರು. ಚಮನ್, ಠಕ್ಕ ನರಿಯೊಡನೆ ದುಡಿಯುವದಕ್ಕಿಂತ ರಾಠೋಡ ಸಿಂಗನೊಡನೆ ದುಡಿಯುವುದು ಮೇಲೆಂದು ಉದಯಪುರಕ್ಕೆ ನಡೆದು ಬಿಟ್ಟ.

ಯಾದವನು ಉದಯಪುರಕ್ಕೆ ಹೋದಾಗ ಅವನ ಸ್ಥಳದಲ್ಲಿ ತಾತ್ಪೂರ್ತಿಕವಾಗಿ, ಉದಯಪುರದ ಸಂಶೋಧನಾಲ್ಯದಲ್ಲಿ ಸಹಾಯಕನೆಂದು ಕೆಲಸ ಮಾಡುತ್ತಿದ್ದ ತಿವಾರಿ ಬಂದಾಗ ಬಿ.ಪಿ.ಯವರು ಹೌಹಾರಿದರು. ನಮಗೆಲ್ಲ ಬೇರೆ ಯಾರನ್ನೋ ತಾವು ತರುವವರಿದ್ದೇವೆಂದು ಹೇಳುತ್ತಲೇ ಇದ್ದರವರು. ನಂತರ ತಿವಾರಿಗೆ ತಾನೇ ಸಿಫಾರಸು ಮಾಡಿದ್ದೆ! ಎಂದು ಹೇಳಿದ್ದರೂ ಅವನು ಬಿ.ಕೆ.ಯವರ ಪ್ರಯತ್ನದಿಂದ ಬಂದಿದ್ದನೆಂದು ನಮಗೆಲ್ಲ ತಿಳಿಯಿತು. ಕಾನಪುರದವನಾಗಿದ್ದ ಈ ತಿವಾರಿ, ತುಂಬ ಧೂರ್ತ. ಸ್ಥಿರವಾದ ಅಧ್ಯಾಪಕ ವೃತ್ತಿ ದೊರಕಿಸಲು ಬಿ.ಪಿ.ಯವರೇ ಗತಿಯೆಂದು ಅವರನ್ನು ಸಂತೋಷವಾಗಿಡಲು ಹಾತೊರೆಯಲಾರಂಭಿಸಿದ. ಕ್ಲಬ್ಬಿನಲ್ಲಿ ಚಹಾ ತಯಾರಾದ ಕೂಡಲೇ ತಾನೇ ಅವರನ್ನು ಕರೆಯಲು ಹೋಗುವುದು, ಸಿಗರೇಟು ಕೊಟ್ಟು

ಹೊತ್ತಿಸುವುದು, ಅವರು ಬರುವಾಗ ಪರದೆ ಎತ್ತಿ ಹಿಡಿಯುವದು, ಅವರ ರಾಜಕಾರಣದಲ್ಲಿ ಹೆಚ್ಚಿನ ಆಸಕ್ತಿ ವಹಿಸುವುದು, ಇತರರ ಬಗ್ಗೆ ದೂರು ಹೇಳುವುದು ಮಾಡಲಾರಂಭಿಸಿದ. ಅವರಿಲ್ಲದಾಗ ಟೇಬಲ್ ಮೇಲಿನ ಕಾಗದ ಪತ್ರಗಳನ್ನು ಓದಲೂ ಹಿಂಜರಿಯುತ್ತಿರಲಿಲ್ಲ. ಅವರ ಟೊಳ್ಳುತನದ ಸಂಶೋಧನೆಗಳನ್ನು ಮಾಡಿ ಬಂದು ನಮಗೆ ಹೇಳುವವನೂ ಅವನೇ. ತನ್ನ ಸಂಶೋಧನಾ ಪೇಪರುಗಳನ್ನು ತಯಾರಿಸಲು ನನ್ನ ಸಹಾಯವನ್ನು ಪಡಯುತ್ತಿದ್ದ. ಹೀಗಾಗಿ ನನ್ನನ್ನು 'ಗುರೂ' ಎಂದು ಕರೆಯಲಾರಂಭಿಸಿದ. ಅವನಿಗೆ ಸತ್ಯ, ಪ್ರಾಮಾಣಿಕತೆ, ನೀತಿಗಳ ದೂರದ ಸಂಪರ್ಕವೂ ಇರಲಿಲ್ಲ. ತನಗೆ ಅನುಕೂಲವಾಗುವಂಥ ಯಾವ ಕೆಲಸ ಮಾಡಲು ಹಿಂಜರಿಯುತ್ತಿರಲಿಲ್ಲ. ತಾನು ಕಲಿಸುವ ವಿಷಯಗಳಲ್ಲಷ್ಟೇ ಅಲ್ಲ ಇತರರ ವಿಷಯಗಳಲ್ಲೂ ತನಗೆ ಬೇಕಾದ ವಿದ್ಯಾರ್ಥಿಗಳಿಗೆ ಹೆಚ್ಚಿನ ಗುಣಗಳನ್ನು ದೊರಕಿಸಿಕೊಡಲು ಯತ್ನಿಸುತ್ತಿದ್ದ. ಕೆಲವು ವಿದ್ಯಾರ್ಥಿಗಳನ್ನು ತನ್ನವರನ್ನಾಗಿ ಮಾಡಿಕೊಂಡು ಅವರಿಂದ ಬೇಕಾದ ಕೆಲಸ ಮಾಡಿಸುತ್ತಿದ್ದ. ಪತ್ನಿ ತವರಿಗೆ ಹೋಗಬೇಕಾದಾಗ ವಿದ್ಯಾರ್ಥಿಯೊಬ್ಬ ಜಯಪುರ ತನಕ ಹೋಗಿ ಟ್ರೇನು ಹತ್ತಿಸಬೇಕು. ಇಂಥ ಸೇವೆಗಾಗಿಯೇ ಪ್ರಾಧ್ಯಾಪಕರಿಗೆ ಹೇಳಿಸಿ. ಅಂಥ ವಿದ್ಯಾರ್ಥಿಗೆ ಹಾಜರಿ ಹಾಕಿಸಿ ಪರೀಕ್ಷೆಯಲ್ಲಿ ಅವನಿಗೆ ಲಾಭವಾಗುವಂತೆ ನೋಡಿಕೊಳ್ಳುತ್ತಿದ್ದ. ನಮ್ಮಲ್ಲಿ ಅನೇಕ ಸಹಕಾರಿ ಕಾರ್ಯಕ್ರಮಗಳ ವಿಫಲಗೊಂಡರೂ ಶಿಕ್ಷಕ ವಿದ್ಯಾರ್ಥಿಗಳ ಪರಸ್ಪರ ಲಾಭದ ಸಹಕಾರಿ ಕೆಲಸಗಳು ಹೆಚ್ಚೆಚ್ಚು ಸಂಖ್ಯೆಯಲ್ಲಿ ಬೆಳೆಯುತ್ತಿವೆ.

೨೧. ಸಂಶೋಧನಾ ಸೌಕರ್ಯಗಳು

ಪ್ರತಿ ದಿನದ ಆಫೀಸ ಕೆಲಸಗಳನ್ನು ಮುಂದೂಡುವುದರಲ್ಲಿ ನಮ್ಮನ್ನು ಸರಿಗಟ್ಟುವವರು ಇನ್ನೊಂದು ಜನಾಂಗವಿರಲಿಕ್ಕಿಲ್ಲ. ಖಾಸಗಿ ಕೆಲಸವಿರಲಿ, ಸರಕಾರಿ ಕೆಲಸವಿರಲಿ, ಕಾಗದ ಪತ್ರಗಳು ಕಾಲುಮುರಿದುಕೊಂಡು ಫಾಯಿಲುಗಳಲ್ಲಿ ಬಿದ್ದಿರುವುದು ವಾಡಿಕೆ. ಜನರು ಬಾಬೂಜಿಗಳಿಗೆ (ಗುಮಾಸ್ತರಿಗೆ) ಚಹ ಕುಡಿಸಿ, ಕೈ ಬಿಸಿಮಾಡಿ ಮನ ಒಲಿಸಿ ತಮ್ಮ ಕೆಲಸ ಮಾಡಿಸಿಕೊಳ್ಳಬೇಕಾದರೆ, ಸರಕಾರವು, ನೆನಪಿನ ಪತ್ರಗಳನ್ನು ಒಂದರ ಹಿಂದೆ ಇನ್ನೊಂದನ್ನು ಕಳಿಸಿ ಕೊನೆಗೆ ಕಳಿಸದಿದ್ದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುವದೆಂದು ಬೆದರಿಸಿದಾಗಲೇ ಆ ಕಾಗದ ಪತ್ರಗಳು ಓಡಾಡಲು ಪ್ರಾರಂಭವಾಗುವವು. ಕಾಗದ ಪತ್ರಗಳು, ಫಾಯಿಲುಗಳು ಕಾಣೆಯಾಗುವುದು ತೀರಾ ಸಾಮಾನ್ಯ ಸಂಗತಿ. ವಿವಿಧ ಫಾಯಿಲುಗಳ ಮೇಲೆ 'ಕೂಡಲೇ' 'ತುರ್ತು' 'ವಿಲಂಬ ಮಾಡದೇ' ಎಂದೆಲ್ಲ ಬರೆದರೂ ಅವು ಇದ್ದಲ್ಲಿಯೇ ಇರುತ್ತವೆ! ಉದಯಪುರ ವಿಶ್ವವಿದ್ಯಾಲಯ ಈ ಸಂಪ್ರದಾಯಕ್ಕೆ ಹೇಗೆ ಅಪವಾದವಾದೀತು? ಅಮೇರಿಕನ್ ಸರಕಾರ ಮತ್ತು ವಿಶ್ವವಿದ್ಯಾಲಯಗಳು ಭಾರತೀಯ ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ತರಬೇತಿ ಕೊಡುವುದಲ್ಲದೇ ನಮ್ಮ ದೇಶದಲ್ಲಿ ದೊರೆಯಲಾರದ ಸಂಶೋಧನಾ ಸಾಮಗ್ರಿಗಳನ್ನೂ ಒದಗಿಸಲು ಒಪ್ಪಿಕೊಂಡಿದ್ದವು. ಅದಕ್ಕನುಸಾರವಾಗಿ ಬೇರೆ ಬೇರೆ ವಿಭಾಗಗಳಿಗೆ ಬೇಕಾಗುವ ಸಲಕರಣೆಗಳ ಟಿಪ್ಪಣಿ ಕಳುಹಿಸಲು ವಿಶ್ವವಿದ್ಯಾಲಯಕ್ಕೆ ಪತ್ರ ಬಂದು ಎರಡು ಮೂರು ತಿಂಗಳು ಕಳೆದು ಹೋದರೂ ಗುಮಾಸ್ತರು ನಿದ್ರಿಸುತ್ತಿದ್ದವರು, ನೆನಪಿನ ಪತ್ರ ಬಂದಾಗ ಮಾತ್ರ ಎಚ್ಚತ್ತು ಸಂಶೋಧನಾ ನಿರ್ದೇಶಕರಿಗೆ ಕಳಿಸಿದರು. ಅವರು ಅದರ ಪ್ರತಿಗಳನ್ನು ಮಾಡಿಸಿ ತಮ್ಮ ಪತ್ರದ ಪ್ರತಿಯೊಂದಿಗೆ ಕಳಿಸಲಿಕ್ಕೆ ಒಂದು ವಾರವೇ ಕಳೆಯಿತು, ಡೀನರ ಟೇಬಲ್ ಮೇಲೆ ಒಂದು ವಾರ ವಿರಮಿಸಿ, ಬಿ.ಪಿ.ಯವರ ಟೇಬಲ ಮೇಲೆ ಮತ್ತೊಂದು ವಾರ ಉರುಳಿತು. ನಮ್ಮ ವಿಭಾಗಕ್ಕೆ ಬಂದ ಪ್ರತಿ, ನೋಡಿ ಅದನ್ನು ಈ ಕೂಡಲೇ ಕಳಿಸಬೇಕೆಂದು ಆಫೀಸಿನ ಫೋನು ಬಂದಾಗ ಎಲ್ಲರೂ ದುಃಸ್ವಪ್ನ ಬಿದ್ದವರಂತೆ ಎಚ್ಚತ್ತರು. ಎರಡು ದಿನಗಳಲ್ಲಿ ಈ ಯಾದಿ ತಯಾರಿಸಿ ಕೊಡಬೇಕೆಂದು ಪ್ರತಿಯೊಬ್ಬರಿಗೂ ಒಂದೊಂದು ಕೆಲಸ ಒಪ್ಪಿಸಿಕೊಟ್ಟರು. ವಾಚನಾಲಯದೊಳಗಿಂದ

ಅಮೇರಿಕೆಯ ವೈಜ್ಞಾನಿಕ ಉಪಕರಣಗಳನ್ನು ಪೂರೈಸುವ ಕಂಪನಿಗಳ ತೀರ ಹಳೆಯ ಕೆಟಲಾಗಗಳನ್ನು ಹೊರಗೆಳೆದು ನಮಗೆ ಏನೇನು ಬೇಕಾಗಬಹುದು? ಎಂದು ದೊಡ್ಡ ಯಾದಿಗಳನ್ನು ತಯಾರಿಸಬೇಕಾಯಿತು. ಪ್ರತಿಯೊಂದು ವಿಭಾಗದವರೂ ಆ ಕೆಟಲಾಗಗಳಿಗಾಗಿ ಬಡಿದಾಡುತ್ತಿದ್ದುದರಿಂದ ರಾತ್ರೆಯೂ ವಾಚನಾಲಯವನ್ನು ತೆರೆದಿಡಬೇಕಾಯಿತು. ಕೆಲವು ಡಿಪಾರ್ಟಮೆಂಟಿನವರು ತಲೆಕೆಡಿಸಿಕೊಳ್ಳುವ ಗೋಜಿಗೆ ಹೋಗದೇ ಬೇರೆಯವರ ಯಾದಿಯಿಂದಲೇ ಒಂದೊಂದು ಉಪಕರಣಗಳನ್ನು ಸೇರಿಸಿ ತಮ್ಮದನ್ನು ಸಿದ್ಧಮಾಡಿಬಿಟ್ಟರು! ಪ್ರತಿಯೊಬ್ಬರೂ ಲಕ್ಷರೂಪಾಯಿಯ ಸಲಕರಣೆಗಳನ್ನು ಕೇಳಿದಾಗ ಕಾಲೇಜಿನದು ಕೋಟಿ ರೂಪಾಯಿಗೂ ಮಿಕ್ಕಿರಬೇಕು. ಹೆಚ್ಚಿನ ಅಮೇರಿಕನ್ ವಿಶ್ವವಿದ್ಯಾಲಯಗಳಿಗೆ ಇಷ್ಟೊಂದು ಉಪಕರಣಗಳನ್ನು ಕೊಳ್ಳುವ ಸಾಮರ್ಥ್ಯ ಇಲ್ಲದಿರುವಾಗ ನಮ್ಮ ಬೇಡಿಕೆಯನ್ನು ನೋಡಿ ಅವರು ತುಂಬ ನಕ್ಕಿರಬೇಕು!

ನಾನಲ್ಲಿ ಇದ್ದ ಮೂರು ವರ್ಷಗಳಲ್ಲಿ ಇವುಗಳಲ್ಲಿಯ ಯಾವುದೊಂದು ಉಪಕರಣವೂ ಬಾರದಿದ್ದರೂ ಅದಕ್ಕೂ ಮೂರು ವರ್ಷದ ಪೂರ್ವದಲ್ಲಿ ಕಳಿಸಿದ ಯಾದಿಯಿಂದ ಯಾವವೋ ಉಪಕರಣಗಳು ಬರಲಿವೆ! ಎಂದು ಬಿ.ಪಿ. ಭಾರೀ ಹುರುಪಿನಲ್ಲಿದ್ದರು. ಅಮೇರಿಕೆಯ ವಿಶ್ವವಿದ್ಯಾಲಯವೊಂದು ಅವನ್ನು ನಮ್ಮ ಸರಕಾರಕ್ಕೆ ಕೊಡಮಾಡಿ, ಅವರು ದಿಲ್ಲಿಯ ಕಚೇರಿಗೆ ಕಳಿಸಿ, ಅಲ್ಲಿಂದ ಉದಯಪುರದಲ್ಲಿದ್ದ ಅಮೇರಿಕನ್ ಸಲಹಾಗಾರರಿಗೆ ಮುಟ್ಟಿಸಿ, ಅವರು ಸಂಶೋಧನಾ ನಿರ್ದೇಶಕರಿಗೆ ಅವನ್ನು ಸಮಾರಂಭ ಒಂದರಲ್ಲಿ ಚಿತ್ರಗಾರರು - ಸುದ್ದಿಗಾರರು ಇವರ ಸಮಕ್ಷಮದಲ್ಲಿ ಭಾರತ - ಅಮೇರಿಕೆಯ ಮೈತ್ರಿಯ ಮೇಲೆ ಭಾಷಣ ಮಾಡಿ, ಆ ಉಪಕರಣಗಳನ್ನು ದಾನ ಮಾಡಿದ ಮೇಲೆ ಅದನ್ನು ಯಾರಿಗೆ ಕೊಡುವುದು? ಎಂದು ನಿರ್ಧಾರವಾಗುವ ತನಕ ಅಲ್ಲಿಯೇ ಇದ್ದು ನಂತರ ಅದು ಡೀನರ ಹೆಸರಿಗೆ ಜೋಬನೇರಕ್ಕೆ ಬಂದು ಬಿ.ಪಿ.ಯವರ ಕೈಸೇರಬೇಕಾದರೆ ಎಷ್ಟೋ ಕಾಲ ಕಳೆದುಹೋಗಿತ್ತು. ಅಂದಿನ ಚಹಾ ಸಂಘಕ್ಕೆ ಹೆಚ್ಚಿನ ಅಭಿಮಾನದಿಂದ ಬಂದು, ಸೂಕ್ಷ್ಮದರ್ಶಕದೊಳಗಿಂದ ಛಾಯಾಚಿತ್ರಗಳನ್ನು ತೆಗೆಯುವ ಭಾರೀ ಉಪಕರಣ ಒಂದನ್ನು ತಾವು ಅಮೇರಿಕೆಯಿಂದ ಪಡೆದಿರುವುದಾಗಿ ಹೇಳಿದರು! ಅವರ ಅನುಯಾಯಿಗಳೆಲ್ಲ ಅವರನ್ನು ಬಹುವಾಗಿ ಅಭಿನಂದಿಸಿ, ಅವರ ಮುಂದಾಲೋಚನೆಯನ್ನು ಕೊಂಡಾಡಿ ಅದರಿಂದ ಎಷ್ಟು ಬಗೆಯ ಸಂಶೋಧನೆಗಳನ್ನು ಕೈಕೊಳ್ಳಬಹುದು, ಎಷ್ಟೊಂದು ಪ್ರಬಂಧಗಳನ್ನು ಪ್ರಕಟಿಸಬಹುದು ಎಂದೆಲ್ಲ ಚರ್ಚಿಸಿದರಂತೆ! ನನ್ನ ಕ್ಲಾಸು ಇದ್ದುದರಿಂದ ಐದೇ ನಿಮಿಷಗಳಲ್ಲಿ ನಾನು ಎದ್ದು ಹೋಗಿದ್ದೆನಾದರೂ ನಂತರದ ವಿವರವನ್ನು ಸಹೋದ್ಯೋಗಿಗಳು ಒಪ್ಪಿಸುತ್ತಿದ್ದರು. ನಂತರ ಉಪಕರಣದ ದರ್ಶನ ಪಡೆಯಲು ಶಿಕ್ಷಕ ವೃಂದ ಬಿ.ಪಿ.ಯವರ ಖೋಲಿಗೆ ಧಾವಿಸಿತು. ಅದರ ಬೆಲೆ ಕಟ್ಟಿದರು. ಅದರ ಸಾಮರ್ಥ್ಯ ಊಹಿಸಿಕೊಂಡರು. ಆ

ಮಧ್ಯಾಹ್ನ ಬಿ.ಪಿ. ಆ ಉಪಕರಣದೊಂದಿಗೆ ನನ್ನ ಕೋಣೆಗೆ ಬಂದು ಅದು ಹೇಗೆ ಕೆಲಸ ಕೊಡುತ್ತದೆ ಎಂದು ನೋಡಲು ಹೇಳಿದರು. ಅದನ್ನು ಬಿಚ್ಚಿ ನೋಡುತ್ತೇನೆ, ಸೂಕ್ಷ್ಮದರ್ಶಕ್ಕೆ ಜೋಡಿಸಿ ಛಾಯಾಚಿತ್ರ ತೆಗೆಯುವ, ಮಿದುಳಿಲ್ಲದ ಕ್ಯಾಮರಾದ ದೇಹ ಮಾತ್ರ ಅದರಲ್ಲಿತ್ತು! ಮೂವತ್ತರಿಂದ ಅರವತ್ತು ಡಾಲರಿಗಿಂತ ಹೆಚ್ಚಿನ ಬೆಲೆ ಅದಕ್ಕಿರಲಿಲ್ಲ. ಸಾಲದ್ದಕ್ಕೆ ಅಮೇರಿಕೆಯಲ್ಲಿ ಹೊಸದಾಗಿ ತಯಾರಾದ ಸೂಕ್ಷ್ಮದರ್ಶಕಕ್ಕೆ ಜೋಡಿಸಲು ಅದನ್ನು ತಯಾರಿಸಿದ್ದರಿಂದ ನಮ್ಮಲ್ಲಿಯ ಹಳೇ ಮಾದರಿಯ ಸೂಕ್ಷ್ಮದರ್ಶಕಗಳಿಗೆ ಅದನ್ನು ಜೋಡಿಸಲು ಬರುತ್ತಿದ್ದಿಲ್ಲ. ಅದಕ್ಕೆ ಬೇಕಾಗುವ ಲೆನ್ಸಗಳೂ ಇಲ್ಲದ್ದರಿಂದ ಬೇರಾವ ಚಿತ್ರಗಳನ್ನೂ ತೆಗೆಯಲು ಬರುವಂತಿರಲಿಲ್ಲ. ಅದಕ್ಕೊಂದು ಹೂಮಾಲೆ ಹಾಕಿ ಸರಸ್ವತಿಯ ಪಟದೊಡನೆ ಪೂಜೆ ಮಾಡುವ ಹೊರತು ಇನ್ನಾವ ಪ್ರಯೋಜನವೂ ಇರಲಿಲ್ಲ! ಅದಕ್ಕೆ ಬೇಕಾಗುವ ಐದುನೂರಕ್ಕಿಂತ ಹೆಚ್ಚು ಡಾಲರಿನ ಬೆಲೆಯ ಸೂಕ್ಷ್ಮದರ್ಶಕ ಯಂತ್ರವನ್ನು ಕಳಿಸಲು ಬರೆಯುವುದಾಗಿ ಬಿ.ಪಿ. ಹೇಳಿದರು. 'ನಮ್ಮ ಹತ್ತಿರ ಹಗ್ಗವಿದೆ. ಕಟ್ಟಲು ಎಮ್ಮೆಯನ್ನು ಕಳಿಸಿ' ಎಂದು ಕೇಳುವಷ್ಟು ಹಾಸ್ಯಾಸ್ಪದವಿತ್ತು, ಅವರ ವಿಚಾರ.

ದಿಲ್ಲಿಯ ಭಾರತೀಯ ಕೃಷಿ ಸಂಶೋಧನಾ ಕೇಂದ್ರವು ಕೃಷಿ ಕಾಲೇಜಿಗೆ ಕೊಟ್ಟ ಸಹಾಯ ಧನವನ್ನು ಸರಿಯಾಗಿ ಬಳಸಿಕೊಂಡಿದ್ದಾರೆಯೋ ಇಲ್ಲವೆಂದು ಗೊತ್ತು ಹಚ್ಚಲು ಮತ್ತು ಇನ್ನೆಷ್ಟು ಸಹಾಯ ಬೇಕಾಗಬಹುದೆಂದು ಅಂದಾಜು ಮಾಡಲು ತಜ್ಞರ ತಂಡವನ್ನು ಅದು ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಕಳಿಸುತ್ತದೆ. ಅಂತಹ ತಂಡವೊಂದು ಜೋಬನೇರಕ್ಕೆ ಭೇಟಿ ಕೊಡಲಿದೆಯೆಂದು ತಿಳಿದು ಅವರ ಆದರಾತಿಥ್ಯಗಳ ತಯಾರಿ ನಡೆಯಿತು. ಈ ತಜ್ಞರ ಅತ್ಯಮೂಲ್ಯ ವೇಳೆ ದಿಲ್ಲಿಯಿಂದ ನಿಧಾನವಾಗಿ ಹೋಗುವ ಟ್ರೇನಿನಲ್ಲಿ ವ್ಯಯವಾಗಬಾರದೆಂದು ವಿಮಾನದಲ್ಲಿ ಜಯಪುರಕ್ಕೆ ಕಳಿಸಲಾಯಿತು. ಈ ತಜ್ಞರು ತಮ್ಮ ಮಧುಚಂದ್ರವನ್ನು ಜಯಪುರದಲ್ಲಿ ಕಳೆಯಲಾಗದ್ದರಿಂದ ಈಗ ಮಧ್ಯ ವಯಸ್ಸಿನ ಪತ್ನಿ ಮತ್ತು ಮಕ್ಕಳಿಗಾದರೂ ಜಯಪುರ ತೋರಿಸಲೆಂದು ಅವರೂ ಟ್ರೇನಿನಿಂದ ಜಯಪುರಕ್ಕೆ ಬರುವ ವ್ಯವಸ್ಥೆ ಮಾಡಿದರು. ಅವರನ್ನು ಜಯಪುರದಲ್ಲಿ ಬಿಟ್ಟು ತಾವು ಜೋಬನೇರಕ್ಕೆ ಬಂದರು. ಅವರಿಗೆ ತಿರುಗಿ ಹೋಗುವ ಅವಸರ. ತಿಂಡಿ - ತೀರ್ಥಗಳನ್ನು ಮುಗಿಸುವುದರಲ್ಲಿ ಅರ್ಧ ತಾಸು ಕಳೆದು ಉಳಿದರ್ಧ ತಾಸನ್ನು ವಿವಿಧ ವಿಭಾಗಗಳ ಮುಖ್ಯಸ್ಥರನ್ನು ಭೇಟಿ ಮಾಡುವುದರಲ್ಲಿ ಕಳೆದರು. ಜಯಪುರಕ್ಕೆ ತಿರುಗಿ ಹೊರಡಲು ಕಾರನ್ನು ಹತ್ತುವಾಗ, ವಿವಿಧ ವಿಭಾಗಗಳಿಗೆ ಎಷ್ಟೆಷ್ಟು ಧನಸಹಾಯ ಬೇಕೆಂದು ವಿವರವಾಗಿ ಬರೆದು ತಿಳಿಸಿ. ಅದನ್ನು ಮಂಜೂರ್ ಮಾಡಿಸಲು ಸಕಲ ಪ್ರಯತ್ನ ಮಾಡುವೆವೆ'ಂದು ಆಶ್ವಾಸನ ಕೊಟ್ಟು ಬೀಳ್ಕೊಂಡರು. ಉಳಿದ ವೇಳೆಯನ್ನೆಲ್ಲ ಜಯಪುರದ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದರಲ್ಲಿ

ಕಳೆದು ದಿಲ್ಲಿಗೆ ಮರಳಿದ ಮೇಲೆ ಅದೆಷ್ಟೋ ಪುಟಗಳ ವರದಿಯನ್ನು ಸರಕಾರಕ್ಕೆ ಒಪ್ಪಿಸಿರಬೇಕು. ಈ ಭಾರಿ ಕೆಲಸಕ್ಕಾಗಿ ಕರ ಕೊಡುವವರ ಸಾವಿರಾರು ರೂಪಾಯಿ ಖರ್ಚಾಗಿರಬೇಕು.

ಮಾರ್ಚ ತಿಂಗಳಿನಲ್ಲಿ 'ನಿಮ್ಮ ವಿಭಾಗಕ್ಕೆ ಮೂವತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಮಾರ್ಚ ಮೂವತ್ತೊಂದನೇ ತಾರೀಖಿನೊಳಗಾಗಿ ನಿಮಗೆ ಬೇಕಾದ ಸಾಮಾನುಗಳನ್ನು ತರಿಸಿ ಖರ್ಚು ಮಾಡಬೇಕೆಂದು ಆದೇಶ ಬಂದಿತು. ಅನಿರೀಕ್ಷಿತವಾಗಿ ಲಾಟರಿಯಲ್ಲಿ ಒಂದು ಲಕ್ಷ ರೂಪಾಯಿ ಪಡೆದಾತ ಅದರ ಆಧಾರದ ಮೇಲೆ ಒಂದು ಕೋಟಿ ರೂಪಾಯಿ ವ್ಯಯ ಮಾಡುವ ಕರಡು ಪತ್ರ ತಯಾರಿಸುವಂತೆ ಬಿ. ಪಿ. ನೂರಾರು ಉಪಕರಣಗಳನ್ನು ಮನಸ್ಸಿನಲ್ಲಿ ಪಡೆದುಬಿಟ್ಟರು. ಯಾವ ಯಾವ ಕಂಪನಿ ಮಾರ್ಚ ಮೂವತ್ತೊಂದರೊಳಗಾಗಿ ಉಪಕರಣಗಳನ್ನು ಒದಗಿಸಬಹುದೆಂದು ನಾಲ್ಕೂ ಕಡೆಗೆ ಪತ್ರಗಳು ಓಡಾಡಿದವು. ಇಪ್ಪತ್ತೆರಡುವರೆ ಸಾವಿರ ರೂಪಾಯಿಗಳ ಸ್ಪೆಕ್‌ಟೊ- ಫೋಟೊ- ಮೀಟರ ಒಂದನ್ನು ಕೂಡಲೇ ಕಳಿಸಲು ಸಾಧ್ಯವಿದೆಯೆಂದು ಮುಂಬಯಿಯ ಕಂಪನಿಯೊಂದರ ಪತ್ರ ಬಂದದ್ದರಿಂದ ಅದನ್ನೇ ಖರೀದಿಸುವದೆಂದು ನಿರ್ಧರಿಸಿ ಆರ್ಡರ್ ಕೊಟ್ಟರು. ಆದರೆ ಅವರಿಂದ ಉಪಕರಣವಾಗಲಿ, ಉತ್ತರವಾಗಲಿ ಬಾರದ್ದರಿಂದ ತಂತಿಯನ್ನು ಕಳಿಸಿದರು. ಅದಕ್ಕೆ 'ಕಳಿಸಲು ಸ್ವಲ್ಪ ವಿಳಂಬವಾಗಬಹು'ದೆಂದು ಉತ್ತರ ಬಂದಿತು. ಇವರು ಮಾರ್ಚ ಮೂವತ್ತೊಂದರೊಳಗಾಗಿ ರಸೀದಿಯನ್ನಾದರೂ ಕಳಿಸುವಂತೆ ವಿನಂತಿಸಿಕೊಂಡರು. 'ಉಪಕರಣ ಬಂದು ಮುಟ್ಟಿದೆ. ಸುಸ್ಥಿತಿಯಲ್ಲಿದೆ' ಎಂದು ತಾವು ಸರ್ಟಿಫಿಕೇಟನ್ನೂ ಕೊಟ್ಟರು. ಹಣಕಾಸಿನ ವಿಭಾಗದವರು ಆ ಆಧಾರದ ಮೇಲೆ ಹಣವನ್ನು ಮಂಜೂರ ಮಾಡಿದರು. ಏಪ್ರಿಲ್ ತಿಂಗಳ ಹದಿನೈದು ತಾರೀಖು ಕಳೆದರೂ ಯಾವ ಉಪಕರಣವೂ ಬಾರದ್ದರಿಂದ ಬಿ.ಪಿ. ಹೌಹಾರಿದರು. ಕೊನೆಗೊಮ್ಮೆ ಅದು ಬಂದು ತಲುಪಿದ ಸುದ್ದಿ ಬಂದಾಗ ನೆಮ್ಮದಿಯ ಉಸಿರುಬಿಟ್ಟರು. ಹಣ ಪಡೆಯುವ ವಿಧಾನವೆಲ್ಲ ಮುಗಿದು ಹೋದದ್ದರಿಂದ ಕಂಪನಿಯವರು ಹಳೆಯ ಮಾಡೆಲ್ಲೊಂದನ್ನು ಕಳಿಸಿ ತಮ್ಮ ವ್ಯಾಪಾರಿತನದ ಧೂರ್ತತೆಗಳನ್ನು ತೋರಿಸಿಕೊಂಡಿದ್ದರು! ಹೆಚ್ಚಿನ ಸಂಶೋಧನಾ ಸೌಕರ್ಯಗಳಿಲ್ಲದ ಕೀಟ ವಿಭಾಗಕ್ಕೆ ಸ್ಪೆಕ್‌ಟೊ- ಫೋಟೊ - ಮೀಟರ ಕೊಳ್ಳುವುದೆಂದರೆ ಈಳಿಗೆ, ಪಾತ್ರೆಗಳಿಲ್ಲದ ಅಡಿಗೆ ಮನೆಯಲ್ಲಿ ರೆಫ್ರಿಜಿರೇಟರ ಕೊಂಡಂತೆ, ಮನೆಯಲ್ಲಿ ರೆಫ್ರಿಜಿರೇಟರ ಇದ್ದುದರಿಂದ ಮನೆ ಮಾಲಕರು ವಿದ್ಯುತ್ತು ಪೂರೈಸಬಹುದು ಎಂದು ಊಹಿಸಿದಂತೆ. ಫೋಟೊ - ಮೀಟರನ್ನು ಬಳಸಲು ಬೇಕಾಗುವ ಉಳಿದ ಸಲಕರಣೆಗಳಿಗೂ ಹಣ ಸಿಗಬಹುದೆಂದು ಬಿ.ಪಿ. ಹಾರೈಸಿದರು. ಕೊನೆಗೊಮ್ಮೆ ವಿದ್ಯುತ್ತು ಬಂದಾಗ 'ಫ್ರಿಜ್' ಬಹಳಷ್ಟು ವಿದ್ಯುತ್ತನ್ನು ಸ್ವಾಹಾ ಮಾಡುತ್ತದೆ ಎಂದು

ಅದನ್ನು ಬಳಸದೇ ಇಟ್ಟಂತೆ, ಹಾಳಾದರೆ ಅದನ್ನು ರಿಪೇರಿ ಮಾಡುವುದು ಅಸಾಧ್ಯವೆಂದು ಸ್ಪೆಕ್ಟ್ರೊ, ಫೋಟೊ ಮೀಟರನ್ನು ಅರಳೆಯಲ್ಲಿ ಸುತ್ತಿ ಒಳಗೆ ಇಡಿಸಿಬಿಟ್ಟರು!

ಪ್ರಾಯೋಗಿಕ ಕೀಟಗಳು ಉರಿಬಿಸಿಲನ್ನು ತಾಳಲಾರವೆಂದು ತಂಪು ಹವೆಯ ಸಾಧನ ಮತ್ತು ರೆಫ್ರಿಜಿರೇಟರಗಳನ್ನು ಕೊಂಡಿದ್ದರು. ಹವಾಸಾಧನ ಯೌವನ ಇರುವ ತನಕ ಬಿ.ಪಿಯವರ ಸೇವೆ ಮಾಡಿತು, ಮುದಿಯಾದಾಗ ಮೂಲೆ ಸೇರಿತು. ಸ್ನಾತಕೋತ್ತರ ವಿದ್ಯಾರ್ಥಿಗಳು ಅದನ್ನು ರಿಪೇರಿ ಮಾಡಿಸಿಕೊಂಡು ವರ್ಗ, ನಡೆಯುವಾಗ ಮಿದುಳನ್ನು ತಂಪಾಗಿಡಲು ಬಳಸಲಾರಂಭಿಸಿದರು! ರೆಫ್ರಿಜಿರೇಟರ ಇದ್ದಾಗ ಬಾವಿಯ ನೀರು. ಮಡಕೆಯ ನೀರು ಏಕೆ ಕುಡಿಯಬೇಕು ಎಂದು ಶಿಕ್ಷಕರ ವಾದ. ಅಂತೆಯೇ ಬಾಯಾರಿಕೆ ಆದಾಗೊಮ್ಮೆ 'ಪಾನಿ ಪಿಲಾವೊ' ಎಂದು ಅಪ್ಪಣೆ ಕೊಡುವರು. ಫ್ರಿಜ್‌ದೊಳಗಿನ ನೀರಿನಿಂದಲೇ ಅವರ ನೀರಡಿಕೆ ತಣಿಯಬೇಕು. ನೀರು ತಣ್ಣಗಾಗುವ ಮೊದಲೇ ಬೇಡಿಕೆಗಳು ಹೆಚ್ಚಾದಾಗ ಅದರಲ್ಲಿ ಬರ್ಫದ ತುಣುಕುಗಳನ್ನು ಸೇರಿಸಬೇಕಾಗುತ್ತಿತ್ತು. ನಂತರ ಮಧ್ಯಾಹ್ನದ ಉರಿಬಿಸಿಲಿನಲ್ಲಿ ದಣಿದು ಮನೆ ಸೇರುವ ಶಿಕ್ಷಕರಿಗೆಂದು ಆ ಫ್ರಿಜ್‌ದೊಳಗಿನ ನೀರು ಮತ್ತು ಕಾಲೇಜದಿಂದ ಬರ್ಫ ಮನೆಗೆ ಹೋಗಲಾರಂಭಿಸಿತು. ಕೈಲಾಸನ ಮಕ್ಕಳಿಗೆ ಬರ್ಫ ಹಾಕದೇ ನೀರನ್ನೇ ಕುಡಿಯಲು ಆಗುತ್ತಿರಲಿಲ್ಲವಂತೆ! ಶ್ರೀಮತಿ ಸಚಾನಳು, 'ನೀವು ಹಿರಿಯ ಅಧ್ಯಾಪಕರು ಇದ್ದೂ ನಮ್ಮ ಮನೆಗೆ ಏಕೆ ಬರ್ಫ ಬರುವುದಿಲ್ಲ?' ಎಂದು ಪತಿಯನ್ನು ತರಾಟೆಗೆ ತೆಗೆದುಕೊಂಡಳು. ಬಿ.ಪಿ.ಯವರ ಪ್ರಾಧ್ಯಾಪಕ ಮಿತ್ರರೂ ಆಗೊಮ್ಮೆ ಈಗೊಮ್ಮೆ ಬರ್ಫವನ್ನು ಪಡೆಯಲಾರಂಭಿಸಿದರು. ಆಯ್ಸಕ್ರೀಮಿನ ಪಾತ್ರೆಗಳು ಅಧ್ಯಾಪಕರ ಮನೆಯಿಂದ ಬಂದು ಫ್ರಿಜ್‌ನಲ್ಲಿ ಕೂಡ್ರಲಾರಂಭಿಸಿದವು. ಫ್ರಿಜ್‌ದಲ್ಲಿ ಇಡಬೇಕಾದ ಕೀಟನಾಶಕಗಳು ಮೂಲೆಗುಂಪಾಗಿ ತಮ್ಮ ಶಕ್ತಿ ಕಳೆದುಕೊಂಡವು. ಕೀಟಗಳಿಗೆ ಸಂರಕ್ಷಣೆ ಇಲ್ಲದೇ ಬೇಸಿಗೆಯ ಉರಿಯಲ್ಲಿ ಬೆಂದು ಸತ್ತವು.

ಇನ್ನೊಂದು ವರ್ಷ ಯಾವ ಸಾಮಗ್ರಿ ಸಲಕರಣೆಗಳನ್ನು ಕೊಳ್ಳುವುದೆಂದು ಯೋಚಿಸಿ ಕೊನೆಗೆ ತಾಪತ್ರಯವಿಲ್ಲದೇ ವಿಶ್ವವಿದ್ಯಾಲಯದವರು ಮಾನ್ಯ ಮಾಡಿದ ಕಂಪನಿಯಿಂದ ಕಪಾಟು, ಶೆಲ್ಫು ಮಾಡಲು ಬಳಸುವ ಉಕ್ಕಿನ ಕೋನಪಟ್ಟಿ (Angular bars)ಗಳು ಮತ್ತು ಅವುಗಳನ್ನು ಜೋಡಿಸುವ ಮೊಳೆ ಮತ್ತು ಜಾಳಿಗೆಗಳಿಗೆ ಆರ್ಡರ ಕೊಡಲಾಯಿತು. ಕೀಟಶಾಸ್ತ್ರ ವಿಭಾಗವನ್ನು ಆದರ್ಶವಾಗಿಟ್ಟುಕೊಂಡ ಉಳಿದ ಒಂದೆರಡು ವಿಭಾಗಗಳ ಮುಖ್ಯಸ್ಥರೂ ಅವುಗಳಿಗೆ ಆರ್ಡರ ಕೊಟ್ಟರು. ಅವುಗಳನ್ನು ಮಾರುವ ಮಾರವಾಡಿಗೆ ತನಗೊಂದು ಕುರಿಹಿಂಡೇ ಸಿಕ್ಕಷ್ಟು ಸಂತೋಷವಾಗಿರಬೇಕು!

ಕೇಳಿದ್ದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಪಟ್ಟಿಗಳು ಬಂದವು. ಆದರೆ ಮಂಜೂರ ಮಾಡಿದ ಹಣ ಅದಕ್ಕೆಲ್ಲ ಸಾಲುವಂತಿರಲಿಲ್ಲವಾದ್ದರಿಂದ ಹೆಚ್ಚಿಗೆ ಬಂದವನ್ನು ತಿರುಗಿ ಕಳಿಸಲಾಯಿತು. ಈ ಕೋನಪಟ್ಟಿಗಳನ್ನು ಇಡಲು ಸ್ಥಳದ ಅಭಾವದ ಮೂಲಕ ಎಲ್ಲೆಡೆ ಅವನ್ನು ಹರಡಿದ್ದರು. ಅವುಗಳನ್ನು ಹೇಗೆ ಬಳಸಬೇಕೆನ್ನುವುದರ ಬಗ್ಗೆ ಯಾರಿಗೂ ಕಲ್ಪನೆಯಿರಲಿಲ್ಲ. ಅಂತೆಯೇ ಒಂದು ದಿನ ಹರಿಬಕ್ಷನು ಅವುಗಳನ್ನು ಹೊರಗೆಳೆದು ಜೋಡಿಸುವುದನ್ನು ನೋಡಿ ಆನಂದವಾಯಿತು. ಅವನ್ನು ಯಾತಕ್ಕಾಗಿ ಬಳಸಲಿದ್ದೀರಿ ಎಂದು ಕೇಳಿದಾಗ ಮಾತ್ರ, ತನಗೆ ಗೊತ್ತಿಲ್ಲ ಡಾಕ್ಟರ ಸಾಬರು ಹೇಳಿದ್ದಾರೆಂದ. ಮೂತ್ರ ವಿಸರ್ಜನೆಗೆ ಹೋಗಬೇಕಾದಾಗೊಮ್ಮೆ ಬಿ.ಪಿ.ಯವರ ದರ್ಶನ ಪಡೆಯುವ ಮನಸ್ಸಿಲ್ಲದ್ದರಿಂದ ಡಿಪಾರ್ಟಮೆಂಟಿನ ಹಿಂದೆ ಇದ್ದ ಇನ್ನೊಂದು ಮೂತ್ರಿಗೆ ಹೋಗುವ ರೂಢಿ ಮಾಡಿಕೊಂಡಿದ್ದೆ. ಎಂದಿನಂತೆ ಅಂದೂ ಅಲ್ಲಿಗೆ ಹೋಗುವಾಗ, ಪ್ರತಿದಿನ ನೋಡುತ್ತಿದ್ದ ಹೂಕಾಯಿ ಬಿಟ್ಟು ನಿಂತ ಪೇರಲ ಮರದ ಸುತ್ತಲೂ ಕೋನಪಟ್ಟಿಗಳ ಕೋಟೆ, ಜಾಳಿಗೆ ಬಡಿಸಿಕೊಂಡು ನಿಂತಿದ್ದನ್ನು ನೋಡಿ ವಿಸ್ಮಯಗೊಂಡೆ. ಇಲ್ಲಿ ಅದೆಂತಹ ಸಂಶೋಧನೆ ಸಾಗಿರಬಹುದೆಂದು ತಲೆಕೆರೆದುಕೊಂಡು ಯೋಚಿಸಿದರೂ ಏನೂ ಹೊಳೆಯದ್ದರಿಂದ ಹರಿಬಕ್ಷನನ್ನೇ ವಿಚಾರಿಸಿದೆ. ಆ ಗಿಡದ ಪೇರಲ ಹಣ್ಣಿಗೆ ಬೀಜವಿಲ್ಲ. ಅದನ್ನು ಡಾಕ್ಟರ ಸಾಬರು ಅಲಹಾಬಾದದಿಂದ ತಂದು ನೆಡಿಸಿದ್ದಾರೆ. ತಾವು ಈ ತನಕ ಒಂದೂ ಹಣ್ಣು ತಿನ್ನುವಂತಾಗಲಿಲ್ಲವೆಂದು ಮಾಯೀಜಿ (ಲಕ್ಷ್ಮಿ), ಬಿ.ಪಿ.ಯವರನ್ನು ಹಂಗಿಸಿದಳಂತೆ. ಈಗ ಹಣ್ಣು ಬಿಡುವ ಕಾಲದಲ್ಲಿ ರಕ್ಷಣೆಗೆಂದು ಇವನ್ನು ನಿಲ್ಲಿಸಲಾಗಿದೆಯೆಂದ. ಹತ್ತಾರು ರೂಪಾಯಿಯ ಪೇರಲ ಹಣ್ಣುಗಳಿಗಾಗಿ ಸಾವಿರಾರು ರೂಪಾಯಿಯ ಕೋನ ಪಟ್ಟಿಗಳನ್ನು ಬಳಸುವ ಸಂಶೋಧನಾ ವಿಧಾನಕ್ಕೆ ತಲೆದೂಗಿದೆ. ಇಷ್ಟಾದರು ಗಿಳಿವಿಂಡು ಅವುಗಳನ್ನು ತಿಂದು ಕೆಡುವುದನ್ನು ಬಿಡಲಿಲ್ಲ. ಹುಡುಗರೂ ಜಾಳಿಗೆಯನ್ನು ಹರಿದು ತಮ್ಮ ಪಾಲನ್ನು ಪಡೆಯದೇ ಇರಲಿಲ್ಲ. ಕೆಲಕಾಲದ ನಂತರ ಜೂಗುತಿಂದ ಉಕ್ಕಿನ ಪಟ್ಟಿಗಳು 'ಬಿಕೋ' ಎಂದು ವಿಭಾಗದ ಪರಿಸರದಲ್ಲಿ ಮತ್ತೆ ಹರಡಿಕೊಂಡವು.

ಪ್ರಾಧ್ಯಾಪಕರಿಗಾಗಿ ಹೊಸ ಮನೆಗಳ ನಿರ್ಮಾಣವಾದಾಗ ವೇತನದ ಶೇಕಡಾ ಹತ್ತರಂತೆ ಅವಕ್ಕೆ ಬಾಡಿಗೆಯನ್ನು ಮುರಿದುಕೊಳ್ಳುವುದರಿಂದ ತಾವು ಅಲ್ಲಿಗೆ ಹೋದರೆ ಎಷ್ಟೊಂದು ಹಾನಿಯನ್ನು ಅನುಭವಿಸಬೇಕೆಂದು ಚಹಾ ಸಂಘದಲ್ಲಿ ಒಂದು ಗಂಟೆಯ ಕಾಲ ಭಾಷಣ ಬಿಗಿದ ಬಿ.ಪಿ. ಎರಡೇ ತಿಂಗಳಿನಲ್ಲಿ, ತಮ್ಮ ಸಂಗಡಿಗರೆಲ್ಲ ಹೊಸ ಮನೆಗಳಿಗೆ ಹೋಗಿದ್ದರಿಂದ, ಅಲ್ಲಿ ಸುಸಂಸ್ಕೃತ ಜನರು ವಾಸಿಸುವುದರಿಂದ, ಹಳ್ಳಿಯ ಹೊಲಸು ವಾತಾವರಣ ತಪ್ಪಿಸಿಕೊಳ್ಳಲಿಕ್ಕೆಂದು ತಾವೂ ಹೊಸ ಮನೆಗೆ ಹೋಗುವುದಾಗಿ ಸಾರಿದರು. ಇನ್ನೂ ವಿದ್ಯುತ್ ಮೀಟರಗಳನ್ನು ಹಚ್ಚಿರದ್ದರಿಂದ ಅಲ್ಲಿಯ

ಪ್ರತಿ ಮನೆಗೆ ಕೇವಲ ಐದು ರೂಪಾಯಿಗಳನ್ನು ವಸೂಲು ಮಾಡುತ್ತಿದ್ದರು. ಆದ್ದರಿಂದ ಪ್ರಾಧ್ಯಾಪಕರು ತಮಗೆ ಬೇಕಾದಷ್ಟು ವಿದ್ಯುತ್ತನ್ನು ಹಗಲೂ ರಾತ್ರಿ ಬಳಸಿ ಹೆಚ್ಚಿನ ಹಣವನ್ನು ಕಾಲೇಜಿನವರು ಕಟ್ಟುವಂತೆ ಮಾಡಿದರು. ಪ್ರತಿ ಮನೆಯ ಮುಂದೆಯು ಸಾಕಷ್ಟು ಸ್ಥಳವಿದ್ದುದರಿಂದ ಅದರ ಪೂರ್ಣ ಉಪಯೋಗವನ್ನು ತೆಗೆದುಕೊಳ್ಳಲಾರಂಭಿಸಿದರು. ಕಾಲೇಜಿನವರು ಪೂರೈಸುತ್ತಿದ್ದ ನೀರನ್ನು ಬಳಸಿ ಬದನೇಕಾಯಿ ಹಾಗಲಕಾಯಿ, ಬೆಂಡೇಕಾಯಿ, ಗಜ್ಜರಿ, ಮೂಲಂಗಿ ಮೊದಲಾದ ಕಾಯಿಪಲ್ಯೆಗಳನ್ನು ಬೆಳೆಸುವುದಲ್ಲದೇ ದೊಡ್ಡ ಪ್ರಮಾಣದಲ್ಲಿ ಸೇಂಗಾ ಹಾಕಿದರು. ಫಲವತ್ತಾದ ಭೂಮಿಗೆ ವಿಪುಲವಾಗಿ ನೀರು ಹನಿಸಿದ್ದರಿಂದ ಬೆಳೆ ಹುಲುಸಾಗಿ ಬಂದಿತು. ಅಂತೆಯೇ ಮಯೂರ ಸಂಸಾರ ಮತ್ತು ಹೆಗ್ಗಣಗಳು ಅವನ್ನು ತಿಂದು ಕೊಬ್ಬಹತ್ತಿದವು. ಕಬ್ಬಿನ ಹೊಲದಲ್ಲಿ ಆನೆ ಹೊಕ್ಕಂತೆ ಇವುಗಳಲ್ಲಿ ಹಂದಿಗಳು ಹೊಕ್ಕರೆ ಬೆಳೆಗಳನ್ನು ನೆಲಸಮಮಾಡಿಯೇ ಹೊರಗೆ ಬರುವುದು ವಾಡಿಕೆ. ಪ್ರಾಧ್ಯಾಪಕರ ಈ ಸಾಹಸಕ್ಕೆ ಬೇಕಾಗುವ ಬೀಜ, ಗೊಬ್ಬರ, ಕೀಟನಾಶಕಗಳು, ನೀರು ಮತ್ತು ಆಳುಗಳ ಸಹಾಯ ಕಾಲೇಜಿನ ಖರ್ಚಿನಲ್ಲೇ ಸಾಗುತ್ತಿತ್ತು, ಎಂದು ಬೇರೆ ಹೇಳಬೇಕಾಗಿಲ್ಲ. ಹೂಗಳ ಪ್ರೀತಿಯಿದ್ದವರು ಸುಂದರ ಕೈ ತೋಟಗಳನ್ನು ನಿರ್ಮಿಸಿಕೊಂಡರು. ವಿಭಾಗದಲ್ಲಿ ಬಿದ್ದ ಕೋನ ಪಟ್ಟಿಗಳ ಉಪಯೋಗ ಬಿ.ಪಿ.ಯವರಿಗೆ ಹೊಳೆದಿರಬೇಕು. ಹಂದಿಗಳು ಒಳಗೆ ನುಗ್ಗದಂತೆ ಅವುಗಳನ್ನು ನಿಲ್ಲಿಸಿ ಅದಕ್ಕೆ ಮುಳ್ಳುಬೇಲಿಯನ್ನು ಜೋಡಿಸಿಬಿಟ್ಟರು. ಇದರಿಂದ ಅಕ್ಕಪಕ್ಕದವರು ತಾವೂ ಉಕ್ಕಿನ ಪಟ್ಟಿಗಳನ್ನು ಪಡೆಯಲಾಗಲಿಲ್ಲವೆಂದು ಕರುಬುವಂತಾಯಿತು. ಜಗುಲ ಕಿಶೋರಶರ್ಮಾ, ಬಿ.ಪಿ.ಯವರ ನೇತೃತ್ವದಲ್ಲಿ ವಿವಿಧ ಜಾತಿಯ ಕುಂಬಳ ಬಳ್ಳಿಗೆ ದಾಳಿಯಿಡುವ ಎಫಿಡ್ ಕೀಟಗಳನ್ನು ನಿಯಂತ್ರಿಸುವ ಸಂಶೋಧನೆ ನಡೆಸಲಿದ್ದ. ಬಳ್ಳಿಗಳನ್ನು ಹಬ್ಬಿಸಲು ಅವನಿಗೆ ಬಿದುರುಗಳು ಬೇಕಿದ್ದವು. ತನ್ನ ಗುರುವಿನ ಆದರ್ಶವನ್ನು ಅನುಸರಿಸಿ ಉಳಿದ ಕೋನಪಟ್ಟಿಗಳನ್ನು ತಾನು ಬಳಸಿದ. ಬಳ್ಳಿಗೆ ಹಾಕಿದ ನೀರನ್ನು ತಾವೂ ಹೀರಿಕೊಂಡು ಪಟ್ಟಿಗಳು ಜಂಗು ಉತ್ಪಾದಿಸಿದವು.

ಒಳ್ಳೆಯ ಶಿಕ್ಷಣಕ್ಕಾಗಿ ಪ್ರಯೋಗಾಲಯದಷ್ಟೇ ಪ್ರಾಮುಖ್ಯತೆ ವಾಚನಾಲಯಕ್ಕೆ ಕೊಡಲಾಗುತ್ತದೆ. ಜೋಬನೇರ ಕಾಲೇಜಿನ ವಾಚನಾಲಯಕ್ಕಾಗಿ ಲಕ್ಷಗಟ್ಟಲೆ ಖರ್ಚು ಮಾಡಿದ್ದರೂ ಅದನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟಿರಲಿಲ್ಲ. ತುಂಬ ಹುಡುಕುತ್ತಿದ್ದ ಪ್ರಾಣಿಶಾಸ್ತ್ರದ ಪುಸ್ತಕವೊಂದು ಇಂಜಿನಿಯರಿಂಗ್ ವಿಭಾಗದಲ್ಲಿ ಸಿಕ್ಕಿತು. ಇಂಜಿನಿಯರಿಂಗ್ ಪುಸ್ತಕಗಳು ಹಣ್ಣು ಹಂಪಲು ವಿಭಾಗದವುಗಳೊಂದಿಗೆ ಸೇರಿಕೊಂಡಿದ್ದವು. ವಾಚನಾಲಯದ ಅಧಿಕಾರಿ 'ಶರ್ಮಾಜಿ', ದಿನವೆಲ್ಲ ತಾಂಬೂಲ ಜಗಿಯುತ್ತ, ಕೆಂದುಂಟಿಗಳಿಂದ ಜೊಲ್ಲು ಸುರಿಸುತ್ತ 'ಸದ್ದು ಸಲ್ಲದು' ಎಂಬ ಬೋರ್ಡು ತನಗಾಗಿ ಅಲ್ಲವೆನ್ನುವಂತೆ ಗಂಡು ಧ್ವನಿಯಲ್ಲೇ ಮಾತನಾಡುವ. ಅವನನ್ನು ಕಾಣಲು

ಬರುವವರಿಗೆ ಲೆಕ್ಕವಿಲ್ಲ. ಬಂದವರ 'ಕುಶಲ ಮಂಗಲ' ವಿಚಾರಿಸುವುದರಲ್ಲಿಯೇ ಅವನ ವೇಳೆ ಹೋಗುತ್ತದೆ. ವಾಚನಾಲಯಕ್ಕೆ ಯಾವ ಯಾವ ಪುಸ್ತಕಗಳನ್ನು ತರಿಸಬೇಕೆಂದು ವಿವಿಧ ವಿಭಾಗಗಳ ಅಧಿಕಾರಿಗಳಿಗೆ ಬರೆದು ಅವರಿಂದ ಯಾದಿಯನ್ನು ಪಡೆದು ಅವುಗಳಲ್ಲಿ ಯಾವುದಕ್ಕೆ ಆರ್ಡರ ಕಳಿಸಿ ತರಿಸಬೇಕೆಂದು ನಿರ್ಧರಿಸಲು ಕಮಿಟಿ ಇದ್ದರೂ ತಮಗೆ ಲಾಭದಾಯಕವಿರುವವನ್ನು ತರಿಸುವುದರಲ್ಲಿ ನಿಸ್ಸೀಮರು ಶರ್ಮಾಜಿ. ಅವರಿಗೂ ಜಯ ಪುರ, ಆಗ್ರಾಗಳ ಪುಸ್ತಕ ವ್ಯಾಪಾರಿಗಳಿಗೂ ಒಳ್ಳೆಯ ಸಖ್ಯ ಬೆಳೆದು ಬಂದಿದೆ. ಅವರಲ್ಲಿ ಮಾರಾಟವಾಗದೆ ಬಿದ್ದಿರುವ ಪುಸ್ತಕಗಳನ್ನು ಜೋಬನೇರ ವಾಚನಾಲಯಕ್ಕೆ ಕೊಂಡರೆ ಅವುಗಳ ಮೇಲೆ ಅವರಿಗೆ ಕಮಿಷನ್ ಸಿಗುವ ಏರ್ಪಾಟು ಇತ್ತು. ಅಂತೆಯೇ ಯಾರೂ ಒಮ್ಮೆಯೂ ಓದದ, ಹಾಯಮನ್ ಸಂಪುಟಗಳನ್ನು ಪ್ರಾಣಿಶಾಸ್ತ್ರ ವಿಭಾಗಕ್ಕಾಗಿ ತರಿಸಿದ್ದರು. ಕೃಷಿ ಕಾಲೇಜಿಗೆ ಹಾಯಮನ್ ಸಂಪುಟಗಳನ್ನು ತರಿಸುವುದೆಂದರೆ ಪ್ರಾಥಮಿಕ ಶಾಲೆಗೆ ವೈದ್ಯಕೀಯ ಪಠ್ಯಗಳನ್ನು ತರಿಸಿದಂತೆ. ಬಿ.ಪಿ. ಅವರೇ ವಾಚನಾಲಯ ನಿರ್ದೇಶನ ಕಮಿಟಿಯಲ್ಲಿದ್ದಾಗ, ಪರಿಸ್ಥಿತಿ ಹೀಗಿದ್ದಾಗ, ಉಳಿದ ವಿಭಾಗಗಳಿಗೆ ಶರ್ಮರು ತರಿಸಿದ ಪುಸ್ತಕಗಳನ್ನೇ ಓದಿ ಪ್ರಾಧ್ಯಾಪಕರು ಕಲಿಸಬೇಕಾಗಿತ್ತು! ಅಂತೆಯೇ ಅವರು ಅವನ್ನು ಓದುವ ಗೋಜಿಗೆ ಹೋಗುತ್ತಿದ್ದಿಲ್ಲ. ಸಾಲದ್ದಕ್ಕೆ ಶರ್ಮ, ಜೀವವಿಮೆ ಇಳಿಸುವ ಉಪವೃತ್ತಿಯನ್ನೂ ಕೈಕೊಂಡಿದ್ದರು. ವಾಚನಾಲಯಕ್ಕೆ ಬಂದವರಿಗೆಲ್ಲ ಈ ವಿಷಯದಲ್ಲಿ ಗಂಟು ಬೀಳುತ್ತಿದ್ದರು. ಅವರು ಕಟ್ಟಿಸಿದ ಎರಡಂತಸ್ತಿನ ಮನೆ, ಅವರ ಕಾರ್ಯದಕ್ಷತೆಯ ದ್ಯೋತಕವಾಗಿ ನಿಂತಿತ್ತು.

೨೨. ಹಳ್ಳಿಯ ಹುಡುಗರು

ದಿನವೆಲ್ಲ ಶಾಲೆಯಲ್ಲಿ, ನೀರು ತರುವುದರಲ್ಲಿ, ಮನೆಗೆಲಸಗಳಲ್ಲಿ ಹಿರಿಯರಿಗೆ ಸಹಾಯ ಮಾಡುವ ಹುಡುಗರಿಗೆ, ಸೂರ್ಯಾಸ್ತದ ಮೊದಲೇ ಊಟ ಮುಗಿಯುವುದರಿಂದ ಮಲಗುವ ತನಕ ಬಿಡುವು. ಅಂತೆಯೇ ವಿದ್ಯುತ್ ದೀಪದ ಬೆಳಕಿನಲ್ಲಿ ಹರಟೆ ಚೌಕಿನಲ್ಲಿ ಅವರ ಕಾರ್ಯಕಲಾಪಗಳು ಪ್ರಾರಂಭವಾಗುವುವು. ಅಲ್ಲಿಗೆ ಮೊದಲು ಬಂದವನು "ರಾಮನಿವಾಸ್, ಹಿರಾಲಾಲ, ಮಾನಸಿಂಗ್, ಪರಕಾಸ್ (ಪ್ರಕಾಶ)" ಎಂದು ಉಳಿದವರನ್ನು ಕರೆಯಲಾರಂಭಿಸುವನು. ಒಬ್ಬನು ತೇಕುತ್ತ ಬಂದರೆ ಇನ್ನೊಬ್ಬನು ರೊಟ್ಟಿಯ ಕೊನೆಯ ತುತ್ತನ್ನು ನುಂಗುತ್ತಲೇ ಓಡಿ ಬರುವನು. ಸೂಕರ ಪ್ರಸೂತಿ ಗೃಹದ ಮಗ್ಗುಲಿಗಿರುವ ಕಲ್ಲುಬೆಂಚಿನ ಮೇಲೆ ಕೊಳಚೆ ನೀರಿನ ಆಶ್ರಯದಲ್ಲಿ ಕುಳಿತು ಅಂದು ಶಾಲೆಯಲ್ಲಿ, ಊರಲ್ಲಿ ನಡೆದ ಕುತೂಹಲಕಾರ ಘಟನೆಗಳನ್ನು ವಿಮರ್ಶಿಸುವರು. ಉಪಾಧ್ಯಾಯರು ಯಾರನ್ನು ಹೊಡೆದರು? ಕೆಸರಿನ ಮಡುವಿನಲ್ಲಿ ಯಾರು ಬಿದ್ದರು? ಜಯಪುರಕ್ಕೆ ಹೋಗಿ ಯಾರು ಯಾವ ಸಿನೇಮಾ ನೋಡಿದರು? ಇವೇ ಅವರ ಚರ್ಚಾ ವಿಷಯ. ನಂತರ ಕಣ್ಣುಮುಚ್ಚಾಲೆಯಾಟ ಪ್ರಾರಂಭವಾಗುವುದು. ಸುಲಭವಾಗಿ ಸಿಗಬಾರದೆಂದು ಬೋಳುಮರ ಹತ್ತುವರು. ಬಾಗಿಲಿಲ್ಲದ ಕೊಳಚೆ ಕಕ್ಕಸ ಸೇರಿಕೊಳ್ಳುವರು. ಮುಟ್ಟಿಸಿಕೊಂಡವನು ಇಲ್ಲವೆಂದು ಸಾಧಿಸಲು ಹೊರಟಾಗ ಆ ಆಟ ಅಲ್ಲಿಗೇ ಮುಕ್ತಾಯವಾಗುವುದು. ನಂತರ ಚೆಂಡಿನಾಟ, ಆಗದವರನ್ನು ಹೊಡೆಯಲು ಇದೇ ಸುಸಮಯವೆಂದು ತುರುಸಿನಿಂದ ಆಡುವರು. ಏಟು ತಿಂದವರು ಏನಾದರೂ ನೆಪ ತೆಗೆದು ಜಗಳ ತೆಗೆಯುವರು. ಎರಡೂ ಬಣದವರು ಒಬ್ಬರನ್ನೊಬ್ಬರು ಅಣಕಿಸಿ ನರಿಯಂತೆ ಕೂಗಲು ಪ್ರಾರಂಭಿಸುವರು. ಈ ಗದ್ದಲದಲ್ಲಿ ಪಾಲುಗೊಳ್ಳಲು ದೂರದ ನಾಯಿಗಳೂ ಕೂಗುವವು. ಇದನ್ನು ಕೇಳಲಾಗದೇ ಪರಿಸರದವರು ಬೈದಾಗ ಅದನ್ನು ಕೆಲ ಪಾಲಕರು ಮಲಗಲು ಬಾರೆಂದು ದೂರದಿಂದ ಮಕ್ಕಳನ್ನು ಕರೆಯುವರು. ಮರುದಿನ ಇದೆಲ್ಲ ಮರೆತು ಹೋಗಿ ಇದೇ ದಿನಚರಿ ಪ್ರಾರಂಭವಾಗುವದು.

ತಿವಾರಿ, ಮನೆಗೆ ಹೋಗುವಾಗಲೊಮ್ಮೆ 'ಗುರು' ಎಂದು ಕೆಳಗಿನಿಂದ ಕರೆದಾಗ ನಾನು ಮಹಡಿಯ ಬಾಲ್ಕನಿಯಿಂದಲೇ ಅವನು ಬೀದಿಯಲ್ಲಿ ನಿಂತು ಕೇಳಿದ ಪ್ರಶ್ನೆಗೆ

ಉತ್ತರ ಕೊಡುವುದು, ಇಲ್ಲವೇ ಚಮನನು ತರಕಾರಿ, ಮಟನ್ ತರಲು ಹೊರಟಾಗೊಮ್ಮೆ "ಡಾಕ್ಟರ್, ಡಾಕ್ಟರ್" ಎಂದು ಕರೆದು, ಮೇಲೆ ಬಂದು ಕಾಫಿ ಕುಡಿದೇ ಮುಂದೆ ಹೋಗುವುದು, ಸಾಮಾನ್ಯವಾಗಿತ್ತು. ಊರಿನ ಗದ್ದಲದಿಂದಾಗಿ, ಕೆಳಗೆ ಯಾರಾದರೂ ಬಾಗಿಲು ತಟ್ಟಿದಾಗ ಮಹಡಿಯ ಮೇಲೆ ವಾಸಿಸುತ್ತಿದ್ದ ನಮಗೆ ಒಮ್ಮೊಮ್ಮೆ ಕೇಳಿಸುತ್ತಿರಲಿಲ್ಲವಾದ್ದರಿಂದ ಜಯಪುರದಿಂದ ಕರೆಗಂಟೆಯೊಂದನ್ನು ತಂದು ಹಚ್ಚಿದೆ. ಅದನ್ನು ಹಚ್ಚುತ್ತಿರುವಾಗಲೇ ಹತ್ತಾರು ಹುಡುಗರು ಬಂದು ಮಾಸ್ತರ ಸಾಹೇಬ ಇದು ಏನು? ಎಂದು ಕುತೂಹಲದಿಂದ ವಿಚಾರಿಸಿದರು. ಅವರಿಗೆ ಅದನ್ನು ವಿವರಿಸಿ, ಅವರ ಸಂತೋಷಕ್ಕೆಂದು ನಾಲ್ಕೈದು ಬಾರಿ ಗಂಟೆ ಬಾರಿಸಿ ತೋರಿಸಿದೆ. ತಾವೂ ಬಾರಿಸುತ್ತೇವೆಂದು ದೈನ್ಯದಿಂದ ವಿನಂತಿಸಿಕೊಂಡಾಗ ಸರತಿಯಂತೆ ಎಲ್ಲರಿಗೂ ಅವಕಾಶ ಕೊಟ್ಟೆ. ಆ ರಾತ್ರಿಯ ಹುಡುಗರ ಸಮ್ಮೇಳನದಲ್ಲಿ ಮಾಸ್ಟರ್ ಸಾಹೇಬರು ಕರೆಗಂಟೆ ತಂದು ವಿಷಯವೇ ಪ್ರಾಧಾನ್ಯ ಹೊಂದಿತ್ತಲ್ಲದೇ ಅದನ್ನು ಹೇಗೆ ಬಾರಿಸುವುದೆಂದು ಪ್ರತಿಯೊಬ್ಬರು ತಮ್ಮ ತಮ್ಮ ಅನುಭವವನ್ನು ಬಲು ಹಿಗ್ಗಿನಿಂದ ಬಣ್ಣಿಸಿದರು. ತಾವು ಎಂತಹ ಸುಸಂಧಿಯನ್ನು ಕಳೆದುಕೊಂಡೆವಲ್ಲಾ! ಎಂದು ಉಳಿದವರು ಮರುಗಿದರು. ಹೊರಗಿನಿಂದಲೇ ಒತ್ತು ಗುಂಡಿಯನ್ನು ನೋಡಿ ಆನಂದಿಸಿದರು. ಸಮ್ಮೇಳನ ಮುಗಿದ ಅರ್ಧ ತಾಸಿನ ನಂತರ ಗಂಟೆ ಬಾರಿಸಿದ್ದರಿಂದ ಕೆಳಗೆ ಹೋಗಿ ನೋಡಲು ಯಾರೋ ತುಂಟ ಹುಡುಗ ಕಾಲಿಗೆ ಬುದ್ಧಿ ಹೇಳಿದ. ಅನಂತರ ಇನ್ನೊಬ್ಬರು ಬಾರಿಸಿದ್ದರಿಂದ ಇವರು ರಾತ್ರೆ ಮಲಗ ಗೊಡಲಿಕ್ಕಿಲ್ಲವೆಂದು ಅದನ್ನು ತೆಗೆದಿಟ್ಟೆ.;

ಊರಿಗೆ ಇಬ್ಬರೇ ಧೋಬಿಗಳು... ಒಬ್ಬನು ಮೂರುವಾರ ತೆಗೆದುಕೊಂಡರೆ ಇನ್ನೊಬ್ಬಾತ ಅದಕ್ಕಿಂತ ಒಂದು ವಾರ ಹೆಚ್ಚಿಗೆ ತೆಗೆದುಕೊಳ್ಳುತ್ತಿದ್ದ! ಒಬ್ಬ ಧೋಬಿಯ ಮಗ ಭಂವರಲಾಲನು, ಹುಚ್ಚು ನಾಯಿಯಂತೆ ಊರೆಲ್ಲ ತಿರುಗುತ್ತಿದ್ದುದರಿಂದ ಕಂಡಾಗೊಮ್ಮೆ ಬಟ್ಟೆ ತಂದು ಕೊಡಲು ನೆನಪು ಮಾಡಬಹುದೆಂದು ಅವನ ಹತ್ತಿರವೇ ಕೊಡಲಾರಂಭಿಸಿದೆ. ಅವನಿಗೆ ಹದಿನಾಲ್ಕು ವರ್ಷವಿರಬಹುದು, ಬುದ್ಧಿ ಮಾತ್ರ ಎಂಟು ವರ್ಷದವನು. ಆಗಲೇ ವಿವಾಹವಾಗಿ ಎರಡು ವರ್ಷವಾಗಿತ್ತು. ಹೋಗುತ್ತಿರುವವನನ್ನು ಕರೆದರೆ ಈಗ ಬರುತ್ತೇನೆಂದು ಪಲಾಯನ ಮಾಡುತ್ತಿದ್ದು ಮುಖವನ್ನೆ ತೋರಿಸುತ್ತಿರಲಿಲ್ಲ. ಕರೆಗಂಟೆ ಹಚ್ಚಿದ ನಂತರ ಅದನ್ನು ಬಾರಿಸಿ ಆನಂದಿಸಲಿಕ್ಕೆ ಮುಂಜಾನೆ, ಸಂಜೆ ಬಂದು ಬಟ್ಟೆಗಳನ್ನು ಕೇಳುತ್ತಿದ್ದ. ಆದರೆ ಕೊಟ್ಟವನ್ನು ತಂದು ಕೊಡುವ ಗೋಜಿಗೆ ಹೋಗುತ್ತಿರಲಿಲ್ಲ! ನಮಗೆ ಬೇಕಾದ ನೀರನ್ನೆಲ್ಲ ಬೋಧು ಪೂರೈಸುತ್ತಿದ್ದ. ಅವನ ಹದಿನಾರು ವರ್ಷದ ಮಗ ಮೋಹನ ಮತ್ತು ಇದೀಗ ಯೌವನದಲ್ಲಿ ಕಾಲಿಡುತ್ತಿದ್ದ ಸೊಸೆ ಕೂಡಿ ನೀರನ್ನು ಮೇಲಕ್ಕೆ ತಂದು ಹಾಕುತ್ತಿದ್ದರು.

ಪ್ರತಿದಿನ ನೀರಿನ ಲೆಕ್ಕಾಚಾರ ಬರೆದಿಟ್ಟು, ಮೊದಲನೇ ತಾರೀಖಿಗೆ ಖಾತೆಪುಸ್ತಕ ತಂದು ಹಣ ಪಡೆಯುತ್ತಿದ್ದರು. ಮೋಹನನು ಮಾಸ್ಟರ ಸಾಬ್, ನಮಸ್ತೆ, ಎಂದು ತಾನು ಬಂದ ಸಮಾಚಾರವನ್ನು ಮುಟ್ಟಿಸಿ ಬಾಗಿಲು ತೆಗೆಯಿಸಿಕೊಂಡು ನೀರು ಹಾಕಿ ಹೋದರೆ, ಸೊಸೆ ಬಾಗಿಲು ಬಡಿದು "ದರವಾಜ್ಜಾ ಖೋಲೋ" ಎಂದು ರಾಜಸ್ಥಾನಿ ಧ್ವನಿಯಲ್ಲಿ ಕರೆಯುತ್ತಿದ್ದಳು. ರಸ್ತೆಯಿಂದ ಪಾವಟಣಿಗೆಗಳವರೆಗೆ ಘೂಂಗಟ್ ಹಾಕಿಕೊಂಡು ಬಂದರೂ ನಂತರ ಅದನ್ನು ಹಿಂದಕ್ಕೆ ಸರಿಸಿ ಮುಗಳ್ನಗೆ ನಗುತ್ತ ಡ್ರಮ್ಮಿಗೆ ನೀರು ಸುರಿಯುವಳು. ಕುಡಿಯುವ ನೀರಿಟ್ಟ ಮಡಕೆಯನ್ನು ಸ್ವಚ್ಛಮಾಡಿ ಆ ನೀರನ್ನೂ ಉಪಯೋಗಕ್ಕಾಗಿ ಬೇರೊಂದು ಪುಟ್ಟ ಬಕೆಟ್ಟಿಗೆ ಸುರಿಯುವಳು. ಒಮ್ಮೊಮ್ಮೆ ಅದೇ ತಾನೇ ತಂದ ಸ್ವಚ್ಛ ನೀರು ಮೊದಲಿನ ನೀರಿಗಿಂತ ಕೊಳಕಾಗಿರುತ್ತಿತ್ತು. ನೀರು ಹಾಕಲು ಬಂದವಳು ರೇಡಿಯೋ ಕೇಳುತ್ತ, ಟೇಪರಿಕಾರ್ಡರನ್ನು ಸೋಜಿಗದಿಂದ ನೋಡುತ್ತ ನಿಲ್ಲುವಳು. ಟಾಯ್‌ಪರ್‍ಯಾಟರದ ಉಪಯೋಗವೇನು? ಎಂಬುದು ಕೊನೆಗೂ ಅವಳಿಗೆ ಹೊಳೆಯಲಿಲ್ಲ! ನಾವು ಪತಿ-ಪತ್ನಿಯರು ಯಾವ ಆತಂಕವಿಲ್ಲದೇ ಮಾತನಾಡುತ್ತಿರುವುದು, ಹತ್ತಿರ ಹತ್ತಿರ ಕುಳಿತು ಕೆಲಸ ಮಾಡುವುದನ್ನು ನೋಡಿ ಬೆಪ್ಪಾಗಿ ನಿಂತು ಬಿಡುತ್ತಿದ್ದಳು. ಮಾವ ಕೆಳಗಿನಿಂದ ಕೂಗಿದಾಗಲೇ ಓಡುತ್ತಿದ್ದಳು. ನಂತರದ ದಿನಗಳಲ್ಲಿ ಮನೆಯಲ್ಲಿ ನಾನೊಬ್ಬನೇ ಇದ್ದರೂ ಯಾವ ಅಳುಕಿಲ್ಲದೇ ನಗುತ್ತ ನೀರು ಸಾಕೆ, ಬೇಕೇ? ಎಂದು ವಿಚಾರಿಸಿ ತಂದು ಹಾಕುತ್ತಿದ್ದಳು. ಕರೆಗಂಟೆ ಹಚ್ಚಿದಾಗ ಮೋಹನನು ತಾನೆ ಬಂದು ನೀರು ತುಂಬಲು ಪ್ರಾರಂಭಿಸಿದ. ಹತ್ತುವಾಗೊಮ್ಮೆ ಜೇ[illegible] ಬಾರಿಸಿ ಹರ್ಷಗೊಳ್ಳುವ. ಮೊದಲು ಅದಕ್ಕೆ ಕೈ ಹಚ್ಚಲು ಹೆದರಿದ ಸೊಸೆ, ಕುತೂಹಲ ತಾಳಲಾರದೇ ಮೃದುವಾಗಿ ಬಾರಿಸಿದಳೊಮ್ಮೆ. ನಂತರ ಅವಳೂ ಒತ್ತೊತ್ತಿ ಬಾರಿಸಿ ತುಂಟ ಹುಡುಗಿಯಂತೆ ನಗುತ್ತ ಮೇಲೆ ಬಂದು ನೀರು ಹಾಕುತ್ತಿದ್ದಳು.

ಊರಿನವರಿಗೆ ಕರಗಂಟೆ ಆನಂದವನ್ನು ತಂದರೂ ನಮಗೆ ಕಷ್ಟಕ್ಕಿಟ್ಟುಕೊಂಡಿತು. ತಮಾಷೆಗಾಗಿ ಬಾರಿಸುತ್ತಾರೆಯೇ, ನಿಜಕ್ಕೂ ಯಾರಾದರು ಬಂದಿದ್ದಾರೆಯೇ ಎಂದು ತಿಳಿಯುವುದೂ ದುಸ್ತರವಾಯಿತು. ಹೊರಗೇಟನ್ನು ತೆಗೆಯದಂತೆ ಮಾಡಿದರೆ ಅದನ್ನು ಹಾರಿ ಬಂದು ಬಾರಿಸಿ ಓಡುವವರಿದ್ದರು. ಪತ್ನಿ ಮೇಲಿನಿಂದ ನೀರು ಸುರಿಯುತ್ತೇನೆ! ಎಂದು ಬೆದರಿಸಿದರೆ ನೀರು ಕಾಣದ ತಲೆ ಅದಕ್ಕೂ ಅಂಜಲಿಲ್ಲ! ಹುಡುಗರು ಗಂಟೆ ಬಾರಿಸಿ ಕೀಟಲೆ ಕೊಡುವುದನ್ನು ನೋಡುವುದೇ ಪರಿಸರದ ಮಹಿಳೆಯರಿಗೆ ಒಂದು ತಮಾಷೆಯಾಗಿಬಿಟ್ಟಿತ್ತು. ನಮಗೆ ತೊಂದರೆ ಕೊಡುವ ದುರುದ್ದೇಶವಿಲ್ಲದಿದ್ದರೂ ಅವರ ಮನರಂಜನೆ ನಮಗೆ ತೊಂದರೆಗಿಟ್ಟುಕೊಂಡದ್ದರಿಂದ ಕೊನೆಗೊಮ್ಮೆ ಕರೆಗಂಟೆಯನ್ನು ತೆಗೆದಿಡಲೇ ಬೇಕಾಯಿತು. ಆ ದಿನ ಹುಡುಗರು ಏನೋ ಕಳೆದುಕೊಂಡವರಂತೆ ಚಡಪಡಿಸಿದರು. ಹೊರಗೆ ಹೊರಟಾಗ ಸುತ್ತು ಗಟ್ಟಿ 'ಮಾಸ್ತರ ಸಾಬ್, ಕರೆ ಗಂಟೆಗೆ

ಏನಾಯಿತು?' ಎಂದು ಕೇಳಿದರು. ಅದನ್ನು ತೆಗೆದು ಇಡಲು ತಾವೇ ಕಾರಣರು! ಎಂದು ಆ ಸರಳ ಜೀವಿಗಳಿಗೆ ಹೊಳೆಯಲೇ ಇಲ್ಲ.

ಚತುರ್ಭುಜನಾದ ನಂತರ ನಿತ್ಯಜೀವನದಲ್ಲಿ ಕೆಲವು ಬದಲಾವಣೆಗಳಾದವು. ದೈನಂದಿನ ಭಾರಗಳಲ್ಲಿ ಕೆಲವನ್ನು ಪತ್ನಿಗೆ ಒಪ್ಪಿಸಿದೆ. ಅವಳೂ ಗೃಹಕೃತ್ಯದ ಜವಾಬ್ದಾರಿಗಳನ್ನು ಸ್ವಾಗತಿಸಿದಳು. "ಇಂದು ಕಾಳುಕಡಿ ಬೇಕು, ಸಾಬೂನು ಇಲ್ಲ. ತರಕಾರಿ ಮರೆಯಬೇಡಿರಿ" ಎಂದು ಬೇಡಿಕೆಗಳನ್ನು ಬರುತ್ತಲೇ ಇದ್ದವು. ರಜಾದಿನವೊಂದನ್ನು ಸುಖವಾಗಿ ಕಳೆಯೋಣವೆಂದು ಮನೆಯಲ್ಲೇ ಇದ್ದಾಗ ಗೋದಿಹಿಟ್ಟು ಬೀಸಿಸಿ ತರಬೇಕೆಂದು ಆರ್ಡರು ಬಂದಿತು. ಉಳಿದ ದಿನಗಳಲ್ಲಾದರೆ ಚೀಲದಲ್ಲಿ ತುಂಬಿಟ್ಟ ಕಾಲೇಜಿನ ಗೋಧಿಯನ್ನು ತೆಗೆದು ಚಕ್ಕಿ (ಗಿರಣಿ)ಗೆ ಹೋಗುತ್ತಿದ್ದೆ. ಈ ಸಲ ಕೆಲಸದಲ್ಲಿದ್ದ ಅವಳೇ ತಗೆದುಕೊಡಲೆಂದು ಕೂತಲ್ಲಿಂದ ನಾನು ಏಳಲೇ ಇಲ್ಲ. ಆಕೆ ಒಳಗೆ ಹೋಗುತ್ತಿದ್ದಂತೆ. "ಇಲಿಗಳೇನಾದರೂ ಗೋಧಿಯನ್ನು ತಿನ್ನಲು ಪ್ರಾರಂಭಿಸಿದ್ದಾವೆಯೋ ನೋಡು" ಎಂದು ಹೇಳಿದಾಗ, "ಇಲ್ಲ ಕಟ್ಟಿದ ಚೀಲ ಹಾಗೆಯೇ ಇದೆ" ಎಂದು ಬಂದ ಸಮಾಧಾನದ ಉತ್ತರಕ್ಕೆ ನಗುವಂತಾಯಿತು. "ಮಹರಾಯತಿ, ಜೋಬನೇರದ ಇಲಿಗಳು ಬಲೇ ಜೋರು. ಅವು ಚೀಲ ಬಿಡಿಸಿ ಗೋಧಿ ತಿನ್ನುವ ತೊಂದರೆ ತೆಗೆದುಕೊಳ್ಳದೇ ತೂತು ಮಾಡಿಯೇ ಭಕ್ಷಿಸುತ್ತವೆ!" ಎಂದಾಗ ತನ್ನ ಬೆಪ್ಪುತನಕ್ಕೆ ಅವಳೂ ಮನಸ್ಸೀ ನಕ್ಕಳು, ಚಕ್ಕಿಯವನು 'ಇಂದು ಬಾಜ್ರಾ ಹಾಕುತ್ತಿದ್ದೇವೆ. ನಿಮ್ಮ ಒಳ್ಳೆ ಗೋಧಿಯ ಹಿಟ್ಟು ಕೆಡಿಸುವ ಮನಸ್ಸಿಲ್ಲ. ನಾಳೆ ಬನ್ನಿ, ದಯವಿಟ್ಟು' ಎಂದು ಹೇಳಿದ. ತಿರುಗಿ ಹೊರಟಾಗ ಹತ್ತು ವರ್ಷದ ಪೋರನೊಬ್ಬ, 'ಮಾಸ್ಟರ ಸಾಬ್, ಗೋಧಿಯನ್ನು ಮನೆತನಕ ಮುಟ್ಟಿಸುತ್ತೇನೆ ಐದು ಪೈಸಾ ಕೊಡಿ' ಎಂದ. ಚೀಲವನ್ನು ಕೊಟ್ಟೆ. ಹುಡುಗ ತುಂಬ ಚೂಟಿಯಾಗಿದ್ದ. ಬಡತನ ಅವನನ್ನು ಕುಗ್ಗಿಸಿದ್ದು ಸ್ಪಷ್ಟವಿತ್ತು. ಹತ್ತು ಪೈಸೆ ಮತ್ತು ಸ್ವಲ್ಪ ತಿಂಡಿಯನ್ನೂ ಅವನಿಗೆ ಕೊಡಿಸಿದಾಗ ಗೆಲುವಾದ. ಅನ ಹೆಸರು ರಾಮಗೋಪಾಲನೆಂದೂ ಜಾತಿಯಿಂದ ಅವನು ರೇಗಾರ (ಮೋಚಿ) ಯೆಂದೂ ತಿಳಿಯಿತು. ಮರುದಿನ ಬಂದು ಗೋಧಿ ಬೀಸಿಸಿ ತರುವಂತೆ ಹೇಳಿದೆ.

ಮರುದಿನ ಆತ ಬಂದಾಗ ನಾನು ಕಾಲೇಜಿಗೆ ಹೋಗಿದ್ದರಿಂದ ಮನೆಯಾಕೆ, ಅವನಿಗೆ ಗೋಧಿ ಕೊಟ್ಟು "ಗಂದಾ ಕರಕೆ ಲಾನಾ" ಎಂದು ಸೂಚನೆ ಕೊಟ್ಟು ಕಳಿಸಿದಳು. ಅವಳು ಹಿಂದಿ ಕಲಿತು, ಮರೆತು ಬಹಳ ವರ್ಷಗಳು ಕಳೆದದ್ದರಿಂದ ಅವಳ ಹಿಂದಿ ಭಾಷೆಯೊಳಗಿಂದ ಕೊಂಕಣಿ, ಮರಾಠೀ ಶಬ್ದಗಳನ್ನು ಬೇರ್ಪಡಿಸುವುದು ಭಾರಿ ಕಷ್ಟದ ಮಾತಾಗಿತ್ತು. ಕೊಂಕಣಿಯ 'ಗಂದ' (ನುಣಪಾಗಿ) ಮತ್ತು ಹಿಂದಿಯ 'ಕರಕೇ ಲಾನಾ'

(ಮಾಡಿ ತರಬೇಕು) ಎಂದು ಸೇರಿಸಿದ್ದರಿಂದ ವಿಪರೀತ ಅರ್ಥವಾಗುತ್ತಿತ್ತು (ಹಿಂದಿಯಲ್ಲಿ ಗಂದಾ ಎಂದರೆ 'ಕೊಳಕು' ಎಂದಾಗುತ್ತದೆ.) ಗೋಪಾಲ ತಲೆಯಲ್ಲಾಡಿಸುತ್ತ ಹೋಗಿ, ಹಿಟ್ಟನ್ನು 'ಗಂದ' ವಾಗಿಯೇ ಮಾಡಿಕೊಂಡು ತಂದಿದ್ದ!

ಗೋಪಾಲ ಪ್ರತಿದಿನ ಬರಲಾರಂಭಿಸಿದ. 'ಪ್ರತಿದಿನ ಏನಾದೂ ಕೆಲಸ ಮಾಡಿಕೊಂಡುತ್ತೇನೆ. ತಿಂಗಳಿಗೆ ಮೂರು ರೂಪಾಯಿ ಕೊಡಿ' ಎಂದು ದೈನ್ಯತೆಯಿಂದ ಬೇಡಿದಾಗ ಇಲ್ಲವೆನ್ನಲಾರದೇ ಒಪ್ಪಿಕೊಂಡೆ. ಅವನು ತನಗೆ ನೆನಪಾದಾಗ, ಬಿಡುವಿದ್ದಾಗ ಬರುತ್ತಿದ್ದ. ಅವನ ಕೈ ಕಾಲು ತೀರ ಹೊಲಸಾಗಿರುತ್ತಿದ್ದುದರಿಂದ ಮನೆಗೆ ಬಂದ ಕೂಡಲೇ ಅವನ್ನು ಅವನ್ನು ಸ್ವಚ್ಛವಾಗಿ ತೊಳೆದುಕೊಂಡಾದ ಮೇಲೆ, ಏನಾದರು ಇದ್ದು ಬಿದ್ದ ಹೊರಗೆಲಸಗಳನ್ನು ಹೇಳುತ್ತಿದ್ದೆ. ಆನಂತರ, ಅವನು ಮಣ್ಣಿನಲ್ಲಿ ಆಡಿ, ಯಾರಯಾರದೋ ಬೂಟು ಪಾಲಿಶ್ ಮಾಡಿ, ನಮ್ಮ ಸಾಬೂನು, ನೀರುಗಳಿಂದ ಕೈ ಕಾಲು ತೊಳೆಯುವುದನ್ನು ಪ್ರಾರಂಭಿಸಿದ! ಅವನ ತಂದೆ ಯಾವದೋ ಜಡ್ಡಿನಿಂದ ನರಳಿ ನರಳಿ ಸತ್ತನಂತೆ. ಅವನ ಔಷಧೋಪಾಚಾರಕ್ಕೆ ಯಾವನೋ ಬನಿಯನ ಹತ್ತಿರ ತೆಗೆದುಕೊಂಡ ಸಾಲವನ್ನು ಚಕ್ರಬಡ್ಡಿ ಸಮೇತವಾಗಿ ಹಿಂತಿರುಗಿಸಲು ಅವನ ತಾಯಿ ಎಲವುಗಳನ್ನು ಸವೆಸುತ್ತಿದ್ದಳಂತೆ. ಅವನಣ್ಣ ಬೇರೆಯವರ ಹತ್ತಿರ ಬೂಟು. ಚಪ್ಪಲಿ ಹೊಲಿದು ದಿನಕ್ಕೆ ಒಂದೆರಡು ರೂಪಾಯಗಳಿಸಿದರೂ ಮನೆಯ ಖರ್ಚಿಗೆ ಏನೂ ಕೊಡುತ್ತಿರಲಿಲ್ಲವಂತೆ. ಗೋಪಾಲನ ಸ್ಥಿತಿಗತಿ ನೋಡಿದ ಯಾರಿಗೂ ಮರುಕ ಹುಟ್ಟುವಂತಿತ್ತು. ಅವನು ಬಂದಾಗೆಲ್ಲ ಇವಳು ತಪ್ಪದೇ ಏನಾದರೂ ತಿಂಡಿ ಕೊಡುತ್ತಿದ್ದಳು. ಅದನ್ನು ಅಲ್ಲಿಯೇ ತಿಂದು ಹೋಗು ಎಂದು ಹೇಳಿದರೂ ತಾಯಿಗೂ ಕೊಟ್ಟು ತಿನ್ನುತ್ತೇನೆಂದು ಮನೆಗೇ ಒಯ್ಯುತ್ತಿದ್ದ. ಅದು ಅವನ ಹೊಟ್ಟೆಯನ್ನೇ ತುಂಬದಿದ್ದಾಗ ಅದರಲ್ಲಿ ತಾಯಿಗೇನು ಕೊಟ್ಟಾನು? ಎಂದು ನಮಗೇ ಸಂಕೋಚವಾಗುತ್ತಿತ್ತು. ಅವನ ಬಟ್ಟೆಗಳು ಬೆವರಿನಿಂದ ನಾರುತ್ತಿದ್ದುದರಿಂದ ತೊಳೆದು ಹಾಕಲು ಹೇಳಿದರೆ ಇದ್ದದ್ದೇ ಇದಿಷ್ಟು ಹೇಗೆ ತೊಳೆದು ಹಾಕುವುದು? ಎಂದು ಕೇಳುತ್ತಿದ್ದ. ರಾತ್ರೆ ಒಗೆದು ಹಾಕು ಎಂದರೆ ಸಾಬೂನು ಇಲ್ಲವೆನ್ನುವ. ಹೀಗಾಗಿ ನೀರು, ಸಾಬೂನು ಒದಗಿಸಿ ವಾರಕ್ಕೊಮ್ಮೆಯಾದರೂ ಸ್ನಾನ ಮಾಡುವಂತೆ ಹೇಳಿ ತಲೆಗೆ ಎಣ್ಣೆಯನ್ನೂ ಪೂರೈಸುತ್ತಿದ್ದೆವು. ತರಕಾರಿ ತರಲು ಕಳಿಸಿದರೆ ಅವನು ಮೋಚಿ ಎಂದೋ ಏನೋ, ಒಣಗಿದ್ದನ್ನು ಕೊಟ್ಟು ಕಳಿಸುತ್ತಿದ್ದರು. ಚಕ್ಕಿಗೆ ಕಳಿಸಿದರೆ, ನಾನು ಹೋದಾಗ ಆದಷ್ಟು ಚೆನ್ನಾಗಿ ಹಿಟ್ಟು ಮಾಡಿ ಕೊಡುತ್ತಿರಲಿಲ್ಲ. ಮೋಟಾರಿನಲ್ಲಿ ಸ್ಥಳ ಹಿಡಿಯಲು ಕಳಿಸಿದರೆ ಯಾರಾದರೂ ಹೊಡೆದು ಎಬ್ಬಿಸಿ ತಾವು ಕೂಡ್ರುತ್ತಿದ್ದರು. ಅವನಿಗೆ ನಮ್ಮ ಮನೆಯೊಳಗೆ ಪ್ರವೇಶವಿದೆ ಎಂದರೆ ಅಲ್ಲಿಯ ಜೈನ, ಬ್ರಾಹ್ಮಣರು ನನಗೆ ಬಹಿಷ್ಕಾರ ಹಾಕುತ್ತಿದ್ದರೋ ಏನೋ! ನಮ್ಮ ಮನೆ ಕೋಟೆಯಂತೆ ಇದ್ದುದರಿಂದ ಒಳಗೆ ಏನು

ನಡೆದಿದೆ? ಎಂದು ತಿಳಿಯುತ್ತಲೇ ಇರಲಿಲ್ಲ. ಮನೆಯ ಮೇಲಂತಸ್ತುಗಳನ್ನು ಗುಡಿಸುವುದು, ಕಾಳು ಕಡಿ ಹಸನು ಮಾಡುವುದು, ಅವನಿಂದ ಮಾಡಿಸುತ್ತಿದ್ದೆವು. ಆತನು ಮಾಡಿದ ಇತರ ಕೆಲಸ ತೃಪ್ತಿಕರವಿರದ್ದರಿಂದ ಗೃಹಿಣಿ ಗೊಣಗುಡುತ್ತ ತಿರುಗಿ ಅವನ್ನು ಮಾಡಬೇಕಾಗುತ್ತಿತ್ತು. ಮೇಲಂತಸ್ತಿನ ಹಜಾರ, ಕಿಟಕಿಗಳನ್ನು ಸ್ವಚ್ಛ ಇಡುವಲ್ಲಿ ಮಾತ್ರ ಸ್ವಲ್ಪ ಸಹಾಯವಾಗುತ್ತಿತ್ತು. ಅಲ್ಲಿ ಶಾಂತಿದೂತರಾದ ಪಾರಿವಾಳಗಳು ರಾಜ್ಯವನ್ನು ಕಟ್ಟಿಕೊಂಡು ಪ್ರತಿದಿನ ಗಲೀಜುಮಾಡಿ ಹಾಕುತ್ತಿದ್ದವು. ಅಲ್ಲದೆ ದಿನವೆಲ್ಲ ಕುಟುರ್, ಕುಟುರ್SS ಎಂದು ಹಾಡಿ ಶಾಂತಿಭಂಗ ಮಾಡುತ್ತಿದ್ದವು. ಅವುಗಳನ್ನು ಅಲ್ಲಿಂದ ಓಡಿಸುವುದರ ಸಲುವಾಗಿ ಹತ್ತಾರು ಉಪಾಯಗಳನ್ನು ಮಾಡಿದರೂ ಯಾವದೂ ಫಲಿಸಿರಲಿಲ್ಲ. ಕೊನೆಗೆ ಅವು ಸುಖನಿದ್ರೆಯಲ್ಲಿದ್ದಾಗ ಬಡಿಗೆಯಿಂದ ಬಡಿದು ಒಂದೆರಡು ಬಾರಿ ಅವುಗಳ ನಿದ್ರಾಭಂಗ ಮಾಡಿದಾಗ ಬೇಸತ್ತು ಬೇರೆಡೆ ಹೋಗಿ ಬಿಡಾರ ಹೂಡಿದವು.

ಗೋಪಾಲನ ಹೆಚ್ಚಿನ ಸಹಾಯ ಛಾಯಾಚಿತ್ರದ ಕೊಠಡಿಯಲ್ಲಿ ಆಗುವಂತಾಯಿತು. ಕೋತಿಮರಿಯಂತೆ ಮೇಲಕ್ಕೆ ಹತ್ತಿ ಮೂಲೆ ಮೂಲೆಗಳನ್ನು ಗುಡಿಸುತ್ತಿದ್ದ. ಅಲ್ಲಿ ಇಲ್ಲಿ ಬಿದ್ದ ತುಣುಕು ಚಿತ್ರಗಳನ್ನು, ಫಿಲ್ಮ್‌ದ ತುಂಡುಗಳನ್ನು ಎತ್ತಿಕೊಂಡು ಅಚ್ಚರಿಯಿಂದ ನೋಡುತ್ತ ನಿಲ್ಲುವನು. ಅವನ್ನು ಗೆಳೆಯರಿಗೆ ತೋರಿಸುವುದಕ್ಕಾಗಿ ಜೇಬಿಗೆ ಸೇರಿಸುವನು. ಅವನು ತುಂಬಿ ಒಗೆದ ಕಸದಲ್ಲಿ ಇನ್ನೂ ಉಳಿದಿರಬಹುದಾದ ಫಿಲ್ಮ್‌ದ ತುಂಡುಗಳಿಗೆ ಹತ್ತಾರು ಹುಡುಗರು ಕಾದಿರುತ್ತಿದ್ದರು. ತಾನು ಕೆಲಸ ಮಾಡುವಾಗ ರೇಡಿಯೋ ಹಚ್ಚು ಅನ್ನುವ. ತನ್ನ ಧ್ವನಿ ಟೇಪ ಮಾಡಲು ಕೇಳಿಕೊಳ್ಳುವ. ಅವನ ಗೆಳೆಯರ ದೃಷ್ಟಿಯಲ್ಲಿ ಅವನೊಬ್ಬ ದೊಡ್ಡ ವ್ಯಕ್ತಿಯಾಗಿದ್ದ ಈಗ. ಮಾಸ್ತರ ಸಾಬರ ಮನೆಯಲ್ಲಿ ಬಂದು ಹೋಗಲು ಬೇಕಾದಷ್ಟು ಅವಕಾಶವಿದೆ ಆತನಿಗೆ. ಒಂದೆರಡು ಸಲ ತನ್ನಿಬ್ಬರು ಗೆಳೆಯರನ್ನು ಕರೆದುಕೊಂಡು ಬಂದು, ಅವರೂ ಕೆಲಸ ಮಾಡಬಯಸುತ್ತಾರೆ. ಸಂಬಳ ಏನೂ ಕೊಡಬೇಕಾಗಿಲ್ಲವೆಂದ. ಅದೆಲ್ಲ ಬೇಕಾಗಿಲ್ಲ. ಅವನೊಬ್ಬನೇ ಕೆಲಸ ಮಾಡಿದರೆ ಸಾಕು ಎಂದು ಹೇಳಿದ್ದರಿಂದ ಅವರನ್ನು ಮನೆಯ ಮುಂದಿನ ಕಲ್ಲಿನ ಆಸನದ ಮೇಲೆ ಕೂಡ್ರಿಸಿ, ಐದು ನಿಮಿಷಕ್ಕೊಮ್ಮೆ ಹೋಗಿ ಅವರನ್ನು ಮಾತನಾಡಿಸಿ ಬರುತ್ತಿದ್ದ. ಒಮ್ಮೆ ಅವನ ಛಾಯಾಚಿತ್ರವನ್ನು ತೆಗೆಯುತ್ತೇನೆಂದಾಗ ಎಲ್ಲಿಲ್ಲದ ಆನಂದವಾಗಿತ್ತವನಿಗೆ. ಆದಿನ ಶುಭ್ರವಾದ ಬಟ್ಟೆ ಧರಿಸಿ, ಮುಖ ತೊಳೆದು, ಕೂದಲು ಬಾಚಿಕೊಂಡು ಬಂದಿದ್ದ. ತನ್ನನ್ನು ಕಾಗದದ ಮೇಲೆ ಕಂಡಾಗ ಅವನಿಗಾದ ಆನಂದವನ್ನು ಬಣ್ಣಿಸುವುದು ಕಷ್ಟ. ಒಂದು ಪ್ರತಿಯನ್ನು ಅವನಿಗೇ ಕೊಟ್ಟಾಗ ಸ್ವರ್ಗ ಮೂರೇ ಬೆರಳು! ಅದು ಅವನ ಜೀವನದಲ್ಲಿ ಮೊದಲನೆಯ ಭಾವಚಿತ್ರ. ಕೊನೆಯದಾಗಿದ್ದರೂ ಆಶ್ಚರ್ಯವಿಲ್ಲ. ತನ್ನ ಗೆಳೆಯರಿಗೆ,

ಪರಿಚಯದವರಿಗೆ, ಎಲ್ಲ ತೋರಿಸಿ ಆನಂದಿಸಿದ. ಅದನ್ನು ಇಡಲು ಮನೆಯಲ್ಲಿ ಸ್ಥಳವಿಲ್ಲವೆಂದು ಜೇಬಿನಲ್ಲಿ ಇಟ್ಟುಕೊಂಡೇ ತಿರುಗುತ್ತಿದ್ದ. ಎಂಟೇ ದಿನಗಳಲ್ಲಿ ಅದು ಮಾಸಿ ಹೋಗಿದ್ದರೂ ಅದರ ಮೇಲಿನ ಪ್ರೀತಿ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ ಅವನಿಗೆ.

ಇತರೆ ಯಾವ ಕೆಲಸ ಹೇಳಿದರೂ ಗೋಪಾಲ ಮಾಡುತ್ತಿದ್ದ. ಆದರೆ ಬೂಟು, ಚಪ್ಪಲಿಗೆ ಪಾಲಿಶ್ ಮಾಡೆಂದರೆ ಜೋಡಿಗೆ ಹತ್ತು ಪೈಸಾದಂತೆ ಹಣ ಪಡೆಯದೇ ಇರುತ್ತಿರಲಿಲ್ಲ. ದಿನದಲ್ಲಿ ಕಾಲೇಜ ವಿದ್ಯಾರ್ಥಿಗಳ ಬೂಟು ಪಾಲಿಶ್ ಮಾಡಿ ದಿನಕ್ಕೆ ಹತ್ತು - ಹನ್ನೆರಡಾಣೆ ಪಡೆಯುತ್ತಿದ್ದ. ಅದರಿಂದ ಮನೆಗೆ ಬೇಕಾಗುವ ಬಾಜರಾ ತರುತ್ತಿದ್ದ. ಹಣ ಸಂಪಾದನೆ ಆಗದಿದ್ದ ದಿನ ನನ್ನಿಂದ ಹಣ ಪಡೆಯುತ್ತಿದ್ದ. ಆತ ಶಾಲೆ ಕಲಿತದ್ದು ಒಂದೇ ವರ್ಷವಾದರೂ ಲೆಕ್ಕಾಚಾರ ಸರಿಯಾಗಿ ಬರುತ್ತಿತ್ತು. ವಿಶೇಷ ಅಂತರವಿರದ, ಆತ ಮಾತನಾಡುತ್ತಿದ್ದ ರಾಜಸ್ಥಾನಿ - ಹಿಂದಿಯಿಂದ ನಾವು ರಾಜಸ್ಥಾನಿಯನ್ನು ತಕ್ಕಮಟ್ಟಿಗೆ ಅರಿಯಲು ಸಹಾಯವಾಯಿತು. ಕೊಂಕಣಿ-ರಾಜಸ್ಥಾನಿಗಳಲ್ಲಿ ಬಹಳಷ್ಟು ಶಬ್ದಗಳು ಸಾಮಾನ್ಯವಾಗಿರುವುದನ್ನು ನೋಡಿ ಆಶ್ಚರ್ಯವಾಯಿತು. ಬಹುಶಃ ಇದೇ ಕಾರಣಕ್ಕಾಗಿ ಕೆಲವರು ಸಾರಸ್ವತ ಬ್ರಾಹ್ಮಣರ ಮೂಲವನ್ನು ಗುಪ್ತಗಾಮಿನಿಯಾದ ಸರಸ್ವತಿಯ ನದೀ ತೀರದಲ್ಲಿ ಹುಡುಕುತ್ತಾರೆ. ಈಗಿನ ಪುಷ್ಕರದ ಉತ್ತರದಲ್ಲಿ ಹಿಂದೊಮ್ಮೆ ಸರಸ್ವತಿ ಹರಿಯುತ್ತಿದ್ದಳಂತೆ. ಮೂಲಪುರುಷ ಸಾರಸ್ವತ ಮುನಿಯು ಹನ್ನೆರಡು ವರ್ಷದ ಭೀಕರ ಕ್ಷಾಮ ಬಿದ್ದಾಗ, ತಾನಿದ್ದ ನದೀ ತೀರವನ್ನು ತ್ಯಜಿಸದೇ ಕೇವಲ ನದಿಯೊಳಗಿನ ಮೀನಿನ ಮೇಲೆಯೇ ಜೀವಿಸಿದನಂತೆ. ಆದ್ದರಿಂದ ಆತನ ವಂಶಜರೂ ಹೆಚ್ಚಿನ ಭಕ್ತಿಯಿಂದ ಮತ್ಸ್ಯ-ಭೋಜನವನ್ನೇ ಪಾಲಿಸುತ್ತಾರೆ! ವರ್ಷಗಟ್ಟಲೆ ಬರುವ ಕ್ಷಾಮ, ರಾಜಸ್ಥಾನದಲ್ಲಿ ಸಾಮಾನ್ಯ. ಆದ್ದರಿಂದ ಸಾರಸ್ವತ ಮುನಿ ರಾಜಸ್ಥಾನದವನೇ ಎಂಬ ವಾದವಿದೆ.

ಒಂದು ಸಲ ಅಂಗಡಿಯಿಂದ ತಂದ ಗೋದಿಯಲ್ಲಿ ಬಹಳಷ್ಟು ಕಸಕಡ್ಡಿ, ಕಲ್ಲುಗಳಿದ್ದುದರಿಂದ ಅದನ್ನು ಸ್ವಚ್ಛಮಾಡಲು ತನ್ನ ತಾಯಿಯನ್ನು ಗೋಪಾಲ ಕರೆತಂದಿದ್ದ. ಇನ್ನೂ ಹರೆಯದವಳಾದ ಅವಳು ಬಡತನದಿಂದ ಬಡಕಲಾಗಿ ಹೋಗಿದ್ದಳು. ಚೆನ್ನಾಗಿ ಹಸನು ಮಾಡಿಕೊಟ್ಟಾಗ, ಎಂಟಾಣೆ ಕೈಗೆ ಬಿದ್ದಾಗ ಹರ್ಷಗೊಂಡಿದ್ದಳು. ಇನ್ನೇನಾದೂ ಕೆಲಸವಿದ್ದರೆ ಹೇಳಿ! ಎಂದು ವಿನಂತಿಸಿಕೊಂಡು ಹೋಗಿದ್ದಳು. ಗೋಪಾಲನಿಂದಾಗಿ ಜೋಬನೇರದ ಬಾಲಜಗತ್ತಿಗೆ ನಾನು ಪರಿಚಿತನಿದ್ದೆ. ಬೀದಿಯಿಂದ ಹಾದು ಹೋಗುವಾಗ ಹತ್ತಾರು ಹುಡುಗರು 'ಮಾಸ್ತರಸಾಬ ನಮಸ್ತೆ' ಎನ್ನದೇ ಇರುತ್ತಿರಲಿಲ್ಲ. ಶಾಲೆಯ ಮುಂದಿನಿಂದ ಹೋಗುವಾಗಲಂತೂ ನಮಸ್ಕಾರಗಳ ಸುರಿಮಳೆಯಾಗುತ್ತಿತ್ತು. ಊರಿನಲ್ಲಿ ರಾಮಲೀಲಾ ಅಥವಾ ಇನ್ನಾವುದಾದರೂ ಉತ್ಸವವಿದ್ದಾಗ, ಮೆರವಣಿಗೆ,

ಮಹಾವೀರ ಜಯಂತಿಯ ಕಾರ್ಯಕ್ರಮಗಳಿದ್ದಾಗ ಛಾಯಾಚಿತ್ರ ತೆಗೆಯಲು ಕೆಮೆರಾದೊಂದಿಗೆ ಬರಲು ಹುಡುಗರು ತಪ್ಪದೇ ಆಮಂತ್ರಿಸುತ್ತಿದ್ದರು. ಆನಂತರ, ದಿನವೂ ಬಂದು ಚಿತ್ರಗಳು ತಯಾರಾಗಿವೆಯೇ ಎಂದು ಕೇಳಿ, ನೋಡಿ ಅನಂದಿಸುವರು.

ಕಾಲೇಜ ಹಾಸ್ಟೇಲಿನಲ್ಲಿ ಒಂದು ಕಳವಾಯಿತಂತೆ. ಈ ಕಳ್ಳರಿಗೆ ಸುದ್ದಿಗಾರನಾಗಿ ಕೆಲಸ ಮಾಡಿದನೆಂಬ ಆಪಾದನೆಯ ಮೇಲೆ ಗೋಪಾಲನನ್ನು ಹಿಡಿದು ಪೋಲಿಸರು ಚೆನ್ನಾಗಿ ಥಳಿಸಿದ್ದರಿಂದ ಅವನ ಮೈ ಮುಖವೆಲ್ಲ ಊದಿಕೊಂಡಿತ್ತು ಎಂದು ವಿದ್ಯಾರ್ಥಿಯೊಬ್ಬ ಹೇಳಿದ. ಈ ಅವಮಾನವನ್ನು ತಾಳಲಾರದೇ ಅವನೆಂದೂ ತಿರುಗಿ ಮುಖ ತೋರಿಸಲೇ ಇಲ್ಲ. ಅವನೂ, ತಾಯಿಯೂ ಊರನ್ನೇ ಬಿಟ್ಟಿದ್ದಾರೆ ಎಂದು ಹುಡುಗನೊಬ್ಬ ಸುದ್ದಿ ತಂದಿದ್ದ. ಕುಚಾಮನದಲ್ಲಿ ತನ್ನ ಒಬ್ಬ ಆಪ್ತರಿದ್ದಾರೆಂದು ಗೋಪಾಲ ಆಗೀಗ ಹೇಳುತ್ತಿದ್ದ. ಬಹುಶಃ ಅಲ್ಲಿಗೆ ಹೊರಟು ಹೋದನೋ ಏನೋ! ಅವನಂತಹ ಲಕ್ಷಾವಧಿ ಮಕ್ಕಳು ಕೇವಲ ಬಡತನದ ಘೋರ ಪರಿಣಾಮದಿಂದಾಗಿ ಹುಳುವಿನಂತಹ ಜೀವನ ನಡೆಸಿ ಸಾಯಬೇಕಾಗುತ್ತದೆ, ಎಂದು ನೆನೆಸಿಕೊಂಡಾಗ ನಮ್ಮದು ಅದೆಂತಹ ದೇಶ ಎಂದು ಖೇದವಾಯಿತು.

೨೩. ಪರೀಕ್ಷಾ ಕ್ರಮ

ಅಮೇರಿಕೆಯಲ್ಲಿ ಕೃಷಿಯ ಯಶಸ್ಸು ಅವರ ಶಿಕ್ಷಣ ಪದ್ಧತಿಯಲ್ಲಿ ಅಡಕವಾಗಿದೆ ಎಂದು ಭ್ರಮಿಸಿಯೋ ಏನೋ, ಭಾರತೀಯ ಕೃಷಿತಜ್ಞರು ನಮ್ಮಲ್ಲಿಯೂ ಅದೇ ಪದ್ಧತಿಯನ್ನು ಜಾರಿಯಲ್ಲಿ ತಂದಿದ್ದಾರೆ. ಹೀಗೆ ಮಾಡಿದ್ದರಿಂದ ಕತ್ತೆ - ಕುದುರೆಯಾಗುವುದಂತೂ ದೂರವೇ ಉಳಿಯಿತು. ವಿಶ್ವವಿದ್ಯಾಲಯದಿಂದ ಹೊರಬಿದ್ದ ಹೇಸರಗತ್ತೆಗಳಿಗಿಂತ ಕತ್ತೆಗಳಿದ್ದರೇ ಚೆನ್ನಾಗಿರುತ್ತಿತ್ತೇನೋ ಅನಿಸುವಂತಾಯಿತು! ವಿದ್ಯಾರ್ಥಿಗಳು ಏನನ್ನು ಓದಬೇಕು, ಎಂಬುದನ್ನು ಅವರಿಗೆ ತಿಳಿಸಿ ಅವರನ್ನು ದುಡಿಸಿ, ಅವರ ಸಮಸ್ಯೆಗಳನ್ನು ಬಿಡಿಸಿ ಅವರ ದುಡಿಮೆಯ ಪರಿಣಾಮವನ್ನು ನಿರ್ಣಯಿಸುವ ಕಾರ್ಯವನ್ನು ಶಿಕ್ಷಕರು ತಾವು ವಹಿಸಿಕೊಂಡಿದ್ದಾರೆ. ಇದನ್ನು ಸಾಧಿಸುವುದಕ್ಕಾಗಿ ಬೇಕಾದ ಸ್ವಾತಂತ್ರ್ಯವನ್ನೆಲ್ಲ ಶಿಕ್ಷಕರಿಗೆ ಕೊಡಲಾಗುತ್ತಿದೆ. ಹೀಗಾಗಿ ವಿದ್ಯಾರ್ಥಿಗಳನ್ನು ಪರೀಕ್ಷಿಸಲಿಕ್ಕೆ ವರ್ಗದ ಪ್ರಾರಂಭದಲ್ಲಿಯೇ ಐದು ನಿಮಿಷದ ಪರೀಕ್ಷೆ, ವಾರಕ್ಕೊಂದು ಪರೀಕ್ಷೆ, ತಿಂಗಳಿಗೊಂದು ಪರೀಕ್ಷೆ ತೆಗೆದುಕೊಳ್ಳಬಹುದು. ಕೇಲವರು ವರ್ಗಗಳಲ್ಲಿ ಚರ್ಚೆಗಳನ್ನು ಇಟ್ಟು ಅವುಗಳ ಮೇಲಿಂದ ವಿದ್ಯಾರ್ಥಿಗಳ ಪ್ರಗತಿಯನ್ನು ನಿರ್ಧರಿಸಬಹುದು. ಪ್ರಶ್ನೆಗಳನ್ನು ಕೊಟ್ಟು ಮನೆಯಲ್ಲಿ ಅವುಗಳ ಉತ್ತರವನ್ನು ಬರೆಯಲು ಹೇಳಬಹುದು. ಇಲ್ಲವೇ ಇವಾವ ಪರೀಕ್ಷೆಗಳನ್ನಿಡದೇ ಅವರು ಬರೆದ ವರದಿಗಳನ್ನೇ ಆಧರಿಸಿ ಪರಿಣಾಮವನ್ನು ನಿರ್ಧರಿಸಬಹುದು. ಅವರ ಪರೀಕ್ಷಾ ಪ್ರಶ್ನೆಗಳು ಮಾರುದ್ದ ಜೊಳ್ಳು ಉತ್ತರಗಳನ್ನು ಬರೆಯಲು ಅವಕಾಶ ಕೊಡದೇ ಶೇಕಡಾ ನೂರರಷ್ಟು ಸರಿಯಾದ ಮಾಹಿತಿಯನ್ನು, ವಿದ್ಯಾರ್ಥಿ ಸಂಗ್ರಹಿಸಿದ್ದಾನೆಯೇ ಎಂದು ಪರೀಕ್ಷಿಸಲು ರಚಿಸಿದವುಗಳಿವೆ. ಅವು ತಪ್ಪು ಒಪ್ಪು, ಒಂದಾಯ್ಕೆ, ಹೆಚ್ಚುವರಿ ಆಯ್ಕೆ (Multiple choice), ಶಬ್ದಗಳನ್ನು ತುಂಬುವುದು ಮೊದಲಾದವುಗಳ ಮಾದರಿಯಲ್ಲಿ ಇರಬಹುದು. ಯಾವುದೇ ಪರೀಕ್ಷೆ ಹದಿನೈದು ನಿಮಿಷಗಳಿಂದ ಒಂದು ತಾಸಿನಗಿಂತ ಹೆಚ್ಚಿನದು ಇರದ್ದರಿಂದ ಪ್ರತಿ ಕಿರುಪ್ರಶ್ನೆಗೆ ಅರೆನಿಮಿಷದಿಂದ ಐದು ನಿಮಿಷಗಳಲ್ಲಿ ಉತ್ತರಿಸಲೇ ಬೇಕಾಗುವುದು. ಕೆಲವು ಪರೀಕ್ಷೆಗಳಲ್ಲಿ ಐದು ನಿಮಿಷಗಳಾದ ನಂತರ ಪುಟ ತಿರುವಿರಿ ಎಂದು ಶಿಕ್ಷಕರೇ ಆದೇಶ ಕೊಡುವರು. ಅಂತೆಯೇ ತಿಳಿಯದ ಪ್ರಶ್ನೆಗಳಿಗೆ ಕಾಲ್ಪನಿಕ ಉತ್ತರಗಳನ್ನು ಯೋಚಿಸಿ ಕೊಡಲು ಸಾಧ್ಯವಾಗುವದೇ ಇಲ್ಲ.

ಕತ್ತೆಯನ್ನು ನೋಡದ ಅಮೇರಿಕನ್ ವಿದ್ಯಾರ್ಥಿಗಳಿಗೆ ಅದರ ಬಗ್ಗೆ ಒಂದು ಪಾಠ ಕಲಿಯಬೇಕಾಗಿತ್ತು ಎಂದು ಇಟ್ಟುಕೊಳ್ಳೋಣ. ವಿದ್ಯಾರ್ಥಿಗಳು ಅದನ್ನು ಮನೆಯಲ್ಲಿ ಓದಿಕೊಂಡು ಬಂದಿರಬೇಕು. ಅದರ ಜೀವನ, ಅಂಗಾಂಗಗಳು ಇವುಗಳ ಬಗ್ಗೆ ಕ್ಲಾಸಿನಲ್ಲಿ ಕೂಲಂಕಷವಾಗಿ ಚರ್ಚೆಯಾಗುತ್ತದೆ. ಅದರ ಅಭ್ಯಾಸಕ್ಕಾಗಿ ಛಾಯಾಚಿತ್ರ, ಚಲನಚಿತ್ರ, ಸಜೀವ ಕತ್ತೆಗಳನ್ನು ಬಳಸಬಹುದು. ಆನಂತರದ ಒಂದಾಯ್ಕೆ ಪರೀಕ್ಷೆಯಲ್ಲಿ ಕತ್ತೆಯ ಬಗ್ಗೆ ಆರು ವ್ಯಾಖ್ಯೆಗಳನ್ನು ಕೊಟ್ಟು ಅದರಲ್ಲಿ ಎಲ್ಲ ರೀತಿಯಿಂದ ಸರಿ ಇದ್ದುದನ್ನು ಗುರುತಿಸಲು ಹೇಳುವುದು. ವಿದ್ಯಾರ್ಥಿಗಳ ಚುರುಕುತನ ಗೊತ್ತು ಹಚ್ಚಲು ಕೇಳುವ ಪ್ರಶ್ನೆಗಳು ಸಾಧಾರಣವಾಗಿ ಈ ರೀತಿಯಾಗಿರುತ್ತವೆ. ೧) ಕತ್ತೆ ಚುತುಷ್ಪಾದಿ, ಎರಡು ಕೋಡಿನ ಪ್ರಾಣಿ. ೨) ಕತ್ತೆಗೆ ಎರಡು ಕಿವಿ, ಒಂದು ಜೋಡಿ ಬಾಲ ಇರುವುದು. ೩) ಕತ್ತೆ ಕಷ್ಟಸಹಿಷ್ಣು ಪ್ರಾಣಿಯಾದ್ದರಿಂದ ಭಾರವಾದ ಸಾಮಾನುಗಳನ್ನು ಹೊರಲು ಮತ್ತು ರೇಸಿನಲ್ಲಿ ಓಡಿಸಲು ಉಪಯೋಗಿಸುವರು. ೪) ಹೇಸರಗತ್ತೆ ಕತ್ತೆಯ ಮರಿಯಾಗಿದ್ದು ಹುಟ್ಟಿದಾಗ ಅದಕ್ಕೆ ಮೈತುಂಬ ದಟ್ಟವಾದ ರೋಮವಿರುವುದು. ೫) ಮೇಲಿನದು ಎಲ್ಲ ಸರಿ ಇದೆ. ೬) ಮೇಲಿನದು ಯಾವುದೂ ಸರಿಯಿಲ್ಲ. ನಮ್ಮ ದೇಶದಲ್ಲಿ ಕತ್ತೆಗಳು ಹೇರಳವಾಗಿರುವುದರಿಂದ ಮತ್ತು ಬುದ್ಧಿಯನ್ನು ಬಳಸದ ಹುಡುಗರನ್ನು ಮಾನವಾವತಾರದಲ್ಲಿ ಒಂದು ಕತ್ತೆ ಎಂದು ಭಾವಿಸುವುದರಿಂದ ನಮಗೆ ಕತ್ತೆಯ ಬಗ್ಗೆ ಹೆಚ್ಚಿಗೆ ತಿಳಿದಿದೆ. ಆದರೂ ಈ ಆರು ಉತ್ತರಗಳನ್ನು ಒಂದೇ ನಿಮಿಷದಲ್ಲಿ ಓದಿ, ಸರಿಯಾದ ಉತ್ತರ ಕಂಡುಹಿಡಿಯಲು ಆಗುತ್ತದೆಯೋ ಯತ್ನಿಸಿ ನೋಡಿ. ಆರನೇಯದೇ ಸರಿಯಾದ ಉತ್ತರವೆಂದು ಕೂಡಲೇ ಅನಿಸೀತೇ? ಕತ್ತೆಗಳು ಸಾಮಾನ್ಯವಲ್ಲದ ದೇಶದ ವಿದ್ಯಾರ್ಥಿ, ಪರಿಶ್ರಮಪಟ್ಟು ಓದಿ, ಅರ್ಥ ಮಾಡಿಕೊಳ್ಳಲು ಯತ್ನಿಸದಿದ್ದರೆ, ಅವನಿಗೆ ಕಷ್ಟಸಹಿಷ್ಣು ಪ್ರಾಣಿ, ಹೇಸರಗತ್ತೆ, ಖುರ ಮೊದಲಾದ ಶಬ್ಧಗಳು ಮಾತ್ರ ನೆನಪಿದ್ದು, ಉಳಿದವು ಮರೆತು ಹೋಗಿರುತ್ತವೆ. ಆದ್ದರಿಂದ ಎಲ್ಲ ಉತ್ತರಗಳೂ ಸರಿಯಾಗಿರುವಂತೆ ಭಾಸವಾಗುತ್ತದೆ. ಆದರೆ ಖಂಡಿತವಾಗಿ ಅರಿಯದ ಪ್ರಶ್ನೆಯನ್ನು ಅವನು ಉತ್ತರಿಸುವ ಸಾಹಸ ಮಾಡುವುದಿಲ್ಲ. ಯಾಕೆ ಗೊತ್ತೆ? ಅವನು ಆರನೇ ಉತ್ತರ ಮಾತ್ರ ಸರಿ ಇದೆ ಎಂದು ಗುರುತಿಸಿದರೆ, ಅವನಿಗೆ ಎರಡು ಗುಣ ದೊರೆತರೆ, ಬೇರೆ ಯಾವುದೋ ಸರಿ ಇದೆ! ಎಂದು ತಪ್ಪು ಗುರುತಿಸಿದರೆ ಅವನು ಇತರ ಪ್ರಶ್ನೆಗಳಲ್ಲಿ ಪಡೆದ ಗುಣಗಳಿಂದ ಒಂದನ್ನು ವಜಾ ಮಾಡುವರು. ಅದೇ ತಿಳಿಯದ್ದರಿಂದ ಹಾಗೇ ಬಿಟ್ಟರೆ. ಲಾಭವೂ ಇಲ್ಲ ಹಾನಿಯೂ ಇಲ್ಲ. ಕತ್ತೆಯ ಬಗ್ಗೆ ತಪ್ಪು, ಒಪ್ಪು ಪ್ರಶ್ನೆಯನ್ನು ಕೇಳಬೇಕಾದರೆ ಹೀಗೆ ಬರೆಯಬಹುದು: ಕತ್ತೆಯು ಕುದುರೆಯ ವರ್ಗಕ್ಕೆ ಸೇರಿದ, ಉದ್ದವಾದ ಜೋಡುಕಿವಿ, ಎರಡು ಕಣ್ಣು, ಉದ್ದ ಬಾಲ, ಎರಡು ಖುರಗಳುಳ್ಳ ಕಷ್ಟಸಹಿಷ್ಣು ಪ್ರಾಣಿ. ಇದನ್ನು ಮನಸ್ಸುಕೊಟ್ಟು ಓದದಿದ್ದರೆ, ಎಲ್ಲವೂ ಸರಿಯಾಗಿಯೇ

ಇದೆ ಎಂದು ಅನಿಸಬಹುದು. ಆದರೆ ಕತ್ತೆಗೆ ಎರಡು ಖುರಗಳಿರದೇ ಒಂದೊಂದೇ ಇರುವುದರಿಂದ ಇದು ತಪ್ಪಾದ ಮಾತು. ಒಂದು ಪರೀಕ್ಷೆಯಲ್ಲಿ ಸುಮಾರು ಹತ್ತು ಇಂಥ ವ್ಯಾಖ್ಯೆಗಳನ್ನು ಕೊಟ್ಟರೆ ಅದರಲ್ಲಿ ಅರ್ಧದಷ್ಟು ಒಪ್ಪ, ಉಳಿದವು ತಪ್ಪ ಇರುವಂತಿರಬೇಕು. ಆದ್ದರಿಂದ ವಿದ್ಯಾರ್ಥಿಯೊಬ್ಬ ಹತ್ತು ವ್ಯಾಖ್ಯೆಗಳನ್ನು ತಪ್ಪ ಅಥವಾ ಒಪ್ಪ ಎಂದು ಬರೆದರೆ ಶೇಕಡಾ ಐವತ್ತರಷ್ಟು ಗುಣಗಳು ಸಿಗಬೇಕಲ್ಲವೇ? ಆದರೆ ಅವನು ಸರಿಯಾಗಿ ಗುರುತಿಸಿದ ಉತ್ತರಕ್ಕಾಗಿ ಐದು ಗುಣಗಳನ್ನು ಪಡೆದರೆ, ತಪ್ಪ ಇದ್ದವನ್ನು ಸರಿ ಎಂದು ಬರೆದಿದ್ದರಿಂದ ಅವನು ಗಳಿಸಿದ ಗುಣಗಳಿಂದ ಐದು ಗುಣಗಳನ್ನು ಕಳೆಯುವುದರಿಂದ ಅಮೇರಿಕೆಯಲ್ಲಿ ಅವನಿಗೆ ಸಿಗುವುದು ದೊಡ್ಡ ಶೂನ್ಯ ಮಾತ್ರ. ಆದರೆ ಭಾರತದಲ್ಲಿ ಆ ವಿದ್ಯಾರ್ಥಿಗೆ ಐವತ್ತು ಗುಣಗಳು ದೊರೆತು ದ್ವಿತೀಯ ಶ್ರೇಣಿಯ ಅರ್ಹತೆ ಬರುತ್ತದೆ!

ಒಂದು ವಿಷಯದಲ್ಲಿ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯು ಪಡೆದ ಗುಣಗಳನ್ನು ಅವಲಂಬಿಸಿ, ಎ.ಬಿ.ಸಿ.ಡಿ. ಯೊಳಗಿನ ಯಾವ ಗ್ರೇಡು ಎಂದು ನಿರ್ಧರಿಸುವರು. ಸರಾಸರಿ ಗುಣಗಳನ್ನು ಪಡೆದರೆ 'ಡಿ', ನಾಲವತ್ತಕ್ಕೆ 'ಸಿ', ಐವತ್ತಕ್ಕೆ 'ಬಿ', ಅರವತ್ತಕ್ಕೆ 'ಎ' ಗ್ರೇಡ ಎಂದು ನಿರ್ದಿಷ್ಟಪಡಿಸಿಲ್ಲ. ಗಣಿತದಂತಹ ವಿಷಯದಲ್ಲಿ ಶೇಕಡಾ ತೊಂಭತ್ತೈದಕ್ಕಿಂತ ಹೆಚ್ಚಿಗೆ ಗುಣ ಪಡೆದವರಿಗೆ 'ಎ' ಗ್ರೇಡ ಕೊಟ್ಟರೆ, ಜೀವಿಶಾಸ್ತ್ರದಲ್ಲಿ ಎಂಭತ್ತು ಗುಣಗಳಿಗೆ ಅದೇ ಗ್ರೇಡ ಕೊಡಬಹುದು. ಇದನ್ನು ನಿರ್ಧರಿಸುವುದಕ್ಕಾಗಿ ಸ್ಟೆಟಿಸ್ಟಿಕ್ಸ್ (ಸಂಖ್ಯಾಶಾಸ್ತ್ರ)ದ ಮೊರೆ ಹೋಗುವರು. ಅದರ ಪ್ರಕಾರ ನೂರಿನ್ನೂರು ವಿದ್ಯಾರ್ಥಿಗಳು ಇರುವ ವರ್ಗದಲ್ಲಿ ಎಲ್ಲರೂ ಜಾಣರು, ಇಲ್ಲವೇ ದಡ್ಡರು ಇರದೇ ಅಲ್ಪಸಂಖ್ಯಾತರು ಜಾಣರೂ, ದಡ್ಡರೂ ಇದ್ದು, ಬಹುಸಂಖ್ಯಾತರು ಮಧ್ಯಮರಿರುವರು. ಆದ್ದರಿಂದ ಯಾವುದೇ ದೊಡ್ಡ ಕ್ಲಾಸಿನಲ್ಲಿ ಹುಡುಗರು ದೊರಕಿಸಿದ ಗುಣಗಳ ಗ್ರಾಫ್ ತೆಗೆದರೆ, ಹೆಚ್ಚು ಕಡಿಮೆ ಅದಕ್ಕೆ ಒಂದೇ ಆಕಾರ ಬರುತ್ತದೆ. ಇದನ್ನು ಅವರು ಹಲವಾರು ಪ್ರಯೋಗ ಮಾಡಿ ಸಿದ್ಧಪಡಿಸಿದ್ದಾರೆ. ಆದ್ದರಿಂದ ಯಾವುದೇ ಕ್ಲಾಸಿಗೆ ಗ್ರೇಡುಗಳನ್ನು ಕೊಡುವಾಗ, ವಿದ್ಯಾರ್ಥಿಗಳು ಪಡೆದ ಗುಣಗಳನ್ನು ಗ್ರಾಫ್ ತೆಗೆದು ಅನಂತರ ನಿರ್ಧರಿಸುವರು. ಹೀಗೆ ಮಾಡುವುದರಿಂದ ಒಂದೇ ಕ್ಲಾಸಿನ ವಿದ್ಯಾರ್ಥಿಗಳಿಗೆ ಉದಾರಿ ಪ್ರಾಧ್ಯಾಪಕನು ಪರೀಕ್ಷೆ ಮಾಡಿ ೭೦ ರಿಂದ ೧೦೦ ಗುಣಗಳನ್ನು ಕೊಟ್ಟರೂ ಇನ್ನೊಬ್ಬ ಕೈ ಬಿಗಿಯ ಶಿಕ್ಷಕ ಅದೇ ವಿದ್ಯಾರ್ಥಿಗಳಿಗೆ ೪೦ ರಿಂದ ೭೦ ಗುಣಗಳನ್ನು ಕೊಟ್ಟರೂ ಇಬ್ಬರೂ ಗ್ರಾಫ್ ತೆಗೆದು ಗ್ರೇಡು ಕೊಟ್ಟರೆ, ಇಬ್ಬರೂ ಅವೇ ವಿದ್ಯಾರ್ಥಿಗಳಿಗೆ ಅವೇ ಗ್ರೇಡ ಕೊಟ್ಟಂತಾಗುವುದು. ಇದರಂತೆ ವಿದ್ಯಾರ್ಥಿಗಳು ಅಭ್ಯಸಿಸುವ ಎಲ್ಲ ವಿಷಯಗಳ ಗ್ರೇಡಗಳ ಸರಾಸರಿ ತೆಗೆದು ವಿದ್ಯಾರ್ಥಿಯ ಒಟ್ಟಾರೆ ಪರಿಣಾಮದ ಗ್ರೇಡನ್ನು ನಿರ್ಧರಿಸುವರು. ಹೀಗೆ ಮಾಡುವುದರಿಂದ ವಿದ್ಯಾರ್ಥಿಗೆ ತನ್ನ ಯೋಗ್ಯತೆಯನ್ನು

ತೋರಿಸಲು ಹಲವಾರು ಸಂದರ್ಭಗಳು ಸಿಗುವುದಲ್ಲದೇ ಸುಧಾರಿಸಿಕೊಳ್ಳಲೂ ಸಾಧ್ಯ. ನಮ್ಮ ಶಿಕ್ಷಣ ಕ್ರಮದಲ್ಲಿ ಅಂತಿಮ ಲೇಖೀ ಪರೀಕ್ಷೆಯೊಂದೇ ಮುಖ್ಯವಾದ್ದರಿಂದ ವರ್ಷದುದ್ದಕ್ಕೂ ದಂಡಿಯದವರು, ನಿರೀಕ್ಷಿಸಿದ ಕೆಲವೇ ಪ್ರಶ್ನೆಗಳಿಗೆ ಉತ್ತರಗಳನ್ನು ತಯಾರಿಸಿ ಪ್ರಥಮ ವರ್ಗಪಡೆದು, ಯಶಸ್ಸನ್ನು ಸಂಪಾದಿಸಬಹುದು. ಇಲ್ಲವೇ ಜಾಣ ವಿದ್ಯಾರ್ಥಿಯೊಬ್ಬ, ಪರೀಕ್ಷೆಯ ಸಮಯಕ್ಕೆ ಬೇನೆ ಬಿದ್ದು, ಓದಲಾಗದೇ ಪರೀಕ್ಷಾ ಭಯದಿಂದ ಮೂರನೆಯ ವರ್ಗದಲ್ಲಿ ಪಾಸಾಗಿ ಜೀವನವನ್ನೇ ಹಾಳುಮಾಡಿಕೊಳ್ಳಬಹುದು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ದೋಷಗಳಿದ್ದಂತೆ ಅವರಲ್ಲೂ ಇವೆ. ಅವರ ಶಿಕ್ಷಕರು ಭೇದ - ಭಾವ ತಾಳದ ನ್ಯಾಯಶೀಲರು ಇರಬೇಕಾದಂತೆ, ವಿದ್ಯಾರ್ಥಿಗಳೂ ಪರೀಕ್ಷೆಗಳಲ್ಲಿ ಅನ್ಯಾಯದಿಂದ ಗ್ರೇಡುಗಳನ್ನು ದೊರಕಿಸುವ ಹಂಬಲದವರು ಇರಬಾರದು. ನಕಲು ಮಾಡಲು ಆ ಪದ್ಧತಿಯಲ್ಲಿ ಇದ್ದಷ್ಟು ಸುಲಭವಾದ ಅವಕಾಶ ಬೇರೆಲ್ಲಿಯೂ ಇಲ್ಲ.

ಅಮೇರಿಕನ್ ಶಿಕ್ಷಣ ಪದ್ಧತಿ ನಮ್ಮದಕ್ಕಿಂತ ಬಹಳ ಭಿನ್ನವಾಗಿರುವುದರಿಂದ ಅವರದನ್ನು ಬಲು ಸುಲಭವಾಗಿ ನಮ್ಮದನ್ನಾಗಿ ಮಾಡಿಕೊಳ್ಳುವಂತೆ ಇಲ್ಲ. ಆ ಪದ್ಧತಿಯನ್ನು ಸರಿಯಾಗಿ ತಿಳಿದುಕೊಂಡವರು ಜೋಬನೇರ ಕಾಲೇಜಿನಲ್ಲಿ ಕೆಲವರೇ ಇದ್ದರು. ಆ ಪದ್ಧತಿಯನ್ನು ಕಾಲೇಜಿನಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನು ತಿಳಿಹೇಳುವುದಕ್ಕಾಗಿ ಬಿ.ಪಿ.ಯವರನ್ನೇ ನೇಮಿಸಲಾಯಿತು! ಆ ಕುರಿತೇ ಅವರು ಅಮೇರಿಕೆಗೆ ಹೋಗಿ ಬಂದದ್ದು. ಅಲ್ಲಿ ಸ್ವತಃ ವಿದ್ಯಾಭ್ಯಾಸ ಮಾಡದ್ದರಿಂದ ಅವರಿಗೇ ಅರ್ಥವಾಗದ್ದನ್ನು ಉಳಿದವರಿಗೆ ಹೇಗೆ ವಿವರಿಸುವರು? ಅಂತೆಯೇ ಪ್ರತಿಯೊಬ್ಬರೂ ತನಗೆ ತಿಳಿದ ವಿಧಾನವನ್ನೇ ಬಳಸುತ್ತಿದ್ದರಲ್ಲದೇ ವಿದ್ಯಾರ್ಥಿಗಳು ಡೀನರ ಹತ್ತಿರ ದೂರಿಕೊಳ್ಳಬಾರದೆಂದು ಬಿಚ್ಚು ಮನಸ್ಸಿನ ಗುಣಗಳನ್ನು ಕೊಡಲಾರಂಭಿಸಿದರು. ಕೆಲವರು ತಯಾರಿಸಿದ ಪ್ರಶ್ನೆಪತ್ರಿಕೆಗಳಂತೂ ತೀರ ಹಾಸ್ಯಾಸ್ಪದವಾಗಿರುತ್ತಿದ್ದವು. ಕತ್ತೆಯ ಬಗ್ಗೆ ಒಂದಾಯ್ಕೆಯ ಪ್ರಶ್ನೆ ಪತ್ರಿಕೆ ತಯಾರಿಸಿದರೆ ಹೀಗೆ ಇರುತ್ತಿತ್ತೆಂದರೆ ಅತಿಶಯೋಕ್ತಿಯಾಗಲಾರದು. ೧) ಕತ್ತೆ ಐದು ಕಾಲು, ಒಂದು ಕೋಡು ಇರುವ ಪ್ರಾಣಿ. ೨) ಕತ್ತೆಗೆ ಒಂದು ಕಿವಿ ಎರಡು ಬಾಲಗಳಿರುತ್ತವೆ. ೩) ಅದು ಕಷ್ಟಸಹಿಷ್ಣು ಪ್ರಾಣಿಯಾದರೂ ಭಾರ ಹೊರಲಾರದು. ೪) ಹೇಸರಗತ್ತೆ ಕುದುರೆಯ ಮರಿ. ೫) ಕತ್ತೆ, ಮೊಟ್ಟೆಗಳನ್ನು ಇಡುವ ಪ್ರಾಣಿ, ೬) ಮೇಲಿನದು ಯವುದೂ ಸರಿಯಲ್ಲ. ಈ ಪ್ರಶ್ನೆ ಪತ್ರಿಕೆ ನೋಡಿದಾಗ ಕತ್ತೆಯ ಬಗ್ಗೆ ಏನೂ ಅರಿಯದವರಿಗೂ ಸರಿಯಾದ ಉತ್ತರ ಕೂಡಲೇ ಹೊಳೆಯುವಂತಿದೆ. ಈ ಪ್ರಶ್ನೆಗಳನ್ನು ಉತ್ತರಿಸಲು ಎರಡು ತಾಸುಗಳನ್ನು ಕೊಟ್ಟಿರುವುದರಿಂದ, ಪಕ್ಕದಲ್ಲಿ ಕುಳಿತ ವಿದ್ಯಾರ್ಥಿಗಳು ಬರೆದ ಉತ್ತರವನ್ನು ನೋಡಿ ಸರಸರಿಯನ್ನು ತೆಗೆದು ತನ್ನ ಉತ್ತರವನ್ನು ಬರೆಯಲು ಸಾಕಷ್ಟು ವೇಳೆ ಅವನಿಗೆ

ಸಿಗುತ್ತದೆ ಈ ಪದ್ಧತಿಯಲ್ಲಿ ಒಮ್ಮೆ ಬರೆದ ಉತ್ತರಗಳನ್ನು ತಿದ್ದಿ ಬರೆಯುವ ಹಾಗಿಲ್ಲ. ಆದರೆ ಜೋಬನೇರದಲ್ಲಿ ಅವರು ಎಷ್ಟು ಸಲ ತಿದ್ದಿದರೂ ಕೊನೆಯ ಉತ್ತರವನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುವ ಏರ್ಪಾಡು ಇತ್ತು. ಪ್ರಶ್ನೆಗಳನ್ನು 'ಅಮೇರಿಕನ್' ಮಾದರಿಯಲ್ಲಿ ತಯಾರಿಸಿದರೂ ಗುಣ ಹಾಗು ವರ್ಗ ಕೊಡುವ ಪದ್ಧತಿ ಸಂಪೂರ್ಣ ಭಾರತೀಯವಾಗಿದೆ.

ಸರಿಯಾದ ಉತ್ತರಕ್ಕಷ್ಟೆ ಗುಣಗಳನ್ನು ಕೊಟ್ಟು ಊಹೆಯಿಂದಲೇ ಬರೆದವುಗಳಿಗೆ ಯಾವ ಶಿಕ್ಷೆ ಅಥವಾ ವಜಾ ಬಾಕಿಯ ವ್ಯವಸ್ಥೆಯಿಲ್ಲದ್ದರಿಂದ ವಿದ್ಯಾರ್ಥಿಗಳು ವಿಷಯ ಅರಿತದ್ದಕ್ಕಿಂತ ಬಹು ಪಾಲು ಹೆಚ್ಚಿನ ಗುಣಗಳನ್ನು ಪಡೆಯಲಾರಂಭಿಸಿದರು. ಗ್ರೇಡ ಕೊಡುವಾಗ ಗ್ರಾಫ, ಗೀಫ ತೆಗೆಯುವ ಗೋಜಿಗೆ ಹೋಗದೇ ಹಿಂದಿನ ಪ್ರಥಮ, ದ್ವಿತೀಯ, ತೃತೀಯ ದರ್ಜೆಗೆ ಬದಲಾಗಿ ಗ್ರೇಡ ಕೊಡಲಾರಂಭಿಸಿದರು. ಇದರಿಂದಾಗಿ ಶ್ರಮವಹಿಸದಿದ್ದರೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಗ್ರೇಡ ಸಿಗಲಾರಂಭಿಸಿದವು. ಅಲ್ಲದೇ ಕೆಲವು ಗುಣಗಳಿಂದ ಸರಾಸರಿ ಗ್ರೇಡ ಹಾಳಾಗುವಲ್ಲಿ ಶಿಕ್ಷಕರಿಗೆ ಸಂಪರ್ಕ ಇರುವ ಜನರಿಂದ ಹೇಳಿಸುವುದು ಅಧಿಕವಾಯಿತು. ಶಿಕ್ಷಕರೆಲ್ಲ ಸ್ಥಾನಿಕ ರಾಜಕಾರಣದಿಂದ ಲಾಭ ಪಡೆದವರೇ ಆದ್ದರಿಂದ ಇಂಥ ಒತ್ತಾಯಕ್ಕೆ ಮಣಿಯದಿರುವುದು ಅವರಿಗೆ ಸಾಧ್ಯವಿರಲಿಲ್ಲ. ಇದರ ನಂತರ ಪ್ರತಿಯೊಂದು ವಿಷಯದಲ್ಲಿ ಕೊಟ್ಟ ಗ್ರೇಡುಗಳು ಸರಿಯಾಗಿವೆಯೇ ಎಂದು ನಿರ್ಧರಿಸಲು ಪ್ರಾಧ್ಯಾಪಕರ ಸಭೆಯೊಂದು ಸೇರುವುದು. ಆಗ ಪ್ರತಿಯೊಬ್ಬ ಶಿಕ್ಷಕ, ತಾನು ಕಲಿಸಿದ ವಿದ್ಯಾರ್ಥಿಗಳ ಸಂಖ್ಯೆ ಪಡೆದ ಕನಿಷ್ಟ ಮತ್ತು ಶ್ರೇಷ್ಠ ಗುಣಗಳು ಮತ್ತು ಕೊಟ್ಟ ಗ್ರೇಡುಗಳನ್ನು ಕರಿಹಲಗೆಯ ಮೇಲೆ ಬರೆಯಬೇಕು. ಅಲ್ಲಿ ಡೀನ ಮತ್ತು ಇನ್ನಿತರ ಮುಖ್ಯ ಪ್ರಾಧ್ಯಾಪಕರು ಕೊನೆಗೊಮ್ಮೆ ವಿದ್ಯಾರ್ಥಿಗಳ ಗ್ರೇಡನ್ನು ನಿರ್ಧರಿಸುವರು. ಈ ಸಭೆಯಲ್ಲಿ ಒಂದು ವಿಷಯದಲ್ಲಿ 'ಎ' ಗ್ರೇಡ ಕಡಿಮೆಯಿದ್ದು 'ಸಿ' ಹೆಚ್ಚಾಗಿದ್ದರಿಂದ, 'ಬಿ' ದ ಕೆಲವರದನ್ನು 'ಎ'ಗೆ ವರ್ಗಾಯಿಸಿ, 'ಸಿ' ದವರದನ್ನು 'ಬಿ'ಗೆ ವರ್ಗಾಯಿಸಲು ಆಜ್ಞೆ ಕೊಡುವರು. ಕೇವಲ ನಾಲ್ಕೈದು ವಿದ್ಯಾರ್ಥಿಗಳಿರುವ ಸ್ನಾತಕೋತ್ತರ ಕ್ಲಾಸಿಗೂ ಇದೇ ಕಾನೂನು ಅನ್ವಯಿಸುವಂತೆ ಮಾಡುವುದು ಹಾಸ್ಯಸ್ಪದ. ಶಿಕ್ಷಕರ ಸಭೆ ಇನ್ನೂ ನಡೆಯುತ್ತಿರುವಾಗಲೇ ಅಲ್ಲಿ ನಡೆದ ಮಾತುಕತೆಗಳ ಚರ್ಚೆ ಆಗಲೇ ವಿದ್ಯಾರ್ಥಿಗಳಿಗೆ ತಲುಪುವ ಗುಪ್ತ ವ್ಯವಸ್ಥೆ ಇದೆ. ಮಾರಾಟಕ್ಕಿರುವ ಈ ಹೆಚ್ಚಿನ ಗ್ರೇಡುಗಳನ್ನು ಪಡೆಯುವುದರ ಸಲುವಾಗಿ ಶಿಕ್ಷಕರಲ್ಲಿ ವಿದ್ಯಾರ್ಥಿಗಳು ಎಡತಾಕುತ್ತಿರುತ್ತಾರೆ. ರಜಪೂತ, ಮಾರವಾಡಿ, ಜಾಠ ಮತ್ತು ಕಾಯಸ್ಥರು ತಮ್ಮ ತಮ್ಮವರಿಗೇ ಈ ಸಭೆಯ ನಿರ್ಣಯದ ಲಾಭವನ್ನು ಕೊಡಿಸಲು ಯತ್ನಿಸುವುದರಿಂದ ಸಿಗದಿದ್ದವರು ಅಸಂತೋಷಗೊಳ್ಳುತ್ತಾರೆ. ಅಮೇರಿಕೆಯ ಶಿಕ್ಷಣ ಕ್ರಮ, ರಾಜಸ್ಥಾನಕ್ಕೆ ಬಂದಾಗ, ಶಿಕ್ಷಕನಾದವನು ಆದರ್ಶ ಮತ್ತು

ನ್ಯಾಯಬುದ್ಧಿಗಳನ್ನು ಕಳೆದುಕೊಂಡಿದ್ದರಿಂದ ವಿದ್ಯಾರ್ಥಿಯ ಬಗೆಗಿನ ಎಲ್ಲ ತೀರ್ಪನ್ನೂ ಡೀನರು ಇಲ್ಲವೇ ವಿ.ವಿ. ದ ಪ್ರಮುಖರು ಕೊಡುತ್ತಿದ್ದರು. ಶಿಕ್ಷಕನು ತನಗೆ ಸರಿ ಎನಿಸಿದಂತೆ ಪರೀಕ್ಷೆಗಳನ್ನು ತೆಗೆದುಕೊಳ್ಳುವುದರ ಬದಲಾಗಿ ಅರೆವರ್ಷದಲ್ಲಿ (Semester)ಕೊಳ್ಳಬೇಕೆಂದು ರಜಿಸ್ಟ್ರಾರರೇ ತಿಳಿಸುವರು. ಆ ದಿನಗಳಲ್ಲಿ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗುವರು. ಪಂದ್ಯಾಟಗಳಿಗೆ ಹೋಗುವರು. ವಾರ್ಷಿಕ ಸಮ್ಮೇಳನದ ಸಿದ್ಧತೆ ಮಾಡಬೇಕಾಗುತ್ತದೆ. ಹೋಳಿ ಹಬ್ಬ ಬರುತ್ತದೆ. ಇಲ್ಲವೇ ರಾಜಕಾರಣಿಯೊಬ್ಬ ಸತ್ತಿರುತ್ತಾನೆ. ಸರಿ, ವಿದ್ಯಾರ್ಥಿಗಳು ಡೀನರನ್ನು ಭೆಟ್ಟಿಯಾಗಿ ಪರೀಕ್ಷೆಯನ್ನು ಮುಂದಕ್ಕೆ ಹಾಕಿಸಿಕೊಳ್ಳುವರು. ಸಕಾಲದಲ್ಲಿ ನಡೆಯುವ ಪರೀಕ್ಷೆಗಳಿಗಿಂತ ಮುಂದೂಡಲ್ಪಟ್ಟ ಪರೀಕ್ಷೆಗಳೇ ಹೆಚ್ಚು ಪ್ರಮಾಣದಲ್ಲಿದ್ದವು. ತಪ್ಪಿಸಲಿಕ್ಕಾಗದ ಅನಾನುಕೂಲತೆಯಿಂದ ವಿದ್ಯಾರ್ಥಿಗೆ ಯಾವುದೊಂದು ಪರೀಕ್ಷೆ ಕೊಡಲಾಗದಿದ್ದರೆ ಅದನ್ನು ಆತ ಮುಂಚಿತವಾಗಿ ಶಿಕ್ಷಕರಿಗೆ ತಿಳಿಸಿ ಅವರು ಒಪ್ಪಿದರೆ ಇನ್ನೊಂದು ಪರೀಕ್ಷೆ ಕೊಡಬಹುದೆಂಬ ಸವಲತ್ತು ಅಮೇರಿಕನ್ ಅಭ್ಯಾಸಕ್ರಮದಲ್ಲಿಯೂ ಇದೆ. ಆದರೆ ಇಂಥ ಸಂದರ್ಭಗಳು ಬೇರಳಿನಿಂದ ಎಣಿಸುವಷ್ಟು ಆ ದೇಶದಲ್ಲಿದ್ದರೆ, ಜೋಬನೇರದಲ್ಲಿ ಇಂಥವೇ ಬಹುಸಂಖ್ಯಾಕವಾಗಿದ್ದವು. ಮನೆಯಿಂದ ತಂತಿಯನ್ನು ತರಿಸಿಕೊಳ್ಳುವರು, ಡಾಕ್ಟರರಿಗೆ ಐದು ರೂಪಾಯಿ ಕೊಟ್ಟು ತಲೆ, ಹೊಟ್ಟೆನೋವಿಗಾಗಿ ಸರ್ಟಿಫಿಕೇಟು ಪಡೆದು, ಅದರೊಂದಿಗೆ ತನ್ನದೊಂದು ಅರ್ಜಿ ಬರೆದು, ಯಾವನೋ ಗುಮಾಸ್ತನ ಕೈಯಲ್ಲಿ ಕೊಟ್ಟು ವಿದ್ಯಾರ್ಥಿಯು ಹೋಗಿಬಿಡುವನು. ಈ ಅರ್ಜಿಗಳ ಬಗ್ಗೆ ಆ ಗುಮಾಸ್ತನು, ಶಿಕ್ಷಕನಿಗೆ ಯಾವುದೊಂದು ಮಾಹಿತಿಯನ್ನೂ ಪೂರೈಸದಿದ್ದುದರಿಂದ ಐವತ್ತು ವಿದ್ಯಾರ್ಥಿಗಳಿಗಾಗಿ ತಯಾರಿಸಿದ ಪ್ರಶ್ನೆ ಪತ್ರಿಕೆಗಳನ್ನು ಐವರಿಗೇ ಹಂಚುವ ಸಂದರ್ಭ ಬಂದಿತ್ತು. ಸಕಾಲದಲ್ಲಿ ಪರೀಕ್ಷೆ ತೆಗೆದುಕೊಳ್ಳದೇ ಆಮೇಲೆ ತೆಗೆದುಕೊಂಡರೆ ವಿಶೇಷ ಲಾಭಗಳಿವೆ, ಎಂಬುದನ್ನು ವಿದ್ಯಾರ್ಥಿಗಳು ಅನುಭವದಿಂದ ಕಂಡುಕೊಂಡಿದ್ದಾರೆ. ಪ್ರತಿಸಲವೂ ಈ ಹೊಸ ಮಾದರಿಯ ಪ್ರಶ್ನೆ ಪತ್ರಿಕೆಯನ್ನು ತಯಾರಿಸಿ ಸ್ಟೆನಸಿಲ್ ಕೊರೆಯಿಸಿ ಸಾಯಕ್ಲೋಸ್ಟಾಯಿಲ್ ಮಾಡಿಸುವುದು ತಲೆಹೊಡತದ ಕೆಲಸವಾದ್ದರಿಂದ, ಅದರಿಂದ ಪರಿಹಾರ ಪಡೆಯಲು ಹಿಂದಿನ ಪರೀಕ್ಷೆಗೆ ಕೊಟ್ಟ ಪತ್ರಿಕೆಗಳನ್ನೇ ತಿರುಗಿ ಕೊಡುವುದು ಹೆಚ್ಚು...! ಅಂದ ಮೇಲೆ ಇಂಥ ಪ್ರಶ್ನೆಗಳಿಗೆ ಉತ್ತರ ತಯಾರಿಸುವುದು ಸುಲಭ. ನಂತರ ಪರೀಕ್ಷೆಯ ಸಮಯದಲ್ಲಿ ಶಿಕ್ಷಕನಿಗೆ ಬೇರೆ ವರ್ಗಕ್ಕೆ ಹೋಗಬೇಕಾಗುವುದರಿಂದ ಮೇಲ್ವಿಚಾರಣೆಗೆ ತಮ್ಮ ಕೈ ಕೆಳಗಿನವರನ್ನು ನೇಮಿಸಿ ಹೋಗಿರುವರು. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪುಸ್ತಕ, ಟಿಪ್ಪಣಿಗಳನ್ನು ನೋಡಿ ಬರೆಯಲು ಯಾವ ಆತಂಕವೂ ಇರುವುದಿಲ್ಲ. ಜಾತಿಯ ಶಿಕ್ಷಕನಿದ್ದರೆ ಇತರ ಸವಲತ್ತುಗಳೂ ದೊರೆಯುತ್ತವೆ. ಎರಡನೆ ಸಲವೂ ಪರೀಕ್ಷೆ

ತೆಗೆದುಕೊಳ್ಳಲಾಗದವರಿಗೆ ಅಂತಿಮ ಪರೀಕ್ಷೆಯ ಮೊದಲು ಇನ್ನೊಂದು ಪರೀಕ್ಷೆ ಕೊಡಬೇಕೆಂದು ನೋಟೀಸು ಬಂದಿತು. ಹೀಗಾಗಿ ಶಿಕ್ಷಕನು ಕಲಿಸುವುದಕ್ಕಿಂತ ಪರೀಕ್ಷೆಗಳಲ್ಲಿ ಹೆಚ್ಚು ವೇಳೆ ತೊಡಗಿಸುವಂತೆ ಆಯಿತು.

ನನ್ನ ಸ್ನಾತಕೋತ್ತರ ವರ್ಗ ಚಿಕ್ಕದಿದ್ದುದರಿಂದ ಅದನ್ನು ನಿಯಂತ್ರಿಸುವುದು ಸುಲಭವಾಗಿರುತ್ತಿತ್ತು. ಅವರಿಗೆ ಮೊದಲು ನಾನು ಅನುಸರಿಸುತ್ತಿದ್ದ ವಿಧಾನವನ್ನು ವಿವರಿಸುತ್ತಿದ್ದೆ. ಪ್ರಾಮಾಣಿಕ ದುಡಿತ, ವಿಷಯ ಗ್ರಾಹಕತೆಗೆ ಪ್ರಾಧಾನ್ಯ ಕೊಟ್ಟು, ಪರೀಕ್ಷೆಗಳು ಸಕಾಲದಲ್ಲಿ ನಡೆಯಲೇಬೇಕು. ಕುಂಟನೆಪದ ಮೇಲೆ ತಪ್ಪಿಕೊಳ್ಳುವವರಿಗೆ ಹೆಚ್ಚು ಬಿಗಿಯಾದ ಪ್ರಶ್ನೆಗಳನ್ನು ಕೊಡಲಾಗುವುದು. ಹಾಗೆಯೇ ಬಿಗಿಯಿಂದ ಗುಣಗಳನ್ನು ಕೊಡಲಾಗುವುದು ಎಂದು ಹೇಳಿದ್ದರಿಂದ ಪರೀಕ್ಷೆಗಳನ್ನು ತಪ್ಪಿಸಿಕೊಳ್ಳುವ ಸಾಹಸವನ್ನು ಯಾರೂ ಮಾಡಿರಲಿಲ್ಲ. ಅಲ್ಲದೇ ರಾಜಕಾರಣ, ಡೀನರು, ಬಿ.ಪಿ.ಯವರು ಎಲ್ಲರೂ ನನಗೆ ದೂರದವರಾದ್ದರಿಂದ ನನ್ನಿಂದ ಸೌಲಭ್ಯಗಳನ್ನು ದೊರಕಿಸಿಕೊಳ್ಳುವುದು ಸುಲಭವಲ್ಲವೆಂದು ಅವರು ತಿಳಿದಿದ್ದರು. ಪ್ರಶ್ನೆಪತ್ರಿಕೆಗಳೆಲ್ಲ ಕಂಠಪಾಠ ಮಾಡುವ ವಿದ್ಯಾರ್ಥಿಗಳನ್ನು ಮೋಸಗೊಳಿಸಿ ವಿಷಯಗ್ರಹಣ - ಜಾಣ್ಮೆಗಳನ್ನು ಗೊತ್ತು ಹಚ್ಚುವಂತಹವು ಇದ್ದುದರಿಂದ ಕ್ಲಾಸಿನ ಟಿಪ್ಪಣಿಗಳಾಗಲಿ, ಪಠ್ಯಪುಸ್ತಕಗಳಾಗಲಿ ಸಹಾಯ ಮಾಡುವಂಥವು ಇರಲಿಲ್ಲ. ಸಾಮಾನ್ಯವಾಗಿ ಎಲ್ಲರೂ ಜಾಣರೇ (ಒಬ್ಬಿಬ್ಬರನ್ನು ಬಿಟ್ಟು) ಇದ್ದುದರಿಂದ ಒಳ್ಳೆಯ ಗ್ರೇಡುಗಳನ್ನು ಪಡೆದರು. ಅವರ ಪರೀಕ್ಷೆ ನಾನು ಮಾಡುತ್ತಿದ್ದಂತೆ ಅವರಿಂದ ನನ್ನ ಪರೀಕ್ಷೆಯನ್ನೂ ಮಾಡಿಸಿಕೊಳ್ಳುತ್ತಿದ್ದೆ! ಅಮೇರಿಕನ್ ಶಿಕ್ಷಣ ಕ್ರಮದಲ್ಲಿ ಇದು ಅತೀ ಮಹತ್ವದ್ದು. ಆದರೂ, ಶಿಕ್ಷಕರ ಬಗ್ಗೆ ವಿದ್ಯಾರ್ಥಿಗಳು ಸದಭಿಪ್ರಾಯ ತಾಳುವದು ತೀರ ವಿರಳವೆಂಬ ನೆಪದ ಮೇಲೆ ಜೋಬನೇರದಲ್ಲಿ ಯಾರೂ ಅದನ್ನು ಕೈಕೊಂಡಿರಲಿಲ್ಲ. ಇದರಲ್ಲಿ ಶಿಕ್ಷಕನು ವೇಳಾಪತ್ರಿಕೆಯಂತೆ ನಡೆಯುವುದು, ಅವನ ಪಾಠದ ಸಿದ್ಧತೆ, ವಿವರಣೆ, ಕರಿಹಲಗೆಯ ಬರೆಹ, ಆಕೃತಿಗಳು, ಉಚ್ಚಾರಣೆ, ಪರೀಕ್ಷಾ ವಿಧಾನ, ಭಾಷೆಯ ಪ್ರಭುತ್ವ ಇವುಗಳ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯ ಕೇಳುವ ವ್ಯವಸ್ಥೆ ಇರುತ್ತದೆ. ಇಷ್ಟಾಗಿ ವಿದ್ಯಾರ್ಥಿಯಾದವನು ಎಲ್ಲಿಯೂ ತನ್ನ ಹೆಸರನ್ನು ಬರೆಯಬೇಕಾಗಿಲ್ಲ. ಇದು ಶಿಕ್ಷಕನ ಪರೀಕ್ಷೆಯಾದ್ದರಿಂದ ವಿದ್ಯಾರ್ಥಿಯು ದುಡಿಯಬೇಕಾಗಿರಲಿಲ್ಲ. ಮೊದಲನೇ ಸಲ ಈ ಪರೀಕ್ಷೆ ಇಟ್ಟಾಗ ನಾನೊಬ್ಬ ಆದರ್ಶ ಶಿಕ್ಷಕನೆನ್ನುವ ಮಟ್ಟಿಗೆ ಎಲ್ಲವೂ ಉತ್ತಮವಾಗಿದೆ ಎಂದು ಬರೆದಿದ್ದರು. "ಹೀಗೆ ಬರೆದದ್ದರಿಂದ ನನಗೆ ನೀವೆಲ್ಲ ಅನ್ಯಾಯ ಮಾಡಿರುವಿರಿ. ನಾನೇ ವಿದ್ಯಾರ್ಥಿಯಾಗಿದ್ದರೆ ಹೇಗೆ ಬರೆಯುತ್ತಿದ್ದೆ" ಎಂದು ನಾನವರಿಗೆ ವಿವರಿಸಿ, ಇನ್ನೊಮ್ಮೆ ಪರೀಕ್ಷೆ ನಡೆಸಿದಾಗ ಮಾತ್ರ ಬಿಚ್ಚು ಮನಸ್ಸಿನಿಂದ ಬರೆದಿದ್ದರು. ಉಳಿದ ವಿಷಯಗಳಿಗಿಂತ ಈ ಶಿಕ್ಷಕರ ವಿಷಯಕ್ಕೆ ಹೆಚ್ಚು ದುಡಿಯಬೇಕು. ಗ್ರೇಡುಗಳು ಸಿಗುವುದು ಸುಲಭವಲ್ಲ. ಜ್ಞಾನದ

ದೃಷ್ಟಿಯಿಂದ ಸರಿಯಿದ್ದರೂ ಭವಿಷ್ಯ (ನೌಕರಿ)ದ ದೃಷ್ಟಿಯಿಂದ ಈ ಪದ್ಧತಿ ವ್ಯಾವಹಾರಿಕವಲ್ಲ. ಕಲಿಸುವುದು ವೇಗವಾಗುತ್ತದೆ ಎಂದೆಲ್ಲ ಬರೆದಿದ್ದರು. ಕಲಿಸುವ ವೇಗ ಕಡಿಮೆ ಮಾಡಿ, ಹೆಚ್ಚಿನ ಶಬ್ದಗಳನ್ನು ಕರಿಹಲಗೆಯ ಮೇಲೆ ಬರೆಯುವ ಪರಿಪಾಠ ರೂಢಿಯಲ್ಲಿ ತಂದರೂ ವಿಷಯಗ್ರಾಹಕತೆಗೆ ಬೇಕಾಗುವ ಬಿಗಿತನ ಕಡಿಮೆ ಮಾಡಿರಲಿಲ್ಲ. ಒಳ್ಳೆಯ ಶಿಕ್ಷಕನನ್ನು ವಿದ್ಯಾರ್ಥಿಗಳಾಗಿದ್ದಾಗ ಪ್ರಶಂಸಿಸದಿದ್ದರೂ ಹೊರಗಿನವರಿಗೆ ಹೇಳುವಾಗ, ತಮಗೆ ಎಷ್ಟೆಲ್ಲ ಕಲಿಸುತ್ತಾರೆ, ತಾವು ಎಷ್ಟೊಂದು ಪ್ರಗತಿ ಮಾಡಿದ್ದೇವೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದರು. ಈ ವಿದ್ಯಾರ್ಥಿಗಳಲ್ಲಿ ಕೆಲವರು ಡಾಕ್ಟರೇಟು ಅಭ್ಯಾಸ ಕೈಕೊಂಡಾಗ ಹಿಂದಿನ ತರಬೇತಿಯನ್ನು ಕೃತಜ್ಞತೆಯಿಂದ ನೆನೆಸಿಕೊಂಡರು. ಅವರಲ್ಲಿ ಹಲವಾರು ಜನ ಇಂದಿಗೂ ಅಗಾಗ ಪತ್ರಗಳನ್ನು ಬರೆಯುತ್ತಿರುವುದು ಅಭಿಮಾನದ ಸಂಗತಿ.

೨೪. ಸಂಪು

ಪರೀಕ್ಷೆಯ ಗುಣಗಳನ್ನು, ಗ್ರೇಡುಗಳನ್ನು ಶಿಕ್ಷಕರು ಮೇಲಿನ ಅಧಿಕಾರಿಗಳ ಸೂಚನೆ (ಆಜ್ಞೆ) ಯಂತೆ ಬದಲಿಸಲು ಸಾಧ್ಯವಿದೆ! ಎಂದು ವಿದ್ಯಾರ್ಥಿಗಳಿಗೆ ಅರಿವಾದ್ದರಿಂದ ಅವರು ತಮಗೆ ಸಹಾಯವಾಗುವ ಸೂಚನೆಗಳನ್ನು ಮೇಲಧಿಕಾರಿಗಳಿಗೆ ಕೊಡಹತ್ತಿದರು. ತಮ್ಮ ಪ್ರಗತಿಪತ್ರದಲ್ಲಿ ಗ್ರೇಡುಗಳನ್ನು ಬರೆದರೆ, ಉಳಿದ ಸಂಸ್ಥೆಗಳಿಗಾಗಲೀ ಸರಕಾರಿ ಅಧಿಕಾರಿಗಳಿಗಾಗಲೀ ಅವು ಅರ್ಥವಾಗದ್ದರಿಂದ ಅವನ್ನು ದರ್ಜೆಗೆ ಪರಿವರ್ತಿಸಿ ಕೊಡಬೇಕೆಂದು ಹೇಳಿದರು. ಈ ಬೇಡಿಕೆಯನ್ನು ಮಾನ್ಯ ಮಾಡಿ ವಿದ್ಯಾರ್ಥಿಗಳಿಗೇ ಹೆಚ್ಚು ಲಾಭವಾಗುವಂತೆ ಅವನ್ನು ಪರಿವರ್ತಿಸುವ ಕ್ರಮವನ್ನು ಜಾರಿಯಲ್ಲಿ ತಂದರು. ಇದರಿಂದಾಗಿ ಮೂರನೆಯ ವರ್ಗ ಸಿಗುವವನಿಗೆ ಎರಡನೆಯ ದರ್ಜೆ ಎರಡನೆಯ ದರ್ಜೆಯ ಯೋಗ್ಯತೆಯವನಿಗೆ ಪ್ರಥಮ ದರ್ಜೆ, ಮತ್ತು ಪ್ರಥಮ ದರ್ಜೆ ದೊರೆಯಬಹುದಾದವನಿಗೆ ವಿಶಿಷ್ಟ (Distinction) ದರ್ಜೆ ಸಿಗುವಂತಾಯಿತು. ಇದಾದ ನಂತರ ಅತಿ ಹೆಚ್ಚು ಪರೀಕ್ಷೆಗಳನ್ನು ಇಟ್ಟಿದ್ದರಿಂದ ತಾವೆಲ್ಲ ಪರೀಕ್ಷೆಗಳನ್ನು ಪಾಸು ಮಾಡುವ ಯಂತ್ರಗಳಾಗಿದ್ದೇವೆಯೇ ಹೊರತು ಜ್ಞಾನಸಂಪಾದನೆ, ವ್ಯವಹಾರಜ್ಞಾನಗಳತ್ತ ಮನಸ್ಸು ಹಾಕಲು ಸಮಯವೇ ಸಿಗುವುದಿಲ್ಲವೆಂದು, ಪರೀಕ್ಷೆಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಕೇಳಿಕೊಂಡರು. ಲಘುಜೀವನ ಬಯಸುತ್ತಿದ್ದ ಶಿಕ್ಷಕರೂ ಇದನ್ನೇ ಅನುಮೋದಿಸಿದ್ದರಿಂದ ಐದು ಪರೀಕ್ಷೆಗಳ ಸ್ಥಾನದಲ್ಲಿ ಮೂರೇ ಉಳಿದವು. ತೆಗೆದುಕೊಂಡ ವಿಷಯದಲ್ಲಿ ಆಸಕ್ತಿ ಹುಟ್ಟದಿದ್ದರೆ, ಒಂದು ತಿಂಗಳ ವರೆಗೆ ಅದನ್ನು ಬಿಟ್ಟುಬಿಡುವ ಅಧಿಕಾರ ವಿದ್ಯಾರ್ಥಿಗಳಿಗೆ ಬಂದಿತು. ಒಂದು ವಿಷಯದಲ್ಲಿ ಒಳ್ಳೆಯ ಗ್ರೇಡು, ಬರುವ ನಿರೀಕ್ಷೆ ಇಲ್ಲದಿದ್ದರೆ ಯಾವುದಾದರೊಂದು ಅನಾನುಕೂಲತೆಯನ್ನು ಮುಂದೆ ಮಾಡಿ ಅಂತಿಮ ಪರೀಕ್ಷೆ ಕೊಡದೇ 'ಅಪೂರ್ಣ'ವಾಗಿಟ್ಟು ಮುಂದಿನ ಅರೆವರ್ಷದಲ್ಲಿ ಇಲ್ಲವೇ ಬರುವ ವರ್ಷದಲ್ಲಿ ಅದನ್ನು ಪೂರ್ಣಗೊಳಿಸಲು ಸವಲತ್ತು ಪಡೆದರು. ವಿದ್ಯಾರ್ಥಿಯ ಗ್ರೇಡ-ಪಾಯಿಂಟುಗಳು ಕಡಿಮೆ ಇದ್ದುದರಿಂದ ಅದವನ ಉಜ್ವಲ ಭವಿಷ್ಯಕ್ಕೆ ಮಾರಕವಾಗಬಹುದು, ಆದ್ದರಿಂದ ಅವೇ ವಿಷಯಗಳನ್ನು ಇನ್ನೊಮ್ಮೆ ಕಲಿತು ಗ್ರೇಡುಗಳನ್ನು ಸುಧಾರಿಸಿಕೊಳ್ಳುವ ಸವಲತ್ತು

ಪಡೆದರು. ಇದರಿಂದ ನಾಲ್ಕು ವರ್ಷದ ವಿದ್ಯಾಭ್ಯಾಸಕ್ಕೆ ೫-೬ ವರ್ಷಗಳನ್ನು ತೆಗೆದುಕೊಳ್ಳಲಾರಂಭಿಸಿದರು. ಹಳೆಯ ವಿದ್ಯಾರ್ಥಿಗಳನ್ನು ಹೆಚ್ಚು ಕಾಲ ಕಾಲೇಜಿನಲ್ಲಿ ಇಟ್ಟುಕೊಳ್ಳುವುದರಿಂದ ಲಕ್ಷಾವಧಿ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿದ ಸವಲತ್ತುಗಳು, ಅಧಿಕ ಪ್ರಮಾಣದಲ್ಲಿ ಹೊಸ ವಿದ್ಯಾರ್ಥಿಗಳಿಗೆ ಕೊಡಲು ಸಾಧ್ಯವಾಗದಾಯಿತು. ಕೆಲ ವಿದ್ಯಾರ್ಥಿಗಳಂತೂ ಹಿಂದಿನ ಪರೀಕ್ಷೆಗಿಂತ ಕಡಿಮೆ ಗುಣಗಳನ್ನು ಪಡೆಯಲಾರಂಭಿಸಿದರು! ಅಂತಿಮ ಗ್ರೇಡ ಕೊಡುವಾಗ ಹಳೆಯ ಮತ್ತು ಹೊಸವುಗಳ ಸರಾಸರಿ ಗಣಿಸಬೇಕೆಂದು ಮೊದಲು ಒಪ್ಪಿಕೊಂಡರೂ ಆನಂತರ ಯಾವ ಗುಣಗಳು ಅಧಿಕವಿರುವವೊ ಅವನ್ನಷ್ಟೇ ಬಳಸಬೇಕೆಂದು ವಿದ್ಯಾರ್ಥಿಗಳು ಕೂಗನ್ನೆಬ್ಬಿಸಿದರು. ಕಾರ್ಮಿಕರ ಮತ್ತು ಕಾರಖಾನೆ ಒಡೆಯರ ಹಗ್ಗದಾಟದಂತೆ ವಿದ್ಯಾರ್ಥಿ - ಶಿಕ್ಷಕರ ಸಂಬಂಧ ಬೆಳೆಯಬಾರದೆಂದು ಈ ಬೇಡಿಕೆಯನ್ನು ಸಮ್ಮತಿಸಲಾಗಲಿಲ್ಲ. ಮೊದಲಿನಿಂದಲೂ ಮಕ್ಕಳನ್ನು ಅಂಕಿತದಲ್ಲಿಡದೇ ಅವರಿಗೆ ಸ್ವೇಚ್ಛೆಯಿಂದ ಬಾಳಗೊಟ್ಟು ಕೊನೆಗೊಮ್ಮೆ ಮಗ ಪೋಲಿಯಾಗುತ್ತಿದ್ದಾನೆಂದು ಒಮ್ಮೆಲೇ ಜಾಗ್ರತರಾಗಿ ಅವನನ್ನು ಮನೆಯಿಂದ ಹೊರಗೆ ಹೋಗದಂತೆ ಕಟ್ಟಪ್ಪಣೆ ಮಾಡಿದ ಪಾಲಕರಂತೆ ಪ್ರಾಧ್ಯಾಪಕರ ನಿರ್ಧಾರವಾಗಿತ್ತು. ಸರಿ 'ಕ್ರಾಂತಿಕಾರಿ' ಮಗನು ಸಂಪ್ರದಾಯವಂತ ತಂದೆತಾಯಿಗಳ ವಿರುದ್ಧ ಏಳುವಂತೆ ವಿದ್ಯಾರ್ಥಿಗಳು ಸಂಪನ್ನು ಪ್ರಾರಂಭಿಸಿಬಿಟ್ಟರು. ಅವರ ಎಲ್ಲ ಬೇಡಿಕೆಗಳೂ "ಭವಿಷ್ಯದ ದೃಷ್ಟಿಯಿಂದ ನಮಗೆ ಒಳ್ಳೇ ಗ್ರೇಡುಗಳು ಸಿಗುವಂತಾಗಬೇಕು" ಎಂಬ ಅರ್ಥದಲ್ಲಿದ್ದವು. ಅವುಗಳ ಜೊತೆಗೆ ಹೆಚ್ಚಿಗೆ ನೀರು, ಹಾಲು, ವಸತಿಸೌಕರ್ಯ, ಒಳ್ಳೆಯ ಊಟ, ಚಹ, ತಿಂಡಿ, ಆಟ ಪಾಠಗಳ ಸೌಕರ್ಯಗಳೂ ಬೇಕೆಂದು ಬೇಡಿಕೆಗಳನ್ನು ಮುಂದೆ ಇಟ್ಟರು.

ಮುಂಜಾನೆ ಕಾಲೇಜು ಪ್ರಾರಂಭವಾಗುವ ವೇಳೆಗೆ ವಿದ್ಯಾರ್ಥಿಗಳು ಸಂಪು ಹೂಡಿದ್ದಾರೆಂಬ ಸಮಾಚಾರ ಊರೆಲ್ಲ ಹರಡಿತು. ವೇತನ ಸಹಿತವಾದ ವಿರಾಮದ ದಿನಗಳು ಬಂದವೆಂದು ಹೆಚ್ಚಿನ ಶಿಕ್ಷಕರು ಮುದಗೊಂಡರು. ದಾರಿಯುದ್ದಕ್ಕೂ ವಿದ್ಯಾರ್ಥಿಗಳು ಗುಂಪು ಕಟ್ಟಿಕೊಂಡು ಹರಟೆ ಹೊಡೆಯುತ್ತ ಶಿಕ್ಷಕರು ಆ ದಾರಿಯಿಂದ ಹೊರಟಾಗ ಲಘುವಾಗಿ ಅವರ ಬಗ್ಗೆ ಮಾತನಾಡಲಾರಂಭಿಸಿದರು. ಭಾವಿಕಟ್ಟೆಯ ಮೇಲೆ ನಿಂತು ಗಂಗಾನಗರದ ಸರದಾರಜಿ ವಿದ್ಯಾರ್ಥಿಯೊಬ್ಬ ಭಾಷಣ ಬಿಗಿದ. ರಾಜಸ್ಥಾನ ಮಹಾಕಾಲುವೆಯಿಂದಾಗಿ ಗಂಗಾನಗರ ಜಿಲ್ಲೆ ಹೆಚ್ಚಿನ ಖ್ಯಾತಿ ಪಡೆದಿದೆ. ಅಲ್ಲಿ ಹೊಸದಾಗಿ ಕೃಷಿಯನ್ನು ಕೈಕೊಳ್ಳಲು ರಾಜಸ್ಥಾನಿಗಳು ಮುಂದೆ ಬರದ್ದರಿಂದ ಪಂಜಾಬದ ಕೃಷಿ ಕುಟುಂಬಗಳನ್ನು ಆಮಂತ್ರಿಸಿ ಸರಕಾರ, ಹೆಚ್ಚಿನ ಸೌಕರ್ಯಗಳನ್ನು ಒದಗಿಸಿತು. ಕಾಲುವೆಯಿಂದಾಗಿ ಅಲ್ಲಿ ಸಾಕಷ್ಟು ನೀರು ಸಿಗುವಂತಾಗಿ ಪಂಜಾಬಿಗಳು ಮೈಮುರಿದು ದುಡಿದು ಉತ್ತಮ ಬೆಳೆಯನ್ನು ತೆಗೆಯುತ್ತಿದ್ದಾರೆ. ಅಲ್ಲಿಯ

ದನಕರುಗಳೂ ಒಳ್ಳೆಯ ಹೆಡಸಿನ ಹೈನ ಕರೆಯುತ್ತವೆ. ಅಲ್ಲಿಯ ಕೃಷಿಕರೆಲ್ಲ ಗ್ಲಾಸು, ಲೋಟಾ, ಚೊಂಬುಗಳಲ್ಲಿ ಹಾಲು ಕುಡಿಯದೇ 'ಬಾಲ್ಟಿಯಿಂದಲೇ ಕುಡಿಯುತ್ತಾರಂತೆ! ಗಂಗೆಯ ಮಡಿಲಲ್ಲಿ ಬೆಳೆಯುವ ಬಂಗಾಲಿ, ವರ್ಷದಲ್ಲಿ ಸೇವಿಸುವಷ್ಟು ಹಾಲನ್ನು ಗಂಗಾನಗರದ ನಿವಾಸಿ ಒಂದೇ ದಿನದಲ್ಲಿ ಮುಗಿಸುತ್ತಾನೆಂದರೆ ಅತಿಶಯೋಕ್ತಿಯಾಗಲಾರದು. ಗಂಗಾನಗರದಿಂದ ಬಂದು ಕೃಷಿ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳೆಲ್ಲ ಪೈಲವಾನರಂತಿದ್ದರು. ಪಾಕಿಸ್ಥಾನ ಗಡಿಯ ಈ ಜಿಲ್ಲೆಯಲ್ಲಿ ಸದಾಕಾಲ ಗಂಡಾಂತರದ ವಾತಾವರಣವಿತ್ತಾದ್ದರಿಂದ ಅಲ್ಲಿಯ ನಾಗರಿಕರಿಗೆ ಶಸ್ತ್ರಾಸ್ತ್ರಗಳನ್ನಿಡುವ ವಿಶೇಷ ಅನುಮತಿಯನ್ನು ರಾಜಸ್ಥಾನ ಸರಕಾರ ದಯಪಾಲಿಸಿತ್ತು. ಆದರೆ ಈ ಆಯುಧಗಳನ್ನು ಶತ್ರುಗಳಿಂದ ರಕ್ಷಣೆ ಪಡೆಯಲು ಬಳಸುವ ಬದಲಾಗಿ ವೈಯಕ್ತಿಕ ಜಗಳಗಳ ಪರಿಹಾರದ ಸಲುವಾಗಿ ಹೆಚ್ಚು ಉಪಯೋಗಿಸುತ್ತಾರೆ! ಸರದಾರಜಿಯು ಕೆರಳಿದಾಗ ಬುದ್ಧಿಗಿಂತ ಕೈಕಾಲುಗಳನ್ನು ಜೋರಾಗಿ ಓಡಿಸುವುದು ಹೆಚ್ಚಾದ್ದರಿಂದ ಈ ಶಸ್ತ್ರಾಸ್ತ್ರಗಳ ದುರುಪಯೋಗವಾಗುವುದು ಹೆಚ್ಚು. ವೈಯಕ್ತಿಕ ಕೊಲೆಗಳು ಪಾಕಿಸ್ಥಾನಿ ಗೂಢಚಾರರ ಕೊಲೆಗಳೆಂದು ಆಗೀಗ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುವವು. ಗಂಗಾನಗರದವರು ಆಗೀಗ, ಆಫೀಸ ಕೆಲಸಕ್ಕಾಗಿ ಅಥವಾ ವ್ಯವಹಾರ ನಿಮಿತ್ತವಾಗಿ ಜಯಪುರಕ್ಕೆ ಬರುವುದುಂಟು. ಅವರ ದೀರ್ಘ ದೇಹ, ಕೈಯಲ್ಲಿ ಹಿಡಿದ ಜೋಡುನಳಿಗೆಯ ಬಂದೂಕು, ಚರ್ಮದ ಬೆಲ್ಟಿಗೆ ಸಿಕ್ಕಿಸಿದ ಮದ್ದು ಗುಂಡುಗಳು, ಆಕರ್ಷಕವಾಗಿರುತ್ತವೆ. ಅವರು ಹಾಟೇಲಿನಲ್ಲಿ ಟೇಬಲ ಖುರ್ಚಿಯ ಊಟ ಮಾಡದೇ ಹೊರಗೆ ನೆರಳಿನಲ್ಲಿ ಹಾಕಿದ ಚಾರಪಾಯಿಯ ಮೇಲೆ ಕುಳಿತು ತುಪ್ಪದಿಂದಲೇ ಹುರಿದ ಪರಾಠ (ಚಪಾತಿ) ಅಥವಾ ತಂದೂರಿ ರೋಟಿಗಳ ಸ್ತರಗಳನ್ನು ಮೀನ ಮಾಂಸಗಳ ಜೊತೆ ಭಕ್ಷಿಸಿ ಹಾಲಿನಲ್ಲಿಯೇ ತಯಾರಿಸಿದ ಚಹ ಕುಡಿದು ತೇಗುವರು. ಒಂದೇ ಊಟಕ್ಕೆ ಹದಿನೈದರಿಂದ ಇಪ್ಪತ್ತು ರೂಪಾಯಿ ಖರ್ಚಾದರೂ ಅವರಿಗೆ ಬೇಸರವಿಲ್ಲ. ಇತ್ತೀಚೆಗೆ ಅವರ ಅಭ್ಯುದಯ ಕಂಡು ಎಚ್ಚತ್ತ ರಾಜಸ್ಥಾನಿಗಳಿಗೆ ಹೊಟ್ಟೆಯುರಿ ಪ್ರಾರಂಭವಾಗಿದೆ. ರಾಜಸ್ಥಾನ ಕಾಲುವೆಯಿಂದ ನೀರುಣ್ಣುವ ಭೂಮಿಯನ್ನೆಲ್ಲ ಸರಕಾರ ಲಿಲಾವು ಮಾಡುತ್ತಿತ್ತು. ಅದನ್ನು ಈ ಪಂಜಾಬಿಗಳೇ ಕೊಳ್ಳುವುದು ವಾಡಿಕೆಯಾಗಿತ್ತು. ಈಗ ಹುಟ್ಟಾ ರಾಜಸ್ಥಾನಿಗಳಿಗೇ ಅದನ್ನು ಮೀಸಲಿಡಬೇಕೆಂಬ ಕೂಗೆದ್ದಿತು. ಹಾಗೆ ಮೀಸಲಿಡಲಾರಂಭಿಸಿದ ಭೂಮಿಯನ್ನು ಅಧಿಕಾರದಲ್ಲಿದ್ದವರೇ ಭೂಮಿರಹಿತರೆಂಬ ನೆಪದ ಮೇಲೆ ನುಂಗಲಾರಂಭಿಸಿದರು!

ವಿದ್ಯಾರ್ಥಿಗಳೆಲ್ಲ ಕೂಡಿ ಮೆರವಣಿಗೆಯನ್ನು ತೆಗೆದರು. ಕೆಲ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅದರಲ್ಲಿ ಸೇರ್ಪಡೆಯಾಗುವ ಮನಸ್ಸಿಲ್ಲದಿದ್ದರೂ, ಉಳಿದ ವಿದ್ಯಾರ್ಥಿಗಳ ತುಚ್ಛೀಕರಣದಿಂದಾಗಿ ಅವರೂ ಸೇರಿಕೊಂಡರು. 'ವಿದ್ಯಾರ್ಥಿಗಳ

ಸಂಘಟನೆಗೆ ಜಯವಾಗಲಿ, ನಮ್ಮ ಬೇಡಿಕೆಗಳನ್ನು ಈಡೇರಿಸಲೇಬೇಕು’ ಎಂದು ಕೂಗುತ್ತ ಅವರೆಲ್ಲ ಕಾಲೇಜಿನ ಆವಾರದಲ್ಲಿ ಸುತ್ತಾಡಿದರು. ಅಟವರ ಮುಖಂಡರನ್ನು ಡೀನರೊಂದಿಗೆ ಮಾತುಕತೆಯಾಡಲು ಕಳಿಸೆಂದರೆ ನಿರಾಕರಿಸಿದರು.

ಮುಂದೇನು ಮಾಡಬೇಕೆಂದು ಶಿಕ್ಷಕರ ಸಭೆ ಸೇರಿತು. ಇತರರ ವಿಚಾರ ವಿನಿಮಯಗಳಿಗೆ ಸ್ಥಾನವಿರದೇ ಡೀನರು ತಾವು ನಿರ್ಧರಿಸಿದ್ದನ್ನು ವಿವರಿಸಿದರು. ಶಿಕ್ಷಕರು ಸಾಮೂಹಿಕವಾಗಿ ಇಂಥ ನಿರ್ಣಯ ಕೈಕೊಂಡದ್ದನ್ನು ವಿಶ್ವವಿದ್ಯಾಲಯಕ್ಕೆ ತಿಳಿಸೋಣ, ಒಂದು ವಾರದ ತನಕ ಕಾದು ನೋಡೋಣವೆಂದು ತೀರ್ಮಾನವಾಯಿತು. ಇಂಥ ಸಮಾಚಾರಗಳು ಕಾಡ್ಗಿಚ್ಚಿನಂತೆ ವಿದ್ಯಾರ್ಥಿಗಳಿಗೆ ತಲುಪುತ್ತವೆ. ಅಂತೆಯೇ ಅವರು ತಮ್ಮ ಸಂಪನ್ನು ಪೂರ್ಣ ಯಶಸ್ವಿಯನ್ನಾಗಿ ಮಾರ್ಪಡಿಸಲು ಶಿಕ್ಷಕವೃಂದದ ಮನೆಗೆ ಹಂಚಲೆಂದು ಹೊರಟ ಹಾಲಿನ ಪಿಪಾಯಿಯನ್ನು ವಶಪಡಿಸಿಕೊಂಡು ಖೀರು (ಪಾಯಸ) ಮಾಡಿ ತಿಂದರು. ಇದರಿಂದ ಎಲ್ಲರೂ ಹಾಲಿಗಾಗಿ ಕಾಲೇಜಿಗೇ ಹೋಗುವ ಪ್ರಸಂಗ ಬಂದಿತು. ಕಲ್ಲು ಒಗೆದು ಕಾಲೇಜಿನ ಕಟ್ಟಡಗಳ ಕಿಟಕಿಗಳ ಗಾಜುಗಳನ್ನು ಒಡೆದರು. ಇದನ್ನೆಲ್ಲ ತಡೆಹಿಡಿಯಲು ಡೀನರು, ಶಿಕ್ಷಕ - ವಿದ್ಯಾರ್ಥಿಗಳ ಮಹಾಸಭೆಯೊಂದನ್ನು ಕರೆದರೂ ವಿದ್ಯಾರ್ಥಿಗಳು ಬರಲು ಒಪ್ಪಲೇ ಇಲ್ಲ. ಸಭೆಯನ್ನು ಮೂರು - ನಾಲ್ಕು ಸಲ ಮುಂದೆ ಹಾಕಬೇಕಾಯಿತು. ನಂತರ ವಿದ್ಯಾರ್ಥಿಗಳ ಅಭ್ಯುದಯದ ಡೀನರು ಸ್ವತಃ ಹೋಗಿ ಪರಿಪರಿಯಾಗಿ ಮನಸ್ಸು ಒಲಿಸಿದ ನಂತರ ಬರಲು ಒಪ್ಪಿದರು. ಮೊದಲು ಡೀನರು ಮಾತನಾಡಿ ನಮ್ಮ ಕಾಲೇಜಿನ ಯಶಸ್ಸನ್ನು ವಿವರಿಸಿ, ‘ಕಾಲೇಜಿನ ವಿದ್ಯಾರ್ಥಿಗಳೆಲ್ಲ ಜೀವನದಲ್ಲಿ ಎಷ್ಟೊಂದು ಮುಂದೆ (ತಾವು ಬಿಚ್ಚು ಮನಸ್ಸಿನಿಂದ ಗ್ರೇಡ ಕೊಡುತ್ತಿರುವುದರಿಂದ!) ಬಂದಿದ್ದಾರೆ. ಇದನ್ನೆಲ್ಲ ಸಾಧಿಸಬೇಕಾದರೆ ಶಿಕ್ಷಣದಲ್ಲಿ ಹೆಚ್ಚಿನ ಮಟ್ಟ ಇರಬೇಕು. ಶಿಕ್ಷಣವಿಲ್ಲದ ಡಿಗ್ರಿ, ವರ್ಗ ತೆಗೆದುಕೊಂಡು ಏನು ಮಾಡುವುದು? ಆದ್ದರಿಂದ ಸಂಪು ನಿಲ್ಲಿಸಿ. ನಂತರ ಶಾಂತ ವಾತಾವರಣದಲ್ಲಿ ಮಾತನಾಡೋಣ’ ಎಂದರು. ಆನಂತರ ವಿದ್ಯಾರ್ಥಿಗಳಿಗೆ ಮಾತನಾಡಲು ಅವಕಾಶ ಕೊಡಲಾಯಿತು. ಅವರ ಕಾರ್ಯದರ್ಶಿ ಶೈಲೇಂದ್ರ ಗರ್ಗ ಎಂಬವನು “ಶಿಕ್ಷಕರೆಂದರೆ ನಮ್ಮ ಆಜನ್ಮ ವೈರಿಗಳು. ಬೀದಿಯ ನಾಯಿ” ಎಂದು ಬಾಯಿಗೆ ಬಂದಂತೆ ಮಾತನಾಡಿದ. ಅವನು ದಡ್ಡ ವಿದ್ಯಾರ್ಥಿಯಾಗಿ ನಕಲು ಮಾಡುವಾಗ ಸಿಕ್ಕುಬಿದ್ದಿದ್ದರೂ ವಿದ್ಯಾರ್ಥಿ ರಾಜಕಾರಣಿಯಾದ್ದರಿಂದ ಯಾವ ಶಿಕ್ಷೆ ಪಡೆಯದೇ ಮೆರೆದಾಡುತ್ತಿದ್ದ ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಆನಂತರ ಮಾತನಾಡಿದ ಸುರೇಶ ಆಗರವಾಲ್, ಜಾಣ ಹುಡುಗ. ಆತನು ತನ್ನ ಶಿಕ್ಷಕರೆಲ್ಲ ಕ್ಲಾಸಿನಲ್ಲಿ ಇಟ್ಟಿರುವ ಧೋರಣೆ, ಸಿದ್ಧತೆಯಿಲ್ಲದೇ ಪಾಠ ಕಲಿಸುವ ಪದ್ಧತಿ, ವಿವರಣೆ ಕೇಳಿದಾಗ, ಅದನ್ನೆಲ್ಲ ಪರೀಕ್ಷೆಗೆ ಕೇಳುವುದಿಲ್ಲ ಎಂದು ಆಶ್ವಾಸನೆ ಕೊಟ್ಟು ಜಾರಿಕೊಳ್ಳುವುದು

ಮುಂತಾದವನ್ನು ಬಿಚ್ಚು ಮನಸ್ಸಿನಿಂದ ಖಂಡಿಸಿದ. ಅವನು ಸತ್ಯವನ್ನೇ ನುಡಿದರೂ ಶಿಕ್ಷಕರಿಗಾಗಲಿ, ಸೇಡಿಗಾಗಿ ಹಾತೊರೆಯುತ್ತಿದ್ದ ವಿದ್ಯಾರ್ಥಿಗಳಿಗಾಗಲಿ ಅವನ ಮಾತು ರುಚಿಸದ್ದರಿಂದ ಸಭೆ ಯಾವ ನಿರ್ಣಯವನ್ನೂ ಕೈಕೊಳ್ಳದೇ 'ಬರ್ಖಾಸ್ತ್' ಆಯಿತು.

ಆ ದಿನ ಸಂಜೆ ವಿದ್ಯಾರ್ಥಿಗಳ ಗುಪ್ತ ಸಭೆಯೊಂದು ನಡೆಯಿತು. ಮರುದಿನ ಬೆಳಕು ಹರಿಯುವ ಮೊದಲೇ ವಿದ್ಯಾರ್ಥಿಗಳು ಮೋಟಾರ ನಿಲ್ದಾಣದಲ್ಲಿ ಸೇರಿ ಡ್ರಾಯವರನಿಗೆ ಒತ್ತಾಯದಿಂದ ತಮ್ಮನ್ನೆಲ್ಲ ರೇಲ್ವೆಸ್ಟೇಶನ್ನಿಗೆ ಒಯ್ಯುವಂತೆ ಬಲಾತ್ಕರಿಸಿ, ಒಂದೂ ಇಂಚು ಸ್ಥಳ ಬಿಡದೇ ಹತ್ತಿ ಕುಳಿತು, ಮೇಲೆ ಕೆಳಗೆ ಜೋತುಬಿದ್ದು ಸ್ಟೇಶನ್ನಿಗೆ ಬಂದರು. ಸ್ಟೇಶನ್ನಿನ ಸಂಪರ್ಕ ವ್ಯವಸ್ಥೆಯನ್ನು ಅಸ್ತವ್ಯಸ್ತ ಮಾಡಿ ಸಿಗ್ನಲ್ ಒಂದನ್ನು ಹಾಳುಗೆಡವಿ, ಕಾಗದ ಪತ್ರಗಳನ್ನು ಸುಟ್ಟು, ಸ್ಟೇಶನ್ ಮಾಸ್ತರರನ್ನು ಹೊಡೆದು, ಪ್ರಯಾಣಿಕರಿಗೆ ಕೀಟಲೆ ಕೊಟ್ಟು, ದಿಗ್ವಿಜಯ ಸಂಪಾದಿಸಿದವರಂತೆ ಜೋಬನೇರಿಗೆ ತಿರುಗಿ ಬಂದರು. ಜೋಬನೇರದಲ್ಲಿ ಪೋಲಿಸರೇ ಇರದ್ದರಿಂದ ಅವರನ್ನು ತಡೆಗಟ್ಟುವವರು ಯಾರೂ ಇರಲಿಲ್ಲ! ವಿದ್ಯಾರ್ಥಿಗಳ ಬೇಡಿಕೆಗೂ ರೇಲ್ವೆಯ ಸಾರ್ವಜನಿಕ ಸಂಪತ್ತನ್ನು ಹಾಳುಗೆಡವಲಿಕ್ಕೂ ಏನು ಸಂಬಂಧವಿದೆಯೆಂಬುದನ್ನು ಯಾರೂ ವಿವರಿಸದಾದರು. ಒಂದು ಮಾತು ನಿಜ. ರೇಲ್ವೆ ಸಂಪತ್ತನ್ನು ಹಾಳು ಮಾಡಿದ್ದರಿಂದ ವಿದ್ಯಾರ್ಥಿಗಳ ಸಂಪಿಗೆ ವರ್ತಮಾನ ಪತ್ರಿಕೆಗಳಲ್ಲಿ ಸ್ಥಾನ ದೊರೆಯಿತು. ನಮ್ಮ ಊರಿನವರೂ ಜೋಬನೇರ ವಿದ್ಯಾರ್ಥಿಗಳ ಶೌರ್ಯವನ್ನು ಅರಿಯುವಂತಾಯಿತು! ರೇಲ್ವೆ ಮಾರ್ಗ, ಸಿಗ್ನಲ್ ಮತ್ತಿತರ ಸಾಮಾನುಗಳನ್ನು ಸರಿಪಡಿಸಲು ಸಿಬ್ಬಂದಿ ಬಂದಿತು. ಜೊತೆಗೆ ಪೋಲಿಸರೂ ಬಂದರು. ಮೂವತ್ತು -ನಾಲವತ್ತು ವಿದ್ಯಾರ್ಥಿಗಳನ್ನು ಪೋಲಿಸ ವ್ಯಾನಿನಲ್ಲಿ ತುಂಬಿಕೊಂಡು ಜಯಪುರಕ್ಕೆ ಹೊರಟರು. ದಾರಿಯುದ್ದಕ್ಕೂ ಅವರನ್ನು ಮಾತನಾಡಿಸುತ್ತ ನೀರು, ಚಹಾ ಕುಡಿಸಿ, ಮಿಠಾಯಿ ತಿನ್ನಿಸಿದ್ದರಿಂದ ಜಯಪುರಕ್ಕೆ ಒಯ್ದು ತಮ್ಮನ್ನು ಬಿಟ್ಟುಬಿಡಬಹುದೆಂದು ವಿದ್ಯಾರ್ಥಿಗಳು ಬಗೆದಿದ್ದರು. ಆದರೆ ಅವರನ್ನೆಲ್ಲ ಕಳ್ಳಕಾಕರನ್ನು ಇಡುತ್ತಿದ್ದ ಸೆಂಟ್ರಲ್ ಜೇಲಿಗೆ ಒಯ್ದು ಲಾಕಪ್ಪಿನಲ್ಲಿ ಹಾಕಿದಾಗ ಕಂಗಾಲಾದರು! ಸುದ್ದಿ ತಲುಪಿ ಜೈಲಿನಲ್ಲಿದ್ದ ಮಕ್ಕಳನ್ನು ನೋಡಲು ದೂರದ ಹಳ್ಳಿಗಳಿಂದ ಚಕ್ಕಡಿ, ಒಂಟೆಗಾಡಿಗಳಿಂದ ಪಾಲಕರು ಬಂದರು. ಸಲಾಕಿಗಳ ಹಿಂದೆ ಇದ್ದು ಸಿಗ್ನಲ್ ಕಂಬ ಕಿತ್ತು ಹಾಕುವುದರಲ್ಲಿ ಸಹಾಯ ಮಾಡಿದವನನ್ನು ನೋಡಿ ತಾಯಿಯೊಬ್ಬಳು ಬಿಕ್ಕಳಿಸುತ್ತ "ಎಂಥ ಗ್ರಹಚಾರ ಬಡಿಯಿತೋ ನಿನಗೆ? ಎಂಥ ಮನೆತನದಲ್ಲಿ ಹುಟ್ಟಿ ಈ ಅಪಕೀರ್ತಿ ತಂದೆ? ಏಳು ತಲೆಮಾರಿನಲ್ಲಿ ನಮ್ಮಲ್ಲಿ ಯಾರೂ ಕೋರ್ಟು, ಕಚೇರಿ, ಜೈಲನ್ನು ಕಂಡಿರಲಿಲ್ಲ. ಅದೆಂತಹ ಕಲಂಕ ತಂದೆ? ಕಳ್ಳರೊಂದಿಗೆ ಸೇರಿಕೊಂಡು!" ಎಂದು ಒಂದೇ ಸಮನೆ ಹಲುಬಿದಾಗ ತಾನು ಕೊಲೆ - ಕಳ್ಳತನ ಮಾಡಿಲ್ಲವೆಂದು, ಮಗ ಪರಿಪರಿಯಿಂದ

ಹೇಳಿದರೂ ಜೈಲಿನಲ್ಲಿ ಹಾಕಬೇಕಾದರೆ ದೊಡ್ಡ ಗುಮಾನಿಯನ್ನು ತನ್ನ ಮಗ ಮಾಡಿರಲೇ ಬೇಕು ಎಂದು ಸಂದೇಹ ಪಡುತ್ತಲೇ ಆ ಮುಗ್ಧ ತಾಯಿ ಹೊರಟು ಹೋದಳು.

ಪ್ರಾಧ್ಯಾಪಕ ವರ್ಗದವರೆಲ್ಲ ಪ್ರತಿದಿನ ಕಾಲೇಜಿಗೆ ಬಂದು ಸಂಪಿನ ಬಗ್ಗೆ ವಾದ ವಿವಾದ ಮಾಡುತ್ತ ಚಹ ಕುಡಿದು ಮನೆಗೆ ಹೋಗುವರು. ಹೆಚ್ಚಿನ ವಿದ್ಯಾರ್ಥಿಗಳು ಸಂಪಿನ ದಿನಗಳೆಂದರೆ ಬಿಡುವಿನ ದಿನಗಳೆಂದು ಪರಿಗಣಿಸಿ ಊರಿಗೆ ಹೋದರು. ಪರಿಸ್ಥಿತಿ ಸುಧಾರಿಸಲೆಂದು ಕಾಲೇಜನ್ನು ಒಂದು ತಿಂಗಳ ಮಟ್ಟಿಗೆ ಮುಚ್ಚಿದರು. ತಿರುಗಿ ಪ್ರಾರಂಭಿಸುವಾಗ ಪಾಲಕರಿಂದ ತಮ್ಮ ಮಗ ಇನ್ನು ಮುಂದೆ ಕಾಲೇಜಿನ ವಿರುದ್ಧ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ತಾವು ಎಚ್ಚರಿಕೆ ವಹಿಸುತ್ತೇವೆ ಎಂದು ಲಿಖಿತ ಪಡೆದರೆ, ವಿದ್ಯಾರ್ಥಿಗಳಿಂದ ತಾನು ಕಾಲೇಜಿನ ಎಲ್ಲ ನಿಯಮಗಳನ್ನು ಪಾಲಿಸುತ್ತೇನೆಂದು ಬರೆಯಿಸಿಕೊಂಡರು. ಎಲ್ಲ ವರ್ಗಗಳನ್ನು ಒಮ್ಮೆಲೇ ಪ್ರಾರಂಭಿಸಿದರೆ ಇನ್ನೇನಾದರೂ ಗೊಂದಲವಾಗಬಹುದೆಂದು, ಮೊದಲು ಸ್ನಾತಕೋತ್ತರ, ನಂತರ ಮೇಲಿನಿಂದ ಕೆಳಗಿನ ವರ್ಗಗಳನ್ನು ನಿಧಾನವಾಗಿ ಪ್ರಾರಂಭಿಸಿದರು. ಏನೂ ಆಗಿಲ್ಲ ಎಂಬಂತೆ ಕಾಲೇಜು ನಡೆಯಹತ್ತಿದ್ದರಿಂದ ಅಧಿಕಾರಿಗಳು ತಮ್ಮ ಯುಕ್ತಿ ಫಲಕಾರಿಯಾಯಿತೆಂದು ಬಗೆದರು. ಆದರೆ ವಿದ್ಯಾರ್ಥಿಗಳು ತಮ್ಮ ಹಿತ ತಿಳಿಯದಷ್ಟು ಮೂರ್ಖರೇ? ಅವರಿಗೆ ಸಂಪಿನಿಂದ ಹೆಚ್ಚಿಗೆ ರಜೆ ಸಿಕ್ಕಿತಲ್ಲದೇ ಕಡಿಮೆ ಪರೀಕ್ಷೆಗಳಲ್ಲಿಯೇ ಹೆಚ್ಚಿಗೆ ಗ್ರೇಡ ಸಿಗುವಂತೆ ಮಾಡಿಸಿಕೊಂಡದ್ದರಿಂದ ಹಿಗ್ಗಿದರು. ಪರೀಕ್ಷೆಗಳನ್ನು ಮುಂದೆ ಹಾಕಿದ್ದರಿಂದ ಶಿಕ್ಷಕರ ರಜೆಯಲ್ಲಿ ಹದಿನೆಂಟು ದಿನಗಳ ಕಡಿತವಾಯಿತು. ಅವರೂ ಸಂಪು ಹೂಡಬಾರದೆಂದೋ ಏನೋ ಅವರ ಖಾತೆಗೆ ಅಷ್ಟು ದಿನ ಗಳಿಕೆಯ ರಜೆಯನ್ನು ಜಮಾ ಮಾಡಿದರು. ಸರಕಾರಿ ಆಫೀಸರರಂತೆ ಬೇಕಾದಾಗ ಈ ರಜೆ ಪಡೆಯಬಹುದೆಂದು ಶಿಕ್ಷಕರು ಸಂತಸಗೊಂಡರು. ಈ ಸಂಪಿನಿಂದ ಎಲ್ಲರಿಗೂ ಲಾಭವಾಯಿತೆಂದು ತೋರಿದರೂ ಶೈಕ್ಷಣಿಕ ಹಾನಿ ಮಾತ್ರ ಬೇಕಾದಷ್ಟಾಯಿತು. ವಿದ್ಯಾರ್ಥಿಗಳು ಒಂದು ವರ್ಷ ಕಳೆದುಕೊಳ್ಳುವಂತೆ ಮಾಡಿದ್ದರೆ ಬಹುಶಃ ಜೀವನದಲ್ಲಿ ಅವರೆಂದೂ ಸಂಪಿನ ಮೊರೆ ಹೋಗುವಂತೆ ಆಗುತ್ತಿರಲಿಲ್ಲ. ಆದರೆ ರಾಜಕಾರಣಿಗಳು ಪರಿಸ್ಥಿತಿಯನ್ನು ಹದಗೆಡಿಸಬಹುದೆಂದು, ಅಂಥ ಎದೆಗಾರಿಕೆಯನ್ನು ಯಾರೂ ತೋರಿಸಲಿಲ್ಲ.

ಮುಂದಿನ ವರ್ಷ ಸುಮಾರು ಅದೇ ಸಮಯದಲ್ಲಿ ಉದಯಪುರ ಕೃಷಿ ಕಾಲೇಜಿನಲ್ಲಿ ಸಂಪು ಪ್ರಾರಂಭವಾಯಿತು. ಜೋಬನೇರದ ವಿದ್ಯಾರ್ಥಿಗಳು ಇನ್ನೊಮ್ಮೆ ಪರಿಚಯದವರಿಂದ, ತಂದೆ ತಾಯಿಗಳಿಂದ, ಛೀಮಾರಿ ಹಾಕಿಸಿಕೊಳ್ಳುವುದು

ಬೇಡವೆಂತಲೋ ಏನೋ ತಿರುಗಿ ಸಂಪಿನ ಗೋಜಿಗೆ ಹೋಗಲಿಲ್ಲ. ಆದರೆ ಉದಯಪುರದ ವಿದ್ಯಾರ್ಥಿಗಳು ಷಂಡರೆಂದು ಜೋಬನೇರದವರನ್ನು ಹೀಗಳೆದು ತೊಟ್ಟುಕೊಳ್ಳಲು ಚೂಡಿ ಮತ್ತು ಸಿಂಧೂರ (ಬಳೆ ಮತ್ತು ಕುಂಕುಮ)ಗಳನ್ನು ಕಳಿಸಿದಾಗ, ಅವಮಾನಿತರಾದ ವಿದ್ಯಾರ್ಥಿಗಳು ಒಂದು ದಿನದ ಸಾಂಕೇತಿಕ ಸಹಾನುಭೂತಿಪರ ಸಂಪನ್ನು ಹೂಡಿದರು. ಒಂದು ದಿನವಿದ್ದದ್ದು ಎರಡು ದಿನಗಳಾದವು. ನಂತರ ಅನಿಶ್ಚಿತ ಕಾಲದವರೆಗೆ ಅದನ್ನು ಮುಂದುವರಿಸಿ, ತಾವೇಕೆ ಸಂಪು ಹೂಡಿದ್ದೇವೆ? ಎಂದು ಯೋಚಿಸಿ ಕಾರಣಗಳನ್ನು ಹುಡುಕಿ ತೆಗೆದು ತಮ್ಮವೇ ಕೆಲವು ಬೇಡಿಕೆಗಳನ್ನು ಮುಂದಿಟ್ಟರು. ಹಿಂದಿನ ವರ್ಷದ್ದೇ ಪುನರಾವೃತ್ತಿಯಾಯಿತು. ಯಾರಿಗೂ ಹಾನಿಯಾಗದಂತೆ ಪರೀಕ್ಷೆಗಳು ನಡೆದವು, ಗ್ರೇಡುಗಳನ್ನು ಕೊಟ್ಟರು, ಮಾಡಿದ ತಪ್ಪಿಗೆ ಶಿಕ್ಷಿಸಲಾರದ ಆಡಳಿತ ವರ್ಗವಿದ್ದರೆ ಸಂಪುಗಳು ನಿರ್ವಿಘ್ನವಾಗಿ ಸಾಗುತ್ತವೆ ಎನ್ನಲಿಕ್ಕೆ ಬೇರೆ ಉದಾಹರಣೆಗಳು ಬೇಕೇ?

ಪಶ್ಚಿಮ ಬಂಗಾಲದಂತೆ ದಿನಕ್ಕೊಂದು ಸಂಪು, ರಾಜಸ್ಥಾನದ ಕಾರಖಾನೆ, ಕಚೇರಿಗಳಲ್ಲಿ ನಡೆಯದಿದ್ದರೂ ಅವರ ಸಂಘಗಳ ಮುಖಂಡರು ತಮ್ಮ ಇರವನ್ನು ತೋರಿಸುವುದಕ್ಕೆಂದು ತಮ್ಮ ಸಂಸ್ಥೆಗಳಿಗಾಗುವ ಅನ್ಯಾಯಗಳನ್ನು ಬೊಟ್ಟು ಮಾಡಿ ತೋರಿಸುತ್ತಲೇ ಇದ್ದರು. ಕೇಂದ್ರ ಸರಕಾರ ಕೊಡುವಷ್ಟೇ ತುಟ್ಟಿಭತ್ತೆ ತಮಗೆ ಸಿಗದಿರುವುದು, ದೊಡ್ಡ ದೊಡ್ಡ ಅಧಿಕಾರಗಳಲ್ಲಿ ಹೊರಗಿನವರು ದೊಡ್ಡ ಸಂಖ್ಯೆಯಲ್ಲಿ ಇರುವುದು, ಮುಂತಾದವುಗಳನ್ನು ಸರಕಾರದ ಗಮನಕ್ಕೆ ತಂದರು. ಎಂದಿನಂತೆ ಸರಕಾರ ಈ ಮುದ್ದೆಗಳ ಮೇಲೆ ವಿಚಾರ ಮಾಡಲು ಕಾಲಾವಕಾಶ ಕೇಳುವುದು, ನಂತರ ಅದರ ಬಗ್ಗೆ ಸಂಪೂರ್ಣವಾಗಿ ಮರೆಯುವ ಕಣ್ಣುಮುಚ್ಚಾಲೆ ಆಟ ಆಡುವುದು, ನಡೆದಿತ್ತು. ಸರಕಾರಿ ನೌಕರರ ಸಂಘ ನಿರ್ಣಯಕ್ಕೆ ಕಾಲಾವಧಿ ಕೊಟ್ಟು ಅಷ್ಟರೊಳಗಾಗಿ ಏನೂ ನೆರವೇರದಿದ್ದರೆ, ಸಂಪು ಹೂಡುವುದಾಗಿ ಪ್ರತಿಭಟಿಸಿತು. ಎಂದಿನಂತೆ ಸರಕಾರ ಅದನ್ನು ಅಲಕ್ಷಿಸಿತು. ಮೊದಲು ಲೇಖನಿ ಕೆಳಗಿಡುವ ಸಂಘ, ನಂತರ ಎಲ್ಲರೂ ಒಟ್ಟಿಗೆ ರಜೆ ಪಡೆಯುವ ಪ್ರತಿಭಟನೆ, ಮೆರವಣಿಗೆಗಳು ನಡೆದವು. ಸಂಪು ಕೊನೆಗೂ ಪ್ರಾರಂಭವಾಗಿ ಬಿಟ್ಟಿತ್ತು. ನೌಕರರು ಸಂಪಿನ ಯಶಸ್ಸು ತಮ್ಮದೆಂದರೆ ಸರಕಾರ ಅದು ಸಂಪೂರ್ಣ ಅಯಶಸ್ವಿ ಅಂದಿತು. ಸರಕಾರ, ಕೆಲಸದ ಮೇಲೆ ಬರಬೇಕೆಂದಿರುವ ನೌಕರರಿಗೆ ಉಳಿದವರು ಹಿಂಸೆಕೊಡುತ್ತಾರೆ, ಎಂದರೆ ಸಂಘದವರು ಸರಕಾರದವರು, ಸದಸ್ಯರ ಒಕ್ಕಟ್ಟು ಮುರಿಯಲು ಎಲ್ಲ ಉಪಾಯ ಕೈಕೊಳ್ಳುತ್ತಾರೆ! ಎಂದು ಮೂದಲಿಸುವರು. ಕೊನೆಗೆ ಸರಕಾರ ತುಟ್ಟಿಭತ್ತೆಯಲ್ಲಿ ಸ್ವಲ್ಪ ಹೆಚ್ಚಳ ಮಾಡಿ, ಸರಕಾರಿ ನೌಕರಿಗಳಲ್ಲಿ ರಾಜಸ್ಥಾನಿಗಳಿಗೇ ಪ್ರಾಶಸ್ತ್ಯ ಕೊಡಲಾಗುವುದೆಂದು ಆಶ್ವಾಸನ ಕೊಟ್ಟನಂತರ ತಿರುಗಿ ಆಫೀಸುಗಳು ಪ್ರಾರಂಭವಾದವು. ನಂತರ ಸರಕಾರವೂ ತನ್ನ ಮಾತುಗಳನ್ನು ನಡೆಸಿಕೊಡುವುದರಲ್ಲಿ ಬರುವ ನೂರು ಆತಂಕಗಳನ್ನು ತಿಳಿಹೇಳಿದರೆ ನೌಕರರು ತಮ್ಮ ಬೇಡಿಕೆಗಳು ಈಡೇರಲೇಬೇಕೆಂದು ಒತ್ತಾಯಿಸುತ್ತ ಬಂದರು.

೨೫. ಜನ ಹಿತಕ್ಕಾಗಿ

ವೈವಾಹಿಕ ಜೀವನದ ಹೊಸ ದಿನಗಳು ನಿಮಿಷಗಳಂತೆ ಜಾರಿಕೊಂಡರೂ ನಮ್ಮ ನಮ್ಮ ಕರ್ತವ್ಯಗಳನ್ನು ಮರೆಯುವಂತೆ ಇರಲಿಲ್ಲ. ಗೃಹಿಣಿಯ ರಜಾ ದಿನಗಳು ಮುಗಿಯುತ್ತ ಬಂದರೂ ಹೊಸ ಸಂಸಾರದ ರಸನಿಮಿಷಗಳನ್ನು ಬಿಡಲೊಪ್ಪದೇ ತಾನು ನೌಕರಿಗೇ ರಾಜೀನಾಮೆ ಕೊಡುತ್ತೇನೆಂದಳು. ಎಂಥ ಸಂದರ್ಭದಲ್ಲಿಯೂ ಆನುವಂಶಿಕವಾಗಿ ಬಂದ ವ್ಯಾವಹಾರಿಕತೆ ಮರೆಯದ್ದರಿಂದ, ನೌಕರಿ ಬಿಡಲು ಸಿದ್ಧಳಿದ್ದಾಗ ಅದರಲ್ಲಿಯೂ ಸ್ವಲ್ಪ ಲಾಭವಾಗುವಂತೆ ಏಕೆ ಪ್ರಯತ್ನಿಸಬಾರದೆಂದು, ಅನಿಶ್ಚಿತ ಕಾಲದವರೆಗೆ ರಜೆ ಕೊಡಬೇಕು, ಇಲ್ಲವೇ ಜಯಪುರಕ್ಕೆ ವರ್ಗಾಯಿಸಬೇಕು, ಇವೆರಡೂ ಸಾಧ್ಯ ಇಲ್ಲದಿದ್ದರೆ ಈ ಕಾರಣಗಳಿಗಾಗಿ ರಾಜೀನಾಮೆ ಕೊಡಬೇಕಾದೀತು ಎಂಬರ್ಥದ ಪತ್ರವನ್ನು ಧಾರವಾಡ ಆಫೀಸಿಗೆ ಕಳಿಸಲಾಯಿತು. ಅಲ್ಲಿಂದ "ಜಯಪುರಕ್ಕೆ ವರ್ಗಾವರ್ಗಿಯ ಬಗ್ಗೆ ದಿಲ್ಲಿಯ ಆಫೀಸಿಗೆ ಬರೆಯಲಾಗಿದೆ. ಅಶಾಶ್ವತ ಸರಕಾರಿ ಅಧಿಕಾರಿಗಳಿಗೆ ಮೂರು ತಿಂಗಳಿಗಿಂತ ಹೆಚ್ಚು ಅಸಾಮಾನ್ಯ ರಜೆ ಕೊಡಲು ಸಾಧ್ಯವಿಲ್ಲ" ಎಂಬ ಉತ್ತರ ಬಂದಿತು. ನಾವು ಎಲ್ಲದಕ್ಕೂ ಸಿದ್ಧರಿದ್ದುದರಿಂದ ರಾಜಸ್ಥಾನದ ಮರುಭೂಮಿಯ ಉರಿಬಿಸಿಲಿನ ಬೇಗೆಯಿಂದ ಬದುಕಿಕೊಳ್ಳಲು ಕಾಶ್ಮೀರ ಕೊಳ್ಳಕ್ಕೆ ಹೊರಟುಬಿಟ್ಟೆವು. ಒಂದು ತಿಂಗಳ ಕಾಲ ಹಿಮಾಲಯದ ಗಿರಿಪ್ರದೇಶಗಳನ್ನು ಏರಿ, ಕಂದರಗಳಲ್ಲಿ ಇಳಿದು, ಸರೋವರ - ನದಿಗಳಲ್ಲಿ ತೇಲಿ, ಹಿಮಾಚ್ಛಾದಿತ ಬೆಟ್ಟಗಳಿಂದ ಕಣ್ಣಿಗೆ ಹಬ್ಬ ಮಾಡಿಕೊಂಡು ಜೋಬನೇರಕ್ಕೆ ಮರಳಿದ ದಿನ, ಅಂಚೆಯವನು ಪತ್ನಿಯನ್ನು ಜಯಪುರಕ್ಕೆ ವರ್ಗಾಯಿಸಿದ ಶುಭವಾರ್ತೆಯನ್ನು ಹೊತ್ತು ತಂದ ಪತ್ರವನ್ನು ಕೈಗಿತ್ತು ಹೋದ. ಆದರೆ ಜಯಪುರದಿಂದ ಹೋಗಬೇಕಾಗಿದ್ದವನು, ಅದನ್ನು ರದ್ದುಮಾಡಿಸಿಕೊಳ್ಳುವ ಪ್ರಯತ್ನದಲ್ಲಿ ಇದ್ದದ್ದರಿಂದ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದಿಲ್ಲವೆಂದು ಜಯಪುರ ಕೇಂದ್ರದ ಮೇಲಧಿಕಾರಿಗಳು ಸ್ಪಷ್ಟವಾಗಿ ಹೇಳಿಬಿಟ್ಟರು. ಧಾರವಾಡದಿಂದ, 'ರಿಲೀವಿಂಗ್ ಆರ್ಡರ್' ಬಂದಿತ್ತಲ್ಲದೇ "ಎಲ್ಲ ರಜೆಯೂ ಮುಗಿದುಹೋಗಿರುವುದರಿಂದ ಇನ್ನೊಂದು ವಾರದಲ್ಲಿ ಕೆಲಸಕ್ಕೆ ಸೇರದಿದ್ದರೆ ಕಾನೂನಿನ ಪ್ರಕಾರ ನೌಕರಿ ಹೋಗಿಬಿಡುವುದು!" ಎಂದು ತಿಳಿಸಿದ್ದರು, ಆದರೆ ಜಯಪುರದಲ್ಲಿ ಹಾಜರಾಗಲು ಅಡ್ಡಿಯಿದ್ದುದರಿಂದ ಮುಂದೇನು ಮಾಡಬೇಕೆಂದು

ಸಮಸ್ಯೆ ನಿಂತಿತು. ದಿಲ್ಲಿಯಲ್ಲಿ ಕುಳಿತು ಕಾರಭಾರ ನಡೆಸುವ ಉಚ್ಚ ಅಧಿಕಾರಿಗಳಿಗೆ ಚಿಕ್ಕ ಅಧಿಕಾರಿಗಳು ನೇರವಾಗಿ ಪತ್ರ ಬರೆಯಬಾರದೆಂಬ ಪತ್ನಿಯ ವಾದವನ್ನು ಲೆಕ್ಕಿಸದೇ ಅವಳು ಈ ಸಂದರ್ಭದಲ್ಲಿ ನೌಕರಿ ಕಳೆದುಕೊಂಡರೆ ಅದಕ್ಕೆ ಸರಕಾರವೇ ಹೊಣೆಯಲ್ಲದೇ ನಾವಲ್ಲ! ಎಂದು ಕಾನೂನುಬದ್ಧವಾದ ಪತ್ರವನ್ನು ದಿಲ್ಲಿಗೆ ಕಳಿಸಿದೆವು. ಎಂದಿನಂತೆ, ಅಷ್ಟರಿಂದಲೇ ಎಚ್ಚತ್ತದವರಿಗೆ ಎಕ್ಸಪ್ರೆಸ್ ತಂತಿಯನ್ನು ಕಳಿಸಬೇಕಾಯಿತು. ಮರುತಂತಿಯಿಂದ, ಜಯಪುರದಿಂದ ಹೋಗಲೊಪ್ಪದ ಅಧಿಕಾರಿಯನ್ನು ಅಲುಗಿಸಲೇ ಬೇಕೆಂದೂ, ಶ್ರೀಮತಿ ಕಾಮತಳನ್ನು ಅಲ್ಲಿ ಸೇರಿಸಿಕೊಳ್ಳಲೇಬೇಕೆಂದೂ ಜಯಪುರಕ್ಕೆ ಆದೇಶ ಹೋಗಿ ಅದರ ಪ್ರತಿಯೊಂದು ಜೋಬನೇರಕ್ಕೆ ಬಂದಿತು! ಯಾವ ವಕೀಲರ ಸಲಹೆ ಇಲ್ಲದೇ ಇಷ್ಟೆಲ್ಲ ಸಾಧ್ಯವಾದದ್ದಕ್ಕೆ ಪತ್ನಿಗೆ ಆಶ್ಚರ್ಯ, ಆನಂದ. ಇಷ್ಟು ಸಾಲದ್ದಕ್ಕೆ ತನ್ನ ಯಾವ ತಪ್ಪೂ ಇಲ್ಲದೇ ನೌಕರಿಗೆ ಹಾಜರಾಗಲು ಕೊಡದಿದ್ದುದರಿಂದ ಆ ಅವಧಿಯ ವೇತನ ಕೊಡಬೇಕೆಂದು ವಿನಂತಿ ಪತ್ರ ಸಲ್ಲಿಸಲು ಹೇಳಿದೆ. ಬೇಕಾದ ಊರಿಗೆ ವರ್ಗ ಮಾಡಿದ್ದರಿಂದ ಆ ಹಣಕ್ಕಾಗಿ ಬಡಿದಾಡಬೇಕಾಗಿಲ್ಲವೆಂದು ಅವಳ ವಾದ. ಕೊನೆಗೊಮ್ಮೆ "ಶ್ರೀಮತಿ ಕಾಮತಳ ಸೇವೆ ಜನಹಿತಕ್ಕಾಗಿ ಅತ್ಯವಶ್ಯವಿದ್ದುದರಿಂದ ಅವಳು ಕಳೆದುಕೊಂಡ ಹದಿನೆಂಟು ದಿನಗಳ ವೇತನವನ್ನು ಮಂಜೂರ ಮಾಡಲಾಗಿದೆ" ಎಂದು ದಿಲ್ಲಿಯಿಂದ ಪತ್ರ ಬಂದೇಬಿಟ್ಟಿತು!

ಸುಮಾರು ಇದೇ ಸಮಯಕ್ಕೆ ಅಮೇರಿಕೆಯಿಂದ ನನ್ನ ಸಾಮಾನುಗಳು ಮುಂಬಯಿ ಬಂದರಕ್ಕೆ ಬಂದು ತಲುಪಿದ್ದವು. ಇವುಗಳು ಬಹಳ ವಿಳಂಬವಾಗಿ ಬರುತ್ತಿದ್ದುದರಿಂದ ಬಿಡಿಸಿಕೊಳ್ಳಲು ದಿಲ್ಲಿ ಅಧಿಕಾರಿಗಳಿಂದ ಅಪ್ಪಣೆ ಬೇಕೆಂದು ಮುಂಬಯಿಯ ಅಧಿಕಾರಿಗಳು ತಿಳಿಸಿದರು. ಅಮೇರಿಕೆಯ ರೂಢಿಯಂತೆ ಹೆಸರಿನ ಮುಂದೆ ಡಿಗ್ರಿ, ಹುದ್ದೆಗಳನ್ನು ಸೇರಿಸದೇ ವಿನಂತಿ ಪತ್ರ ದಿಲ್ಲಿಗೆ ಕಳಿಸಿದರೆ ಅವರಿಂದ ಉತ್ತರವೇ ಬರಲಿಲ್ಲ. ಡಾ. ಸುಧೀರರು, "ಇದು ಭಾರತ. ಪಾಶ್ಚಾತ್ಯ ಪದ್ಧತಿಗಳು ಇಲ್ಲಿ ನಡೆಯುವುದಿಲ್ಲ. ಇದ್ದ ಡಿಗ್ರಿಗಳನ್ನು ಬರೆದು ಕೇಂದ್ರ ಸರ್ಕಾರದ ಪ್ರಥಮ ದರ್ಜೆಯ ಅಧಿಕಾರಿ ಎಂದು ಸ್ಪಷ್ಟ ಬರೆದು ಇನ್ನೊಂದು ಪತ್ರ ಹಾಕಿರಿ" ಎಂದು ಸಲಹೆಯಿತ್ತರು. ಹಾಗೆ ಬರೆದ ಮರುಟಪಾಲಿಗೇ ದಿಲ್ಲಿಯಿಂದ ಅಪ್ಪಣೆ ಚೀಟಿ ಬಂದಿತು! ಇಷ್ಟಾದರೂ ಬಂದ ಸಾಮಾನುಗಳು ನನ್ನವೇ! ಎಂದು ಪ್ರಥಮ ಶ್ರೇಣಿಯ ನ್ಯಾಯಾಧೀಶರ ಸಮ್ಮುಖದಲ್ಲಿ ಸಹಿ ಹಾಕಿದ ಪ್ರತಿಜ್ಞಾ ಪತ್ರವೊಂದು ಕಳಿಸಿದರೇ ಸಾಮಾನುಗಳನ್ನು ಬಿಡಿಸಿಕೊಳ್ಳಬಹುದೆಂದು ಮುಂಬಯಿ ಬಂದರದ ಅಧಿಕಾರಿಗಳು ತಿಳಿಸಿದರು. ಈ ಕೆಲಸವನ್ನು ಜಯಪುರದಲ್ಲಿ ಮಾಡಿಸಬೇಕೆಂದಿದ್ದರೂ, ಪತ್ನಿ ತನ್ನ ಸಮೀಪದ ಆಪ್ತರೊಬ್ಬರು ಮುಂಬಯಿಯಲ್ಲಿದ್ದವರು ಈ ಕೆಲಸವನ್ನು ಸುಲಭದಲ್ಲಿ ಮಾಡಿಸಿ

ಕೊಡಬಹುದೆಂದು ಸೂಚಿಸಿದ್ದರಿಂದ ಹಾಗೇ ಬರೆದೆ. ಅವರು ಒಂದು ವಾರದ ನಂತರ ಪತ್ರ ಬರೆದು ಜಯಪುರಕ್ಕೆ ನಾನೇ ಹೋಗಿ ಆ ಕೆಲಸ ಮಾಡಿಸಬೇಕೆಂದು ಎಲ್ಲರಿಗೂ ತಿಳಿದ ವಿಷಯ ಬರೆದಿದ್ದರು. ಇದರಿಂದಾಗಿ ಡೆಮರೇಜ ಏರಿದ್ದು, ಪತ್ನಿ ನೊಂದುಕೊಂಡಿದ್ದು ಅಷ್ಟೇ ಆಯಿತು.

ಸರಿ, ಒಂದು ದಿನದ ರಜೆ ಪಡೆದು ಜಯಪುರಕ್ಕೆ ಧಾವಿಸಿದೆ. ಚಾಂದಪೋಲದ ರಿಕ್ಷಾ ವಾಲಾನಿಗೆ ಕಲೆಕ್ಟರೇಟಿಗೆ ಕರೆದೊಯ್ಯಲು ಹೇಳಿದರೆ ಏನೊಂದು ತಿಳಿಯದೇ ಕೊನೆಗೆ 'ಕಲೆಟ್ರಿ'ಗೆ ತಾನೇ ವೇಗವಾಗಿ ರಿಕ್ಷಾ ನಡೆಸಿ ಮುಟ್ಟಿಸಿದ. ಕಟ್ಟಡದ ಹೊರಗೆ ಗದ್ದಲವೇ ಗದ್ದಲ. ಕಬ್ಬಿನ ಹಾಲು ಮಾರುವವರು, ಅಯ್ಸಕ್ಯಾಂಡಿ, ಪಾನ, ಬೀಡಿ, ಸಿಗರೇಟಿನವರೆಲ್ಲ ತುರುಸಿನಿಂದ ವ್ಯಾಪಾರ ನಡೆಸಿದ್ದರು. ಮೊಕದ್ದಮೆ ಹೂಡಿದವರು, ನ್ಯಾಯ ಕೋರಿ ಬಂದವರು, ಬೀಡಿ ಸೇದುತ್ತ ವಿಚಾರ ವಿನಿಮಯದಲ್ಲಿ ತೊಡಗಿದ್ದರು. ಸಿಪಾಯಿಯೊಬ್ಬ ಸಾಬನ ಹೆಸರನ್ನು ಮೂರು ಸಲ ಕೂಗಿ ಕೋರ್ಟಿನಲ್ಲಿ ಹಾಜರಾಗಬೇಕೆಂದು ಹೇಳಿಹೋದ. ಯಾವುದೋ ಭೂಮಿಯ ಜಗಳವಿದ್ದಿರಬೇಕು. ವಕೀಲರು ಪ್ರಶ್ನೆ ಕೇಳುತ್ತಿದ್ದರು. ಅವನು ಯಾಂತ್ರಿಕವಾಗಿ ಉತ್ತರಿಸುತ್ತಿದ್ದ. ನ್ಯಾಯಾಧೀಶರ ಗುಮಾಸ್ತನ ಕೈಯಲ್ಲಿ ತಂದ ಕಾಗದ ಪತ್ರಗಳನ್ನು ಕೊಟ್ಟಾಗ, ಅವನು ಅವುಗಳನ್ನು ಸಾಹೇಬರೆದುರಿಗೆ ಇಟ್ಟ. ಅವರು ನನ್ನನ್ನೊಮ್ಮೆ ದಿಟ್ಟಿಸಿ ನೋಡಿ ಹೆಸರನ್ನು ವಿಚಾರಿಸಿದರು. ದೇಹಾತಿ (ಹಳ್ಳಿಗ)ನನ್ನು ಮಾತನಾಡಿಸುವಂತೆ, 'ನೀನೇ ಡಾ. ಕಾಮತನೆಂದು ನನಗೆ ಹೇಗೆ ತಿಳಿಯಬೇಕು? ಅವನ ಬನಾವಟಿ ಸಹಿಯನ್ನು ನೀನು ಹಾಕಿರಬಹುದು..........' ಎಂದು ರಾಗವೆಳೆದರು. 'ಕಾಮತನ ಬನಾವಟಿ ಸಹಿ ಹಾಕುವವನು ತಮ್ಮದನ್ನೂ ಹಾಕಬಹುದು, ಎಂಬುದು ತಮಗೆ ತಿಳಿದಂತಿಲ್ಲ' ಎಂದು ಕಟುವಾಗಿಯೇ ಹೇಳಿದೆ. 'ಹಾಗಲ್ಲ; ನೀನು ಯಾವುದಾದರೂ ಅಪರಾಧ ಮಾಡಿ, ಅಪರಾಧ ನಡೆದ ಸಮಯದಲ್ಲಿ ನನ್ನ ಕೋರ್ಟಿನಲ್ಲಿದ್ದೆ ಎಂದು ಸಿದ್ಧಮಾಡಲು ಈ ಕಾಗದಗಳನ್ನು ಬಳಸಬಹುದು' ಎಂದು ಇನ್ನೊಂದು ಪ್ರಶ್ನೆಯನ್ನು ತೂರಿದರು. "ಈ ಕಾಗದದ ಮೇಲೆ ತಾವು ಸಹಿ ಹಾಕುವುದರಿಂದ ನಾನು ಅಪರಾಧಿಯಲ್ಲ. ಇಲ್ಲವೇ ಬನಾವಟಿ ಸಹಿ ಹಾಕಿಲ್ಲವೆಂದು ಸಾಕ್ಷಿ ಹೇಳುತ್ತಿಲ್ಲ. ನಾನು ತಮ್ಮ ಸಮಕ್ಷಮ ಇವುಗಳ ಮೇಲೆ ಸಹಿ ಹಾಕಿದ್ದೇನೆ. ಇಷ್ಟೇ ಅರ್ಥವಾಗುತ್ತದೆ" ಎಂದು ತರ್ಕಬದ್ಧವಾಗಿ ಹೇಳಲೆತ್ನಿಸಿದೆ. ನಾನೇ ಕಾಮತನೆಂದು ಬೇರೊಬ್ಬರಿಂದ ಸರ್ಟಿಫಿಕೇಟು ತಂದ ಹೊರತು ತಮ್ಮಿಂದ ಸಹಿ ಹಾಕುವುದು ಸಾಧ್ಯವಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರು. ಅವರ ಒರಟುತನ ಸರಿಬಾರದೇ "ನೀವು ತಿಳಿದಂತೆ ಅವರ ಮುಂದೆಯೂ 'ಕಾಮತ'ನ ಬನಾವಟಿ ಸಹಿ ಹಾಕಿದರೆ? ಇಲ್ಲವೇ ಅವರೂ ನಿಮ್ಮಂತೆ ನಾನೇ ಕಾಮತನೆಂದು ನಂಬದೇ ಹೋದರೆ?" ಅದಕ್ಕೂ ಹೆಚ್ಚಾಗಿ ನಾನೇ ಬೇರೊಬ್ಬರ ಖೊಟ್ಟಿ ಸಹಿ ಹಾಕಿಸಿ

ತಂದರೆ? ಎಂದು ಕೇಳಿದಾಗ ಮೆತ್ತಗಾಗಿ ನನ್ನ ಸಹಿಯನ್ನೊಮ್ಮೆ ನೋಡಿ 'ಅಧಿಕಾರಿಗಳ ಸಹಿಯ ಕೆಳಗೆ ರಬ್ಬರ ಸ್ಟ್ಯಾಂಪ್ ಇರುತ್ತದಲ್ಲವೇ?' ಎಂದು ತಮ್ಮ ಮಾತನ್ನು ಸಮರ್ಥಿಸಿಕೊಂಡರು. 'ಒಂದು ರೂಪಾಯಿ ಕೊಟ್ಟರೆ ಒಂದು ತಾಸಿನಲ್ಲಿ ರಬ್ಬರ್ ಮೊಹರನ್ನು ತಯಾರಿಸಿ ಕೊಡುತ್ತಾರೆ. ಮಾಡಿಸಿ ತಂದು ತೋರಿಸಲೇ? ತಾವು ರಬ್ಬರ್ ಮುದ್ರೆಯಲ್ಲಿಟ್ಟ ವಿಶ್ವಾಸ ಮಾನವರ ಮಾತಿನಲ್ಲಿ ಇಟ್ಟಂತಿಲ್ಲ. ನಿಮ್ಮಂತೆ ನಾನೂ (ಕೇಂದ್ರ ಸರಕಾರದ) ಪ್ರಥಮ ದರ್ಜೆಯ ಅಧಿಕಾರಿಯೆಂದು ಕೆಲಸ ಮಾಡುತ್ತಿದ್ದೇನೆ. ಹೊಳೆಯುವ ಬೂಟು, ಅಚ್ಚುಕಟ್ಟಾದ ಸೂಟುಗಳನ್ನು ಧರಿಸದಿದ್ದಾಕ್ಷಣ ನಾನೊಬ್ಬ ಕ್ಷುದ್ರನಾಗಿಬಿಡುತ್ತೇನೆಯೇ?' ಎಂದು ನೊಂದು ನುಡಿದಾಗ ನ್ಯಾಯಾಧೀಶರಿಗೆ ಇದೆಲ್ಲಿಯ ಗ್ರಹಚಾರವೆನಿಸಿರಬೇಕು. ನಂತರ ಕೂಡ್ರಲು ಕುರ್ಚಿಯನ್ನು ಕೊಟ್ಟು, ತಾನು ಹಿಂದೆ ಇಂಥ ಸಹಿ ಹಾಕಿದ್ದರಿಂದ ಪಟ್ಟ ಕಷ್ಟವನ್ನು ವಿವರಿಸಿ, ಹತ್ತಿರದಲ್ಲಿ ಕೀಟ ಸಂಶೋಧನಾ ಕೇಂದ್ರವಿದೆ. ಅಲ್ಲಿಯ ಅಧಿಕಾರಿಗಳಿಗೆ ನಿಮ್ಮ ಪರಿಚಯ ಹೇಳಿ, ಅವರ ಸಹಿ ಹಾಕಿಸಿಕೊಂಡು ಬನ್ನಿ. ಅರೆನಿಮಿಷದಲ್ಲಿ ನಿಮ್ಮ ಕೆಲಸವಾಗುವುದೆಂದು ಆಶ್ವಾಸನ ಕೊಟ್ಟರು. ಚಮನ್ ಕೌಲನಿಂದ ಕೀಟ ವಿಭಾಗದ ಅಧಿಕಾರಿ ಜೋಶಿಯವರ ಪರೋಕ್ಷ ಪರಿಚಯವಾಗಿತ್ತು. ಅವರನ್ನು ಕಂಡು ನಾನು ಯಾರು ಎಂದು ಹೇಳಿದಾಕ್ಷಣ ಹಿಂದೆ ಮುಂದೆ ನೋಡದೇ ಸಹಿ ಹಾಕಿದರು. ನ್ಯಾಯಾಧೀಶರೂ ಅಪನಂಬಿಕೆ ತೋರಿದ್ದಕ್ಕಾಗಿ ಕ್ಷಮೆಕೋರಿ ಸಹಿ ಹಾಕಿದರು.

ಜಯಪುರದಲ್ಲಿ ಕೆಲಸಕ್ಕೆ ಹಾಜರಾಗಲು ಮಡದಿ ಬೆಳಿಗ್ಗೆ ಎದ್ದು ಬಸ್ಸು ಹತ್ತಿದರೂ ಅದು ಅರ್ಧದಾರಿಯಲ್ಲಿ ಕೆಟ್ಟು ಹೋಗಿ ನಂತರ ಮತ್ತೊಮ್ಮೆ ರೇಡಿಯೋ ಸ್ಟೇಶನ್ನಿನಿಂದ ಒಂದೂವರೆ ಮೈಲು ದೂರದಲ್ಲಿ ನಿಂತೇ ಬಿಟ್ಟಿತು. ನಡೆದು ಹೋಗಿ ಆಫೀಸಿಗೆ ಹಾಜರಾಗಿ ಮರಳುವಾಗಲೂ ರೇಲುಗಾಡಿ ತುಂಬ ತಡವಾಗಿ ಬಂದಿತ್ತು. ತಿರುಗಿ ಜೋಬನೇರ ಸೇರಬೇಕಾದರೆ ಜನರೆಲ್ಲ ಗಾಢನಿದ್ರೆಯಲ್ಲಿದ್ದರು. ಜನರು ಏಳುವ ಮೊದಲು ಜೋಬ ನೇರ ಬಿಟ್ಟವಳು ಅವರು ಮಲಗಿದ ಮೇಲೆ ಮನೆ ಸೇರಬೇಕಾಗುವುದೆಂದು ಪತ್ನಿ ಒದ್ದಾಡುವುದನ್ನು ನೋಡಲಾಗದೇ ಜಯಪುರದಲ್ಲಿಯೇ ಮನೆ ಹೂಡುವುದು, ಅವಳಿಗೆ ಅನಿವಾರ್ಯವೆಂದು ಕಂಡುಕೊಂಡೆವು. ನಂತರ ಬಂದ ರವಿವಾರದಂದೇ ಮನೆ ಹುಡುಕಲು ಜಯಪುರಕ್ಕೆ ಹೊರಟೆ. ದಿನೇಶರಾವನ ಸಹಾಯವನ್ನು ಇದಕ್ಕಾಗಿ ಕೋರಿದರೂ ತುಂಬ ದೂರದ ವಿಶ್ವವಿದ್ಯಾಲಯದ ಆವಾರದಲ್ಲಿ ಭಾರೀ ಬಾಡಿಗೆಯ ಮನೆಗಳನ್ನು ಅವನು ತೋರಿಸಲಾರಂಭಿಸಿದ್ದರಿಂದ ತಿರುಗಿ ಪತ್ನಿಯ ಆಫೀಸಿನ ಅಕ್ಕಪಕ್ಕದಲ್ಲಿ ಮನೆಗಳನ್ನು ಹುಡುಕಲಾರಂಭಿಸಿದೆ. ಕೇಳಿದ ನಾಲ್ಕು ಐದು ಜನರು ತಮ್ಮಲ್ಲಿ ಮನೆ ತೆರವಿಲ್ಲದ್ದನ್ನು ಹೇಳಿದಾಗ ತಲೆ ಕೆರೆದುಕೊಂಡೆ. ಕುಮಾರಿಯೊಬ್ಬಳು ವೈಯ್ಯಾರದಿಂದ ಎದುರಿಗೆ ಬರುತ್ತಿದ್ದಳು. ಅವಳು ಮನೆಯ

ಒಡತಿಯಲ್ಲವೆಂದು ತಿಳಿದಿದ್ದರೂ ಅವಳನ್ನು ಮಾತನಾಡಿಸಿದೆ. ಗುಜರಾಥಿ ಧಾಟಿಯ ಹಿಂದಿಯಲ್ಲಿ "ನೆರೆಮನೆಯ ಜೆ.ಡಿ. ಶರ್ಮರಲ್ಲಿ ವಿಚಾರಿಸಿ ನೋಡಿ" ಎಂದಳು. ರಾವನೇ ಇಂಗ್ಲಿಷ್ ಮಿಶ್ರಿತ ಹಿಂದಿಯಲ್ಲಿ ಮನೆಯೊಡತಿಯನ್ನು ಮಾತನಾಡಿಸಿದಾಗ ನಾವು ಕ್ರಿಶ್ಚಿಯನ್ ಎಂದು ಅವಳು ನಂಬಿದಂತಿತ್ತು. "ಮನೆ ಖಾಲಿಯಿದೆ. ಮೂರು ನಾಲ್ಕು ಜನ ನೋಡಿ ಹೋಗಿದ್ದಾರೆ. ನಾವು ಬ್ರಾಹ್ಮಣರಾದ್ದರಿಂದ ಮೀನು - ಮಾಂಸ ತಿನ್ನುವವರಿಗೆ ಕೊಡುವ ವಿಚಾರವಿಲ್ಲ" ಎಂದಳು. ನಾವೂ ಬ್ರಾಹ್ಮಣರೆಂದು ಸಿದ್ಧಪಡಿಸಲು ಯಜ್ಞೋಪವೀತವನ್ನು ಎಳೆದು ಆ ಯಜಮಾನಿಗೆ ತೋರಿಸಿದಾಗ ನಕ್ಕಳು. ಇಷ್ಟಾದ ನಂತರ "ತನ್ನ ಪತಿ ಹನ್ನೆರಡು ಗಂಟೆಗೆ ಆಫೀಸಿನಿಂದ ಬರಲಿದ್ದಾರೆ. ಆಗ ಬಂದು ಮಾತನಾಡಿ" ಎಂದು ಬೀಳ್ಕೊಟ್ಟಳು. ತಿರುಗಿ ಗೃಹಶೋಧ ನಡೆಸಿದೆವು. ಆದರೆ ಸಫಲತೆ ಕಾಣದೇ ತಿರುಗಿ ಶರ್ಮರಲ್ಲಿ ಬಂದೆವು. ನಗು ಮುಖದ ಸೌಮ್ಯ ವ್ಯಕ್ತಿಯಾಗಿದ್ದ ಶರ್ಮರು ಸ್ವಾಗತಿಸಿದರು. ಮನೆಯಲ್ಲಿ ಇರುವವಳು ಮಹಿಳೆಯೊಬ್ಬಳೇ ಎಂದಾಗ ಒಂದು ಕೋಣೆಯೂ ಅಟ್ಟದ ಮೇಲಿದೆ. ಅಲ್ಲಿ ಇರಬಹುದಲ್ಲ ಎಂದು ಸೂಚಿಸಿದರು. ಅದು ಸಾಲದು. ಎರಡು ರೂಮು, ಒಂದು ಪುಟ್ಟ ಅಡಿಗೆ ಮನೆಯ ಖಾಲಿಮನೆಯೇ ಇರಲೆಂದಾಗ ಮನೆಯನ್ನು ಕೊಡಲು ಒಪ್ಪಿಕೊಂಡರೂ ಮುಂಗಡ ಹಣ ಪಡೆಯಲು ನಿರಾಕರಿಸಿದರು. ತಮ್ಮ ಮಗನೊಬ್ಬ ಇಂಜಿನಿಯರ ಇದ್ದುದಾಗಿ ಹೇಳಿ ಸದ್ಯಕ್ಕಾತ ದಿಲ್ಲಿಗೆ ಹೋಗಿದ್ದು ತಿರುಗಿ ಬರಲಿದ್ದಾನೆಂದು ಅಭಿಮಾನದಿಂದ ಹೇಳಿದರು. ಜೋಬನೇರಕ್ಕೆ ನಾಲ್ಕು ಗಂಟೆಗೇ ಮರಳಿದೆ. ಆಫೀಸಿನಿಂದ ಮನೆ ನಾಲ್ಕು ನಿಮಿಷದ ಹಾದಿ. ಸುರಕ್ಷಿತತೆ, ಸಹಕಾರಗಳಿದ್ದ ಚಿಕ್ಕಮನೆಯೊಂದನ್ನು ಗೊತ್ತು ಮಾಡಿಯೇ ಬಂದಿದ್ದೇನೆಂದು ಹೇಳಿದಾಗ ಗೃಹಿಣಿ ಮೊದಲು ನಂಬಲೇ ಇಲ್ಲ!

ಕೆಲವು ಪಾತ್ರೆಗಳು, ಒಂದು ಹಾಸಿಗೆ, ಎರಡು ಪುಸ್ತಕಗಳೊಂದಿಗೆ ಗೃಹಿಣಿಯ ಒಂಟಿ ಸಂಸಾರ ಜಯಪುರದಲ್ಲಿ ಪ್ರಾರಂಭವಾಯಿತು. ವಾರಾಂತ್ಯದಲ್ಲಿ ಜಯಪುರಕ್ಕೆ ಹೋದಾಗ ಅಡಿಗೆಯ ಸಲಕರಣೆಗಳೆಲ್ಲ ಸರಿಯಾಗಿ ಇಲ್ಲದಿದ್ದರೂ ಮನೆಯ ಅನ್ನ ಸಾರಿನ ಸಾದಾ ಅಡಿಗೆಯನ್ನೇ ಮಾಡಿ ಊಟ ಮುಗಿಸಿದೆವು. ಮನೆಯ ಮಾಲಿಕ ಜಮುನಾದತ್ತ ಶರ್ಮರು ಸಿಂಗಾಪುರದಲ್ಲಿ ಬ್ರಿಟಿಶ ನೌಕರಿಯಲ್ಲಿದ್ದರು. ಸುಭಾಸಚಂದ್ರರ INA ದಲ್ಲಿ ಬಲಪೂರ್ವಕವಾಗಿ ಸೇರಬೇಕಾಯಿತು ಅವರಿಗೆ. ನಂತರ ತುಂಬ ಕಷ್ಟ ನಷ್ಟ ಸೋಸಿ ಭಾರತಕ್ಕೆ ಬಂದು ನೌಕರಿಯಿಲ್ಲದೇ ಬವಣೆ ಪಟ್ಟರು. ಸ್ವಾತಂತ್ರ್ಯಾನಂತರ ಸರಕಾರ ಅವರನ್ನು ಇನ್ಸ್‌ಪೆಕ್ಟರ ಸ್ಥಳದಲ್ಲಿ ನೇಮಿಸಿದರಂತೆ. ಅವರ ಹಸನ್ಮುಖ ಸರಳತೆಗಳು ಯಾರಲ್ಲಿಯೂ ಅವರ ಬಗ್ಗೆ ಆದರ ಹುಟ್ಟಿಸುತ್ತವೆ. ಅವರ ಪತ್ನಿ ರೇವತಿದೇವಿ ಪರಿಸರದವರಿಗೆಲ್ಲ ಮಾತಾಜಿ. ಸಮರ್ಥ ಗೃಹಿಣಿ. ಹಿರಿಯ ಮಗ ರೇಲ್ವೆಯಲ್ಲಿ ಗಾರ್ಡನಿದ್ದುದರಿಂದ ಊರಿಂದೂರಿಗೆ ಅಲೆಯುತ್ತಿದ್ದ. ತಂದೆ

ಅಭಿಮಾನದಿಂದ ಇಂಜಿನಿಯರ ಎಂದು ಹೇಳಿಕೊಂಡ ಮಗ ಜಗಮೋಹನ್ ಪೊಲಿಟೆಕ್ನಿಕ್ ಮುಗಿಸಿ ವಿದ್ಯುತ್ ವಿಭಾಗದಲ್ಲಿ ಕೆಲಸಕ್ಕೆ ಇದ್ದ. ಉತ್ಸಾಹಿ ಯುವಕ. ಕನಸುಗಾರ. ಹೂಗಿಡಗಳಲ್ಲಿ ತುಂಬ ಆಸಕ್ತಿ ಅವನಿಗೆ. ಒಳ್ಳೆಯ ತೋಟ ಮಾಡಿದ್ದ. ಇನ್ನಿಬ್ಬರು ಮಕ್ಕಳು ಶಾಲೆಗೆ ಹೋಗುತ್ತಿದ್ದರು. ತಮಗೆ ಹೆಣ್ಣುಮಕ್ಕಳು ಇಲ್ಲದ್ದರಿಂದ ಈ ಒಂಟಿ ಬಾಡಿಗೆದಾರಳ ಬಗ್ಗೆ ವಿಶೇಷ ಪ್ರೀತಿ, ಆತ್ಮೀಯತೆಗಳನ್ನು ತೋರಿದಂತೆ ಇತ್ತು, ಅವರ ನಡಾವಳಿಕೆ. ಬಲಗಡೆಯ ಮನೆಯಲ್ಲಿ ಔಷಧ ಪದವಿ ಪಡೆದ (B. Pharma) ಒಬ್ಬಾತ ತಾನೇ ಮಹಾ ಡಾಕ್ಟರನೆಂದು ಮೆರೆಯುತ್ತಿದ್ದ. ಅವನ ಪತ್ನಿ ನಿರಕ್ಷರಿಯಾದರೂ ಜಂಬ ಬಡಿವಾರಗಳು ವಿಪರೀತವಾಗಿದ್ದವು. ಎಡಗಡೆಯ ಗುಜರಾಥಿ ಮನೆಯಲ್ಲಿ ಎಷ್ಟು ಜನ ವಾಸವಾಗಿದ್ದಾರೆಂಬ ಲೆಕ್ಕ ಕೂಡಲೇ ಸಿಗುವಂತಿರಲಿಲ್ಲ. ಅನತಿ ದೂರದಲ್ಲಿ ಗುಪ್ತಚಾರ ಖಾತೆಯಲ್ಲಿ (CID) ಕೆಲಸ ಮಾಡುತ್ತಿದ್ದ ಯಾದವ್ ಎಂಬ ಪರಿವಾರ ವಾಸಿಸುತ್ತಿತ್ತು. ಅವರಿಗೆ ನಾಲ್ವರು ಪುತ್ರಿಯರು; ಒಬ್ಬನೇ ಮಗ. ಶ್ರೀಮತಿಯಾದವಳು ಮಾತಾಜಿಯ ಆಪ್ತಸಖಿಯಾದ್ದರಿಂದ ಇಡೀ ದಿನ ಅವರಲ್ಲಿಂದ ಇಲ್ಲಿ ಬರುವುದು, ಇಲ್ಲಿಂದ ಅಲ್ಲಿ ಹೋಗುವುದು ತಿಂಡಿತೀರ್ಥಗಳ ಸಾಗಾಟ ನಡೆದೇ ಇರುತ್ತಿತ್ತು. ನಾವು ನಮ್ಮಷ್ಟಕ್ಕೆ ಇದ್ದರೂ ಬರು ಹೋಗುವವರಿಗೆ ತಾಳದ ಉತ್ಸುಕತೆ ನಮ್ಮ ಬಗ್ಗೆ. ಆದ್ದರಿಂದ ಹಣಿಕಿ ಹಾಕಿ ನೋಡುತ್ತಲೇ ಇರುವರು. ಜಗಮೋಹನ ಛಾಯಚಿತ್ರದಲ್ಲಿ ಆಸಕ್ತಿಯಿದ್ದವ; ಬಲು ಬೇಗ ಹತ್ತಿರದವನಾದ. ಕೆಲದಿನಗಳಲ್ಲಿ ನಾನು 'ಭಾಯಿ ಸಾಬ್' ಮತ್ತು ನನ್ನಾಕೆ "ಬೆಹನ್‌ಜಿ"ಯ ಅಭಿಧಾನ ಪಡೆದೆವು. ನಮ್ಮ ಬಗ್ಗೆ ಅವರಿಗೆ ಕ್ರಮೇಣ ಹೆಚ್ಚೆಚ್ಚು ಗೊತ್ತಾದಂತೆ ಆದರ ಗೌರವಗಳಿಗೆ ಹೆಚ್ಚೆಚ್ಚು ಪಾತ್ರರಾದೆವು. ನ್ಯೂಯಾರ್ಕ ವಿಶ್ವ ವಿದ್ಯಾಲಯದ ಡಾಕ್ಟರೇಟು ನನಗಿದೆ, ಎಂದು ಗೊತ್ತಾದಾಗ ಮೊದಮೊದಲು ಯಾರೂ ನಂಬಲಿಲ್ಲ! ಜಗ್ಗು (ಜಗಮೋಹನ) ಕ್ರಮೇಣ ನನ್ನ ಅನುಯಾಯಿಯಾದ. 'ಭಾಯಿ ಸಾಬ' ಬಂದಾಗಿನಿಂದ ಜಗ್ಗು ತುಂಬ ಬದಲಾಗಿದ್ದಾನೆ ಎಂದು ಮಾತಾಜಿ ಹೇಳುತ್ತಿದ್ದರು. ಸಾಹೇಬನ ಠೀವಿಯಿಂದ ಮನೆಯವರನ್ನೆಲ್ಲ ಬೆದರಿಸುವ ತಮ್ಮ ಮಗನು ನಮ್ಮಲ್ಲಿ ಬಂದಾಗ ನನ್ನೊಡನೆ ನೆಲದ ಮೇಲೆ ಕೂಡ್ರುತ್ತಿದ್ದುದನ್ನು ನೋಡಿ ತಾಯಿಗಾಗುತ್ತಿದ್ದ ಸೋಜಿಗ ಅಷ್ಟಿಷ್ಟಲ್ಲ. ಸದಾಕಾಲವೂ ತನ್ನಿಂದ ಏನಾದರೂ ಸಹಾಯವಾಗಬೇಕೇ? ಎಂದು ವಿಚಾರಿಸಿ ಎಷ್ಟೋ ಕೆಲಸಗಳನ್ನು ತಾನಾಗಿ ಮಾಡಿಕೊಡುತ್ತಿದ್ದ.

ಹೊಸಮನೆಯ ಹಿಂದೆ ಸಾರ್ವಜನಿಕ ನಲ್ಲಿಯೊಂದು ಇತ್ತು. ಅದರಿಂದ ನೀರು ಪಡೆಯಲು ಪರಿಸರದ ನಿವಾಸಿಗಳು ಬಡಿದಾಡುತ್ತಲೇ ಇರುತ್ತಾರೆ. ಬಳಸುವುದಕ್ಕಿಂತ ನೀರನ್ನು ಹಾಳುಮಾಡುವುದೇ ಹೆಚ್ಚಾದ್ದರಿಂದ ನಲ್ಲಿಯ ಸುತ್ತಲೂ ಮಡುವು ಒಂದು ನಿಂತಿದೆ. ಅದೊಂದು ದೊಡ್ಡ ಸೊಳ್ಳೆಗಳ ಉತ್ಪಾದನಾ ಕೇಂದ್ರವಾಗಿ ಪರಿಸರದವರಿಗೆಲ್ಲ

ಅವುಗಳ ಪಾಲು ತಪ್ಪದೇ ದೊರೆಯುತ್ತಿತ್ತು. ಹತ್ತಿರದಲ್ಲಿಯೇ ಸಣ್ಣ ಸಣ್ಣ ಗುಡಿಸಲುಗಳಲ್ಲಿ ಗಂಧದ ಕೆತ್ತನೆಯ ಕೆಲಸ ಮಾಡುವವರು ವಾಸಿಸುತ್ತಿದ್ದರು. ನಮ್ಮ ರಾಜ್ಯದ ಗುಡಿಗಾರರಂತೆ ಅವರು ಚಾಣಗಳಿಂದ ಆಕೃತಿಗಳನ್ನು ಕೊರೆಯದೇ ವಿದ್ಯುತ್ ಚಾಲಿತ ಮೋಟಾರದಿಂದ ಆಯುಧಗಳನ್ನು ತಿರುವಿಸಿ ಗಂಧದ ಕೊರಡನ್ನು ಕೊರೆಯುವರು. ಆ ಆಕೃತಿಗಳಲ್ಲಿ ನಮ್ಮಲ್ಲಿಯ ಸೌಂದರ್ಯವಾಗಲಿ ಕೋಮಲತೆಯಾಗಲೀ ಇರಲಿಲ್ಲ. ಆದರೂ ನಮ್ಮ ಗುಡಿಗಾರರಿಗಿಂತ ಅವರು ಹೆಚ್ಚಿನ ಹಣ ಗಳಿಸುತ್ತಾರೆಂದು ಅವರಲ್ಲಿ ಇದ್ದ ರೇಡಿಯೋ, ಸ್ಕೂಟರಗಳಂತಹ ಆಧುನಿಕ ಸಲಕರಣೆಗಳು ಸಾಕ್ಷಿ ಹೇಳುತ್ತಿದ್ದವು. ನಾವಿರುವ ಸ್ಥಳ "ಲಾಲಜಿಕಾ ಬಾಗ್" ಎಂದು ಪ್ರಸಿದ್ಧವಿತ್ತು. ಅದು ಶ್ರೀಮಂತನ ಆಸ್ತಿಯ ಭಾಗವಾಗಿತ್ತು. ಹಣದ ಕೊರತೆಯಿಂದಾಗಿ ಪ್ಲಾಟುಗಳನ್ನು ಮಾಡಿ ಅವನು ಮಾರಿದ್ದ. ಮನೆಯಿಂದ ಕೊಂಚ ದೂರ "ಪೋಲೋ ವಿಕ್ಟರಿ" ಸಿನಿಮಾ ಮಂದಿರವಿದೆ. ಅಲ್ಲಿಂದ ಮುಂದೆ ಬನಿಪಾರ್ಕ ಎಂಬ ಹೂದೋಟವಿದೆ. ರೇಲ್ವೇ ಸ್ಟೇಶನ್ನು, ದಿಲ್ಲಿ - ಆಗ್ರಾಗಳಿಗೆ ಹೋಗುವ ಬಸ್ ನಿಲ್ದಾಣ, ಬ್ಯಾಂಕು, ಅಂಗಡಿಗಳೆಲ್ಲ ಹತ್ತಿರದಲ್ಲೇ ಇದ್ದವು. ಪ್ರತಿ ಶನಿವಾರ ಅರ್ಧ ದಿನದ ಕಾಲೇಜು ಬಿಟ್ಟೊಡನೆ ನೂಕು ನುಗ್ಗಾಟದ ಬಸ್ಸು ಹಿಡಿದು ಜಯಪುರಕ್ಕೆ ಬರುತ್ತಿದ್ದೆ. ಪತ್ನಿ ಆಫೀಸಿನಿಂದ ಹಿಂತಿರುಗುವ ಮೊದಲೇ ವಾರಕ್ಕೆ ಬೇಕಾಗುವ ಅಕ್ಕಿ, ಕಾಳುಕಡ್ಡಿ, ಹಣ್ಣು-ತರಕಾರಿಗಳನ್ನು ತರುತ್ತಿದ್ದೆ. ಸಾವಕಾಶವಾಗಿ ಚಾರಪಾಯಿ, ಮೂಡಾಗಳು, ಸ್ಟೀಲಿನ ಪಾತ್ರೆ ಮತ್ತಿತ್ತರ ಡಬ್ಬಿಗಳು, ಟೇಬಲ್ಲು, ಫ್ಯಾನು ಇವುಗಳ ಖರೀದಿಯೂ ಆಯಿತು. ನಂತರದ ವರ್ಷಗಳಲ್ಲಿ ಒಂದು ಹಾಸಿಗೆ, ಎರಡು ಪುಸ್ತಕಗಳಿಂದ ಸುರುವಾದ ನಿನ್ನ ಸಂಸಾರ ಎಷ್ಟೊಂದು ಬೆಳೆಯಿಸಿದರು ಭಾಯಿಸಾಬರು! ಎಂದು ಮಾತಾಜಿ ಅನ್ನುತ್ತಲೇ ಇರುತ್ತಿದ್ದರು. ಉಳಿದೆಲ್ಲ ಅನುಕೂಲಗಳಿದ್ದರೂ ಏಕಾಂತದ ಕೊರತೆ ಸ್ವಲ್ಪ ಇದ್ದೇ ಇತ್ತು! ಅಂತೂ ನಮ್ಮಿಬ್ಬರ ಎರಡು ಸಂಸಾರಗಳು ಪ್ರಾರಂಭವಾದವು. ಪತ್ನಿಗೆ ಹೆಚ್ಚು ರಜೆಯಿದ್ದಾಗ ಜೋಬನೇರದ ನಮ್ಮ ಅರಮನೆಗೆ ಅವಳೇ ಬರುತ್ತಿದ್ದಳು.

೨೬. ವಾರಾಂತ್ಯ

ರಾಜಸ್ಥಾನದಲ್ಲಿ ಮಳೆ ಇಲ್ಲದೇ ಬೆಳೆ ಬಾರದೇ ಮರುಭೂಮಿಯಾಗಿದೆ! ಎಂದು ಭೂಗೋಲ ಒತ್ತಿ ಹೇಳಿದರೂ, ಅದರ ರಾಜಧಾನಿಯಾದ ಜಯಪುರದಲ್ಲಿ ವಾಸ ಮಾಡಿದವರು ಈ ಮಾತನ್ನು ಎಂದೂ ನಂಬಲಿಕ್ಕಿಲ್ಲ. ಈ ನಗರದಲ್ಲಿ ಸಾಮಾನುಗಳನ್ನು ಕೊಂಡುಕೊಳ್ಳುವುದೇ ಒಂದು ಮೋಜು. ಅಂತೆಯೇ ಪ್ರತಿ ಶನಿವಾರ ಜೋಬನೇರದಿಂದ ಬಂದೊಡನೆ ಕೈಯಲ್ಲಿ ದೊಡ್ಡ ದೊಡ್ಡ ಚೀಲಗಳನ್ನು ಹಿಡಿದು ಛೋಟಿ ಚೌಪಾಡಿಗೆ ಧಾವಿಸುತ್ತಿದ್ದೆ. ಅಲ್ಲಿ ಪ್ರತಿ ಶನಿವಾರ ಹಳ್ಳಿಗರ ಜಾತ್ರೆಯಂತೆ ಸಂತೆ ಕೂಡುತ್ತದೆ. ಈ ಸಂತೆಯಲ್ಲಿ ಖರೀದಿಸಬೇಕಾದ ಸಾಮಾನುಗಳ ಯಾದಿಯನ್ನು ಮಧ್ಯಮ ವರ್ಗದ ನಾರಿಯರು ಒಂದು ವಾರದಿಂದಲೇ ತಯಾರಿಸುತ್ತಾರೆ. ಮಧ್ಯಾಹ್ನದ ಚಹ ಮುಗಿಸಿ ಪಂಜಾಬಿ. ಸಿಂಧಿ, ಸೀಖ ಮತ್ತು ರಾಜಸ್ಥಾನಿ ಮಹಿಳೆಯರು ನಡೆದಾಗಲಿ, ಮೋಟಾರು, ಟಾಂಗಾಗಳಿಂದಾಗಲಿ ಬಂದು ಇಲ್ಲಿ ಇಳಿಯುವರು. ಬೆಂಕಿಪೊಟ್ಟಣ, ಹಿಂಗು, ಚಾಕು, ಕತ್ತರಿ ಮಾರುವವರು ಎಲ್ಲರಿಗಿಂತ ಮೊದಲು ಗಿರಾಕಿಗಳನ್ನು ಸ್ವಾಗತಿಸುವರು. ಆನಂತರ ಕೈಯಿಂದ ಹೆಣೆದ ಲೇಸುಗಳನ್ನು ಮಾರುವವರು, ನವಿಲುಗರಿಯ ಬೀಸಣಿಕೆ, ಸಾಣಿಗೆ, ಗೆರಸಿ, ಕಸಬರಿಗೆ ಮಾರುವವರು ಗೋಚರಿಸುವರು. ಬಿದುರು ಬೆಳೆಯದ ರಾಜಸ್ಥಾನದಲ್ಲಿ ಒಣ ಹುಲ್ಲಿನ ಬಿರುಸು ಬೊಡ್ಡೆಗಳಿಂದ ಕಸಬರಿಗೆ, ಹುಲ್ಲು ಅಲಗುಗಳಿಂದ ಗೆರಸಿಗಳನ್ನು ತಯಾರಿಸುವರು. ಹುಲ್ಲನ್ನು ಬೇಕಾದಂತೆ ಮಣಿಸಲು ಸಾಧ್ಯವಿಲ್ಲವಾದ್ದರಿಂದ ಗೆರಸಿಗಳನ್ನು ಚಚೌಕಾಕಾರದಲ್ಲಿ ನಿರ್ಮಿಸಿ ಕರಿನೂಲಿನಿಂದ ಬಿಗಿದಿರುತ್ತಾರೆ. ಕಣ್ಣಿಗೆ ಕಾಡಿಗೆ ಹಚ್ಚಿಕೊಂಡ, ಕೆಂಪು ಬಣ್ಣ ಕಂದಿಗೆ ತಿರುಗಿದ ಸಿಂಧೀ ಜನ ತಮ್ಮ ಜವಳಿ ಅಂಗಡಿಗಳನ್ನು ರಸ್ತೆಯ ಅಂಚಿಗೇ ಸ್ಥಾಪಿಸಿಬಿಟ್ಟಿರುತ್ತಾರೆ. ಇಕ್ಕಟ್ಟಾದ ಜನಸಂದಣಿಯಲ್ಲಿ ಗಿರಾಕಿಗಳಿಗೆ ಓಡಾಡಲು ತೊಂದರೆಯಾಗಿರುವುದರಿಂದ 'ರಸಿಕರು' ಅಲ್ಲಿಯೇ ಸುತ್ತುವುದು ಹೆಚ್ಚು. ಸಿಂಧಿ, ಪಂಜಾಬಿ ಯುವತಿಯರು ಸಲವಾರ ಕಮೀಜ ಧರಿಸಿ ತಮ್ಮ ಪುಷ್ಟ ಅಂಗಾಂಗಗಳನ್ನು ಪ್ರದರ್ಶಿಸುತ್ತ ಹೊರಟಾಗ ಪರಪುರುಷರ ಅಂಗಸ್ಪರ್ಶವಾದರೂ, ಸಂದಣಿಯಲ್ಲಿ ಹೆಚ್ಚು ಗಮನ ಕೊಡದ್ದರಿಂದ ಈ ಅವಕಾಶವನ್ನೇ 'ರಸಿಕರು'

ಕಾಯುತ್ತಿರುತ್ತಾರೆ. ಕೆನ್ನೆ, ತುಟಿಗಳಿಗೆ ಕೆಂಬಣ್ಣ ಸವರಿ, ಥಳಕಿನ ಬಟ್ಟೆ ಉಟ್ಟು ಮಿನುಗುವ ಚಪ್ಪಲು ತೊಟ್ಟವರು ಕಾರಿನಲ್ಲಿ ತಿರುಗುವ ಗರತಿಯರಿರಬಹುದೆಂದು ಅನಿಸಿದರೂ ನಾಲ್ಕಾಣೆ ಸಾಮಾನು ಖರೀದಿಗಾಗಿ ನಾಲ್ಕು ಅಂಗಡಿ ವಿಚಾರಿಸಿದಾಗ ಅವರ ಇರುವಿಕೆ, ನಡತೆಗಳಲ್ಲಿ ವಿರೋಧಾಭಾಸ ತೋರದೆ ಇರದು.

ವಸ್ತ್ರದ ಅಂಗಡಿಯವರು ಸತತವಾಗಿ ಗಿರಾಕಿಗಳನ್ನು ಕೂಗುತ್ತಲೇ ಇರುವರು. ಅವರಲ್ಲಿ ಹತ್ತಿಪ್ಪತ್ತು ತುಂಡುಗಳನ್ನು ಜೋಡಿಸಿ ಮಾಡಿದ ಪರಕಾರ ಎರಡು ರೂಪಾಯಿಗೆ ಸಿಕ್ಕರೆ, ಹದಿನಾರು ತುಂಡುಗಳಿಂದ ನಿರ್ಮಾಣವಾದ ಮಕ್ಕಳ ಚಡ್ಡಿಗಳು ನಾಲ್ಕಾಣೆಗೆ ಮಾರಾಟವಾಗುವವು! ಲೋಹಾರ ಮಹಿಳೆಯರ ಲಂಗಕ್ಕಾಗಿ ನಾಸಿಪುಡಿ ಬಣ್ಣದ ದಪ್ಪ ಬಟ್ಟೆ ಸಿಗುವಂತೆ, ರುಮಾಲಿಗಾಗಿ ಬೇಕಾಗುವ ಜಾಳು ಬಟ್ಟೆಯೂ ಸಿಗುವುದು. ಬಟ್ಟೆಗಳ ದರಗಳನ್ನು ಚವಕಸಿ ಮಾಡಿ ಖರೀದಿಸದಿದ್ದರೆ ಟೊಪ್ಪಿಗೆ ಬೀಳುವುದು ಖಂಡಿತ. ರಸ್ತೆಯ ಮಗ್ಗಲಿಗೆ ಸರದಾರಜಿಯೊಬ್ಬ ಹವಾಯಿ ಚಪ್ಪಲಗಳ ಪುಟ್ಟ ಗುಡ್ಡವನ್ನೇ ಹಾಕಿಕೊಂಡು ಒಂದೂವರೆ ರೂಪಾಯಿಗೆ ಜೋಡಿ ಎಂಮದು ಶಂಖನಾದ ಮಾಡುತ್ತಿದ್ದಾನೆ. ರಾಜಸ್ಥಾನಿ ಮಾದರಿಯ ಬೂಟುಗಳನ್ನು ಅಕ್ಕಿ - ಗೋಧಿಗಳಂತೆ ಗೋಣಿಚೀಲಗಳಲ್ಲಿ ತುಂಬಿ ತಂದು ಮಾರಾಟಕ್ಕೆ ಇಟ್ಟಿರುವರು, ಮರದ ನೆರಳಿನಲ್ಲಿ ಕುಳಿತವನೊಬ್ಬ ಕಬ್ಬಿಣದಿಂದ ಮಾಡಿದ ಗೃಹಕೃತ್ಯದ ಸಲಕರಣೆಗಳನ್ನು ಮಾರುತ್ತಾನೆ. ಜಯಪುರದಲ್ಲಿಯೇ ತಯಾರಿಸಿ ಅಜಮೇರದಿಂದ ತರಿಸಿದ್ದೆಂದು ಹೇಳುವ ಮುದ್ದೆಗಳ ಮಾರಾಟಗಾರನು ಕಟ್ಟೆಯ ಆಶ್ರಯ ಪಡೆಯುತ್ತಾನೆ. 'ಕುಲಫಿ' ಮಾರುವವನು ರಸ್ತೆಯ ಮಧ್ಯದಲ್ಲಿ ತನ್ನ ಕೈಗಾಡಿ ನಿಲ್ಲಿಸಿ ಹಿರಿಯರಿಗೂ, ಕಿರಿಯರಿಗೂ ದೇಶೀ ಆಯ್ಸಕ್ರೀಮನ್ನು ಪೂರೈಸಿ ಜೇಬು ತುಂಬಿಸಿಕೊಳ್ಳುತ್ತಿದ್ದಾನೆ. ಕಬಾಡ ಖಾನಾ (ಕಳವು ಮಾಡಿ ತಂದ, ಮತ್ತೆ ಬಳಸಬಹುದಾದ ಹಳೆಯ ಸಾಮಾನುಗಳ 'ಮೋಡಕಾ ಬಾಝಾರ') ದವರು ರಸ್ತೆಯ ಅಂಚಿಗೇ ಹಲವಾರು ಸಾಮಾನುಗಳನ್ನು ಹಚ್ಚಿ ಕುಳಿತಿರುತ್ತಾರೆ. ಅವರಲ್ಲಿ ಸೈಗಲರ ಅಜ್ಜಿ ಕೇಳಿರಬಹುದಾದ ಗ್ರಾಮೋಫೋನ ರಿಕಾರ್ಡುಗಳು, ಪ್ರಥಮ ಜಾಗತಿಕ ಯುದ್ಧದ ಕಾಲದಲ್ಲಿ ತಯಾರಾದ ಮಂಚ, ಎರಡು ದಶಕಗಳ ಹಿಂದೆಯೇ ಪ್ರಾಣಪಕ್ಷಿಯನ್ನು ಕಳೆದುಕೊಂಡ ಗಡಿಯಾರಗಳೆಲ್ಲ ಮಾರಾಟಕ್ಕೆ ಇದ್ದವು. ಪ್ರತಿ ವಾರವೂ, ಛಾಯಾಗ್ರಹಣಕ್ಕೆ ಬೇಕಾಗಬಹುದಾದ ಹಲವಾರ ಸಲಕರಣೆಗಳನ್ನು ತಯಾರಿಸಲಿಕ್ಕೆ ಸಿಕ್ಕ ಚುಂಗಡಿ ಸಾಮಾನುಗಳನ್ನು ಕೊಂಡು, ಮನೆಯನ್ನೇ 'ಮೋಡಕಾ ಬಾಝಾರ'ವನ್ನಾಗಿ ಪರಿವರ್ತಿಸಿದ್ದೆ! ರಸ್ತೆಯ ಇನ್ನೊಂದು ಮಗ್ಗಲಿಗೆ ದೇವದಾರು ಕಟ್ಟಿಗೆಯಿಂದ ನಿರ್ಮಿಸಿದ ಕುರ್ಚಿ - ಟೇಬಲ್‌ಗಳನ್ನು ಮಾರಾಟ ಮಾಡುತ್ತಾರೆ. ರಿಬ್ಬನ್, ಕುಂಕುಮ, ಸೂಜಿದಾರಗಳನ್ನು ಮಾರುವವರಿಗೂ ಬರಗಾಲವಿರಲಿಲ್ಲ.

ಹಳ್ಳಿಗರು ಬುಟ್ಟಿಗಳಲ್ಲಿ ಕಾಯಿಪಲ್ಯಗಳನ್ನು ತುಂಬಿ ಸಾಯಕಲ್ ಮೇಲೆ ಹೊತ್ತು ಮಾರುವರು. ಪುಗ್ಗಿ, ಪೀಪಿಗಳು ಮಕ್ಕಳಿಗಾಗಿ ಧಾರಾಳವಾಗಿ ಮಾರಾಟವಾಗುತ್ತಿದ್ದವು. ಸಂತೆಯ ವ್ಯಾಪಾರಿಗಳಿಗೇ ಸರಿಯಾಗಿ ಕೂಡ್ರಲಿಕ್ಕಾಗದ ರಸ್ತೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಲಾರಿಗಳು ಬರುವುದುಂಟು. ಅಂತಹ ಸಂದರ್ಭಗಳಲ್ಲಿ ಜನರು ಕಂಗಾಲಾಗಿ ಅಂಗಡಿಯ ಆಶ್ರಯ ಪಡೆಯುವರು. ಕೆಲವೊಮ್ಮೆ ಸುರಾಯಿ, ಮಣ್ಣಿನ ಗಡಿಗೆಗಳಿಗೆ ಹಾಯ್ದು, ಒಡೆದು ಜಗಳಗಳಾಗುವುದೂ ಉಂಟು. ಕತ್ತಲಾಗಲು ಪ್ರಾರಂಭವಾದಾಗ ಗಿರಾಕಿಗಳು ಸಾಮಾನುಗಳನ್ನು ಹೊತ್ತು, ಅಂಗಡಿಕಾರರು ಹಣ ಹೊತ್ತು, ರಸಿಕರು ಅಂದು ಹಾಯ್ದ ರಮಣಿಯರ ನೆನಪುಗಳನ್ನು ಹೊತ್ತು ಗೃಹಾಭಿಮುಖರಾಗುವರು. ನಾನು ಮನೆ ಮುಟ್ಟುವದರೊಳಗಾಗಿ ಗೃಹಿಣಿ ಆಫೀಸಿನಿಂದ ಬಂದು ಹಾದಿಯನ್ನೇ ನೋಡುತ್ತ ನಿಲ್ಲುವುದು ವಾಡಿಕೆ. ತಿಂಡಿ - ಚಹಾ ಇಲ್ಲವೇ ಶರಬತ್ತನ್ನು ಒದಗಿಸಿ ತಂದ ಸಾಮಾನುಗಳ ಬಗ್ಗೆ ಮೆಚ್ಚಿಗೆ ಸೂಚಿಸುತ್ತ, ಅದರ ಬೆಲೆಯನ್ನು ವಿಚಾರಿಸುತ್ತ ಜೋಡಿಸಿಡುವಳು. ಸಂತೆಯ ಮೋಜು ಅರಿಯದ ಅವಳು ತನಗಾಗಿ ಎಷ್ಟೊಂದು ಕಷ್ಟಪಡುತ್ತಾರೆ ಇವರು ಎಂದು ಹೆಮ್ಮೆ ಪಡುವಳು!

ರವಿವಾರ ನಸುಕಿನಲ್ಲಿಯೇ ಎದ್ದು ಹಾಲು ತರಲು ಹೋಗದಿದ್ದರೆ ಹನ್ನೆರಡು ವರ್ಷದ ಕುಮಾರಿ, ದುಂದಿ ಕರೆಯಲು ಬರುವಳು. ಗಂಡಸರು ಧರಿಸುವ ಒಳಚಡ್ಡಿ ಧರಿಸಿ, ಮೇಲೊಂದು ಪೊಲಕಾ ಹಾಕಿ ಜಡೆಯನ್ನು ಬಿಗಿಯಾಗಿ ಕೆಂಪು ದಾರದಿಂದ ಕಟ್ಟಿಕೊಂಡ ದುಂದಿ ಕಾಣಲು ಸಾದಾ ಇದ್ದರೂ ವ್ಯವಹಾರ ಚತುರೆ. ಅವಳಮ್ಮ ಶರಬತೀ, ಗಿರಾಕಿಗಳ ಸಮ್ಮುಖದಲ್ಲಿಯೇ ಎಮ್ಮೆಯನ್ನು ಹಿಂಡಿ ನೊರೆಯೊಂದಿಗೆ ಹಾಲಿನ ಲೆಕ್ಕ ಮಾಡಿ ಪಾತ್ರೆಯೊಳಗೆ ಸುರಿಯುವಳು. ಎಂದಾದರೂ ಒಂದು ದಿನ ಅವಳಿಗೇ ಹಾಲು ತರಲು ಹೇಳಿದರೆ, ತಪ್ಪದೇ ನೀರನ್ನು ಸೇರಿಸುತ್ತಿದ್ದಳು. ರಾಜಸ್ಥಾನಿ ದನಗಳಿಗೆ ಹೆಡಸು ಬಹಳವಾದ್ದರಿಂದ ಕೆನೆ, ಮೊಸರು ಚೆನ್ನಾಗಿರುತ್ತಿತ್ತಲ್ಲದೇ ಬೆಣ್ಣೆ, ತುಪ್ಪಗಳನ್ನು ಕೊಳ್ಳುವ ಅವಶ್ಯಕತೆ ಬೀಳುತ್ತಿರಲಿಲ್ಲ. ಡೇರಿಯ ಹಾಲೂ ವಿಪುಲವಾಗಿ ಸಿಗುತ್ತಿದ್ದರೂ ಅದರಲ್ಲಿ ಹಾಲಿನ ಪುಡಿಯ ಬೆರಕೆಯಿರುತ್ತಿದ್ದುದರಿಂದ ಮತ್ತು ಹಾಲು ದಿನಕ್ಕೊಂದು ಬಗೆಯಾಗಿರುತ್ತಿದ್ದುದರಿಂದ ಅದನ್ನು ಹೆಚ್ಚಿನ ಜನ ಕೊಳ್ಳುತ್ತಿರಲಿಲ್ಲ. ಮುಂಜಾವಿನ ಚಹ -ತಿಂಡಿ ಮುಗಿಯುವದರೊಳಗಾಗಿ ಜಗಮೋಹನ, ತನ್ನ ಗೆಳೆಯರನ್ನು ಸಹೋದ್ಯೋಗಿಗಳನ್ನು ಭೆಟ್ಟಿ ಮಾಡಿಸಲು ಕರೆದುಕೊಂಡು ಬರುವನು. ಇಲ್ಲವೇ ತಾನು ತೆಗೆದ ಛಾಯಾಚಿತ್ರಗಳನ್ನು ತೋರಿಸಲು ಬರುವನು. ತಾನು ಬಳಸುತ್ತಿದ್ದ ಆಫೀಸಿನ ಮೋಟಾರ ಸಾಯಕಲ್ ಮೇಲೆ ಎಲ್ಲಾದರೂ ಕರೆದುಕೊಂಡು ಹೋಗಬೇಕೇ ಎಂದು ವಿಚಾರಿಸುವ. ಅವನು ತನ್ನದು, ಆಫೀಸಿನದು ಎಂದು ಎಂದೂ ಭೇದಭಾವ

ಮಾಡುತ್ತಿರಲಿಲ್ಲ. ಆಫೀಸಿನ ಸಿಪಾಯಿ ಹೂದೋಟಕ್ಕೆ ನೀರು ಹಾಕಲು ಬಂದರೆ, ಆಫೀಸಿನ ವಿದ್ಯುತ್ ಪಂಕಗಳು ಬೇಸಿಗೆಯಲ್ಲಿ ಮನೆಗೆ ಬರುತ್ತಿದ್ದವು. ವರ್ಷಕ್ಕೊಮ್ಮೆ ಸರಕಾರೀ ಎಣಿಕೆಯ ಹೊತ್ತಿಗೆ ಅವು ಆಫೀಸಿನಲ್ಲಿ ಇದ್ದರಾಯಿತಂತೆ. ಸೈನಿಕರಿಗೆ ಸಿಗುವ ತೆರಿಗೆ ರಹಿತ ಸಾಮಾನುಗಳನ್ನು ಪರಿಸರದವರಿಗೆ ಬೇಸರವಿಲ್ಲದೇ ತಂದು ಕೊಡುತ್ತಿದ್ದ. ಇಷ್ಟಾದರೂ ತಾನು ಮಾಡುವುದು ಏನೂ ಅಲ್ಲ. ಆಫೀಸರರು ತಮ್ಮ ಅಧಿಕಾರದ ದುರುಪಯೋಗ ಪಡೆಯುವುದನ್ನು ನೋಡಿದರೆ ತಲೆ ತಿರುಗುತ್ತದೆ ಎನ್ನುವ. ಒಬ್ಬನ ಎಮ್ಮೆಯನ್ನು ಹುಡುಕಿಸಿ ತರುವುದಕ್ಕಾಗಿ ಲಾರಿಯೊಂದು ಜಯಪುರದಿಂದ ಪಂಜಾಬಕ್ಕೆ ಆಫೀಸ ಕೆಲಸದ ಮೇಲೆ (!) ಹೋಗಿ ಮರಳಿ ಬಂದಿತಂತೆ.

ಜಗ್ಗುವಿಗೆ ಚಹಾಕೊಟ್ಟು ಕಳಿಸಿದ ನಂತರ ನಾವಿಬ್ಬರೂ ಸಬ್ಜಿಮಂಡಿಗೆ (ತರಕಾರಿ ಪೇಟೆ) ಹೋಗುವುದು ವಾಡಿಕೆ. ಸಾಂಗಾನೇರ ಗೇಟಿನ ಎದುರಿಗಿರುವ ಈ ಮಂಡಿಗೆ ಹೋದಾಗ ಆಗುವ ಆನಂದ ಅಷ್ಟಿಷ್ಟಲ್ಲ. ಹಿಮಗಡ್ಡೆಯನ್ನು ಹೋಲುವ ಕಾಲಿ ಫ್ಲಾವರುಗಳು, ಕಣ್ಣಿಗೆ ಹಬ್ಬ ಮಾಡುವ ದೊಡ್ಡ ಕ್ಯಾಬೇಜುಗಳು, ಮೂಲವ್ಯಾಧಿಯವರಿಗೆ ನೆಮ್ಮದಿ ಕೊಡುವ ಪಾಲಕ್ (ಸೊಪ್ಪು), ಎಳೆಯ ಬೆಂಡೆಕಾಯಿ, ಹೂ ಉದರದ ಹೀರೆಕಾಯಿ, ಹುಳವಿಲ್ಲದ ಹಾಗಲಕಾಯಿ, ರಸಭರಿತ ಲಿಂಬೇಹಣ್ಣು, ಬೀಜರಹಿತ ಬದನೆ, ರುಚಿಯಲ್ಲಿ ಕೊಬ್ಬರಿಯನ್ನು ನಾಚಿಸುವ ಮೂಲಂಗಿ, ಕಾಶ್ಮೀರದ ಕೇಸರಿಯನ್ನು ಹೋಲುವ ಗಜ್ಜರಿ, ಹೊರಲಾಗದ ಕುಂಬಳಕಾಯಿ, ಘಮಘಮಿಸುವ ಕೋತಂಬರಿಯ ರಾಶಿ, ಇವನ್ನು ನೋಡುತ್ತ ನಿಲ್ಲುವುದೇ ಒಂದು ಮೋಜು. ಅವುಗಳ ಬೆಲೆಯಾದರೂ ತೀರ ಅಲ್ಪ. ಒಂದೇ ಒಂದು ರೂಪಾಯಿಗೆ ದೊಡ್ಡದೊಂದು ಜೋಡಿ ಕಾಲಿಫ್ಲಾವರ, ಮೂರು ಕ್ಯಾಬೇಜ, ಐದು ಕಿಲೋ ಬೆಂಡೆಕಾಯಿ, ಆರು ಕಿಲೋ ಹೀರೇಕಾಯಿ, ಎಂಟು ಕಿಲೋ ಬದನೆಕಾಯಿ, ಹತ್ತು ಕಿಲೋ ಪಾಲಕ ಇವುಗಳಲ್ಲೊಂದು ದೊರೆಯುತ್ತಿದ್ದವು. ಸುಗ್ಗಿಯ ಕಾಲದಲ್ಲಿ ಆಲೂಗಡ್ಡೆ ರೂಪಾಯಿಗೆ ನಾಲ್ಕು ಕಿಲೋ ಆಗುವುದುಂಟು. ಅಂತಹ ದಿನಗಳಲ್ಲಿ ಗೃಹಿಣಿಯರು ಕ್ವಿಂಟಲ್ ಲೆಕ್ಕದಲ್ಲಿ ಅವನ್ನು ಖರೀದಿಸಿ, ಚಿಪ್ಸ ಇಲ್ಲವೇ ವೇಫರ್ಸ ಮಾಡಿ ಒಣಗಿಸಿ ಡಬ್ಬಿಗಳಲ್ಲಿ ತುಂಬಿ ಇಡುವರು. ನಂತರ ವರ್ಷದುದ್ದಕ್ಕೂ ಚಹಾದ ವೇಳೆಯಲ್ಲಿ, ಇಲ್ಲವೇ ಅತಿಥಿಗಳು ಬಂದಾಗ ಅವುಗಳನ್ನು ಐದೇ ನಿಮಿಷಗಳಲ್ಲಿ ಹುರಿದು, ಉಪ್ಪು ಕಾರಪುಡಿ ಸಿಂಪಡಿಸಿ ತಿಂಡಿಗಾಗಿ ಉಪಯೋಗಿಸುವರು. ಪಕೌಡಿ (ಭಜಿ), ಕಚೋರಿ (ಗೋದಿ ಹಿಟ್ಟಿನಲ್ಲಿ ಮಸಾಲೆ ತುಂಬಿ ಕರಿದ ಪೂರಿಗಳು), ಭೋಲೆ - ಚಟ್ನಿ ಹಪ್ಪಳ ಸಂಡಿಗೆ ಇವುಗಳೊಡನೆ ಚಹ ಕೊಡುವುದು ಹೆಚ್ಚು. ಮಾವಿನಕಾಯಿಗೆ ಗೊರಟೆ ಬೆಳೆದ ಹೊರತು ಉಪಯೋಗಿಸುವುದು ಕಡಿಮೆ. ಅದನ್ನೂ ಮಳೆಗಾಲ ಪ್ರಾರಂಭವಾದ ಮೇಲೆ

ಉಪ್ಪಿನಕಾಯಿ ಹಾಕುತ್ತಾರೆ. ಕೊಲೆಗಡಕರ ಕತ್ತಿಯಂಥದನ್ನು ಈಳಿಗೆಮಣೆಗೆ ಬಡಿದು ಅಡಿಕೆ ಕತ್ತರಿಸುವಂತೆ ಮಾವಿನ ಕಾಯಿಯ ಹೋಳುಗಳನ್ನು ಮಾಡಿ, ಮಸಾಲೆಗೆ ಮೆಂತೆ, ಬಡಿಸೋಪಗಳನ್ನು ಇಡಿಯದಾಗಿ (ಸಾಬೂತ) ಸೇರಿಸುವರು. ಉಪ್ಪು, ಸಾಸಿವೆ ಎಣ್ಣೆ ಖಾರ ಸೇರಿಸಿ ಕೆಡದಂತೆ ಅವನ್ನು ಹತ್ತಾರು ದಿನ ಬಿಸಿಲಿಗೆ ಇಟ್ಟು ಉಪ್ಪಿನಕಾಯಿ ಹಾಕುವರು. ಲಿಂಬೆ ಉಪ್ಪಿನಕಾಯಿಯ ವಿಧಾನವೂ ಇದೇ. ಈರುಳ್ಳಿ, ಬೆಳ್ಳುಳ್ಳಿಗಳ ಉಪ್ಪಿನಕಾಯಿ ಹಾಕುವಂತೆ, ಚಳಿಗಾಲದಲ್ಲಿ ದೊರೆಯುವ ಶಲಜಮ್ (ಬಿಳೀಗಜ್ಜರಿ) ಮಟರ (ಹಸಿ ವಟಾಣಿ), ಗಾಜರ (ಗಜ್ಜರಿ) ಗಳ, ಮತ್ತು ನಾಲ್ಕಾರು ತರಕಾರಿಗಳ ಸಮ್ಮಿಶ್ರ ಉಪ್ಪಿನಕಾಯಿ ಮಾಡುತ್ತಾರೆ. ಇವುಗಳಿಗೆ ಸಿರ್ಕಾ (Vinegar) ಸೇರಿಸುವರು.

ಹಣ್ಣು ಹಂಪಲುಗಳ ಮಂಡಿ ಬೇರೆಯಿದೆ. ಅವನ್ನು ರೋಕಾಗಿ ಖರೀದಿಸಿದರೆ ಅಗ್ಗದಲ್ಲಿ ಸಿಗುತ್ತವೆ. ಪೇರಲ, ಮಾವಿನಹಣ್ಣು, ಬಾಳೇಹಣ್ಣುಗಳನ್ನು ತೂಕಮಾಡಿಯೇ ಕೊಡುವುದು ರೂಢಿ. ದೇವದಾರು ಪೆಟ್ಟಿಗೆಯಲ್ಲಿ ತುಂಬಿದ ಬೀಜರಹಿತ ದ್ರಾಕ್ಷಿಗಳನ್ನು, ಮುಸಂಬಿ, ಸೇಬುಗಳ ಬುಟ್ಟಿಗಳನ್ನು ಲಿಲಾವ ಮಾಡುವರು. ಹಣ್ಣಿನ ವ್ಯಾಪಾರಿಗಳಲ್ಲದ ನಮಗೆ, ಸೇಬು ಎರಡು ರೂಪಾಯಿಗೆ ಕಿಲೋ, ದ್ರಾಕ್ಷಿ ಮೂರು ರೂಪಾಯಿ, ಲಂಗ್ಡಾ, ತೋತಾಪುರಿ ಮಾವಿನಹಣ್ಣು, ಮುಸಂಬಿ, ದಾಳಿಂಬೆಗಳೆಲ್ಲ ಒಂದು ರೂಪಾಯಿಗೆ, ಇಬ್ಬರು ಮನದಣಿ ತಿನ್ನುವಷ್ಟು ಸಿಗುತ್ತವೆ.

ಅಜಮೇರಿ ಗೇಟಿನ ಹತ್ತಿರ ಅನಾಜಮಂಡಿ (ಕಾಳುಕಡಿಗಳ ಮಾರುಕಟ್ಟೆ) ಇದೆ. ವ್ಯಾಪಾರಿಗಳು ತಾಡಪತ್ರಿಯ ಮೇಲೆ ವಿವಿಧ ಧಾನ್ಯಗಳ ರಾಶಿ ಹಾಕಿ ಮಾರಲು ಕೂಡ್ರುವರು. ಇಲ್ಲಿ ಕಲ್ಲುಗಳಿಲ್ಲದ ಬಂಗಾರ ಬಣ್ಣದ ಪುಷ್ಟವಾದ ಗೋಧಿ ಕ್ವಿಂಟಲ್ಲಿಗೆ ಎಂಭತ್ತು ರೂಪಾಯಿ, ಕೇಸರಿ ಬಣ್ಣದ ಗೋವಿನ ಜೋಳ ಅರವತ್ತು ರೂಪಾಯಿ. ಹತ್ತಾರು ಬಗೆಯ ಅಕ್ಕಿಯ ಪ್ರಕಾರಗಳಿವೆ. ಪ್ರತಿ ಜಾತಿಯಲ್ಲಿಯೂ ಕಚ್ಚಾ (ಬೆಣತಗಿ) ಪಕ್ಕಾ (ಕುಚ್ಚುಗಕ್ಕಿ) ಪ್ರಕಾರಗಳಿವೆ. ಒಂದೇ ರೀತಿಯ ಅಕ್ಕಿ ಖರೀದಿಸಿ ರೂಢಿಯಿದ್ದ ನಾವು ಅಕ್ಕಿ ನೋಡಿ ಕೊಡ ಹೇಳಿದರೆ ವ್ಯಾಪಾರಿ, ಕಚ್ಚಾ - ಪಕ್ಕಾ ಯಾವುದು ಬೇಕು? ಎಂದು ಕೇಳುತ್ತಾನೆ. ಮೊದಲಿಗೆ ಗೊಂದಲಕ್ಕಿಟ್ಟುಕೊಂಡಾಗ, ಅದನ್ನರಿತು ಅಂಗಡಿಯವ ಖಿಚಡಿಗಾಗಿ ಬೇಕಾದರೆ ಕಚ್ಚಾ, ಅನ್ನಕ್ಕಾದರೆ ಪಕ್ಕಾ ಅಕ್ಕಿ ಕೊಳ್ಳಿ, ಎನ್ನುವ. ಅನ್ನ ಊಟ ಮಾಡುವವರಿಗೆ ಖಿಚಡಿ ಹೊಸದು. ಸದಾಕಾಲವೂ 'ರೋಟಿ' ತಿನ್ನುವ ರಾಜಸ್ಥಾನಿಗಳು ಹೊಟ್ಟೆ ಝಾಡಿಸಿದಾಗ ಇಲ್ಲವೇ ಜಡ್ಡಾದಾಗ ಅಕ್ಕಿ - ಹೆಸರುಬೇಳೆ ಸೇರಿಸಿದ ಖಿಚಡಿ ಊಟ ಮಾಡುತ್ತಾರೆ. ಬಡವರು ಬಾಜಿರಾದ ರವೆ ತೆಗೆದು ಗಡಿಗೆಯಲ್ಲಿ ಸಣ್ಣ ಬೆಂಕಿಯ ಮೇಲೆ 'ಖೀಚಾ' ಬೇಯಿಸಿ ಮಜ್ಜಿಗೆಯೊಂದಿಗೆ

ತಿನ್ನುತ್ತಾರೆ. ನಾವು ಡೆಹರಾಡೂನಿನ ಬಾಸಮತಿ ಅಕ್ಕಿಯನ್ನು ಕೊಂಡೆವು. ಉದ್ದು, ಹೆಸರು ಎಳ್ಳುಗಳಂತಹವನ್ನೂ ಮಾರಾಟಕ್ಕೆ ಇಟ್ಟಿದ್ದರೂ, ಉದ್ದು - ಹೆಸರುಗಳನ್ನು ಸಿಪ್ಪೆಸಹಿತ ಒಡೆದು ಬೇಯಿಸಿ ಪಲ್ಯಗಳಂತೆ ಉಪಯೋಗಿಸುವರು. ಜಯಪುರದಲ್ಲಿ ಕೈಚೀಲಗಳನ್ನು ಒಯ್ಯಲೇಬೇಕೆಂಬ ಕಡ್ಡಾಯವಿಲ್ಲ. ಲಕೋಟೆಗಳಲ್ಲಿ ಹಾಕಿ ಚೆನ್ನಾಗಿ ಕಟ್ಟಿಕೊಡುತ್ತಾರೆ. ಮುಂಜಾನೆಯಿಂದ ಸುತ್ತುತ್ತಿದ್ದವರ ನೀರಡಿಕೆ ತಣಿಸಲು 'ಗನ್ನೆಕಾ ರಸ' (ಕಬ್ಬಿನಹಾಲು) ಹನ್ನೆರಡೂ ತಿಂಗಳು ದೊರೆಯುತ್ತದೆ. ಬಾಪೂ ಬಝಾರದ ಅಂಗಡಿಯೊಂದರಲ್ಲಿ ಗಾಜಿನ ಭರಣಿಗಳಲ್ಲಿ ಬಗೆ ಬಗೆಯ ಉಪ್ಪಿನಕಾಯಿಗಳನ್ನು ಮಾರಾಟಕ್ಕೆ ಇಟ್ಟ ಬಗೆಯೇ ಬಾಯಲ್ಲಿ ನೀರೂರಿಸುತ್ತದೆ.

ಎದುರಿನ ರಸ್ತೆಯಲ್ಲಿ ಮಾಂಸಾಹಾರವನ್ನು ಮಾರುವ ಅಂಗಡಿಗಳು ಸಾಲಾಗಿ ನಿಂತಿದ್ದವು. ತತ್ತಿ ಮಾರುವವನು ನಾವು ಮೊಟ್ಟೆಗಳನ್ನು ತಿನ್ನುವ ಶಾಕಾಹಾರಿಗಳೇ? ಎಂದು ಪರೀಕ್ಷಿಸಿ ನೋಡಿದ. ಕುಕ್ಕುಟ ವ್ಯಾಪಾರಿ 'ತಂದೂರಿ ಚಿಕನ್'ಗೆ ಒಳ್ಳೆ ಮರಿ ಕೋಳಿಯಿದೆಯೆಂದ. ಕಟುಕರವನು ನಾವು ತೋರಿಸಿದ ಮಾಂಸದ ಭಾಗ, ಖೀಮಾವನ್ನು ಮೂರು ರೂಪಾಯಿಗೆ ಕಿಲೋದಂತೆ ಕೊಡುತ್ತೇನೆಂದ. ಮತ್ಸ್ಯದ ಮಾರುಕಟ್ಟೆಯಲ್ಲಿ ಸಿಂಧಿಗಳು ಮುಕುರಿದ್ದರು. ಕಡಲಿನ ಪಾಂಪಲೇಟ, ಶೂರ್ಮೆ (ಇಸವಣ) ನಾಲ್ಕು ರೂಪಾಯಿಗೆ ಕಿಲೋ ಮಾರಿದರೆ ರುಚಿಯಿಲ್ಲದ ಸಿಹಿ ನೀರಿನ ಮೀನನ್ನು ಆರು ರೂಪಾಯಿಗೆ ಕಿಲೋದಂತೆ ಮಾರುತ್ತಿದ್ದರು. ಸಿಂಧಿಗಳಿಂದ ಇವಕ್ಕೆ ಬೇಡಿಕೆ ಹೆಚ್ಚು ಇದ್ದುದರಿಂದ ಹೀಗಿರಬಹುದೇ? ಎಂದು ಮೊದಲಿಗೆ ಅನಿಸಿದರೂ ಮರುಭೂಮಿಯ ರಾಜಸ್ಥಾನದಿಂದ, ಕಡಲು, ಗಂಗಾಮಾತೆ ಹರಿಯುವ, ಫಲವತ್ತಾದ ಭೂಮಿಯ ಬಂಗಾಲಿಗಳು ಸರೋವರದ ಮೀನನ್ನೇ ಆಮದು ಮಾಡಿಕೊಳ್ಳುವರು, ಎಂದು ನೆನಪಿಸಿಕೊಂಡೆ. ಮೀನು ಮಾರುವವ ಅರೆನಿಮಿಷದಲ್ಲಿ ಸಿಪ್ಪುಗಳನ್ನು ಸವರಿ ಯಂತ್ರದ ನಿಪುಣತೆಯಿಂದ ಹೋಳುಗಳನ್ನು ಮಾಡಿ ಕಾಗದದಲ್ಲಿ ಸುತ್ತಿಕೊಡುತ್ತಿದ್ದ. ಕೈಗಳು ಕೊಳ್ಳಲು, ನಾಲಿಗೆ ತಿನ್ನಲು ಚಪಲ ಪಟ್ಟರೂ ಬ್ರಾಹ್ಮಣರಾಗಿ, ಶರ್ಮಾಜಿಯವರ ಮನೆ ಬಾಡಿಗೆ ಹಿಡಿದಂದಿನಿಂದ ಶಾಕಾ ಹಾರಿಗಳಾದ ನಾವು ನಿರಾಶರಾಗಿ ಅಂಗಡಿಕಾರರಿಗೂ ನಿರಾಶೆಯನ್ನುಂಟು ಮಾಡಿ ಬೇರೆಡೆಗೆ ಹೋಗಬೇಕಾಯಿತು!

ಗೋಪಾಲಜಿಕಾ ರಾಸ್ತಾ, ಸಿಹಿ ತಿಂಡಿಗಳಿಗಾಗಿ ಹೆಸರಾಂತ ರಸ್ತೆ. ಇಕ್ಕಟ್ಟಾದ ರಸ್ತೆಯಲ್ಲಿ ಮಿಠಾಯಿ ಕೊಳ್ಳುವವರಿಗೇ ಓಡಾಡಲು ಸ್ಥಳವಿಲ್ಲದಿದ್ದಾಗ ವಾಹನಗಳು ಓಡಾಡುವ ಮಾತಂತೂ ದೂರವೇ ಉಳಿಯಿತು. ಕಬ್ಬಿನಹಾಲನ್ನು ಕುದಿಸುವಂತಹ ದೊಡ್ಡ ಕೊಪ್ಪರಿಗೆಗಳಲ್ಲಿ ಕೇಸರಿ ವರ್ಣದ ಮಿದು ಬೂಂದಿಗಳನ್ನು ತುಂಬಿಸಿ ಇಟ್ಟಿದ್ದಾರೆ.

ಇನ್ನೊಂದರಲ್ಲಿ ರಬಡಿ, ರಸಮಲಾಯಿಗಳು, ಬಿಸಿ ಬಿಸಿ ಜಿಲೇಬಿ, ಗುಲಾಬ ಜಾಮುನುಗಳೂ ತಯಾರಾಗುತ್ತವೆ. ಅಲ್ಲಿಯೇ ತಿಂದು ತೇಗುವವರಿಗೆ ಪೂಡಿ- ಸಾಗ, ಕಚೋರಿಗಳು ತಯಾರಾಗುತ್ತಿವೆ. ಬಿಕಾನೇರದ ಭುಜಿಯಾ (ತೀರ ಸಪುರವಾದ ಸೇವು) ಪೇಟಾ ಮಿಠಾಯಿ (ಬೂದು ಕುಂಬಳಕಾಯಿಯ ಮಿಠಾಯಿ) ಗಳ ರಾಶಿಯನ್ನೂ ಇಲ್ಲಿ ಕಾಣಬಹುದು. ಹೊಟ್ಟೆ ತುಂಬ ತಿಂದವರಿಗೆ ಅಡಿಕೆ, ಜೀರ್ಣಕ್ಕೆ ಸಹಾಯ ಮಾಡುವದೆಂದೋ ಏನೋ ಅವುಗಳ ಅಂಗಡಿಗಳೂ ತುಂಬ ಇವೆ. ಅಡಿಕೆ ಬೆಳೆಯುವ ಪ್ರದೇಶದಲ್ಲೇ ಹುಟ್ಟಿದವನಾದರೂ ನನ್ನ ಜೀವಮಾನದಲ್ಲಿ ಅಡಿಕೆಗಳ ಅಷ್ಟೊಂದು ಪ್ರಕಾರಗಳನ್ನು ಕಂಡಿರಲಿಲ್ಲ! ಕೆಂಪು, ಬೂದು ಬಣ್ಣದ, ಅಡಿಕೆ, ಸಿಹಿಯಾದ, ಚೊಗರಾದ ಅಡಿಕೆ, ಮಸಾಲೆ ಅಡಿಕೆಯ ಹಲವಾರು ವೈವಿಧ್ಯಗಳು. ಬೆಳ್ಳಿಯ ಅರ್ಕ ಹಾಕಿದ ಅಡಿಕೆ, ಪುಡಿ ಅಡಿಕೆ, ಹೋಳಡಿಕೆಗಳನ್ನೆಲ್ಲ ಇಟ್ಟಿದ್ದರು. ಇವರು ಇಷ್ಟೊಂದು ಅಡಿಕೆ ತಿಂದಾಗಲೇ ನಮ್ಮ ತೋಟಗಾರರ ಕಿಸೆ ತುಂಬುತ್ತದೆ! ಎಂದು ಅರಿತುಕೊಳ್ಳುವಂತಾಯಿತು ರಾಜಸ್ಥಾನಿ ವೀಳ್ಯಗಳಲ್ಲೂ ಅನೇಕ ವಿಧಗಳಿವೆ. ಗುಲಕಂದ ಇತ್ಯಾದಿ ಹಾಕಿದ 'ಮೀಠಾಪಾನ' (ಸಿಹಿ ವೀಳ್ಯ) ಸಿಹಿಯ ಭಕ್ತರು ಸೇವಿಸಿದರೆ, ರಸಿಕ, 'ಮಸಾಲದಾರಪಾನ' ತಿನ್ನುತ್ತಾನೆ. ತಂಬಾಕು ಹಾಕುವವರು 'ಜರ್ದಾಪಾನ' ಜಗಿಯುತ್ತಾರೆ. ಸಾದಾ ವೀಳ್ಯ, ಹದಿನೈದು ಪೈಸೆಗೆ ಮಾರಿದರೆ ಬಂಗಾರದ ಅರ್ಕ ಹಾಕಿದ್ದನ್ನು ಹತ್ತು ರೂಪಾಯಿಗೆ ಒಂದರಂತೆ ಮಾರುತ್ತಾರೆ. ಕಾಮೋದ್ದೀಪಕ 'ಪಲಂಗ ತೋಡ್' ವಿಶೇಷ ಪ್ರಕಾರದ ವೀಳ್ಯವೂ ದೊರೆಯುತ್ತದಂತೆ!

ಸಿದ್ಧವಾದ ಸೀರೆಗಳನ್ನು ಕೊಳ್ಳುವುದಕ್ಕಿಂತ ಬಟ್ಟೆಯನ್ನು ಕೊಂಡು ನಮ್ಮ ಅಭಿರುಚಿಯಂತೆ ಬಣ್ಣ ನಕ್ಷೆ ಹಾಕಿಸುವುದು ಹೆಚ್ಚು ಚೆನ್ನಾಗಿರುತ್ತದೆಂದು ಯಾರೋ ಸೂಚಿಸಿದ್ದರಿಂದ ಬಟ್ಟೆ ಕೊಳ್ಳಲು ಹೋದೆವು. ತೀರ ಜಾಳಾದ ಮಾಂಜರ ಪಾಟ ಆಗಲಿ, ಮಲಮಲ್ ಆಗಲಿ ಮನಸ್ಸಿಗೆ ಬಾರದೇ ವಾಯಲ್ ಬಟ್ಟೆ ಕೊಂಡು ಬಣ್ಣ ಹಾಕಲು ಕೊಟ್ಟೆವು. ಮುಸಲ್ಮಾನ ಅಂಗಡಿಕಾರನ ಹೆಂಡತಿ ನೂಲಿನಿಂದ ಬಟ್ಟೆಗಳಿಗೆ ಗಂಟುಗಳನ್ನು ಹಾಕುತ್ತ ಪತಿಗೆ ಕೊಡುತ್ತಿದ್ದಳು. ಅವನು ಅವುಗಳನ್ನು ವಿವಿಧ ಬಣ್ಣಗಳಲ್ಲಿ ಅದ್ದಿ ತೆಗೆದಾಗ ನೂಲು ಬಿಗಿದ ಕಡೆಗೆ ಬಣ್ಣ ತಾಗದೇ ಬಟ್ಟೆಯ ಮೇಲೆ ವಿವಿಧ ನಕ್ಷೆಗಳು ಮೂಡಿಬರುತ್ತವೆ. ಇಂತಹ ಬಾಂಧಣಿ (Tie and dye) ಸೀರೆಗಳಿಗೆ ಜಯಪುರ ಖ್ಯಾತಿಯನ್ನು ಪಡೆದಿದೆ. ಈ ಸೀರೆಗಳೊಡನೆ ಸ್ಪರ್ಧಿಸಲು ಮುಂಬಯಿ, ಅಲಹಾಬಾದಿನ ಬಟ್ಟೆ ಗಿರಣಿಗಳ ಮಾಲಿಕರು ಅವುಗಳನ್ನು ಮುದ್ರಿಸಿ ತಯಾರಿಸಿದರೂ ಬಾಂದಣಿ ಸೀರೆಗಳ ಅಂದ ಚೆಂದ ಅನುಕರಿಸಲು ಸಾಧ್ಯವಾಗಲಿಲ್ಲ. ಬೆಳ್ಳಿ ಬಂಗಾರದ ಬಣ್ಣಗಳಲ್ಲಿ ವಿವಿಧ ನಕ್ಷೆಗಳನ್ನು ಮುದ್ರಿಸಿದ 'ಖಡಿ' ಸೀರೆಗಳು ಇಲ್ಲಿಯ ಇನ್ನೊಂದು

ವೈಶಿಷ್ಟ್ಯ. ಬಾಡಮೇರ, ಸಾಂಗಾನೇರ ಮುದ್ರೆಗಳ ಸೀರೆಗಳು, ಅನಾಕರ್ಷಕವಾದರೂ ತೀರ ಮೃದುವಾದ, ಹೆಚ್ಚಿಗೆ ಬಾಳುವ ಕೋಟಾ ಕೈಮಗ್ಗದ ಚಂದದ ಸೀರೆಗಳೂ ಧಾರಾಳವಾಗಿ ಸಿಗುತ್ತವೆ.

ಇಷ್ಟೆಲ್ಲ ಭಾರವಾದ ಸಾಮಾನುಗಳನ್ನು ಹೊತ್ತು ಮನೆಗೆ ಹೇಗೆ ಹೋಗುವುದು? ಎಂದು ಚಿಂತಿಸಬೇಕಿಲ್ಲ. ಟಾಂಗಾದವ, ನಾಲ್ಕು 'ಸವಾರಿಗಳು' ಸಿಕ್ಕರೆ ಸಾಮಾನಿನೊಂದಿಗೆ ತಲಾ ನಾಲ್ಕಾಣೆಯಂತೆ ಮನೆಯ ಸಮೀಪದ ರಾಜಮಾರ್ಗಕ್ಕೆ ತಲುಪಿಸುತ್ತಾನೆ. ವೇಗವಾಗಿ ತಲುಪಬೇಕಾದರೆ ಕಮಲ ಕಂಪನಿಯವರ 'ಮಿನಿ ಬಸ್' ಗಳಲ್ಲಿ ನಾಲ್ಕಾಣೆ ಕೊಟ್ಟು ಹೋಗಬಹುದು. ಅವರವೇ ನಗರ ಸಂಚಾರಿ ಬಸ್ಸುಗಳಲ್ಲಿ ಹದಿನೈದು ಪೈಸಾ ಕೊಟ್ಟರೆ ನಿಧಾನವಾಗಿಯಾದರೂ ತಪ್ಪದೇ ಮನೆಯ ಸಮೀಪದ ಹತ್ತಿರ ತಲುಪಿಸಬಹುದು. ಇನ್ನೂ ಹಣದ ಉಳಿತಾಯ ಆಗಬೇಕೆಂದಿದ್ದರೆ ಮತ್ತು ರಜಪೂತರ ಕೆಚ್ಚು ಇದ್ದರೆ. ಹದಿನೈದು ಪೈಸಾ ಕೊಟ್ಟು 'ಟೆಂಪೊ' ಹತ್ತಬಹುದು. ಅದರ ಸರದಾರಜಿ ಡ್ರಾಯವರನು ತಗ್ಗು, ಏರು ಒಂದನ್ನೂ ಲಕ್ಷಕ್ಕೆ ತಾರದೇ ವೇಗವಾದ ವಾಹನ ಚಾಲನವನ್ನೇ ತನ್ನ ಜೀವನದ ಗುರಿಯನ್ನಾಗಿ ಇಟ್ಟುಕೊಂಡಿರುವ. ರಾಜರಾಣಿಯರಂತೆ ಮೈಗಂಟಿ ಕುಳಿತು ನಗರ ದರ್ಶನ ಪಡೆಯಬೇಕೆಂದಿದ್ದರೆ ಸಾಯಕಲ್ ರಿಕ್ಷಾ, ವೇಗವಾಗಿ ಹೋಗಬೇಕೆಂದರೆ ಆಟೋ-ರಿಕ್ಷಾಗಳೂ ಸಿಗುತ್ತವೆ. ರಾಜಸ್ಥಾನದ ಶ್ರಮಜೀವಿಗಳು ಕಾಣಲು ಹಿಂದುಳಿದವರಂತೆ ಕಂಡರೂ ಪ್ರವಾಸಕ್ಕಾಗಿ ದುಂದು ಮಾಡದೇ ಸಾಯಕಲ್ ಹತ್ತಿ, ಪತ್ನಿಯನ್ನು ಹಿಂದಕ್ಕೆ ಕೂಡ್ರಿಸಿ ಗಾಳಿಯಲ್ಲಿ ರುಮಾಲು ಮತ್ತು ಓಢಣಿಗಳನ್ನು ಹಾರಿಸುತ್ತ ಸವಾರಿ ಹೊರಡುವರು. ಸರದಾರಜಿಯು ಇದ್ಕಕೂ ಮುಂದೆ ಹೋಗಿ ಒಂದು ಸಾಯಕಲ್ ಮೇಲೆ ತಾನು, ಪುತ್ರ (ಮುಂದುಗಡೆಯ ಬಾಸ್ಕೆಟ್ಟಿನಲ್ಲಿ), ಪುತ್ರಿಯನ್ನು ಎತ್ತಿಕೊಂಡು, ಗರ್ಭದಲ್ಲಿ ಇನ್ನೊಂದನ್ನು ಹೊತ್ತು, ಹಿಂದುಗಡೆ ಕುಳಿತ ಪತ್ನಿಯೊಂದಿಗೆ ಸಾಯಕಲ್ ಮೇಲೆ ಹೊರಡುತ್ತಾನೆ!

ಉರಿಬಿಸಿಲಲ್ಲಿ ಮನೆಗೆ ಹೊತ್ತು ತಂದ ಸಾಮಾನುಗಳನ್ನು ತೆಗೆದಿಟ್ಟು ಲಗುಬಗೆಯಿಂದ ಅಡಿಗೆ ಮಾಡಿ ಊಟ ಮಾಡಿ ವಿಶ್ರಾಂತಿಸುವುದರಲ್ಲಿ ಚಹಕ್ಕಾಗಿ ಏಳಬೇಕಾಗುತ್ತದೆ. ಮತ್ತೆ ಲೋಕಾಭಿರಾಮವಾಗಿ ಜಗ್ಗುವಿನೊಡನೆ ಮಾತನಾಡುವಷ್ಟರಲ್ಲಿ ಹೊರಡುವ ವೇಳೆಯಾಗುತ್ತದೆ. ಪತ್ನಿ ಕಟ್ಟಿಕೊಟ್ಟ ಬುತ್ತಿಯೊಂದಿಗೆ ರೇಲ್ವೆಸ್ಟೇಶನ್ನಿಗೆ ಧಾವಿಸಿ, ಜೋಧಪುರ ಪ್ಯಾಸೆಂಜರ್ ಗಾಡಿಯಲ್ಲಿಯ ಫುಲೇರಾ ಡಬ್ಬಿಯಲ್ಲಿ ಹೆಚ್ಚು ಪ್ರವಾಸಿಕರು ಇರುತ್ತಿರಲಿಲ್ಲವಾದ್ದರಿಂದ ಅದನ್ನು ಹತ್ತುವುದು ರೂಢಿಯಾಗಿತ್ತು. ಅಲ್ಲಿಯೂ ಗದ್ದಲವಿದ್ದರೆ ಕೆಲ ಪ್ರವಾಸಿಕರನ್ನು ವಿಚಾರಿಸಿದರೆ ಅವರಲ್ಲಿ

ಒಬ್ಬಿಬ್ಬರಾದರೂ ಅಜಮೇರಿಗೆ ಹೋಗುವವರಿರುತ್ತಾರೆ. ಅವರಿಗೆ ಈ ಡಬ್ಬಿ ಫುಲೇರಾ ತನಕ ಅಷ್ಟೇ ಎಂದು ಹೇಳಿದಾಗ ಅವರು ಇಳಿದಾಗ ಕೂಡ್ರಲು ಸ್ಥಳ ಸಿಗುತ್ತದೆ. ಎಷ್ಟೋ ಸಲ ಸ್ಥಳದ ಅಭಾವದಿಂದ ನಿಲ್ಲಬೇಕಾದಾಗ ಹಳ್ಳಿಗರು ತಾವು ನಿಂತು ನನಗೆ ಸ್ಥಳ ಕೊಟ್ಟದ್ದುಂಟು! ಅಸಲಪೂರದಲ್ಲಿ ವಿವಿಧ ಡಬ್ಬಿಗಳಲ್ಲಿ ಬಂದ ಜೋಬನೇರಿಯನ್ನರು ಕಲೆತು ನೋಡಿದ ಸಿನೇಮ, ತಂದ ಸಾಮಾನುಗಳ ಬಗ್ಗೆ ಚರ್ಚಿಸುತ್ತಾರೆ. ಬಸ್ಸಿನ ಹೊರಗೆ, ಟಾಪ್ ಮೇಲೆಲ್ಲ ಪ್ರವಾಸಿಕರು ಏರಿ ಕುಳಿತ ಮೇಲೆ ವಾಹನ ಚಲಿಸುತ್ತದೆ. ಮನೆಗೆ ಬಂದು ಪತ್ನಿ ಕಟ್ಟಿ ಕೊಟ್ಟ ಊಟ ಮುಗಿಸಿ, ಏನನ್ನಾದರೂ ಓದಿ ವಿಶ್ರಾಂತಿಗೆ ತೆರಳಿದೆನೆಂದರೆ ವಾರಾಂತ್ಯ ಮುಗಿಯುತ್ತಿತ್ತು.

೨೭. ಡಾಕ್ಟರರ ಆಗಮನ

ರಾಜಸ್ಥಾನ ನೋಡಲು ತಾವು ಬರುವುದಾಗಿಯೂ, ಹೊರಡುವ ನಿಶ್ಚಿತ ದಿನಾಂಕವನ್ನು ಆ ನಂತರ ತಿಳಿಸುವುದಾಗಿಯೂ ಆಪ್ತ ಡಾಕ್ಟರರು ಬರೆದಿದ್ದರು. 'ಇಂದು ತಾವು ಉತ್ತರ ಭಾರತದ ಪ್ರವಾಸಕ್ಕೆ ಹೊರಡುತ್ತೇವೆ' ಎಂದು ಕಾರ್ಡು ಬರೆದು ಹೊರಟೇಬಿಟ್ಟದ್ದರಿಂದ ಅವರಿಗೆ ಯಾವ ಮುನ್ಸೂಚನೆ ಕೊಡಲೂ ಸಾಧ್ಯವಾಗಲಿಲ್ಲ. ನಾಗಪುರದಿಂದ ಇನ್ನೊಂದು ಕಾರ್ಡು ಬರೆದು ತಾವು ದಿಲ್ಲಿ-ಅಗ್ರಾಗಳಿಗೆ ಹೊರಟಿರುವುದಾಗಿಯೂ ಜಯಪುರಕ್ಕೆ ಬರುವ ದಿನಾಂಕ ಮತ್ತು ಟ್ರೇನಿನ ವಿವರಗಳನ್ನು ದಿಲ್ಲಿಯಿಂದ ಬರೆಯುವದಾಗಿಯೂ ತಿಳಿಸಿದರು. ಆದರೆ ದಿಲ್ಲಿಯಿಂದ ಯಾವ ಪತ್ರವೂ ಬಾರದ್ದರಿಂದ, ಅವರು ಬರಬಹುದಾಗಿದ್ದ ಅಜಮಾಸ ಎರಡು ದಿನ ಜಯಪುರದಲ್ಲಿಯೇ ಇದ್ದು ರೇಲ್ವೆ ಸ್ಟೇಶನ್ನಿಗೆ ಹೋಗಿ ಬಂದರೂ ಅವರೇನೂ ಬರಲಿಲ್ಲ. 'ಬೇಕಾದಾಗ ಬರಲಿ ವಿಳಾಸವಿದೆ, ಹುಡುಕಿಕೊಂಡು ಬರುವರೆ'ಂದು ಜೋಬನೇರಿಗೆ ಮರಳಿದೆ.

ಅಂದು ಮುಂಜಾನೆ ಎಂದಿನಂತೆ ಏಳು ಗಂಟೆಗೆ ಕಾಲೇಜಿಗೆ ಬಂದು ಸೂಕ್ಷ್ಮದರ್ಶಕದಲ್ಲಿ ಸ್ಲಾಯಿಡುಗಳನ್ನು ನೋಡುತ್ತ ಕುಳಿತಿದ್ದೆ. ಗಂಡು ಧ್ವನಿಯೊಂದು, "ಕಾಮತರು ಬಂದಿದ್ದಾರೆಯೇ?" ಎಂದು ಹರಬಕ್ಷನನ್ನು ವಿಚಾರಿಸಿದಾಗ ಹಿಂತಿರುಗಿ ನೋಡಿದರೆ ಶ್ರೀಖಂಡೆ ಅವರು ನಿಂತಿದ್ದರು. ಇಷ್ಟು ಬೆಳಿಗ್ಗೆ ಇವರಿಗೆ ನನ್ನೊಡನೆ ಏನು ಕೆಲಸ? ಎಂದು ಯೋಚಿಸುತ್ತಿರುವಾಗ, ಒಂದು ತಿಂಗಳ ಹಿಂದೆ ಅವರೊಡನೆ ನಡೆದ ಚರ್ಚೆ ನೆನಪಿಗೆ ಬಂದಿತು. ಕೃಷಿ ಕಾಲೇಜಿನವರು ಚಿಕ್ಕ ಮಕ್ಕಳಿಗಾಗಿ ಬಾಲಮಂದಿರವೊಂದನ್ನು ನಡೆಸುತ್ತಿದ್ದಾರೆ. ಸರಕಾರ ಮತ್ತು ವಿಶ್ವವಿದ್ಯಾಲಯದಿಂದ ಅದಕ್ಕೆ ಧನಸಹಾಯ ಸಿಗುತ್ತಿದ್ದರೂ ಶಿಕ್ಷಕರ ಸಂಬಳದೊಳಗಿಂದ ಪ್ರತಿ ತಿಂಗಳೂ ಕಡ್ಡಾಯವಾಗಿ ವಂತಿಗೆಯನ್ನು ವಸೂಲ ಮಾಡಿಯೇ ಅವರಿಗೆ ಸಂಬಳವನ್ನು ಕೊಡುವುದು ಪರಿಪಾಠವಾಗಿದೆ. ಆದರೆ ನನ್ನ ವೇತನ ನೇರ ಸರಕಾರದಿಂದಲೇ ಬರುತ್ತಿದ್ದುದರಿಂದ ಅದರ ಮೇಲೆ ವಿಶ್ವವಿದ್ಯಾಲಯದವರಿಗೆ ಯಾವ ಹಿಡಿತವಿಡಲು ಬರುವಂತಿರಲಿಲ್ಲ. ನನ್ನಿಂದಲೂ ವಂತಿಗೆ ಪಡೆಯುವುದರ ಸಲುವಾಗಿ ಶ್ರೀಖಂಡೆ, ದೂತರಾಗಿ ಬಂದಿದ್ದರು.

ನಾನು ಕೃಷಿ ಕಾಲೇಜಿನಲ್ಲಿ ದುಡಿಯುತ್ತಿದ್ದುದರಿಂದ, ನನ್ನಿಂದಲೂ ಬಾಲಮಂದಿರದ, ಕೊಡುಗೆಯನ್ನು ಸಂಚಾಲಕ ವರ್ಗ ನಿರೀಕ್ಷಿಸುತ್ತದೆ, ಎಂದಾಗ, "ನನಗೆ ವಿಶ್ವವಿದ್ಯಾಲಯದಿಂದ ವೇತನವೂ ಸಿಗುತ್ತಿಲ್ಲ. ಬಾಲಮಂದಿರಕ್ಕೆ ಕಳಿಸುವ ಮಕ್ಕಳೂ ನನಗಿಲ್ಲ. ಆದ್ದರಿಂದ ನಾನು ವಂತಿಗೆ ಕೊಡುವುದು ಅಸಮಂಜಸ"ವೆಂದು ಉತ್ತರಿಸಿದೆ. ಬಾಲಮಂದಿರಕ್ಕೆ ಧನಸಹಾಯ ಅತ್ಯವಶ್ಯವಿದೆ ಆದ್ದರಿಂದ ಕೊಡಲೇಬೇಕೆಂದು ಒತ್ತಾಯಿಸಿದರು. ವಿಶ್ವವಿದ್ಯಾಲಯದಲ್ಲಿಯೇ ನೌಕರಿ ದೊರೆತು, ಜೋಬನೇರದಲ್ಲಿಯೇ ಇರುವಂತಾದರೆ ಕೊಡಬಹುದಾಗಿತ್ತು ಎಂದಾಗ, ಇಂದಲ್ಲ ನಾಳೆ ನಿಮಗೆ ಸ್ಥಿರ ನೌಕರಿ ಸಿಗುತ್ತದೆ. ಮಕ್ಕಳೂ ಆಗುತ್ತವೆ. ಆದ್ದರಿಂದ ಇಂದಿನಿಂದಲೇ ಧನಸಹಾಯ ಕೊಡಿರಿ! ಎಂದರು. ನಿರೀಕ್ಷೆಯಿಂದ ವಂತಿಗೆ ಪ್ರಾರಂಭಿಸಲು ನಾನು ನಿರಾಕರಿಸಿದೆ. "ಮಾತಾಜಿಯವರು ನಿಮ್ಮ ಕಡೆಗೆ ಕಳಿಸಿದ್ದಾರೆ. ನಿಮ್ಮ ಉತ್ತರದಿಂದ ಅವರಿಗೆ ನಿರಾಶೆಯಾದೀತು" ಎಂದು ಹೇಳಿದಾಗ, "ನೀವೆಲ್ಲ ಅಧಿಕಾರದಿಂದ ಒತ್ತಾಯಿಸಿದರೆ ನಾನು ಕೊಡಬಹುದು. ಆದರೆ ಹಾಗೆ ಮಾಡುವುದು ನನ್ನ ಮನಸ್ಸಿನ ವಿರುದ್ಧ ನಡೆದಂತಾಗುವುದು" ಎಂದಾಗ "ನಿಮ್ಮ ಇಷ್ಟ" ಎಂದು ಅವರು ಬೀಳ್ಕೊಂಡಿದ್ದರು. ನಂತರ ಈ ಘಟನೆ ತಮಗೆ ಪರಾಜಯ ಎಂಬಂತೆ ಅವರು ನಡೆದುಕೊಂಡಿದ್ದರು. ಆದ್ದರಿಂದ ಅವರಾಗಿ ನನ್ನನ್ನು ಹುಡುಕಿಕೊಂಡು ಬಂದಾಗ ಆಶ್ಚರ್ಯವಾಯಿತು.

ಒಳಗೆ ಬರುತ್ತಿದ್ದಂತೆ "ನಿಮಗಾಗಿ ಅತಿಥಿಗಳನ್ನು ತಂದಿದ್ದೇನೆ" ಎಂದರು. ಅವರ ಹಿಂದೆ ಬರುತ್ತಿದ್ದ ನಗುಮುಖದ ಡಾಕ್ಟರರು ಅವರ ಡಾಕ್ಟರ ಪತ್ನಿ ಮತ್ತು ಇನ್ನೊಬ್ಬ ಮರಿ ಡಾಕ್ಟರ (ವೈದ್ಯಕೀಯ ಅಭ್ಯಾಸ ನಡೆಸಿದ್ದರಿಂದ ಈ ಹೆಸರು)ರನ್ನು ನೋಡಿ ಶ್ರೀಖಂಡೆಯವರು ಹೇಳಿದ್ದು ತಿಳಿಯಿತು. ಅವರು ತಂದ ಹೊರೆ ಸಾಮಾನುಗಳನ್ನು ಮನೆಗೆ ಸಾಗಿಸಲು ಹರಬಕ್ಷನಿಗೆ ತಿಳಿಸಿ ಅತಿಥಿಗಳನ್ನು ಮನೆಗೆ ಕರೆತಂದೆ. ಬಿಸಿ ಬಿಸಿ ಆಮ್ಲೇಟ, ಟೋಸ್ಟ, ಕಾಫಿಗಳು ಹೊಟ್ಟೆಗೆ ಬಿದ್ದಾಗ ಹೋದ ಜೀವ ಬಂದಂತೆ ಆಯಿತೆಂದರು. ಅವರು ಸಕಾಲದಲ್ಲಿ ನನಗೊಂದು ಪತ್ರ ಬರೆಯದೇ ಎಲ್ಲ ಬಗೆಯ ತಪ್ಪುಗಳನ್ನು ಮಾಡಿದ್ದರು. ಅವರಿಗೆ ಮುಂಬೈ ಮತ್ತು ನಾಗಪುರಗಳಲ್ಲಿದ್ದ ಆಪ್ತರನ್ನು ಭೆಟ್ಟಿಯಾಗುವದಿತ್ತು. ಆದರೆ ಮದ್ರಾಸದಿಂದ ದಿಲ್ಲಿಗೆ ಓಡುವ ಟ್ರೇನು ನಾಗಪುರ ಮೇಲಿಂದಲೇ ಹೋಗುತ್ತದೆ! ಎಂದು ಅರಿಯದ್ದರಿಂದ, ಬೆಂಗಳೂರಿನಿಂದ ಮುಂಬೈ, ಅಲ್ಲಿಂದ ನಾಗಪುರಕ್ಕೆ ಹೋಗಿ ಬಂದು, ಸವಾಯಿ ಮಾಧವಪುರದಿಂದ ಜಯಪುರ ಹತ್ತಿರವಿದೆ ಎಂದು ಅರಿಯದೇ, ನೇರವಾಗಿ ದಿಲ್ಲಿಗೆ ಹೋದರಂತೆ. ನಕಾಶೆಯಲ್ಲಿ ದಿಲ್ಲಿ, ಆಗ್ರಾ, ಜಯಪುರಗಳು ತೀರ ಹತ್ತಿರ ಕಂಡದ್ದರಿಂದ ಬೇಕಾದಂತೆ ಓಡಾಡಿಕೊಂಡು ಇರಬಹುದು ಎಂದುಕೊಂಡರಂತೆ! ಆಗ್ರಾ ನೋಡಿ ತಿರುಗಿ ದಿಲ್ಲಿಗೆ ಹೋಗಿ ಜಯಪುರಕ್ಕೆ ಬರುವುವರಿದ್ದರಂತೆ. ಆದರೆ ಯಾವನೋ ಪುಣ್ಯಾತ್ಮ ಆಗರಾದಿಂದ

ಜಯಪುರಕ್ಕೆ ನೇರವಾಗಿ ಟ್ರೇನು ಇದೆ ಎಂದಿದ್ದರಿಂದ ಹೊರಟುಬಿಟ್ಟರು. ಮುಂಜಾವಿನ ನಾಲ್ಕು ಗಂಟೆಗೆ ಜಯಪುರ ಮುಟ್ಟಿದಾಗ ಟಾಂಗಾದಲ್ಲಿ ಹತ್ತಿ ಕುಳಿತು ಜೋಬನೇರಕ್ಕೆ ಒಯ್ಯಲು ಹೇಳಿದರು! ಟಾಂಗಾವಾಲಾನು ಹಣ ಘಟ್ಟಿಸಿಕೊಂಡು, ಅದು ಇಲ್ಲಿಂದ ಮೂವತ್ತು ಮೈಲು ದೂರ ಇದೆ. ಬಂದ ಟ್ರೇನು ನಿಮ್ಮನ್ನು ಅಲ್ಲಿಗೆ ಒಯ್ಯುತ್ತದೆ ಎಂದಾಗ ತಿರುಗಿ ಟ್ರೇನನ್ನು ಹತ್ತಿದರು. ನನ್ನ ವಿಳಾಸ ಜೋಬನೇರ - ಜಯಪುರ ಎಂದು ಇದ್ದುದರಿಂದ ಅದು ಮಲ್ಲೇಶ್ವರಮ್ - ಬೆಂಗಳೂರು ಇದ್ದಂತೆ ಎಂದು ತಿಳಿದುಕೊಂಡಿದ್ದರಂತೆ! ಪುಣ್ಯಕ್ಕೆ ವಿಳಾಸದ ಮೇಲೆ ಸಾಗರ - ಶಿವಮೊಗ್ಗಾ ಎಂದು ನೋಡಿ ಶಿವಮೊಗ್ಗ ಎಂದು ನೋಡಿ ಶಿವಮೊಗ್ಗೆಯಲ್ಲಿ ಜಟಕಾಗಾಡಿ ಹತ್ತಿ ಸಾಗರಕ್ಕೆ ಹೊಡೆಯಲು ಹೇಳಲಿಲ್ಲ!

ಡಾಕ್ಟರ ಮತ್ತು ಮರಿಡಾಕ್ಟರರು ಬೋಗಿಯ ಎರಡೂ ಬಾಗಿಲಲ್ಲಿ ನಿಂತು, ಶ್ರೀಮತಿ ಡಾಕ್ಟರರು ಕಿಡಕಿಯಿಂದ ಜೋಬನೇರ ಸ್ಟೇಶನ್ನಿಗಾಗಿ ನೋಡುತ್ತಿದ್ದರೂ ಅವರಿಗೆ ಯಾವ ಸ್ಟೇಶನ್ನಿನಲ್ಲಿ ಇಳಿಯಬೇಕು, ಎಂದು ತಿಳಿಯದೇ ಮುಂದಿನ ಫುಲೇರಾ ಜಂಕ್ಷನ್ ತಲುಪಿದ್ದರು! ಜೋಬನೇರಕ್ಕೆ ಹೋಗಬೇಕಾದರೆ ಅಸಲಪೂರ - ಜೋಬನೇರ ಸ್ಟೇಶನ್ನಿನಲ್ಲಿ ಇಳಿಯಬೇಕೆಂಬ ಮಾಹಿತಿಯನ್ನು ಅವರು ಸಂಗ್ರಹಿಸದಿದ್ದುದರಿಂದ, ಈ ಗೊಂದಲ ಎದುರಿಸಬೇಕಾಯಿತು. ಫುಲೇರಾದಲ್ಲಿ ರೇಲ್ವೆ ಅಧಿಕಾರಿಗಳಿಗೆ ತಾವೆಲ್ಲಿ ಹೋಗಬೇಕೆಂದು ತಿಳಿಸಿದಾಗ ಈಗೊಂದು ಪ್ಯಾಸೆಂಜರ ಬರಲಿದೆ. ಅದರಲ್ಲಿ ಅಸಲಪೂರಕ್ಕೆ ತಿರುಗಿ ಹೋಗಿ ಎಂದು ಹೇಳಿದರಂತೆ. ಸ್ಟೇಶನ್ನಿನಲ್ಲಿ ಇಳಿದು ಕೃಷಿ ಕಾಲೇಜನ್ನು ಹುಡುಕಿದಾಗ ಅದು ಅಲ್ಲಿಂದ ಏಳು ಮೈಲು ದೂರವಿದೆಯೆಂದಾಗ ಕಂಗಾಲಾದರು. ಮರುಭೂಮಿಯ ಚಳಿ ತೀವ್ರವಾಗಿರುತ್ತದೆ! ಎಂದು ಶಾಲೆಯಲ್ಲಿ ಕಲಿತ ಭೂಗೋಲವನ್ನು ಮರೆತು ಬೆಚ್ಚಗಿನ ಬಟ್ಟೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಾರದೇ ನಡುಗುತ್ತ ಮೋಟಾರಿಗಾಗಿ ಕಾದರು. ಕಂಡಕ್ಟರನಿಗೆ ತಾವು ಹೋಗಬೇಕೆನ್ನುವವರು ಕೃಷಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದರಿಂದ ಅವರನ್ನು ಕಾಲೇಜಿನ ಆವಾರದಲ್ಲಿಯ ಶಿಕ್ಷಕರ ವಸತಿಗೃಹಗಳತ್ತ ಇಳಿಸಿದ್ದ. ಯಾವ ಮನೆಯಲ್ಲಿ ನಾನಿರಬಹುದು ಎಂದು ಊಹಿಸಿ, ಯಾವುದೋ ಮನೆಯ ಬಾಗಿಲು ಬಡಿದಾಗ ಶ್ರೀಖಂಡೆಯವರು ಬಾಗಿಲು ತೆರೆದು ಚಳಿಯಲ್ಲಿ ನಡುಗುವವರಿಗೆ ಕಾಫಿ ಮಾಡಿಸಿ ಕೊಟ್ಟು ನಾನಿದ್ದಲ್ಲಿ ಕರೆದುಕೊಂಡು ಬಂದಿದ್ದರು.

ಮಧ್ಯಾಹ್ನ ನಾವೆಲ್ಲ ಸೇರಿ ಅಡಿಗೆ ಮಾಡಿ, ಊಟ ಮುಗಿಸಿದೆವು. ಅವರಿಗೆ ವಿಶ್ರಾಂತಿ ಪಡೆಯಲು ಹೇಳಿ ಕಾಲೇಜಿಗೆ ಹೋದೆ. ಸಂಜೆ ಟ್ರೇನಿನಿಂದ ಜಯಪುರಕ್ಕೆ ಹೋದೆವು. ಬಿಸಿ ಚಹ ಕುಡಿಯುತ್ತ ಅವರ ಸಾಹಸದ ಕಥೆಯನ್ನು ಇನ್ನೊಮ್ಮೆ ಕೇಳಿ

ನಕ್ಕೆವು. ಮರುದಿನ ಎಲ್ಲೆಲ್ಲಿ ಏನೇನು ನೋಡಬೇಕು ಎಂದು ವಿವರಿಸಿ ನಾನು ಜೋಬನೇರಕ್ಕೆ ಮರಳಿದೆ. ಅತಿಥಿಗಳಿಗೆ ಹಿಂದಿ ಸರಿಯಾಗಿ ಬಾರದ್ದರಿಂದ ಹತ್ತಾರು ರಿಕ್ಷಾವಾಲಾ - ಟಾಂಗಾವಾಲಾರು ಸುತ್ತುವರಿದು ತಾವು ಊರು ತೋರಿಸುವೆವೆಂದು ದುಂಬಾಲು ಬಿದ್ದರೂ, ಗೊತ್ತುಪಡಿಸಿದವ, ಹೆಚ್ಚಿನ ಸ್ಥಳಗಳನ್ನು ತೋರಿಸದೇ ಹಿಂತಿರುಗಿ ತಂದ. ಆದ್ದರಿಂದ ವಾರಾಂತ್ಯಕ್ಕೆ ಬಂದಾಗ ಆಮೇರ ಕೋಟೆಯನ್ನು ತೋರಿಸಲು ನಾನೇ ಕರೆದುಕೊಂಡು ಹೊರಟೆ. 'ಪೊಲೋ ವಿಕ್ಟರಿ' ಸಿನೇಮಾ ಮಂದಿರದ ಹತ್ತಿರ ಒಂದು ಅಥವಾ ಎರಡು ನಂಬರಿನ ನಗರ ಸಂಚಾರಿ ಬಸ್ಸುಗಳು ಸಿಗುತ್ತವೆ. ಅವುಗಳಲ್ಲಿ ಯಾವುದಾದರೂ ಒಂದನ್ನು ಹತ್ತಿದರೆ ಬಡಿ ಚೌಪಾಡಿಗೆ ಮುಟ್ಟುತ್ತದೆ ಎಂದು ವಿವರಿಸಿ ಬಸ್ಸಿಗಾಗಿ ಕಾದು ನಿಂತಾಗ, ಮರಿಡಾಕ್ಟರ, ಶಾಲಾ ದಿನಗಳಲ್ಲಿ ಕಲಿತ ದೇವನಾಗರಿ ಲಿಪಿಯನ್ನು ನೆನಪಿಗೆ ತಂದುಕೊಂಡು ಎದುರಿಗೆ ಇದ್ದ "ದೋ ಯಾ ತೀನ ಬಸ್" (ಎರಡು ಇಲ್ಲವೇ ಮೂರು ಸಾಕು) ಬೋರ್ಡು ಓದಿ, ಆ ಕಂಬಂದಿಂದ ಎರಡನೇ ನಂಬರಿನ ಬಸ್ ಹೊರಡುತ್ತದೆ ಎಂದು ತನ್ನ (ಅ) ಜ್ಞಾನ ಪ್ರಕಟಿಸಿದ! ಅದು ಕುಟುಂಬ ಯೋಜನೆಯ ಜಾಹೀರಾತು ಎಂದು ಥಕ್ಕನೆ ಹೊಳೆಯದಿದ್ದ ಮರಿಡಾಕ್ಟರರ ಮಾತನ್ನು ನೆನಿಸಿಕೊಂಡು ಮನಸ್ವೀ ನಕ್ಕೆವು. ಇಂದಿಗೂ ಮಿತಸಂಸಾರದ ಜಾಹೀರಾತು ಕಂಡಾಗ ಮರಿಡಾಕ್ಟರನೇ ಕಣ್ಣಮುಂದೆ ಬರುತ್ತಾನೆ!

ಹವಾಮಹಲಿನ ಮುಂದಿನಿಂದ ಪ್ರತಿ ಅರ್ಧ ತಾಸಿಗೊಂದು ಖಾಸಗಿ ಬಸ್ ಆಮೇರಕ್ಕೆ ಹೊರಡುತ್ತದೆ. ತಲಾ ಮೂವತ್ತೈದು ಪೈಸೆ ಕೊಟ್ಟು ಕುಳಿತಾಗ, ಬಸ್ಸು ರೇವಡೀ ಬಝಾರ, ಮೋತಿಕತ್ರಾ ಬಝಾರ, ಮಾರ್ಗವಾಗಿ ರೋರಾವಾರಸಿಂಗ ಗೇಟನ್ನು ದಾಟಿ ದಿಲ್ಲಿ ರಸ್ತೆಯಲ್ಲಿ ಅಂಬರಕ್ಕೆ ಹೊರಟಿತು. ದಾರಿಯಲ್ಲಿ ರಾಜಸ್ಥಾನ ವಾಸ್ತುಶಿಲ್ಪದಲ್ಲಿ ನಿರ್ಮಿಸಿದ ಹಳೆಯ ಕಟ್ಟಡಗಳನ್ನು ನೋಡುತ್ತ ಗೈತೋರ, ಜಲಮಹಲಗಳನ್ನು ದಾಟಿ ಬಸ್ಸು, ಬೆಟ್ಟವನ್ನು ಏರಲಾರಂಭಿಸಿತು. ಎದುರಿಗೆ ಬಂದ ಮಹಾದ್ವಾರ ನಾವು ಆಮೇರವನ್ನು ಸೇರುತ್ತಿದ್ದೇವೆಂದು ಸೂಚಿಸಿತು. ಕಂದಕ ಒಂದರಲ್ಲಿ ಗೋಡೆಯೊಂದನ್ನು ಕಟ್ಟಿ ನಿರ್ಮಿಸಿದ ಕೃತಕ ಮಾವೂಸಾ ಸರೋವರದ ರಸ್ತೆಯ ಮೇಲಿಂದ ಮೋಟಾರು ಹಾದು ಹೋಗಿ ಅರಮನೆಯ ಹೆಬ್ಬಾಗಿಲ ಹತ್ತಿರ ನಿಂತಿತು.

ಆಮೇರದ ಹಳೆಯ ನಗರವನ್ನು ಎಲ್ಲ ದಿಕ್ಕಿನಿಂದಲೂ ಎತ್ತರವಾಗಿ ನಿಂತ ಆರವಲಿ ಬೆಟ್ಟಗಳು ಸುತ್ತುವರಿದಿವೆ. ಅಷ್ಟೊಂದು ಎತ್ತರದಲ್ಲಿಯೂ ಗೋಡೆಗಳನ್ನು ನಿಲ್ಲಿಸಿ ಅಲ್ಲಲ್ಲಿ ಶತ್ರುಗಳ ಚಲನವಲನಗಳನ್ನು ಕಂಡು ಹಿಡಿಯಲು ನಿರೀಕ್ಷಣಾಗೃಹಗಳನ್ನು ನಿರ್ಮಿಸಿದ್ದಾರೆ. ಎತ್ತರದಲ್ಲಿ ಕಟ್ಟಿದ ಅರಮನೆಗೆ ಹೋಗಲು ಪಕ್ಕಾ ರಸ್ತೆಯಿದ್ದರೂ ಹತ್ತಿರದ ಕಾಲುದಾರಿಯಿಂದಲೂ ಹೋಗಲು ಬರುವಂತಿತ್ತು. ಕೃತಕ ಸರೋವರದ

ದಡದಲ್ಲಿ ಸುಂದರವಾದ 'ದಿಲಾರಾಮ್' ಹೂದೋಟವಿದೆ. ಅದರಲ್ಲಿ ಪುಟ್ಟದೊಂದು ಶಿಲ್ಪ ಸಂಗ್ರಹಾಲಯವಿದೆ. ಅರಮನೆಯನ್ನು ಸಂದರ್ಶಿಸಲು ಸಾಯಕಲ್ಲಿಗೆ ಎಂಟಾಣೆ, ಮೋಟಾರ ಸಾಯಕಲ್ಲಿಗೆ ಒಂದು ರೂಪಾಯಿ, ಕಾರಿಗೆ ಐದು ರೂಪಾಯಿ ಪ್ರವೇಶಧನ ಕೊಡಬೇಕಾಗಿದ್ದರೂ ವಾಹನರಹಿತರಾದ ಜನ ಸಾಮಾನ್ಯರಿಗೆ ಯಾವ ಕರವೂ ಇರಲಿಲ್ಲ. ವಿದೇಶಿಯ ಪ್ರವಾಸಿಗಳನ್ನು ಸುಲಿಯಲು ಬೇರೆಯೇ ವ್ಯವಸ್ಥೆ ಇದೆ. ಹೆಣ್ಣಾನೆಗೆ ಕೊರಡಿನ ಕೃತಕ ಕೋರೆ ಹಲ್ಲು ಜೋಡಿಸಿ ಗಂಡು ಮಾಡಿ, ಸಿಂಗರಿಸಿ, ಅಂಬಾರಿ ಕಟ್ಟಿ ತಲಾ ಮೂವತ್ತೈದು ರೂಪಾಯಿ ಚಾರ್ಜಮಾಡಿ, ಗಜವಾಹನದಲ್ಲಿ ಅರಮನೆಯನ್ನು ತೋರಿಸುವರು. ವಿದೇಶದ ಹೊಸ ಕಾರುಗಳಲ್ಲಿ ಸಮವಸ್ತ್ರಧಾರಿ ಡ್ರಾಯವರ, ಅತಿಥಿಗಳ ಬಟ್ಟೆಗಳನ್ನು ನಾಚಿಸುವಂತ ಉಡುಪು ಧರಿಸಿದ ಮಾರ್ಗದರ್ಶಕನು, ಇದ್ದುದನ್ನು ಇಲ್ಲದುದನ್ನು ಅವರಿಗೆ ಹೇಳಿ ಮನರಂಜಿಸಿ ಮಹತ್ವದ ಅತಿಥಿಗಳನ್ನು ಅಮೇರಿಗೆ ಕರೆತರುವರು. ಅವರು ಕಾರಿನಿಂದ ಇಳಿಯುತ್ತಿದ್ದಂತೆ ಪ್ರತಿಯೊಬ್ಬರಿಗೆ ಚೆಂಡು ಹೂವಿನ ಮಾಲೆಯನ್ನು ತೊಡಿಸಿ, ತಿಲಕ ಹಚ್ಚಿ ಒಂದು ಹಾರಕ್ಕೆ ಹತ್ತು ರೂಪಾಯಿ ಸೆಳೆಯುವರು. ನಂತರ ಅಂಬಾರಿಯಲ್ಲಿ ಕೂಡ್ರಿಸಿ, ಸೊಂಟಕ್ಕೆ ಪಟ್ಟಿ ಬಿಗಿದು, ಯಾವನೋ ಒಬ್ಬನಿಂದ ತಂತುವಾದ್ಯ ನುಡಿಸಹಚ್ಚಿ ಅವರನ್ನು ಅರಮನೆಗೆ ಕರೆದೊಯ್ದಾಗ ಪ್ರವಾಸಿಗಳಿಗೆ ಸ್ವರ್ಗ ಮೂರೇ ಅಂಗುಲ ಉಳಿಯುವುದು. ಪತ್ನಿ - ಮಕ್ಕಳು ಆನೆಯಲ್ಲಿ ಸವಾರಿ ಮಾಡುವುದನ್ನು ಸದಾಕಾಲವೂ ನೋಡಲಿಕ್ಕೆ ಆಗುವಂತೆ ಛಾಯಾಚಿತ್ರಗಳನ್ನು ಸಂಗ್ರಹಿಸುವರು. ಐದು ನಿಮಿಷದ ರಸ್ತೆಗಾಗಿ ಐವತ್ತು ರೂಪಾಯಿ ಸುಲಿದಾಗಲೇ ಪ್ರವಾಸ ಉದ್ದಿಮೆ ಬೆಳೆಯುತ್ತದೆ! ಎಂದು ಭಾರತೀಯರು ತಿಳಿದಂತೆ ಇದ್ದರೆ, ಅಷ್ಟೊಂದು ಹಣ ಸುರಿದಾಗಲೇ ತಾವು ಆನಂದಿಸಿದೆವು ಎಂದು ಪರದೇಶದವರು ತಿಳಿಯುವಂತೆ ಇದೆ!

ಹೆಬ್ಬಾಗಿಲನ್ನು ದಾಟಿ ಒಳಗೆ ಹೋಗುತ್ತಿದ್ದಂತೆ, ದೊಡ್ಡದೊಂದು ಕೆಳ ಅಂಗಳ, ಅರಮನೆಯಲ್ಲಿರುವ ದೇವಿ ಪೂಜೆಗೆ ಅನೇಕ ರಾಜಸ್ಥಾನಿಗಳು ಬರುವುದರಿಂದ ಪೂಜೆಗಾಗಿ ಹೂವು, ತೆಂಗಿನಕಾಯಿ, ಫೇಡೆಗಳನ್ನು ಮಾರುವ ವ್ಯಾಪಾರಿಗಳು ವಿದೇಶೀಯರಿಗೂ ತಮ್ಮ ಸರಕುಗಳನ್ನು ಮಾರಲು ಉತ್ಸುಕರಿರುವರು. ದಣಿದು ಬಂದ ಪ್ರಯಾಣಿಕರಿಗೆ ನಗರದಲ್ಲಿ ಎಂಟಾಣೆಗೆ ಸಿಗುತ್ತಿದ್ದ ಕೊಕೋಕೋಲಾ, ಆರೆಂಜಗಳನ್ನು ಎಂಭತ್ತು ಪೈಸೆಗೆ ಮಾರುವ ವ್ಯವಸ್ಥೆ ಇದೆ. ಪಾಶ್ಚಾತ್ಯರಿಗೆಂದೇ ತೆಗೆದ ರಾಜಸ್ಥಾನಿ ಸರಕುಗಳ ಶೋರೂಮ್ - ಅಂಗಡಿಯಿದೆ. ಅರಮನೆಗೆ ಹೋಗುವುದಕ್ಕಾಗಿ ಎತ್ತರದ ಪಾವಟಣಿಗಳನ್ನು ಏರಿದಾಗ ಮೊದಲಿಗೆ ರಾಜಾ ಮಾನಸಿಂಗನು ಬಂಗಾಲದಿಂದ ತಂದ ಕಾಲಿ ವಿಗ್ರಹ ಸ್ಥಾಪಿಸಿದ ಶೀತಲಾಮಾತಾ' ಮಂದಿರವಿದೆ. ಚಪ್ಪಲಿ ಬೂಟು

ತೆಗೆದಿಟ್ಟು, ಕೈಕಾಲು ತೊಳೆದುಕೊಂಡು ದೇವಿಯ ದರ್ಶನ ಪಡೆಯಬೇಕೆಂಬ ಕಾನೂನು. ಪಾಶ್ಚಾತ್ಯರಿಗೆ ಬರಿಗಾಲಿನಿಂದ, ಚರ್ಮದ ಸೊಂಟದ ಪಟ್ಟಿ, ಪಾಕೀಟು ಎಲ್ಲವನ್ನು ತೆಗೆದಿರಿಸಲು ಹೇಳಿ ಒಳಗೆ ಬಿಡುವಾಗ ಅಯ್ಯೋ ಎನಿಸದಿರದು. ಬೆಳ್ಳಿಯ ನಕ್ಷೆಯಿದ್ದ ಬಾಗಿಲಿನಿಂದ ಒಳಗೆ ಹೋಗುತ್ತಿದ್ದರೆ ಭವ್ಯಾವಾದ ನಗಾರಿ ಗೋಚರಿಸುತ್ತದೆ. ಅದನ್ನು ಬಾರಿಸಿದರೆ ಊರಿನವರೆಲ್ಲ ಎದ್ದೇಳುವಂತಿದೆ. ಕಾಲಿ ಮಂದಿರವನ್ನು ಸಂಗಮರವರಿ ಕಲ್ಲಿನಲ್ಲಿ ಸುಂದರವಾದ ಕೆತ್ತನೆಯ ಕೆಲಸ ಮಾಡಿ ನಿರ್ಮಿಸಲಾಗಿದೆ. ಈ ಶಿಲೆಗೆ ಹಸಿರು ಬಣ್ಣ ಬಳೆದು ನಿಲ್ಲಿಸಿದ ಬಾಳೆಕಂಬಗಳು ಕಣ್ಣಿಗೆ ಹಬ್ಬ ಮಾಡದೇ ಇರಲಾರವು. ಪೂಜಾರಿ ಐದೈದು ನಿಮಿಷಕ್ಕೆ ಪೂಜೆ ಮಾಡಿ, ಆರತಿ, ಪ್ರಸಾದ ಕೊಟ್ಟು ದಕ್ಷಿಣೆ ಪಡೆಯುತ್ತಲೇ ಇರುವ.

ಈ ಅರಮನೆಯನ್ನು ಮಾನಸಿಂಗನು ಹದಿನೇಳನೇ ಶತಮಾನದಲ್ಲಿ ಕಟ್ಟಲು ಪ್ರಾರಂಭಿಸಿದರೂ ಒಂದು ಶತಮಾನದ ತನಕ ಅದರ ವಿವಿಧ ಭಾಗಗಳ ರಚನೆ ಆಗುತ್ತಲೇ ನಡೆದು ಸವಾಯಿ ಜಯಸಿಂಗನು ಅದನ್ನು ಪೂರ್ತಿಗೊಳಿಸಿದ. ಸಿಂಗಪೋಲ ದ್ವಾರದಿಂದ ಒಳಗೆ ಹೋದಾಗ ಜಯಸಿಂಗನು ಕಟ್ಟಿಸಿದ ಸಾರ್ವಜನಿಕ ಸಭಾಂಗಣ (ದಿವಾನ - ಈ-ಆಮ) ಎದುರಾಗುತ್ತದೆ. ಮೂರು ದಿಕ್ಕುಗಳಲ್ಲಿಯೂ ತೆರವಾಗಿದ್ದ ಈ ಸಭಾಂಗಣವನ್ನು ಕೆಂಪು ಮರಳು ಶಿಲೆಯ ಸ್ತಂಭಗಳ ಆಧಾರದ ಮೇಲೆ ನಿಲ್ಲಿಸಲಾಗಿದೆ. ಅವುಗಳ ಮೇಲೆ ಆನೆಯ ವಿವಿಧ ಭಂಗಿಗಳನ್ನು ಕೆತ್ತಲಾಗಿದೆ. ಹಿಂದಕ್ಕೆ ಸುಂದರವಾದ ವರ್ಣಚಿತ್ರಗಳು ಇದ್ದವೆಂದೂ ಆದರೆ ಅವುಗಳು ಮೊಗಲ ಅರಸು ಜಹಾಂಗೀರನನ್ನು ಆಕರ್ಷಿಸಬಾರದೆಂದು ಗಾರೆಯನ್ನು ಬಳಿಯಲಾಗಿತ್ತಂತೆ! ಬಲಗಡೆ ಇರುವ ಗಣೇಶ ಪೋಲ ಗೇಟನ್ನು ದಾಟಿ ಅರಮನೆಗೆ ಹೋಗಬೇಕು. ಅದನ್ನು ಕಮಾನುಗಳಿಂದ, ಟೆಂಪೆರಾ ವರ್ಣಚಿತ್ರಗಲಿಂದ ಅಲಂಕರಿಸಿದ್ದಾರೆ. ನಂತರ ಬರುವುದು ಜಾಗರೂಕತೆಯಿಂದ ಬೆಳೆಸಿದ ತೋಟ. ಅದಕ್ಕೆ ನೀರು ಹಾಯಿಸಲು ಹಾಲುಗಲ್ಲಿನ ಕಾರಂಜಿ - ಕಾಲುವೆಗಳನ್ನು ನಿರ್ಮಿಸಿದ್ದಾರೆ. ಎದುರಿಗೆ ಜಗತ್ಪ್ರಸಿದ್ಧ ಶೀಷ್‌ಮಹಲ್ ಇದೆ. ಇದನ್ನು ನೋಡಲು ಜಗತ್ತಿನ ಮುಖ್ಯ ಅತಿಥಿಗಳು ಬರುತ್ತಾರೆ. (ಇಂಗ್ಲಂಡಿನ ಎಲಿಝಬೆತ್ ರಾಣಿ, ಜೆಕೆಲಿನ್ ಕೆನೆಡಿ, ಇವರೆಲ್ಲ ಇದನ್ನು ನೋಡಲು ಬಂದಾಗ ಇಲ್ಲಿಯ ಚೌಕಿನಲ್ಲಿ ಭೋಜನಕೂಟ ಏರ್ಪಡಿಸಿದ್ದರು). ಇಲ್ಲಿಯ ವೈಶಿಷ್ಟ್ಯವೆಂದರೆ ಗೋಡೆ, ಮಾಡುಗಳಲ್ಲಿ ಸುಂದರವಾದ ಕೆತ್ತನೆಯ ಕೆಲಸ ಮಾಡಿ ಅವುಗಳಲ್ಲಿ ಬಾಹ್ಯಾವರ್ತ (convex) ಕನ್ನಡಿಗಳನ್ನು ಕೂಡಿಸಿದ್ದಾರೆ. ಹೀಗಾಗಿ ಒಂದು ವಸ್ತುವಿನ ಸಾವಿರ ಪ್ರತಿಬಿಂಬಗಳು ಒಮ್ಮೆಲ್ಲೇ ತೋರುತ್ತವೆ. ಕತ್ತಲಿರುವ ಕೋಣೆಯಲ್ಲಿ ಉರಿಯುವ ಮೇಣಬತ್ತಿ ಹಿಡಿದರೆ, ಸಹಸ್ರ ದೀಪೋತ್ಸವದ ಭಾಸವಾಗುತ್ತದೆ.

ಹಿಂಬದಿಗೆ ಬಣ್ಣದ ತಗಡುಗಳನ್ನು ಹಚ್ಚಿ ಹೂಬಳ್ಳಿಗಳಿಗೆ ವಿವಿಧ ಬಣ್ಣಗಳು ಬರುವಂತೆ ಮಾಡಿದ್ದಾರೆ. ಹತ್ತಿರದಲ್ಲಿಯೇ ಖಾಸಗಿ ಸಭಾಂಗಣ (ದಿವಾನ್ - ಈ - ಖಾಸ್) ಇದೆ. ಇಲ್ಲಿಯೂ ಗಾಜಿನ, ಕುಸುರಿನ ಕೆಲಸ, ಹೂಬಳ್ಳಿಗಳ ಸಾಲಂಕಾರವಿದೆ. ಸುಖನಿವಾಸಕ್ಕೆ ಹೋಗುವಲ್ಲಿ, ದಂತದ ಹಾಗೂ ಗಂಧದ ಕೆತ್ತನೆಯುಳ್ಳ ಬಾಗಿಲುಗಳನ್ನು ಸಂರಕ್ಷಿಸಿ ಇಟ್ಟಿದ್ದರಿಂದ ಇಂದಿಗೂ ನೋಡಲು ಸಿಗುವಂತಿದೆ. ಅರಮನೆಯ ಅಂತಸ್ತುಗಳನ್ನು ಏರಿ ಹೋದರೆ ಅಂಬರದ ರಕ್ಷಣಾ ವಿಧಾನದ ಕಲ್ಪನೆ ಬರುವಂತಿದೆ. ಇಂದಿಗೂ ಜಯಪುರ ಮಹಾರಾಜರ ಖಜಾನೆ ಬೆಟ್ಟದ ತುದಿಯಲ್ಲಿರುವ ಭದ್ರವಾದ ಕಟ್ಟಡದಲ್ಲಿದೆಯಂತೆ. ಗಣೇಶ ಪೋಲದ ಮೇಲೆ ಇದ್ದ ಸೋಹಾಗ್ ಮಹಲಿಗೆ ಬಿಳಿಶಿವಾಲಯ ಅಲಂಕಾರದ ತೆರೆಗಳಿವೆ. ಮಹಾರಾಣಿಯವರು ಈ ತೆರೆಗಳ ಮರೆಯಲ್ಲಿ ಕುಳಿತು ದರಬಾರದ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರಂತೆ. ಹಿಂದೊಮ್ಮೆ ಇಲ್ಲಿ ನೀರು ತುಂಬಿದ ಕೆರೆಯಿತ್ತಂತೆ. ಅದರ ನೀರನ್ನು ಕಾರಂಜಿಗಳಿಗಾಗಿಯೂ, ಬೇಸಿಗೆಯಲ್ಲಿ ಅರಮನೆಯನ್ನು ತಂಪಾಗಿಡಲೂ ಉಪಯೋಗಿಸುತ್ತಿದ್ದರಂತೆ. ಈ ಕಟ್ಟಡದ ಹಿಂದೆ ನೂರಾರು ಭವ್ಯವಾದ ಕೊಠಡಿಗಳಿವೆ. ಅವುಗಳೆಲ್ಲ ಅರಮನೆಯ ನಿವಸಿಗಳಿಗೆ, ನಂತರದವು ಸೇವಕರಿಗೆ ಮೀಸಲಾಗಿದ್ದವು. ಇಂತಹ ಭವ್ಯ ಕಟ್ಟಡ, ಸುಂದರ ಅರಮನೆ, ಇತಿಹಾಸ ಪ್ರಸಿದ್ಧ ಕೋಟೆಯ ಹೆಚ್ಚಿನ ಲಾಭ ಮಾಡಿಕೊಳ್ಳದೇ ಹೊರನಾಡಿನ ಪ್ರವಾಸಿಗರನ್ನು ಸುಲಿಯುವುದರಲ್ಲಿಯೇ ತಮ್ಮ ಜಾಣ್ಮೆಯ ಪ್ರದರ್ಶನ ಮಾಡುವ ನಮ್ಮವರ ಬಗ್ಗೆ ಹಳಹಳಿಸಿ ಕೆಳಗೆ ಇಳಿದೆವು.

ಅಂಗಡಿಯೊಂದರಲ್ಲಿ ಬಿಸಿ ಬಿಸಿ ಪಕೋಡಿ ತಿನ್ನುತ್ತ ಕುಳಿತಾಗ ಹಳ್ಳಿಗರು ಹಿತ್ತಾಳೆಯ ಹರಿವಾಣದಲ್ಲಿ ಖವೆಯನ್ನು (ಖೋವಾ) ವರ್ತುಲಾಕಾರದಲ್ಲಿಟ್ಟು ನಡುವೆ ಒಂದು ಬಿದಿರಿನ ತುಣುಕನ್ನು ಬಾವುಟದಂತೆ ಇಟ್ಟು ಅಂಗಡಿಕಾರನಿಗೆ ಮೂರು ರೂಪಾಯಿಗೆ ಕಿಲೋದಂತೆ ಮಾರಿ ಹೋದರು. ಅದನ್ನು ನೋಡಿ ಬಾಸುಂದಿಯ ನೆನಪಾಗಿ ಬಾಯಿ ನೀರೂರಿತು. ಅರ್ಧ ಕಿಲೋ ಖೋವಾ ಕೊಂಡೆ. ಅದರಿಂದ ಮನೆಯಲ್ಲಿ ಮಾಡಿದ ಉತ್ಕೃಷ್ಟ ಬಾಸುಂದಿಯನ್ನು ತಿನ್ನುತ್ತ, ತಮ್ಮ ಅಂದವಾದ ಮೈಕಟ್ಟಿನ ಬಗ್ಗೆ ಸದಾ ಜಾಗರೂಕರಿದ್ದ ಡಾಕ್ಟರರು, "ಇದನ್ನು ತಿಂದರೆ ದಪ್ಪಗಾಗುತ್ತಾರೆ" ಎನ್ನುತ್ತಲೇ ಬಾಯಿ ಚಪ್ಪರಿಸುತ್ತ ಚೆನ್ನಾಗಿ ಹೊಡೆದರು! ಊಟಕ್ಕೆ ಕುಳಿತ ನಾವು ನಾಲ್ವರು ಡಾಕ್ಟರರಿಗೆ ಮನೆಯಾಕೆ ಬಡಿಸುತ್ತಿದ್ದಾಗ ಉಳಿದಿದ್ದ ಅಮ್ಮ ಒಬ್ಬಳೇ ಏಕೆ ಡಾಕ್ಟರ ಆಗಿಲ್ಲ? ಎಂದು ಕೆಲಸದ ಹುಡುಗಿ ಕುತೂಹಲ ತಾಳದೇ ಕೇಳಿಬಿಟ್ಟಳು. "ನಿಮ್ಮ ಅಮ್ಮ ಬಹಳ ದಡ್ಡಿ. ವಿದ್ಯೆ ತಲೆಗೆ ಹತ್ತದ್ದರಿಂದ ಡಾಕ್ಟರ ಆಗದೇ ಗೃಹಿಣಿಯಾಗಿದ್ದಾಳೆ" ಎಂದು ಅವಳಿಗೆ ತಿಳಿಸಿದಾಗ ಎಲ್ಲರೂ ನಕ್ಕರು. ತಮ್ಮ ಜಯಪುರ

ಭೆಟ್ಟಿಯ ನೆನಪಿಗಾಗಿ ಅವರು ಬಾಂದಣಿ ಸೀರೆಗಳನ್ನು ಕೊಂಡರು. ನಂತರ ಟ್ರಿಪೋಲಿಯಾ ಬಝಾರಕ್ಕೆ ಹೋಗಿ ಕಾಗದ (Paper mache) ದಿಂದ ಮಾಡಿದ ಬಣ್ಣ ಬಣ್ಣದ ಸಾಮಾನು, ಕಟ್ಟಿಗೆಯ ಕೆತ್ತನೆಯ ವಿದ್ಯುತ್ ದೀಪದ ಸ್ಟ್ಯಾಂಡ, ವಿವಿಧ ಆಟಿಗೆಗಳು, ಸಂಗಮರವರಿ ಕಲ್ಲಿನ ಗೃಹಕೃತ್ಯದ ಸಾಮಾನುಗಳನ್ನೂ ಕೊಂಡರು. ಜಯಪುರದಿಂದ ಅವರ ಊರಿಗೆ ನೇರ ಹೋಗಲು ಬರುವಂತಿದ್ದರೂ ದಿಲ್ಲಿಯಿಂದ ಸ್ಥಳ ಕಾದಿರಿಸಿದ್ದರಿಂದ ಮೋಟಾರಿನಿಂದ ದಿಲ್ಲಿಯವರೆಗೆ ಹೋಗಿ, ಅಲ್ಲಿಂದ ನಾಗಪುರ ಮಾರ್ಗವಾಗಿ ಮದ್ರಾಸಕ್ಕೆ ಹೋದರು. ಮದ್ರಾಸದಿಂದ ಬೆಂಗಳೂರಿಗೆ ಹೋಗುವಾಗ ಅತೀ ಗದ್ದಲವಿದ್ದುದರಿಂದ ಅವರ ಸಾಮಾನುಗಳಲ್ಲಿ ಸ್ವೆಟರ ಮತ್ತು ಒಂದೆರಡು ಪುಟ್ಟ ಜೀನಸು ಕಳವಾದವಂತೆ! ತಮ್ಮ ಗೊಂದಲದ ಪ್ರವಾಸ ಪ್ರಯಾಸಕರವಾದರೂ ಬಹಳ ಕಾಲ ನೆನಪಿಡುವಂತಹದಾಗಿದೆ ಎಂದು ಅವರ ಪತ್ರ ಬಂದಿತ್ತು. ಜಯಪುರದ ಅರಮನೆ, ಮಹಲುಗಳಲ್ಲಿ ಅವರು ಮೈ ಮರೆತು ನಿಂತಾಗ ಗೊತ್ತಾಗದಂತೆ ತೆಗೆದ ಭಾವಚಿತ್ರಗಳ ಅಲಬಮ್ ಮಾಡಿ ಅವರಿಗೆ ಕಳಿಸಿದಾಗ ಅವರ ಆನಂದಕ್ಕೆ ಮೇರೆಯೇ ಇರಲಿಲ್ಲ.

೨೮. ಕನ್ನಡಿಗರ ಸಂಘ

ಹುಟ್ಟುನಾಡಿನಲ್ಲಿ ಇದ್ದಾಗ ಪರಸ್ಪರ ಕಚ್ಚಾಡಿಕೊಂಡರೂ ಪರರಾಜ್ಯಗಳಿಗೆ ಹೋದಾಗ ತಮ್ಮವರ ಬಗ್ಗೆ ಅಭಿಮಾನ ಆದರಗಳು ಹುಟ್ಟುವುದು ಸ್ವಾಭಾವಿಕ. ಅಂತೆಯೇ ಸ್ವಜಾತಿಯವರು, ಒಂದೇ ಭಾಷೆಯಾಡುವವರು, ಒಂದೇ ಪ್ರದೇಶದಿಂದ ಬಂದವರು ತಮ್ಮ ತಮ್ಮ ಬಳಗಗಳನ್ನು ಕಟ್ಟಿಕೊಳ್ಳುವುದು ವಾಡಿಕೆ. ಜಯಪುರದಲ್ಲಿ ಗುಜರಾಥಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ನಡೆಸುತ್ತಿದ್ದರು. ದಕ್ಷಿಣ ಭಾರತೀಯರ ಒಂದು "ಸಂಘಮ್"ದಲ್ಲಿ ಕನ್ನಡಿಗರಿಗೆ ಒಂದು ಸ್ಥಾನ ಇರಬೇಕಾದದ್ದು ನ್ಯಾಯವಾದರೂ ಅದರಲ್ಲಿ ಕೇರಳದವರ ಮತ್ತು ತಮಿಳುನಾಡಿನವರದೇ ಮೇಲುಗೈಯಾಗಿತ್ತು. ಆಂಧ್ರದವರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಜಯಪುರ ರಾಜ್ಯದ ಅಭಿವೃದ್ಧಿಗೆಂದು ಹಿಂದೆ ಮೈಸೂರಿನ ದಿವಾಣರಾಗಿದ್ದ ಸರ್ ಮಿರ್ಝಾ ಇಸ್ಮಾಯಿಲರನ್ನು ಜಯಪುರದ ಮಹಾರಾಜರೂ ಆಮಂತ್ರಿಸಿ ದಿವಾಣರನ್ನಾಗಿ ಮಾಡಿದಾಗ ಅವರು ಮೈಸೂರಿನ ಕೆಲ ನಿಪುಣ ಎಂಜಿನಿಯರರನ್ನು, ಆಫೀಸರರನ್ನು, ಜಯಪುರಕ್ಕೆ ಬರಮಾಡಿಕೊಂಡರು. ಆಗ ಮೈಸೂರಿನಲ್ಲಿ ನೌಕರಿ ಕಷ್ಟಸಾಧ್ಯವೆಂದು ಅನುಭವದಿಂದ ಕಂಡುಕೊಂಡವರೆಷ್ಟೊ ಜನ ಇಂಜಿನಿಯರರು ರಾಜಸ್ಥಾನಕ್ಕೆ ಬಂದು ಬೇರುಬಿಟ್ಟಿದ್ದಾರೆ. ಇವರ ಪೀಳಿಗೆಯವರಲ್ಲಿ ಕೆಲವರು ಕನ್ನಡ ಭಾಷೆಯನ್ನು ಕೇವಲ ಮನೆಮಾತಾಗಿ ಬಳಸಿ, ವ್ಯವಹಾರಕ್ಕೆ ಹಿಂದಿ ಬಳಸುವರು. ಕೆಲವರು ಹಿಂದಿ ಮಿಶ್ರಿತ ಕನ್ನಡವನ್ನೇ ಮನೆಯಲ್ಲಿ ಆಡುತ್ತಾರೆ! ಆಧುನಿಕರಿಗಂತೂ ಕನ್ನಡ ಓದಲು, ಬರೆಯಲು, ಆಡಲು ಕೂಡ ಬಾರದೆಂಬ ಮಾತೇ ಅಭಿಮಾನದ್ದಾಗಿದೆ. ಉತ್ತರದವರು ದಕ್ಷಿಣದ ಭಾಷೆ ಕಲಿಯುವುದಕ್ಕಿಂತಲೂ ದಕ್ಷಿಣದವರು ಹೆಚ್ಚು ಸುಲಭವಾಗಿ ಹಿಂದಿಯನ್ನು ಕಲಿಯಬಲ್ಲರು, ಎಂಬುದನ್ನು ಇವರು ಸಿದ್ಧಮಾಡಿ ತೋರಿಸಿದ್ದಾರೆ. ಭಾರತ ಸರಕಾರ ಕಡ್ಡಾಯವಾಗಿ ಹಿಂದಿಯನ್ನು ಎಲ್ಲರ ಮೇಲೂ ಹೇರಲು ಯತ್ನಿಸಿದ್ದರಿಂದ ದಕ್ಷಿಣದವರು ರಾಜಕೀಯ ಕಾರಣಗಳಿಗಾಗಿ ಅದನ್ನು ವಿರೋಧಿಸಿರಬೇಕು. ದೇಶ, ಸ್ವತಂತ್ರವಾದ ನಂತರ ಪ್ರಾಥಮಿಕ ಮಟ್ಟದಿಂದಲೇ ಹಿಂದಿಯನ್ನು ಕಡ್ಡಾಯವಾಗಿ ಕಲಿಸಿದ್ದರೆ ನವಜನಾಂಗ ಹಿಂದಿಯನ್ನು ರೂಢಿ

ಮಾಡಿಕೊಳ್ಳುತ್ತಿತ್ತು. ಈ ವಿಧಾನ ಬಳಸುವ ಬದಲಾಗಿ ಸೇವಾನಿವೃತ್ತಿಯನ್ನು ಸಮೀಪಿಸುತ್ತಿರುವ ಸರಕಾರಿ ನೌಕರರಿಗೂ ಕಡ್ಡಾಯವಾಗಿ ಹಿಂದಿ ಪರೀಕ್ಷೆ ಪಾಸು ಮಾಡಿಸಹಚ್ಚಿ ಹೆಚ್ಚಿನ ಅನುಕೂಲ, ಒಂದು ಪಾರಿತೋಷಕ ಕೊಡುವುದಾಗಿ ಸಾರಿ ಸರಕಾರ ಹಾಸ್ಯಾಸ್ಪದ ಪ್ರಸಂಗ ತಂದುಕೊಂಡಿತು! ಶೇಕಡಾ ಎಪ್ಪತ್ತೈದರಷ್ಟು ಭಾರತೀಯ ಪ್ರಜೆಗಳು ಹಿಂದಿ ಮಾತನಾಡುತ್ತಾರೆ, ಎಂದು ಸರಕಾರ ಮಾಡುತ್ತಿರುವ ಪ್ರಚಾರ ನಿರಾಧಾರವಾದದ್ದು. ಹಿಂದಿ ಪ್ರದೇಶಗಳೆಂದು ತೋರಿಸಲಾಗುವ ಹರಿಯಾನಾ, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಕೂಡ ಹಿಂದಿಗಿಂತ ಭಿನ್ನವಾದ ಭಾಷೆಗಳನ್ನೇ ಆಡುವರು. ಜಯಪುರದಲ್ಲಿ ಕನ್ನಡ ಭಾಷೆಯ ಪ್ರಭುತ್ವವಿಲ್ಲದಿದ್ದರೂ ಅದರ ಅಭಿಮಾನ ಬಿಡದ ಹಲವಾರು ಕನ್ನಡಿಗರು ಹಳೇ ಕನ್ನಡಿಗರೊಂದಿಗೆ ಸೇರಿ ಕನ್ನಡಿಗರ ಸಂಘವೊಂದನ್ನು ನಡೆಸುತ್ತ ಬಂದಿರುವುದು ಅಭಿಮಾನದ ವಿಷಯ.

ದಕ್ಷಿಣದ ನರ್ಸ ಮತ್ತು ಇಂಜಿನಿಯರರು ಜಯಪುರದಲ್ಲಿ ಹೆಸರುವಾಸಿಯಾದಂತೆ ಇಡ್ಲಿ - ದೋಸಾ, ವಡಾ, ಕಾಫಿಗಳೂ ಜನಪ್ರಿಯವಾಗಿವೆ. ಮಿರ್ಝಾ ಇಸ್ಮಾಯಿಲ ರಸ್ತೆಯಲ್ಲಿರುವ ಇಂಡಿಯನ್ ಕಾಫಿ ಹೌಸ್ ತುಂಬ ಖ್ಯಾತಿ ಪಡೆದಿದೆ. ಮಧ್ಯಮ ವರ್ಗದ ಸಂಸಾರ, ದೋಸಾ ಸವಿಯಲು ಸಕುಟುಂಬವಾಗಿ ಇಲ್ಲಿಗೆ ಬಂದರೆ, ನೃತ್ಯ, ನಾಟಕಗಳ ಕಲಾವಿದರು, ಆಕಾಶವಾಣಿಯ ಕಲಾಕಾರರು, ಕವಿಗಳು, ಸಾಹಿತ್ಯಗೋಷ್ಠಿಯಲ್ಲಿ ಆಸಕ್ತಿಯಿದ್ದವರೆಲ್ಲ ಸಂಜೆಯಾಗುತ್ತಲೇ ನೆರೆಯುವ ಸ್ಥಳವಿದು. ಪೂರೈಸಲ್ಪಡುವ ಕಾಫಿ - ತಿಂಡಿಗಳು ಉತ್ತಮ ಮಟ್ಟದವು ಅಲ್ಲವಾದರೂ ಅಲ್ಲಿಯವರಿಗೆ ಅವೇ ದಾಕ್ಷಿಣಾತ್ಯ ತಿಂಡಿಗಳಾದ್ದರಿಂದ ಹಣ ಸುರಿದು ತಿಂದು ತೇಗುವರು. ಉತ್ತರದವರಿಗೆ ದಕ್ಷಿಣದವರೆಲ್ಲ 'ಮದರಾಸಿ'ಗಳಾದ್ದರಿಂದ ರಸಮ್ - ಸಾಂಬಾರ್ ಸಿಗುವ ಅಂಗಡಿಗಳೆಲ್ಲ ಮದರಾಸಿ ಹೊಟೆಲ್ಲುಗಳೇ! ಇಂತಹ ಒಂದು ಹೋಟೆಲು ಅಜಮೇರ ರೋಡಿನ ಮೇಲಿದ್ದರೆ ಇನ್ನೊಂದು ಮೋತಿಲಾಲ ಅಟಲ್ ರೋಡಿನ ಮೇಲಿದೆ. ಹೆಸರಿನ ಮೇಲಿಂದ ಇವನ್ನು ದಕ್ಷಿಣದವರೇ ನಡೆಸುತ್ತಾರೆಂದು ಯಾರೂ ತಿಳಿಯಬಾರದು. ನಮ್ಮ ಮನೆಯ ಹತ್ತಿರವಿದ್ದ 'ಮದ್ರಾಸ ರೆಸ್ಟೋರೆಂಟು' ಕನ್ನಡಿಗರೊಬ್ಬರು ಸ್ಥಾಪಿಸಿದ್ದರು. ಮೊದಲು ಕೆಲವರ್ಷ ಚೆನ್ನಾಗಿ ನಡೆಯಿತಂತೆ. ನಾವಲ್ಲಿ ಹೋಗುವ ಹೊತ್ತಿಗೆ ಪಂಜಾಬಿಯೊಬ್ಬ ಅದರ ಮಾಲಕನಾಗಿದ್ದ. ದೋಸೆ ತಿನ್ನುವ ಆಸೆಯಾಗಿ ಒಮ್ಮೆ ಅಲ್ಲಿ ಹೋದಾಗ ಈ ಪಂಜಾಬಿ, ತಂದೂರಿ ರೋಟಿ ಮಾಡಿದ್ದರೆ ಅದಕ್ಕಿಂತ ಚೆನ್ನಾಗಿರುತ್ತಿತ್ತು ಅನಿಸದೇ ಇರಲಿಲ್ಲ. 'ಎಸ್‌ಪ್ರೆಸೊ' ಕಾಫಿ ತುಂಬ ಜನಪ್ರಿಯವಾಗಹತ್ತಿತ್ತು. ನೆಸಕೆಫೆ ಇಲ್ಲವೆ ಬ್ರೂ ಕಾಫಿಯಲ್ಲಿ ಉಗಿ ಹಾಯಿಸಿ ಅರ್ಧ

ಕಪ್ಪಿನಷ್ಟು ನೊರೆ ಇರುವ ಕಾಫಿಗೆ ಅರವತ್ತು ಪೈಸಾ ತೆತ್ತು ಕುಡಿಯುವುದರಲ್ಲಿ ಯಾವ ಆನಂದವಿದೆ ಎಂದು ಅರ್ಥವಾಗಲಿಲ್ಲ. ಮನೆಯಲ್ಲಿಯೇ ಕಾಫಿ ಮಾಡಿ ಕುಡಿಯುವವರಿಗೆ ಎಮ್. ಆಯ್. ರೋಡಿನಲ್ಲಿ ಬೀಜ ಹುರಿದು ಪುಡಿ ಮಾಡಿಕೊಡುವ ಅಂಗಡಿಯೊಂದು ಇದೆ.

ಕನ್ನಡಿಗರೆಲ್ಲ ಪ್ರತಿ ತಿಂಗಳು ಎರಡು ರೂಪಾಯಿ ವಂತಿಗೆ ಕೊಡುವುದೆಂದು ನಿರ್ಧರಿಸಿ ಸಂಘದ ಕಾರ್ಯಕಲಾಪಗಳನ್ನು ಸಾಂಘಿಕವಾಗಿ ನೆರವೇರಿಸಲು ಉತ್ಸಾಹಿ ಕಾರ್ಯದರ್ಶಿಯೊಬ್ಬನನ್ನು ಆರಿಸಿದರು. ಪ್ರತಿ ತಿಂಗಳು ಕೊನೆಯ ರವಿವಾರ ಯಾರಾದರೊಬ್ಬ ಪ್ರಮುಖ ಕನ್ನಡಿಗರ ಮನೆಯಲ್ಲಿ ಸೇರುವರು. ಅತಿಥಿಯಾದವರಿಗೆ ಕಾಫಿ ಇಲ್ಲವೇ ಚಹಾ ಮತ್ತು ತಿಂಡಿಗಳನ್ನು ಪೂರೈಸುವರು. ಮಾತು, ಹರಟೆ, ಪರಸ್ಪರ ಪರಿಚಯ, ವಿಚಾರ ವಿಮರ್ಶೆಗಳಾಗುವವು. ಟೇಪರಿಕಾರ್ಡರ ಇದ್ದರೆ ಕನ್ನಡ ಗೀತ, ಪುರಂದರದಾಸರ ಕೀರ್ತನೆಗಳನ್ನು ಕೇಳಿಸುವರು. ಹಾಡು, ಇನ್ನೇನಾದರೂ ಮನರಂಜನೆಯ ಕಾರ್ಯಕ್ರಮಗಳನ್ನು ಇಡುವರು. ಮುಂದಿನ ತಿಂಗಳು ಯಾರ ಮನೆಗೆ ಮುತ್ತಿಗೆ ಇಡುವದೆಂದು ನಿರ್ಧರಿಸಿದ ನಂತರವೇ ಸಭೆ ಮುಕ್ತಾಯವಾಗುವುದು. ಮರೆಯುವವರಿಗೆ, ಹೊಸಬರಿಗೆ ಅಂಚೆಯ ಮುಖಾಂತರ ತಿಳಿಸುವುದು ಕಾರ್ಯದರ್ಶಿಯ ಹೊಣೆ. ವಾರಾಂತ್ಯದ ಸಂಸಾರಿಗಳಾದ ನಮಗೆ ಈ ಸಭೆಗಳಿಗೆ ಹೋಗುವ ಮನಸ್ಸಿಲ್ಲದಿದ್ದರೂ ಬಿಡುವಿದ್ದಾಗ ತಪ್ಪಿಸಿಕೊಳ್ಳುತ್ತಿರಲಿಲ್ಲ. ಡಾ. ರಾಮಸ್ವಾಮಿಯವರು ವಿದ್ಯಾಗುರುಗಳಾಗಿದ್ದರಲ್ಲದೇ ಪರೀಕ್ಷಕರೂ ಆಗಿದ್ದರು. ಆದ್ದರಿಂದ ಅವರ ಆಮಂತ್ರಣ ಸ್ವೀಕರಿಸಿ ಹೋಗಿದ್ದೆವು. ಸುಂದರವಾದ ಹೂದೋಟದಲ್ಲಿ ಪ್ರಶಾಂತವಾದ ಬಂಗ್ಲೆ ಅವರದು. ನಗುಮುಖದ ಗುರುಗಳೇ ಸ್ವಾಗತಿಸಲು ನಿಂತಿದ್ದರು. ಎಲ್ಲರೂ ಬಂದ ಮೇಲೆ ಅವರ ಕೇರಳದ ಖಾನಾಸಾಮಾ, ಕುಳಿತಲ್ಲಿಯೇ ಎಲ್ಲರಿಗೂ ತಿಂಡಿ - ತೀರ್ಥ ಒದಗಿಸಿದ. ಸುಸಂಸ್ಕೃತರು, ಲೋಕ ವ್ಯವಹಾರ ಗಮನಿಸಿ ಹೆಚ್ಚು ತಿನ್ನದಿದ್ದರೆ, ಸೌಂದರ್ಯಕ್ಕೆ ಲಕ್ಷಪೂರೈಸುವ ಗೃಹಿಣಿಯರು ಆಸೆಯನ್ನು ಹತ್ತಿಕ್ಕಿಕೊಂಡು ತಿನ್ನಲಿಲ್ಲ. ಮೈಸೂರು - ಬೆಂಗಳೂರುಗಳ ಸಮಾಚಾರ ದರ್ಶನವಾದನಂತರ ಯಾರೋ ತುಂಬ ಇಂಪಾದ ಧ್ವನಿಯಲ್ಲಿ ಪುರಂದರದಾಸರ ಕೃತಿಯನ್ನು ಹಾಡಿದರು. ನಂತರ ಕೈಲಾಸಂರ ಭಜಕರೊಬ್ಬರು ಅವರ ನಾಟಕಗಳಲ್ಲಿಯ ಸ್ವಾರಸ್ಯಕರ ಭಾಗಗಳನ್ನು ಓದಿ ಹೇಳಲಾರಂಭಿಸಿದರು. ಈ ಕಾರ್ಯಕ್ರಮ ಕನ್ನಡಿಗರ ಸಂಘದಲ್ಲಿ ಆಗಾಗ ನಡೆಯುತ್ತಿದ್ದುದರಿಂದಲೋ ಏನೋ ಬಹಳಷ್ಟು ಜನ ಅತ್ತ ಲಕ್ಷಗೊಡದೇ ತಮ್ಮಲ್ಲಿಯೇ ಮಾತನಾಡಲಾರಂಭಿಸಿದ್ದರು. ಸ್ವಲ್ಪ ಹೊತ್ತಾದ ಮೇಲೆ ಬಂದವರು ಒಂದೊಂದು ನೆಪ ಹೂಡಿ ಆತಿಥ್ಯಕ್ಕೆ ಧನ್ಯವಾದಗಳನ್ನು ಅರ್ಪಿಸಿ ಜಾರಿಕೊಂಡರು.

ಇನ್ನೊಮ್ಮೆ ಶ್ರೀ ಸಾಂಬಮೂರ್ತಿಯವರ ಮನೆಯಲ್ಲಿ ಆಮಂತ್ರಣವಿತ್ತು. ಅವರು ರೇಲ್ವೆಯಲ್ಲಿ ಅಧಿಕಾರಿಗಳಿದ್ದರಿಂದ ರೇಲ್ವೆಯ ವಸತಿಯಾಚೆ ಅವರಿಗೊಂದು ಬಂಗ್ಲೆಯನ್ನು ಮೀಸಲಿಟ್ಟಿದ್ದರು. ಅದನ್ನು ಹುಡುಕಿಕೊಂಡು ಹೋಗುವುದೇ ಸಾಹಸದ ಕೆಲಸವಾಗಿತ್ತು. ಅಲ್ಲಿಯೂ ತಿಂಡಿ - ಹರಟೆಗಳೇ ಮುಖ್ಯ ಕಾರ್ಯಕ್ರಮವಾಗಿದ್ದವು. ಅವರ ತೋಟದಲ್ಲಿ ಕರಿಬೇವಿನ ಮರಕ್ಕೆ, ಬಂದ ಮಹಿಳಾವೃಂದ ದಾಳಿಯಿಟ್ಟದ್ದು ನೆನಪಿದೆ. ಜಯಪುರದಲ್ಲಿ ಕರಿಬೇವು ಅಪರೂಪದ ವಸ್ತುವಾಗಿತ್ತು. ಡಾ. ರಾಮಸ್ವಾಮಿಯವರು ಒಮ್ಮೆ ಜೋಬನೇರದ ನಮ್ಮ ಮನೆಗೆ ಬರುವ ಇಚ್ಛೆ ವ್ಯಕ್ತಪಡಿಸಿದ್ದರಿಂದ ಅವರನ್ನು ಆಮಂತ್ರಿಸಿದ್ದೆವು. ಕರಿಯ ಸ್ಟ್ಯಾಂಡರ್ಡ ಕಾರು ನಮ್ಮ ಮನೆಯ ಮುಂದೆ ನಿಂತಾಗ ಹತ್ತಾರು ಕಣ್ಣುಗಳು ಯಾರು ಇಳಿಯುತ್ತಿದ್ದಾರೆ, ಎಂದು ಕದ್ದು ನೋಡಿದವು. ಕಾರನ್ನು ಕಾಯಲು ಗೋಪಾಲನನ್ನು ನೇಮಿಸಿದಾಗ ಯಾರಿಗೂ ಕೈ ಹಚ್ಚಲು ಕೊಡಲಿಲ್ಲವಷ್ಟೇ ಅಲ್ಲ, ತಮ್ಮ ಪ್ರತಿಬಿಂಬವನ್ನು ನೋಡಲು ಕೊಡದಷ್ಟು ದಕ್ಷರೀತಿಯಲ್ಲಿ ತನ್ನ ಕಾರ್ಯ ತತ್ಪರತೆ ತೋರಿಸಿದ. ಹಳ್ಳಿಯ ಮನೆಯಾದರೂ, ಟೇಬಲ್ ಕುರ್ಚಿಗಳಿಲ್ಲದಿದ್ದರೂ ಮುಡ್ಡೆಯ ಮೇಲೆ ಕುಳಿತು “ಅಡಿಗೆ ತುಂಬ ಸೊಗಸಾಗಿದೆ” ಎಂದು ಅವರು ಮೆಚ್ಚಿಕೊಂಡು ಊಟ ಮಾಡಿದಾಗ ನೆಮ್ಮದಿಯೆನಿಸಿತು. ಇಂತಹ ದೊಡ್ಡ ಪ್ರಾಧ್ಯಾಪಕರು ನಮ್ಮ ಮನೆಗೆ ಬಂದದ್ದಕ್ಕೆ ಜೋಬನೇರಿನ ಪ್ರತಿಷ್ಠಿತರಿಗೆಲ್ಲ ಆಶ್ಚರ್ಯ. ವಿವಿಧ ಕಾರಣಗಳಿಗಾಗಿ ಡಾ. ರಾಮಸ್ವಾಮಿಯವರನ್ನು ಮೆಚ್ಚುವವರು ಕೃಷಿ ಕಾಲೇಜಿನಲ್ಲಿ ಇದ್ದರು. ಈ ಇಳಿವಯಸ್ಸಿನಲ್ಲೂ ಯುವಕರಂತೆ ವಿಶ್ರಾಂತಿಯ ವೇಳೆಯನ್ನೆಲ್ಲ ಸಂಶೋಧನೆಯಲ್ಲಿ ಕಳೆಯುವವರೆಂದು ಒಬ್ಬ ತಲೆದೂಗಿದರೆ, ಆಂಗ್ಲರನ್ನೂ ನಾಚಿಸುವಂತಹ ಅಚ್ಚುಕಟ್ಟಾದ ವೇಷಭೂಷಣ ಧರಿಸುತ್ತಾರೆಂದು ಅತ್ಯಾಧುನಿಕನಿಗೆ ಮೆಚ್ಚು. ಅಧಿಕಾರಿಗಳ ಪೂಜಾರಿಗಳಾದ ಬಿ.ಪಿ. ಅವರು ತಾವು ಡಾ. ರಾಮಸ್ವಾಮಿಯವರ ಭೆಟ್ಟಿಗಾಗಿ ಬರಲಿದ್ದೇನೆಂದು ಹೇಳಿಕಳಿಸಿದರು. ನಂತರ ತಮ್ಮ ಮನೆಗೆ ಚಹಾಕ್ಕೆ ಬರಬೇಕೆಂದು ಒತ್ತಾಯದಿಂದ ಕರೆದುಕೊಂಡು ಹೋದರು. ಸಂಜೆಗೆ ಕಾರು ಜೋಬನೇರ ಬಿಟ್ಟಾಗ ನಮ್ಮ ಅತಿಥಿಗಳಿಗೂ ಆನಂದವಾಗಿರಬಹುದು! ಅನಿಸಿತು.

ಡಾ. ರಾಮಸ್ವಾಮಿಯವರಂತಹ ಖ್ಯಾತಿವೆತ್ತ ಕನ್ನಡಿಗರು ಅನೇಕರು ಜಯಪುರದಲ್ಲಿದ್ದರು. ಹಿಂದೆ ಬಿಕಾನೇರ ಸಂಸ್ಥಾನದಲ್ಲಿ ಸಂಸ್ಕೃತ ಕಾಲೇಜಿನ ಮುಖ್ಯಸ್ಥರಾಗಿದ್ದ ಮಾಧವ ಕೃಷ್ಣ ಶರ್ಮ (ಶೆಣೈ)ರು ನಂತರ ರಾಜಸ್ಥಾನ ಸರಕಾರದ ಸಂಸ್ಕೃತ ಶಾಖೆಯ ಡಾಯರೆಕ್ಟರ್ ಆದರು. ತಾವು ರಾಜಸ್ಥಾನಿಗಳೊಡನೆ ಒಂದಾಗಿ

ಇರುವ ಉದ್ದೇಶದಿಂದ 'ಶೆಣೈ' ಅಭಿದಾನವನ್ನು 'ಶರ್ಮ'ಕ್ಕೆ ಪರಿವರ್ತಿಸಿದರು. ರಾಜಸ್ಥಾನದಲ್ಲಿ ಸಂಸ್ಕೃತ ಭಾಷೆ ಇನ್ನೂ ಬದುಕಿದೆ. ಇಪ್ಪತ್ತೆರಡು ಸಂಸ್ಕೃತ ಕಾಲೇಜುಗಳನ್ನು ನಡೆಸುತ್ತಿರುವ ಗೌರವ ಈ ರಾಜ್ಯಕ್ಕೆ ಸಲ್ಲುತ್ತದೆ. ಶರ್ಮರು ರಕ್ತ ಒತ್ತಡದಿಂದ ಬಳಲುತ್ತಿದ್ದು ನಿವೃತ್ತಿಗಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಸಂಸ್ಕೃತ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲೆಲ್ಲ ಪ್ರಭುತ್ವವಿದ್ದ ಬೇರೆ ಯೋಗ್ಯ ವ್ಯಕ್ತಿ ಸಿಗದ್ದರಿಂದ ಮುಖ್ಯ ಮಂತ್ರಿಗಳು ಆಗ್ರಹಪೂರ್ವಕ ಅವರು ತಮ್ಮ ಹೊಣೆಯನ್ನು ಮುಂದರಿಸುವಂತೆ ಕೇಳಿಕೊಂಡಿದ್ದರು. ನಂತರ ಅಧಿಕಾರದಲ್ಲಿದ್ದಾಗಲೇ ನಿಧನ ಹೊಂದಿದ ಶರ್ಮರು ಖ್ಯಾತ ಜ್ಯೋತಿಷಿಗಳೂ ಆಗಿದ್ದರು. ಅವರ ಹಿರಿಮಗ ಅಜಮೇರದಲ್ಲಿ ಇಂಜಿನಿಯರನಾಗಿದ್ದ,. ಎರಡನೆಯವ ತುಂಬ ಪ್ರತಿಭಾಶಾಲಿ ಡಾಕ್ಟರ್. ಮಗಳು ಮೈತ್ರೇಯಿ, ಬಿ.ಎಸ್‌ಸಿ. ಎಮ್. ಎಸ್‌ಸಿ.ಗಳಲ್ಲಿ ಸುವರ್ಣ ಪದಕಗಳಿಸಿದವಳು. ಈ ಇಡೀ ಕುಟುಂಬ, ಕನ್ನಡಿಗರ ಬಗ್ಗೆ ರಾಜಸ್ಥಾನಿಗಳೆಲ್ಲ ಕುತೂಹಲ ತಾಳುವಂತೆ ಇತ್ತು.

ಎಮ್. ರಾಘವೇಂದ್ರರಾಯರು ರಾಜ್ಯ ಇಂಜಿನಿಯರಿಂಗ ಅಧಿಕಾರಿಗಳಾಗಿ ನಿವೃತ್ತರಾದವರು. ಜಯಪುರದಲ್ಲೇ ಮನೆ ಕಟ್ಟಿಸಿ ನೆಲೆಸಿದ್ದಾರೆ. ಕನ್ನಡ ಸಾಹಿತ್ಯ - ಸಂಗೀತಗಳಲ್ಲಿ ಹೆಚ್ಚಿನ ಅಭಿಮಾನ ತಾಳಿದವರು. ತಮ್ಮ ಮಕ್ಕಳಿಗೆಲ್ಲ ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯಿಲ್ಲವೆಂದು, ಅವರು ಕನ್ನಡ ಕಲಿಯಲಿಕ್ಕೆ ಆಗಲಿಲ್ಲವೆಂದು ಮರುಗುವರು. ಕನ್ನಡ ಪುಸ್ತಕಗಳನ್ನು ಓದುವಾಗ ತಪ್ಪದೇ ಮಕ್ಕಳಿಗೆ ಕೆಲಭಾಗಗಳನ್ನಾದರೂ ಓದಿ ತೋರಿಸುವರು. ಶ್ರೀ ಗೋಪಿನಾಥರಾಯರು ಮುಖ್ಯ ಇಂಜಿನಿಯರರಾಗಿ ನಿವೃತ್ತರಾದ ನಂತರ, ಶ್ರೀ ಅಡಿವೆಪ್ಪನವರು ಚಿಕ್ಕ ವಯಸ್ಸಿನಲ್ಲೇ ಆ ಹಿರಿಯ ಹುದ್ದೆಗೇರಿದರು. ರಾಜಾರಾವ್ ಅವರು ಭೂಗರ್ಭಶಾಸ್ತ್ರದ ಡಾಯರೆಕ್ಟರ್ ಆಗಿ ಜಯಪುರದಲ್ಲಿ ಆರು ವರ್ಷ ಕಳೆದು ವರ್ಗವಾಗಬಹುದೆಂಬ ನಿರೀಕ್ಷೆಯಲ್ಲಿದ್ದರು. ಡಾ. ನಾರಾಯಣ್ ದಂಪತಿಗಳಿಬ್ಬರೂ ರಾಜಸ್ಥಾನ ಸರಕಾರದ ಕೃಷಿ ವಿಭಾಗದಲ್ಲಿ ಉಚ್ಚ ಅಧಿಕಾರಿಗಳಿದ್ದರು. ಅವರೂ ಅವರ ಮಕ್ಕಳಿಬ್ಬರೂ ಸಾಂಸ್ಕೃತಿಕ ಚಟುವಟಿಕೆಗಳಲ್ಲೆಲ್ಲ ಅತ್ಯುತ್ಸಾಹದಿಂದ ಭಾಗ ವಹಿಸುತ್ತಿದ್ದರು. ಉತ್ತರ ಭಾರತದ ನೋಟಿಯಾಲರು ಭೂಗರ್ಭಶಾಖೆಯ ಉಚ್ಚ ಅಧಿಕಾರಿಗಳಾಗಿ ಭಾರತವನ್ನೆಲ್ಲ ಸುತ್ತಾಡಿ ಬಂದವರು. ಬೆಂಗಳೂರಿನಲ್ಲಿಯೂ ಮೂರು ವರ್ಷಕಾಲ ಇದ್ದರು. ಭಾರತದಲ್ಲೆಲ್ಲ ಸ್ವಚ್ಛ, ಸುಂದರ, ಸಂಪದ್ಭರಿತ, ಸುಸಂಸ್ಕೃತ ನಗರವೆಂದು ಅವರ ಶ್ರೀಮತಿ, ಬೆಂಗಳೂರನ್ನು ಬಹಳವಾಗಿ ಹೊಗಳುತ್ತಿದ್ದರು. ಕನ್ನಡವನ್ನು ಕಲಿತೇ ತೀರಬೇಕೆಂಬ ಹಿರಿಯಾಸೆಯಿಂದ ಕಲಿತ, ಚುರುಕಾದ ಹುಡುಗಿಯೊಬ್ಬಳನ್ನು ಅವರು ಕೆಲಸಕ್ಕೆ ನೇಮಿಸಿಕೊಂಡರಂತೆ. ಕೊನೆಗೆ "ಕನ್ನಡ

ಕಲಿತಿರಾ?" ಎಂದಾಗ ಇಲ್ಲವೆಂದರು. ಆ ಹುಡುಗಿ ಎರಡೇ ತಿಂಗಳಲ್ಲಿ ಉತ್ತಮ ಹಿಂದಿ ಮಾತನಾಡುವುದನ್ನು ಕಲಿತು ತಾವೆಂದೂ ಕನ್ನಡ ಕಲಿಯುವ ಸಂದರ್ಭವೇ ಬರಲಿಲ್ಲವೆಂದು ಮರುಗಿದರು! ಆಂಧ್ರ, ತಮಿಳುನಾಡು, ಕೇರಳದವರಿಗಿಂತ ಕನ್ನಡಿಗರು ಬಲುಬೇಗ ಸ್ವಚ್ಛವಾದ ಹಿಂದಿಯನ್ನು ಮಾತನಾಡುತ್ತಾರೆಂದು ರಾಜಸ್ಥಾನದಲ್ಲಿ ಪ್ರತೀತಿ ಇದೆ. ಆಕಾಶವಾಣಿಯಲ್ಲಿ ದಕ್ಷಿಣದ ಪ್ರಾಂತದವರ ಹಬ್ಬ, ಹರಿದಿನ, ಸಾಹಿತ್ಯ - ಕಲೆಗಳ ಬಗ್ಗೆ ಪರಿಚಯಾತ್ಮಕ ಕಾರ್ಯಕ್ರಮಗಳನ್ನು ಇಟ್ಟಿದ್ದರು. ಇವರಲ್ಲಿ ಕನ್ನಡಿಗರ ಹಿಂದಿ ಉಚ್ಚಾರವೇ ಸ್ಫುಟವಾಗಿ ಸೊಗಸಾಗಿತ್ತು! ಎಂದು ಅಲ್ಲಿಯವರು ಅಭಿಪ್ರಾಯ ಪಟ್ಟರು.

೨೯. ಚುನಾವಣೆ

ರಾಜಕಾರಣದಲ್ಲಿ ಅನಾಸಕ್ತಿ ತೋರಿಸುವ ರಾಜಸ್ಥಾನಿಗಳು, ಚುನಾವಣೆ ಬಂದಾಗ ಹುರುಪುಗೊಳ್ಳುತ್ತಾರೆ. ಜಯಪುರ ನಗರ ಸೇರುತ್ತಿದ್ದಂತೆ ಕೊತ್ತಳದ ಮೇಲೆ "ಸ್ವತಂತ್ರ ಪಕ್ಷಕ್ಕೆ ನಿಮ್ಮ ಓಟನ್ನು ಕೊಡಿ" ಎಂದು ಭವ್ಯವಾಗಿ ಬರೆದದ್ದನ್ನು ಕಂಡಾಗ ರಾಜಕಾರಣದ ಆಟ ಇನ್ನೇನು ಪ್ರಾರಂಭವಾಯಿತು ಎನಿಸುವುದು. ನೂರಾರು ಸಣ್ಣ, ಪುಟ್ಟ ಸಂಸ್ಥಾನಗಳಿಂದ ರಚಿತವಾದ ರಾಜಸ್ಥಾನದಲ್ಲಿ ಹತ್ತಾರು ರಾಜಮನೆತನಗಳು ಪ್ರಬಲವಾಗಿದ್ದವು. ಸ್ವತಂತ್ರ ಸಾರ್ವಭೌಮ ಭಾರತೀಯರಿಗೆ ರಾಜ ಮಹಾರಾಜರು ಇಲ್ಲದಿದ್ದರೂ ಅಧಿಕಾರಕ್ಕೇರಿದವರಿಗೆ, ಅತ್ಯುಚ್ಚ ಪದವಿಯ ವಂಶಾವಳಿ ಸ್ಥಾಪಿಸಿದವರಿಗೆ, ಚಕ್ರವರ್ತಿಗೂ ಸಿಗದ ಆದರ, ಪ್ರೇಮ, ಶ್ರದ್ಧೆಗಳು ದೊರೆಯುವಂತೆ, ರಾಜಸ್ಥಾನದಲ್ಲಿ ಈ ರಾಜ-ಮಹಾರಾಜರ ವಂಶದವರಿಗೆ ದೊರೆಯುತ್ತವೆ. ಜನರ ರಕ್ತ-ಮಾಂಸ ಹೀರಿ ಕೊಬ್ಬಿದ ಅಧಿಕಾರಾರೂಢರಿಗಿಂತ ಸ್ವಾರ್ಥದ ಜೊತೆಗೆ ಜನತೆಯ ಹಿತವನ್ನೂ ಸಾಧಿಸುತ್ತಿದ್ದ ಕೆಲ ರಾಜಮನೆತನಗಳು ಚೆನ್ನಾಗಿದ್ದವೇನೋ ಎಂದು ಅನಿಸುತ್ತದೆ. ಅಸಹಾಯಕರನ್ನು ದಂಡಿಸುವುದರಲ್ಲಿ ನಮ್ಮ ಸರಕಾರ ಶೂರ. ಬ್ರಿಟಿಶರು ದೇಶವನ್ನು ಬಿಟ್ಟು ಹೋಗುವಾಗ ಭಾರತೀಯ ಸಂಸ್ಥಾನಗಳಿಗೆಲ್ಲ ಅವರು ಭಾರತ ಇಲ್ಲವೇ ಪಾಕಿಸ್ಥಾನದಲ್ಲಿ ವಿಲೀನಗೊಳ್ಳಬಹುದು ಇಲ್ಲವೇ ಬಯಸಿದರೆ ಸ್ವತಂತ್ರವಾಗಿಯೂ ಇರಬಹುದೆಂಬ ಆಯ್ಕೆಯನ್ನು ಕೊಟ್ಟಿದ್ದರು. ಸರದಾರ ವಲ್ಲಭಭಾಯಿ ಪಟೇಲರ ಒಂದು ದೇಶ, ಒಂದು ಸರ್ಕಾರವೆಂಬ ಯೋಜನೆಯನ್ನು ಒಪ್ಪಿಕೊಂಡು ಹಲವಾರು ಸಂಸ್ಥಾನಿಕರು ತಲೆಮಾರುಗಳಿಂದ ಬಂದ ಅಧಿಕಾರವನ್ನು ಬಿಟ್ಟುಕೊಡಲು ಮುಂದೆ ಬಂದರು. ಈ ತ್ಯಾಗಕ್ಕಾಗಿ ಭಾರತ ಸರಕಾರ ಅವರಿಗೆ ಯೋಗ್ಯ ವರ್ಷಾಶನ ಕೊಡುವುದಾಗಿ ಆಶ್ವಾಸನ ಕೊಟ್ಟಿತ್ತು. ದೇಶದ ಐಕ್ಯಕ್ಕಾಗಿ ಇಷ್ಟೊಂದನ್ನು ಕಳೆದುಕೊಂಡವರಿಗೆ ಸಲ್ಲುವ ಗೌರವ, ಧನಸಹಾಯಗಳು ಪ್ರಜಾತಂತ್ರದಲ್ಲಿ ಉಳಿದುಕೊಳ್ಳುವುದು ಹಾಸ್ಯಾಸ್ಪದವೆಂದು, ದೇಶದ ಸ್ವಾತಂತ್ರ್ಯ, ಐಕ್ಯಗಳಿಗಾಗಿ, ಜನತೆಯ ಹಿತಕ್ಕಾಗಿ ಏನೂ ತ್ಯಾಗ ಮಾಡದ ಮುಖಂಡರ ಬಹಿರಂಗ ಘೋಷಣೆಗಳು ಇನ್ನೂ ಹಾಸ್ಯಾಸ್ಪದ.

ಆಳುವವರ ಮನದಾಳವನ್ನು ಅಳೆಯಲಾರದ ರಾಜಪ್ರಮುಖರನೇಕರು ಸ್ವತಂತ್ರ ಪಕ್ಷಕ್ಕೆ ಸೇರಿದ್ದರಿಂದ ರಾಜಸ್ಥಾನದಲ್ಲಿ ಆ ಪಕ್ಷ ಬಲಗೊಂಡಿತ್ತು. ಆದ್ದರಿಂದ ಅವರನ್ನು ಸದೆಬಡಿಯಬೇಕೆಂದು ಆಳುವ ಪಕ್ಷದ ಕನಸಾಗಿತ್ತು. ಅಧಿಕಾರದಲ್ಲಿದ್ದ ಪಕ್ಷದವರಿಗೆ ಚುನಾವಣೆಯ ಪ್ರಚಾರಕ್ಕಾಗಿ ಎಲ್ಲ ತರದ ಸೌಲಭ್ಯಗಳು ಸಿಗುತ್ತಿದ್ದರೂ ಉಳಿದ ಪಕ್ಷದವರೂ ರಭಸದಿಂದ ತಮ್ಮ ಪ್ರಚಾರವನ್ನು ಪ್ರಾರಂಭಿಸಿದರು. ಜಯಪುರದ ಮಹಾರಾಣಿ ಗಾಯತ್ರಿದೇವಿಯವರು ಮತಗಳನ್ನು ಗಳಿಸುವುದರಲ್ಲಿ ನಿಸ್ಸೀಮರು. ಆ ಸಮಯದಲ್ಲಿ ಚಂದ್ರಮಹಲದಲ್ಲಿಯ ಸುಪ್ಪತ್ತಿಗೆಯ ಜೀವನ ಬಿಟ್ಟು ಹಳ್ಳಿ- ಹಳ್ಳಿ, ಓಣಿ - ಓಣಿಗಳಲ್ಲಿ ಸ್ವತಃ ಡ್ರಾಯವ್ ಮಾಡಿಕೊಂಡು ಹೋಗಿ ತಮ್ಮ ಪಕ್ಷದ ಧ್ಯೇಯಗಳನ್ನು ವಿವರಿಸುತ್ತ ತಿರುಗಿದರು, ಜೋಬನೇರಕ್ಕೆ ಅವರು ಬಂದಾಗ ಊರಿಗೆ ಊರೇ ಅವರನ್ನು ನೋಡಲು, ಕೇಳಲು ಕಲೆತಿತ್ತು. ಅವರ ಸೌಂದರ್ಯದ ವರ್ಣನೆ ಕೇಳಿ, ಕ್ಯಾಮರಾದಲ್ಲಿ ಅದನ್ನು ಹಿಡಿದಿಡುವ ಆಸೆಯಿಂದ ನಾನೂ ಹೋಗಿದ್ದೆ. ಭಾಷಣಕ್ಕಾಗಿ ನಿರ್ಮಿಸಿದ ಎತ್ತರ ವೇದಿಕೆಯ ಮೇಲೆ ಗಾದಿ-ದಿಂಬುಗಳನ್ನು ಹಾಕಿದ್ದರು. ಹಳ್ಳಿಗರೆಲ್ಲ ಹಾಸಿದ ಗುಡಾರಗಳ ಮೇಲೆ ಕುಳಿತರೆ ಹೆಂಗಳೆಯರೆಲ್ಲ ಹತ್ತರದ ಕಟ್ಟಡಗಳನ್ನು ಏರಿ ಗಂಡಸರನ್ನು ಕದ್ದು ನೋಡುತ್ತ, ಅಡಿಗೆಯ ವಿಷಯ ಮಾತನಾಡುತ್ತ ಮಹಾರಾಣಿಯವರಿಗಾಗಿ ಆತುರದಿಂದ ಕಾಯುತ್ತಿದ್ದರು. ಪುರುಷರಿಗಿಲ್ಲದ ಕೈ ಗಡಿಯಾರ ಹೆಂಗಳೆಯರಿಗೆ ಇರಲೇ ಬೇಕು, ಎಂದು ಇಲ್ಲಿಯ ನಿಯಮವಿದ್ದಂತಿದೆ! ಕೈ ತುಂಬ ತೊಟ್ಟ ಅರಗಿನ ಮತ್ತು ಬಂಗಾರದ ಬಳೆಗಳ ನಡುವೆ ಕೈಗಡಿಯಾರ ತನ್ನ ಇರವನ್ನು ತೋರಿಸಿಕೊಳ್ಳಲು ಟಿಕ್, ಟಿಕ್, ಗೊಳ್ಳುತ್ತಿರುತ್ತದೆ. ಆಧುನಿಕರಿಗೆ ಅದರ ಭಾಷೆ ತಿಳಿಯುತ್ತಿದ್ದರೆ ಬಹುಸಂಖ್ಯಾಕರಿಗೆ ಅದೊಂದು ಆಭರಣ ಮಾತ್ರ. ಬಡಬಗ್ಗರು, ಬೆಲೆ ಬಾಳುವ ಗಡಿಯಾರ ಕೊಳ್ಳಲು ಯೋಗ್ಯತೆ ಇಲ್ಲದವರು ಮಕ್ಕಳ ಹತ್ತು ಪೈಸೆಯ ಗಡಿಯಾರವನ್ನಾದರೂ ತೊಟ್ಟುಕೊಂಡು ಆನಂದಿಸುವರು. ಅದರಂತೆ ವಿವಿಧ ಪಕ್ಷದವರು ಹಂಚುವ ಚಿಹ್ನಗಳ ಬಿಲ್ಲೆಗಳನ್ನು ಮಕ್ಕಳೊಡನೆ ಮಹಿಳೆಯರೂ ಧರಿಸುವರು! ಒಟ್ಟಿನಲ್ಲಿ ಹೇಳಬೇಕಾದರೆ ಮೈ ತುಂಬ ಮಿನುಗುವ ಒಡವೆ, 'ವಸ್ತು'ಗಳನ್ನು ಧರಿಸಿದಾಗಲೇ ರಾಜಸ್ಥಾನಿ ಮಹಿಳೆಗೆ ಅಭಿಮಾನ, ಆನಂದ.

ಗಾಯತ್ರಿದೇವಿಯವರನ್ನು ಹೊತ್ತ ಕಾರು ಧೂಳು ಹಾರಿಸುತ್ತ ಬಂದಾಗ ಎಲ್ಲರೂ ಎದ್ದು ನಿಂತು ಜಯಜಯಕಾರ ಹಾಕಿದರು. ಹೆಂಗಳೆಯರು 'ಸೋಹಾಗ್' ಹಾಡುತ್ತ ಮಂಗಳಾರತಿ ಬೆಳಗಿದರು. ಮೂವತ್ತು ಮೊಳದ ಪಗಡೀ ಧರಿಸಿದ ಹಳ್ಳಿಯ ನಾಯಕರು ಅವರನ್ನು ಸ್ವಾಗತಿಸಿ ವೇದಿಕೆಯ ಮೇಲೆ ಕರೆತಂದರು. ಕಿಕ್ಕಿರಿದು ತುಂಬಿದ ವೇದಿಕೆಯ ಪಕ್ಕದಲ್ಲಿಯೇ ನನ್ನ ಕ್ಯಾಮರಾ ನನಗೆ ಸ್ಥಾನ ಒದಗಿಸಿಕೊಟ್ಟಿತು. ಗಾಯತ್ರಿದೇವಿಯವರ

ಛಾಯಾಚಿತ್ರಗಳನ್ನು ತೆಗೆಯಬೇಕೆಂದರೆ ಜೋಬನೇರದ ಮುಖಂಡರ ಎತ್ತರದ ಪಗಡಿಗಳು ಹೆಚ್ಚಿನ ಆತಂಕ ಒಡ್ಡುತ್ತಿದ್ದವು. ಪರಿಚಯದವರಿಗೆ ನನಗಾದ ತೊಂದರೆಯನ್ನು ತಿಳಿಸಿದಾಗ ಪಗಡಿಗಳನ್ನು ತೆಗೆದಿಟ್ಟರು. ಸರಿದು ಕುಳಿತುಕೊಂಡರು. ತಾನು ಮಹಾರಾಣಿ, ಎಂಬ ಡಂಭಾಚಾರಕ್ಕೆ ಬಲಿಬೀಳದೇ ಕಾಲಧರ್ಮಕ್ಕೆ ತಲೆಬಾಗಿ ಹಳ್ಳಿಗರೊಂದಿಗೆ ಹಳ್ಳಿಯವಳಾಗಿ ತನ್ನ ನಿಜವಾದ ಯೋಗ್ಯತೆಯನ್ನು ಜನರಿಗೆ ತೋರಿಸಲು ಯತ್ನಿಸುವ ಗಾಯತ್ರಿದೇವಿಯವರ ಬಗ್ಗೆ ಅಭಿಮಾನ ಮೂಡಿತು. ಭಾಷಣ ಮಾಡುವಾಗಲೂ ವಿರೋಧಿ ಪಕ್ಷದವರ ಮೇಲೆ ಸಲ್ಲದ ಆಪಾದನೆ ಹೊರಿಸುವ ಬದಲಾಗಿ ಈ ಚುನಾವಣೆಯಲ್ಲಿ ತಮ್ಮವರನ್ನು ಅಧಿಕ ಸಂಖ್ಯೆಯಲ್ಲಿ ಆರಿಸಿದರೆ ರಾಜ್ಯದಲ್ಲಿ ಸರಕಾರವನ್ನು ರಚಿಸಿ ಒಳ್ಳೆಯ ಆಡಳಿತ ಕೊಡಬೇಕು, ಎಂದು ಸಂಕಲ್ಪಿಸಿಕೊಂಡಿದ್ದೇವೆ, ಎಂದು ಚುಟುಕಾಗಿ ಮಾತನಾಡಿದರು. ಸ್ವಾತಂತ್ರ್ಯ ದೊರಕಿಸಿಕೊಡಲು ತಾವು ಮಾಡಿದ ತ್ಯಾಗ, ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗ, ನೆಹರೂರು ಸಾಧಿಸಿದ ದೇಶದ ಪ್ರಗತಿಯ ಬಣ್ಣನೆ ಕೇಳಿ ಬೇಸತ್ತ ಕಿವಿಗಳಿಗೆ ಈ ಗಂಭೀರ ಭಾಷಣದ ವೈಖರಿ ಹಿಡಿಸಿತು. ಅಧಿಕಾರದಲ್ಲಿದ್ದವರು ಸೈನ್ಯಪಡೆಯ ವಿಮಾನದಲ್ಲಿ ಜಯಪುರ ಉದಯಪುರ ತನಕ ಬಂದು ಹೋದರು. ಜಯಪುರದ ನಾಯಕರಿಗೂ ಜೋಬನೇರದ ತನಕ ಬರಲಿಕ್ಕೆ ವೇಳೆ, ಸೌಜನ್ಯಗಳಿರಲಿಲ್ಲ.

ಸ್ವಯಂಸೇವಕರು ಮನೆಮನೆಗೆ ಹೋಗಿ ತಮ್ಮ ಹುರಿಯಾಳಿಗಾಗಿ, ಪ್ರಚಾರ ಪ್ರಾರಂಭಿಸಿದರು. ಮಕ್ಕಳು, ಭಾವೀ ಭಾರತದ ಪ್ರಜೆಗಳು, ಯಾರಿಗೆ ತಮ್ಮ ಮತ ಕೊಡಬೇಕೆಂಬ ನಿರ್ಧಾರಕ್ಕೆ ಬಾರದೇ ಜನಸಂಘ, ಸ್ವತಂತ್ರ, ಕಾಂಗ್ರೆಸ್ಸಿನ ಬಿಲ್ಲೆ, ಬ್ಯಾಜುಗಳನ್ನು ಧರಿಸಿ ತಿರುಗಾಡಿದರು. ರಾಜಕಾರಣದಿಂದ ಲಾಭ ಮಾಡಿಕೊಳ್ಳಲು ಯತ್ನಿಸುವವರು, ತಾವು ಸೇರಿದ ಪಾರ್ಟಿಯ ಪತಾಕೆಗಳನ್ನು ತಮ್ಮ ಕಟ್ಟಡಗಳ ಮೇಲೆ ಹಾರಿಸಿದರು. ಸಣ್ಣಪುಟ್ಟ ಮೆರವಣಿಗೆಗಳು ಹೊರಟವು. ಮತದಾನದ ದಿನ ಹೆಂಗಳೆಯರು ಬಾವೀಕಟ್ಟೆಯ ಬದಲಾಗಿ ಮತಗಟ್ಟೆಯ ಹತ್ತಿರ ಹರಟೆಗೆ ಕುಳಿತರು. ಪುರುಷರು ಹಬ್ಬಹುಣ್ಣಿಮೆಗಳಿಗಷ್ಟೇ ಮೀಸಲಿಟ್ಟ ರುಮಾಲು ಧರಿಸಿ ಹೊರಬಂದರು. ದೂರದ ಹಳ್ಳಿಗಳಲ್ಲಿ ಒಂಟೆಯ ಮೇಲೆ ಬಂದು ಮತ ಹಾಕಿದರು. ಮತದಾನವೇನೋ ಶಾಂತರೀತಿಯಿಂದ ನಡೆಯಿತು. ಮತಗಳ ಎಣಿಕೆ ಪ್ರಾರಂಭವಾದಾಗ ಮಾತ್ರ ಅಧಿಕಾರದಲ್ಲಿದ್ದವರು ಹೌಹಾರಿದರು. ವಿರೋಧಿಪಕ್ಷದವರು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿಬಂದರು. ಕಾಂಗ್ರೆಸ ಮಂತ್ರಿಮಂಡಲ ಸ್ಥಾಪನೆಯಾಗುವಷ್ಟು ಸದಸ್ಯರು ಆರಿಸಿ ಬರಲಿಲ್ಲ! ರಾಜ್ಯದ ನಾಯಕರು ದಿಲ್ಲಿ ಜಯಪುರ ನಡುವೆ ಓಡಾಡಲಾರಂಭಿಸಿದರು.

ದಿಲ್ಲಿಯ ನಾಯಕರು ಫೋನನ್ನು ಎತ್ತಿಕೊಂಡು, ಗವರ್ನರರನ್ನು ಉದ್ದೇಶಿಸಿ, "ಸಂಸ್ಥಾನಗಳ ವಿಲೀನೀಕರಣವಾದ ನಂತರ ರಾಜಸ್ಥಾನದ ಏಕಮೇವ ನಾಯಕರಾಗಿ ಕಳೆದ ಹದಿನೈದು ವರ್ಷಗಳಿಂದ ಮುಖ್ಯ ಮಂತ್ರಿಯ ಸ್ಥಾನವನ್ನು ಅಲಂಕರಿಸಿದ, ಮಹಾನುಭಾವರಿಗೇ ಮಂತ್ರಿಮಂಡಲ ರಚಿಸಲು ಆಮಂತ್ರಿಸಿದರೆ ಜನಹಿತದ ಜೊತೆಗೆ ಸ್ವಹಿತವನ್ನೂ ಸಾಧಿಸಿಕೊಂಡಂತೆ ಆಗುವುದೆಂದು ನಾನು ಬೇರೆ ಹೇಳಬೇಕಾಗಿಲ್ಲ"ವೆಂದು ಆದೇಶ ಕೊಟ್ಟಿರಬೇಕು, ಅಂತೆಯೇ ಅಲ್ಪ ಸಂಖ್ಯಾಕ ಕಾಂಗ್ರೆಸ ಪಕ್ಷಕ್ಕೆ ಮಂತ್ರಿಮಂಡಲ ರಚಿಸಲು ಆಮಂತ್ರಣ ಕೊಡಲಾಯಿತು, ಇದನ್ನು ವಿರೋಧಿಸಿ, ಪ್ರತಿಪಕ್ಷಗಳೆಲ್ಲ ಆಂದೋಲನ ಪ್ರಾರಂಭಿಸಿದವು.

ವಿರೋಧಿ ಪಕ್ಷದ ನಾಯಕರಿಗೆಲ್ಲ ಹೂಮಾಲೆಗಳನ್ನು ತೊಡಿಸಿ, ದೊಡ್ಡದೊಂದು ಮೆರವಣಿಗೆಯನ್ನು ಮಿರ್ಝಾ ಇಸ್ಮಾಯಿಲ್ ರೋಡ ಮೇಲಿನಿಂದ ಪ್ರಾರಂಭಿಸಿದರು. ಅದರಲ್ಲಿ ಸೇರ್ಪಡೆಯಾದ ಜನರಿಗೆ ಒಳ್ಳೆಯ ಪಾಠ ಕಲಿಸಲು ಸಾಂಗಾನೇರ ಗೇಟಿನ ಹತ್ತಿರ ಲಾಠಿಚಾರ್ಜ್ ಮಾಡಲು ಪೋಲಿಸಿನವರಿಗೆ ಆಜ್ಞೆ ಕೊಡಲಾಯಿತು. ರೊಚ್ಚಿಗೆದ್ದ ಪ್ರದರ್ಶನಕಾರರು ಸರಕಾರಿ ವಸ್ತುಸಂಗ್ರಹಾಲಯದ ಮೇಲೆ ಕಲ್ಲುಗಳನ್ನು ತೂರಿ ಗಾಜುಗಳನ್ನು ಒಡೆದು ಹಾಕಿದರು. ಹಲವರಿಗೆ ಚಿಕ್ಕ ಪುಟ್ಟ ಗಾಯಗಳಾಗಿ ಪ್ರಥಮ ಚಿಕಿತ್ಸೆ ಮಾಡಿ ಬಿಡುಗಡೆ ಮಾಡಿದರು. ಇದರಿಂದ ವಿರೋಧಿ ಪಕ್ಷದವರು ಎದೆಗುಂದದೇ ಇನ್ನೂ ದೊಡ್ಡ ಪ್ರಮಾಣದಲ್ಲಿ ಮೆರವಣಿಗೆಯನ್ನು ಸಂಘಟಿಸಿದರು. ಅಧಿಕಾರದಲ್ಲಿದ್ದ ಪಕ್ಷ, ವಿರೋಧಿಗಳ ಗೋಣು ಮುರಿಯುವುದರ ಸಲುವಾಗಿ ಪೋಲಿಸರಿಗೆ ಗುಂಡು ಹಾರಿಸಲು ಅಪ್ಪಣೆ ಕೊಟ್ಟಿತ್ತು. ನಾಲ್ಕಾರು ಜನ ನಿರಪರಾಧಿಗಳು ಪೋಲಿಸರ ಗುಂಡಿಗೆ ಆಹುತಿಯಾದರು. ಜೋಬನೇರಿನ ವ್ಯಾಪಾರಿಯೊಬ್ಬ ಮಾಲು ಖರೀದಿಗೆ ಹೋದವನು ಗುಂಡು ತಗಲಿ ಮೃತಪಟ್ಟ. ನಗರದಲ್ಲಿ ಹಿಂಸಾಚಾರದ ಭಯವಿದೆಯೆಂದು ಕರ್ಫ್ಯೂ ಹೇರಲಾಯಿತು. ಅಂಗಡಿಗಳೆಲ್ಲ ಮುಚ್ಚಿದವು. ವಾಹನಗಳ ಓಡಾಟವೂ ನಿಂತಿತು. ಎಲ್ಲಿ ನೋಡಿದರೂ ಕಾದಿಟ್ಟ ಪೋಲಿಸಪಡೆಯವರು ಬಂದೂಕ ಧಾರಿಗಳಾಗಿ ಗಸ್ತಿ ತಿರುಗುತ್ತಿದ್ದರು. ವಾರಾಂತ್ಯಕ್ಕೆ ಜಯಪುರಕ್ಕೆ ಬಂದಾಗ ಟ್ರೇನು ಇಳಿದೊಡನೆ ಪೋಲಿಸರು ತಡೆದು ನಿಲ್ಲಿಸಿದರು. ರೇಲ್ವೆ ಸ್ಟೇಶನ್ನಿನ ಹೊರಗೆ ದೊಡ್ಡ ಜನಸಂದಣಿಯೇ ನೆರೆದಿತ್ತು. ಪ್ರತಿಯೊಬ್ಬರ ಹೆಸರು, ವಿಳಾಸ ಬರೆದುಕೊಂಡು ಎಲ್ಲಿಗೆ ಹೋಗಬೇಕು ಎಂದು ವಿಚಾರಿಸಿದರು. ಪೋಲಿಸ ವ್ಯಾನುಗಳಲ್ಲಿ ನಗರದ ವಿವಿಧ ವಿಭಾಗಗಳಿಗೆ ಪ್ರಯಾಣಿಕರನ್ನು ತಲುಪಿಸಲಾಗುವುದು ಎಂದು ಯಾರೋ ಹೇಳಿದರು. ಸಂಜೆಗತ್ತಲಾಗುತ್ತ ಬಂದಿದ್ದರೂ ಯಾವ ಪಿಳ್ಳೆಗೂ ನಗರದ ಒಳಗೆ ಬಿಡಲಾಗಲಿಲ್ಲ.

ಮಕ್ಕಳೆಲ್ಲ ಹಸಿವೆಯಿಂದ ರೋದಿಸುತ್ತಿದ್ದವು. ಜಯಪುರದ ಸ್ಟೇಶನ್ನಿನಲ್ಲಿ ಇಳಿದ ನನಗೆ ಇಷ್ಟೆಲ್ಲ ಕಾದು ಊರೊಳಗೆ ಪ್ರವೇಶ ಕೊಡದಿದ್ದರೆ ಏನು ಮಾಡುವುದೆಂಬ ಸಮಸ್ಯೆ ಕಾಡಿತು. ತಿರುಗಿ ಜೋಬನೇರಕ್ಕೆ ಹೋಗದಿದ್ದರೆ ಅನ್ನ ನೀರು ಇಲ್ಲದೇ ರಾತ್ರಿಯಿಡೀ ಸ್ಟೇಶನ್ನಿನಲ್ಲಿ ಬಿದ್ದಿರಬೇಕಾದೀತು ಎಂದು ಅಜಮೇರ ಪ್ಯಾಸೆಂಜರ ಬಂದೊಡನೆ ಹಿಂತಿರುಗಿಬಿಟ್ಟೆ. ಉಳಿದವರೂ ಹಿಂತಿರುಗಿದರು.

ದಿನಗಳೆದಂತೆ ಒಂದೆರಡು ತಾಸುಗಳ ಕರ್ಫ್ಯೂ ಸಡಿಲಿಸಿದರು. ಎಂದಿನಂತೆ ಗೋಳಿಬಾರದ ಬಗ್ಗೆ ವಿಚಾರಣೆ ನಡೆಸಲು ಒಂದು ಮಂಡಳಿ ನೇಮಿಸಿದರು. ನಿರೀಕ್ಷಿಸಿದಂತೆ ಪೋಲಿಸರು ಸ್ವರಕ್ಷಣೆಗಾಗಿ ಗೋಳೀಬಾರು ಮಾಡಬೇಕಾಯಿತು, ಎಂದು ತೀರ್ಪನ್ನು ಕೊಡಲಾಯಿತು. ಮುಖ್ಯಮಂತ್ರಿಗಳು ತಮ್ಮದೇ ಮಂತ್ರಿಮಂಡಲ ಆರಿಸಿ ತಮ್ಮ ಪಕ್ಷಕ್ಕೆ ಬಹುಮತ ದೊರೆಯುವಂತೆ ಬೃಹದ್ ಯೋಜನೆಯೊಂದನ್ನು ರೂಪಿಸಿದರು. ವಿರೋಧಿ ಸದಸ್ಯರಿಗೆ (ಹೆಚ್ಚಾಗಿ ಸ್ವತಂತ್ರವಾಗಿ ನಿಂತವರು, ಕೆಲವರು ವಿರೋಧಿ ಪಕ್ಷದವರು) ಅಧಿಕಾರದ ಪ್ರಲೋಭನ ತೋರಿಸಿ ತಮ್ಮತ್ತ ಸೆಳೆದುಕೊಳ್ಳಲಾರಂಭಿಸಿದರು. ಹೀಗಾಗಿ ಬಲುಬೇಗ ಅವರ ಪಕ್ಷಕ್ಕೆ ಬಹುಮತ ದೊರೆಯಿತು. ಈ ಹೊಸ ಸದಸ್ಯರೂ ಮಂತ್ರಿ ಇಲ್ಲವೇ ಉಪಮಂತ್ರಿಗಳಾಗಿ ಭಾರತದಲ್ಲಿಯೇ ವಿಸ್ತಾರವಾದ ೪೨ ಸದಸ್ಯರ ಮಂತ್ರಿಮಂಡಲ ರಾಜಸ್ಥಾನದಲ್ಲಿ ಕಾಣಿಸಿಕೊಂಡಿತು. ಉಣ್ಣೆಯ ಮಂತ್ರಿ, ಹಾಲಿನ ಮಂತ್ರಿ, ಸ್ಟೇಶನರಿ ಸಾಮಾನುಗಳ ಮಂತ್ರಿಗಳು ನಿರ್ಮಾಣವಾದರು. "ಪಕ್ಷಾಂತರದ ಜನಕ"ನೆಂಬ ಬಿರುದನ್ನು ಈ ಮಹಾನುಭಾವ ಮುಖ್ಯಮಂತ್ರಿಗಳಿಗೆ ಜನತೆ ಧಾರಾಳವಾಗಿ ಕೊಟ್ಟರು. ಇಲ್ಲಿಂದಲೇ ಪಕ್ಷಾಂತರದ ಪಿಡುಗು ಇಡೀ ಭಾರತಕ್ಕೆ ಹಬ್ಬಿತು.

ಮುಖ್ಯಮಂತ್ರಿಗಳು ಉದಯಪುರದವರಾದ್ದರಿಂದ ಆ ಪ್ರದೇಶದ ಬೆಳವಣಿಗೆ ತೀವ್ರವಾಗಿ ಸಾಗಿತು. ಉದ್ದಿಮೆದಾರರಿಗೆ ಹೊಸ ಸವಲತ್ತುಗಳು ದೊರೆತವು. ನ್ಯೂಝೀಲಂಡದ ಸಹಾಯದಿಂದ ಹಾಲಿನ ಕೇಂದ್ರವನ್ನು ಅಲ್ಲಿಯೇ ತೆರೆದರು. ಅಧಿಕಾರಿಗಳ ದ್ರಾಕ್ಷಿಯ ತೋಟಗಳು ರೂಪಿತಗೊಂಡವು. ಉದಯಪುರದಲ್ಲಿ ಜೋಬನೇರಕ್ಕಿಂತ ವಿದ್ಯಾರ್ಥಿ ಸಂಪುಟಗಳ ಪಿಡುಗು ಹೆಚ್ಚು. ವಿದ್ಯಾರ್ಥಿಗಳ ಅಶಾಂತಿಯನ್ನು ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡರು. ಸಂಪಿಗೆ ಕಾವೇರತೊಡಗಿದಾಗ ವಿದ್ಯಾರ್ಥಿಗಳು ಮುಖ್ಯಮಂತ್ರಿಗಳ ದ್ರಾಕ್ಷಿ ತೋಟವನ್ನು ಹಾಳುಗೆಡವಿದರಲ್ಲದೇ ನ್ಯೂಝೀಲ್ಯಾಂಡದಿಂದ ದಾನವಾಗಿ ಪಡೆದ ಹಾಲು, ಹೈನಿನ ಯಂತ್ರೋಪಕರಣಗಳನ್ನು ಧ್ವಂಸ ಮಾಡಿದರು.

ರಾಷ್ಟ್ರದ ಸಂರಕ್ಷಣಾ ನಿಧಿಗೆ ಹಿಂದಿನ ಪ್ರಧಾನ ಮಂತ್ರಿಗಳ ತೂಕದಷ್ಟು ಬಂಗಾರವನ್ನು ರಾಜಸ್ಥಾನಿ ಪ್ರಜೆಗಳು ಕೊಟ್ಟಿದ್ದರು. ಅದನ್ನು ರಾಜಸ್ಥಾನ ಸರಕಾರದ ರಕ್ಷಣೆಯಲ್ಲಿ ಇಟ್ಟಿದ್ದರೂ ಕೆಲಕಾಲದ ನಂತರ ಅದು ಮಾಯವಾಗಿದೆ! ಎಂಬ ಸಮಾಚಾರ ಹಬ್ಬಿತು. ಈ ಘಟನೆಯನ್ನು ನಿಂದಿಸಿ ದೇಶದ ಮೂಲೆ ಮೂಲೆಗಳಿಂದ ಖಂಡನೆ ಮಾತುಗಳು ಬರಲಾರಂಭಿಸಿದ್ದರಿಂದ ಪ್ರತಿಶೋಧಕ್ಕಾಗಿ ಸಮಿತಿಯೊಂದನ್ನು ನೇಮಿಸಲಾಗಿದೆ, ಎಂದು ಸರಕಾರಿ ವಲಯಗಳು ಸಾರಿದವು. ಇನ್ನೊಂದು ದಿನ ಹೊಲವೊಂದರಲ್ಲಿ ಬಂಗಾರದ ಪತ್ತೆಯಾಗಿದೆ ಎಂದು ವರ್ತಮಾನಪತ್ರದಲ್ಲಿ ಸುದ್ದಿ ಬಂದರೂ ನಿಜವಾಗಿ ಆ ಧನರಾಶಿ ಎಲ್ಲಿಗೆ ಮಾಯವಾಯಿತೆಂದು ಇಂದಿಗೂ ಸಮಸ್ಯೆಯಾಗಿಯೇ ಉಳಿದಿದೆ.

೩೦. ವೈದ್ಯಕೀಯ ಸೌಲಭ್ಯಗಳು

ಆರು ವರ್ಷದವಳಿರುವಾಗಲೇ ತಾಯಿಯನ್ನು ಕಳೆದುಕೊಂಡವಳನ್ನು ಮಡದಿ ಮಾಡಿಕೊಳ್ಳುವುದರಿಂದ ದಿನಕ್ಕೊಂದು ಸಲ ತೌರುಮನೆಗೆ ಹೋಗುತ್ತೇನೆಂಬ ಬೆದರಿಕೆ ಕಡಿಮೆಯಾದಂತೆ ಮಾವನ ಮನೆಗೆ, ಹಬ್ಬಹುಣ್ಣಿಮೆಗಳಿಗೆ ಆಮಂತ್ರಣ ಬರುವುದೂ ಕಡಿಮೆಯಾಗುತ್ತದೆ! ಎಂದು ವಿವಾಹವಾದ ಒಂದು ವರ್ಷದಲ್ಲಾಗಲೇ ಕಂಡಿದ್ದೆ. ಆದರೆ-ಆತಿಥ್ಯಗಳಿಗೆ ಅಲ್ಲವಾದರೂ ಮಗಳ ಚೊಚ್ಚಲು ಬಾಣಂತನದ ಸಂಭ್ರಮ ಕಣ್ಣು ತುಂಬ ನೋಡಲಿಕ್ಕಾದರೂ ಅತ್ತೆ ಬದುಕಿದ್ದರೆ ಚೆನ್ನಾಗಿರುತ್ತಿತ್ತು, ಎಂದು ಅನಿಸಿತು. ವೈದ್ಯಕೀಯ ಸೌಲಭ್ಯಗಳು ಚೆನ್ನಾಗಿರುವ ಜಯಪುರದಲ್ಲಿಯೇ ಹೆರಿಗೆಯ ವ್ಯವಸ್ಥೆ ಮಾಡಿ ಸಹಾಯಕ್ಕೆ ನನ್ನ ತಾಯಿಯವರನ್ನು ಕರೆಯುವುದೆಂದು ನಿರ್ಧರಿಸಲಾಗಿತ್ತು. ಅವರನ್ನು ಕರೆದುಕೊಂಡು ಬಂದರೆ ಊರನ್ನೂ ನೋಡಿದಂತೆ ಆಗುವುದೆಂದು ಸೇವಾನಿವೃತ್ತ ಮಾವನವರಿಗೆ ಬರೆದರೆ, ಅವರು ಮಗಳ ಬಾಣಂತನ ತಮ್ಮಿಂದ ಮಾಡಿಸಲು ಆಗಲಿಲ್ಲವೆಂದು ಕಳವಳಪಟ್ಟು, ಲೋಕಾರೋಪದಿಂದ ಮುಕ್ತನಾಗಲು ಹೀಗೆ ಮಾಡಿದರೆ ಹೇಗೆ? ಹಾಗೆ ಮಾಡಿದರೆ ಹೇಗೆ? ಎಂದು ಪತ್ರ ಬರೆಯುತ್ತ ಮಗಳನ್ನು ವಿಚಾರಿಸುವುದರಲ್ಲಿಯೇ ದಿನಗಳನ್ನು ಕಳೆದರು. ನಮ್ಮವರು ಎನ್ನುವ ಯಾರೂ ಇಲ್ಲದ ನಗರದಲ್ಲಿ ಸಾಧ್ಯವಿದ್ದಷ್ಟು ಪತ್ನಿಗೆ ಉಪಚಾರ ಮಾಡಿ ಸಿಹಿ ಮಾಡಿ ಬಡಿಸಿ, ಹರಸಿದೆ. ಹತ್ತಾರು ಛಾಯಾ ಚಿತ್ರಗಳನ್ನು ತೆಗೆದೆ. ನವಮಾಸಗಳು ತುಂಬುತ್ತ ಬಂದರೂ ಜಯಪುರದಲ್ಲಿ ಒಂಟಿಯಾಗಿದ್ದ ಮಗಳ ಹತ್ತರ ಬರುವುದರ ಬದಲಾಗಿ, ಬಾಣಂತನಕ್ಕೆ ದಿಲ್ಲಿಗೆ ಚಿಕ್ಕಮ್ಮನ ಮನೆಗೆ ಹೋದರೆ ಹೇಗೆ? ವಿಮಾನದಿಂದ ಬೆಂಗಳೂರಿಗೆ ಅಕ್ಕನ ಮನೆಗೆ ಹೋಗಬಹುದಲ್ಲ! ಎಂದು ಪತ್ರ ಬರೆಯುತ್ತಲೇ ಇದ್ದರು ಮಾವನವರು! ಆತ್ಮೀಯರ ಉಪಚಾರದಲ್ಲಿ ಮೈಮರೆಯಬೇಕಾದವಳು ಯಾರಿಲ್ಲದೇ ಅಪರಿಚಿತರ ಊರಲ್ಲಿ ಹಡೆಯುವ ಪ್ರಸಂಗ ಬಂದಿತಲ್ಲ ಎಂದು ನನ್ನಾಕೆ ಕಣ್ಣೀರಿಟ್ಟಳು. ಆದರೆ ಮನೆ ತುಂಬ ಜನ ಬಂದ ಹೊರತು ಮಗು ಧರೆಗೆ ಇಳಿಯಲು ನಿರಾಕರಿಸಿದ್ದರಿಂದ ಕೊನೆಗೊಮ್ಮೆ ತಂದೆ, ಅತ್ತೆ, ನಾದಿನಿಯರು ಬಂದಾಗಲೇ ನೆಮ್ಮದಿಯ ಉಸಿರು ಬಿಡುವಂತಾಯಿತು.

ಝುನಾನಾ ಆಸ್ಪತ್ರೆಯಲ್ಲಿ ಎಲ್ಲ ಸೌಕರ್ಯಗಳಿದ್ದರೂ ಅಲ್ಲಿಗೆ ಪ್ರವೇಶ ಸಿಗಬೇಕಾದರೆ ಮೇಲಧಿಕಾರಿಯ 'ಪೇಶಂಟ್' ಆದ ಹೊರತು ಸಾಧ್ಯವಿಲ್ಲವೆಂದು ಅನುಭವಿಕರೊಬ್ಬರು ಸೂಚಿಸಿದ್ದರಿಂದ ಖಾಸಗಿಯಾಗಿ ಅವರಿಂದ ಪರೀಕ್ಷೆ ಮಾಡಿಸಿ, ಫೀ ಕೊಟ್ಟು ಅವರು ಬರೆದುಕೊಟ್ಟ ಔಷಧಿ ತರಲು ಅಂಗಡಿಗೆ ಹೋದಾಗ ಆ ವ್ಯಾಪಾರಿ ಹೆಚ್ಚಿನ ಆದರ ತೋರಿಸಿ, ಕೂಡ್ರಿಸಿ, ತಂಪಾದ ಕೋಕೋಕೋಲಾ ಕೊಡಿಸಿದ. ಎಲ್ಲಿಂದಲೋ ಎರಡು ಬಾಟ್ಲಿ ಔಷಧ ತರಿಸಿಕೊಟ್ಟ. ಒಟ್ಟು ನಾಲವತ್ತೊಂಭತ್ತು ರೂಪಾಯಿ ಬಿಲ್ಲಾದಾಗ ಯಾವದೋ ವಿದೇಶೀಯ ಪರಿಣಾಮಕಾರಿಯಾದ ಔಷಧವಿರಬೇಕೆಂದು ಗೆಲುವಾಗಿದ್ದೆ. ಅವುಗಳು 'ಡುಫಿಲ್' ಲ್ಯಾಬರೇಟರಿಯಲ್ಲಿ ತಯಾರಾದವು ಎಂದು ಬರೆದ ಹೆಸರು ಪರಿಚಿತವೆಂದು ಅನಿಸಿದ್ದರಿಂದ ಯಾವ ದೇಶದಲ್ಲಿದೆ? ಎಂದು ಸಹಜವಾಗಿಯೇ ನೋಡಿದೆ. ಅದು ಜಯಪುರದಲ್ಲಿಯೇ ಸಿದ್ಧವಾದದ್ದು, ಎಂದು ತಿಳಿದು ವಿಸ್ಮಯವಾಯಿತು. ನಮ್ಮ ನೆರೆ ಮನೆಯ "ಬೂಚು" ಡಾಕ್ಟರನ ಪ್ರಯೋಗಾಲಯದ ಹೆಸರೇ ಅದು! ಎಂದು ನೆನಪಾದಾಗ ಕಳವಳವೂ ಆಯಿತು. ಹೆಸರಾಂತ ಕಂಪನಿಗಳ ಮಾತ್ರೆಗಳನ್ನು ಪುಡಿಮಾಡಿ ಮಾರಿ ಕೊಳ್ಳೆ ಹೊಡೆಯುತ್ತಾನೆಂದು ಪರಿಸರದವರಿಗೆಲ್ಲ ಪರಿಚಯದವನಾಗಿದ್ದರಿಂದ ಉನ್ನತ ಅಧಿಕಾರದಲ್ಲಿ ಇದ್ದ ಡಾಕ್ಟರರು ಇಂತಹ ಕ್ಷುದ್ರ ಔಷಧವನ್ನೇಕೆ ಬರೆದುಕೊಟ್ಟರು? ಎಂದು ಪಕ್ಕದವರಲ್ಲಿ ವಿಚಾರಿಸಿದಾಗ, ಆ ಡಾಕ್ಟರರೂ ಈ ಪ್ರಯೋಗಾಲಯದ ಲಾಭದ ಪಾಲುದಾರರೆಂದೂ, ಹೆಚ್ಚಾಗಿ ಈ ಔಷಧಗಳನ್ನೇ ಪೇಷಂಟುಗಳಿಗೆ ಬರೆದುಕೊಡುವುದು ವಾಡಿಕೆ ಎಂದೂ ತಿಳಿಸಿದರು. ಅಂಗಡಿಕಾರನಿಗೂ ಕೈ ತುಂಬ ಲಾಭ ಸಿಗುತ್ತಿದ್ದರಿಂದ ಗಿರಾಕಿಗಳಿಗೆ ಕೋಕೋಕೋಲಾದ ಸನ್ಮಾನವೆಂದು ಈಗ ಹೊಳೆಯಿತು. ಹೆಚ್ಚಿನ ಬೆಲೆಯ ಔಷಧಗಳಿಂದ ಏನೂ ಪ್ರಯೋಜನವಾಗಲಿಲ್ಲವೆಂದು ಡಾಕ್ಟರಣಿಯ ಹತ್ತಿರ ದೂರಿಕೊಂಡಾಗ "ಅದಕ್ಕಾಗಿ ಏಕೆ ತಲೆ ಕೆಡಿಸಿಕೊಳ್ಳಬೇಕು? ಸರಕಾರ ನಿನಗೆ ಈ ಹಣ ಕೊಟ್ಟೇ ಕೊಡುವದಲ್ಲ" ಎಂದು ಕಡಿಮೆ ಬೆಲೆಯ ಪರಿಣಾಮಕಾರಿ ಔಷಧಿಗಳನ್ನು ಬರೆದುಕೊಟ್ಟರು. ಮೊದಲು ತಂದ ಔಷಧಗಳು ತೆಗೆದುಕೊಳ್ಳಲೂ ಆಗದೇ, ಒಗೆಯಲೂ ಮನಸ್ಸು ಬಾರದೇ ನಾವಲ್ಲಿ ಇದ್ದಷ್ಟು ಕಾಲ ಅಣಕಿಸುತ್ತ ಕಪಾಟಿನಲ್ಲೆ ಕುಳಿತಿದ್ದವು.

ರಾತ್ರೆಗೆ ನೋವು ಕಾಣಿಸಿಕೊಂಡಾಗ ಆಸ್ಪತ್ರೆಗೆ ಸಾಗಿಸಿದೆ. ಪುರುಷರಿಗೆ ಅಲ್ಲಿ ಒಳಗೆ ಪ್ರವೇಶವಿಲ್ಲದ್ದರಿಂದ ಅಕ್ಕಳನ್ನು ಪತ್ನಿಯೊಂದಿಗೆ ಒಳಗಡೆ ಕಳಿಸಿದೆ. ನಿದ್ರೆಯೊಡನೆ ಹೋರಾಡಲಾರದ ಅಕ್ಕ, ಹೋದ ಒಂದು ತಾಸಿನ ಒಳಗೇ ನರಳುವ ಗರ್ಭಿಣಿಯರ ನಡುವೆ ಖಾಲಿಯಿದ್ದ ಮಂಚದ ಮೇಲೆ ಮಲಗಿ ಗೊರಕೆ ಹೊಡೆಯಲಾರಂಭಿಸಿದಳು! ರಾತ್ರೆ ಡ್ಯೂಟಿಯ ನರ್ಸ ಉಳಿದ ಗರ್ಭಿಣಿಯರಿಗೆ ಕೊಟ್ಟ ಔಷಧವನ್ನು ಅಕ್ಕನಿಗೆ ಕೊಡಲು ಬಂದಾಗ ಹೆರಿಗೆ ನೋವಿನಲ್ಲೂ ಸುಖನಿದ್ರೆ ಮಾಡುತ್ತಿರುವವಳನ್ನು ನೋಡಿ

ಆಶ್ಚರ್ಯವಾಗಿರಬೇಕು! ನಿಜಸಂಗತಿ ತಿಳಿದಾಗ ಅವಳಿಗೆ ನಿಂತಲ್ಲಿಯೇ ನಿದ್ರಿಸುವಂತೆ ಮಾಡಿದಳು.

ಮಗು ಮಾತ್ರ ಉದರದೊಳಗಿನ ಬೆಚ್ಚಗಿನ ಸ್ಥಳವನ್ನು ಬಿಟ್ಟು ಬರಲು ಮರುದಿನ ಮಧ್ಯಾಹ್ನದವರೆಗೂ ಒಪ್ಪಲಿಲ್ಲ! ಕೊನೆಗೊಮ್ಮೆ ಭೂಮಿಗಿಳಿದ, ಚೀರುತ್ತಿದ್ದ ಮಗುವನ್ನು "ನೋಡು ನಿನ್ನ ಸುಪುತ್ರನನ್ನು" ಎಂದಾಗ ತೇಕುತ್ತಿದ್ದ ತಾಯಿ ಎಲ್ಲ ನೋವನ್ನು ಮರೆತುಬಿಟ್ಟಳಂತೆ. ತನ್ನ ಫೀ ಮತ್ತು ಔಷಧದಿಂದ ಬರುವ ಲಾಭದಿಂದ ತೃಪ್ತಳಾದ ಡಾಕ್ಟರಣಿ, 'ಕಾಟೇಜ್' ಒಂದನ್ನು ದಯಪಾಲಿಸಿದ್ದರು. ಆದರೆ ಮೂರನೇ ದಿನವೇ ಮಂತ್ರಿಗಳ ಸಂಬಂಧಿಕರೊಬ್ಬರು ಬರುವವರಿದ್ದುದರಿಂದ ನಿರೀಕ್ಷಿಸಿದ್ದಕ್ಕಿಂತ ಮೊದಲೇ ತೆರವು ಮಾಡುವಂತೆ ಮಾಡಿದರು! ನಂತರ ನಾವೆಲ್ಲ ಜೋಬನೇರಕ್ಕೆ ಹೋದೆವು. ಮರುಭೂಮಿಯಲ್ಲಿ, ಮಲೆನಾಡಿನ ಬಾಣಂತಿಯ ಎಣ್ಣೆ - ಸ್ನಾನಗಳನ್ನು ತಪ್ಪದೇ ಕೈಕೊಳ್ಳಲು ಯತ್ನಿಸಿ ಎಣ್ಣೆ ತಿಕ್ಕಲು ಒಬ್ಬಳು, ಬಟ್ಟೆ ಒಗೆಯಲು ಇನ್ನೊಬ್ಬಳೆಂದು ನೇಮಿಸಿಕೊಂಡು, ಬೋದುವಿಗೆ ಹೋಗುವಾಗ ಬರುವಾಗ ಡ್ರಮ್ಮಿನಲ್ಲಿ ನೀರು ಸುರುವವಂತೆ ತಿಳಿಸಿದೆವು. ಮಗುವಿಗೆ ನೀವು ಹೇಗೆ ನೀರು ಎರೆಯುತ್ತೀರಿ? ಎಂದು ಸ್ಥಳೀಯರನ್ನು ವಿಚಾರಿಸಿದಾಗ ಸಾಸಿವೆ ಇಲ್ಲವೆ "ತಿಲ್ಲಿ" (ಎಳ್ಳು) ಯ ಎಣ್ಣೆಯನ್ನು ಮೈಯಲ್ಲಿ ಇಂಗಿಸಿ, ಊಟ ಮಾಡುವ 'ಥಾಲಿ'ಯಲ್ಲಿ ನೀರಿಟ್ಟು ಸೂರ್ಯಪ್ರಕಾಶದಲ್ಲಿ ಕಾಸಿ ಅದರಲ್ಲಿಯೇ ಮಗುವನ್ನು ಅದ್ದಿ ತೆಗೆಯುತ್ತಾರೆಂದು ಗೊತ್ತಾಯಿತು. ಇಂಥವರಿಗೆ ಹತ್ತು ಕುಟುಂಬಗಳಿಗೆ ಒಂದು ತಿಂಗಳಿಗೆ ಸಾಕಾಗುವಷ್ಟು ನೀರನ್ನು ಮಗುವಿನ ಒಂದೇ ಸ್ನಾನಕ್ಕೆ ಬಳಸುವುದನ್ನು ನೋಡಿ ಅತ್ಯಾಶ್ಚರ್ಯ. ಇಷ್ಟೊಂದು ವಿಪುಲವಾದ ನೀರನ್ನು ಜನ್ಮದಲ್ಲಿಯೇ ನೋಡದ ಕೆಲಸದವಳು ನಮ್ಮ ಬಟ್ಟೆಗಳೊಂದಿಗೆ ತನ್ನ ಓಢಣಿಯನ್ನೂ ಒಗೆದುಕೊಳ್ಳಲಾರಂಭಿಸಿದಳು! ಬಾಣಂತಿಗೆ ನೀರೆರೆಯುವಾಗಲಂತೂ ಒಂದೇ ಸಮನೆ ರಸ್ತೆಯ ಪಕ್ಕದ ಗಟಾರಿನಲ್ಲಿ ಹರಿಯುತ್ತಿದ್ದ ನೀರನ್ನು ದಾರಿಹೋಕರು ನೋಡಿ ಈ ಜಲಧಾರೆ ಎಲ್ಲಿಂದ ಬರುತ್ತದೆಂದು ವಿಸ್ಮಯದಿಂದ ತಲೆಯೆತ್ತಿ ನಮ್ಮ ಮನೆಯತ್ತ ನೋಡುತ್ತಿದ್ದರು. ನಮ್ಮ ನೀರಿನ ದುಂದುಗಾರಿಕೆಯನ್ನು ಜೋಬನೇರದವರು ಒಂದು ದಶಕದವರೆಗಾದರೂ ನೆನಪಿಡದೇ ಇರಲಿಕ್ಕಿಲ್ಲ.

ಮಗು ವಿಕಾಸನಿಗೆ ಸ್ವಲ್ಪ ಅನಾರೋಗ್ಯವಾದರೂ ತಾಯಿಯ ಕಳವಳ ಹೇಳತೀರದು. ಊರಿನಲ್ಲಿ ಯಾರದೋ ಮಗುವಿಗೆ ಮೈಲಿಯಾಗಿದೆಯೆಂಬ ಸುದ್ದಿಯನ್ನು ಕೆಲಸದವಳು ತಂದಳು. ತನ್ನ ಮಗುವಿಗೂ ಬಂದರೆ ಏನು ಗತಿ? ಎಂದು ಕಣ್ಣು ತುಂಬಿಬಂದವು. ಹೀಗಿದ್ದಾಗ ಒಂದು ದಿನ ವಿಕಾಸ, ನುಂಗಿದ ಆಹಾರವನ್ನು ಜೀರ್ಣಿಸಿದರೂ ಕೆಳಗೆ ಇಳಿಸಲು ನಿರಾಕರಿಸಿದ. ಮರುದಿನವೂ ತನ್ನ ಸಂಪನ್ನು

ಮುಂದುವರಿಸಿದ! ಅಂದು ರವಿವಾರವಾದ್ದರಿಂದ ಡಾಕ್ಟರರೊಬ್ಬರ ಶೋಧನೆಗೆ ರಿಕ್ಷಾ ಮಾಡಿಕೊಂಡು ಹೊರಟೆವು. ತಾಯಿ, ಮಗುವಿನ ಬಗ್ಗೆ ಕಾತರತೆಯಿಂದ ಕುಳಿತಿದ್ದರೂ ಅವನು, ಬಹಳ ಸಂತೋಷದಿಂದ ನಗರ ಪರ್ಯಟನಕ್ಕೆ ಹೊರಟಿದ್ದ! ಮೂರು ತಾಸು ಜಯಪುರದ ಮುಖ್ಯ ಮಾರ್ಗ ಬೀದಿಗಳಲ್ಲಿ ಸುತ್ತಾಡಿದರೂ ಅಂಗಡಿಯನ್ನು ತೆರೆದ ಒಬ್ಬ ಡಾಕ್ಟರನೂ ಸಿಗಲಿಲ್ಲ! ಚಿಂತೆಯಿಂದ ಹಣ್ಣಾದ ಹೆಂಡತಿಗೆ ಮನೆಗೆ ಹಿಂತಿರುಗಿದೊಡನೆ ಬೆಚ್ಚಗಿನ ಹಾಲಿಗೆ ಹೆಚ್ಚಿಗೆ ಸಕ್ಕರೆ ಹಾಕಿ ಕುಡಿಸಲು ಹೇಳಿದೆ. ಸರಿ, ಸುರುಸುರು ಆತ ಹೀರುತ್ತಿದ್ದಂತೆ ಎರಡು ದಿನದ ಸಂಪನ್ನು ಮುರಿದು ಹಿಂದಿನದೆಲ್ಲ ಇಳಿಸಲಾರಂಭಿಸಿದ! ಇನ್ನೊಂದು ಸಲ ಮಗನಿಗೆ, ಮೇಲಿಂದ ಮೇಲೆ ನೆಗಡಿ - ಶೀತವಾಗುತ್ತಿದ್ದರಿಂದ ಶಿಶುತಜ್ಞರೊಬ್ಬರ ಪತ್ತೆ ಹಚ್ಚಿ ಒಂದು ದಿನ ಬೆಳಿಗ್ಗೆಯೇ ನೆಗಡಿಯಿಂದ ತೊಂದರೆ ಪಡುತ್ತಿದ್ದ ಮಗುವಿನೊಂದಿಗೆ ಡಾಕ್ಟರರ ಮನೆಗೆ ಹೋದೆವು. ಇನ್ನೂ ಅನೇಕ ಜನ ಅಲ್ಲಿ ಬಂದಿದ್ದರು. ವಿಚಾರಿಸಿದಾಗೊಮ್ಮೆ ಡಾಕ್ಟರರು ಸ್ನಾನಕ್ಕೆ ಹೋಗಿದ್ದಾರೆ, ಪೂಜೆಯಲ್ಲಿದ್ದಾರೆ, ನಾಶ್ತಾ ತೆಗೆದು ಕೊಳ್ಳುತ್ತಿದ್ದಾರೆ ಎಂಬ ಉತ್ತರ ಬರುತ್ತಿತ್ತೇ ವಿನಃ ಡಾಕ್ಟರರು ಬರಲಿಲ್ಲ. ಏಳು ಗಂಟೆಯಿಂದ ಅವರು ಪೇಶಂಟರನ್ನು ನೋಡುವರೆಂದು ಬೋರ್ಡು ಸೂಚಿಸಿದರೂ ಎಂಟೂವರೆಯಾದರೂ ಬಂದಿರಲಿಲ್ಲ. ಸೌಭಾಗ್ಯವತಿಯ ತಾಳ್ಮೆ ಮುಗಿಯಿತು. “ಚಿಕಿತ್ಸೆಗೆ ತಂದ ರೋಗಿಗೆ ಏನಾದರೂ ಆದ ನಂತರವೇ ಡಾಕ್ಟರರು ಹೊರಗೆ ಬರುತ್ತಾರೆಂದು ಕಾಣುತ್ತದೆ” ಎಂದು ತೀಕ್ಷ್ಣವಾಗಿ ನುಡಿದು ಹೊರಟೇ ಬಿಟ್ಟಳು. ನಿಜವಾಗಿ ಹೇಳಬೇಕೆಂದರೆ ಉಳಿದ ಮಕ್ಕಳೊಂದಿಗೆ ಹೋಲಿಸಿದಾಗ, ನಮ್ಮದು ಆರೋಗ್ಯವಾಗಿಯೇ ಇತ್ತು. ಮನೆಗೆ ಬಂದು ವಿಕಾಸನನ್ನು ಎತ್ತಿಕೊಂಡು ಬೇರೆ ಡಾಕ್ಟರರನ್ನು ಹುಡುಕಿಕೊಂಡು ಹೊರಟೆ. “ಡಾ. ಮಾಥುರ, ಮಕ್ಕಳ ರೋಗಗಳ ತಜ್ಞ” ಎಂದು ಬೋರ್ಡು ತೂಗು ಹಾಕಿದಲ್ಲಿ ಹೋದೆ. ಒಂದೇ ರೂಪಾಯಿಯಲ್ಲಿ ಮಗುವನ್ನು ಪರೀಕ್ಷಿಸಿ ಔಷಧ ಕೊಟ್ಟು ಹತ್ತೇ ನಿಮಿಷದಲ್ಲಿ ಬಿಡುಗಡೆ ಮಾಡಿದ್ದರಿಂದ ಒಳ್ಳೆಯ ಡಾಕ್ಟರ್ ಎಂದುಕೊಂಡೆ. ಆರು ತಿಂಗಳ ನಂತರ ಇನ್ನೊಮ್ಮೆ ಅವರ ಹತ್ತಿರ ಹೋದಾಗ ಮಗುವನ್ನು ಪರೀಕ್ಷಿಸಿ ಒಂದು ರೂಪಾಯಿ ಪಡೆದು ಔಷಧವನ್ನು ಬರೆಯುತ್ತಿದ್ದಂತೆ ‘ಮಗುವಿಗೆ ಹೊಟ್ಟೆಗೇನು ಕೊಡುತ್ತೀರಿ’ ಎಂದು ವಿಚಾರಿಸಿದರು. “ಲೆಕ್ಟೋಜನ್” ಹಾಕುತ್ತಿದ್ದೇವೆ ಎಂದು ಬಂದ ಉತ್ತರದಿಂದ ಬರೆಯಲು ಎತ್ತಿದ ಲೆಕ್ಕಣಿಕೆಯನ್ನು ಕೆಳಗಿಟ್ಟು, ಕುಳಿತುಕೊಳ್ಳಲು ಸೂಚಿಸಿ, ನಾನು ಎಲ್ಲಿದ್ದೇನೆ, ಏನು ಮಾಡುತ್ತೇನೆ ಎಂದು ವಿಚಾರಿಸಿ, ಮಗುವಿನ ಗಲ್ಲ ಹಿಡಿದು, ಬೆನ್ನು ಚಪ್ಪರಿಸಿ, ತಜ್ಞ ಸಲಹಾ ಫೀ ಎಂದು ಐದು ರೂಪಾಯಿ ಗಿಟ್ಟಿಸಿಯೇ ಬಿಟ್ಟರು! ಕ್ಷೌರವಿಲ್ಲದ ಮುಖ, ಇಸ್ತ್ರಿ ಇಲ್ಲದ ಶರ್ಟು, ದೊಗಲು ಪ್ಯಾಂಟು, ಮಗುವಿಗೆ ಕಟ್ಟಿದ ಕುಂಚಿಗಳು ಹಿಂದಿನ ಬಾರಿ ಅವನಿಗೆ ಮೋಸ ಮಾಡಿರಬೇಕು! ಎಂದುಕೊಂಡೆ.

ಎಲ್ಲ ಮಕ್ಕಳಂತೆ ವಿಕಾಸನ ದಿನವೆಲ್ಲ ಚಟುವಟಿಕೆಗಳಿಂದ ತುಂಬಿರುತ್ತಿತ್ತು, ಒಂದು ದಿನ ಜಗಮೋಹನನು ಅದೇ ತಾನೇ ತಂದು ನಿಲ್ಲಿಸಿದ ಸಾಯಕಲ್ಲನ್ನು ಮೈಯ ಮೇಲೆ ಕೆಡವಿಕೊಂಡ. ಬಲಗಣ್ಣು ನೋಡಲಸಾಧ್ಯವಾಗುವಷ್ಟು ಉಬ್ಬಿಬಿಟ್ಟಿತ್ತು. ಅಂತೆಯೇ ಸವಾಯಿ ಮಾನಸಿಂಗ್ ಆಸ್ಪತ್ರೆಯ ಕಣ್ಣಿನ ತಜ್ಞರ ಹತ್ತಿರ ಕರೆದುಕೊಂಡು ಹೋದೆವು. ಅಲ್ಲಿಯ ಇನ್ನೂರಾ ಹದಿನೆಂಟು ಡಾಕ್ಟರರಲ್ಲಿ ಸಾಕಷ್ಟು ಖ್ಯಾತಿಪಡೆದ ಸರ್ಜನ್ನರೂ ಹಲ್ಲಿನಿಂದ ಹೃದಯ ಚಿಕಿತ್ಸೆಯ ತಜ್ಞರೂ ಇದ್ದಾರೆ. ಡಾಕ್ಟರರು ಪರೀಕ್ಷಿಸಿ ಕಣ್ಣಿಗೆ ಏನೂ ಅಪಾಯವಿಲ್ಲವೆಂದೂ, ಕಣ್ಣಿವೆಗೆ ಹೊಡೆತ ಬಿದ್ದಿದೆಯೆಂದು, ಗಾಯಕ್ಕೆ ಔಷಧಿ ಹಚ್ಚಿ ವಾರದ ನಂತರ ಮತ್ತೊಮ್ಮೆ ಬರಲು ಸೂಚಿಸಿದರು. ಇನ್ನೊಮ್ಮೆ ಪತ್ನಿಯ ಹಲ್ಲಿನ ಚಿಕಿತ್ಸೆ ಆಯಿತು. ಆ ಬೃಹದ್ ಆಸ್ಪತ್ರೆಯಲ್ಲಿ ಎಂಥ ಚಿಕಿತ್ಸೆಗೂ ಒಂದು ಬಿಡಿ ಗಾಸೂ ಕೊಡಬೇಕಾಗಿಲ್ಲವೆಂದು ತಿಳಿದಾಗ ಆದ ಆಶ್ಚರ್ಯ ಅಷ್ಟಿಷ್ಟಲ್ಲ.

ರಾಜಸ್ಥಾನದ ಸಂಚಾರಿ ಶಸ್ತ್ರಚಿಕಿತ್ಸೆಯ ಸಂಘಟನೆ (Mobile Surgical Unit) ತುಂಬ ವೈಶಿಷ್ಟ್ಯಪೂರ್ಣವಾಗಿದೆ. ಎರಡುನೂರರಿಂದ ಎರಡುನೂರೈವತ್ತು ಹಾಸಿಗೆಗಳ ಅನುಕೂಲವುಳ್ಳ ಎಲ್ಲ ಔಷಧೋಪಚಾರ, ಶಸ್ತ್ರಚಿಕಿತ್ಸೆಗಳ ಬೃಹದ್ ಸಂಘಟನೆಯೊಂದು ಮರುಭೂಮಿಯ ದೂರದ ಪ್ರದೇಶಗಳಲ್ಲಿ ಸಂಚರಿಸುತ್ತದೆ. ಅಲ್ಲಲ್ಲಿ ಶಿಬಿರಗಳನ್ನು ಸ್ಥಾಪಿಸಿ ಹಳ್ಳಿಗರಿಗೆ ಸೇವೆ ಸಲ್ಲಿಸಿ ಮುಂದುವರಿಯುತ್ತದೆ. ಬೆಳೆಯುವ ಯೋಜನೆಯಾದ್ದರಿಂದ ಎಲ್ಲ ಪದವೀಧರ ಡಾಕ್ಟರರಿಗೆ ಕಾಲೇಜಿನಿಂದ ಹೊರಬೀಳುತ್ತಿದ್ದಂತೆ ನೌಕರಿಯ ಅವಕಾಶಗಳು ಈ ಸಂಘಟನೆಯಲ್ಲಿ ದೊರೆಯುತ್ತದೆ.

ಮೇ ರಜೆಯಲ್ಲಿ ನಾನು ನಮ್ಮೂರಿಗೆ ಹೋಗಬೇಕೆಂದು ನಿರ್ಧರಿಸಿದ್ದೆ. ಸಂಸಾರದ ಯೋಗಕ್ಷೇಮ ನೋಡಿಕೊಳ್ಳಲು ಮಾವನನ್ನು ಕರೆಯಿಸಿದ್ದೆ. ಕೆಲದಿನಗಳಿಂದ ಪತ್ನಿಯ ಆರೋಗ್ಯ ಚೆನ್ನಾಗಿಲ್ಲವಾದ್ದರಿಂದ ಯೋಗ್ಯ ಡಾಕ್ಟರರಿಂದ ಔಷಧ - ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದಳು. ಕೊಂಚ ವಾಸಿಯೆನಿಸಿದ್ದರಿಂದ ತಿರುಗಿ ಆಫೀಸಿಗೆ ಹೋಗಲಾರಂಭಿಸಿದ್ದಳು. ಸಂಜೆ ಊರಿನ ಸಮಾಚಾರವೆಲ್ಲ ಮಾತನಾಡುತ್ತ ಕುಳಿತಾಗ ಪತ್ನಿಗೆ ಏನೋ ಕಳವಳವಾಗಿ ಬಚ್ಚಲಿಗೆ ಧಾವಿಸಿದಳು. ನರಳುತ್ತ ಹಿಂದಿರುಗಿದವಳು ತಕ್ಷಣ ಹಾಸಿಗೆಯಲ್ಲಿ ಒರಗಿ ಅಪಾರ ವೇದನೆಯೆಂದು ಬೊಬ್ಬಿಡಲಾರಂಭಿಸಿದಳು. ಜಗಮೋಹನ, ಗೇಟಿನ ಹೊರಗೆ ಮೋಟಾರಸಾಯಕಲದೊಂದಿಗೆ ನಿಂತಿದ್ದರಿಂದ ಕೂಡಲೇ ಟ್ಯಾಕ್ಸಿ ಇಲ್ಲವೇ ಎಂಬ್ಯುಲನ್ಸ ಬೇಕೆಂದೆ. ಅವನು ತಂದ ಟ್ಯಾಕ್ಸಿಯಲ್ಲಿ ಎದ್ದು ಕೂಡ್ರಲೂ ಸಾಧ್ಯವಿಲ್ಲದವಳನ್ನು ಚಾರಪಾಯಿಯಲ್ಲಿ ಸಾಗಿಸೋಣವೆಂದರೆ ಯಾರೋ ಅಪಶಕುನವೆಂದರು. ಅದನ್ನು ಲೆಕ್ಕಿಸದೇ ಒಯ್ದು ಮಲಗಿಸಿದ್ದಾಯಿತು. ಝುನಾನಾ ಆಸ್ಪತ್ರೆಗೆ ಒಯ್ಯೋಣವೆಂದರೆ, ಸವಾಯಿ ಮಾನಸಿಂಗ ಆಸ್ಪತ್ರೆಯಲ್ಲಿ ಸಕಲ

ಸೌಲಭ್ಯಗಳಿದ್ದುದರಿಂದ ಅಲ್ಲಿ ಒಯ್ಯೋಣವೆಂದರು. ಅಲ್ಲಿ ಹೋದಾಗ, ಸ್ತ್ರೀರೋಗಗಳ ತಜ್ಞರು ಝುನಾನಾ ಆಸ್ಪತ್ರೆಯಲ್ಲೆ ಇರುವುದರಿಂದ ಅಲ್ಲಿ ಒಯ್ಯಬೇಕೆಂದರು. ಅವರು ದಯಪಾಲಿಸಿದ ಎಂಬುಲನ್ಸದಲ್ಲಿ ಆರೋಗ್ಯವಂತರು ಕುಳಿತಾಗಲೇ ಅರೆಜೀವವಾಗುವಂತಿರುವಾಗ ರೋಗಿಗಳನ್ನು ದೇವರೇ ಕಾಪಾಡಬೇಕು. ಪತ್ನಿ ಒಂದೇ ಸಮನೇ ನರಳುತ್ತಿದ್ದಳು. ಝುನಾನಾ ಆಸ್ಪತ್ರೆಯ ಲಿಫ್ಟ್ ಸಂಪು ಹೂಡಿದ್ದರಿಂದ, ಇಬ್ಬರು ನರ್ಸುಗಳ ಸಹಾಯದಿಂದ ನಾನೇ ಪತ್ನಿಯನ್ನು ಹೊತ್ತು ಮಹಡಿಯ ಮೇಲೆ ಏರಿದೆ. ಡ್ಯೂಟಿಯ ಮೇಲೆ ಇದ್ದ ಡಾಕ್ಟರಳಿಗೆ ಎಡೆಬಿಡದ ರಕ್ತಸ್ರಾವ, ಭಯಂಕರ ಹೊಟ್ಟೆನೋವುಗಳ ಅರ್ಥವಾಗದೇ ತನ್ನ ಮೇಲಿನ ಡಾಕ್ಟರರಿಗೆ ಹೇಳಿಕಳಿಸಿದಳು. ಆ ಡಾಕ್ಟರ್, ಪರಿಸ್ಥಿತಿಯ ಗಾಂಭೀರ್ಯವನ್ನು ಅರಿತು ಖ್ಯಾತ ಸರ್ಜನ್ನರಾದ ಡಾ. ಚಂದ್ರಾವತಿ ಸಕ್ಸೇನಾ ಅವರನ್ನು ಕೂಡಲೇ ಬರುವಂತೆ ವಿನಂತಿಸಿಕೊಂಡಳು. ಅವರು ಬಂದು ಕೂಲಂಕುಷವಾಗಿ ಪರೀಕ್ಷಿಸಿ ಕೂಡಲೇ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ನಿರ್ಧರಿಸಿ ತೀವ್ರ ರಕ್ತಸ್ರಾವದಿಂದಾಗಿ ರೋಗಿ ದುರ್ಬಲಳಾಗಿದ್ದರಿಂದ ಬೇರೆಯವರ ರಕ್ತ ಕೊಡಬೇಕಾಗುತ್ತದೆ, ಎಂದರು. 'ರಕ್ತದ ಬ್ಯಾಂಕಿನಲ್ಲಿ ಯಾರ ರಕ್ತವೂ ದಾಸ್ತಾನು ಇಲ್ಲವೆಂದರು, ಕ್ಷಯರೋಗದ ಸ್ಯಾನಿಟೋರಿಯಂದಲ್ಲೂ ರೋಗಿಗೆ ಬೇಕಾದ 'ಓ+'ಗುಂಪಿನ ರಕ್ತವಿಲ್ಲವೆಂದು ತಿಳಿಯಿತು. ಮಾನಸಿಂಗ ಆಸ್ಪತ್ರೆಗೆ ಫೋನ ಮಾಡಿದರು. ಅಲ್ಲಿಂದಲೂ ಇಲ್ಲವೆಂದು ಉತ್ತರ ಬಂದಿತು. ಒಂದು ಗಂಟೆಯ ಅಪರಾತ್ರೆಯಲ್ಲಿ ರಕ್ತವನ್ನು ಕೊಡಲೊಪ್ಪುವ ದಾನಿಗಳ ಸಂಶೋಧನೆ ನಡೆಯಿತು. ಇಷ್ಟಾಗಿ ರಕ್ತ ಪರೀಕ್ಷಿಸುವ, ದೇಹದಿಂದ ತೆಗೆಯುವ ಸವಲತ್ತುಗಳು 'ಝುನಾನಾ'ದಲ್ಲಿ ಇಲ್ಲದ್ದರಿಂದ ಪ್ರತಿಯೊಬ್ಬ ದಾನಿಯನ್ನು ಮಾನಸಿಂಗ್ ಆಸ್ಪತ್ರೆಗೆ ಕರೆದೊಯ್ಯಬೇಕು. ಈ ಹೊಣೆಯನ್ನು ಜಗಮೋಹನ ಹೊತ್ತ. ಹತ್ತಾರು ಜನರ ರಕ್ತ ಪರೀಕ್ಷೆ ಮಾಡಿದರೂ ಯಾರದೂ ಹೊಂದಲಿಲ್ಲ. ಕೊನೆಗೆ ಉಳಿದವ ನಾನೊಬ್ಬನೇ. ಎಲ್ಲಿಂದ ಧೈರ್ಯ ಬಂದಿತೋ ಏನೋ ಮರಣಶಯ್ಯೆಯಲ್ಲಿರುವ ಮಡದಿಯನ್ನು ಬಿಟ್ಟು, ಮೋಟಾರಸಾಯಕಲ್ಲಿನ ಹಿಂದೆ ಕುಳಿತು ಹೊರಟಿದ್ದೆ. ನನ್ನ ರಕ್ತವಾದರೂ ಸರಿಹೋಗಲಿ ಎಂದು ಮೊರೆಯಿಡುತ್ತಲಿದ್ದೆ. ಅದೂ ಸರಿ ಹೋಗದಿದ್ದರೆ? ಎಂಬ ಪ್ರಶ್ನೆ ತಲೆ ಎತ್ತಿ ನಿಂತಾಗ ಮಂಕು ಕವಿಯಿತು. ನಮಗೆಷ್ಟು ಆತುರವಿದ್ದರೂ ತಜ್ಞನಿಗೆ ಅದು ಪ್ರತಿನಿತ್ಯದ ಕೆಲಸವಾದ್ದರಿಂದ ಅವನು ನಿಧಾನವಾಗಿ ಬಂದು, ಟೇಬಲ್ಲಿನ ಮೇಲೆ ಮಲಗಿಸಿ ಕೈಗೆ ಸ್ಪಿರಿಟ ಸವರಿ ಹತ್ತು ಮಿಲಿ ಲೀಟರದಷ್ಟು ರಕ್ತ ಹೊರತೆಗೆದು ಸೂಕ್ಷ್ಮದರ್ಶಕದ ಸ್ಲಾಯಿಡ್ ಮೇಲೆ ನಮ್ಮಿಬ್ಬರ ರಕ್ತದ ಹೊಂದಾಣಿಕೆಯಾಗುತ್ತದೆಯೇ ಎಂದು ಪರೀಕ್ಷಿಸುತ್ತಿರುವಾಗ ಡವಡವಿಸುವ ಎದೆ, ಕಾತರದ ಕಣ್ಣುಗಳಿಂದ ಅವನನ್ನೇ ನೋಡುತ್ತಿದ್ದೆ. ಅವನು ಮುಖಚರ್ಯೆಯಲ್ಲಿ ಯಾವ ಬದಲಾವಣೆ ತೋರದೇ

ಟೆಸ್ಟಟ್ಯೂಬಿನಲ್ಲಿ ಎರಡೂ ರಕ್ತಗಳ ಮಿಶ್ರಣ ಮಾಡಿ ಪರೀಕ್ಷಿಸಿದ. ನನ್ನದೂ 'ಓ+' ಗಂಪಿನ ರಕ್ತವಾದ್ದರಿಂದ ಸರಿಹೋಗುತ್ತದೆಯೆಂದ. ಹೊಸ ಆಶಾಕಿರಣಗಳು ಮೂಡಿಬಂದವು. ದೊಡ್ಡ ಬಾಟ್ಲಿಯ ಮೂರು ನಾಲ್ಕಾಂಶದಷ್ಟು ನನ್ನ ರಕ್ತವನ್ನು ಕೈಯಲ್ಲಿ ಭದ್ರವಾಗಿ ಹಿಡಿದು ಮೋಟಾರಸಾಯಕಲ್ಲು ರೋಗಿಯತ್ತ ವೇಗವಾಗಿ ಓಡಿಸಿದಾಗ ಲಕ್ಷ್ಮಣನ ಜೀವವನ್ನುಳಿಸಲು ಸಂಜೀವಿನಿ ಹೊತ್ತು ಹಾರುವ ಹನುಮಾನನ ಸ್ಥಿತಿ ನನ್ನದಾಗಿತ್ತು.

ಆಪರೇಶನ್ ಥೇಟರದಲ್ಲಿ ಎಲ್ಲವನ್ನೂ ಸಜ್ಜುಗೊಳಿಸಿ ಡಾಕ್ಟರರ ತಂಡ, ನನ್ನ ದಾರಿಯನ್ನೇ ಎದುರು ನೋಡುತ್ತಿತ್ತು. ನನ್ನಿಂದ ಆಪರೇಷನ್ ಒಪ್ಪಿಗೆಯ ಪತ್ರಕ್ಕೆ ಹಸ್ತಾಕ್ಷರ ಮಾಡಿಸಿಕೊಂಡು ಕಾರ್ಯತತ್ಪರರಾದರು. ನೆರೆಹೊರೆಯ ಕೆಲವರು ಈ ಸಮಾಚಾರ ಕೇಳಿ ಆಸ್ಪತ್ರೆಗೆ ಧಾವಿಸಿ ಬಂದಿದ್ದರು. ಕಳವಳಗೊಂಡ ಮಾವನವರು ಐದು ನಿಮಿಷಕ್ಕೊಂದು ಸಲ ಸಂಡಾಸಿಗೆ ಹೋಗಿ ಬರುತ್ತಿದ್ದರಂತೆ. ಆ ರಾತ್ರಿ ನೆರೆಮನೆಯ ಬಂಗಾಲಿ ಸುದ್ದಿ ಕೇಳಿ ಬಂದವ, ನೀರಡಿಕೆಯೆಂದು ಕೋಕೋಕೋಲಾ ತರಿಸಿ ಕುಡಿದು ನನ್ನಿಂದ ಹಣ ಕೊಡಿಸಿದ! ಜಗಮೋಹನ ಯಾರಿಗೋ ಫೋನ ಮಾಡಿ ಮಾವನವರಿಗೆ ಧೈರ್ಯ ಹೇಳುವಂತೆ ವಿನಂತಿಸಿಕೊಂಡ, ರಾತ್ರೆ ಬಹಳವಾದ್ದರಿಂದ ಒಬ್ಬೊಬ್ಬರಾಗಿ ಗೃಹಾಭಿಮುಖಿಯಾದರು. ಬಂಗಾಲಿ ಮಾತ್ರ ಮೋಟಾರಸಾಯಕಲ್ ಮೇಲೆ ತನಗೆ ಮನೆಗೆ ಮುಟ್ಟಿಸೆಂದು ಜಗಮೋಹನನಿಗೆ ಹೇಳಿದ. ಆ ಕರಾಳ ರಾತ್ರೆಯಲ್ಲಿ ನನ್ನ ಬೆಂಬಲಕ್ಕೆ ಉಳಿದವರು ಜೀವನವನ್ನು ಸರಿಯಾಗಿ ಅರಿಯದ ಹುಡುಗ ಜಗಮೋಹನ ಮತ್ತು ಅವನ ಒಬ್ಬ ಗೆಳೆಯ ಮಾತ್ರ. ದಣಿದ ದೇಹಕ್ಕೆ ಹುಲ್ಲಿನ ಆಶ್ರಯ ಕೊಟ್ಟು ಆಪರೇಶನ್ ಪರಿಣಾಮಕ್ಕಾಗಿ ಕಾಯುತ್ತ ಕುಳಿತೆವು. ಮುಂಜಾವಿನ ನಾಲ್ಕು ಗಂಟೆಗೆ ಡಾ. ಸಕ್ಸೇನಾರು ಹೊರಗೆ ಬಂದು ಆಪರೇಶನ್ ಯಶಸ್ವಿಯಾಗಿದೆ! ಎಂದಾಗ ಸಮಾಧಾನದ ಉಸಿರು ಹೊರಬಿತ್ತು. ಒಳಗೆ ಹೋಗಿ ನೋಡಿದಾಗ ಸ್ಮೃತಿಯಿಲ್ಲದ ಪತ್ನಿಯನ್ನು ಮೈ ತುಂಬ ಹೊದಿಸಿ, ಆಪರೇಶನ್ ಥೇಟರಿನಿಂದ ವಾರ್ಡಿಗೆ ಒಯ್ಯುತ್ತಿದ್ದರು. ಸ್ಮೃತಿ ಹಿಂದಿರುಗಲು ಮೂರು ನಾಲ್ಕು ಗಂಟೆಯಾದರೂ ಹೋಗಬೇಕೆಂದು ಡಾಕ್ಟರರು ಹೇಳಿದ್ದರಿಂದ ಜೊತೆಗಿದ್ದವರು ಮನೆಗೆ ಹೋಗಿ ವಿಶ್ರಾಂತಿ ಪಡೆಯಲು ಹೇಳಿದರು. ಹಿಂದಿನ ರಾತ್ರೆ ಊಟ ಮಾಡದೇ, ನಿದ್ದೆಗೆಟ್ಟು, ರಕ್ತದಾನ ಬೇರೆ ಮಾಡಿದ್ದರಿಂದ, ನಾಶ್ತಾ ಆದರೂ ಮುಗಿಸಿ! ಎಂದು ಇತರರು ಒತಾಯಿಸಿದ್ದರಿಂದ ಮನೆಗೆ ತೆರಳಿ ಮಾವನವರಿಗೆ ಆಸ್ಪತ್ರೆಯ ಆವಾರವಲ್ಲಿರುವಂತೆ ವಿನಂತಿಸಿಕೊಂಡೆ. ನಾನು ಪ್ರಾತರ್ವಿಧಿ ಮುಗಿಸಿ ಬರುತ್ತಿದ್ದಂತೆಯೇ ರಿಕ್ಷಾದಲ್ಲಿ ಆಸ್ಪತ್ರೆಗೆ ಹೋಗಿ, ಮಗಳನ್ನು ನೋಡಲು ಒಳಗೆ ಬಿಡಲಿಲ್ಲವೆಂದು ತಿರುಗಿ ರಿಕ್ಷಾದಲ್ಲಿ ಹಿಂತಿರುಗಿದ ಮಾವನನ್ನು ನೋಡಿ ಕಂಗೆಟ್ಟು ಅಲ್ಲಿ ಯಾರಾದರೂ

ಇರಲೇಬೇಕಾಗಿದ್ದರಿಂದ ಹುಚ್ಚನಂತೆ ಆಸ್ಪತ್ರೆಗೆ ಓಡಿದೆ. ಅಲ್ಲಿ ಯಾರೂ ಇಲ್ಲದಿದ್ದಾಗ ಏನಾದರೂ ಸಂಭವಿಸಿದ್ದರೆ....... ಎಂಬ ವಿಚಾರದಿಂದಲೇ ನಡುಕ ಬಂದಿತು. ಆಸ್ಪತ್ರೆ ತಲುಪಿದಾಗ "ಶ್ರೀಮತಿ ಕಾಮತಳ ರಿಶ್ತೇದಾರ್ (ಸಂಬಂಧಿಕರು) ಯಾರೂ ಇಲ್ಲವೇ? ಅವಳು ಚಿಂತಾಜನಕ ಸ್ಥಿತಿಯಲ್ಲಿದ್ದಾಳೆ" ಎಂದು ರಾತ್ರೆ, ಮೊದಲಿಗೆ ತಪಾಸಣೆ ಮಾಡಿದ ಡಾಕ್ಟರ್ ಬಹಳ ಕಾತರತೆಯಿಂದ ಕೂಗುತ್ತಿದ್ದಲ್ಲಿ ತೇಕುತ್ತ ಓಡಿದೆ. "ರೋಗಿ ಮರಣಶಯ್ಯೆಯಲ್ಲಿದ್ದಾಗಲೂ ನಿಮಗೆ ನಿಷ್ಕಾಳಜಿಯೇ? ನಿಮಗಾಗಿ ಅರ್ಧ ತಾಸಿನಿಂದ ಹುಡುಕುತ್ತಿದ್ದೇನೆ. ಒಬ್ಬರು ಹೊರಗಡೆ ಕಾಯುವಷ್ಟು ಜವಾಬ್ದಾರಿ ಇರಬಾರದೇ? ಕೂಡಲೇ ಹೋಗಿ ಇನ್ನೊಂದು ಬಾಟ್ಲಿ ರಕ್ತ ತನ್ನಿ" ಎಂದು ಆಜ್ಞಾಪಿಸಿದರು. ಯಾವ ತಪ್ಪೂ ಇಲ್ಲದೇ ಅವರಿಂದ ಅನಿಸಿಕೊಂಡಿದ್ದರೂ ಪತ್ನಿ ನನ್ನವಳಾದ್ದರಿಂದ ಎಲ್ಲಕ್ಕೂ ಮೊದಲು ಕರ್ತವ್ಯ ಮುಖನಾಗಿ ರಕ್ತಕ್ಕಾಗಿ ಕೊಡಲು ಹಣ ನನ್ನಲ್ಲಿ ಇಲ್ಲದ್ದರಿಂದ ಮಾವನನ್ನು ಹುಡುಕಿಕೊಂಡು ತಿರುಗಿ ಮನೆಗೆ ಓಡಿದೆ. ಅವರೆಲ್ಲೋ ಹೊರಗೆ ಹೋದದ್ದರಿಂದ ನಿರಾಸೆಯಾಗಿ ಜೀವನದಲ್ಲಿ ಮೊದಲಬಾರಿ ಅಭಿಮಾನ ಬಿಟ್ಟು ನೆರೆಮನೆಯ ಬಂಗಾಲಿಯ ಹತ್ತಿರ ಇಪ್ಪತ್ತು ರೂಪಾಯಿ ಕೇಳಿ ಇಸಕೊಂಡು ಸವಾಯಿ ಮಾನಸಿಂಗ್ ಆಸ್ಪತ್ರೆಗೆ ಓಡಿದೆ. ಅಲ್ಲಿ ಅವರಿಗೆ ಇನ್ನೊಂದು ಬಾಟ್ಲಿ ನನ್ನ ರಕ್ತವನ್ನೇ ತೆಗೆಯಲು ಪರಿಪರಿಯಿಂದ ವಿನಂತಿಸಿಕೊಂಡರೂ ನಿರಾಕರಿಸಿದ್ದರಿಂದ ಹಣಕ್ಕಾಗಿ ರಕ್ತ ಮಾರುವವರ ಆಶ್ರಯ ಪಡೆಯಬೇಕಾಯಿತು. ಆಸ್ಪತ್ರೆಯ ಹೊರಗೆ ಕುಳಿತವರಿಗೆ 'ಓ+' ಗುಂಪಿನ ರಕ್ತದವರು ಬೇಕಾಗಿದ್ದಾರೆ ಎಂದಾಗ ಸರಿಯಾಗಿ ಹೊಟ್ಟೆಗಿಲ್ಲದ, ಬಡಕಲು ದೇಹದ, ನಾಲ್ವರು ಮುಂದೆ ಬಂದರು. ಅವರು ಎಂದು ರಕ್ತದಾನ ಮಾಡಿದ್ದರು ಎಂದು ವಿಚಾರಿಸಿ, ಯಾರಿಂದ ರಕ್ತ ಪಡೆಯಬೇಕು ಎಂದು ನಿರ್ಧರಿಸಲು ಬಹಳ ಹೊತ್ತು ತೆಗೆದುಕೊಂಡದ್ದರಿಂದ ಝುನಾನಾ ಆಶ್ಪತ್ರೆಯಿಂದ ಫೋನ ಬರುತ್ತಲೇ ಇತ್ತು. "ಕೂಡಲೇ ಕಳಿಸಿಕೊಡಿ; ರೋಗಿ ಭರದಿಂದ ಕುಸಿಯುತ್ತಿದ್ದಾಳೆ" ಎಂದು ಫೋನ ಬಂದ ಮೇಲೂ ರಕ್ತದ ಬಾಟ್ಲಿ ನನ್ನ ಕೈಗೆ ಬರಬೇಕಾದರೆ ಅರ್ಧ ಗಂಟೆಯೇ ಕಳೆದಿರಬೇಕು. ಈ ಅವಧಿಯಲ್ಲಿ ಏನು ಅನಾಹುತ ನಡೆದಿದೆಯೋ ಎಂದು ಕಳವಳಪಡುತ್ತ ಧಾವಿಸಿದೆ.

ಪತ್ನಿಯ ಸುತ್ತಲೂ ಆರೆಂಟು ಡಾಕ್ಟರರು ಚಿಂತಾಕ್ರಾಂತರಾಗಿ ವಿಚಾರ ವಿಮರ್ಶೆ ನಡೆಸಿದ್ದರು. ಮೂಗಿನೊಳಗಿಂದ ಒಂದು ರಬ್ಬರ ನಳಿಕೆ ಹಾದಿತ್ತು. ಒಂದು ಕೈಯಲ್ಲಿ ಗ್ಲೂಕೋಜ ತೊಟ್ಟು ತೊಟ್ಟಾಗಿ ಬಿಡಲಾಗಿತ್ತು. ರಕ್ತನಾಳ ಸುಲಭವಾಗಿ ಸಿಗದ್ದರಿಂದ ಕಾಲನ್ನು ಕೊರೆದು ಸೆಪ್ಪಾನ ಹರಿಬಿಟ್ಟಿದ್ದರು. ರಕ್ತದ ಬಾಟ್ಲಿಯನ್ನು ಕೂಡಲೇ ತೂಗಹಾಕಿ ನಾಳಗಳೆಲ್ಲ ಕುಗ್ಗಿದ್ದರಿಂದ ಇನ್ನೊಂದು ಕಾಲಿಗೆ ಕೊರೆತ ಹಾಕಿ ದೇಹಕ್ಕೆ ರಕ್ತ ಹೋಗುವ ವ್ಯವಸ್ಥೆ ಮಾಡಿದರು. ಒಬ್ಬರು ಹೃದಯದ ಬಡಿತ ನೋಡುತ್ತಿದ್ದರೆ. ಇನ್ನೊಬ್ಬರು ಆಗಾಗ್ಗೆ ರಕ್ತದ ಒತ್ತಡ ನೋಡುತ್ತಿದ್ದರು. ಹೊಸ ರಕ್ತದ ಸಂಚಾರದಿಂದ ರೋಗಿಯ

ರಕ್ತ ಒತ್ತಡ ಏರಲಾರಂಭಿಸಿದ ನಂತರ ಡಾಕ್ಟರರ ಮುಖದಲ್ಲಿ ಗೆಲವು ಕಂಡಿತು. ಕುತ್ತಿನಿಂದ ಪಾರಾದ ಸಮಾಧಾನದ ಉಸಿರು ಬಿಟ್ಟರು. ಏನು ಮಾಡಬೇಕೆಂದು ಡ್ಯೂಟಿಯ ಮೇಲಿದ್ದ ಸಣ್ಣ ಡಾಕ್ಟರರಿಗೆ ವಿವರಿಸಿ ಒಬ್ಬೊಬ್ಬರಾಗಿ ಹೊರಟು ಹೋದರು. ಎರಡು ತಾಸಿನ ನಂತರ ನನ್ನವಳು ಕಣ್ಣು ತೆರೆದು ನನ್ನೆಡೆಗೆ ನೋವಿನ ನಗು ಬೀರಿದಾಗ ಗೆದ್ದೆ! ಎನಿಸಿತು. ಹತ್ತಿರ ಇದ್ದವರು ತಮ್ಮಿಂದ ಅದಷ್ಟು ಸಹಾಯ ಮಾಡುವ ಬದಲಾಗಿ ತಾಯಿಯನ್ನು ಕರೆಯಿಸಿಕೊಳ್ಳಿ! ಎಂದು ಸೂಚಿಸಿದರು. ಇನ್ನೊಬ್ಬರು ಮುಂಬೈಯಲ್ಲಿ ಹೆಚ್ಚು ಹಣ ಖರ್ಚಾದರೂ ಹೆಚ್ಚು ಸೌಲಭ್ಯಗಳು ಸಿಗುತ್ತಿದ್ದವು ಎಂದರು. ಬೇರೆ ಯಾರ ಸಹಾಯವನ್ನೂ ಕೋರದೇ ಮನೆಯಲ್ಲಿ ಮಗು, ಆಸ್ಪತ್ರೆಯಲ್ಲಿ ಪತ್ನಿಯ ಹೊಣೆಯನ್ನು ಹೊತ್ತೆ. ಮುಂಜಾನೆಯ ಚಹ-ತಿಂಡಿ ಒಯ್ಯುವುದರಿಂದ ಪ್ರಾರಂಭವಾದ ಕೆಲಸಗಳು ರಾತ್ರೆ ಆಸ್ಪತ್ರೆಯ ಹೊರಾಂಗಣದಲ್ಲಿ ಮಲಗುವ ವರೆಗೆ ಇರುತ್ತಿದ್ದವು. ಮನೆ-ಮಠ ಇಲ್ಲದವರು ಅಲ್ಲಿಗೆ ಬಂದು ಮಲಗಬಾರದೆಂದು ಆಗಾಗ ಸಿಪಾಯಿಗಳು ಬಂದು ಎಚ್ಚರಿಸಿ 'ನೀನ್ಯಾರು?' ಎಂದು ವಿಚಾರಿಸುತ್ತಿದ್ದರು. ನಮ್ಮ ದೇಶದಲ್ಲಿ ಮಲಗಲು ಹುಲ್ಲು ಹಾಸಿಗೆ, ಪಡೆಯಲೂ ಭಾಗ್ಯವಂತನಾಗಿ ಬಂದಿರಬೇಕೆಂದು ಮೊದಲ ಬಾರಿಗೆ ಅರಿಯುವಂತಾಯಿತು.

ವಿಕಾಸ ಹುಟ್ಟಿದಾಗ ಕಾಟೇಜ ಸಿಗುವಂತಾದರೂ ಈ ಬಾರಿ ಸಿಗದ್ದರಿಂದ ಜನರಲ್ ವಾರ್ಡಿನಲ್ಲೆ ಇರಬೇಕಾಯಿತು. ಅಲ್ಲಿ ಇದ್ದವರಲ್ಲಿ ಹೆಚ್ಚಿನವರು ಬಡವರೂ, ಹಲವರು, ಸಂತತಿ ಪ್ರತಿಬಂಧಕ ಆಪರೇಶನ್ ಮಾಡಿಸಿಕೊಂಡವರೂ, ಟ್ಯೂಮರ, ಅಲ್‌ಸರ್‌ಗಳಿಂದ ಬಳಲುವವರೂ ಇದ್ದರು. ಯಾರಿಗೂ ಯಾವ ತೊಂದರೆ? ಎಂದು ಕೇಳಿದರೆ "ಪೇಟಕೀ ಖರಾಬೀ" ಎನ್ನುತ್ತಿದ್ದರು. ಅಲ್ಲಿ ಬಂದವರೆಲ್ಲ "ಹೊಟ್ಟೆ ಕೆಟ್ಟವರೇ" ಆಗಿದ್ದರು! ಸಿಂಧಿ ಮಹಿಳೆಯೊಬ್ಬಳು ತನ್ನ ಪತಿ ವಿದ್ಯಾವಂತ. ಮ್ಯಾಟ್ರಿಕ್ ಕಲಿತು ಹಣ್ಣಿನ ವ್ಯಾಪಾರ ಮಾಡುತ್ತಾನೆ, ಅವನಿಗೆ ನಾನು ಹಣ್ಣು ತಿಂದಷ್ಟು ಕಡಿಮೆ. ಪ್ರತಿದಿನ ಸಿನೇಮಾಕ್ಕೆ ಒಯ್ಯುತ್ತಾನೆ ಎಂದರೆ, ಬನಿಯಾನ ಹೆಂಡತಿಯೊಬ್ಬಳು ನನ್ನ ಪತಿಯೂ ಹನ್ನೊಂದು ಕ್ಲಾಸುಗಳನ್ನು ಕಲಿತಿದ್ದಾನೆ ಆದರೂ ನೌಕರಿಯ ಆಸೆ ಮಾಡದೇ ತಲೆಮಾರಿನಿಂದ ಬಂದ ವ್ಯಾಪಾರ ಮಾಡುತ್ತಾನೆ, ಎಂದಳು. ಪಂಜಾಬಿ ಹೆಂಗಸೊಬ್ಬಳು ತನ್ನ ಪತಿ ಸೈನ್ಯದಲ್ಲಿ ಮೇಜರ್ ಇದ್ದಾರೆಂದು ಜಂಬಕೊಚ್ಚಿಕೊಂಡಳು. "ಸೈನ್ಯಾಧಿಕಾರಿಯ ಹೆಂಡತಿ ಸೈನ್ಯದ ಆಸ್ಪತ್ರೆಗೆ ಹೋಗದೇ ಇಲ್ಲಿ ಹೇಗೆ ಬಂದಳು?" ಎಂದು ಆಶ್ಚರ್ಯ ಪಡುತ್ತಿದ್ದಂತೆ ಹೆಂಡತಿಯನ್ನು ನೋಡಲು ಎನ್. ಸಿ. ಸಿ. ತರಬೇತುಗಾರ ಬಂದ. ನನ್ನವಳು ತನ್ನ ಪತಿ ಮಾಸ್ತರರಿದ್ದಾರೆ (ಮಾಸ್ತರ ಸಾಬ) ಎಂದು ಸುಮ್ಮನಾದಳಂತೆ!

ಉಳಿದ ರೋಗಿಗಳು ನಿಮಿಷಕ್ಕೊಂದು ಬಾರಿ ನರ್ಸರನ್ನು ಕರೆಯುವ ಪರಿಪಾಠ ಇಟ್ಟುಕೊಂಡಿದ್ದರು. ಹೀಗಾಗಿ ಅವರತ್ತ ವಿಶೇಷ ಲಕ್ಷಕೊಡದೇ ನನ್ನವಳಿಗೆ ತಲೆ ಬಾಚುವುದು, ಮೈ ಒರೆಸುವುದು ಮುಂತಾದ ಕೆಲಸಗಳನ್ನು ತಪ್ಪದೇ ಮಾಡುತ್ತಿದ್ದರು. ಭೇಟ್ಟಿಯ ಅವಧಿಯಲ್ಲಿ ವಿಕಾಸನನ್ನು ಆಸ್ಪತ್ರೆಗೆ ತಂದರೂ ಅವನು ತಾಯಿಗಾಗಿ ಹಂಬಲಿಸುತ್ತಿರಲಿಲ್ಲ. ನೆರೆಹೊರೆಯುವರೂ ಆಗೀಗ ಬರುತ್ತಿದ್ದರು. ಒಳ್ಳೆಯ ಆರೈಕೆಯಿಂದ ಆರೋಗ್ಯ ಸುಧಾರಿಸಲು ಹತ್ತಿದ್ದರಿಂದ ಡಾಕ್ಟರರು ಎದ್ದು ಓಡಾಡಲು ತಿಳಿಸಿದರು. ಆದರೆ ಹಾಗೆ ಮಾಡಿದಾಗ ಹೊಟ್ಟೆಗೆ ಹಾಕಿದ ಟಾಕಿಗಳೆಲ್ಲ ಬಿಚ್ಚಿಹೋಗಿ, ರಕ್ತಸ್ರಾವವಾಗಿ ಮತ್ತೊಂದು ಸಣ್ಣ ಆಪರೇಶನ್ ಮಾಡಬೇಕಾಯಿತು. ಇಪ್ಪತ್ತೊಂದು ದಿನಗಳ ಆಸ್ಪತ್ರೆಯ ವಾಸ್ತವ್ಯದ ನಂತರ ಮನೆಗೆ ಹೊರಟು ನಿಂತಾಗ ಡಾಕ್ಟರ ಸಕ್ಸೇನಾರಿಗೆ ಕೃತಜ್ಞತೆ ಸೂಚಿಸಿ, ಅವರ ಸೇವೆಗಾಗಿ ಸಣ್ಣ 'ಕೊಡುಗೆ' ಕೊಡಲು ಹೋದಾಗ ತಮಗೇನೂ ಬೇಡವೆಂದರು. "ನಾವು ಬಡವರೇನೂ ಅಲ್ಲ. ನಿಮ್ಮ ಫೀ ಆದರೂ ಎಷ್ಟೆಂದು ಹೇಳಿ" ಎಂದು ಪರಿಪರಿಯಾಗಿ ಕೇಳಿದರೂ, "ದೇವರು ನನಗೆ ಬೇಕಾದ್ದನ್ನು ದಯಪಾಲಿಸಿದ್ದಾರೆ. ಜನರ ನರಳಿಕೆಯನ್ನು ಹೋಗಲಾಡಿಸುವುದಕ್ಕಿಂತ ಹೆಚ್ಚಿನ ಭಾಗ್ಯ ಬೇರೊಂದು ಇಲ್ಲವೆಂದು ನಂಬಿದ್ದೇನೆ. ನೀವೆಲ್ಲ ನನ್ನ ಕುಟುಂಬವೆಂದೇ ನಂಬಿದ್ದರಿಂದ ನನ್ನದೊಂದು ಕುಟುಂಬವನ್ನು ಮಾಡಿಕೊಳ್ಳುವ ಗೋಜಿಗೂ ಹೋಗಲಿಲ್ಲ" ಎಂದು ಗಂಭೀರವಾಗಿ ನಿರ್ವಿಕಾರವಾಗಿ ಹೇಳಿದರು. ಹೆರಿಗೆ ಕಾಲಕ್ಕೆ 'ಬೂಚ ಕಂಪನಿ' ಔಷಧ ಕುಡಿಸಿ, ರೂಮ ಕೊಡಿಸಿದ್ದಕ್ಕೆ, ಮತ್ತೊಂದಕ್ಕೆ ಎಂದು ಹಣ ಸುಲಿದು, ಲಾಭ ಮಾಡಿಕೊಂಡ ಅಧಿಕಾರಿ ಡಾಕ್ಟರಣಿಗೂ, ಅವಿವಾಹಿತರಾಗಿದ್ದು, ಜೀವನವನ್ನೇ ಜನಸೇವೆಗೆ ಮುಡುಪಿಟ್ಟ ಡಾಕ್ಟರ ಸಕ್ಸೇನಾರಿಗೂ ಎಷ್ಟು ಅಂತರ ಅಲ್ಲವೇ? ಇಂಥ ಒಳ್ಳೆಯ ಡಾಕ್ಟರರು ಅಲ್ಲಲ್ಲಿ ಇರುವುದರಿಂದಲೇ ಎಷ್ಟೋ ರೋಗಿಗಳು ಇಂದಿಗೂ ಬಾಳಿ ಬದುಕುವಂತಾಗಿದೆ.

೩೧. ಬಿರುಕು

ತಿವಾರಿ, ಮೊದಲೇ ಸೂಚನೆ ಕೊಟ್ಟಿದ್ದರೂ ಬಿ.ಪಿ.ಯವರು ಹೀಗೆ ಮಾಡಬಹುದೆಂದು ಅನಿಸಿರಲಿಲ್ಲ. ಸಿಂಘನ ಪ್ರಬಂಧ ಸಿದ್ಧವಾದ ನಂತರ ಸಂಶೋಧನೆಯಲ್ಲಿ ಮಾರ್ಗದರ್ಶನ ಮಾಡಿ ಅನುಭವವಿಲ್ಲದ್ದರಿಂದ ವಿಶ್ವವಿದ್ಯಾಲಯದವರು ಸ್ನಾತಕೋತ್ತರ ಸಂಶೋಧನೆಗಾಗಿ ನನ್ನನ್ನು ಆರಿಸಿಲ್ಲ ಎಂಬ ನೆಪ ಹೂಡಿ, ಆ ಪ್ರಬಂಧಕ್ಕೆ ತಮ್ಮ ಹೆಸರನ್ನೇ ಸೇರಿಸಿ ಬಿಟ್ಟರು. "ಗುರು, ನಾನು ಮೊದಲೇ ಹೇಳಿರಲಿಲ್ಲವೇ? ಆಚಾರ್ಯರು ಮಂತ್ರ ಘೋಷಿಸಿದ ಹೊರತು ಮಿಂಡನು ಗಂಡನಾಗುವುದಿಲ್ಲವೆಂದು! ಈ ಘಟನೆಯಿಂದ ಜೀವನದ ಪಾಠ ಕಲಿಯಬೇಕು" ಎಂದು ತಿವಾರಿ ಅಣಕವಾಡದೇ ಇರಲಿಲ್ಲ. ಸಿಂಘನ ಪರೀಕ್ಷೆಗೆ, ಪರಸ್ಪರ ಸಹಕಾರದ ಒಪ್ಪಂದದ ಮೇಲೆ ಕಾನಪುರ ಕಾಲೇಜಿನ ಮೆಹ್ರಾ ಅವರನ್ನೇ ಪರೀಕ್ಷಕರನ್ನಾಗಿ ಕರೆಯಿಸಿಕೊಂಡರು. ಪ್ರಬಂಧದಲ್ಲಿ ಏನು ಬರೆಯಲಾಗಿದೆ ಎಂದು ವಿದ್ಯಾರ್ಥಿಗಾಗಲಿ, ಮಾರ್ಗದರ್ಶಿಗಾಗಲೀ ತಿಳಿಯದ್ದರಿಂದ ಪರೀಕ್ಷಾ ಮಂಡಲದಲ್ಲಿ ನನ್ನ ಹೆಸರನ್ನೂ ಸೇರಿಸಿದ್ದರು. ಕೈಕೊಂಡ ಸಂಶೋಧನೆಯ ಮುಖ್ಯ ಅಂಶಗಳನ್ನು ವಿವರಿಸಲು ಪರೀಕ್ಷಕರು ಸೂಚಿಸಿದಾಗ ವಿದ್ಯಾರ್ಥಿಯಿಂದ ವಿವರಿಸಲಾಗಲಿಲ್ಲ. ನಾನು ಸುಮ್ಮನೆ ಕುಳಿತಿದ್ದರಿಂದ ಬಿ.ಪಿ.ಯವರು "ಅವನಿಗೆ ಎಲ್ಲ ಗೊತ್ತಿದೆ; ಇಂಗ್ಲಿಷಿನ ತೊಂದರೆಯಿದೆ" ಎಂದರು. ಹಿಂದಿಯಲ್ಲಿಯೂ ವಿವರಿಸಲು ಬಾರದಾಗ ಗಾಬರಿಯಾಗಬೇಡೆಂದರು. ತನ್ನ ಸಂಶೋಧನೆಯ ವಿವರಣೆಯನ್ನೇ ನೀಡಲಾರದವನಿಗೆ ಸ್ನಾತಕೋತ್ತರ ಪದವಿಯನ್ನು ದಾನವಾಗಿ ಕೊಡುವುದರಲ್ಲಿ ಯಾವ ಅರ್ಥವೂ ಇಲ್ಲವೆಂದು ಶ್ರೀಖಂಡೆಯವರು (ಅವರೂ ಪರೀಕ್ಷಾ ಮಂಡಲದಲ್ಲಿದ್ದರು) ಖಂಡಿಸಿದರು. ಆತ ಎಷ್ಟು ಬಡತನದಲ್ಲಿ ಬೆಳೆದಿದ್ದಾನೆ. ಆತನನ್ನು ಮುಂದೆ ತರಲು ತಾನು ಎಷ್ಟು ಪ್ರಯತ್ನಿಸಿದ್ದೇನೆ. ಅವನಿಗೆ ಸಹಾಯ ಮಾಡುವುದರಿಂದ ಒಂದು ಬಡಕುಟುಂಬದ ಉದ್ಧಾರವಾಗುತ್ತದೆ ಎಂದೆಲ್ಲ ಬಿ.ಪಿ.ಯವರು ಕಳಕಳಿಯ ಭಾಷಣ ಮಡಿದರು. ಕೃಷಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗುವುದಕ್ಕಿಂತ ರಸಿಕರನ್ನು ರಂಜಿಸುವ ನೃತ್ಯಕೂಟದಲ್ಲಿ ತಬಲಾ ನುಡಿಸಲು ಯೋಗ್ಯರಿದ್ದ, ಉದ್ದ ಕೂದಲಿನ, ತಾಂಬೂಲದ ತುಟಿಯ ಮೆಹ್ರಾ ಅವರು ತಮ್ಮ

ಆಯುಷ್ಯದಲ್ಲಿಯೇ ಯಾರನ್ನೂ ನಪಾಸ ಮಾಡಿಲ್ಲವೆಂದು ತಮ್ಮ ಮಹಿಮೆಯನ್ನು ಸಾರಿದ್ದರಿಂದ ಸಿಂಘನಿಗೆ ಸುಲಭವಾಗಿ ಪದವಿ ದೊರೆಯುವಂತಾಯಿತು. ಮುಂದೆ ರಾಜಸ್ಥಾನ ಸರಕಾರಕ್ಕೆ ಸಂಶೋಧನಾ ಸಹಾಯಕನೊಬ್ಬ ಬೇಕಾದಾಗ ಬಿ.ಪಿ.ಯವರನ್ನೇ ತಜ್ಞರೆಂದು ಕರೆದಿದ್ದರು. ಅದಕ್ಕೆ ಅರ್ಜಿ ಸಲ್ಲಿಸಿದ 'ಕಂಬಳಿಹುಳ'ದ ರೊಟ್ಟಿ ಜಾರಿತುಪ್ಪದಲ್ಲೇ ಬಿತ್ತು. ಜಯಪುರದಲ್ಲಿ ಆತ ಸಂಸಾರ ಹೂಡಿದ ಮೇಲೆ ಒಂದು ಚಿಕ್ಕಾಸನ್ನೂ ಮನೆಗೆ ಕಳಿಸದ್ದರಿಂದ ಮುದಿ ತಂದೆ-ತಾಯಿ ಕೊನೆಯವರೆಗೆ ಬಡವರಾಗಿಯೇ ಉಳಿದರು. ತನ್ನ ಮಗನ ಬಗ್ಗೆ ಎಷ್ಟೊಂದು ಕನಸು ಕಟ್ಟಿದ್ದೆ! ಎಂದು ತಂದೆ ಆಗಾಗ ಹಳಹಳಿಸುತ್ತಿದ್ದ.

ಕಾಲೇಜಿನವರು ವಾರ್ಷಿಕ ಕೃಷಿ ಪತ್ರಿಕೆಯೊಂದನ್ನು ನಡೆಸುತ್ತ ಬಂದಿದ್ದಾರೆ. ಹೆಸರಾಂತ ಪತ್ರಿಕೆಗಳು ನಿರಾಕರಿಸಿದ ವಿದ್ಯಾರ್ಥಿಗಳ ಮತ್ತು ಪ್ರಾಧ್ಯಾಪಕರ ಸಂಶೋಧನಾ ಪ್ರಬಂಧಗಳನ್ನು ಇದರಲ್ಲಿ ಪ್ರಕಟಿಸುವುದು ವಾಡಿಕೆ. ವಿಭಾಗದ ಮುಖ್ಯಸ್ಥರೆಂದ ಮೇಲೆ ಆ ವಿಷಯದಲ್ಲಿ ತಜ್ಞನೆಂದು ಪರಿಗಣಿಸುವ ರೂಢಿ, ನಮ್ಮಲ್ಲಿ ನಡೆದುಬಂದಿದೆಯಲ್ಲವೇ? ಅಂತೆಯೇ ಪ್ರಾಣಿ, ಕೀಟಶಾಸ್ತ್ರದ ಯಾವುದೇ ಲೇಖವನ್ನು ಪ್ರಕಟಿಸುವ ಪೂರ್ವದಲ್ಲಿ ಅವುಗಳ ಬಗ್ಗೆ ತಜ್ಞ ಅಭಿಪ್ರಾಯವನ್ನು ಬಿ.ಪಿ.ಯವರಿಂದ ಪಡೆಯುತ್ತಿದ್ದರು. ಅವರು ಒಂದಿಲ್ಲೊಂದು ನೆಪ ಹೂಡಿ ತನಗೆ ಬಿಡುವಿಲ್ಲ ಎಂದು ನಟಿಸಿ ನಮ್ಮಿಂದ ಅವುಗಳ ಬಗ್ಗೆ ಟಿಪ್ಪಣಿ ಬರೆಯಿಸಿ, ಸಂಪಾದಕರಿಗೆ ತಮ್ಮ ಹೆಸರಿನಲ್ಲಿಯೇ ಅವನ್ನು ಕಳಿಸುವ ರೂಢಿ ಇಟ್ಟುಕೊಂಡಿದ್ದರು. ಛಾಯಾಚಿತ್ರದ ಬಗ್ಗೆ ಅಧ್ಯಾಪಕರೊಬ್ಬರು ಬರೆದ ಲೇಖ ತೀರ ಜೊಳ್ಳು ಇದ್ದುದರಿಂದ ಅದು ಪ್ರಕಟಣೆಗೆ ಅನರ್ಹವೆಂದೂ, ಪ್ರಕಟಿಸುವುದಾದರೆ ಅದರಲ್ಲಿ ಬಹಳಷ್ಟು ಬದಲಾವಣೆ ಮಾಡಬೇಕೆಂದು ಸೂಚಿಸಿದರೂ, ಅದು ಇದ್ದಕ್ಕಿದ್ದಂತೆ ಪತ್ರಿಕೆಯಲ್ಲಿ ಮೂಡಿಬಂದದ್ದು ನೋಡಿ ಖೇದವಾಯಿತು. ಅಯೋಗ್ಯರಿಗಾಗಿ ಇಷ್ಟೊಂದು ವೇಳೆ ಹಾಳುಮಾಡಬಾರದೆಂದುಕೊಂಡೆ. ಬೇರೆ ಬೇರೆ ಕಾಲೇಜು - ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುವ "ಪರಸ್ಪರ ಸಹಕಾರ ಸಂಘ"ದ ಸದಸ್ಯ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳ ಸಂಶೋಧನಾ ಪ್ರಬಂಧಗಳನ್ನು ತಪಾಸಣೆಗೆಂದು ಬಿ.ಪಿ. ಅವರಿಗೆ ಕಳಿಸಿ ಕೊಡುತ್ತಿದ್ದರು. ಕಳಿಸಿದ ಎಲ್ಲವಕ್ಕೆ ಒಪ್ಪಿಗೆ ಸೂಚಿಸಬೇಕೆಂಬ ಒಪ್ಪಂದವಿದ್ದುದರಿಂದ, ಅವುಗಳ ಮಟ್ಟದ ಬಗ್ಗೆ ವಿವರವಾದ ಟಿಪ್ಪಣಿ ಕಳಿಸಬೇಕೆಂಬ ಕಡ್ಡಾಯವಿದ್ದುದರಿಂದ, ಅಷ್ಟನ್ನೂ ಮಾಡಲು ಮನಸ್ಸಿಲ್ಲದ ಬಿ.ಪಿ.ಯವರು ನನ್ನಂತಹವರ ಮೊರೆ ಹೋಗುತ್ತಿದ್ದರು. ಇಷ್ಟಾದರೂ ನನ್ನ ಭವಿಷ್ಯದ ದೃಷ್ಟಿಯಿಂದಲೇ ಈ ತರಬೇತಿ ಕೊಡುತ್ತಿದ್ದೇನೆಂಬ ಮಾತು ಬೇರೆ! ಪ್ರಬಂಧಗಳ ಸಂಗ್ರಹಗಳನ್ನು ಓದುವದಿರಲಿ, ನಾವು ಬರೆದದ್ದನ್ನು ಸಹ ಓದುವ ಗೋಜಿಗೆ ಹೋಗದೇ ಶೇಖರನ ಹತ್ತಿರ ಟಾಯ್‌ಪ್

ಮಾಡಿಸಿ ರಜಿಸ್ಟರ ಮಾಡಿ ಕಳಿಸಿಬಿಡುತ್ತಿದ್ದರು. ಮೌಖಿಕ ಪರೀಕ್ಷೆಗಳಿಗಾಗಿ ಕರೆ ಬಂದಾಗ ಹೆಚ್ಚಿನ ಅೀವಿಯಿಂದ ಪಂಜಾಬ, ಪಂತನಗರ, ಕಾನಪುರ, ಆನಂದಗಳಿಗೆ ಹೋಗಿ ಬರುವರು. ವಿಷಯಜ್ಞಾನ ಇರುವವರು, ದುಡಿಯುವವರು ಬೇರೆ, ಶ್ರೇಯಸ್ಸು, ಧನ ಪಡೆಯುವವರು ಬೇರೆ! ಎಂಬ ಕಟುಸತ್ಯದ ಪರಿಚಯವಾಗಹತ್ತಿತು.

ವೇಳಾಪತ್ರಿಕೆಯಲ್ಲಿ ತಾನೊಂದು ಪದವೀ ವರ್ಗಕ್ಕೆ ಪ್ರಯೋಗದ ಕ್ಲಾಸನ್ನು ತೆಗೆದುಕೊಳ್ಳುತ್ತೇನೆಂದು ಬಿ.ಪಿ. ಹೇಳಿದರಾದರೂ ನಂತರದ ದಿನಗಳಲ್ಲಿ ಅದನ್ನು ನನ್ನ ಕೊರಳಿಗೇ ಕಟ್ಟಿದರು. ನನಗೆ ರೂಢಿಯಿರಲೆಂದು ಅದಕ್ಕೂ ಒಪ್ಪಿಕೊಂಡು ಇಂಗ್ಲಿಷ್, ಹಿಂದಿಗಳಲ್ಲಿ ಕಲಿಸಲಾರಂಭಿಸಿದೆ. ಕೀಟಗಳು ನಿಸರ್ಗದ ಆವರಣದಲ್ಲಿ ಹೇಗೆ ಬೆಳೆಯುತ್ತವೆಯೆಂದು ಅಭ್ಯಸಿಸುವ ಸಲುವಾಗಿ ವಿದ್ಯಾರ್ಥಿಗಳನ್ನು ಹೊಲ-ತೋಟಗಳಿಗೆ ಕರೆದೊಯ್ಯುತ್ತಿದ್ದೆ. ನಾಲವತ್ತು ವಿದ್ಯಾರ್ಥಿಗಳ ತಂಡದಲ್ಲಿ ನಾಲ್ಕಂಟು ಜನರಷ್ಟೆ ಆಸಕ್ತಿವಹಿಸಿದ್ದರು. ಉಳಿದವರೆಲ್ಲ ಕೇವಲ ಹಾಜರಿ ಹಾಕಲು ಬರುತ್ತಿದ್ದರು. ಪ್ರತಿ ವಾರವೂ ಅವರು ಮಾಡಿದ ನಿರೀಕ್ಷಣೆಯನ್ನು ಪ್ರಯೋಗಾಲಯದ ಟಿಪ್ಪಣಿಯ ಪುಸ್ತಕದಲ್ಲಿ ಬರೆದು ನನ್ನಿಂದ ಪರೀಕ್ಷಿಸಿಕೊಳ್ಳಬೇಕಾಗುತ್ತಿತ್ತು. ಎಷ್ಟೋ ವಿದ್ಯಾರ್ಥಿಗಳು ಅದನ್ನು ಒಮ್ಮೆಯೂ ನನಗೆ ತೋರಿಸಿರಲಿಲ್ಲ. ಅವರಲ್ಲಿ ಮರ್ಟಿಯಾ ಎಂಬ ವಿದ್ಯಾರ್ಥಿಯೂ ಒಬ್ಬ. ಅವನ ದುರ್ದೈವಕ್ಕೆ ನಾನೇ ಪರೀಕ್ಷಕನಾಗಿದ್ದೆ. ಪರೀಕ್ಷೆಯ ಸಮಯದಲ್ಲಿ ಸುಸಜ್ಜಿತವಾದ ಒಂದು ಟಿಪ್ಪಣಿ ಪುಸ್ತಕ ತಂದದ್ದು ನೋಡಿ ಆಶ್ಚರ್ಯವಾಯಿತು. ಪರೀಕ್ಷಿಸಿ ನೋಡಿದಾಗ ಹಿಂದಿನ ವರ್ಷದ, ಬೇರಾರೋ ತಯಾರಿಸಿದ ಟಿಪ್ಪಣಿಗಳನ್ನು ತಂದು ಅದರಲ್ಲಿ ತಾನೇ ನನ್ನ ಸಹಿಯನ್ನು ಸರಳವಾಗಿ ಹಾಕಿದ್ದ! ಬಿ.ಪಿ.ಯವರಿಗೆ ಇದನ್ನು ತಿಳಿಸಿದಾಗ ಇದು ಘೋರ ಅಪರಾಧವಾದ್ದರಿಂದ ವಿವರಗಳನ್ನು ಬರೆದು ಕೊಟ್ಟರೆ ಡೀನರಿಗೆ ಕಳಿಸುವೆನೆಂದರು. ಹಾಗೆ ಮಾಡಿದ ನಂತರದ ದಿನಗಳಲ್ಲಿ ಡೀನರಿಗೆ ಅದನ್ನು ಕಳಿಸಿದ್ದೇನೆ, ಅವರು ವಿಶ್ವವಿದ್ಯಾಲಯಕ್ಕೆ ಕಳಿಸಿದ್ದಾರೆ ಎಂದು ಹೇಳುತ್ತಲೇ ಬಂದರು. ಆದರೆ ನಿಜ ಸಂಗತಿಯನ್ನು ಚಮನನು ತಿಳಿಸಿದಾಗ ಆಘಾತವಾಯಿತು. ಆ ವಿದ್ಯಾರ್ಥಿ ರಜಪೂತ ವಂಶಕ್ಕೆ ಸೇರಿದ್ದರಿಂದ ಪ್ರತಿಷ್ಠಿತ ರಜಪೂತ ಪ್ರಾಧ್ಯಾಪಕರೊಬ್ಬರು ಈ ವಿಷಯದಲ್ಲಿ ಬಿ.ಪಿ. ಯವರನ್ನು ಕಂಡರಂತೆ. ಸರ್ವಬಂಧು ನೀತಿಯ ಬಿ.ಪಿ. "ಹುಡುಗನೇನೋ ಅರಿಯದೇ ತಪ್ಪು ಮಾಡಿದ್ದಾನೆ. ಅದಕ್ಕಾಗಿ ಅವನನ್ನು ಕ್ರೂರವಾಗಿ ಶಿಕ್ಷಿಸಿ ಅವನ ಭವಿಷ್ಯವನ್ನೇ ಹಾಳುಮಾಡುವ ಕ್ರೌರ್ಯ ನನ್ನಲ್ಲಿ ಇಲ್ಲ"ವೆಂದು ಅದನ್ನು ಸಿದ್ಧ ಮಾಡುವುದರ ಸಲುವಾಗಿ ಬರೆದುಕೊಟ್ಟ ದೂರನ್ನು ಅವರ ಎದುರಿನಲ್ಲಿಯೇ ಹರಿದು ಹಾಕಿದರಂತೆ!

ಮೊದಲನೇ ವರ್ಷ ಕಂಡ ಸ್ನಾತಕೋತ್ತರ ವಿದ್ಯಾರ್ಥಿಗಳಷ್ಟು ಉತ್ಸಾಹಿ, ದುಡಿಮೆಗಾರರೂ, ಜಾಣರೂ ನಂತರದ ಎರಡು ವರ್ಷಗಳಲ್ಲಿ ಕಾಣಲಿಲ್ಲ. ವಿಶ್ವವಿದ್ಯಾಲಯವು ಪ್ರವೇಶ ನಿಯಮಗಳನ್ನು ಸಡಿಲಿಸಿ ಜಾತ್ಯತೀತ ಸಂಸ್ಥೆಯೆಂದು ಬೇರೆ ತೋರಿಸಲು ಹಲವಾರು ಜನಾಂಗಗಳ ಪ್ರಾತಿನಿಧಿಕ ವಿದ್ಯಾರ್ಥಿಗಳನ್ನು ಸೇರಿಸಿದ್ದೇ ಇದಕ್ಕೆ ಕಾರಣವಿರಬೇಕು. ಬಹಳ ಜನ ಕ್ಲಾಸು ತಪ್ಪಿಸುವುದು, ಕುಂಟುನೆಪ ಹೇಳಿ ಪರೀಕ್ಷೆಗಳನ್ನು ತಪ್ಪಿಸುವುದು, ಡಾಕ್ಟರರ ಸರ್ಟಿಫಿಕೇಟು ತೋರಿಸಿ ನಂತರ ಪರೀಕ್ಷೆ ನಡೆಸುವಂತೆ ಒತ್ತಾಯ ತರುವುದು, ಮುಂತಾದವನ್ನು ಪ್ರಾರಂಭಿಸಿದರು. ಶೇಖ್ ಮತ್ತು ಕವಡಿಯಾ ಎಂಬ ವಿದ್ಯಾರ್ಥಿಗಳು ಇಂಥವುಗಳನ್ನು ಮಾಡುವುದರಲ್ಲಿ ಕದೀಮರು. ಮರುಭೂಮಿಯಲ್ಲಿ ಓಡಲ ಗಿಡವೇ ಭಾರೀ ಮರವಾಗುವಂತೆ, ಇವರಿಬ್ಬರೂ 'ಭಾರೀ' ಆಟಗಾರರೆಂದೂ ಮೆರೆಯುತ್ತಿದ್ದರು. ಅಂತರ್ ಕಾಲೇಜು - ಪಂದ್ಯಾಟಗಳು ಉದಯಪುರದಲ್ಲಿ ನಡೆಯಲಿದ್ದರೂ ತಾವು ಭಾಗವಹಿಸುವುದಿಲ್ಲವೆಂದು ಅವರಾಗಿ ಬಂದು ಹೇಳಿದ್ದರಿಂದ ಆ ಸಮಯದಲ್ಲಿ ಪರೀಕ್ಷೆಗಳನ್ನು ಇಟ್ಟಿದ್ದೆ. ಪರೀಕ್ಷೆಯನ್ನು ತಪ್ಪಿಸಿಕೊಳ್ಳಲೆಂದೇ ಈ ಸುಳ್ಳನ್ನು ಹೇಳಿದ್ದಾಗಿ ಆನಂತರ ಪಂದ್ಯಾಟದಲ್ಲಿ ಅವರು ಭಾಗವಹಿಸಿದಾಗ ತಿಳಿಯಿತು. ಅವರಿಗಾಗಿ ಏರ್ಪಡಿಸಿದ ಇನ್ನೊಂದು ಪರೀಕ್ಷೆಯಲ್ಲಿ ಅವರ ಸತ್ವಪರೀಕ್ಷೆ ಮಾಡಬೇಕೆಂದುಕೊಂಡೆ. ಈ ಅಧ್ಯಾಯ ಬೇಡ, ಆ ಅಧ್ಯಾಯ ಕಲಿಸುವಾಗ ತಾವಿರಲಿಲ್ಲ ಎಂದೆಲ್ಲ ಹೇಳುವ ಸೌಲಭ್ಯ ಕೊಡಲು ಸಾಧ್ಯವಿಲ್ಲವೆಂದೆ. ಶೇಖರನ ಹತ್ತಿರ ಪ್ರಶ್ನೆಪತ್ರಿಕೆ ಟಾಯ್ಪ್ ಮಾಡಿಸಿದರೆ ಬಳಸಿದ ಕಾರ್ಬನ ನೋಡಿ ಇಲ್ಲವೇ ಬೇರೆ ವಿಧಾನದಿಂದ ಅವರಿಗೆ ಅವುಗಳ ಸುಳಿವು ಹತ್ತೀತೆಂದು, ನಾನೇ ಅವುಗಳನ್ನು ಟಾಯ್ಪ್ ಮಾಡಿದೆ. ಇಷ್ಟಾಗಿ ವಿದ್ಯಾರ್ಥಿಗಳು ಪರೀಕ್ಷೆಗೆ ಬರಲೇ ಇಲ್ಲ. ವರ್ಷದ ಕೊನೆಯಲ್ಲಿ, ಕಳೆದುಕೊಂಡ ಪರೀಕ್ಷೆಯನ್ನು ಇನ್ನೊಮ್ಮೆ ನಡೆಸುವುದು ಒಳ್ಳೆಯದೆಂದು ಬಿ.ಪಿ. ಪರೋಕ್ಷವಾಗಿ ಸೂಚಿಸಿದರು. ಅಜಮೇರದಲ್ಲಿ ರತ್ನಗಂಬಳಿಗಳನ್ನು ಮಾರುತ್ತಿದ್ದ ಶೇಖರನ ತಂದೆ ಒಂದು ರತ್ನಗಂಬಳಿಯೊಂದಿಗೆ ಬಿ.ಪಿ.ಯವರ ಮನೆಗೆ ಆಗಮಿಸಿದ ವಿಷಯವನ್ನು ಅವರ ನೆರೆಮನೆಯಾಚೆ ಇರುತ್ತಿದ್ದ ಸಚಾನ್ ಮೊದಲೇ ತಿಳಿಸಿದ್ದರಿಂದ ಬಿ.ಪಿ.ಯವರ ಸೂಚನೆಗೆ ತಲೆಬಾಗಲಿಲ್ಲ. ಅಂತೆಯೇ ಅವರು ವಿಶ್ವವಿದ್ಯಾಲಯಕ್ಕೇ ಅರ್ಜಿ ಬರೆದುಕೊಡುವಂತೆ ವಿದ್ಯಾರ್ಥಿಗಳಿಗೆ ಹೇಳಿ, ತಾವದನ್ನು ಸಿಫಾರಸು ಮಾಡಿ ಕಳಿಸಿ ತಿರುಗಿ ಅವರ ಪರೀಕ್ಷೆ ಮಾಡಿಸಬೇಕೆಂದು ವಿಶ್ವವಿದ್ಯಾಲಯದಿಂದ ಅಪ್ಪಣೆ ತರಿಸಿಕೊಂಡರು. ಕವಡಿಯಾ, ಎರಡು ಪರೀಕ್ಷೆಗಳನ್ನು ತಪ್ಪಿಸಿಕೊಂಡದ್ದರಿಂದ ಮರುವರ್ಷ ಇದೇ ವಿಷಯ ಕಲಿಯುವದೆಂದು ನಿರ್ಧರಿಸಿದ. ಶೇಖರನು ಬಿ.ಪಿ.ಯವರಿಂದ ಪರೀಕ್ಷೆ ಏರ್ಪಡಿಸಲು ಸಾಧ್ಯವಿದ್ದರೂ, ತನಗೆ ಬೇಕಾದ ಪ್ರಶ್ನೆಪತ್ರಿಕೆ,

ಗುಣಗಳನ್ನು ಕೊಡಿಸುವುದು ಸಾಧ್ಯವಿಲ್ಲವೆಂದು ಅರಿತಿದ್ದರಿಂದ, ನನಗೆ ಬೆಣ್ಣೆ ಹಚ್ಚಲು ಪ್ರಾರಂಭಿಸಿದ. ವಾರಾಂತ್ಯದಲ್ಲಿ ನಾನು ಜಯಪುರಕ್ಕೆ ಹೋಗುವದು ಗೊತ್ತಿದ್ದರಿಂದ ಬಸ್ಸಿನಲ್ಲಿ ಸ್ಥಳ ಕಾದಿರಿಸಿದ. ರವಿವಾರ ಜಯಪುರಕ್ಕೆ ಬಂದು ಭೆಟ್ಟಿಯಾದ. ಇದರಿಂದ ನನಗೆ ರೇಗಿ "ನಿನ್ನ ವಿಷಯಜ್ಞಾನವಷ್ಟೇ ಪರೀಕ್ಷೆಯಲ್ಲಿ ನಿನ್ನ ಸಹಾಯಕ್ಕೆ ಬರುವುದಲ್ಲದೇ ಇಂಥ ಸೇವೆ, ಭಕ್ತಿಗಳಲ್ಲ" ಎಂದು ಸ್ಪಷ್ಟವಾಗಿ ಹೇಳಿದರೂ ತಿರುಗಿ ರವಿವಾರ ರಾತ್ರೆ ರೇಲ್ವೆ ಸ್ಟೇಶನ್ ಮೇಲೆ ಸ್ವಾಗತಿಸಲು ಬಂದ. ಅವನಿಗೆ ವಿಷಯಜ್ಞಾನ ಇರುವಷ್ಟೇ ಗುಣಗಳು ದೊರಕಿದಾಗ ವಿದ್ಯಾರ್ಥಿಗಿಂತ ಹೆಚ್ಚು ಬಿ.ಪಿ.ಯವರಿಗೇ ಅಸಮಾಧಾನವಾದಂತೆ ಇತ್ತು.

ಸ್ನಾತಕೋತ್ತರ ವಿದ್ಯಾರ್ಥಿಗಳು ಒಂದೆರಡು ವರ್ಷಗಳಲ್ಲಿಯೇ ಶಿಕ್ಷಕ, ಸಂಶೋಧಕ, ಆಡಳಿತಗಾರರಾಗಿ ತಮ್ಮ ಹೊಣೆಗಾರಿಕೆಯನ್ನು ದಕ್ಷತೆಯಿಂದ ನಿರ್ವಹಿಸಬೇಕಾಗುವುದರಿಂದ ಕಾಲೇಜಿನಿಂದಲೇ ಇಂತಹ ತರಬೇತಿ ಸಿಗಬೇಕು ಎಂದು ಅವರಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ನಡೆದುಕೊಳ್ಳುತ್ತಿದ್ದರೂ, ಆಗಾಗ ಇವರು ಇಂತಹ ವಿಶ್ವಾಸ ಪಾತ್ರರೇ? ಎಂದು ಪರೀಕ್ಷಿಸಿ ನೋಡುತ್ತಿದ್ದೆ. ಒಮ್ಮೆ ಅವರ ಪರೀಕ್ಷೆ ನಡೆದಾಗ ಕಳ್ಳರನ್ನು ಕಾಯುವ ಪೋಲಿಸನಂತೆ ಮೇಲ್ವಿಚಾರಣೆ ನಡೆಸಲು ಮನಸ್ಸಿಲ್ಲದೇ ಪರೀಕ್ಷಾಗೃಹದ ಹೊರಗಡೆ ನಿಂತು ಬಾಗಿಲ ಕಾಜಿನಲ್ಲಿ ಕಾಣುವ ಪ್ರತಿಬಿಂಬದಿಂದ ವಿದ್ಯಾರ್ಥಿಗಳು ಏನು ನಡೆಸಿದ್ದಾರೆಂದು ನೋಡುತ್ತಲೇ ಇದ್ದೆ. ಹತ್ತು - ಹದಿನೈದು ನಿಮಿಷ ನಾನು ಒಳಗೆ ಬಾರದ್ದರಿಂದ, ಉಳಿದ ಅಧ್ಯಾಪಕರಂತೆಯೇ ಚಹಾಕ್ಕೋ, ಹರಟೆಗೋ ಹೋಗಿರಬೇಕೆಂದು ಬಗೆದು ಒಬ್ಬರಿಗೊಬ್ಬರು ಮೆಲುಧನಿಯಲ್ಲಿ ಕೇಳಲಾರಂಭಿಸಿದರು. ದಡ್ಡನೊಬ್ಬ ತನ್ನ ವರ್ಗದ ಟಿಪ್ಪಣಿಯಲ್ಲಿ ಉತ್ತರ ಹುಡುಕಲಾರಂಭಿಸಿದ. ಇನ್ನೊಬ್ಬ ಪುಸ್ತಕವನ್ನೇ ಎತ್ತಿಕೊಂಡ. ಸರಿ, ಜಾಣನೆನಿಸಿಕೊಂಡವರೂ, ದಡ್ಡರು ತಮಗಿಂತ ಹೆಚ್ಚಿನ ಗುಣಗಳನ್ನು ಪಡೆಯಬಾರದೆಂದು ತಾವೂ ನಕಲು ಮಾಡಲುದ್ಯುಕ್ತರಾದರು. ನಾನು ಕೊಟ್ಟ ಪ್ರಶ್ನೆಗಳಿಗೆ ನೇರ ಉತ್ತರ ವರ್ಗದ ಟಿಪ್ಪಣಿ, ಪುಸ್ತಕಗಳಲ್ಲಿ ಸಿಗುವಂತಿರಲಿಲ್ಲವಾದ್ದರಿಂದ ತಮಾಷೆ ನೋಡುತ್ತ ನಿಂತಿದ್ದೆ. ಯಾರೋ ನೀರು ಕುಡಿಯಲು ಏಳಲಿದ್ದಾಗ ಒಳಗೆ ಹೋಗಿ ಎಲ್ಲರಿಗೂ ಪೆನ್ನನ್ನು ಕೆಳಗಿಡುವಂತೆ ಹೇಳಿದೆ. ಜೀವನದಲ್ಲಿ ಪದವಿ, ವರ್ಗಗಳು ಮುಖ್ಯವಾದರೆ, ಒಳ್ಳೆಯ ನಡತೆ ಅದಕ್ಕೂ ಮುಖ್ಯವೆಂದೆ. 'ಕಳೆದ ಅರ್ಧತಾಸಿನಲ್ಲಿ ನನ್ನ ವಿದ್ಯಾರ್ಥಿಗಳು ಮಾಡಿದ್ದನ್ನು ನೋಡಿ ತಲೆ ತಗ್ಗಿಸುವಂತಾಗಿದೆ. ನಿಮ್ಮ ನಿಮ್ಮ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಂಡು ಜೀವನದಲ್ಲಿ ಇಂಥ ಮಾರ್ಗ ಅನುಸರಿಸುವುದಿಲ್ಲವೆಂದು ಆಶ್ವಾಸನ ಕೊಟ್ಟರೆ ಕ್ಷಮಿಸುತ್ತೇನೆ. ಇಲ್ಲದಿದ್ದರೆ ನಾನೇ ನಿಮ್ಮ ಕೃತ್ಯಗಳನ್ನು ಮೇಲಕ್ಕೆ ತಿಳಿಸಿ ಮುಂದಿನ ಕ್ರಮ ಕೈಕೊಳ್ಳುತ್ತೇನೆ' ಎಂದಾಗ

ಎಲ್ಲರೂ ತಲೆ ತಗ್ಗಿಸಿ ಕುಳಿತಿದ್ದರು. ಈ ದೂರನ್ನು ಬಿ.ಪಿ. ಯವರ ಹತ್ತಿರ ಒಯ್ದರೆ ಯಾರನ್ನೂ ಶಿಕ್ಷಿಸುವುದಿಲ್ಲ! ಎಂದು ಖಚಿತ ವಿದ್ದುದರಿಂದ ಅದಕ್ಕೆ ಪರಿಹಾರವನ್ನು ನಾನೇ ಕಂಡುಕೊಂಡೆ, ಯಾರೂ ಎದ್ದು ನಿಲ್ಲುವ ಸಾಹಸ ಮಾಡದ್ದರಿಂದ ವರ್ಗದಲ್ಲಿ ಜಾಣನೆನಿಸಿಕೊಂಡವನಿಗೆ 'ನೀನೇನೂ ತಪ್ಪು ಮಾಡಿಲ್ಲವೇ?' ಎಂದು ಕೇಳಿದೆ. ಕಾಲೇಜಿನಲ್ಲಿ, ಜಯಪುರದಲ್ಲಿ ಗುಲ್ಲಾದರೆ ಫಜೀತಿಯಾದೀತೆಂದು ಆತ ಬೆದರಿದ. ಎದ್ದು ನಿಂತು ತಾನು ಟಿಪ್ಪಣಿ ಪುಸ್ತಕದಲ್ಲಿ ನೋಡಿದ್ದು ಘೋರ ತಪ್ಪಾಯಿತು. ಇನ್ನೆಂದೂ ಇಂಥ ಕ್ಷುಲ್ಲಕ ಕೆಲಸ ಮಾಡಲಾರೆನೆಂದು ಮೆಲುಧನಿಯಲ್ಲಿ ಹೇಳಿ ಕುಳಿತ. ಇದರಿಂದ ಉಳಿದವರ ಮೈಚಳಿ ಬಿಟ್ಟಿರಬೇಕು ಎದ್ದು ನಿಂತು ಒಬ್ಬೊಬ್ಬರೇ ಕ್ಷಮೆ ಕೇಳಿದರು. ನಕಲು ಹೊಡೆದದ್ದರಿಂದ ಯಾವ ಲಾಭವೂ ಆಗಿಲ್ಲವೆಂದು ಅವರು ಪಡೆದ ಗುಣಗಳಿಂದ ಸ್ಪಷ್ಟವಿತ್ತು.

ಮರುವರ್ಷ, ಪ್ರಯೋಗಾಲಯದ ಸಹಾಯಕನೆಂದು ವೇತನ ಪಡೆದು ಸದಾ ಬಿ.ಪಿ.ಯವರ ಸೇವೆಯಲ್ಲಿ ತೊಡಗಿರುತ್ತಿದ್ದ ದಾಧೀಚನಿಗೆ ಸ್ನಾತಕೋತ್ತರ ಅಭ್ಯಾಸ ಕೈಕೊಳ್ಳಲು ವಿಶ್ವವಿದ್ಯಾಲಯ ಅಪ್ಪಣೆ ಕೊಟ್ಟಿತು. ಇಂಥವರಿಗೆ ಕೊಡುವ ಅರ್ಧ ವೇತನಕ್ಕಾಗಿ ದಿನದಲ್ಲಿ ಕೆಲವು ಗಂಟೆಗಳಷ್ಟು, ವಿಭಾಗದಲ್ಲಿ ಕೆಲಸ ಮಾಡಬೇಕಾಗುವುದರಿಂದ ಉಳಿದವರು ಎರಡು ವರ್ಷಗಳಲ್ಲಿ ಮುಗಿಸುವುದನ್ನು, ಇವರಿಗೆ ಮುಗಿಸಲು ಮೂರು ವರ್ಷದ ಅವಧಿ ಕೊಡಲಾಗುತ್ತದೆ. ಜೋಬನೇರದಂತೆ ಉದಯಪುರದಲ್ಲಿಯೂ ಒಬ್ಬ ಪ್ರೊಫೆಸರ ಇದ್ದದ್ದರಿಂದ ಸ್ನಾತಕೋತ್ತರ ವಿದ್ಯಾರ್ಥಿಗಳು ಒಂದು ವರ್ಷ ಇಲ್ಲಿ, ಇನ್ನೊಂದು ವರ್ಷ ಉದಯಪುರದಲ್ಲಿ ಅಭ್ಯಾಸ ಮುಂದುವರಿಸಬೇಕೆಂಬ ರೂಢಿ ಇತ್ತಾದರೂ ದಾಧೀಚನಿಗೆ ಇದು ಅನ್ವಯಿಸದಂತೆ ಬಿ.ಪಿ. ನೋಡಿಕೊಂಡರು. ಅವನು ಪ್ರತಿದಿನ (ಯಾವ ಪ್ರತಿಫಲವಿಲ್ಲದೇ) ಬಿ.ಪಿ.ಯವರ ಮಗ ಬಂಟಿಗೆ ಪಾಠ ಹೇಳಿಕೊಡುತ್ತಿದ್ದನಲ್ಲದೇ ವಿಭಾಗದ ಉತ್ತರ ಪತ್ರಿಕೆಗಳನ್ನು ತಿದ್ದುವದು, ಗುಣಗಳನ್ನು ಜೋಡಿಸುವುದು, ಗುಣಗಳ ಯಾದಿಯನ್ನು ತಯಾರಿಸಿ ಆಫೀಸಿಗೆ ಕಳಿಸಿಕೊಡುವುದು ಮುಂತಾದವನ್ನು ಮಾಡುತ್ತಿದ್ದ. ತಾನು ವಿಭಾಗದಲ್ಲಿ ನೌಕರಿ ಮಾಡುವದರ ಲಾಭ ಪಡೆಯಲು ಅಧ್ಯಾಪಕರೊಡನೆ ಆತ್ಮೀಯತೆ ತೋರಿಸಲಾರಂಭಿಸಿದ. ಉಳಿದ ಎಲ್ಲರಿಗಿಂತ ಹೆಚ್ಚಿನ ವಿಷಯಗಳನ್ನು ನಾನು ಕಲಿಸುತ್ತಿದ್ದುದರಿಂದ, ಬಿ.ಪಿ.ಯವರಿಗಷ್ಟೇ ಮೀಸಲಾದ "ಡಾಕ್ಟರ ಸಾಹೇಬ್" ಅಭಿಧಾನ ನನಗೂ ಬಂದಿತು! ಆದರೆ ಇಂಥವುಗಳಿಂದ ಆತ ಲಾಭ ಪಡೆಯದಂತೆ ಸದಾಕಾಲ ಜಾಗರೂಕನಾಗಿಯೇ ಇರುತ್ತಿದ್ದೆ. ಶೇಖರನಿಂದ ಪ್ರಶ್ನೆಗಳನ್ನು ಸುಲಭವಾಗಿ ದಾಧೀಚನು ಪಡೆಯಲು ಸಾಧ್ಯವಿದ್ದುದರಿಂದ ನಾನೇ ಅವುಗಳನ್ನು ಟಾಯ್‌ಪ್

ಮಾಡಲು ಪ್ರಾರಂಭಿಸಿದೆ. ಉಳಿದ ಅಧ್ಯಾಪಕರೆಲ್ಲ ತಮ್ಮ ಪ್ರಶ್ನೆಪತ್ರಿಕೆಗಳ ಕರಡು ಪತ್ರಿಕೆಗಳನ್ನು ಬಿ.ಪಿ. ಯವರಿಗೆ ತೋರಿಸಿ ಅವರ ಅಭಿಪ್ರಾಯ ಪಡೆಯುತ್ತಿದ್ದರೂ ನಾನೆಂದೂ ಆ ಗೋಜಿಗೆ ಹೋಗಲೇ ಇಲ್ಲ.

ಒಮ್ಮೆ ಸ್ನಾತಕೋತ್ತರ ವಿದ್ಯಾರ್ಥಿಗಳ 'ತಪ್ಪು - ಒಪ್ಪು'ಗಳ ಪರೀಕ್ಷೆ ತೆಗೆದುಕೊಂಡು, ಯಾರಾರು ಹೇಗೆ ಉತ್ತರಿಸಿದ್ದಾರೆ ಎಂದು ಒಮ್ಮೆ ಕಣ್ಣುಹಾಯಿಸಿ ಕಪಾಟಿನಲ್ಲಿ ಉತ್ತರ ಪತ್ರಿಕೆಗಳನ್ನು ಇಟ್ಟಿದ್ದೆ. ಮರುದಿನದ ವರ್ಗದ ತಯಾರಿ ಮಾಡಿಕೊಂಡು, ಮೂತ್ರ ವಿಸರ್ಜನೆಗೆ ಹೋಗಲೆಂದು ಕಪಾಟನ್ನು ಮುಚ್ಚಿ, ಖೋಲಿಯ ಚಿಲಕ ಹಾಕಿ ಹೋದೆ. ಐದೇ ನಿಮಿಷದಲ್ಲಿ ಹಿಂತಿರುಗಿ ಬರುತ್ತಿದ್ದಂತೆ ಕೋಣೆಯಲ್ಲಿ ಯಾರೋ ಕಪಾಟಿನ ಬಾಗಿಲು ಮುಚ್ಚಿದ ಸಪ್ಪಳವಾಯಿತು. ಒಳಗೆ ಹೋಗಿ ನೋಡುತ್ತೇನೆ, ದಾಧೀಚನು ನನ್ನಲ್ಲಿಲ್ಲದ ಸಾಮಾನು ಒಂದನ್ನು ಕೇಳಿ ಹೊರಹೊರಟ. ಸಂಶಯದಿಂದ ಕಪಾಟಿನಿಂದ ಉತ್ತರ ಪತ್ರಿಕೆಗಳನ್ನು ಹೊರಗೆ ಎಳೆದು ನೋಡಿದಾಗ ದಾಧೀಚನು ತಪ್ಪಾಗಿ ಬರೆದ ಉತ್ತರಗಳೆಲ್ಲ ಈಗ ಸರಿಯಾಗಿದ್ದವು! ಹತ್ತು ನಿಮಿಷಗಳ ನಂತರ ಆತ ಬಂದು "ಉತ್ತರ ಪತ್ರಿಕೆಗಳ ತಪಾಸಣೆ ಆಯಿತೇ?" ಎಂದು ಕೇಳಿದ. "ಇಲ್ಲ. ಅದನ್ನೇ ನೋಡುತ್ತಿದ್ದೇನೆ. ಪರೀಕ್ಷಾಗೃಹದಲ್ಲಿ ಬರೆದ ಉತ್ತರಗಳು ಕಪಾಟಿನಲ್ಲಿ ಹೇಗೆ ಬದಲಾಗಿ ಕುಳಿತವು? ಎಂದು ಯೋಚಿಸುತ್ತಿದ್ದೇನೆ" ಎಂದು ಕಟುವಾಗಿ ಹೇಳಿದಾಗ ಆತನ ಮುಖ ಬಿಳುಪೇರಿತು. ಕ್ಷಮಿಸೆಂದ. "ಬೇರೆ ಯಾರಾದರೂ ಮಾಡಿದ್ದರೆ ಕ್ಷಮಿಸಬಹುದಾಗಿತ್ತು. ಆದರೆ ನೀನು ನಮ್ಮ ಸಹೋದ್ಯೋಗಿ. ಪ್ರಶ್ನೆಪತ್ರಿಕೆಗಳನ್ನು ಸಾಯಕ್ಲೋಸ್ಟಾಯಿಲ್ ಮಾಡಲು ನಿನ್ನ ಹತ್ತಿರ ಕೊಟ್ಟಿರುತ್ತೇವೆ. ಬಿ.ಪಿ.ಯವರು ಉತ್ತರಪತ್ರಿಕೆಗಳನ್ನು ಸಹ ನಿನ್ನ ಕಡೆ ತಿದ್ದಿಸುತ್ತಾರೆ. ಒಮ್ಮೆ ಅಧ್ಯಾಪಕನಾದಿಯೆಂದರೆ ಇದೇ ಕಾಲೇಜಿನಲ್ಲಿ, ಇದೇ ವಿಭಾಗದಲ್ಲಿ ಕಲಿಸುತ್ತಿ. ನಿನ್ನಂತಹರ ನೀತಿ ನೋಡಿದರೆ ಹೀಗೆ! ಇಂಥ ಅಧ್ಯಾಪಕರಿಂದ ವಿದ್ಯಾರ್ಥಿಗಳೇನು ಕಲಿತಾರು?" ಎಂದು ಕೇಳಿದಾಗ ಕಣ್ಣೀರು ಸುರಿಸಿದ. "ಒಮ್ಮೆ ಜಾರಿದೆ; ದೊಡ್ಡ ಮನಸ್ಸು ಮಾಡಿ ಕ್ಷಮಿಸಿರಿ" ಎಂದು ಹಲುಬಿದ. ಅಷ್ಟರಲ್ಲಿ ಯಾರೋ ನನ್ನ ಕೋಣೆಗೆ ಬಂದದ್ದರಿಂದ ಎದ್ದುಹೋದ.

ದಾಧೀಚ ಬುದ್ಧಿಪೂರ್ವಕವಾಗಿ ನಾನಿಲ್ಲದಾಗ ಹೊಂಚು ಹಾಕಿ, ಸರಿ ಉತ್ತರಗಳನ್ನು ಬರೆದು ಇಡುವಾಗ ಸಿಕ್ಕಿಬಿದ್ದಿದ್ದ. ಅವನಿಗೆ ಶಿಕ್ಷೆಯಾಗುವುದು ಎಲ್ಲ ದೃಷ್ಟಿಯಿಂದ ಯೋಗ್ಯವಾಗಿತ್ತು. ಆದರೆ ಅವನನ್ನು ಶಿಕ್ಷಿಸುವವರು ಯಾರು? ಎಲ್ಲ ಪುರಾವೆಗಳೊಡನೆ ಬಿ.ಪಿ. ಯವರಿಗೆ ದೂರು ಕೊಟ್ಟರೆ, ಅವರು ನನ್ನನ್ನು ಮೋಸಗೊಳಿಸುವರೇ ಹೊರತು ಆತನನ್ನು ಶಿಕ್ಷಿಸಲಾರರು, ಎಂದು ಖಂಡಿತ ಗೊತ್ತಿತ್ತು.

ಮನೆಗೆ ಹೋಗಿ ಕಾಫಿ ಮಾಡಿ ಕುಡಿಯುತ್ತಿದ್ದಾಗ ದಾಧೀಚ ಬಂದೇ ಬಂದ. ಬೇಡವೆಂದರೂ ಇನ್ನೊಂದು ಗ್ಲಾಸು ಕಾಫಿ ತಯಾರಿಸಿ ಕೊಟ್ಟೆ. ಅದನ್ನು ಕುಡಿದು ಮುಗಿಸಿದ ನಂತರ ಉತ್ತರ ಪತ್ರಿಕೆಯ ಪ್ರಸ್ತಾಪವನ್ನು ತಾನೇ ಎತ್ತಿದ. ಕಾಲೇಜಿನಲ್ಲಿ ಗುಲ್ಲಾದರೆ ತನ್ನ ಮಾನ ಏನು ಉಳಿಯಿತೆಂದ. "ಈ ವಿಷಯ ಮೊದಲೇ ಯೋಚಿಸಬೇಕಾಗಿತ್ತು" ಎಂದೆ. ನನ್ನ ಎರಡೂ ಕಾಲುಗಳನ್ನು ಗಟ್ಟಿಯಾಗಿ ಹಿಡಿದು ಕಣ್ಣೀರು ಸುರಿಸಿದ. "ಜೀವನದಲ್ಲಿ ಸ್ವಾರ್ಥ ಸಾಧನೆಗೆ ವಾಮಮಾರ್ಗಗಳನ್ನು ಎಂದೂ ಅನುಸರಿಸುವುದಿಲ್ಲವೆಂದು ವಚನ ಕೊಟ್ಟು ಅದರಂತೆ ನಡೆಯುವ ಧೈರ್ಯವಿದ್ದರೆ ಮಾತ್ರ ಕ್ಷಮಿಸಬಲ್ಲೆ" ಎಂದಾಗ "ಲಿಖಿತದಲ್ಲಿ ಕೊಡಲು ಸಿದ್ಧನಿದ್ದೇನೆಂದ." "ಕುತ್ತಿನಿಂದ ಪಾರಾಗಲು ಎಲ್ಲರೂ ಹೀಗೇ ಹೇಳುತ್ತಾರೆ. ಲಿಖಿತವೇನೂ ಬೇಡ. ನಿನ್ನ ಮಾತಿನಲ್ಲಿ ನಂಬಿಕೆಯಿದೆ. ನಿನಗೆ ನೀನೇ ದ್ರೋಹ ಬಗೆದರೆ ಏನೂ ಮಾಡುವಂತಿಲ್ಲ. ದೇವರು ನಿನ್ನ ಸಹಾಯಕ್ಕೆಂದೂ ಬರಲಾರ" ಎಂದು ಬೀಳ್ಕೊಂಡೆ. ನಾನಲ್ಲಿ ಇರುವ ತನಕವಾದರೂ ಆತ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದ.

೩೨. ಯಾರ ಸೋಲು?

ಜೋಬನೇರಿಗೆ ಬಂದ ಹೊಸದರಲ್ಲಿ, ಕೃಷಿ ಕಾಲೇಜಿಗಿಂತ ಅರಣ್ಯ - ಸಂಶೋಧನ ಶಾಖೆಗೆ ನನ್ನ ತರಬೇತಿಯ ಲಾಭ ಹೆಚ್ಚು ಆಗುವುದೆಂದು ಬರೆದಿದ್ದರಿಂದ ಸಿ.ಎಸ್. ಆಯ್. ಆರ್ ದವರು ಡೆಹರಾಡೂನಿನ ಅರಣ್ಯ - ವಿಜ್ಞಾನ ಕಾಲೇಜಿಗೆ ನನ್ನನ್ನು ವರ್ಗಾಯಿಸಲು, ಕೆಲ ತಿಂಗಳ ನಂತರ ಕಾಲೇಜ ಅಧಿಕಾರಿಗಳ ಒಪ್ಪಿಗೆಯನ್ನು ಕೇಳಿದರು. ಉತ್ತರ ರೂಪದಲ್ಲಿ "ನಮ್ಮ ಕೃಷಿ - ವಿಶ್ವವಿದ್ಯಾಲಯದಲ್ಲಿ ಎರಡು ರೀಡರ್ ಸ್ಥಳಗಳು ಸದ್ಯದಲ್ಲೇ ಭರ್ತಿಯಾಗಲಿವೆ. ಅವುಗಳಲ್ಲಿಯ ಒಂದು ಸ್ಥಳ ಡಾ. ಕಾಮತರಿಗೆ ಸಿಗುವಂತಿದ್ದರಿಂದ ಅವರನ್ನು ವರ್ಗಾಯಿಸದೇ ಇರುವುದು ವಾಸಿ" ಎಂದು ಬರೆದಿದ್ದರು. ಕಾಲೇಜ ಅಧಿಕಾರಿಗಳು ತಾವಾಗಿಯೇ ಒಳ್ಳೆಯ ನೌಕರಿ ಕೊಡಲು ಮುಂದೆ ಬಂದರೆ ಏಕೆ ಬೇಡವೆನ್ನಲಿ? ಎಂದು ನಾನೂ ಸುಮ್ಮನಿದ್ದೆ. ವಿಜ್ಞಾನಿಗಳ ಪೂಲಿನಲ್ಲಿ ಒಂದೆರಡು ವರ್ಷಗಳಿಗಿಂತ ಹೆಚ್ಚು ಇರಲು ಸಾಮಾನ್ಯವಾಗಿ ಕೊಡದಿದ್ದರೂ ವಿಶ್ವವಿದ್ಯಾಲಯದಲ್ಲಿ ನನ್ನನ್ನು ಸೇರಿಸಿಕೊಳ್ಳಲಿರುವರೆಂಬ ಭರವಸೆಯಿತ್ತದ್ದರಿಂದ ಪೂಲಿನವರು ಇನ್ನೂ ಹೆಚ್ಚು ಕಾಲ ಇರಗೊಟ್ಟರು. ಕೊನೆಗೊಮ್ಮೆ ತುಂಬ ಕಾದ ಮೇಲೆ ವೃತ್ತಪತ್ರಗಳಲ್ಲಿ ರೀಡರ್ ಸ್ಥಳಗಳ ಜಾಹೀರಾತು ಬಂದಾಗ ಕೀಟ ವಿಭಾಗದಲ್ಲಿ ಚಟುವಟಿಕೆಗಳು ಪ್ರಾರಂಭವಾದವು. ಎಲ್ಲ ಅಧ್ಯಾಪಕರೂ ಅರ್ಜಿಗಳನ್ನು ಸಲ್ಲಿಸಿದರು. ಯಾರು ಯಾರು? ತಜ್ಞರು ಬರಬಹುದು? ಎಂತಹ ರಾಜಕಾರಣ ಏಳಬಹುದು? ವಿಜಯಮಾಲೆ ಯಾರ ಕೊರಳಿಗೆ ಬೀಳಬಹುದು? ಎಂಬ ಬಗ್ಗೆ ಊಹಾಪೋಹಗಳು ಪ್ರಾರಂಭವಾದವು. ಬಿ.ಪಿ. 'ತಮ್ಮ ಕುದುರೆ ಇನ್ನೂ ಸೋತಿಲ್ಲವೆಂದೂ ಆದ್ದರಿಂದ ಒಂದು ಸ್ಥಳ ನನಗೆ ಸಿಗುವುದು ಖಂಡಿತವೆಂದೂ' ಹೇಳುತ್ತ ಬಂದರು. ಆದರೆ ಅವರ ಮಾತನಾಡುವ ಬಾಯಿಗೂ, ವಿಚಾರಿಸುವ ಬುದ್ಧಿಗೂ ನೇರ ಸಂಬಂಧವಿಲ್ಲವೆಂದು ಈಗಾಗಲೇ ಕಂಡುಕೊಂಡಿದ್ದೆ. ನನ್ನ ಅಪನಂಬಿಗೆ ಖಚಿತಪಡಿಸಲೆಂದೋ ಏನೋ ಎಂಬಂತೆ ಒಂದು ದಿನ ಬಂದು, "ಇಂಟರವ್ಯೂಗಳು ನಡೆದು, ಅದರ ಫಲಿತಾಂಶ ತಿಳಿಯಲು ಎಷ್ಟು ಕಾಲ ಹಿಡಿಯುತ್ತದೆ ಎಂದು ಹೇಳಲು ಬರುವಂತಿಲ್ಲ. ವಿಜ್ಞಾನಿಗಳ ಪೂಲಿನವರೂ ತಗಾದೆ ಪ್ರಾರಂಭಿಸಿದ್ದಾರೆ. ಆದ್ದರಿಂದ ನಿಮಗೀಗ ಸಿಗುವಷ್ಟು ಇಲ್ಲವೇ

ಇನ್ನೂ ಸ್ವಲ್ಪ ಹೆಚ್ಚು ವೇತನದ ಮೇಲೆ ನೀವಿಲ್ಲಿ ಲೆಕ್ಚರರ್ ಆಗಿ ಸೇರುವುದು ಒಳ್ಳೆಯದು. ಇದರ ಬಗ್ಗೆ ಡೀನರ ಮನಸ್ಸನ್ನು ನಾನು ಒಲಿಸುತ್ತೇನೆ. ವಿಶ್ವವಿದ್ಯಾಲಯದ ಸೇವೆಯಲ್ಲಿ ಒಮ್ಮೆ ಸೇರಿಕೊಂಡರೆ ಹೊಸದಾಗಿ ನಿರ್ಮಾಣವಾಗುತ್ತಿರುವ ಕ್ವಾರ್ಟರ್ಸ್‌ಗಳಲ್ಲಿ ನಿಮಗೂ ಒಂದು ಮನೆ ಸಿಗಬಹುದು. ಈ ವ್ಯವಸ್ಥೆ ರೀಡರ್ ಆಗಿ ನೇಮಕ ಹೊಂದುವಷ್ಟು ಕಾಲಾವಧಿಗೋಸ್ಕರ ಮಾತ್ರವಾದ್ದರಿಂದ ನಿಮ್ಮ ವಿರೋಧ ಇಲ್ಲವೆಂದು ಬಗೆಯುತ್ತೇನೆ" ಎಂದು ನನ್ನ ಮನಸ್ಸಿನ ಆಳವನ್ನು ಅಳೆಯಲು ಯತ್ನಿಸಿದರು. ನನ್ನನ್ನು ಹೋಗಗೊಡುವ ಮನಸ್ಸು ಇಲ್ಲವಾದರೂ ರೀಡರ್‌ನಾಗಿ ಸೇರಿಸಿಕೊಳ್ಳುವ ಇಚ್ಛೆಯೂ ಇಲ್ಲವೆಂದು ಅರಿತಿದ್ದರಿಂದ "ಲೆಕ್‌ಚರರ್ ಆಗಿ ರೀಡರನ ಪಗಾರ ಪಡೆಯುವುದಕ್ಕಿಂತ, ರೀಡರ್ ಹುದ್ದೆ ಕೊಟ್ಟು ಲೆಕ್ಚರರ್ ಪಗಾರ ಕೊಟ್ಟರೂ ನನ್ನ ಆತಂಕವಿಲ್ಲ" ಎಂದಿದ್ದರಿಂದ ಅವರಿಗೆ ಅಷ್ಟೊಂದು ಸಂತೋಷವಾಗಲಿಲ್ಲ.

ಬಹುಕಾಲದ ನಂತರ ಇಂಟರವ್ಯೂದ ತಾರೀಕು ನಿಶ್ಚಯವಾದಾಗ ಜೋಬನೇರದಿಂದ ಮೂವರು, ಉದಯಪುರದಿಂದ ನಾಲ್ವರು ಬೇರೆ ಕಡೆಯಿಂದ ಇನ್ನೂ ಕೆಲವರು ಬಂದರು. ದಿಲ್ಲಿಯಿಂದ ತಮಗೆ ಬೇಕಾದ ತಜ್ಞರನ್ನು ಕರೆಸುವುದರಲ್ಲಿ ಬಿ.ಕೆ. ಯಶಸ್ವಿಯಾಗಿದ್ದರು. ನಾನು ಯಾವ ಪಂಗಡಕ್ಕೂ ಸೇರದಿದ್ದರೂ ನನ್ನ ಆಯ್ಕೆಯಾಗಬೇಕೆಂದು ಹಿಂದಿನ ಡೀನರಿಗೆ ಹೆಚ್ಚಿನ ಉತ್ಕಂಠೆ ಇತ್ತು. ಬಿ.ಪಿ. ಅವರು, ಎದುರಾಳಿಯ ಉಮೇದುವಾರನನ್ನು ಸೋಲಿಸಬೇಕೆಂಬ ಕಿನಿಸಿನಿಂದ ನನ್ನನ್ನು ಎತ್ತಿಕಟ್ಟಿದರು. ವಿಶ್ವವಿದ್ಯಾಲಯದಲ್ಲಿ ಬಹಳ ಕಾಲದಿಂದ ಅಧ್ಯಾಪಕರಾಗಿದ್ದ ಒಬ್ಬ ಉಮೇದುವಾರರು, ಈ ಅವಕಾಶವನ್ನು ಕಳೆದುಕೊಳ್ಳಬಾರದೆಂದು, ಧಾನ್ಯ ಕೀಟಗಳ ಮೇಲಿನ ಸಾವಿರಾರು ಛಾಯಾಚಿತ್ರಗಳುಳ್ಳ ಪ್ರಬಂಧ ಒಂದನ್ನು ಕಟ್ಟು ಒಣಗುವ ಪೂರ್ವದಲ್ಲಿಯೇ ಹೊತ್ತು ತಂದಿದ್ದರು! ಉಪ ಕುಲಪತಿಗಳು, ಇಬ್ಬರು ಡೀನರು, ತಜ್ಞರು, ಬಿ.ಕೆ. ಮತ್ತು ಬಿ.ಪಿ. ರಜಿಸ್ಟ್ರಾರ, ಕಂಟ್ರೋಲರ ಎಲ್ಲರೂ ಸೇರಿದ ಮೇಲೆ ಸಂದರ್ಶನ ಪ್ರಾರಂಭವಾಯಿತು. ವಿಶ್ವವಿದ್ಯಾಲಯದ ಹೊರಗಿನವರನ್ನು ಹದಿನೈದೇ ನಿಮಿಷಗಳಲ್ಲಿ ಹಿಂದಕ್ಕೆ ಕಳಿಸಿದರೆ ಒಳಗಿನವರನ್ನು ಮುಕ್ಕಾಲು ಗಂಟೆಯ ತನಕ ಇರಿಸಿಕೊಂಡರು. ಅರ್ಧಕ್ಕೂ ಕಡಿಮೆ ಉಮೇದುವಾರರ ಇಂಟರವ್ಯೂ ಮುಗಿದಿರಲಿಲ್ಲ. ಊಟಕ್ಕೆ ಎದ್ದರು. ಬಿ.ಕೆ.ಯವರ ಹುರಿಯಾಳು ಚೆನ್ನಾಗಿ ಮಾಡಿರಲಿಲ್ಲವೆಂದು ಅವರು ಅಸಂತುಷ್ಟರಾಗಿದ್ದಾರೆಂದು ಜೋಬನೇರದವರಿಗೆ ತಿಳಿಯಿತು. ಊಟದ ನಂತರ ಮೊದಲನೇ ಸರದಿಯೇ ನನ್ನದಾಗಿತ್ತು. ಉಪಕುಲಪತಿಗಳು ಹಿಂದಕ್ಕೆ ಯು.ಪಿ.ಎಸ್.ಸಿ.ಯಲ್ಲಿ ಉಚ್ಚ ಅಧಿಕಾರಿಗಳಾಗಿದ್ದರಿಂದ, ನ್ಯೂಯಾರ್ಕದಲ್ಲಿ ಅದರ ವತಿಯಿಂದ ಯಾರು ನನ್ನ ಇಂಟರವ್ಯೂ ತೆಗೆದುಕೊಂಡಿದ್ದರು ಎಂದು ವಿಚಾರಿಸಿದರು. ನಂತರ ಕೀಟಶಾಸ್ತ್ರಕ್ಕೆ ಸಂಬಂಧಪಟ್ಟ ಒಂದು ಪ್ರಶ್ನೆ ಕೇಳಿ ಉತ್ತರ ಸರಿಯಾಗಿದೆಯೇ

ಎಂದು ತಜ್ಞರಿಗೆ ವಿಚಾರಿಸಿದರು. ತಜ್ಞರು ಮೂರು ನಾಲ್ಕು ಮಾಮೂಲಿ ಪ್ರಶ್ನೆಗಳನ್ನು ಕೇಳಿದ ನಂತರ ಬಿ.ಪಿ.ಯವರೂ ಒಂದೆರಡು ಪ್ರಶ್ನೆ ಕೇಳಿದರು. ಇನ್ನು ಹೋಗಬಹುದು ಎಂದು ಉಪಕುಲಪತಿಗಳು ಹೇಳಿದಾಗ ಬಿ.ಕೆ. ನನ್ನ ಡಾಕ್ಟರೇಟಿನ ಪ್ರಗತಿಪತ್ರಿಕೆ ಪಡೆದು ಆನಂತರ ಕಳಿಸುವೆನೆಂದರು.

ಬಿ.ಕೆ. ತಮಗೆ ಸೋಲು ಕಟ್ಟಿಟ್ಟದ್ದೆಂದು ಅರಿವಾಗಿ, ಭೋಜನದ ವಿಶ್ರಾಂತಿಯ ಕಾಲಕ್ಕೇ ಪೂರ್ವಯೋಜಿತ ಕುಹಕದಾಟ ಪ್ರಾರಂಭಿಸಿದರು. ಉಪಕುಲಪತಿಗಳಿಗೆ ತುರ್ತಾದ ಸಭೆಯೊಂದಕ್ಕೆ ಬರುವಂತೆ, ಫೋನ ಕರೆ ಮಾಡಿಸಿ ಅವರು ಹೋಗುವಂತೆ ಮಾಡಿದರು. ಅದೇ ಸಮಯದಲ್ಲಿ ರೀಡರ್ ಸ್ಥಳಕ್ಕೆ ಅರ್ಜಿ ಸಲ್ಲಿಸಿ, ಬೆಳಿಗ್ಗೆ ಬಂದು ನಂತರ ಇಂಟರವ್ಯೂ ಕೊಡಬಾರದೆಂದು ನಿರ್ಧರಿಸಿ ಮನೆಗೆ ಹೋಗಿದ್ದ ಶ್ರೀ ಡೋಗ್ರಾರಿಗೆ ಕೂಡಲೇ ಬರಬೇಕೆಂದು ನಿರೋಪ ಕಳಿಸಿದರು. ಶ್ರೀ ಡೋಗ್ರಾ, ಉದಯಪುರದ ವಿಜ್ಞಾನ ಕಾಲೇಜಿನಲ್ಲಿ ಲೆಕ್‌ಚರರ್ ಆಗಿದ್ದರು. ಕೃಷಿ ಕಾಲೇಜಿನಲ್ಲಿ ಕಲಿಸಬೇಕಾದ ತಾತ್ವಿಕ ಕೀಟಶಾಸ್ತ್ರವನ್ನು ಅಭ್ಯಸಿಸಿಯೂ ಇರಲಿಲ್ಲ. ಅದರ ಯಾವ ತರಬೇತಿಯೂ ಅವರಿಗೆ ಇರಲಿಲ್ಲ. ಆದರೂ ಬಿ.ಕೆ. ಉಪಕುಲಪತಿಗಳು ಹಿಂತಿರುಗುವಷ್ಟರಲ್ಲಿ ಇಂಟರವ್ಯೂ ಮುಗಿಸಿಯೇ ಬಿಟ್ಟರು. ಚರ್ಚೆಯ ಕಾಲದಲ್ಲಿ, ಉಪಕುಲಪತಿಗಳು, ತಮ್ಮ ವಿಶ್ವವಿದ್ಯಾಲಯದಲ್ಲಿ ಅತಿಥಿಯಾಗಿ ಸೇವೆ ಸಲ್ಲಿಸಿದ ಡಾ. ಕಾಮತರು ಉಚ್ಚ ತರಬೇತಿ, ಸ್ನಾತಕೋತ್ತರ ಕಲಿಸುವಿಕೆಗಳ ಅನುಭವ ಎರಡರಲ್ಲೂ ಯೋಗ್ಯರಿರುವುದರಿಂದ ಅವರ ಆಯ್ಕೆಯಾದರೆ ತಮಗೆ ಸಂತೋಷವಾಗುವುದೆಮದು ತಮ್ಮ ಅಭಿಪ್ರಾಯ ತಿಳಿಸಿದರಂತೆ. "ವಿದೇಶಿ ಡಾಕ್ಟರೇಟು ತಳಹದಿಯ ಮೇಲೆಯೇ ರೀಡರ್‌ನನ್ನಾಗಿ ಮಾಡುವದು ಸರಿಯಲ್ಲವೆಂದು ಎಮ್.ಎಸ್.ಸಿ. ಆಗಿದ್ದ ಶರ್ಮ ಮತ್ತು ಡೋಗ್ರಾರೇ ಇರಲಿ" ಎಂದು ತಜ್ಞರು ವಾದಿಸಿದರಂತೆ. ಈ ನಿರ್ಣಯಕ್ಕೆ ತಮ್ಮ ಅನುಮೋದನೆಯಿಲ್ಲವೆಂದು ಕೆಲವರು ಬರೆದರಂತೆ. ಅಂತೂ ಆಯ್ಕೆಯಾಗಲಿಲ್ಲವೆಂದು ನನಗಿಂತ ಡೀನರಿಗೆ ಹೆಚ್ಚಿನ ಆಘಾತವಾಗಿತ್ತು. ಮರುದಿನ ಕರೆಯಿಸಿಕೊಂಡು "ವಿಶ್ವವಿದ್ಯಾಲಯದ ಆಂತರಿಕ ರಾಜಕಾರಣಕ್ಕೆ ನೀನು ತುತ್ತಾಗಿರುವಿ" ಎಂದು ನಡೆದದ್ದನ್ನೆಲ್ಲ ಅವರೇ ವಿವರಿಸಿದರು. ನನ್ನಿಂದ ಆದಷ್ಟು ಸಹಾಯ ಮಾಡುತ್ತೇನೆ ಎಂದು ವಿಶ್ವಾಸದಿಂದ ಬೀಳ್ಕೊಂಡರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಸ್ಥಾನ ಸಿಗದಿದ್ದರಿಂದ ಹೆಚ್ಚಿನ ನಿರಾಶೆಯಾಗದಿದ್ದರೂ ಮುಂದೇನು? ಎಂಬ ಸಮಸ್ಯೆ ತೀವ್ರವಾಗಿ ಕಾಡಲಾರಂಭಿಸಿತು. ಯು.ಪಿ.ಎಸ್.ಸಿ.ಯವರೇ ಕಳಿಸಿದ ಹತ್ತಾರು ನೌಕರಿಗಳಿಗೆ ಅರ್ಜಿ ಸಲ್ಲಿಸಿದ್ದೆ. ಈ ನೌಕರಿಗಳೆಲ್ಲ ಪೂರ್ವ ಸಿದ್ಧ ವ್ಯಕ್ತಿಗಳಿಗೇ ಇರುವುದರಿಂದ ಅವು ಬರೆ ಹೆಸರಿಗಾಗಿ

ಕೊಡುವ ಜಾಹೀರಾತುಗಳಾಗಿದ್ದವು. ರಾಜಸ್ಥಾನ ವಿಶ್ವವಿದ್ಯಾಲಯ, ಪಂತನಗರ, ಪಂಜಾಬದ ಕೃಷಿ ವಿಶ್ವವಿದ್ಯಾಲಯಗಳು, ಲಖನೌದ ಕಬ್ಬಿನ ಸಂಶೋಧನಾಲಯ, ಮೈಸೂರಿನ ಕೃಷಿ ವಿಶ್ವವಿದ್ಯಾಲಯ. ಕಾಫಿಬೋರ್ಡ, ಮಲೇರಿಯಾ ನಿರ್ಮೂಲನ ಖಾತೆ, ನೇಪಾಳದ ಶಾಂತಿ ಸಂಧಾನಗಳ ಮಿಷನ್‌ದ ಜಾಹೀರಾತುಗಳಿಗೆ ಸಲ್ಲಿಸಿದ ಅರ್ಜಿಗಳು ಇವುಗಳಲ್ಲಿ ಮುಖ್ಯವಾದವು. ಆದರೆ ಎಲ್ಲೆಲ್ಲಿಯೂ ನಿರಾಶೆಯೇ ಕಾದಿತ್ತು. ನಾನು ಕಲಿತ ವಿಶ್ವವಿದ್ಯಾಲಯದಲ್ಲಿಯ ಜಾಹೀರಾತಿಗೆ ಅರ್ಜಿಯೊಂದನ್ನು ಸಲ್ಲಿಸಿ, ಕಾಯುತ್ತಿದ್ದಾಗಲೇ ಆ ಸ್ಥಳ ಯಾರಿಗಾಗಿ ಇದೆ? ಎಂಬುದರ ಬಗ್ಗೆ ವಿವರವಾದ ವರದಿ ತಲುಪಿತು. ಇಂತಹ ಪರಿಸ್ಥಿತಿಯಲ್ಲಿರುವಾಗ ಸಿ.ಎಸ್.ಆಯ್. ಆರ್ ದವರ ಪತ್ರ ಬಂದಿತು. "ವಿದೇಶದಿಂದ ಮರಳಿಬಂದವರಿಗೆ ಶಾಶ್ವತ ನೌಕರಿ ಸಿಗುವ ತನಕ ತೊಂದರೆಯಾಗಬಾರದೆಂದು ವಿಜ್ಞಾನಿಗಳ ಪೂಲು ಧನಸಹಾಯ ಕೊಡಮಾಡಿ, ನಿಮ್ಮ ಸೇವೆಯನ್ನು ಉದಯಪುರ ಕೃಷಿ ವಿಶ್ವವಿದ್ಯಾಲಯಕ್ಕೆ ನೀಡಿತ್ತು. ಈ ಅವಧಿಯಲ್ಲಿ ನಿಮಗೆ ನೌಕರಿ ಸಿಗಲಾರದೇ ಇದ್ದದ್ದು ವಿಷಾದದ ಸಂಗತಿ. ಇನ್ನು ಮೂರು ತಿಂಗಳಿನಲ್ಲಿ ನೀವು ಬೇರೊಂದು ನೌಕರಿ ಹುಡುಕಿಕೊಳ್ಳದಿದ್ದರೆ ನಿಮಗೆ ಕೊಡುವ ಧನ ಸಹಾಯ ನಿಲ್ಲಿಸುವ ಪ್ರಸಂಗ ಬಂದೀತು" ಎಂದು ಅದರಲ್ಲಿ ಬರೆಯಲಾಗಿತ್ತು. ಆದಕ್ಕೆ ಖಾರವಾಗಿಯೇ ಉತ್ತರ ಬರೆದೆ. "ಭಾರತ ಸರಕಾರ ಉದಾರ ಮನಸ್ಸಿನಿಂದ ನನ್ನಂತಹ ನಿರುದ್ಯೋಗಿ, ವಿಜ್ಞಾನಿಗಳಿಗೆ ಪೋಟಗಿ ಕೊಡುತ್ತಿರುವುದು ಹೆಮ್ಮೆಯ ವಿಷಯ. ಸರಕಾರ ಮತ್ತು ಜನತೆ ಈ ಮೊತ್ತವನ್ನು 'ಪೋಟಗಿ' ಎಂದೇ ಭಾವಿಸಿದರೂ ನಾನು ಮಾತ್ರ ಅದಕ್ಕೆ ಪ್ರತಿಯಾಗಿ ಕಷ್ಟಪಟ್ಟು ದುಡಿದಿದ್ದೇನೆ. ಬೆವರು ಸುರಿಸಿದ್ದೇನೆ. ಈ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯ ಅನುಕೂಲ ಏನೂ ಇದ್ದಿಲ್ಲವಾದರೂ, ಇದ್ದುದರಲ್ಲಿಯೇ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿ ಕೊಟ್ಟಿದ್ದಲ್ಲದೇ ನಾನಾಗಿಯೇ ಮುಂದೆ ಬಂದು ನನಗೆ ಕೊಟ್ಟ ಕೆಲಸಕ್ಕಿಂತ ಹೆಚ್ಚಿನದನ್ನು, ವಿವಿಧ ವಿಷಯಗಳನ್ನು ಕಲಿಸಿದ್ದೇನೆ. ಸರಕಾರಕ್ಕೆ ಅದರ ಮೂಲಕ ಕರ ಕೊಡುವ ಜನತೆಗೆ ಭಾರವಾಗಿ ಬದುಕುವ ಮನಸ್ಸು ನನಗಿಲ್ಲದ್ದರಿಂದ ಈ ಕೂಡಲೇ ನನ್ನ ವೇತನವನ್ನು ನಿಲ್ಲಿಸಬಹುದು. ಇಷ್ಟೊಂದು ದೀರ್ಘಕಾಲ ಧನಸಹಾಯ ಮಾಡಿದ್ದಕ್ಕಾಗಿ ನಾನು, ನನ್ನ ಮಡದಿ, ಮಕ್ಕಳೆಲ್ಲ ಕೃತಜ್ಞರಿದ್ದೇವೆ" ಎಂಬುದೇ ಅದರ ಸಾರಾಂಶವಾಗಿತ್ತು.

ಯಾರನ್ನು ರೀಡರ್ ಸ್ಥಾನಕ್ಕೆ ನೇಮಿಸಿಕೊಳ್ಳಬೇಕು ಎಂಬ ವಿಷಯದಲ್ಲಿ ಕೊನೆಗೂ ಒಮ್ಮತವಾಗದೇ ಇಂಟರವ್ಯೂವನ್ನೇ ರದ್ದು ಮಾಡಿದರು! ಒಬ್ಬಿಬ್ಬರು ಕೋರ್ಟಿಗೆ ರಿಟ್ ಹಾಕಿದರು. ಆದ್ದರಿಂದ ಇಷ್ಟು ಬೇಗ ಇನ್ನೊಮ್ಮೆ ಇಂಟರವ್ಯೂ ಆಗಲಿಕ್ಕಿಲ್ಲ ಎಂದು ಡೀನರು ವಿವರಿಸಿದರು. ಆದಷ್ಟು ಅದನ್ನು ಮುಂದೆ ಹಾಕಿದರೆ, ವಿದೇಶಕ್ಕೆ ಹೋದ ಯಾದವನು ತಿರುಗಿ ಬಂದರೆ ಅವನನ್ನೇ ಆ ಸ್ಥಳಕ್ಕೆ ಆರಿಸಬಹುದೆಂದು

ಬಿ.ಪಿ. ಅವರ ಕನಸು. ರಾಜಸ್ಥಾನ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರದ ಮುಖ್ಯಸ್ಥರನ್ನು ಯಾವದಾದರೂ ನೌಕರಿಗಾಗಿ ವಿಚಾರಿಸಿದಾಗ "ಸ್ಥಿರವಾದ ಸ್ಥಳಗಳೇ ಇಲ್ಲದ್ದರಿಂದ ಒಳ್ಳೆಯ ಜನಾನೇ ನಮಗೆ ಸಿಗುತ್ತಿಲ್ಲವಲ್ಲಾ?" ಎಂದು ಪರೋಕ್ಷವಾಗಿ ಸಾಧ್ಯತೆಯಿಲ್ಲವೆಂದು ತಿಳಿಸಿ ಚಹ ಕುಡಿಸಿ ಕಳಿಸಿದರು. ರಾವ್‌ನ ಪ್ರಾಧ್ಯಾಪಕರ ಹತ್ತಿರ ಸಂಶೋಧನೆಯ ಹಲವಾರು ಯೋಜನೆಗಳು ಇದ್ದವಾದ್ದರಿಂದ ಅವರಲ್ಲೂ ವಿಚಾರಿಸಿದೆ. "ನಮ್ಮ ಹಣದಿಂದ ಇಂಟರವ್ಯೂಗೆ ಕರೆಯಿಸಿ, ಅವರೇ ಸೂಚಿಸಿದ ವೇತನಕ್ಕೆ ಒಪ್ಪಿಕೊಂಡರೂ ನಂತರ ಬಂದು ಸೇರಲು ಒಪ್ಪದವರನ್ನು ನೇಮಿಸಿಕೊಳ್ಳಲು ತಮಗೆ ಅಧಿಕಾರವಿದೆಯೇ ಹೊರತು ತಾವಾಗಿ ಬಂದು ನಿಷ್ಠೆಯಿಂದ ಕೆಲಸ ಮಾಡುವವರನ್ನು ನೇರವಾಗಿ ಸೇರಿಸುವ ಅಧಿಕಾರ ನಮಗಿಲ್ಲ"ವೆಂದು ಅವರು ಬಿಚ್ಚುಮಾತಿನಿಂದ ಹೇಳಿದರು. ಪೂಲ್‌ನ ಅವಧಿ ಮುಗಿಯುತ್ತ ಬಂದಾಗ ಬೇರೊಂದು ನೌಕರಿ ಸಿಗುವ ತನಕ ಕಾಲೇಜಿನಲ್ಲಿಯೇ ನೌಕರಿ ಮಾಡುವಂತೆ ವಿನಂತಿಸಿಕೊಂಡರು.

ನೌಕರಿಗಾಗಿ ಅಲೆದಲೆದು, ಅರ್ಜಿ ಹಾಕಿ ಬೇಸತ್ತಿದ್ದರಿಂದ ಬೆಂಗಳೂರಿನ ಅಂತರ್ರಾಷ್ಟ್ರೀಯ ಸಂಶೋಧನಾಲಯದಿಂದ ಇಂಟರವ್ಯೂಗೆ ಕರೆಬಂದಾಗ ಹೋಗಿ ಕೈ ತೋರಿಸಿ ಅವಲಕ್ಷಣ ಹೇಳಿಸಿಕೊಳ್ಳುವ ಮನಸ್ಸಿಲ್ಲದೇ ಸಿಗುವ ಸಾಧ್ಯತೆಯ ಬಗ್ಗೆ ಆತ್ಮೀಯರನ್ನು ವಿಚಾರಿಸಿದೆ. ಸಿಗುವ ಸಾಧ್ಯತೆಯಿದೆ, ಎಂದು ಕಂಡುಬಂದುದರಿಂದ ಇಂಟರವ್ಯೂ ಕೊಟ್ಟೆ. ನನ್ನ ಶಿಕ್ಷಣದ ಜಾತಕವನ್ನೆಲ್ಲ ಪರಾಮರ್ಶಿಸಿ, 'ನೌಕರಿಗಾಗಿ ಸೇರಿಸಿಕೊಳ್ಳಬಹುದು. ಆದರೆ ಅಮೇರಿಕನ್ ಸರಕಾರದ ಉದಾರ ದೇಣಿಗೆಯ ಮೇಲೆ ನಮ್ಮ ಸಂಸ್ಥೆ ನಡೆಯುತ್ತದೆ. ನೌಕರಿ ತಾತ್ಕಾಲಿಕವಾದರೂ ಕಳೆದ ಹದಿಮೂರು ವರ್ಷಗಳಿಂದ, ಕೆಲಸ ಮಾಡುತ್ತಿರುವವರು ನಮ್ಮಲ್ಲಿದ್ದಾರೆ. ಆದರೆ ನೀನು ಒಂದೆರಡು ವರ್ಷಗಳಲ್ಲಿ ಬಿಟ್ಟುಹೋಗಬಾರದು. ಪ್ರತಿಸಾರೆ ಬಿಟ್ಟು ಹೋಗುವವರ ಸ್ಥಳದಲ್ಲಿ ಹೊಸಬರನ್ನು ನೇಮಿಸಿಕೊಳ್ಳಲು ಅಪಾರ ಹಾನಿಯಾಗುತ್ತದೆ. ನಮ್ಮಲ್ಲಿ, ಸರಕಾರಿ ಖಾತೆಗಳಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಇರುವ ಅಡ್ಡಿ ಆತಂಕಗಳಿಲ್ಲ. ಅಮೇರಿಕನ್ ಮಾದರಿಯಲ್ಲಿ ನಮ್ಮ ಸಂಘಟನೆಯಿದೆ. ಸೌಹಾರ್ದದ ತಿಳುವಳಿಕೆ ಇದೆ. ನೀವು ಮೊದಲೇ ಈ ಸಂಸ್ಥೆ ಸೇರಿಕೊಂಡಿದ್ದರೆ ಎಷ್ಟೋ ಸಂಶೋಧನೆ ಮಾಡಿ ಪೇಪರುಗಳನ್ನು ಪ್ರಕಟಿಸಬಹುದಿತ್ತು. ನಮ್ಮಲ್ಲಿ ಕೆಲಸ ಮಾಡಿ ಬಿಟ್ಟು ಹೋದವರನ್ನು, ಎಲ್ಲೆಲ್ಲಿಯೂ ನೌಕರಿಗೆ ಸೇರಿಸಿಕೊಳ್ಳುವುದರಿಂದ ಬಹಳ ಜನ, ಜೀವನದಲ್ಲಿ ಮುಂದೆ ಬಂದಿದ್ದಾರೆ' ಎಂದು ಮುಖ್ಯಸ್ಥರು ವಿವರಿಸಿದರು. ಮಹಿಳೆಯೊಬ್ಬಳ ಪರಿಚಯ ಮಾಡಿಕೊಡುತ್ತ "ಈಕೆ ಅತ್ಯಲ್ಪಕಾಲದಲ್ಲಿ ಅಸಂಖ್ಯಾತ ಸಂಶೋಧನಾ ಪ್ರಬಂಧ - ಪೇಪರುಗಳನ್ನು ಪ್ರಕಟಿಸಿ ವಿಶ್ವಖ್ಯಾತಿ ದೊರಕಿಸಿದ್ದಾಳೆ. ಕ್ಯಾಲಿ ಫೋರ್ನಿಯಾ ವಿಶ್ವವಿದ್ಯಾಲಯದವರು ತಮಗೆ ಉತ್ತರ ಹೊಳೆಯದ ಸಮಸ್ಯೆಗೆ ಇವಳಿಂದ ಉತ್ತರ ದೊರಕಿಸುತ್ತಾರೆ.

ಆಫೀಸಿನಲ್ಲಿ ಸಹೋದ್ಯೋಗಿಯಾದರೂ ಮನೆಯಲ್ಲಿ ನನ್ನ ಮಗಳು" ಎಂದು ಅಭಿಮಾನದಿಂದ ನಕ್ಕರು. ಅವರಿವರ ಕಾಲು ಬಿದ್ದು, ಭಾರೀ ಅಧಿಕಾರದಲ್ಲಿದ್ದವರ ಪರಿಚಯ ಪತ್ರದಿಂದ ಭವಿಷ್ಯ ನಿರ್ಮಿಸಿಕೊಳ್ಳುವುದರಲ್ಲಿ ನಂಬಿಗೆ ಇಲ್ಲದ್ದರಿಂದ ಈ ತಾತ್ಕಾಲಿಕ ನೌಕರಿಗೆ ಶರಣು ಹೋಗಬೇಕಾಯಿತು.

ಗೆದ್ದು ಬಂದ ನನ್ನನ್ನು ನೋಡಿ ಸಚಾನರು "ಈ ಹಕ್ಕಿ ಹೆಚ್ಚು ಕಾಲ ಜೋಬನೇರದಲ್ಲಿ ಇರಲಾರದು" ಎಂದು ಹಿಂದೆ ಹೇಳಿದ ತಮ್ಮ ಭವಿಷ್ಯವಾಣಿ ನಿಜವಾಯಿತೆಂದರು. ಎಷ್ಟು ವಿರೋಧಿಸಿದರೂ ವಿಭಾಗದ ಸಹೋದ್ಯೋಗಿಗಳು, ವಿದ್ಯಾರ್ಥಿಗಳು, ಬೀಳ್ಕೊಡುವ ಸಮಾರಂಭವಿಟ್ಟು ತಮ್ಮೊಂದಿಗೆ ಚಹಾಪಾನ ಮಾಡಬೇಕೆಂದು ಒತ್ತಾಯಿಸಿದರು. ಬಿ.ಪಿ. ನನ್ನಂತಹ ಶಿಕ್ಷಕ ಮತ್ತು ದುಡಿಮೆಗಾರನನ್ನು ಕಳೆದುಕೊಳ್ಳುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದರು. "ಸ್ವೇಚ್ಛೆಯಿಂದ ಹೋಗದೇ ವಿಶ್ವವಿದ್ಯಾಲಯ, ಮಾತುಕೊಟ್ಟಂತೆ ನನ್ನನ್ನು ಇರಿಸಿಕೊಳ್ಳಲಾರದೇ ಷಂಡತನ ತೋರಿಸಿದ್ದರಿಂದ ಹೋಗುತ್ತಿದ್ದೇನೆ" ಎಂದು ಕಟುವಾಗಿಯೇ ಉತ್ತರ ಕೊಟ್ಟೆ. ಜೋಬನೇರದಿಂದ ಯಾರೇ ಎಲ್ಲಿಗೇ ಹೋಗಲಿ ವಾರಗಟ್ಟಲೆ ಪಾರ್ಟಿಗಳಾಗುತ್ತವೆ. ಕಾಲೇಜಿನ ವಾಹನಗಳು, ವಿದ್ಯಾರ್ಥಿ-ಶಿಕ್ಷಕರನ್ನು ತುಂಬಿಕೊಂಡು ಸ್ಟೇಶನ್ನಿಗೆ ಓಡಬೇಕು. ಹಿಂದಿನ ಡೀನರು ಜೋಬನೇರದಿಂದ ಉದಯಪುರಕ್ಕೆ ವರ್ಗವಾಗಿ ಹೋಗುವಾಗ, ಒಂದು ತಿಂಗಳ ತನಕ ವಿವಿಧ ವಿಭಾಗಗಳಲ್ಲಿ ಅವರ ಸತ್ಕಾರ ಸಾಗಿತ್ತು. ಪ್ರಾಧ್ಯಾಪಕ ವರ್ಗ, ಅಧ್ಯಾಪಕ ವರ್ಗ, ಸಮಸ್ತ ಶಿಕ್ಷಕ ವರ್ಗ ಹೀಗೆಲ್ಲ ವರ್ಗಣಿ ಹಾಕಿ ಭೋಜನವನ್ನು ಏರ್ಪಡಿಸಿದರು. ಛಾಯಾಚಿತ್ರಗಳನ್ನು ತೆಗೆಯಿಸಿದರು. ಆಲಬಮ್‌ಗಳನ್ನು ಮಾಡಿಸಿ ಅವರಿಗೆ ಕೊಟ್ಟರು. ದೊಡ್ಡ ಭಾವಚಿತ್ರ ತೆಗೆಯಿಸಿದರು. ಅವರು ಹೊರಡುವ ದಿನ ಅರ್ಧ ಜೋಬನೇರ ಊರೇ ಸ್ಟೇಶನ್ನಿನ ಮೇಲೆ ನೆರೆದಿತ್ತು. ಬಂದವರೆಲ್ಲ ಹೂಮಾಲೆ ಅರ್ಪಿಸಿ ತಮ್ಮ ಗೌರವ ಸಲ್ಲಿಸಿದರು. ಒಂದೇ ನಿಮಿಷ ನಿಲ್ಲುವ ಟ್ರೇನು ಅಂದು ಅರ್ಧ ತಾಸು ನಿಂತಿತ್ತು. ಅವರ ಬೋಗಿಯನ್ನು ಹೂಗಳಿಂದ ಅಲಂಕರಿಸಿ ಜಯಜಯಕಾರದಿಂದ ಬೀಳ್ಕೊಟ್ಟ ದೃಶ್ಯ ಅಪೂರ್ವವಾಗಿತ್ತು. ಅವರವರ ಸ್ಥಾನಮಾನಗಳಿಗನುಸಾರವಾಗಿ ಬೀಳ್ಕೊಡುವ ಸಮಾರಂಭಗಳು ಏರ್ಪಡುತ್ತಿದ್ದವು. ನನಗೆ ಮೊದಲಿನಿಂದಲೂ ಇಂಥವುಗಳಲ್ಲಿ ಹಣ, ವೇಳೆಗಳ, ಅಪವ್ಯಯವಾಗುವುದು ಸಮ್ಮತವಿಲ್ಲದ್ದರಿಂದ ಯಾರಿಗೂ ತಿಳಿಸದೇ ಜಯಪುರಕ್ಕೆ ಜಾರಿಕೊಂಡೆ. ನಾನು ರಾಜಸ್ಥಾನವನ್ನು ಸಂಪೂರ್ಣವಾಗಿ ಬಿಟ್ಟು ಹೋಗುತ್ತಿದ್ದೇನೆಂದು ನೊಂದುಕೊಂಡ ಒಬ್ಬನೇ ವ್ಯಕ್ತಿ ಜಗಮೋಹನ. ಎಷ್ಟು ಬೇಡವೆಂದರೂ ಕೇಳದೇ ಔತಣವೇರ್ಪಡಿಸಿದ. ಬೀಳ್ಕೊಳ್ಳಲು ತನ್ನ ಸ್ನೇಹಿತವೃಂದದೊಂದಿಗೆ ಸ್ಟೇಶನ್ನಿಗೆ ಬಂದಿದ್ದ. ದೂರದ ಊರಿಗೆ ಹೊರಟದ್ದರಿಂದ ಜಯಪುರದಲ್ಲಿ ಬಿಡಲಿದ್ದ ಕುಟುಂಬದ ಜವಾಬ್ದಾರಿಯನ್ನು ಶರ್ಮ

ಕುಟುಂಬದ ಮೇಲೆ ಹೊರಿಸಿದ್ದೆ. ಅಂದಿನ ದಿನಗಳಲ್ಲಿ ಶ್ರೀಮತಿ ಸಚಾನರು ಕಾಯಿಲೆ ಬಿದ್ದು ಆಸ್ಪತ್ರೆಯಲ್ಲಿದ್ದರೂ ಸಚಾನರು ನಾನು ಹೊರಟದ್ದನ್ನು ಹೇಗೋ ಪತ್ತೆ ಹಚ್ಚಿ ಸ್ಟೇಶನ್ನಿಗೆ ಬಂದಿದ್ದರು. "ಸರಳ ಜೀವಿಯೊಬ್ಬರನ್ನು ಕಳೆದುಕೊಂಡದ್ದಕ್ಕೆ ಅತೀವ ಖೇದವಾಗುತ್ತಿದೆ" ಎಂದು ಅವರು ಉದ್ಗರಿಸಿದರು. ರಾಜಸ್ಥಾನದ ಸಿಹಿ-ಕಹಿ ನೆನಪುಗಳನ್ನು ಹೊತ್ತು ಸವಾಯಿ ಮಾಧವಪುರಕ್ಕೆ ಹೊರಟೆ. ಟ್ರೇನು ತೀರ ನಿಧಾನವಾಗಿ ಹೊರಟಿದ್ದರೂ ವಿಚಾರಲಹರಿ, ರಾಜಧಾನಿ ಎಕ್ಸಪ್ರೆಸ್‌ದಂತೆ ಓಡುತ್ತಿತ್ತು. ಮೈ ಕೊರೆಯುವ ಚಳಿಯಲ್ಲಿ ಕಾಶ್ಮೀರಿ ಕಂಬಳಿಯನ್ನು ಹೊದ್ದುಕೊಂಡು ಯಾವ ರೀತಿಯ ಭವಿಷ್ಯ ಕಾದಿದೆ? ಎಂದು ಯೋಚಿಸುತ್ತ ಮುಂಬಯಿ ಮೇಲಿಗಾಗಿ ಕಾಯುತ್ತ ನಿಂತೆ.

◆◆



ಡಾ. ಕೃಷ್ಣಾನಂದ ಕಾಮತ್

ಇವರ ನಾನೂ ಅಮೇರಿಕೆಗೆ ಹೋಗಿದ್ದೆ, ವಂಗದರ್ಶನ, ಕಾಲರಂಗ ಹಾಗೂ ಮಧ್ಯಪ್ರದೇಶದ ಮಡಿಲಲ್ಲಿ ಇವು ಈಗಾಗಲೇ ಓದುಗರನ್ನು ಆಕರ್ಷಿಸಿವೆ. ರಾಜಸ್ಥಾನದ ಮೇಲಿನ ಈ ಪುಸ್ತಕ ಮತ್ತೂ ಹೆಚ್ಚಾಗಿ ಮನಸ್ಸನ್ನು ಸೆರೆಹಿಡಿಯುವ ಹಾಗಿದೆ. ಹತ್ತಿರವದವರ ಜತೆ ಹರಟೆ ಹೊಡೆಯುತ್ತಿದ್ದಾರೊ ಎನ್ನಿಸುವ ತನ್ನನ್ನೇ ಮರೆತುಕೊಂಡ ಸರಳ ನೇರ ಭಾಷೆಯಲ್ಲಿ ಅವರು, ಮಹತ್ವದ್ದೆಂದು ಕಾಣದ ಬದುಕಿನ ಪುಟ್ಟ ಪುಟ್ಟ ವಿವರಗಳನ್ನೇ ಹೇಳುತ್ತ ಹೋಗುತ್ತಾರೆ. ಆದರೆ ಓದುತ್ತೋದುತ್ತ, ನಮಗೆ ಗೊತ್ತಾಗದ ಹಾಗೆ, ತುದಿಯಲ್ಲಿ ನಾವೇ ಅಲ್ಲಿ ಹೋಗಿ ಇದ್ದು ಬಂದಿದ್ದೇವೆ ಅನಿಸಿಬಿಡುತ್ತದೆ. ಆ ಬದುಕಿನಲ್ಲಿ ನಮಗಿಂತ ಬೇರೆಯದಾಗಿ ಕಾಣುವ ಚಿಕ್ಕ ಚಿಕ್ಕ ವಿವರಗಳನ್ನು ಪರಿಚಯಿಸಿ ಕೊಡುತ್ತ ಆ ಮೂಲಕ ನಮ್ಮನ್ನು ಸೆಳೆದುಕೊಳ್ಳುತ್ತ, ತುದಿಯಲ್ಲಿ, ಆ ಬದುಕು ನಮ್ಮದಿರುವ ಹಾಗೇ ಉಂಟಲ್ಲ! ಎಂಬ ವಿಚಿತ್ರ ಅರಿವು ನಮಗೆ ಮೂಡಿಬಿಡುವ ಹಾಗೆ ಮಾಡುವ ಮೋಡಿ ಕಾಣುತ್ತದೆ ಕಾಮತರ ಬರಹದಲ್ಲಿ.

